
ಸಮಗ್ರ ದಾಸ ಸಾಹಿತ್ಯ

ಸಂಪುಟ : ೩೨



ಶ್ರೀ ರಾಮದಾಸರ ಕೀರ್ತನೆಗಳು

ಸಮಗ್ರ ದಾಸ ಸಾಹಿತ್ಯ
ಸಂಪುಟ : ೩೨

ಶ್ರೀರಾಮದಾಸರ ಕೀರ್ತನೆಗಳು

ಸಂಪಾದಕರು
ಡಾ. ಸ್ವಾಮಿರಾವ ಕುಲಕರ್ಣಿ
ಶ್ರೀಮತಿ ಶೀಲಾದಾಸ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

SAMAGRA DASA SAHITYA SAMPUTA - 32 :

Sri Ramadasara Keerthanegalu, Edited by Dr. Swami Rao Kulakarni & Smt. Sheeladasa, Published by Sri. Y. K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 50 + ೭೪೩

ಪ್ರಥಮ ಮುದ್ರಣ : ೨೦೦೩

ಪ್ರತಿ : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦

ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು – ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩.

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಡಾ. ಟಿ. ಎನ್. ನಾಗರತ್ನ

ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಮಂದಾಕಿನಿ

ಪ್ರೊ. ಸುಧಾಕರ

ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯಮಯ ವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನು ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಆವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್

ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸ ಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮೂವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್‍ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ–ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೩ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' – ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೇ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ-ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ-ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯ ವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ-ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ-ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು- ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವಕ್ಕೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ಡಾ. ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾಲ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಜೀವನವು ಕೇವಲ ಲೌಕಿಕ ವಾಸನೆಯಿಂದ ಕೂಡಿರದೆ, ನಮ್ಮ ಬದುಕನ್ನು ಸಾರ್ಥಕ ಪಡಿಸಿಕೊಳ್ಳಬೇಕಾದರೆ ಅಲೌಕಿಕ ಮಾರ್ಗದತ್ತ ಸಾಗುವುದು ಅನಿವಾರ್ಯ. ಜೀವ–ಆತ್ಮ ಇವುಗಳ ಬಗೆಗೆ ವಿಚಾರ ಮಂಥನ ನಡೆಯಿಸಿ ಸಂತತವೂ ಪೂರ್ಣರೂಪಿಯಾಗಿರುವ ಪರಮಾತ್ಮನ ಸನಿಹಕ್ಕೆ ಆತ್ಮನು ಸಾಗಬೇಕು. ಇದೇ ಆತ್ಮನ ಕೊನೆಯ ಅಪೇಕ್ಷೆಯಾದ ಮೋಕ್ಷ. ಈ ಮೋಕ್ಷವೆಂಬ ಮರದ ಫಲವನ್ನು ಸವಿಯಬೇಕಾದರೆ "ಭಕ್ತಿಯೆಂಬ ಕೊಡದಿಂದ ಜ್ಞಾನವೆಂಬ ನೀರುಣಿಸಿ ನಿರಂತರ ಸೇವೆ ಮಾಡಬೇಕು". 'ಮಮ'ಕಾರವನ್ನು ಬಿಟ್ಟು 'ಸಂಯಮಿ'ಯಾಗಿ ಮಾಡುವ ಸೇವೆ ಪರಮಾತ್ಮನ ಒಲುಮೆಗೆ ಕಾರಣವಾಗಿರುತ್ತದೆ. ಈ ವಿಷಯಗಳನ್ನು ಸರಳ ರೀತಿಯಲ್ಲಿ ಜನಸಾಮಾನ್ಯರಿಗೆ ತಿಳಿಸಲು ಕಾರಣವಾದ 'ದಾಸ ಸಾಹಿತ್ಯ' ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಹೊಸ ಮಾರ್ಗವನ್ನೇ ನಿರ್ಮಿಸಿತು.

ದಾಸ ಸಾಹಿತ್ಯದ ಉಗಮಕ್ಕಿಂತ ಎರಡು ಶತಮಾನಗಳ ಮೊದಲೇ ಪ್ರವಹಿಸಿದ ವಚನ ಸಾಹಿತ್ಯದ ಪ್ರಭಾವ ಈ ಸಾಹಿತ್ಯಕ್ಕೆ ಸಹಾಯಕ ಶಕ್ತಿಯಾಗಿರಬೇಕು ಎಂಬ ವಿಚಾರವನ್ನು ಅಲ್ಲಗಳೆಯಲಾಗದು. ಯಾವುದೇ ಚಳುವಳಿಯು ಆಯಾ ಕಾಲದ ಸಾಮಾಜಿಕ, ಸಾಹಿತ್ಯದ ಪರಿಸರ ಮತ್ತು ಚಟುವಟಿಕೆಗಳ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಹೊಂದಿರುತ್ತದೆ. ವ್ಯಕ್ತಿಯ ಬೆಳವಣಿಗೆಯು ಪರಿಸರದ ಪ್ರಭಾವದಿಂದಲೇ ಸಾಧ್ಯ. ಈ ಹಿನ್ನೆಲೆಯಲ್ಲಿ ದಾಸ ಸಾಹಿತ್ಯಕ್ಕೆ ವಚನ ಸಾಹಿತ್ಯ ಪ್ರೇರಣೆ ನೀಡಿರಬೇಕು.

"ಆಸ್ತಿಕರು ತಾವು ನಂಬಿದ ಭಗವಂತನನ್ನು ಸಂಕೀರ್ತನ ರೂಪದಿಂದ ಸ್ತೋತ್ರ ಮಾಡಿ ಧರ್ಮ ಪ್ರಚಾರ ಮಾಡುವುದಕ್ಕೆ ಭಾಗವತ ಧರ್ಮವೆಂದು

ಹೆಸರು" ಇಂತಹ ಭಾಗವತ ಧರ್ಮವನ್ನು ಸರಳಗನ್ನಡದಲ್ಲಿ ಪಸರಿಸಿದ ಖ್ಯಾತಿಗೆ ಪಾತ್ರರಾದರು ದಾಸರು. ಕನ್ನಡ ನಾಡು ಶರಣ, ದಾಸರ ಬೀಡು. "ಭಕ್ತಿಯ ಶಕ್ತಿಯನ್ನು ತೋರಿ, ಮುಕ್ತಿಗೆ ಸೋಪಾನಗಳನ್ನು ಕಟ್ಟಿದವರು ಶರಣರು ಮತ್ತು ದಾಸರು", ಜನತೆಯಲ್ಲಿ ಭಕ್ತಿಯ ಬೀಜವನ್ನು ಬಿತ್ತಿ ವಚನ, ಕೀರ್ತನೆಗಳೆಂಬ ಕೊಡದಿಂದ ನೀರುಣ್ಣಿಸುವ ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಈ ಕಾರ್ಯ ಕಾಲ-ಕಾಲಕ್ಕೂ ನಡೆದಿದೆ. ಇಂತಹ ದಾಸರಲ್ಲಿ ಕೆಲವರು ಎಲೆಮರೆಯ ಕಾಯಾಗಿ ಜನರ ಕಣ್ಣಿಗೆ ಕಾಣದಂತೆ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಪ್ರಚಾರದ ಕೊರತೆಯಿಂದದಾಗಿಯೋ ಇಲ್ಲವೆ ಪ್ರಚಾರದಿಂದ ದೂರವಿರುವ ಕಾರಣಕ್ಕಾಗಿಯೋ ಇಂಥವರ ಹೆಸರು ನಮ್ಮ ಗಮನಕ್ಕೆ ಬಾರದಿರಬಹುದು. ಆದರೆ ಅವರು ಸಾಧಿಸಿದ ಸಾಧನೆಯ ಶಕ್ತಿಗೆ ಕುಂದು ಬಂದಿಲ್ಲ. ಅಂತಹ ದಾಸರೊಬ್ಬರ ವ್ಯಕ್ತಿತ್ವ, ಸಾಹಿತ್ಯ ದರ್ಶನವೇ ಈ ಗ್ರಂಥದ ಉದ್ದೇಶ.

ದಾಸರ ತವರು-ರಾಯಚೂರು ಜಿಲ್ಲೆ:

"ಕಲಬುರ್ಗಿ ಜಿಲ್ಲೆ ಶರಣರ ಮಹಾದ್ವಾರವಾದರೆ, ರಾಯಚೂರು ಜಿಲ್ಲೆ ದಾಸರ ತವರು ಮನೆ". ರಾಯಚೂರು ಜಿಲ್ಲೆ ದಾಸ ಸಾಹಿತ್ಯದ ತೊಟ್ಟಿಲು ಎಂದು ಕರೆಯಿಸಿಕೊಳ್ಳುವುದಕ್ಕೆ ಪ್ರಮುಖವಾದ ಕಾರಣಗಳನ್ನು ಪರಿಶೀಲಿಸಬಹುದು.

೧ ವಿಜಯನಗರ ಪತನವಾದ ಬಳಿಕ ರಾಜಕೀಯ ಪ್ರತಿಕೂಲ ಪರಿಸ್ಥಿತಿಯ ಪರಿಣಾಮದಿಂದಾಗಿ ಆ ಭಾಗದಲ್ಲಿದ್ದ ದಾಸರು ಸಮೀಪದ ರಾಯಚೂರು ಜಿಲ್ಲೆಯನ್ನು ಪ್ರವೇಶಿಸಿರಬೇಕು.

೨ ದಾಸ ಸಾಹಿತ್ಯದ ದ್ವಿತೀಯ ಘಟ್ಟದಲ್ಲಿ ಬರುವ ವಿಜಯ ದಾಸರು ಜಗನ್ನಾಥದಾಸರು, ಮೋಹನದಾಸರು ಇತ್ಯಾದಿ ದಾಸವರೇಣ್ಯರ ಬದುಕು ಮತ್ತು ಸಾಹಿತ್ಯದ ಪ್ರಭಾವ.

೩. ರಾಯಚೂರಿಗೆ ಸಮೀಪದಲ್ಲಿರುವ ಮಂತ್ರಾಲಯದ ರಾಯರ ಭಕ್ತಿಯ ಪ್ರಭಾವ.

ಈ ಕೆಲವು ಪ್ರಮುಖ ಕಾರಣಗಳಿಂದ ರಾಯಚೂರು ಜಿಲ್ಲೆಯು ದಾಸ ಸಾಹಿತ್ಯದ ದ್ವಿತೀಯ ಘಟ್ಟದ ಅನಂತರದಲ್ಲಿ ಇಡೀ ದಾಸಸಾಹಿತ್ಯದ ಪ್ರವಾಹವೇ ಬತ್ತಿಹೋಗಿರಬಹುದೆಂಬುದು ಕೆಲವರ ಭಾವನೆ. ಆದರೆ ಮಾನ್ವಿ ಶಾಮಸುಂದರ ದಾಸರು, ಲಿಂಗಸೂರಿನ ಪ್ರಾಣೇಶವಿಠಲದಾಸರು, ಅಭಿನವ ಪ್ರಾಣೇಶವಿಠಲದಾಸರು, ಶ್ರೀಶಪ್ರಾಣೇಶವಿಠಲದಾಸರು, ಸಂತಿಕೆಲ್ಲೂರಿನ ವರದೇಶವಿಠಲದಾಸರು, ಸುರಪುರದ ಆನಂದದಾಸರು, ಅಸಗಿಯಾಳ ಗೋವಿಂದದಾಸರು, ಅಭಿನವಜನಾರ್ಧನ ವಿಠಲದಾಸರು, ಮೋಹನವಿಠಲದಾಸರು–ಇತ್ಯಾದಿ ಹತ್ತಾರು ಹರಿದಾಸರು ಯಾವ ಸದ್ದುಗದ್ದಲವಿಲ್ಲದೆ ಪ್ರಾಪಂಚಿಕದಲ್ಲಿದ್ದುಕೊಂಡೇ ಪಾರಮಾರ್ಥಸಾಧನೆಯ ಪ್ರಯತ್ನಕ್ಕೆ ಕೈ ಹಾಕಿ ದಾಸಸಾಹಿತ್ಯದ ಸೃಷ್ಟಿಯ ಕಾರ್ಯವನ್ನು ಮುಂದುವರೆಸಿದ್ದಾರೆ. ಇಂತಹ ದಾಸರಲ್ಲಿ ರಾಯಚೂರು ಜಿಲ್ಲೆಯ ಶ್ರೀರಾಮದಾಸರೂ ಒಬ್ಬರು.

ಪಿಂಜಾರ ಬಡೇಸಾಹೇಬರು ಶ್ರೀರಾಮದಾಸರಾದುದು:

ಎಲ್ಲಿಯೋ ಹುಟ್ಟಿ, ಎಲ್ಲೆಲ್ಲಿಯೋ ಬದುಕಿ, ಕೊನೆಗೆಲ್ಲಿಯೋ ಸಮಾಧಿ ಹೊಂದಿರುವುದು ಶ್ರೀರಾಮದಾಸರ ಬದುಕಿನ ವೈಚಿತ್ರ್ಯ. ಎತ್ತಿದವರ ಕೈಕೂಸಾಗಿ ಬೆಳೆದು ಜೀವನುದ್ದಕ್ಕೂ ಕಷ್ಟಕಾರ್ಪಣ್ಯಗಳಿಂದ ಹೊಟ್ಟೆಯನ್ನು ತುಂಬಿಕೊಂಡು ಕೊನೆಗೆ ಲೌಕಿಕವನ್ನು ಬಿಟ್ಟು ಪಾರಮಾರ್ಥದತ್ತ ಮನಹರಿಸಿದ ಅನೇಕ ದಾಸರಲ್ಲಿ ಈ ಶ್ರೀರಾಮದಾಸರು ಒಬ್ಬರು.

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜೋಳದಹೆಡಿಗೆ ಎಂಬ ಗ್ರಾಮದಲ್ಲಿ ಮುಸಲ್ಮಾನ ಧರ್ಮಕ್ಕೆ ಸೇರಿದ ಪಿಂಜಾರ ಮನೆತನದಲ್ಲಿ ಕ್ರಿ.ಶ ೧೮೮೨ರಲ್ಲಿ ಶ್ರೀರಾಮದಾಸರ ಜನನ. ತಂದೆ ಖಾಜಾಸಾಹೇಬ, ತಾಯಿ ಪೀರಮ್ಮ, ಇವರ ನಡೆನಾಮ ಬಡೇಸಾಹೇಬರು. ಬಡತನದ ಬವಣೆಯಲ್ಲೂ ತಂದೆತಾಯಿಗಳು ಇವರಿಗೆ ವಿದ್ಯಾಭ್ಯಾಸದ ಅನುಕೂಲ ಒದಗಿಸಿದರು. ಕನ್ನಡ ಓದಲು ಬರೆಯಲು ಕಲಿತ ಬಡೇಸಾಹೇಬರು ತಮ್ಮ ಅಭ್ಯಾಸಕ್ಕೆ ಮಂಗಳ ಹಾಡಿ ಜೋಳದ ಹೆಡಿಗೆಯ ಮಾಲಿಪಟೇಲರ ಅಂಗಡಿಯಲ್ಲಿ ಲೆಕ್ಕ ಬರೆಯುವ ಕೆಲಸಕ್ಕೆ ಸೇರಿದರು. ಇದಾದ ಮೇಲೆ ಮಾನ್ವಿ ತಾಲೂಕಿನ ಹಣಗಿ ಗ್ರಾಮದಲ್ಲಿ ಖಾಸಗಿ

ಶಿಕ್ಷಕರಾಗಿ ಶಾಲೆಯನ್ನು ಆರಂಭಿಸಿದರು. ಅಲ್ಲಿ ಜೀವನ ನಿರ್ವಹಣೆ ಕಷ್ಟವಾಗಿ ಪುನ: ತಮ್ಮ ಹುಟ್ಟಿದೂರಿಗೆ ಬಂದರು. ಈ ಸಂದರ್ಭದಲ್ಲಿಯೇ ದೇವದುರ್ಗದ ಹುಸೇನಮ್ಮ ಎಂದ ಕನ್ನೆಯೊಂದಿಗೆ ಇವರ ವಿವಾಹವಾಯಿತು. ಮನೆಯ ಸಂಸಾರ ದೊಡ್ಡದಾದಂತೆ ಬಡೇಸಾಹೇಬರ ಜೀವನ ನಿರ್ವಹಣೆ ಇನ್ನೂ ಕಷ್ಟದಾಯಕವಾಯಿತು. ಈ ಅವಧಿಯಲ್ಲಿ ತಂದೆ-ತಾಯಿಗಳು ಕಣ್ಮುಚ್ಚಿದ್ದರು. ಮನೆತನದ ಯಾವ ಭಾರವೂ ಇರದ ಬಡೇಸಾಹೇಬರಿಗೆ ಅತ್ಯಂತ ಗಂಭೀರ ಪರಿಸ್ಥಿತಿಯ ಅರಿವಾಯಿತು. ಮೃದು ಮನದ ಬಡೇಸಾಹೇಬರಿಗೆ ಹೊಟ್ಟೆಯ ಚಿಂತೆ, ಕುಟುಂಬದ ಚಿಂತೆ ಬೆನ್ನುಬಿಡದ ಸಮಸ್ಯೆಯಾಯಿತು. ಇದಕ್ಕೆ ಪರಿಹಾರವನ್ನು ತಾವೇ ಕಂಡುಕೊಂಡ ಸಾಹೇಬರು ಹೊಟ್ಟೆಪಾಡಿಗಾಗಿ ಹುಟ್ಟಿದೂರಿನಿಂದ ದೂರವಾದರು. ತಮ್ಮ ಕುಟುಂಬವನ್ನು ಕರೆದುಕೊಂಡು ಬಡೇ ಸಾಹೇಬರು ಲಿಂಗಸಗೂರು ತಾಲೂಕಿನ ಗೋನವಾರ ಗ್ರಾಮಕ್ಕೆ ಬಂದರು. ಬಾಲ್ಯದಿಂದಲೂ ವಿಶಾಲ ಮನೋಭಾವ ಮತ್ತು ವಿಚಾರವಂತ ಹಾಗೂ ಕಷ್ಟ ಸಹಿಷ್ಣುತೆಯಲ್ಲಿ ಬೆಳೆದು ಬಂದ ಬಡೇಸಾಹೇಬರು ತಮ್ಮ ಹಿತಮಿತ ವಚನಗಳಿಂದ, ನಡೆನುಡಿಗಳಿಂದ ಆಚಾರಸಂಪನ್ನತೆಯಿಂದ ಗೋನವಾರದ ಜನಮನವನ್ನು ಗೆದ್ದರು. ಗ್ರಾಮದಲ್ಲಿ ಎಲ್ಲ ಸೌಕರ್ಯಗಳು ಲಭಿಸಿದವು. ಖಾಸಗಿ ಶಾಲೆಯೊಂದನ್ನು ಆರಂಭಿಸಿ ಮಾನವೀಯ ಜ್ಞಾನಕ್ಕೆ ಅಡಿಪಾಯವಾದ ಅಕ್ಷರಜ್ಞಾನದ ಕಾಯಕಕ್ಕೆ ಕೈ ಹಾಕಿದರು. ಊರವರ ಕರುಣೆಗೆ ಅನುಕಂಪಕ್ಕೆ ಪಾತ್ರರಾಗುವುದರೊಂದಿಗೆ ತಮ್ಮ ಕೆಲಸದ ಅನಂತರದ ಅವಧಿಯನ್ನು ಭಜನೆ, ಕೀರ್ತನೆ, ಬಯಲಾಟ ಸಂಘಟನೆ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವುದರ ಮೂಲಕವಾಗಿ ಅನೇಕ ಹಿರಿಯರ ಆದರಕ್ಕೆ, ಅಭಿಮಾನಕ್ಕೆ ಪಾತ್ರರಾದರು. ಧರ್ಮದಿಂದ ಮುಸಲ್ಮಾನರಾಗಿದ್ದರೂ ಹಿಂದು ಧರ್ಮದ, ಅದರಲ್ಲಿಯೂ ವೈದಿಕ ಸಂಪ್ರದಾಯವು ಬಡೇಸಾಹೇಬರನ್ನು ತುಂಬಾ ಆಕರ್ಷಿಸಿತ್ತು. ಜ್ಞಾನದಾಹವುಳ್ಳ ಬಡೇಸಾಹೇಬರಿಗೆ ಗೋನವಾರದಲ್ಲಿ ವೈದಿಕ ಸಮಾಜದ ಗೆಳೆಯರೊಡನಾದ ಒಡನಾಟದಿಂದ ಸಂಗೀತ, ಭಜನೆ, ಕೀರ್ತನೆ, ಪುರಾಣ ಪ್ರವಚನ ಸಂಸ್ಕೃತ ಸಾಹಿತ್ಯದ ಪರಿಚಯ ಒದಗಿತು. ಜೋಯಿಸ ಮನೆತನದ ದಿವಂಗತ ಶ್ರೀ ವೆಂಕಟಭೀಮಾಚಾರ ಮತ್ತು ದಿವಂಗತ ಶ್ರೀ ಹನುಮಂತಾಚಾರ್ಯ ಇವರ ಸಂಪರ್ಕದಿಂದ ಸಾಹೇಬರ ವ್ಯಕ್ತಿತ್ವ ಮತ್ತಷ್ಟು ಮೃದುವಾಯಿತು. ವೆಂಕಟಭೀಮಾಚಾರ್ಯರು ಪ್ರಸಿದ್ಧ ಕೀರ್ತನಕಾರರಾಗಿದ್ದರು. ಇವರೊಡನೆ ಸಮಯ

ಕಳೆಯುವುದೇ ಬಡೇಸಾಹೇಬರಿಗೆ ಆನಂದದ ಕೆಲಸವಾಯಿತು. ಬಡೇಸಾಹೇಬರ ಸರಳ ನಿರಾಡಂಬರದ ಮತ್ತು ಮುಗ್ಧ ವ್ಯಕ್ತಿತ್ವವನ್ನು ಕಂಡುಕೊಂಡ ಗೋನವಾರದ ಕುಲಕರ್ಣಿ ದಿವಂಗತ ಶ್ರೀ ಶ್ರೀನಿವಾಸರಾವ ಇವರು ಬಡೇಸಾಹೇಬರಿಗೆ ಬೆಂಗಾವಲಾಗಿನಿಂತರು.

ಚಿತ್ರಕಲೆಯಲ್ಲೂ ಬಡೇಸಾಹೇಬರ ಕೈ ಪಳಗಿತ್ತು. ಏಕಾಂಗಿಯಾಗಿ ಕುಳಿತಾಗ ಮನದಲ್ಲಿ ಮೂಡಿದ ಶ್ರೀರಾಮ, ಹನುಮಂತ, ಪರಮೇಶ್ವರ ಇವರ ಆಕಾರಕ್ಕೆ ರೇಖೆಗಳ ರೂಪ ಕೊಡುತ್ತಿದ್ದರು. ಆದರೆ ಇಂತಹ ಚಿತ್ರಗಳನ್ನು ತಮ್ಮ ಆತ್ಮೀಯ ಮಿತ್ರರಾದ ಜೋಯಿಸ ಮತ್ತು ಕುಲಕರಣಿಯನ್ನು ಬಿಟ್ಟರೆ ಬೇರಾರಿಗೂ ತೋರಿಸುತ್ತಿದ್ದಿಲ್ಲವಂತೆ. ಸಂಕೋಚ, ಸರಳ ಸ್ವಭಾವದ ಬಡೇಸಾಹೇಬರು ಜನಪ್ರಿಯತೆ ಹಾಗೂ ಮುಖಸ್ತುತಿಯಿಂದ ದೂರವಿರಬೇಕೆಂಬುದೇ ಅದಕ್ಕೆ ಮೂಲ ಕಾರಣವಾಗಿದೆ.

ಆದರೆ ಇಂತಹ ಸಜ್ಜನರ ಸಂಸಾರ ಹೆಚ್ಚೇನು ಆಗಲಿಲ್ಲ . ಹೆಂಡತಿ ಹುಸೇನಮ್ಮ ಇವರಿಗೆ ಸಂಸಾರದ ಸವಿಯನ್ನು ಒದಗಿಸುವಲ್ಲಿ ವಿಫಲರಾದರು. ಅದಕ್ಕಾಗಿಯೇ ಬಡೇಸಾಹೇಬರು ತಮ್ಮ ಮೊದಲನೆಯ ಹೆಂಡತಿಯನ್ನು ತ್ಯಜಿಸಿ ಅಲ್ಲಮ್ಮ ಎಂಬುವಳನ್ನು ಉಡಕಿ ಹಾಕಿಕೊಂಡರು. ಇವರಿಗೆ ಮೊದಲನೆಯ ಹೆಂಡತಿಯಿಂದ ಸೋಫಿಯೆಂಬ ಮಗನಿದ್ದನು. ಅವನನ್ನು ಸಾಕುವ ಭಾರವನ್ನು ಎರಡನೆಯ ಹೆಂಡತಿ ಅಲ್ಲಮ್ಮನೇ ವಹಿಸಿಕೊಂಡಳು. ಗಂಡನಿಗೆ ತಕ್ಕ ಹೆಂಡತಿಯೆನಿಸಿ ಅಲ್ಲಮ್ಮ ಗೋನವಾರದ ಗ್ರಾಮದಲ್ಲಿ ಎಲ್ಲರ ಕಣ್ಮಣಿಯಾದಳು. ಆದರೆ ಬದುಕಿನ ಪಕ್ವಕಾಲ ಸಮೀಪಿಸಿದಾಗ ವಿಧಿ ಯಾವರೀತಿಯಿಂದಲಾದರೂ ಪ್ರತ್ಯಕ್ಷವಾಗುತ್ತದೆ ಎಂಬ ಮಾತು ಸುಳ್ಳಲ್ಲ. ಹೆಣವನ್ನು, ಮುದುಕನನ್ನು, ರೋಗಗ್ರಸ್ತ ಶರೀರವನ್ನು ದಿನನಿತ್ಯ ಸಾವಿರಾರು ಜನ ನೋಡುತ್ತಾರೆ. ಆದರೆ ಯಾರೂ ಸಂಸಾರದಲ್ಲಿ ಏನಿದೆ ಎಂದು ಸಂಸಾರಸುಖವನ್ನು ತ್ಯಜಿಸುವಷ್ಟು ಮುಂದಕ್ಕೆ ಹೋಗಲಾರರು. ಆದರೆ ರಾಜಕುಮಾರನಾದ ಸಿದ್ದಾರ್ಥ ಬುದ್ಧನಾದುದು ಇವುಗಳಿಂದಲೇ, ಆತನಿಗೆ ಪಕ್ವಕಾಲವು ಇವುಗಳ ರೂಪದಲ್ಲಿ ಒದಗಿತೆಂದೇ ಹೇಳಬಹುದು. ಮಾರ್ಗ ಎತ್ತಲಿಂದಲೋ ಎತ್ತಹೊರಳಿತು. ಇಂತಹ ಆಕಸ್ಮಿಕ ಘಟನೆಗಳು ಯಾವುದೇ ಸಂತಮಹಂತರ ಬದುಕಿನಲ್ಲಿ ಘಟಿಸಿರುತ್ತವೆ.

ಅಂದಾಗಲೇ ಅವರಿಗೆ ತಮ್ಮ ನಿಜಸ್ಥಿತಿಗತಿಯ ಅರಿವು ಉಂಟಾಗುತ್ತದೆ. ಬದುಕಿನಲ್ಲಿ ಹಲವು ತಾಪತ್ರಯಗಳಿಗೆ ಸಿಲುಕಿದ ಅವಧಿಯಲ್ಲಿ ತಮ್ಮ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳದೆ ತೊಳಲಾಡಿದ ಅವರು, ಗೋನವಾರವನ್ನು ಬಿಟ್ಟು ರಾಯಚೂರಿಗೆ ಬಂದು ರೇಲ್ವೆಸ್ಟೇಷನ್‌ನಲ್ಲಿ ಚಿಂತಾಕ್ರಾಂತರಾಗಿ, ವಿಚಾರಮಗ್ನರಾಗಿ ಕುಳಿತಿದ್ದರು. ಈ ಸಂದರ್ಭದಲ್ಲಿ ಅವರ ಹತ್ತಿರ ಒಬ್ಬ ಸಾಧು ಬಂದು " ನನ್ನ ಹಿಂದೆ ಬರುತ್ತೀಯಾ?" ಎಂದು ಹಿಂದಿಯಲ್ಲಿ ಕೇಳಿದನಂತೆ. ಮಾನಸಿಕ ವ್ಯಥೆಯನ್ನು ನಿವಾರಿಸಿಕೊಳ್ಳಲು ಎಲ್ಲಿಗಾದರೂ ಹೋಗಬೇಕೆಂಬ ವಿಚಾರದಲ್ಲಿದ್ದ ಆ ವೇಳೆಯಲ್ಲಿ ಸಾಧುವೊಬ್ಬ ತಮ್ಮನ್ನು ಕೈಮಾಡಿ ಕರೆದುದು ಬಡೇಸಾಹೇಬರಿಗೆ ಸಂತಸವನ್ನುಂಟು ಮಾಡಿತು. ಇದೇ ಘಟನೆ ಅವರ ಮುಂಬಾಳಿನ ಧನ್ಯತೆಗೆ ಪ್ರೇರಣೆನೀಡಿತು. ಜೀವನದ ಗತಿಯ ಬದಲಾವಣೆಗೆ ಸಾಧನವಾಯಿತು. ಹಿಂದುಮುಂದಿನ ಯೋಚನೆಯಿಲ್ಲದೆ ಸಾಧುವಿನ ಹಿಂದೆ ಹೊರಟ ಬಡೇಸಾಹೇಬರು ಅವರೊಡಗೂಡಿ ಚಾರಿತ್ರಿಕ ಪ್ರಸಿದ್ಧವಾದ ಹಂಪೆಯನ್ನು ಮುಟ್ಟಿದರು. ಆ ಸಾಧುವಿನ ಸೇವೆಯನ್ನು ನಿತ್ಯವೂ ತಮ್ಮ ಪ್ರಯತ್ನ ಮೀರಿ ಮಾಡುತ್ತಿದ್ದರು. ಮನಶಾಂತಿಯನ್ನು ಅರಸುತ್ತ ಒಂದು ವರ್ಷ ಕಾಲ ಸಾಧುಗಳ ಸೇವೆಯಲ್ಲಿದ್ದರು. ಒಂದು ದಿನ ಹೊರಗೆ ಹೋದ ಸಾಧುಗಳು ತಿರುಗಿ ಬರಲೇ ಇಲ್ಲ. ಇದು ಅವರ ಮನಕ್ಕೆ ಉಂಟಾದ ಎರಡನೆಯ ಅಘಾತ. ಕಷ್ಟವೋ, ಸುಖವೋ ಸಾಧುವಿನೊಂದಿಗೆ ಕಾಲಕಳೆಯುತ್ತಿದ್ದ ಬಡೇಸಾಹೇಬರು ಹಂಪೆಯಲ್ಲಿ ಒಬ್ಬೊಂಟಿಯಾದರು. ಕಲ್ಲುಬಂಡೆಯೊಂದರ ಮೇಲೆ ಕುಳಿತು ಮುಂದೇನು ಎಂದು ಯೋಚಿಸುತ್ತಿರುವಾಗ ಅವರ ಹಿಂದಿನಿಂದ ಯಾರೋ ತಲೆಯ ಮೇಲೆ ಕೈಯಿಟ್ಟಂತಾಯಿತು. ತಿರುಗಿ ನೋಡಿದಾಗ ವೃದ್ಧ ಸಾಧುಗಳೊಬ್ಬರು ಮುಗುಳ್ನಗುತ್ತಾ ನಿಂತಿದ್ದರು. ಅವರ ಹೆಸರು ಶ್ರೀರಾಮಾವಧೂತರೆಂದು. ರಾಮಾವಧೂತರು ಬಡೇಸಾಹೇಬರನ್ನು ಕರೆದುಕೊಂಡು ತಮ್ಮ ಮನೆಗೆ ಬಂದರು. ಈ ಅವಧೂತರು ಗೃಹಸ್ಥರಾಗಿದ್ದರು. ಅವರ ಮನೆಯಲ್ಲಿದ್ದುಕೊಂಡೇ ಬಡೇಸಾಹೇಬರು ತಮ್ಮ ಬದುಕಿನ ದುಮ್ಮಾನವನ್ನು ಸಾಧು ದಂಪತಿಗಳ ಸೇವೆಯಲ್ಲಿ ಮರೆಯಲಾರಂಭಿಸಿದರು. ರಾಮಾವಧೂತರು ಬಡೆಸಾಹೇಬರಿಗೆ ರಾಮಾಯಣ, ಮಹಾಭಾರತ, ಭಾಗವತ, ಪುರಾಣಗಳ ಹಾಗೂ ವೇದವೇದಾಂತಗಳ ಜ್ಞಾನವನ್ನು ನೀಡಿದರು. ಒಟ್ಟಿನಲ್ಲಿ ಗುರುಗಳು ಅಚ್ಚು ಮೆಚ್ಚಿನವರಾಗಿ ಶಿಸ್ತಿನಿಂದ ಕಾಲಕಳೆದರು. ರಾಮಾವಧೂತರ ಮನೆಗೆ ಸಾಮಾನುಗಳನ್ನು ತರಲು ಬಡೇಸಾಹೇಬರು ಆಗಾಗ

ಹೊಸಪೇಟೆಗೆ ಬರುತ್ತಿದ್ದರಂತೆ, ಅನೇಕ ವೇಳೆ ಗುರುಗಳ ಈ ಶಿಷ್ಯವನ್ನು ಕಾಪಾಡಿದ ಪ್ರಸಂಗಗಳು ನಡೆದವಂತೆ. ಹೊಸಪೇಟೆಯಲ್ಲಿ ಒಮ್ಮೆ ಕಾಲರಾ ಹಬ್ಬಿದಾಗ ಬಡೇಸಾಹೇಬರು ಸಾಮಾನುಗಳನ್ನು ತರಲು ಹೊಸಪೇಟೆಗೆ ಹೋಗುವವರಿದ್ದರು. ಆ ಸಮಯದಲ್ಲಿ ಗುರುಗಳು ಶಿಷ್ಯನನ್ನು ಕರೆದು ಅವನ ಬೆನ್ನುಹುರಿಯ ಮೇಲೆ ತಮ್ಮ ಹೆಬ್ಬೆಟ್ಟಿನಿಂದ ಮೂರು ಸಲ ಒತ್ತಿ "ನಿನಗೆ ಬರುವ ಕಂಟಕ ದೂರವಾಯಿತು, ಹೋಗು" ಎಂದರಂತೆ. ಹೋಸಪೇಟೆಯಿಂದ ಬಂದ ತಕ್ಷಣವೇ ಬಡೇಸಾಹೇಬರಿಗೆ ಕಾಲರಾ ರೋಗ ಅಂಟಿಕೊಂಡಿತು. ಆಗ ಗುರುಗಳು ತೀರ್ಥ ತಂದು ಬಾಯಲ್ಲಿ ಹಾಕಿದಾಗ ಯಾವ ಔಷಧಿಯ ಸಹಾಯವಿಲ್ಲದೆ ಬಡೇಸಾಹೇಬರು ರೋಗದಿಂದ ಗುಣಮುಖರಾದರಂತೆ.

ಹೀಗೆ ಗುರುದಂಪತಿಗಳ ಸೇವೆಯಲ್ಲಿ ತಲ್ಲೀನರಾಗಿದ್ದ ಸಾಹೇಬರಿಗೆ ಊರಕಡೆಗೆ ನೆನಪಾಯಿತು. ಗುರುಗಳ ಎದುರು ತಮ್ಮ ಮನಸ್ಸನ್ನು ಬಿಚ್ಚಿಡದಿದ್ದರೂ ಇವರ ಮನದಿಂಗಿತವನ್ನರಿತ ಗುರುಗಳು ಅವರ ತಲೆಯ ಮೇಲೆ ಕೈ ಇಟ್ಟು "ನೀನು ಇನ್ನು ನಿಮ್ಮೂರಿಗೆ ಹೋಗಿ ಬಾ" ಆದರೆ ಮುಂದೆ ಇದೇ ವರ್ಷ ಇದೇ ದಿನ ಇಲ್ಲಿಗೆ ಬಂದರೆ ಮಾತ್ರ ನನ್ನ ನಿನ್ನ ಭೆಟ್ಟಿ ಸಾಧ್ಯ; ಎಂದು ಹೇಳಿದರು. ಮನದ ಶಾಂತಿಯನ್ನು ಕೆಡಿಸಿಕೊಂಡು ಹೋದ ಬಡೇಸಾಹೇಬರು ಸ್ಥಿರಮನದವರಾಗಿ ಅಪಾರಜ್ಞಾನಿಗಳಾಗಿ ಮರಳಿ ಗೋನವಾರಕ್ಕೆ ಬಂದರು. ಊರವರೆಲ್ಲರೂ ಇವರನ್ನು ಅದರಾಭಿಮಾನಗಳಿಂದ ಸ್ವಾಗತಿಸಿದರು. ಅವರ ಬದುಕಿನ ಘಟನೆಯನ್ನು ಕೇಳಿದ ಜನತೆಯ ಕಣ್ಣಲ್ಲಿ ಅವರು ಮಹಾತ್ಮರಾದರು. ಒಂದು ವರ್ಷ ಭಜನೆ, ಕೀರ್ತನೆಗಳಲ್ಲಿ, ಧಾರ್ಮಿಕ ಚಿಂತನೆಯಲ್ಲಿ ಕಾಲ ಕಳೆದ ಬಡೇಸಾಹೇಬರು ತಮ್ಮ ಗುರುಗಳ ಆದೇಶದಂತೆ ಮರುವರ್ಷ ಅವರನ್ನು ಭೆಟ್ಟಿಯಾಗಲೆಂದು ಹಂಪೆಯುತ್ತ ಪ್ರಯಾಣ ಬೆಳೆಸಿದರು. ಪ್ರಯಾಣದಲ್ಲಿಯ ಅನೇಕ ತೊಂದರೆಗಳ ಮುಖಾಂತರ ಗುರುಗಳು ಕೊಟ್ಟ ದಿನವೇ ಹಂಪೆಯನ್ನು ಮುಟ್ಟಲಾರದೆ ಮರುದಿನ ನಸುಕಿನಲ್ಲಿ ಹಂಪೆಗೆ ಬಂದರು. ಅದರೆ ವಿಧಿ ಅವರಿಗೆ ಗುರುಗಳ ದರುಶನವನ್ನು ಮಾಡಗೊಡಲಿಲ್ಲ. ಓಡುತ್ತಾ ಹೋಗಿ ಗುರುಗಳಿದ್ದ ಮನೆಯನ್ನು ನೋಡುತ್ತಾರೆ ಅದಕ್ಕೆ ಕೀಲಿ ಹಾಕಲಾಗಿದೆ. ಅವರ ಮನೆ ನಿಶ್ಯಬ್ದವಾಗಿದ್ದಂತೆ ಇವರ ಮನವೂ ನಿಶ್ಯಬ್ದವಾಯಿತು. ಅಲ್ಲಿಯೇ ಕಾಯುತ್ತ ಮೂರು ದಿನಗಳವರೆಗೆ ಹಾಗೆಯೇ ಕುಳಿತರು. ಗುರುಗಳು ಬರಲೇ ಇಲ್ಲ.

ಕೊನೆಗಳಿಗೆಯಲ್ಲಿ ಅವರು ಕೊಟ್ಟ ಅದೇಶವನ್ನು ಈಡೇರಿಸಲು ಆಗಲಿಲ್ಲವಲ್ಲ ಎಂಬ ಚಿಂತೆಯೊಂದಿಗೆ, ಅಗಲುವಾಗ ಗುರುಗಳು ನನಗೆ ಏನು ಹೇಳುತ್ತಿದ್ದರೋ ನಾನು ಕೊಟ್ಟ ಮಾತಿನಂತೆ ಬಾರದಿರುವುದಾಕ್ಕಾಗಿ ನನ್ನನ್ನು ಎಷ್ಟು ತೆಗಳಿದರೋ ಎಂದು ಪೇಚಾಡಿಕೊಳ್ಳುತ್ತ, ವಿಚಲಿತ ಮನದವರಾಗಿ ಯೋಚಿಸುತ್ತಾ ಚಕ್ರ ತೀರ್ಥದ ದಂಡೆಗೆ ಬಂದ ಬಡೇಸಾಹೇಬರಿಗೆ ತಟ್ಟನೆ ತಲೆಯಲ್ಲಿ ಒಂದು ವಿಚಾರ ಸುಳಿಯಿತು. ಗುರುದ್ರೋಹಿಯಾದ ನನಗೆ ಇದೇ ತಕ್ಕ ಶಿಕ್ಷೆ ಎಂದು ನಿರ್ಧರಿಸಿದ ಅವರು ಚಕ್ರತೀರ್ಥದಲ್ಲಿ ಹಾರಿದರು. ನೀರಿನಲ್ಲಿ ಅವರು ಕಂಡುದುದು ಏನು? ಎಲ್ಲೆಲ್ಲಿಯೂ ಮಂಗಲ ಧ್ವನಿ, ಎತ್ತನೋಡಿದರೂ ಶ್ರೀರಾಮ, ಶ್ರೀರಾಮ ಎಂಬ ಶಬ್ದಗಳು, ಇಂಪಾದ ಕಂಠವೊಂದು ಅವರ ಕಿವಿಯಲ್ಲಿ 'ಶ್ರೀರಾಮ' ಬೀಜವನ್ನು ಬಿತ್ತಿದಂತಾಯಿತು. ಭಯಾಘಾತಗಳಿಂದ ಸಾಹೇಬರು ಸ್ಮೃತಿಕಳೆದುಕೊಂಡರು. ಎಚ್ಚರವಾದಾಗ ದು:ಖ ಮರೆಯಾಗಿ ಆಧ್ಯಾತ್ಮಿಕ ವಿಚಾರಗಳು ತಲೆಯಲ್ಲಿ ತುಂಬಿಕೊಂಡಿದ್ದ ಅವರಿಗೆ ಬದುಕಿನ ದಿವ್ಯಜ್ಞಾನ ಲಭಿಸಿತ್ತು. ಅಲ್ಲಿಂದಲೇ ಅವರ ಕೀರ್ತನೆಗಳ ಧಾರೆ ಆರಂಭವಾಯಿತು. "ತೇಲಿದೆ ಅಯ್ಯೋ ತೇಲಿದೆ" ಎಂಬ ಅವರ ಮೊದಲ ಕೀರ್ತನ 'ಶ್ರೀರಾಮ' ಅಂಕಿತದಿಂದ ದಾಸಸಾಹಿತ್ಯಕ್ಕೆ ಕಾಣಿಕೆಯಾಗಿ ಮೂಡಿ ಬಂತು. ಮರಳಿ ಗೋನವಾರಕ್ಕೆ ಬರುವಾಗ ಮಾರ್ಗ ಮಧ್ಯದಲ್ಲಿಯೇ ಅನೇಕ ಕೀರ್ತನೆ, ಭಜನೆಗಳನ್ನು ಕಟ್ಟುತ್ತಾ ತಮ್ಮ ಇಷ್ಟದೇವನಾದ ಶ್ರೀರಾಮದೇವರಿಗೆ ಕೀರ್ತನೆಗಳ ಸರಮಾಲೆಯನ್ನೇ ಮುಡಿಸಿದರು.

ಶ್ರೀರಾಮದಾಸರ ಮೇಲೆ:

ಗುರುಗಳು ಹೇಳಿದ ಕಾಲಕ್ಕೆ ಸರಿಯಾಗಿ ಭೇಟಿಯಾಗದೆ ಬಡೇಸಾಹೇಬರು ಗುರುಗಳನ್ನು ಕಳೆದುಕೊಂಡುದುದೇನೋ ನಿಜ. ಆದರೆ ಅವರು ಹಂಪೆಯಿಂದ ಮರಳಿ ಗೋನವಾರಕ್ಕೆ ಬರುವಾಗ ಶ್ರೀರಾಮದೇವರನ್ನೇ ತಮ್ಮ ಸಂಗಡ ಕರೆದುಕೊಂಡು ಬಂದರು. ಶ್ರೀರಾಮ ಅಂಕಿತವನ್ನೇ ಇಟ್ಟುಕೊಂಡು ಶ್ರೀರಾಮ ದಾಸರೆಂದು ಹೆಸರನ್ನು ಪಡೆದರು. ಯಂತ್ರ ಯುಗದಲ್ಲಿ ಯಾಂತ್ರಿಕವಾಗಿ ಬದುಕುತ್ತಿರುವ ನಾವು ಪವಾಡದಂತಿರುವ ಈ ಘಟನೆಯನ್ನು ನಂಬದೇ ಇರಬಹುದು. ಇಷ್ಟು ಮಾತ್ರ ನಿಜ. ಇಸ್ಲಾಂ ಧರ್ಮದ ಪಿಂಜಾರ ಕುಲದಲ್ಲಿ ಹುಟ್ಟಿದ ಬಡೇಸಾಹೇಬರು ರಾಮಾಯಣ, ಮಹಾಭಾರತ, ಭಾಗವತ, ವೇದ

ಉಪನಿಷತ್ತುಗಳ ಹಾಗೂ ದ್ವೈತಸಿದ್ಧಾಂತಗಳ ಅರ್ಥವತ್ತಾದ ಸಾರಸಂಗ್ರಹದೊಂದಿಗೆ ಬರೆಯಲ್ಪಟ್ಟ ಕೀರ್ತನೆ, ಭಜನೆಗಳು, ಉಗಾಭೋಗಗಳು, ಶತಾಷ್ಟಕಗಳು ಜನಸಾಮಾನ್ಯರ, ಭಕ್ತರ ತನುಮನಗಳನ್ನು ಸೂರೆಗೊಂಡಿರಬೇಕಾದರೆ-ಇದು ಸಾಮಾನ್ಯ ವ್ಯಕ್ತಿಗೆ ಅಸಾಧ್ಯವಾದ ಸಾಧನೆ. ಯಾವುದೋ ಅಸಮಾನ್ಯಶಕ್ತಿ ಬಡೇಸಾಹೇಬರಿಗೆ ದೊರಕಿರಲೇ ಬೇಕು. ಇದು ಮಾತ್ರ ನಾವು ಒಪ್ಪಲೇಬೇಕಾದ ವಿಷಯ. ಘಟನೆ ಯಾವುದೇ ಇರಲಿ ಬಡೇಸಾಹೇಬರು ಶ್ರೀರಾಮದಾಸರಾದರು. ಜ್ಞಾನಿಗಳಿಗೆ ಕುಲಬಂಧನವಿಲ್ಲ.

ಗೋನವಾರಕ್ಕೆ ಮರಳಿದ ಶ್ರೀರಾಮದಾಸರು ಇತರರ ಕಣ್ಣಿಗೆ ಅದ್ಭುತ ವ್ಯಕ್ತಿಯೆನಿಸಿದರೂ ತಾವು ಮಾತ್ರ ಅಭಿಮಾನ ಶೂನ್ಯರಾಗಿ ನಿರಾಡಂಬರ, ಸರಳ ಬದುಕನ್ನೇ ಸಾಗಿಸಿದರು. ಕಂಡವರು ತಮ್ಮನ್ನು ಹೊಗಳಬೇಕೆಂಬ ಹಂಬಲ ಅವರಿಗಿರಲಿಲ್ಲ. ಕಪ್ಪು ದೇಹದ, ಬಡಕಲು ರಾಮದಾಸರಲ್ಲಿ ಇಂತಹ ಅದ್ಭುತ ಸಾಹಿತ್ಯ ಶಕ್ತಿ ಅದೆಲ್ಲಿ ಅಡಗಿತ್ತೋ ಅದು ಶ್ರೀರಾಮದೇವರಿಗೇ ಗೊತ್ತು. ಅವರ ಉಡುಪಾದರೂ ಎಂತಹದ್ದು-ಧೋತರ ಅಂಗಿ, ಅಂಗಿಯ ಮೇಲೊಂದು ಕೋಟು, ತಲೆಯ ಮೇಲೊಂದು ಪಟಗ. ಅವರ ಈ ವೇಷವನ್ನು ನೋಡಿದ ಅನೇಕರು "ನೀವು ಇಂತಹ ಬಟ್ಟೆ ತೊಡಬಾರದು, ಕಾವಿ ಬಟ್ಟೆ ಹಾಕಬೇಕು." ಎಂದು ಹೇಳಿದರಂತೆ ಅಗ ಶ್ರೀ ರಾಮದಾಸರು "ಕಾಷಾಯ ಕಮಂಡಲ ಹಾಕಿದರೆ ಯತಿಗಳು ಸಹಿತ ಸಮಸ್ಕಾರ ಮಾಡಬೇಕು. ಹಂಗೇನರ ಅದರ ನನಗತಿಯೇನು? ಆ ಪಾಪ ತೊಳಕೊಂಬುದಕ ನನ್ನಿಂದ ಸಾಧ್ಯವಾದೀತೆ?" ಅಂದರಂತೆ ಇದು ಅವರ ಸರಳ ಜೀವಿತಕ್ಕೆ ಒಂದು ಉದಾಹರಣೆ ಮಾತ್ರ.

ಪವಾಡಗಳೆಂಬಂತೆ ಶ್ರೀರಾಮದಾಸರು ಯಾವ ಕಾರ್ಯಗಳನ್ನೂ ಮಾಡಲಿಲ್ಲವಾದರೂ ಸಹಜವಾದ ಅವರ ನುಡಿಗಳನ್ನು ಯಾರಾದರೂ ಸೂಕ್ಷ್ಮದೃಷ್ಟಿಯಿಂದ ಅರ್ಥ ಮಾಡಿಕೊಂಡಾಗ, ಅವರ ನುಡಿಗಳ ಹಿಂದಿನ ನಿಜಸ್ಥಿತಿಯ ಅರಿವಾಗುತ್ತಿತ್ತು. ಇವರ ಮಾತಿನಲ್ಲಿ ಯಾವುದೋ ಒಂದು ಭವಿಷ್ಯ ರಹಸ್ಯ ಅಡಗಿರುವಂತೆ ಅರ್ಥವಾಗುತ್ತಿತ್ತು. ಇದನ್ನು ಅರಿತುಕೊಂ ಡವರೆಂದರೆ ಕೇವಲ ಇವರ ಅಂತರಂಗದ ಗೆಳೆಯರು ಮಾತ್ರ. ಗೋನವಾರದ ಕುಲಕರ್ಣಿಯವರು ಕುದುರೆ ಮೇಲೆ ಎಲ್ಲಿಗಾದರೂ ಪ್ರಯಾಣ ಬೆಳಿಸುತ್ತಿದ್ದರೆ

ರಾಮದಾಸರು "ಇವತ್ತ್ಯಾಕ ಬಿಡಪ್ಪ ಕುಲಕರಣಿ" ಅಂದರೆ ಮುಗಿಯಿತು; ಕುಲಕರಣಿಯವರ ಪ್ರಯಾಣವೇ ರದ್ದು. ಅವತ್ತು ಗ್ರಾಮ ಪರಿಶೀಲನೆಗೆಗಾಗಿ ತಹಶೀಲದಾರರು, ಗಿರ್ದಾವರರು ಅಥವಾ ಮತ್ತೊಬ್ಬ ಅಧಿಕಾರಿಗಳು ಬಂದು ಬಿಡುತ್ತಿದ್ದರು. ಅವರ ಮಗ ಸೋಫಿ ಹನ್ನೆರಡು ವರ್ಷದ ಹುಡುಗನಾಗಿದ್ದ. ಒಂದು ದಿನ ಜಡ್ಡಾಯಿತು. ಊರ ಜನರಿಗೆ ಕಳವಳ, ದಾಸರು ನಿಶ್ಚಿಂತೆ. "ಏನ್ರಿ, ನಿಮ್ಮ ಮಗಗ ಹೀಂಗಾಗಬಾರದಿತ್ತು " ಅಂದ್ರೆ" ಹೋಗಲಿ ಬಿಡು ದಾಸ ಸಂತತಿ ಉಳಿಯಬಾರದು" ಅಂದರಂತೆ, ಮರುದಿನವೇ ಅವರ ಒಬ್ಬನೇ ಒಬ್ಬ ಮಗ ಸತ್ತ. ಈ ಘಟನೆ ರಾಮದಾಸರಿಗೆ ಸಂಸಾರದಲ್ಲಿ ನಿರಾಸಕ್ತಿ ಇತ್ತು ಎಂಬುದರ ಜೊತೆಗೆ ಅವರ ಮನಸ್ಸಿನ ಸ್ಥಿರತೆಯನ್ನು ಎತ್ತಿ ತೋರಿಸುತ್ತದೆ. ಸಾಮಾನ್ಯರಿಂದ ಇಂತಹ ಸಾಧನೆ ಅಸಾಧ್ಯ. ಈ ಬಗೆಯ ಪರೀಕ್ಷಾ ಕಾಲವೇ ವ್ಯಕ್ತಿಗಳನ್ನು ಮಹಾತ್ಮರ ಸ್ಥಾನಕ್ಕೆ ಕೊಂಡೊಯ್ಯಬಲ್ಲ ಸೋಪಾನಗಳಾಗಬಲ್ಲವು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಶ್ರೀರಾಮದಾಸರು ಕೀರ್ತನೆ ಭಜನೆಗಳನ್ನು ಬರೆಯುತ್ತಿದ್ದರೆಂಬುದು ಅದೇ ಊರಿನ ಅನೇಕ ಜನರಿಗೆ ಗೊತ್ತಿರಲಿಲ್ಲ. ಕಾಗದ, ದೌತಿ, ಒಂದು ಟಾಕು ಯಾವಾಗಲೂ ದಾಸರ ಹತ್ತಿರವೇ. ಮಲಗುವಾಗಲೂ ಇವುಗಳನ್ನು ತಲೆದಿಂಬಿಗಿಟ್ಟುಕೊಂಡು ಮಲಗುತ್ತಿದ್ದರಂತೆ, ರಾತ್ರಿ ಎಚ್ಚರವಾದಾಗ ಕೀರ್ತನೆ ಭಜನೆಗಳನ್ನು ಬರೆಯುತ್ತಿದ್ದರಂತೆ. ಪ್ರಯತ್ನ ಪೂರ್ವಕವಾಗಿ ಕುಳಿತು ಎಂದೂ ಬರೆದವರಲ್ಲ, ಇದೊಂದು ಅವರ ವೈಶಿಷ್ಟ್ಯ.

ಶ್ರೀರಾಮದಾಸರನ್ನು ಜನರೆಲ್ಲರು 'ತಾತಾ' ಎಂದೇ ಕರೆಯುತ್ತಿದ್ದರು. ಗೊತ್ತಿಲ್ಲದ ವಿಷಯವನ್ನು ಗೊತ್ತಿದೆ ಎಂಬಂತೆ ಎಂದೂ ಹೇಳಿದವರಲ್ಲ. ಒಂದು ಹಳ್ಳಿಗೆ ಹೋದಾಗ ಅಲ್ಲಿಯ ಕೆಲವರು "ತಾತ, ನಾಡಿ ವಿಷಯದಾಗ ನಿಮಗೆ ಏನು ಗೊತ್ತದ ಹೇಳ್ರಿ " ಅಂದರು ಅಗ ರಾಮದಾಸರು "ಅದರಾಗ ನನಗೇನು ಗೊತ್ತಿಲ್ಲಪ್ಪ " ಅಂದರು. ಮರುದಿನ ಇನ್ನುಪೂರ್ತಿ ಬೆಳಕು ಹರಿದಿರಲಿಲ್ಲ ನಾಡಿ ವಿಷಯ ಕುರಿತು ಕೇಳಿದವರ ಮನೆಗೆ ಹೋಗಿ ಅವರನ್ನು ಎಬ್ಬಿಸಿ " ನಿನ್ನೆ ನೀವು ನಾಡಿ ವಿಷಯ ಕೇಳಿದ್ರಲ್ಲ ರಾತ್ರಿ ರಾಮಯ್ಯ ನಾಡಿ ವಿಷಯ ನನಗ ಹೇಳ್ಯಾನ ನೋಡ್ರಿ" ಅಂತ ತಾವು ರಾತ್ರಿ ಬರೆದ ನಾಡಿ ವಿಷಯ ಕುರಿತ

ಕೀರ್ತನೆಯನ್ನು ಹಾಡಿ ತೋರಿಸಿದಂತೆ. ಹೀಗೆ ಶ್ರೀ ರಾಮದಾಸರ ಪ್ರತಿಯೊಂದು ಚಿಂತನ ಮಂಥನದ ಮೇಲೂ 'ಶ್ರೀರಾಮ' ತನ್ನ ಪ್ರಭುತ್ವವನ್ನು ಬೀರಿದ್ದ.

ತೀರ್ಥ ಕ್ಷೇತ್ರ ದರ್ಶನ:

ಶ್ರೀ ರಾಮದಾಸರಿಗೆ ತೀರ್ಥ ಕ್ಷೇತ್ರಗಳ ಮೇಲೆ ಅಸಕ್ತಿ ಬಹಳ. ಪುರಾಣ ಪುಣ್ಯಕಥೆಗಳ ಶ್ರವಣ, ಮನನಗಳಲ್ಲಿಯೇ ಕಾಲ ಕಳೆದ ಅವರು ಸಹಜವಾಗಿಯೇ ಈ ರೂಢಿಯನ್ನು ಬೆಳೆಯಿಸಿಕೊಂಡರು. ಕಾಶಿ, ರಾಮೇಶ್ವರ, ಪಂಢರಪುರ, ತಿರುಪತಿ, ಮಂತ್ರಾಲಯ, ಉಡುಪಿ ಮೊದಲಾದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು. ತೀರ್ಥಕ್ಷೇತ್ರಗಳ ಸಂದರ್ಶನದ ಅವಧಿಯಲ್ಲಿಯೇ ಆಯಾ ದೇವರುಗಳ ಮೇಲೆ ಒಂದೆರಡು ಕೀರ್ತನೆ, ಭಜನೆಗಳನ್ನು ರಚಿಸಿದ್ದಾರೆ. ಮಂತ್ರಾಲಯಕ್ಕೆ ಹೋದಾಗಿನ ಒಂದು ಘಟನೆ–ಕೀರ್ತನೆ ವೆಂಕಟ ಭೀಮಾಚಾರ್ಯರ ತಮ್ಮನವರಾದ ಗೋನವಾರದ ಗೋವಿಂದಾಚಾರ್ಯರನ್ನು ಕರೆದುಕೊಂಡು ರಾಮದಾಸರು ಮಂತ್ರಾಲಯಕ್ಕೆ ಹೋದರು. ಅಲ್ಲಿ ಇವರನ್ನು ರಾಯರ ವೃಂದಾವನದ ಹತ್ತಿರ ಬಿಡಲಿಲ್ಲವಂತೆ. ಆಗ ರಾಮದಾಸರು "ಬಾ ಗೋವಿಂದ ತಾತ, ಮಹದ್ವಾರದ ಹೊರಗ ಭಜನಿ ಮಾಡೋಣ, ಅಲ್ಲಿದ್ದ ರಾಯರು ಇಲ್ಲಿ ಇಲ್ಲೇನು" ಎನ್ನುತ್ತಾ ಮಹಾದ್ವಾರದ ಹತ್ತಿರ ನಿಂತು ಆಗಿಂದಾಗಲೇ " ಸಂತಜನರ ಪ್ರಿಯ ಸಂತಸ ಕರುಣಿಸು ಮಂತ್ರಾಲಯ ಸುಖದಾತ, ನಮೋ ಮಂತ್ರಮೂರ್ತಿ ಗುರುನಾಥ' ಎಂಬ ೨೭ ನುಡಿಗಳ ಸುಂದರ ಭಜನೆಯೊಂದನ್ನು ಮಾಡಿ ಹಾಡಿದಾಗ ಅಲ್ಲಿ ಸೇರಿದ್ದ ಅನೇಕ ಭಕ್ತಾದಿಗಳು ನಿಂತಲ್ಲಿಯೇ ನೂರಾರು ಪ್ರತಿಗಳನ್ನು ಮಾಡಿಕೊಂಡರಂತೆ. ಇದೆಲ್ಲ ಅಂತೆಕಂತೆಗಳ ಸಂತೆಯಲ್ಲ. ಏಕೆಂದರೆ ಇವರ ಜೊತೆಯಾಗಿ ಹೋದವರು ಇನ್ನೂ ಜೀವಂತವಿದ್ದಾರೆ.

ಮಾಧವತೀರ್ಥರ ವೃಂದಾವನ ಒಂದು ಲಿಂಗಸಗೂರು ತಾಲ್ಲೂಕಿನ ಬುದ್ಧಿನ್ನಿ ಗ್ರಾಮದಲ್ಲಿದೆ. ಆಗ ಅದಕ್ಕೆ ಒಂದು ಮಠವನ್ನು ಕಟ್ಟಿಸಬೇಕೆಂದು ನಿಶ್ಚಯ ಮಾಡಿದ ಭಕ್ತಾದಿಗಳು ಸಭೆ ಸೇರಿದರು. ಈ ಸಭೆಯಲ್ಲಿ ಶ್ರೀರಾಮದಾಸರು ಇದ್ದರು. ಮಠಕಟ್ಟಿಸಲು ದಾನವಾಗಿ ನೂರು, ಐದುನೂರು, ಸಾವಿರ ರೂಪಾಯಿಗಳನ್ನು ಕೊಡುವ ವಾಗ್ದಾನವನ್ನು ಒಬ್ಬೊಬ್ಬ ಭಕ್ತರು ಮಾಡಿದರು.

ಇದನ್ನೆಲ್ಲ ಕೇಳುತ್ತಾ ಕುಳಿತ್ತಿದ್ದ ಶ್ರೀರಾಮದಾಸರು ಎದ್ದು ನಿಂತು "ಸುಮ್ಮ ಸುಮ್ಮನೆ ಯಾಕ ಹಣ ಬರಸ್ತೀರಿ. ಅಭಿಮಾನ ಇದ್ದವರು ಈಗ ನಗದಿ ಹತ್ತು ರೂಪಾಯಿ ಕೊಡಲಿ " ಅಂದರು. ಯಾರು ಮಾತನಾಡಲಿಲ್ಲ. ಆಗ ಸ್ವತಹ ರಾಮದಾಸರೇ ತಾವು ಉಡುಪಿಗೆ ಹೋಗಲೆಂದು ಇಟ್ಟುಕೊಂಡಿದ್ದ ೮೦ ರೂಪಾಯಿಗಳನ್ನು ಆಗಲೇ ಕೊಟ್ಟು " ಇಂತಹ ಪುಣ್ಯ ಕೆಲಸಕ್ಕಿಂತ ನನಗೆ ಉಡುಪಿ ಕ್ಷೇತ್ರ ಮುಖ್ಯವಲ್ಲ: ಅಂದರಂತೆ. ಅನಂತರ ಕೈಬಿಡದೆ ತಾವೇ ಮಠದ ನಕ್ಷೆಯನ್ನು ತಯಾರಿಸಿ, ಪ್ರಯತ್ನ ಪೂರ್ವಕವಾಗಿ ಅಲ್ಲಿ ಮಠವನ್ನು ಕಟ್ಟಿಸಿದರು. ಇದನ್ನು ಇಂದಿಗೂ ಯಾರು ಮರೆತಿಲ್ಲ. ಬುದ್ಧಿನ್ನಿ ಪುಣ್ಯ ಕ್ಷೇತ್ರವಾಗಿ ಈಗಲೂ ಮೆರೆಯುತ್ತಿದೆ. ವರ್ಷವೂ ಮಾಧವ ತೀರ್ಥರ ಆರಾಧನೆಯಾಗುತ್ತಿದೆ. ರಾಮದಾಸರೇ ಸ್ವತ ನಕ್ಷೆಹಾಕಿ ಕಟ್ಟಿಸಿದ ಮಠದ ಮಹಾದ್ವಾರ ಅವರ ನೆನಪನ್ನು ತರುತ್ತಿದೆ. ಅವರ ಪ್ರಮಾಣಿಕ ಪ್ರಯತ್ನಕ್ಕೆ ದಾಸ ಜೀವನಕ್ಕೆ ದೊರಕಿದ ಪುಣ್ಯದ ಫಲವಾಗಿ ತಲೆಯೆತ್ತಿ ನಿಂತಿದೆ.

ಶ್ರೀರಾಮದಾಸರ ಕೊನೆಯ ದಿನಗಳು:

ತಮ್ಮ ಬದುಕಿನ ಕೊನೆಯ ಭಾಗವನ್ನು ಶ್ರೀ ರಾಮದಾಸರು ದೇವದುರ್ಗ ತಾಲ್ಲೂಕಿನ ಲಿಂಗದ ಹಳ್ಳಿಯಲ್ಲಿ ಕಳೆದರು. (ಈ ಲಿಂಗದ ಹಳ್ಳಿ ಜಾಲಹಳ್ಳಿಯಿಂದ ೨ ಮೈಲು ದೂರದಲ್ಲಿದೆ) ಎರಡನೆಯ ಹೆಂಡತಿ ಅಲ್ಲಮ್ಮ ಇವರ ತವರು ಮನೆ ಈ ಲಿಂಗದ ಹಳ್ಳಿ. ಗೋನವಾರವನ್ನು ಬಿಟ್ಟು ಲಿಂಗದಹಳ್ಳಿಯಲ್ಲಿಯೇ ರಾಮದಾಸರು ನೆಲಿಸಿದರೂ ಗೋನವಾರದ ಜನರು ರಾಮದಾಸರನ್ನು ಮರೆಯಲಾಗಲಿಲ್ಲ. ದಾಸರು ಲಿಂಗದ ಹಳ್ಳಿಯಲ್ಲಿಯೇ ತಮ್ಮ ದೇಹವನ್ನು ತ್ಯಜಿಸಿದರು. ಅವರ ಸಮಾಧಿ ಆ ಗ್ರಾಮದಲ್ಲಿಯೇ ಆಯಿತು. ಸುಮಾರು ಕ್ರಿ.ಶ ೧೯೪೦ ರಲ್ಲಿ ಇವರು ತಮ್ಮ ದೇಹತ್ಯಾಗ ಮಾಡಿದರು. ಮಾರ್ಗಶಿರ ಬಹಳ ದಶಮಿ ದಾಸರ ದೇಹಾಂತ್ಯದ ದಿನ. ಅವರ ಸಮಾಧಿಯ ಸುತ್ತಲೂ ತುಳಸಿಯ ವನಾಂತರವೇ ಉಂಟಾಗಿದೆ. ಇದನ್ನು ನಾವು ಈಗಲೂ ನೋಡಬಹುದು. ೧೨ವರ್ಷದ ಅನಂತರ ಗದ್ದಿಗೆಯನ್ನು ಕಟ್ಟಲು ಅವರ ಸಮಾಧಿಯನ್ನು ತೆಗೆದರೆ ದಾಸರ ಶರೀರ ಕೊಳೆಯದೆ ಹಾಗೆಯೇ ಇತ್ತಂತೆ,

ಅದನ್ನು ನೋಡಿದವರು ದು:ಖ ತಡೆಯಲಾರದೆ ಅತ್ತುಬಿಟ್ಟರಂತೆ. ರಾಮದಾಸರ ಗದ್ದುಗೆಯ ಕಲ್ಲಿಗೆ ಹನುಮಪ್ಪ ಒಡಮೂಡಿದ್ದಾನೆ. ಮಾರ್ಗಶಿರ ಬಹುಳ ದಶಮಿಯಂದು ಇಂದಿಗೂ ಲಿಂಗದ ಹಳ್ಳಿಯಲ್ಲಿ ದಾಸರ ಪುಣ್ಯ ತಿಥಿಯನ್ನು ಆಚರಿಸಲಾಗುತ್ತಿದೆ. ಅದೇ ದಿನ ಗೋನವಾರದ ಕುಲಕರಣಿಯವರ ಮನೆಯಲ್ಲೂ ದಾಸರ ಪುಣ್ಯತಿಥಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಸಾಧ್ವಿ ಅಲ್ಲಮ್ಮನವರು ಲಿಂಗದ ಹಳ್ಳಿಯಲ್ಲಿಯೇ ತಮ್ಮ ದೇಹತ್ಯಾಗ ಮಾಡಿದರು. ಶ್ರೀ ರಾಮದಾಸರನ್ನು ಕೆಲವರು ತುಳಸಿದಾಸರ ಅವತಾರವೆಂದೇ ಭಾವಿಸಿದ್ದಾರೆ. ಇದಕ್ಕೆ ಕಾರಣ ಅವರ ಸಮಾಧಿಯ ಸುತ್ತು ಬೆಳೆದಿರುವ ತುಳಸಿಯ ವನ. ದಾಸರು ಅವತಾರ ಪುರುಷರಾಗಿರಬಹುದು ಅಥವಾ ಆಗಿರಲಿಕ್ಕಿರಲಿಲ್ಲ; ಆದರೆ ೨೦ ನೇ ಶತಮಾನದಲ್ಲಿ ನೀತಿ, ಅನೀತಿಗಳನ್ನು, ಪುಣ್ಯ ಪಾಪಗಳನ್ನು ತೋರಿಸಿಕೊಡುತ್ತ ತಾವು ಮುಸಲ್ಮಾನರಾದರೂ ಹಿಂದು ಧರ್ಮದ ವೈದಿಕ ಪರಂಪರೆಯಲ್ಲಿ ಎರಡೂ ಧರ್ಮಕ್ಕೆ ಬೇಕಾದವರಾಗಿ ಬದುಕುತ್ತಾ ರಾಮಭಕ್ತಿಯ ಜ್ಯೋತಿಯನ್ನು ಬೆಳಗಿಸಿ ಗಾಡಾಂಧಕಾರದಲ್ಲಿರುವ ಲೌಕಿಕ ಜನತೆಗೆ ದಾರಿ ತೋರುವ ಕೈ ದೀಪವಾಗಿ ಮೆರೆದಿದ್ದಾರೆ ಎಂದು ಮಾತ್ರ ಹೇಳಬಹುದು.

ಸಾಹಿತ್ಯ ಸಾಧನೆ :

ದಾಸಕೂಟದ ಪರಂಪರೆಯಂತೆ ಶ್ರೀರಾಮದಾಸರು ತಮ್ಮೆಲ್ಲ ಭಜನೆ, ಕೀರ್ತನೆ ಉಗಾಭೋಗಗಳಿಗೆ ಮಧ್ವಾಚಾರ್ಯರ ದ್ವೈತ ಮತ ಸಿದ್ಧಾಂತವನ್ನೇ ಮುಖ್ಯವಾಗಿಟ್ಟುಕೊಂಡಿದ್ದರು. ಇವರು ರಚಿಸಿದ ಕೀರ್ತನೆಗಳ ಸಂಖ್ಯೆ ಸುಮಾರು ೮೦೦ ಕ್ಕೂ ಹೆಚ್ಚಾಗಿವೆ. ನೂರು ಉಗಾಭೋಗಗಳು ಐದು ಶತಾಷ್ಟಕಗಳು ಮತ್ತು ೪೬೦ ನುಡಿಯ ರಾಮಭಜನೆ ಇವರ ಸಾಹಿತ್ಯದಲ್ಲಿ ಸೇರಿವೆ. ಇವುಗಳಲ್ಲದೆ ಉರ್ದು ಮತ್ತು ಹಿಂದಿಯಲ್ಲಿಯೂ ಹಲವು ಕೀರ್ತನೆಗಳನ್ನು ರಚಿಸಿದ್ದಾರೆ. ಇವರ ಅಂಕಿತನಾಮ 'ಶ್ರೀರಾಮ' ಎಂದು. ಈ ಅಂಕಿತದಲ್ಲಿಯೂ ರಾಮದಾಸರು ತಮ್ಮದೇ ಆದ ಮಾರ್ಗವನ್ನು ಸೃಷ್ಟಿಸಿದ್ದಾರೆ. ಇಲ್ಲಿಯವರೆಗೆ ದಾಸಕೂಟದಲ್ಲಿ ದಾಸರ ಅಂಕಿತಗಳು ಹೆಚ್ಚಾಗಿ ಜನಪ್ರಿಯತೆ ಗಳಿಸಿದುದು 'ವಿಠಲ' ಎಂಬುದು ಆದರೆ ರಾಮ ದಾಸರು ಶ್ರೀರಾಮನನ್ನು ತಮ್ಮ ಅಂಕಿತವನ್ನಾಗಿ ಮಾಡಿಕೊಂಡಿದ್ದಾರೆ.

ಶತಾಷ್ಟಕಗಳು :

'ಶತ–ಅಷ್ಟಕ' ಅಂದರೆ ನೂರಾ ಎಂಟು ನುಡಿಗಳು ಅಥವಾ ಸಾಲುಗಳನ್ನು ಹೊಂದಿರುವ ಭಜನೆಗಳು. ಈ ಭಜನೆಗಳಲ್ಲಿ ಪ್ರತಿ ಸಾಲು ಸ್ವತಂತ್ರ ನುಡಿಯಾಗಿರುತ್ತದೆ. ಪ್ರತಿ ಸಾಲಿನ ಅಂತ್ಯದಲ್ಲಿ ಅನುಪಲ್ಲವಿ ಪುನ: ಬರುತ್ತದೆ. ಈ ಶತಾಷ್ಟಕಗಳು ಒಬ್ಬೊಬ್ಬ ದೇವರ ವರ್ಣನೆಗಳಿಂದ ಕೂಡಿರಬಹುದು ಇಲ್ಲವೆ ಆ ದೈವದ ಲೀಲೆ, ಅವತಾರ, ಶಕ್ತಿ ಇತ್ಯಾದಿಗಳನ್ನು ಮುಕ್ತ ಕಂಠದಿಂದ ಹೊಗಳಿರಲೂ ಬಹುದು. ದುಷ್ಟ ಮರ್ದನ ಶಿಷ್ಟರಕ್ಷಣದ ವಿಷಯವೂ ಇಲ್ಲಿರುತ್ತದೆ. ಶತಾಷ್ಟಕಗಳನ್ನು ಸುಶ್ರಾವ್ಯವಾಗಿ ಹಾಡಬಹುದು. ಪ್ರಾಸಾನುಪ್ರಾಸಗಳ ಬಳಕೆ ಇಲ್ಲಿ ಅಧಿಕ. ಯಮಕ, ಶ್ಲೇಷಾಲಂಕಾರಗಳು ಸಹಜವಾಗಿಯೇ ಬರುತ್ತವೆ, ಈ ಬಗೆಯ ಐದು ಶತಾಷ್ಟಕಗಳು ಶ್ರೀರಾಮದಾಸರಿಂದ ರಚಿತಗೊಂಡಿವೆ.

೧. ಶಿವತತಾಷ್ಟಕ ಅಥವಾ ಶಂಭು ಶತಾಷ್ಟಕ:

ನೀಲಕಂಠ ಭವಮಾಲಹರಣ ದಯಾ
ಶೀಲಪಾಲನುತಶಂಭೋ ।
ನಮೋ ಶಾಂಭವಿಪತಿ ಶಿವಶಂಭೋ ।

ಎಂದು ಆರಂಭವಾಗುವ ಶಂಭು ಶತಾಷ್ಟಕದಲ್ಲಿ ಶ್ರೀ ರಾಮದಾಸರು ಶಿವಲೀಲೆ, ಶಿವಸಾಧನಗಳೊಂದಿಗೆ ಶಿವಭಕ್ತಿಯನ್ನು ವ್ಯಕ್ತಗೊಳಿಸಿದ್ದಾರೆ. ತ್ರಿಪುರ ಸಂಹಾರ, ಕುಂಬಾರಗೊಲಿದು ಸಂಭ್ರಮದಿಂ, ಶಿಸುವನುಕೊರೆಸುಂಡು, ಸತ್ತಗಂಡನಕೊಟ್ಟು ಮೃತ್ಯುಗೆಲಿಸಿ, ಚೋರ ಮಾರಯ್ಯನ ವೀರಭಕ್ತಿಗೆ ಮೆಚ್ಚಿ, ಸೂಳಿಚನ್ನವ್ವನ ಶೀಲ ವ್ರತಕೆ ಮೇಲುಸೌಖ್ಯವಿತ್ತ, ದಕ್ಷನ ಮದಮುರಿದಾಕ್ಷಣ, ತಾರಕಾಸುರ ಭಾರವನಿಳುಹಲು–ಇತ್ಯಾದಿ ಶತಾಷ್ಟಕದಲ್ಲಿ ಬರುವ ವಾಕ್ಯಪುಂಜಗಳು ಶಿವಲೀಲೆಯ ಕಥೆಯ ಸಂಕ್ಷಿಪ್ತ ರೂಪಗಳಾಗಿವೆ. ಶಿವಪುರಾಣ ಅರಿತವರಿಗೆ ಅರ್ಥ ಅತಿ ಸುಲಭ.

' ಜನರು ಮೆಚ್ಚಲೆಂಬ ಬಿನಗು ಅಭಿಮಾನೆನ್ನ ಕನಸಿನಲಿ ಕೊಡದಿರು ಶಂಭೋ।
ಕಷ್ಟನಷ್ಟಾದಿಗಳಿಗೆಷ್ಟು ಮಾತ್ರಂಜದ ಧಿಟ್ಟತನವ ಕೊಡು ಶಂಭೋ।
ಸೃಷ್ಟಿಮೇಲಾರಿಗೆ ನಿಷ್ಠುರನುಡಿಯದ ಇಷ್ಟ ಪರನೆನಿಸೆನ್ನ ಶಂಭೋ ।

ಮುಂತಾದ ನುಡಿಗಳಲ್ಲಿ ಶಿವಕಾರುಣ್ಯವನ್ನು ಮತ್ತು ಮನಸ್ಥೈರ್ಯವನ್ನು ಬೇಡಿಕೊಂಡಿದ್ದಾರೆ.

" ನೀರ್ಹೊತ್ತು ತ್ರೈಜಗಸೇರಿ ಸಂರಕ್ಷಿಪ ಪಾರವಾರದಯ
ಶಂಭೋ." ಎಂಬ ಈ ನುಡಿಯಲ್ಲಿಯ 'ನೀರ್ಹೊತ್ತು'
ಎಂಬ ಪದವನ್ನು ದಾಸರು ಬಹು ಅರ್ಥಗರ್ಭಿತವಾಗಿ ಬಳಸಿದ್ದಾರೆ, ಈ ಪದವನ್ನು ಕೇಳಿದಾಗ ಶಿವ ನೀರನ್ನು ಹೊರುವ ಪ್ರಸಂಗ ಯಾವಗ ಬಂದಿತೆಂಬುದು ಎಲ್ಲರ ಮನದಲ್ಲಿ ಮೂಡುವ ವಿಚಾರ. ಆದರೆ ದಾಸರು 'ಗಂಗಾಧರ' ಎಂಬ ಪದಕ್ಕೆ ಪರ್ಯಾಯವಾಗಿ ನೀರ್ಹೊತ್ತು ಎಂಬ ಪದವನ್ನು ಬಳಸಿರುವುದು ಅವರ ಶಬ್ದ ಸಂಪತ್ತಿಗೆ ಸಾಕ್ಷಿಯಾಗಿದೆ.

೨. ಆಂಜನೇಯ ಶತಾಷ್ಟಕ:

ರಾಮಾವತಾರದ ಅಂಜನೇಯನ ಭಕ್ತಿಯ ಚಿತ್ರಣ ಈ ಶತಾಷ್ಟಕದಲ್ಲಿದೆ. ಬಲವಂತನಾದ ಹನುಮಂತ ಅಹಂಮಿಕೆ ಪಡದೆ, ರಾಮಭಕ್ತನಾಗಿ ದುಡಿದ ಮಹಾಭಕ್ತನನ್ನಾಗಿ ಹನುಮಂತನನ್ನು ದಾಸರು ಕಂಡಿದ್ದಾರೆ.

'ತನುಮನಧನದಿಂದ್ಧನುಮನನಾಮವ ನೆನೆಯೆ ಮುಕ್ತಿ ಪದಸಿದ್ಧಾಂತ ।
ಜೈ ಶ್ರೀರಾಮನದೂತ ಹನುಮಂತ
ಎಂಬುದಾಗಿ ಆಂಜನೇಯ ಶತಾಷ್ಟಕ ಪ್ರಾರಂಭವಾಗುತ್ತದೆ.

"ಪನ್ನಂಗಶಯನ ಉನ್ನತಪಾದಸೇವೆಯನು ಕೈಕೊಂಡು, ತನು ಮನಧನವನ್ನು ವನಜನಾಭನಿಗಿತ್ತು ಮಣಿದುಧನ್ಯನಾದ ಧೀಮಂತ " ಎಂಬುದಾಗಿ ಹನುಮಂತನ ಭಕ್ತಿ ಶಕ್ತಿಗಳನ್ನು ವರ್ಣಿಸಿದ್ದಾರೆ.

'ಖಾತ್ರಿ ತೋರಿಸಿದಜಗ ಸೂತ್ರಧಾರನಿಗೆ ಧಾತ್ರಿಜೆನ್ನುಡು
ಕಲುಧೀಮಂತ ।
ಭ್ರಷ್ಟನ ಕುಲತರಿ ದೊಟ್ಟಿಯಮುಪುರಕಟ್ಟಿ ಬಿಡುವೆನೆಂದ ಧೀಮಂತ ।

ತಾಯಿಮಾತಿನ ರಾಯಿಯಂತೆ ಇವಸಾವಧಾನವಾದ ಧೀಮಂತ ।

ಇತ್ಯಾದಿ ನುಡಿಗಳಲ್ಲಿ ಅನುಪ್ರಾಸ ಮತ್ತು ಬಳಸಿದ ಶಬ್ದಗಳಲ್ಲಿರುವ ಗಟ್ಟಿತನವು ದಾಸರ ಶಬ್ದಸಾಮರ್ಥ್ಯಕ್ಕೆ ಸಾಕ್ಷಿ. ಖಾತ್ರಿ, ರಾಯಿ ಈ ಸಾಮಾನ್ಯ ಬಳಕೆಯ ಶಬ್ದಗಳನ್ನು ದಾಸರು ಬಳಸಿಕೊಂಡಿರುವ ವಿಶೇಷವನ್ನು ಗಮನಿಸಬಹುದು.

೩. ಗೋವಿಂದ ಶತಾಷ್ಟಕ:

ಕರ್ತುಸರ್ವೋತ್ತಮ ಸತ್ಯ ಸತ್ಯ ಹರಿ
ಭಕ್ತವತ್ಸಲ ಸಿರಿಗೋವಿಂದ ।
ನಮೋಮುಕ್ತಿದಾಯಕ ಸಿರಿಗೋವಿಂದ ।

ಎಂದು ಆರಂಭವಾಗುವ ಗೋವಿಂದ ಶತಾಷ್ಟಕದಲ್ಲಿ ಕೃಷ್ಣಾವತಾರದ ಕಥೆಯಿದೆ. ಕೃಷ್ಣನ ವಿವಿಧ ಲೀಲೆಗಳು ಮತ್ತು ಚಮತ್ಕಾರ ಪ್ರಸಂಗಗಳನ್ನು ವೈವಿಧ್ಯಮಯವಾಗಿ ಚಿತ್ರಿಸಲಾಗಿದೆ,

ದೇವತೆಗಳನ್ನು ಕಾಲಕಾಲಕ್ಕೆ ರಕ್ಷಿಸಿದ ಗೋವಿಂದ ತನ್ನ ಭಕ್ತರನ್ನು ರಕ್ಷಿಸುವ ಹೊಣೆ ಹೊತ್ತಿದ್ದಾನೆ, ಅದಕ್ಕಾಗಿಯೇ

'ನಿರುತಭಕ್ತಿಯಿಂ ಸ್ಮರಿಸಲು ದಾರಿದ್ರ್ಯ
ದುರಿತದೂರಮಾಳ್ಪ ಗೋವಿಂದ ।

ಎಂದು ಹೊಗಳುತ್ತ ಗೋವಿಂದನ ಮೇಲಿನ ತಮ್ಮ ನಂಬುಗೆಯನ್ನು ವ್ಯಕ್ತಪಡಿಸುತ್ತಾರೆ. ಭಾಗವತದ ಅನೇಕ ಕಥೆ ಉಪಕಥೆಗಳು ಈ ಶತಾಷ್ಟಕದಲ್ಲಿ ಬರುತ್ತವೆ.

' ಈಶಕೇಶಜಗದೀಶ ದೊಷಹರಶ್ರೀಶ
ಶೇಷಶಾಯಿಗೋವಿಂದ ।

ಪಾತಕಹರವಿಧಿತಾತ ವಿಮಲಸುಖದಾತ
ಜಗನ್ನಾಥಗೋವಿಂದ ।
ರತಿಪತಿಪಿತ ಕ್ಷಿತಿಪತಿಗತಿ ಮತಿಯುತ
ಯತಿನುತಹತಭವ ಗೋವಿಂದ ।

ಮುಂತಾದ ನುಡಿಗಳಲ್ಲಿಯ ಆಕರ್ಷಣೆ, ಅರ್ಥಗಾಂಭೀರ್ಯ ಅತ್ಯಂತ ಸುಂದರವಾಗಿದೆ,

೪. ವಿಠಲ ಶತಾಷ್ಟಕ:

ಇದರಲ್ಲಿ ಭಕ್ತಜನಪ್ರಿಯನಾದ ಪರಮಾತ್ಮನ ವಿವಿಧ ಅವತಾರಗಳ ವರ್ಣನೆ ಇದೆ. ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪುರಾಣಗಳಿಂದ ಆಯ್ದ ಕಥಾಭಾಗಗಳು ಇಲ್ಲಿವೆ.

ಭಕ್ತರ ಸೌಖ್ಯ ಮುಕ್ತಿಗೆಮುಖ್ಯ ಚತುರ್ದಶ
ಭುವನಕೆ ಪ್ರೇಮ ಜಯಜಯವಿಠಲನಾಮ ।

ಎಂದು ಆರಂಭವಾಗುವ ಶತಾಷ್ಟಕ

• ವೇದೋದ್ಧಾರ ವೇದಾಧಾರ
ವೇದವೇದಾಗಮ ಪ್ರೇಮ ।
ಆಗಾಧಮಹಿಮ ನೀಗದನಾಮ
ಬಾಗಿಭಜಿಪನ ಪ್ರೇಮ ।
ವೇದಸಂಪಾದನ ಮೇದಿನಿಪಾಲನ
ಸಾಧುಸಂತತಿಸುಪ್ರೇಮ ।
ನಂಬಿಭಜಿಪರ ನಿಂಬುದಯಕರ
ಶಂಭುಸುರಾದಿಗಳಪ್ರೇಮ ।

ಎಂಬುದಾಗಿ ಆ ಪ್ರೇಮ ಮೂರ್ತಿಯನ್ನು ಪ್ರೀತಿಯಿಂದ ಸ್ತುತಿಸಿದ್ದಾರೆ. ಅಜಮಿಳ, ಅಂಬರೀಶ, ಬಲಿಚಕ್ರವರ್ತಿ, ನರಕಾಸುರ, ಗಜೇಂದ್ರಮೋಕ್ಷ ಇತ್ಯಾದಿ ಕಥೆಗಳು ಈ ಶತಾಷ್ಟಕದಲ್ಲಿ ಅಡಕವಾಗಿವೆ,

ಮಾಯಿನಪಡದ ಮಾಯಿನಕಡದ
ಮಾಯದೊಳ್ ಆಡಿದಪ್ರೇಮ ।
ಧಾತ್ರಿಯಪತಿಯಾದ ಧಾತ್ರಿಗಳಿಯನಾದ
ಧಾತ್ರಿಸೂತ್ರನಾದಪ್ರೇಮ ।
ವಿಶ್ವವಿಶ್ವಾಕರ ವಿಶ್ವ ವಿಶ್ವಾಧಾರ
ವಿಶ್ವ ವಿಶ್ವ ರಕ್ಷಕ ಪ್ರೇಮ ।

ಇಂತಹ ನುಡಿಗಳು ಮತ್ತೆ ಮತ್ತೆ ಮೆಲುಕುಹಾಕುವಂತಿವೆ.

೫. ರಾಮಶತಾಷ್ಟಕ:

'ಈಶಶ್ರೀಶಜಗತ್ಪೋಷ ಇಂದಿರೇಶ ರಾಮನಮೋ ।
ಆದಿಅನಾದಿವಸ್ತು ಆದಿಮುಕ್ತಿ ರಾಮನಮೋ ।

ಎಂದು ಆರಂಭಿಸಲಾಗಿರುವ ರಾಮಶತಾಷ್ಟಕದಲ್ಲಿ, ಭಕ್ತಪ್ರಿಯ, ಸಚ್ಚಾರಿತ್ರ, ಪಿತೃವಾಕ್ಯ ಪರಿಪಾಲಕನಾದ ರಾಮನನ್ನು ಬಗೆಬಗೆಯಾಗಿ ಹಾಡಿಹೊಗಳಿದ್ದಾರೆ. " ನಾನಾಯೋನಿಯೊಳಗೆ ಜನಿಸಿ ಜ್ಞಾನಗೆಟ್ಟದ್ದು, ಉಣ್ಣಬಾರದ ಅನ್ನ ಉಂಡು ಬನ್ನ ಬಟ್ಟದ್ದು " ರಾಮನಿಗೊದಗಿದ ಈ ದುರ್ಗತಿಗೆ ಮರುಗುವದಾಸರು" ನಿನ್ನ ಪಾದವನ್ನು ಮರೆತು ಈ ಬವಣೆಪಡೆದೆ, ಎನ್ನ ಪಾಪವನ್ನು ಕ್ಷಮಿಸು ಮನ್ನಿಸು" ಎಂದು ತಮ್ಮ ಅಜ್ಞಾನದ ಬಗ್ಗೆ ಮರಗುತ್ತ ರಾಮನ ಮೊರೆಹೊಕ್ಕಿದ್ದಾರೆ. ನಿನ್ನ ಬೆನ್ನ ಬಿದ್ದು ನಾನು ಧನ್ಯನಾದೆ, ಭಕ್ತಿಯಿಂದ ನಿನ್ನ ಭಜಿಸಿ ಮುಕ್ತನಾದೆ: ಎಂದು ತಡವಾಗಿ ಬಂದ ಜ್ಞಾನಕ್ಕೆ ಆನಂದಿಸಿದ್ದಾರೆ.

೬. ರಾಮಭಜನಾ:

ಈ ಐದು ಶತಾಷ್ಟಕಗಳ ಅನಂತರ ನಾಲ್ಕುನೂರಾ ಅರವತ್ತು ನುಡಿಗಳನ್ನೊಳಗೊಂಡ ರಾಮಭಜನೆ, ರಾಮದಾಸರಿಂದ ನಿರ್ಮಿತಗೊಂಡ ಧೀರ್ಘಕಾವ್ಯ. ತಮ್ಮ ಅಧಿದೈವವಾದ ರಾಮನನ್ನು ೧೦೮ ನುಡಿಗಳಲ್ಲಿ ವರ್ಣಿಸುವುದು ಅಸಾಧ್ಯವೆನಿಸಿರಬೇಕು ದಾಸರಿಗೆ. ಇದರ ಫಲವೇ ೪೬೦

ನುಡಿಗಳ ಈ ರಾಮಭಜನೆ. ಭಜನಾರಂಭದಲ್ಲಿ

' ವರವಕರುಣಿಸು ಚರಣಭಕ್ತಗೆ
ಹರಿಯನಿಮ್ಮಯ ಪರಮ ಸು
ಚರಿತವ ಬರೆಸುನೀನೆಕರವಹಿಡಿದೆನ್ನ
ಪರಮಮತಿಯಿತ್ತು ಕರುಣಿಶ್ರೀರಾಮ ।

ಎಂದು ಪ್ರಾರ್ಥಿಸಿದ್ದಾರೆ.

' ಧಾತ್ರಿತ್ರಯಂಗಳ ಸೂತ್ರಧಾರಿ ಹರಿ ಸ್ತೋತ್ರಕೆ
ಸಿಲುಕಿದರಾಮ ಹರಿಜಯ್ ಜಯ್ ಸೀತಾರಾಮ

ಎಂದು ಆರಂಭಗೊಂಡು " ದಶಶಿರನುಪದ್ರಕೆ ಕುಸುಮಜಾತಮರರು ಬಸವಳಿದತಿಶಯದಿಂದ ಅಸುರಾರಿ ಕಾಯಂದು ಭಜಿಸಲು ವಸುಧೆಯೊಳಗೆಬಂದ ದಶರಥನ್ಹಿರೆಸತಿ ಬಸಿರೊಳವತರಿಸಿದ ರಾಮ "ಎನ್ನುತ್ತ ರಾಮಾವತಾರದ ಕಾರಣದೊಂದಿಗೆ ಅವತಾರದ ಸಂಪೂರ್ಣ ವರ್ಣನೆ ಇದರಲ್ಲಿದೆ. ತಂಗಿ ಶೂರ್ಪನಖಿಗೆ ಅದ ಅಪಮಾನವನ್ನು ಕೇಳಿ ರಾವಣ ತೆಗೆದುಕೊಳ್ಳುವ ನಿರ್ಧಾರ

' ತಂಗಿಮಾತು ಕೇಳಿ । ಮಂಗದನುಜತನ್ನ ।
ಭಂಗಯೋಚಿಸಿದರಾಮ ।
ತಂಗಿಯೆನಿನ್ನಯ । ಭಂಗಪಡಿಸಿದವ ।
ರಂಗನಿಯಳತಂದುರಾಮ ।
ಆಳದಿರಲುನನ್ನ । ಬಾಳುವೆಯಾತಕೆಂದು ।
ತಾಳಿದಪಂಥರಾಮ ।

ದಾಸರ ದನಿಯ ಮೂಲಕ ಈ ವರ್ಣನೆ ಸಮರ್ಥವಾಗಿ ರೂಪಗೊಂಡಿದೆ. ಮಾಯಾ ಕಾಂಚನದ ಮೃಗದ ಹಿಂದೆ ರಾಮ ಹೋದಾಗ ಆ ಕಾಂಚನ ಮೃಗದ ವರ್ಣನೆಯನ್ನು ಮಾಡುತ್ತ

ವಾರಿನೋಡುತಕ್ಕೆ । ಸೇರುವಂತೆನಿಂತು ।
ಹಾರುವದಗಣಿತರಾಮ ।
ಅಲ್ಲಿವುಲ್ಲಾಸದಿ । ಹುಲ್ಲುಮೇಯುತ ।
ಮೆಲ್ಲಮೆಲ್ಲನೆ ಮತ್ತೆರಾಮ ।
ಯೆದುರುಬರತಿರು । ಗ್ವೆದರಿಓಡುವುದು ।
ಕೆದುರತಕಾಲನುರಾಮ ।
ಒದರಿ ನಿಲುತ । ಬೆದರಿನೋಡುವುದು ।
ಪದುಮನಾಭನನುರಾಮ ।
ಕರದಿಸಿಗುವುದೊಮ್ಮೆ । ಪಿರಿದುಹಾರಿಹೋಗಿ ।
ಮರೆಯಾಗಿನಿಲುವುದು ರಾಮ ।
ಸಾಗಿಬಂದು ಮತ್ತೆ । ಸಾಗರಶಾಯಿಮುಂದೆ ।
ಸಾಗರಬೀಳುವುದುರಾಮ ।
ಸೊಗಸಿನಿಂದ ಎದ್ದು । ಜಿಗಿ ಜಿಗಿದಾಡುವುದು ।
ಚಿಗರಿಹಗರಣರಾಮ ।

ಹೀಗೆ ಕಣ್ಣಿಗೆ ಕಟ್ಟುವ ಚಿತ್ರ ಇಲ್ಲಿದೆ. ಚಿಗರೆ ನಮ್ಮ ಕಣ್ಮುಂದೆಯೆ ಸುಳಿದಾಡಿದಂತೆ ತೋರುತ್ತದೆ. ಈ ಭಜನೆಯಲಿ ರಾಮಾವತಾರದ ಸುಂದರ ಚಿತ್ರಣ ಒಡಮೂಡಿದೆ.

ಸಾಲು ಸಾಲಿನ ಪ್ರಾಸಾನುಪ್ರಾಸಗಳು, ಶಬ್ದಬಂಧುರ, ನಾದಲಯಗಳಿಂದ ಶತಾಷ್ಟಕಗಳು ಮತ್ತು ಶ್ರೀ ರಾಮಭಜನೆ ಅತ್ಯಂತ ಆಕರ್ಷಕ ಹಾಗೂ ಜನಪ್ರಿಯವಾಗಿವೆ. ಸಾಹಿತ್ಯದೃಷ್ಟಿಯಿಂದಲೂ ಈ ಭಜನೆಗಳು ಅಧ್ಯಯನ ಯೋಗ್ಯವಾಗಿವೆ.

ಕೀರ್ತನೆಗಳು:

ಶ್ರೀರಾಮದಾಸರು ತಮ್ಮ ಕೀರ್ತನೆಗಳ ಮೂಲಕ ಮಧ್ವಾಚಾರ್ಯರ ದ್ವೈತಸಿದ್ಧಾಂತದ ಹರಿಸರ್ವೋತ್ತಮತ್ವ ತತ್ವವನ್ನು ಎತ್ತಿಹಿಡಿದಿದ್ದಾರೆ. ಇವರ

ಕೀರ್ತನೆಗಳು ಸರಳ, ಸುಂದರವಾಗಿ ಮಧ್ವ ಮತದ ಸಾರಸಂಗ್ರಹಗಳಾಗಿವೆ. ವೇದ, ಉಪನಿಷತ್ತು, ಪುರಾಣಗಳ ಅನೇಕ ಚಿಂತನೆಗಳು ಕೀರ್ತನೆಗಳಲ್ಲಿ ಅಡಕವಾಗಿವೆ. ದೈವೀ ಕಲ್ಪನೆ, ದೈವೀದರ್ಶನ, ಆತ್ಮಶೋಧನೆ, ಆತ್ಮನಿವೇದನೆ, ಭಕ್ತಿಪ್ರತಿಪಾದನೆ ಇತ್ಯಾದಿ ಗುಣಗಳು ಇವರ ಕೀರ್ತನೆಗಳಲ್ಲಿ ದೊರಕುತ್ತವೆ. ಸಂಸಾರದಲ್ಲಿದ್ದುಕೊಂಡೇ ಅದನ್ನು ಗೆಲ್ಲುವ ಸುಲಭ ಸಾಧನೆಯೇ ಭಕ್ತಿ ಮಾರ್ಗ. ಈ ಭಕ್ತಿಗೆ ಮೂಲಬುನಾದಿ ದೈವೀಸ್ಮರಣೆ ಮತ್ತು ನಂಬಿಕೆ.

ಭಾಗವತರಭಾಗ್ಯ ನಿಧಿಯೇ
ಭೋಗಿಶಯನ ಭೋಶ್ರೀರಾಮ
ವಂದಿಭಜಿಸಿರೆಲೋ ಹರಿನಾಮ ದಯ
ಸಿಂಧುಭಜಕ ಬಂಧು ಹರಿನಾಮ
ಬಂಧನಿವಾರಣ ಹರಿನಾಮ ಬಹು
ಕುಂದುನಿಂದೆದೂರ ಹರಿನಾಮ

ಎಂಬುದಾಗಿ ಭವಬಂಧ ನಿವಾರಕನ್ನು ಸ್ಮರಿಸುತ್ತ 'ದಾಸನಾಗೋಪ್ರಾಣಿ ಬರಿ ಈಶನ ನೀ ಕಾಣಿ' ಎಂದು ಎಚ್ಚರವನ್ನು ಕೊಡುತ್ತಾರೆ. ಕರುಣಾಕರ ಮೂರ್ತಿಯನ್ನು ವಿವಿಧ ಬಗೆಯಿಂದ ನೆನೆಸುತ್ತ ತರುಣಿಯ ಮಾನಕಾಯ್ದ ಪ್ರಸಂಗವನ್ನು ಸ್ಮರಿಸಿಕೊಂಡು ಪರಮಾತ್ಮನ ಅಂತ:ಕರಣಕ್ಕೆ ಅಭಿಮಾನ ಪಡುತ್ತ' ದೀನಪಾಲನ ನಾರಿ ಮಾನರಕ್ಷಣಸಿರಿ ಪ್ರಾಣರಮಣ ಹರಿನಾರಾಯಣ ' ಎಂದು ಹಾಡುತ್ತಾರೆ. ಇಂತಹ ಭಕ್ತಿಪ್ರಿಯ ಪರಮಾತ್ಮನನ್ನು ಕುರಿತು 'ಪಾದವ ತೋರೋಪಾವನಮಹಿಮ ಪಾದವತೋರೋರಂಗಯ್ಯ' ಪಾದಕೆಬಿದ್ದು ಪಾವನನಾಗುವೆ ಪಾದವ ತೋರೋ' ಎನ್ನುತ್ತಾ ಹರಿಯ ಪಾದದಿಂದಾದ ಚಮತ್ಕಾರಗಳನ್ನು ವರ್ಣಿಸಿದರೆ ಇನ್ನೊಂದೆಡೆ '

' ಹಸ್ತವಕರುಣಿಸು ವಿಸ್ತಾರಮಹಿಮ
ಹಸ್ತವಕರುಣಿಸೋರಂಗಯ್ಯ ।
ಹಸ್ತವಕರುಣಿಸೆನ್ನ ಮಸ್ತಕದಮೇಲೆ
ಹಸ್ತವಕರುಣಿಸೋ
ಸೋಮಕಸುರನವಧಿಸಿ ವೇದತಂದ

ಹಸ್ತಕರುಣಿಸೋರಂಗಯ್ಯ।
ತಾಮಸದೈತ್ಯನ ಉದರವಬಗೆದ
ಹಸ್ತವಕರುಣಿಸೋ॥

ಎಂದು ಪರಮಾತ್ಮನ ಹಸ್ತದ ಮಹಿಮೆಯನ್ನು ಸವಿಸ್ತಾರವಾಗಿ ವಿವರಿಸುತ್ತ ಅಂತಹ ಹಸ್ತ ದರ್ಶನವನ್ನು ಕೇಳುತ್ತಾರೆ: "ದಾಸ ಹರಿದಾಸನೆನಿಸಿಕೋ ಶ್ರೀಶನಿಮ್ಮ ಶ್ರೀಪಾದ ಕಮಲನೆನಿಸಿಕೋ" ಎಂದು ದೈವದಲ್ಲಿ ದೈನ್ಯದ ಮೊರೆಯನ್ನಿಡುತ್ತಾರೆ. 'ದಾಸನೆಲೋ ಹರಿದಾಸನೆಲೋ' ಎಂದು ಹೇಳುತ್ತ ತಮ್ಮ ದಾಸತ್ವವನ್ನು ಪರಮಾತ್ಮನಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ, 'ಈತನೆಂಥ ಮಹಿಮನೋಡಿರೆ, ರಂಗಯ್ಯರಂಗ. ಈತನೆಂಥಮಹಿಮೆ ನೋಡಿರೆ,' ಎಂದು ಆತನ ಮಹಿಮೆಗಳನ್ನು ಹಾಡಿ ಹೊಗಳುತ್ತಾರೆ. ' ತಿಳಿಯದೋ ನಿನ್ನಾಟ ತಿರುಪತಿಯವೆಂಕಟಾ ' ಎಂದರೂ ' ನಿಗಮ ಅಗಮಗೋಚರ ಜಗನ್ಮೋಹ ಜಗದೀಶ ಪಾಲಿಸು, ಖಗವರಮನ ಜಗದಜೀವನ ಪೊಗಳುವೆನಘಧರ ಅನಘನೆ ನಿನ್ನಾ ' ಎನ್ನುತ್ತ ಅಘಧರನನ್ನು ಪ್ರಾರ್ಥಿಸಿದ್ದಾರೆ. 'ಆರನಂಬಿಗೆ ಜಗದಿ ಯೆನಗಿಲ್ಲ ಹರಿಯೆ, ಕಾರುಣ್ಯನಿಧಿಯೆ ನೀನೇಗತಿ ಎನಗೆಪೊರೆಯ್ಯೆ' ಎಂದು ತಮ್ಮ ಧೃಡಭಕ್ತಿ, ನಂಬುಗೆಯನ್ನು ವ್ಯಕ್ತಗೊಳಿಸುತ್ತಾರೆ. ಇಂತಹ ಹರಿಯ ಸ್ಮರಣೆಯು ಬದುಕಿಗೊಂದು ಚೇತನದ ಚಿಲುಮೆ. ಆನಂದ ಕೊಡುವ ಮಂತ್ರ, ಅದಕ್ಕಾಗಿಯೇ 'ಆನಂದಂ. ಮಹದಾನಂದಂ ಹರಿಯ ಭಜನೆ ಬ್ರಹ್ಮಾನಂದಂ' ಎಂದು ಹೇಳಿದರೂ ಈ ಆನಂದವನ್ನು 'ಸತ್ಯನುಡಿಯುವದೇ ಆನಂದಂ, ತನ್ನ ಗುರ್ತುತಿಳಿಯವುದೇ ಆನಂದಂ, ನಿತ್ಯ ನಿರ್ಮಲನ ಸತ್ಯ ಗುಣಂಗಳ ಭಕ್ತಿಯಿಂಭಜಿಸೆ ನಿತ್ಯಾನಂದಂ' ಎನ್ನುತ್ತಾ ಉತ್ತಮ ನಡೆನುಡಿಗಳ ಮುಖಾಂತರ ಬದುಕಿನ ಆನಂದದ ಈ ಅನುಭವ ವಾಸ್ತವ ಬದುಕಿಗೆ ಅತ್ಯಂತ ಸಮೀಪ.

ಭಿಡೆಇನ್ನಾತಕೋ ಹೊಡಿಹೊಡಿಡಂಗುರ
ಪೊಡವಿತ್ರಯಕೆ ಹರಿಯಧಿಕನೆಂದು

ಎನ್ನುವಲ್ಲಿ ಹರಿಸರ್ವೋತ್ತಮತ್ವವನ್ನು ಸಾರುತ್ತಾರೆ. ಇಂತಹ ಶಕ್ತಿಯ ಸ್ಮರಣೆಗಾಗಿ 'ನಗಾರಿ ಹೊಡಿಯೊ ಧ್ಯಾನದತುತೂರಿ ಹಿಡಿಯೊ' ಎಂದು ಭಕ್ತರಿಗೆ ಪ್ರಚಾರದ ಕರೆ ಕೊಡುತ್ತಾರೆ.

ಎಂಥಾಆಟವಿದು ಕ್ಷಿತಿಜಪತಿ
ಎಂಥಾಆಟವಿದು
ಎಂಥಾಆಟ ಶ್ರೀಕಂತುಜನಕ
ಭಕ್ತಾಂತರಂಗಸುರಚಿಂತಾಮಣಿಯೆ
ನಿನ್ನ ಎಂಥಾಆಟವಿದು

ಎಂಬುದಾಗಿ ಕ್ಷಿತಿಜಪತಿಯ ಆಟಗಳನ್ನು ಕೊಂಡಾಡಿದ್ದಾರೆ.

' ಪಾದವತೋರೋಪಾವನಮಹಿಮ,
ಹಸ್ತವಕುರಣಿಸುವಿಸ್ತರ ಮಹಿಮ ,

ಈಶಬಾರೊಭಯನಾಶಬಾರೋ ದಾಸಜನರಪ್ರಾಣೇಶಬಾರೋ, ಆನಂದಂಮಹದಾನಂದಂ, ಪಾದಕಂಡು ಪಾವನಾದೆನು ಶ್ರೀಗಿರಿನಿಲಯನ ಪಾದಕಂಡುಪಾವನಾದೆನು, ಈತನೆಂಥ ಮಹಿಮನೋಡಿರೆ, ನಿಗಮಾಗಮಗೋಚರ ' ಇತ್ಯಾದಿ ಕೀರ್ತನೆಗಳಲ್ಲಿ ದಾಸರ ಭಕ್ತಿ ಭಾವ ಮಡುಕಟ್ಟಿದೆ. ಶಬ್ದ ಚಮತ್ಕಾರ ಗರಿ ಗೆದರಿದೆ.

ಶ್ರವಣ, ಕೀರ್ತನೆ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಆತ್ಮನಿವೇದನ ಸಖ್ಯ ಹೀಗೆ ನವವಿಧ ಭಕ್ತಿಗಳು ಶ್ರೀ ರಾಮದಸರ ಕೀರ್ತನೆಗಳಲ್ಲು ಆಯಾ ಸಂದರ್ಭಕ್ಕೆ ಅನುಗುಣವಾಗಿ ಸೃಷ್ಟಿಗೊಂಡಿವೆ. ಹರಿಯನ್ನು ಸಖನನ್ನಾಗಿ ಕಂಡು ವ್ಯಂಗ್ಯ ಮಾತನಾಡುತ್ತ

ಈತನೆಗತಿಯೆಂದು ನಂಬಿದೆನು
ನಾ ಈತನೇಗತಿಯೆಂದು ನಂಬಿದೆನು
ಈತನಂಥ ನಿಷ್ಕರುಣಿಕಾಕ್ಷೆ, ಪಾತಕಹರಅನಾಥರಕ್ಷಕಶ್ರೀ
ನಾಥಪರಮಭಕ್ತ ಪ್ರೀತನೆಂಬುದಕೇಳಿ
ಮರುಳಾಗಿವನ ಬೆನ್ಹತ್ತಿದೆನೆ,
ಮನೆಮಾರುಗಳೆಲ್ಲ ತೊರೆದನೆ
ಕರುಣವಿಲ್ಲ ತುಸುಹೊರಳಿನೋಡುವಲ್ಲ

ತಿರುತಿರುಗಿ ಮನಕರಗಿಸಾಕಾಯಿತು

ಎನ್ನುವಲ್ಲಿ ಪರಮಾತ್ಮನ ಕಾಠಿಣ್ಯಮನದ ಖಂಡನೆಯನ್ನು ಮಾಡುತ್ತಾರೆ.

ಏನೆಂದೆ ರಂಗಯ್ಯಗೆ ನಾನೇನೆಂದೆ

ನಾನೇನೆಂದನೆಗಾನಲೋಲಗವಮಾನದ

ಮಾತಿಂಥ, ಜೀನನಕಾಣೆನೆಂದೆ ।

ಕಾಲು ಇಲ್ಲದಹೆಳವನೆಂದೆ ।

ತಲೆಯಕಾಣದಕುರೂಪಿಎಂದೆ ।

ಚಲುವಿಕಿಲ್ಲದಕಾಡುಹೀನಮೃಗನೆಂದೆ ।

ಬಲಿಯಬಾಗಿಲಕಾಯ್ದ ಕೂಲಿಕಾರನೆಂದೆ ।

ಗೊಲ್ಲರಕುಲದಲಿಹುಟ್ಟಿದನೆಂದೆ ।

ಗುಳ್ಳಿ ಗುಳ್ಳಿಬೆಣ್ಣೆ ಕದ್ದವನೆಂದೆ ।

ಗೊಲ್ಲರಆಕಳ ಕಾಯುವಚರನೆಂದೆ ।

ಪುಲ್ಲನಯನೆಯರ ವಸ್ತ್ರಕಳ್ಳನೆಂದೆ ।

ಕುದುರೆನಡೆಸಿಒಬ್ಬನುಳಿಸಿದನೆಂದೆ ।

ಕದನವಂಚಿಸಿ ಒಬ್ಬ ನಳಿಸಿದನೆಂದೆ ।

ಕುದುರೆಕಟ್ಟಿದವೀರತಾಮ್ರಧ್ವಜಗೆಸೋತು ।

ಮುದುಕನಾಗಿ ಬಿಕ್ಷದಶ್ವ ತಂದವನೆಂದೆ ।

ಪುಲ್ಲನಯನಸಿರಿರಾಮನಮುಂದೆ ।

ಅಲ್ಲದಮಾತುಗಳ ನಾನೇನೆಂದೆ

ಬಲ್ಲಿದ ಹದಿನಾಲ್ಕು ಲೋಕಪೊತ್ತವನೆಂದೆ ।

ಉಲ್ಲಾಸದಿತಮ್ಮ ಬಿರುದುಸಾರುತಬಂದೆ

ಈ ಕೀರ್ತನೆಯಲ್ಲಿ ದಾಸರು ಪರಮಾತ್ಮನ ವಿವಿಧ ಅವತಾರಗಳನ್ನು ನಿಂದಾಸ್ತುತಿಯಿಂದ ವರ್ಣಿಸುತ್ತಾರೆ. ಇಲ್ಲಿಯ ಒಂದೊಂದು ವರ್ಣನೆಯಲ್ಲಿ ಆಯಾ ಅವತಾರದ ವ್ಯಂಗತೆ ರೂಪಗೊಂಡಿದೆ. ಕಾಲು ಇಲ್ಲದ ಹೆಳವ–ಮತ್ಸ್ಯಾವತಾರ, ತಲೆಯ ಕಾಣದ ಕುರೂಪಿ–ಕೂರ್ಮ, ಚಲುವಿಕಿಲ್ಲದ ಕಾಡು ಹೀನ ಮೃಗ–ನರಸಿಂಹ, ಬಲಯಬಾಗಿಲ ಕಾಯ್ದ ಕೂಲಿಕಾರ–ವಾಮನ, ಇಲ್ಲಿಯ ಹಂಗಿಸುವಿಕೆಯಲ್ಲಿ ದ್ವೇಷರಹಿತ ಆತ್ಮಿಯ ಸ್ನೇಹ ಭಾವ ಹುದುಗಿದೆ. ಅದಕ್ಕಾಗಿಯೇ ಕೊನೆಗೆ ' ಉಲ್ಲಾಸದಿತಮ್ಮ ಬಿರುದುಸಾರುತಬಂದೆ, ಎಂದು ಹೇಳಿಬಿಡುತ್ತಾರೆ.

ಸಾಮಾಜಿಕ ಮತ್ತು ತಾತ್ವಿಕ ಚಿಂತನೆ:

ಸಾಮಾಜಿಕ ಮತ್ತು ತಾತ್ವಿಕ ವಿಚಾರಗಳನ್ನು ಶ್ರೀರಾಮದಾಸರು ಅನೇಕ ಕೀರ್ತನೆಗಳ ಮೂಲಕ ಪ್ರತಿಪಾದಿಸಿದ್ದಾರೆ. ಕುಲ, ಜಾತಿ. ಮಡಿ, ಮೈಲಿಗೆ, ಸ್ನಾನ ಇತ್ಯಾದಿ ವಿಷಯಗಳ ಬಗೆಗೆ ತಮ್ಮ ನೈಜ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಸಮಾಜದಲ್ಲಿಯ ಗೊಡ್ಡು ಸಂಪ್ರದಾಯ ಮತ್ತು ಅಡ್ಡದಾರಿಯನ್ನು ಖಂಡಿಸಿದ್ದಾರೆ. ಶಿಶುನಾಳ ಶರೀಫರಂತೆ ರಾಮದಾಸರೂ ತಮ್ಮ ಕೀರ್ತನೆಗಳ ಮುಖಾಂತರ ಆತ್ಮ, ದೇಹ, ಮಾನವ ಗುಣದೋಷಗಳನ್ನು ಮಾರ್ಮಿಕವಾದ, ಸಾಂಕೇತಿವಾದ ರೀತಿಯಲ್ಲಿ ಸೂಚಿಸಿದ್ದಾರೆ. ಕೆಲವು ಜನರು ಶ್ರೀರಾಮದಾಸರ ಕುಲದ ವಿಚಾರವನ್ನು ಕುರಿತು ಪ್ರಶ್ನಿಸಿದಾಗ ಅವರು ಕೊಟ್ಟ ಉತ್ತರ

ಮಳ್ಳುಮಾನವ ತಿಳಿ ಮಮಕುಲವ ಪೇಳುವೆನು ।
ತಿಳಿದುಭವನೆಲಿಒಳಹೊರಗೊಂದಾಗು
ನಳಿನನಾಭವಪ್ರೇಮಗಳಿಸುವ ಕುಲನಂದು ॥
ಅಲ್ಲ ಎಂಬುವಂಥ । ಅಲ್ಲೆಂಬಸೊಲ್ಲುತಿಳಿವಂಥ ।
ಅಲ್ಲ ಅಲ್ಲ ಎಂಬ ಖುಲ್ಲಜನರಬಳಿಯಲ್ಲಿ
ನಿಲ್ಲದಂಥ ಬಲ್ಲೀದಕುಲನಂದು ॥
ತಾಮಸವನು ತ್ಯಜಿಸಿ । ದಾಸರ ಪ್ರೇಮವನ್ನು ಬಯಸಿ
ಭೂಮಿಯೊಳು ಶ್ರೀರಾಮರಹೀಮನೆಂದು
ನೇಮಿಸಿಕೊಂಡ ನಿಸ್ಸೀಮಕುಲನಂದು

ಹೀಗೆ ರಾಮನಲ್ಲಿ ರಹೀಮನನ್ನು, ರಹೀಮನಲ್ಲಿ ರಾಮನನ್ನು ಕಂಡುಕೊಂಡಿದ್ದಾರೆ. ಅವರನ್ನು ಕೆಣಕಿದ ಮುಸಲ್ಮಾನರಿಗೂ ಸಹಿತ ' ತಿಳಿಯದೆ ಬೊಗಳುವುದಲ್ಲೆಲ್ಲ, ನಿಜತಿಳಿದರೆ ಒಲಿತಬ್ಯಾರಿಲ್ಲ, ಮುಲ್ಲಶಾಸ್ತ್ರದ ಮೂಲವತಿಳಿಯದೆ ಜೊಳ್ಳುಕೂಗಿಗೆ ಮುಕ್ತಿಯಿಲ್ಲಲ್ಲ' ಅದಕ್ಕಾಗಿ ' ಕಾಲನಗೆಲಿವನೆ ನಿಜಮೌಲ' ಎಂದು ಕುಲಭಾಂದವರಿಗೆ ಕಿವಿ ಮಾತು ಹೇಳಿದ್ದಾರೆ.

'ಇದುಸ್ನಾನ ಇದುಸ್ನಾನ ಇದುಸ್ನಾನವಯ್ಯ, ಸದಮಲ ಜ್ಞಾನಿಗಳು ಮನಒಪ್ಪಿಮಾಳ್ಪ, ದುಷ್ಟಸಂಗವಳಿಯುವದೇ ಸ್ನಾನ, ಶಿಷ್ಟಸಂಗವೇ ನಿಜಕೃಷ್ಣಸ್ನಾನ ' ಎನ್ನುತ್ತಾ ನಿಜಸ್ನಾನವನ್ನು ಕುರಿತು ಚಿಂತಿಸಿದರೆ, ಮಡಿ ಮಾಡುವ ನಟನೆಯನ್ನು ಕಂಡು 'ಮಡಿಮಡಿ ಎಂದು ಸುಳ್ಳೆ ಮಡಿಯುಬೇಡಿರೋ, ಒದ್ದೆ ಬಟ್ಟೆ ಉಟ್ಟಿದ್ದಾವಮಡಿ, ನಿಮ್ಮ ಅಬದ್ಧ ಗುಣಗಳಳಿಯವುದು ಶುದ್ಧ ಮಡಿ ' ಎಂಬುದಾಗಿ ಶುದ್ಧ ಮಡಿಯ ಬಗೆಯನ್ನು ಬಣ್ಣಿಸಿದ್ದಾರೆ.

ನವರಂಧ್ರಗಳ ಈ ಹೊಲಸು ದೇಹವನ್ನು ಕುರಿತು ' ಏಸು ರುಪಾಯಕ ಕೊಂಡ್ಯವ್ವ, ಈ ವಸರುವಗಡಿಗಿ' ಎಂದು ಕರೆದರೆ ಶರೀರ ಮತ್ತು ಪಂಚೇಂದ್ರಿ- ಯಗಳ ಸ್ವಭಾವವನ್ನು ಕುರಿತು ಹೇಳುತ್ತಾ 'ನಮ್ಮವ್ವ ಈಕಿ ನಮ್ಮವ್ವ. ಒಮ್ಮನಕೂಲ್ಯಾಕಿ ನಮ್ಮವ್ವ, ಇಮ್ಮನಸಜ್ಜಿಗೆ ಒಮ್ಮಗೆವುಂಡು, ಗುಮ್ಮನೆಕೂತಳು ನಮ್ಮವ್ವ 'ಎಂದು ಗೇಲಿ ಮಾಡಿದ್ದಾರೆ, 'ಬಿದ್ದ ಹುಣ್ಣು ಮಾಯದಲ್ಲವ. ಹ್ಯಾಗೆಸಹಿಸಲು ಸಾಧ್ಯ, ಬ್ಯಾನಿ ನಿದ್ರೆಬರದವ್ವ' ಎಂದು ಸಂಸಾರವನ್ನು ಶರೀರದ ಮೇಲೆ ಆದ ಹುಣ್ಣಿಗೆ ಹೋಲಿಸಿ ಗಾಯಕ್ಕಾಗಿ ಮರುಗಿದ್ದಾರೆ, ಅದಕ್ಕಾಗಿ 'ಏನುಖೋಡ್ಯಾದಲ್ಲ ಸಂಸಾರ, ನಾನು ನೋಡಿದ್ದಿಲ್ಲ' ಎನ್ನುತ್ತಾ ಸಂಸಾರದ ಖೋಡಿತನವನ್ನು ವರ್ಣಿಸಿದ್ದಾರೆ. 'ಕೇಳವ್ವ ತಂಗಿ ಕೇಳವ್ವ, ಕೇಳಿ ನೀ ಬಾಳವ್ವ, ಮರುಗವ್ವ ತಂಗಿಮರುಗವ್ವ ಎಂದು ಸಂಸಾರದ ದುಷ್ಟತನವನ್ನು ಕುರಿತು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. 'ಸೂಳಿನ್ನ ಹೋಗುವವ ಏನಾದ ಎಂತಾದ, ಹಾಳಾದಬಳಿಕ ಪುಣ್ಯ, ಮೂಳನಾಯದ, ಎಂದು ದುರ್ಮಾರ್ಗಿಯ ಜೀವನವನ್ನು ಕುರಿತು ಹೇಳಿದರೆ ' ಸಾಲವನ್ನು ಕೊಂಬಾಗ ಸಡಗರದ ಸಿರಿಯು, ಸಾಲಿಗನು ಬಂದು ಕೇಳುವಾಗ ಅಡರಿತುಉರಿಯು ' ಎಂದು ಸಾಲದ ಬವಣೆಯನ್ನು ವಿವರಿಸಿದ್ದಾರೆ.

ಈ ಎಲ್ಲ ಪ್ರಾಪಂಚಿಕ ಸುಖವನ್ನು ನಾಶ ಮಾಡಬೇಕಾಗಿದೆ. ಅದಕ್ಕಾಗಿ

ಟುಬಾಕಿಬಾರುಮಾಡೋಮನುಜ,
ಟುಬಾಕಿಬಾರುಮಾಡೋ
ಟುಬಾಕಿಬಾರುಮಾಡೋ, ಸೊಬಗಿನಿಂದನೀ

ಭುಜಂಗಶಯನ ಶ್ರೀಹರಿಯಧ್ಯಾನವೆಂಬ ।
ಚಿತ್ತ ಶುದ್ಧಿಯೆಂಬಮದ್ದು ತುಂಬಿ ।
ಭರ್ತಿ ಮಾಡೋಕೊಳವಿ
ಸತ್ಯಗುಣವೆಂಬ ಛಡಿಪಿಡಿ ।
ದೊತ್ತಿಒತ್ತಿಜಡಿಯೋ
ಭಕ್ತಿಬಾಹುದಿಂದ ಎತ್ತಿ ಸಾಮರ್ಥ್ಯದಿಮಿಥ್ಯ
ದೇಹವನುಹತ್ತಿ ಬ್ಯಾಟಿಯಾಡು

ಈ ಬೇಟೆಯು ಬಹಳ ತಡವಾಗಿಯೆ ಆರಂಭವಾದುದಕ್ಕೆ ದಾಸರು ಮಿಡುಕಿದ್ದಾರೆ. 'ಹೊತ್ತಾಗಿ ಹೊರಟಿಹೆನು ವೈಕುಂಠಕೆ, ಮುಟ್ಟಬೇಕು ನಾನು, ಊರುದೂರಾದಿನ್ನು, ಕೇಳದೆ ಆರಮಾತುನಾನು, ಊರಜನರಮಾತು, ಮೀರಿ ಆತುರದಿಂದ, ಪಾರವಾರಿಲ್ಲದ ವಾರಧಿ ಈಸೀನಿ'. ಹೀಗೆ ಹಲವು ವಿಧಗಳಿಂದ ಸಮಾಜಕ್ಕೆ, ಸಾಮಾನ್ಯಜನತೆಗೆ ಸ್ವಾನುಭವದ ವಿಚಾರವನ್ನು ತಮ್ಮ ಕೀರ್ತನೆಗಳ ಮೂಲಕ ರಾಮದಾಸರು ಉಣಬಡಿಸಿದ್ದಾರೆ. ಶ್ರೀ ರಾಮದಾಸರ ಬದುಕು, ಬರೆಹ ಎರಡರಲ್ಲೂ ಶಿಶುನಾಳ ಶರೀಫಸಾಹೇಬರ ಛಾಯೆಯನ್ನು ಕಾಣಬಹುದು, ಇವರೀರ್ವರ ತೌಲನಿಕ ಅಧ್ಯಯನದಿಂದ ಇನ್ನು ಹೆಚ್ಚು ವಿಷಯಗಳನ್ನು ನಾವು ಸಂಗ್ರಹಿಸಬಹುದು. ರಾಮದಾಸರ ಸಾಹಿತ್ಯ ಸೃಷ್ಟಿಯಲ್ಲಿಯ ವಸ್ತು, ತಂತ್ರ, ಶೈಲಿ, ಭಾಷೆ, ಅಲಂಕಾರ, ಛಂದಸ್ಸು, ಪ್ರಾಸ ಮತ್ತು ಜಾನಪದ ಶಬ್ದಗಳ ಬಳಕೆಯ ಸೌಂದರ್ಯ ಹಾಗೂ ಹಿಂದಿ ಮತ್ತು ಉರ್ದು ಪದಗಳನ್ನು ಬಳಸಿದ ಬಗೆ ಇವುಗಳ ಬಗ್ಗೆ ಹೆಚ್ಚಿನ ಅಧ್ಯಯನ ಅಗತ್ಯವಾಗಿದೆ.

ಮುಸಲ್ಮಾನ ಧರ್ಮದವರಾಗಿ ಸ್ವಪ್ರಯತ್ನ, ಸ್ವಸಾಧನೆಗಳ ಮುಖಾಂತರ ದಾಸ ಸಾಹಿತ್ಯಕ್ಕೆ ಅಪಾರ ಕಾಣಿಕೆಯನ್ನು ಕೊಟ್ಟ ರಾಮದಾಸರು ಆ ಭಾಗದ ಜನತೆಯ ಪ್ರೇಮಾದರಗಳಿಗೆ ಪಾತ್ರರಾಗಿದ್ದಾರೆ. ಹಿಂದು ಮತ್ತು ಮುಸಲ್ಮಾನ ಧರ್ಮಗಳ ಐಕ್ಯತೆಯ ಸಂಕೇತವಾಗಿದ್ದಾರೆ.

ಕರ್ನಾಟಕ ಸರಕಾರದ 'ಕನ್ನಡ ಮತ್ತು ಸಂಸ್ಕೃತಿ ' ಇಲಾಖೆಯು 'ಸಮಗ್ರ ದಾಸ ಸಾಹಿತ್ಯ ' ವನ್ನು ಸಂಪುಟ ರೂಪದಲ್ಲಿ ಪ್ರಕಟಿಸಿ, ಕನ್ನಡಿಗರ ಮನೆ,

ಮನೆ, ಮನ ಮನಗಳಿಗೆ ಮುಟ್ಟಿಸುತ್ತಿರುವುದು ಸಂತಸದ ಹಾಗೂ ಅಭಿಮಾನದ ಸಂಗತಿಯಾಗಿದೆ.

ಈ ಸಂಪುಟದ ಸಂಪಾದನೆಗಾಗಿ ಈಗಾಗಲೇ, ಕನ್ನಡ ಅದ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯವು ಡಾ॥ಟಿ.ಎನ್.ನಾಗರತ್ನ ಅವರ ಸಂಪಾದನೆಯಲ್ಲಿ ೧೯೮೭ರಲ್ಲಿ ಪ್ರಕಟಿಸಿದ 'ಶ್ರೀರಾಮದಾಸರ ಕೃತಿಗಳು ' ಗ್ರಂಥವನ್ನು ಮುಖ್ಯವಾಗಿ ಇಟ್ಟುಕೊಳ್ಳಲಾಗಿದೆ. ಇದಲ್ಲದೆ ಲಿಂಗಸಗೂರ ತಾಲೂಕಿನ ಗೋನವಾರ ಗ್ರಾಮದ ದಿ. ಶ್ರೀನಿವಾಸ ರಾವ ಅವರ ಮನೆಯಲ್ಲಿರುವ ಶ್ರೀರಾಮದಾಸರ ಕೀರ್ತನೆಗಳ ಕೈಬರಹದ ಪ್ರತಿಗಳನ್ನು ಬಳಸಿಕೊಳ್ಳಲಾಗಿದೆ.

ಕೃತಜ್ಞತೆಗಳು:

ಈ ಸಂಪುಟವನ್ನು ಸಂಪಾದಿಸಲು ನಮಗೆ ಅವಕಾಶ ನೀಡಿದ 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ ' ಮತ್ತು 'ಸಮಗ್ರ ದಾಸ ಸಾಹಿತ್ಯ ಪ್ರಕಟನಾ ಯೋಜನೆಯ ಪ್ರಧಾನ ಸಂಪಾದಕರು ಹಾಗೂ ಸಕಲ ಸದಸ್ಯರಿಗೆ ಕೃತಜ್ಞತೆಗಳು. ಸಂಪುಟದ ಸಂಪಾದನೆ ಕಾರ್ಯದಲ್ಲಿ ಕಾಲಕಾಲಕ್ಕೆ ಸೂಕ್ತ ಸಲಹೆ, ಸೂಚನೆ ನೀಡುತ್ತಾ , ಕೆಲಸ ನಿಂತಾಗ ಹುರಿದುಂಬಿಸುತ್ತಾ ಮಾರ್ಗದರ್ಶನ ನೀಡಿದ ಹಿರಿಯರಾದ ಡಾ॥ಟಿ.ಎನ್.ನಾಗರತ್ನ, ಡಾ. ಶ್ರೀನಿವಾಸ ಹಾವನೂರ ಮತ್ತು ಪ್ರೊ.ವಸಂತ ಕುಷ್ಟಗಿಯವರಿಗೆ ಧನ್ಯವಾದಗಳು. ಈ ಸಂಪುಟದ ಸಂಪಾದನೆಗಾಗಿ ತಮ್ಮಲ್ಲಿರುವ ದಾಸರ ಹಸ್ತಪ್ರತಿಯನ್ನು ಒದಗಿಸಿದ ಗೋನವಾರದ ಶ್ರೀಗುರುರಾಜರಾವ್ ಕುಲಕರ್ಣಿ ಅವರಿಗೆ, ಸಂಪುಟ ಸಿದ್ಧಪಡಿಸುವಲ್ಲಿ ಸಹಕರಿಸಿದ ಶ್ರೀ ವಿನಾಯಕ ಜೋಶಿ ಅವರಿಗೆ ಕೃತಜ್ಞತೆಗಳು.

ಡಾ. ಸ್ವಾಮಿರಾವ ಕುಲಕರ್ಣಿ
ಶ್ರೀಮತಿ ಶೀಲಾದಾಸ್

ಶ್ರೀರಾಮದಾಸರ ಕೀರ್ತನೆಗಳು

I. ಗಣೇಶ ಸ್ತುತಿ

೧

ಗಜಮುಖ ಸಲಹೆನ್ನ ದಯದಿ ಪ

ಗಜಮುಖ ಸಲಹೆನ್ನ
ತ್ರಿಜಗದಿ ಪೂಜ್ಯನೆ ನಿಜಮತಿ ಪಾಲಿಸಿ ಅ.ಪ

ವಿಘ್ನನಾಯಕ ಎನ್ನ ಅಜ್ಞಾನ ಖಂಡ್ರಿಸಿ
ವಿಘ್ನವ ತಾರದೆ ಸುಜ್ಞಾನ ಕರುಣಿಸು ೧

ಅಮರಾದಿ ವಿನುತ ಹಿಮಸುತೆಸಂಜಾತ
ವಿಮಲಸುಚರಿತನೆ ಸುಮನಸಪ್ರೀತ ೨

ವರದ ಶ್ರೀರಾಮನ ಚರಣಸ್ಮರಣೆಯೆನ್ನ
ಹೃದಯದಿ ಸ್ಥಿರಗೈ ಕರಿಮುಖ ಸ್ಮರಿಸುವೆ ೩

೨

ಪಾಲಿಸು ಗಜವದನ ಸುಮತಿಯ
ಲೋಲ ನಿಖಿಲ ವಿದ್ಯೆ ಮೂಷಕವಾಹನ ಪ

ವರವಿದ್ಯಪ್ರದಾತ ಸುರಗಣಸೇವಿತ
ಪರಮಪಾವನೆ ಪರಮೇಶ್ವರಿವರಸುತ ೧

ವಿಮಲಗುಣಗಣ ಅಮಿತ ಜ್ಞಾನಪೂರ್ಣ
ಕ್ರಮದಿ ಲೋಕದಾದಿ ಪೂಜ್ಯಕೆ ಕಾರಣ ೨

ಮಲಿನ ಮಮ ಮನ ಕಳೆದು ನೀಡೆಲೋ ಜ್ಞಾನ
ವಲರೆ ಶ್ರೀರಾಮನಡಿ ಪ್ರೇಮಸಂಪಾದನ ೩

೩

ಪಾಲಿಸು ನಿಜಮತಿ ಗಜವದನ ಶೀಲ ಪ

ಸುಜನ ಸುರಮುನಿಗಣ ಸನ್ನುತ
ಭಜಿಸುವೆ ತವಚರಣ ಮೂಷಕವಾಹನ ಅ.ಪ

ಹಿಮಸುತೆತನಯ ಕರುಣಾಂತರಂಗ
ಸುಮನಸರೊಂದಿತ ವರಶುಭಾಂಗ
ಕೋಮಲಹೃದಯ ಸುವಿದ್ಯಪ್ರದಾಯಕ
ವಿಮಲಜ್ಞಾನ ಮಾಡೆಲೊ ಕರುಣ ೧

ಪರಮಚರಿತ ದಯ ಭೂತಗಣೇಶ
ಶರಣು ಸತ್ಯರ ಅವಿದ್ಯ ನಾಶ
ಕರುಣಗುಣಾರ್ಣವ ಪರತರ ಪಾವನ
ಸ್ಮರಿಸಿ ಬೇಡುವರ ಶೋಕವಿದೂರ ೨

ಸರಸಸಂಗೀತ ನಿಗಮಾದಿ ವೇದ
ಶರಣರೊಲಿವ ಮಹ ನಿರುತ ಸುವಾದ
ಕರುಣಿಸು ವರದ ಶ್ರೀರಾಮನ ಚರಣ
ನೆರೆನಂಬಿ ಪೊಗಳುವ ಸ್ಥಿರ ಚಿತ್ತ ಜ್ಞಾನವ ೩

೪

ಭಜಿಸುವೆ ಗಜಮುಖ ಸುಜನರಪಾಲ
ನಿಜಮತಿ ಕರುಣಿಸು ನೀ ಪ

ತ್ರಿಜಗದಿ ವಂದಿತ ನಿಜಪದದಾತ
ನಿಜಮತಿದಾಯಕ ದ್ವಿಜಸುರ ಸೇವಿತ ಅ.ಪ

ವಿಘ್ನಮೂರುತಿ ಎನ್ನಿವಿಘ್ನಗಳನು ಕಡಿ
ದಜ್ಞಾನ ದೂರಮಾಡೋ
ಸುಜ್ಞಾನ ಪಾಲಿಸಿ ಶೀಘ್ರದಿ ಎನ್ನನು
ಪ್ರಾಜ್ಞರೊಳಾಡಿಸು ಪ್ರೌಢಗಣಪತೆ ೧

ಇಂದು ಎನ್ನ ಮಂದಮತಿತನ ಛಿಂದಿಸೋ
ಸುಂದರಮೂರುತಿಯೆ
ವಂದಿಸಿ ಬೇಡುವೆ ಕುಂದದ ವರಕೊಡು
ಚಂದ್ರ ಚೂಡಸುತ ಭಾನು ಕೋಟಿತೇಜ ೨

ವಿಮಲಗುಣಗಣ ಹಿಮಗಿರಿಜೆಯ ಕಂದ
ಸುಮನಸರೊಂದಿತನೆ
ಅಮಿತಮಹಿಮ ಶ್ರೀರಾಮ ಕರುಣಾಪಾತ್ರ
ವಿಮಲಮತಿಯ ದಯಪಾಲಿಸಭವ ೩

೫

ಸಿದ್ಧಿ ಗಣವರ ಬುದ್ಧಿ ನೀಡೆನ್ನನುದ್ಧಾರಮಾಡು ಬೇಗನೆ
ಬದ್ಧಗುಣಗಳ ತಿದ್ದಿ ಎನಗೆ ಶುದ್ಧಮತಿ ನೀಡು ಬೇಗನೆ ಪ

ವಿಮಲಮನ ಸನಮಿತ ತವಪಾದಕಮಲ ಭಜಿಸುವೆನಭನೆ
ವಿಮಲವಿದ್ಯವ ಕ್ರಮದಿಂ ಪಾಲಿಸು ಹಿಮಜೆಸುತ ಕರಿವರದನೆ ೧

ಸೋಮಶೇಖರ ಪ್ರೇಮದ ಸುಕುಮಾರ ಸುಮನಸಚಂದ್ರನೆ
ಕಾಮಿತಜನ ಶಾಮಪೂರಿತ ಕೋಮಲಗುಣಸಾಂದ್ರನೆ ೨

ಕೋಮಲಾಂಗನೆ ಕರ್ಣಕುಂಡಲ ಹೇಮಕಂಕಣಧಾರನೆ
ತಾಮಸದಿ ಗಹಗಹಿಸಿದಾ ಮಹ ಸೋಮನಿಗೆ ಶಾಪವಿತ್ತನೆ ೩

ಪಾರ ಬುದ್ಧಿಲಿ ಸಾರವಿದ್ಯದಧಿಕಾರ ಕುಶಲದಿ ಪಡೆದನೆ
ಗೌರಿಶಂಕರರ್ವಾದ ನಿವಾರಿಸಿದ ಮಹಚದುರನೆ ೪

ತ್ರಿಕ್ಷೆಯರೊಡಗೂಡಿ ಭುವನ ರಥಮಾಡಿ
ಮಣಿಯದ್ಹೋಗ್ವುದು ಕಂಡನೆ
ಘನ ಕೋಪಾಗ್ರಾದಿ ರಥವನಿಲ್ಲಿಸಿ ತ್ರಿಣಯರಿಂ ಪೂಜೆಗೊಂಡನೆ ೫

ವಿಘ್ನನಾಯಕ ಪ್ರಾಜ್ಞಮೂರುತಿ ಸೂಜ್ಞ ಜನರಾರಾಧನೆ
ಸಂಜ್ಞೆದ್ಹೊಗಳುರ್ವಿಘ್ನ ಛೇದಿಸಿ ಪ್ರಾಜ್ಞಪದವೀವ ಪ್ರೌಢನೆ ೬

ವರುಷಕೊಂದು ಮಾಸ ಧರೆಯೊಳಿಳಿಯುತ
ಪರಮಪೂಜೆಯ ಕೈಕೊಂಬನೆ
ನರರ ದುರ್ಮತಿ ತರಿದು ಸುಗತಿಯ ನಿರುತ
ಪಥದೋರ್ವ ಧುರೀಣನೆ ೭

ತಂದೆ ನಿನ್ನನು ಹೊಂದಿ ಭಜಿಪರ ಮಂದಮತಿನಿವಾರನೆ
ಬಂದ ದುರ್ಭವದಂದುಗಂಗಳ ಚಂದದಿಂ ಪರಿಹಾರನೆ ೮

ಶರಣು ಶರಣು ಶರಣು ಗಣವರ ಶರಣುಕರುಣಾಭರಣನೆ
ಸಿರಿಯರಾಮನ ಚರಿತಪೊಗಳುವ ಪರಮಮತಿ
ದೇ ಗಣಾರ್ಯನೆ ೯

II. ಶ್ರೀಹರಿಸಂಕೀರ್ತನೆ

೬

ಅಚ್ಯುತ ಅಮರಾರ್ಚಿತ ಮುನಿವಂದಿತ
ಅಚ್ಯುತ ಅಮರಾರ್ಚಿತ ಪ

ದಾಸರವಿಜಯ ಭೂಸುರಗಣಪ್ರಿಯ
ಶೇಷಾದ್ರಿಗಿರಿನಿಲಯ ೧

ಪರಮಪುರುಷ ಪರಮ ಪ್ರಕಾಶ
ಕರುಣಾಬ್ಧಿಶಶಿ ರಮೇಶ ೨

ದುರಿತವಿದೂರ ಶರಣು ಸುಖಂಕರ
ಪುರಂದರ ಪರಾತ್ಪರ ೩

ಸುಜನ ಸಂಜಾತ ಕುಜನಕುಠಾರ
ಭಜಿಪರ ಭಯವಿದೂರ ೬

ಭಕ್ತ ನಿಸ್ಸೀಮ ಮುಕ್ತಿಗೆ ಸೋಮ
ಭಕ್ತಾಂತರಾತ್ಮ ಶ್ರೀರಾಮ ೫

೭

ಆನಂದಂ ಮಹದಾನಂದಂ
ಹರಿಯ ಭಜನ ಬ್ರಹ್ಮಾನಂದಂ ಪ

ಸತ್ಯ ನುಡಿಯುವುದೆ ಆನಂದಂ ತನ್ನ
ಗುರ್ತ ತಿಳಿಯುವುದೆ ಆನಂದಂ
ನಿತ್ಯ ನಿರ್ಮಲನ ಸತ್ಯ ಗುಣಂಗಳನು
ಭಕ್ತಿಯಿಂ ಭಜಿಸೆ ನಿತ್ಯಾನಂದಂ
ಸತ್ಯ ಸತ್ಯ ಸರ್ವೋತ್ತಮ ಹರಿಯೆಂದು
ಅರ್ತಿಯಿಂ ಭಜಿಸೆ ಅತ್ಯಾನಂದಂ ೧

ಆಶ ನೀಗುವುದೆ ಆನಂದಂ ಭವ
ಪಾಶ ಗೆಲಿಯುವುದೆ ಆನಂದಂ
ಶ್ರೀಶ ಕೇಶವನ ಸಾಸಿರ ನಾಮದ
ಧ್ಯಾಸದಿರುವುದೆ ಲೇಸಾನಂದಂ
ದೋಷದೂರ ಭವಪಾಶಹರನ ಅನು
ಮೇಷ ಪಠಿಸೆ ಸ್ಥಿರದಾನಂದಂ ೨

ಹಮ್ಮನಳಿವುದೇ ಆನಂದಂ ತಾ
ಸುಮ್ಮನಿರುವುದೆ ಆನಂದಂ
ಕರ್ಮರಹಿತನಾಗಿ ಬ್ರಹ್ಮಪಿತನ ಪಾದ
ಒಮ್ಮನದೊಳಗಸಮಾನಂದಂ
ಧರ್ಮವಿಡಿದು ಪರಬ್ರಹ್ಮ ಶ್ರೀರಾಮನ
ಮರ್ಮ ತಿಳಿಯೆ ನಿರ್ಮಲಾನಂದಂ ೩

೮

ಆರಿಗೂ ಕೊಟ್ಟು ನಾನುಟ್ಟಿಲ್ಲ ಸ್ವಾಮಿ
ಹಾರೈಸಲೆಂತೀಯ್ವಿ ಭಕ್ತಜನ ಪ್ರೇಮಿ ಪ

ವಸನಕಾಣದೆ ಪೋಗಿ ದೆಸೆ ಬತ್ತಲೆ ಬಂದು
ಬಸವಳಿದು ಬಾಯಾರಿ ದೆಸೆಗೆಟ್ಟು ಬೇಡುವರ
ಕುಶಲಂಗಳರಿಯದೆ ಹಾಸ್ಯಗೈಯುತ ನಕ್ಕೆ
ವಸನ ನಾಂ ಬಯಸಲೆಂತೊಸೆದು ನೀಂ ಕೊಡುವಿ ೧

ಧನವಂತನಾಗಿ ನಾ ಧನವಿಲ್ಲದವರಿಗೆ
ಶುನಕನಂದದಿ ಕೂಗುತಣಕವಾಡಿದೆನು
ಕನಸು ಮನಸಿನಲಿ ವಿನುತಧರ್ಮವನರಿಯೆ
ರಿಣಕಳೆದು ಹರಿಯೆನೆ ನಿನಗೆ ಕರುಣೆಂತು ೨

ಮೂರುದಿನವಾಯಿತು ಘೋರಬಡುವೆನು ತುಸು ಆ
ಹಾರ ಹಾಣದೆ ಕೃಪೆ ದಾರಿಗೆ ಬರದೆನುತ
ಭೋರಿಟ್ಟು ಕೂಗ್ವುದ ಸಾರಿ ಕೇಳುತ ನಾನು
ದೂರ್ಹೋದೆ ಎನ್ನ ತಪ್ಪು ಕ್ಷಮಿಸು ಶ್ರೀರಾಮ ೩

೯

ಆರಿತ್ತರಭವನೇ ಈ ಮನವನೆನಗೆ
ವಾರಿಜೋದ್ಭವಪಿತನೆ ನೀನಲ್ಲದೆ ಬೇರೆ ಪ

ಪರಮಪಾವನ ನಿನ್ನ ಪರಮ ಪರತರ ಚರಿತೆ
ಸ್ಥಿರವೆಂದು ನೆರೆನಂಬಿ ಅರಿವ ಬುದ್ಧಿಯನು
ಮೆರೆವ ನಿಮ್ಮಯ ಬಿರುದ ಹರುಷದಿಂ ಸ್ಮರಿಸ್ಮರಿಸಿ
ಹಿರಿ ಹಿರಿ ಹಿಗ್ಗುತ ಬರೆವ ಈ ಕರವ ೧

ನಿನ್ನ ದಾಸರ ಪಾದ ಭಿನ್ನವಿಲ್ಲದೆ ನೋಡಿ
ಉನ್ನತ ಸುಖಪಡೆವ ಧನ್ಯದ್ವಯನಯನ

ಮುನ್ನ ನಾ ಮಾಡಿದ ಪುಣ್ಯಫಲವೆಂದರಿದು
ನಿನ್ನ ಚರಣಕೆ ನಮಿಪ ಮಹಪುಣ್ಯಶಿರವ ೨

ಗಾಢಮಹಿಮನೆ ನಿಮ್ಮ ಈಡಿಲ್ಲದ ಲೀಲೆ
ರೂಢಿಯೊಳಧಿಕೆಂದು ಆಡ್ಯಾಡಿ ಕುಣಿದು
ಕಾಡಿ ಬೇಡುವ ಮಹಗಾಢ ನಿಮ್ಮಡಿಭಕ್ತಿ
ನೀಡಿದವರೆನಗಾರು ನೋಡು ಶ್ರೀರಾಮ ೩

೧೦

ಆರುಮುನಿದರು ಮುನಿಯಲಿ ಎನ್ನ
ಪಾರು ಮಾಡುವ ಹರಿ ನಿನ್ನ ದಯವಿರಲಿ ಪ

ವಾರಿಜಾಕ್ಷನೆ ನಿನ್ನ ಕರುಣವೆಂಬಾಲಯ
ಸೇರಿ ಕೊಂಡವರಿಗೆ ಆರಂಜಿಕಿನ್ನೇನು ಅ.ಪ

ಬಿರುಗಾಳಿ ಭರದಿಂದ ಬೀಸೆ ಮಹ
ಗಿರಿಯು ನಡುಗಿ ಅದರಿಂದಾಗ್ವುದೆ ಘಾಸಿ
ನರಿಗಂಜಿ ಹುಲಿ ಸ್ಥಳ ತ್ಯಜಿಸಿ
ಮರೆಯಾಗೋಡುವದೇ
ನರಹರಿ ತವಪಾದ ಸ್ಮರಿಪ ದಾಸರು
ನರಗುರಿಗಳಿಗ್ಹೆದರುವರೇನು ೧

ದಿನಕರನಿಗೆ ಕುಂಡ್ಹೊರಿಸಿ ಇಂಥ
ಬಿನುಗರು ಜರೆದರೆ ಆಗುವನೆ ಮಸಿ
ವನಜಾಕ್ಷನೊಳು ಮನ ನಿಲಿಸಿ
ದಿನ ದಿನ ಘನವಾಗಿ ನೆನೆವ ಭಕ್ತರ
ಮನ ಮಣಿಯುವುದೇನಯ್ಯ
ಬಿನುಗರ ಕೃತಿಗಿನ್ನು ೨

ಬರುವುದೆಲ್ಲವು ಬಂದು ಬಿಡಲಿ ಎನ್ನ
ಸರುವರು ಪರಿಪರಿ ಜರಿದುನೋಡಲಿ

ಸಿರಿವರ ನಿನ್ನ ದಯವಿರಲಿ
ಮರಿಯಾದ್ದಾಳಾಗಲಿ ಸ್ಥಿರಸುಖ ಪ್ರಾಪ್ತಿಸಲಿ
ವರದ ಶ್ರೀರಾಮ ನಿನ್ನ
ಸ್ಮರಣೆಯೊಂದೆನಗಿರಲಿ ೩

೧೧

ಆವದೇವರಿಗುಂಟೀ ವೈಭವ ಪ

ಸಾರ್ವಭೌಮ ನೀನೆ ಸಕಲ
ದೇವರೊಳಗೆ ಭಾವಜನಯ್ಯ ಅ.ಪ

ಸಿರಿಯರೆಂಟುಮಂದಿ ನಿನಗೆ
ಅರಸಿಯರು ಕರುಣಶರಧಿ
ಸುರರು ಮೂವತ್ತು ಮೂರು ಕೋಟಿ
ಚರಣಸೇವಕರಯ್ಯ ಹರಿಯೆ ೧

ಅನುದಿನವು ಎಡೆಬಿಡದೆ ಮನು
ಮುನಿಗಳ ಸುಜನ ಸಂತತಿ
ಘನವೇದಘೋಷದಿಂದ
ನೆನೆದು ಪೂಜಿಪರಪರಿಮಿತ ಲೀಲೆ ೨

ಕೋಟಿಸೂರ್ಯಪ್ರಕಾಶ ನಿನ್ನ
ಆಟ ಬಲ್ಲವರಾರು ಜಗದಿ
ಆಟವಾಡುವಿ ಅಗಮ್ಯಚರಿತ
ಸಾಟಿಯಿಲ್ಲದೆ ಧನವ ಕಲಸಿ ೩

ಕರೆಸಿ ಅಸಮಭಕುತ ಜನರ
ವರವ ನೀಡಿ ಮುಡಿಪುಗೊಂಡು
ಮೆರೆವಿ ಪರಮ ಉತ್ಸವದೊಡನೆ
ಗಿರಿಯ ಭೂವೈಕುಂಠಮೆನಿಸಿ ೪

ಕಿಂಕರ ಜನರ ಪೊರೆಯಲೋಸುಗ
ವೆಂಕಟಾದ್ರಿಯಲ್ಲಿ ನಿಂದಿ
ವೆಂಕಟೇಶ ಕಿಂಕರಜನರ
ಸಂಕಟಹರ ಶ್ರೀರಾಮಪ್ರಭೋ ೫

೧೨

ಇಂದಿರೆ ಮನೋಹರ ಭಕ್ತಲಲಾಮ
ಸಿಂಧುಸದನ ತ್ರಿಜಗದೋದ್ದಾಮ ಪ

ಮಂದರಮಂದಿರ ಮೇಘ ಶ್ಯಾಮ
ವಂದಿಪೆ ಸುಂದರಪಾದ ಕುಸುಮ ಅ.ಪ

ನಿಗಮಗೋಚರ ಅಮಿತ ಲೀಲ
ಸಗುಣನಿರ್ಗುಣ ಮಹಿಮಜಾಲ
ರಘುವರ ನಗಧರ ಸುಜನ ಪಾಲ
ಅಘಹರ ಜಗಮೋಹ ಕುಜನ ಕಾಲ ೧

ಪರತರಪಾವನ ಕರುಣಾಂತರಂಗ
ಮುರಹರ ಮಾಧವ ಪರಿಭವ ಭಂಗ
ದುರುಳಗರುವ ಹರಿ ಸಿರಿ ನರಸಿಂಗ
ಮರಣರಹಿತ ಪ್ರಭುವರ ನೀಲಾಂಗ ೨

ಗೋಕುಲಪತಿ ಗೋಪಾಲಶೀಲ
ವ್ಯಾಕುಲಪರಿಹರ ವೇಣುಲೋಲ
ಕಾಕುದನುಜ ಸಂಹಾರ ವಿಶಾಲ
ಲೋಕಪಾವನೆ ವರ ದೇವಕಿ ಬಾಲ ೩

ಸನಕ ಸನಂದನ ಯೋಗಿ ವಂದಿತ
ವನಜ ಸಂಭವಾದಿ ಸುರಮುನಿವಿನುತ
ಚಿನುಮಯ ಚಿದ್ರೂಪ ಚಿತ್ಕಳಾಭರಿತ
ಜನಕತನುಜೆಪತಿ ವಿಮಲಚರಿತ ೪

ಗೋಕುಲನಾಯಕ ಶ್ರೀಕೃಷ್ಣನಮೋ
ವೈಕುಂಠನಾಯಕ ಶ್ರೀ ವಿಷ್ಣು ನಮೋ
ಲೋಕನಾಯಕ ಶ್ರೀನಿವಾಸ ನಮೋ
ಭಕುತಿದಾಯಕ ಶ್ರೀರಾಮ ನಮೋ ೫

೧೩

ಈತನೆ ಗತಿಯೆಂದು ನಂಬಿದೆನೆ ನಾ
ನೀತನಂಥ ನಿಷ್ಕರುಣನ ಕಾಣೆ ಪಾತಕಹರ ಅ
ನಾಥರಕ್ಷಕ ಮಹದಾತ ಪರಮಭಕ್ತ
ಪ್ರೀತನೆಂಬುದ ಕೇಳಿ ಪ

ಮರುಳಾಗಿವನ ಬೆನ್ಹತ್ತಿದೆನೆ ಮನೆ
ಮಾರುಗಳೆಲ್ಲವ ತೊರೆದೆನೆ
ಕರುಣವಿಲ್ಲ ತುಸು ಹೊರಳಿ ನೋಡುವಲ್ಲ
ತಿರುತಿರುಗಿ ಮನಕರಗಿ ಸಾಕಾಯಿತು ೧

ಜಾತಿಹೀನನೆಂಬುವೆನೇನೆ ಲೋಕ
ನಾಥನಿಗೆ ಕುಲ ಅದೇನೆ
ಈತನ ಹೊರ್ತು ಮತ್ತಾರಾಸೆನಗಿಲ್ಲ
ನೀತಿಯೆ ಈತಗೆ ಜಾತಿಭೇದವೆಂಬ ೨

ಹೊಲೆಯರ ಮನೆಯಲ್ಲುಂಡನೆ ಇವ
ಗೊಲ್ಲರ ಕುಲದಲ್ಹುಟ್ಟಿದನೆ
ಗೊಲ್ಲರ ನಲ್ಲೆಯರಲ್ಲಿ ಹೋಗಿ ಈತ
ಗುಲ್ಲುಮಾಡಿ ಬೆಣ್ಣೆಗಳ್ಳನೆನಿಸಿಕೊಂಡ ೩

ಪಾತರದವಳಲ್ಲಿಗ್ಹೋದನೆ ತಾ
ನೀತಿವಂತನ ಕಟ್ಟೊಡ್ಡೆಸಿದನೆ
ನೀತಿವಂತರು ಕೇಳಿರೀತನ ರೀತಿಯ
ಯಾತರ ಕರುಣಿ ಇವ ದಾತ ಜಗನ್ನಾಥ ೪

ನಿಲ್ಲದು ಮನ ಘಳಿಗಿವನಲಿ ನಾ
ಸಲ್ಲದ್ದಾಂಗ್ಹೋದೆ ಮತ್ತೆಲ್ಲ್ಹೋಗಲಿ
ಬಲ್ಲಿದ ಶ್ರೀರಾಮನೆಲ್ಲ್ಹೋದರು ಬಿಡೆ
ಕಲ್ಲೆದೆಯವಗಾಗಿ ಪ್ರಾಣಹೋಗಲಿನ್ನು ೫

೧೪

ಈತನೆಂಥಮಹಿಮೆ ನೊಡಿರೆ ರಂಗಯ್ಯ ರಂಗ
ಈತನೆಂಥ ಮಹಿಮ ನೋಡಿರೆ ಪ

ಈತನೆಂಥ ಮಹಿಮ ಓರ್ವ ಮಾತೆಯುದರದಿ ಜನಿಸಿ
ಮತ್ತೊಬ್ಬ ಮಾತೆಕೈಯಿಂದ ಬೆಳೆದು ಗೋಕುಲ
ನಾಥ ನವನೀತಚೋರನೆನಿಸಿದ ಅ.ಪ

ಕಾಳಕೂಟ ವಿಷವ ಕುಡಿಸಿದ ಆ ಮಾಯದೈತ್ಯಳ
ಕಾಲನ ಆಲಯಕೆ ಕಳುಹಿದ ಮಡುವನ್ನು ಧುಮುಕಿ
ಕಾಳಿ ಹೆಡೆಮೆಟ್ಟಿ ನಾಟ್ಯವಾಡಿದ ಗೋವುಗಳ ಕಾಯ್ದು
ಬಾಲನೆಂದೆತ್ತೊಯ್ಯಲು ಬಂದ ಖೂಳ ಶಕಟನ ಸೀಳಿ ಒಗೆದು
ಕಾಳಗದಿ ಧೇನುಕನ ತುಳಿದು ಬಾಲಲೀಲೆಯ ತೋರಿ ಮೆರೆದ ೧

ಪರಿಪರಿಯ ಮಾಯದಿಂ ಕಾಡ್ವ ಭೂಭಾರಿಯಾಗಿ
ಧರಣಿಜನರತಿಶಯದಿ ಬಳಲಿಸುವ ಪರಮಕಂಟಕ
ದುರುಳ ಕಂಸನೆಂಬುವನ ಶಿರವ ತರಿದ ಮಾಧವ
ಧರಣಿತಾಪವನ್ನೆ ಕಳೆದು ಸೆರೆಯ ಬಿಡಿಸಿದ ಜನನಿ ಜನಕರ
ಕಿರಿಯ ಬೆರಳಲಿ ಗಿರಿಯಧರಿಸಿ ಪರಮ ಪರತರ
ಮಹಿಮೆ ತೋರ್ದ ೨

ಗೊಲ್ಲ ಬಾಲರ ಸಮೂಹವನು ನೆರೆಸಿ ಮನೆಯಲ್ಲಿ ಯಾರು
ಇಲ್ಲದ ಸಮಯವನೆ ಸಾಧಿಸಿ ಮೆಲ್ಲಮೆಲ್ಲನೆ
ಎಲ್ಲ ಬಾಲರ ಒಳಗೆ ತಾ ಹೊಗಿಸಿ ಪಾಲ್ಮೊಸರು ಸವಿಸಿ

ಕಳ್ಳ ಕೃಷ್ಣಮ್ಮ ನಿಲ್ಲಗೊಡನೆಂದು ಗೊಲ್ಲಸ್ತ್ರೀಯರು ಗುಲ್ಲುಮಾಡಲು
ನಿಲ್ಲದೋಡಿ ತಾ ಪುಲ್ಲನಾಭನು ಎಲ್ಲಿ ನೋಡಿದರಲ್ಲೆ ತೋರುವ ೩

ಶಿಶುವು ಈತನೆಂದು ಮುದ್ದಿಸುವಾಗ ಕುಶಲದಿಂದಪ್ಪಿ
ಶಶಿಮುಖಿಯರ ಅಧರ ಸವಿಯುವ ಎಂಥ ಶಿಶುವನೆ
ಪಸುಮಗಾಗೆಳೆದೊಯ್ದು ರಮಿಸುವ ಮಿಸುಗಗೊಡನಿವ
ಮೊಸರು ಮಾರಲು ಕುಶಲದಿಂ ಪೋಪ ಪಸನ್ಮುಖಿಯರ
ಕಸಿದು ಭಾಂಡ
ದೆಸೆದೆಸೆಗೆ ಎಳೆದು ವಸುಧೆಯೊಳು ತನ್ನ
ಅಸಮ ಮಹಿಮೆಯ ಪಸರಿಸಿದ ಹರಿ ೪

ಮಣ್ಣು ತಿಂದು ತಾಯ ಬಳಿಗೈದಕಂದ ಏನಿದು
ಮಣ್ಣು ತಿನ್ನರೆ ಉಗುಳೆಂದೆಶೋದೆ ಕಣ್ಣು ತಿರುವಲು
ತನ್ನ ಬಾಯೊಳ್ಬಹಾಂಡ ತೋರಿದ ಭಿನ್ನವಿಲ್ಲದ
ತನ್ನ ತಾನು ಅರಿಯದೆಶೋದಿನ್ನು ಈರೂಪವಡಗಿಸೆನ್ನಲು
ಸಣ್ಣಮಗುವಾಗಿ ಚಿಣುಫಣುವಿಡಿದುನ್ನ –
ತೋನ್ನತ ಆಟವಾಡಿದ ೫

ಪರಿಪರಿಯಲಿ ಕಾಡ್ವ ಕೃಷ್ಣನ್ನ ವರದೇವಿ ತಡೆಯದೆ
ಸರವೆನಡುವಿಗ್ಗಚ್ಚಿ ತರಳನ್ನ ಸರಸರನೆ ಬಿಗಿದು
ಒರಳಿಗ್ಹಾಕಿ ಕಟ್ಟಿ ಮುರಹರನ ಮರೆಯಾಗಲಾಕ್ಷಣ
ಊರುತಂಬೆಗಾಲು ಊರಬೀದಿಲಿ ಒರಳನೆಳೆಯುತ
ಹೊರಗೆ ಹೋಗಿ ತರಗುಳಿರಕಿಲದೊರಳ ಸೇರಿಸಿ
ಮುರಿದು ಶಾಪದಿಂ ಮುಕ್ತಮಾಡಿದ ೬

ಪುಂಡತನದಿಂ ಸೊಕ್ಕಿಮರೆಯುವ ಆ ರುಗ್ಮನಿಡಿಕೈಯ
ಬಂಡಿಗಾಲಿಗೆ ಕಟ್ಟಿ ಶ್ರೀಧರ ರುಗ್ಮಿಣಿಯನ್ನು
ಕೊಂಡು ಗೋಕುಲ ಸೇರಿ ವೈಭವ ನಡೆಸಿ ಯಾದವ
ರ್ಹಿಂಡಲಿಗೂಡಿಸಿ ಪುಂಡದೇವಿಯುದ್ದಂಡತನದಿ ಕೈ

ಕೊಂಡ ಕಲ್ಯಾಣ ಗಂಡುಗಲಿಗಳ ಗಂಡನೆನಿಸಿದ
ಹಿಂಡುದೇವರ ಸಾರ್ವಭೌಮ ೭

ಚರಣದಾಸರ ಒಡೆಯ ತಾನಾದ ವರ್ಣಿಸಲಳವಲ್ಲ
ಚರಣದಾಸರ ದಾಸನೆನಿಸಿದ ಪುಸಿಯಲ್ಲ ಕೇಳಿರಿ
ನರನ ಕುದುರೆಯ ವಾಘೆಯನು ಪಿಡುದು ರಥವ ನಡೆಸಿದ
ಕರೆಯಲೋಡಿದ ಸರಸಿಯಲ್ಲಿಗೆ ಭರದಿ ಒದಗಿದ
ಕುರುಪಸಭೆಯಲ್ಲಿ ಪರಮ ನಿಗಮಗಳ್ಗಿರುವನಗೋಚರ
ಸ್ಮರಿಸಿದವರಿಗೆ ಭರದಿ ನೆರವಾದ ೮

ತಾಳಿಬಂದ ನಾರಾಯಣಾವತಾರ ಪಾಲಿಸಲು ಜಗವಂ
ಬಾಲಗೋಪಾಲ ಭಕ್ತರಾಧಾರ ಗೊಲ್ಲನೆನಿಸಿ
ಲೀಲೆನಡೆಸಿದ ಶಾಮಸುಂದರ ಭವಜಾಲಪರಿಹರ
ಕಾಳರಕ್ಕಸರೊಳು ಕಾದಿ ನಿರ್ಮೂಲಮಾಡಿ ಜಗಪಾಲಿಸಿದ ತ್ರಿ
ಶೂಲಧರ ಪ್ರಿಯ ನೀಲವರ್ಣ ವನಮಾಲ
ಜಾನಕಿಲೋಲ ಶ್ರೀರಾಮ ೯

೧೫

ಉದಯ ಕಾಲವಿದು ನಮ್ಮ ಪದುಮನಾಭನ
ಉದಯಕಾಲವಿದು ಪ

ಉದಯಕಾಲವಿದು ಪದುಮನಾಭನ ದಿವ್ಯ
ವಿಧವಿಧ ಸೃಷ್ಟಿಯ ಮುದದಿ ಸಾಗಿಸುವಂಥ ಅ.ಪ

ಪರಮ ಕರುಣಿ ದೇವ ತನ್ನ ಚರಣದಾಸರ ಕಾವ
ಮರವೆ ಮಾಯದೊಳು ಹೊರಳುತ ಒರಲುವ
ನರರಿಗರಿವನಿತ್ತು ವರವ ಪಾಲಿಸುವ ೧

ಅನ್ನ ಆಹಾರವಿತ್ತು ಸೃಷ್ಟಿಯ ಭಿನ್ನವಿಲ್ಲದೆ ಪೊತ್ತು
ಬನ್ನಬಡುತ ಬಲು ಕುನ್ನಿಪ್ರಾಣಿಗಳ್ಗೆ
ಉನ್ನತ ಸುಖವಿತ್ತು ತನ್ನಂತೆ ನೋಡುವ ೨

ಕುಜನರ ಶಿಕ್ಷಿಸುವ ಮಾಧವ ಸುಜನರ ಪಾಲಿಸುವ
ನಿಜಮನದೊಳು ತನ್ನ ಭಜಿಸುವ ಜನರಿಗೆ
ನಿಜಜ್ಞಾನ ಕರುಣಿಸಿ ಸಾಯುಜ್ಯ ನೀಡುವ ೩

ಯೋಗಿ ಜನರ ಪ್ರಿಯ ಕ್ಷೀರಸಾಗರಕನ್ಯೆಯೊಡೆಯ
ಬಾಗಿ ಸದೃಢದಿ ಸುರಾಗದಿ ಪಾಡುವ
ಭಾಗವತರ ನಿಜ ಯೋಗಕ್ಷೇಮ ಕೇಳ್ವ ೪

ಶಾಮಸುಂದರಾಂಗ ಪುಣ್ಯನಾಮ ಕೋಮಲಾಂಗ
ಕಾಮಿತಜನಪೂರ್ಣ ಕಾಮಜನಕ ತ್ರಿ
ಭೂಮಿಗಧಿಕ ಮಮಸ್ವಾಮಿ ಶ್ರೀರಾಮ ೫

೧೬

ಎನಗಳವೆ ನಿನ್ನ ಮಹಿಮೆಯನು ಪೊಗಳಲು
ಹೀನಮತಿ ನಾ ಪನ್ನಂಗಶಯನ ಪ

ನೀಲಶಾಮನೆ ನಿಮ್ಮ ಲೀಲೆ ಪೊಗಳಲ್ಕೆ ಬ್ರಹ್ಮ
ಸಾಲವು ನಾಲ್ಕುವೇದವೆಂದು
ನಾಲಿಗೆಯೋಳ್ವಾಣಿನಿಟ್ಟಿರುವನಂತೆ ೧

ಸಾಸಿರ ಜಿಹ್ವೆಗಳಿಂದ್ಪೊಗಳಲ್
ಈಶಭಜನೆ ತೀರದೆಂದು
ಶೇಷ ಇನ್ನು ಸಾಸಿರಜಿಹ್ವೆ ಆಶಿಸಿ ಬೇಡುವನಂತೆ ೨

ಪ್ರಾರ್ಥಿಸಲು ನಿಮ್ಮ ಚರಿತ ಶಕ್ತಿ ಸಾಲದಂಥವರಿಗೆ
ಭಕ್ತಿಯಿಂ ಪೊಗಳುವೆನಿಷ್ಟೆ
ಮುಕ್ತಿದಾಯಕ ಶ್ರೀರಾಮಯೆನುತ ೩

೧೭

ಎಲ್ಲ ಕಾಣುವುದೆಲ್ಲ ನಿನ್ನ ಮೂರ್ತಿ ಹರಿ
ಎಲ್ಲ ಕೇಳುವುದೆಲ್ಲ ನಿನ್ನ ಕೀರ್ತಿ ಪ

ಎಲ್ಲ ಸಾರುವುದೆಲ್ಲ ನಿನ್ನ ವಾರ್ತೆ
ಎಲ್ಲೆಂದರಲ್ಲೆ ನಿನಗೆ ಶರಣಾರ್ಥಿ ಅ.ಪ

ಕಲ್ಲಿನಲ್ಲಿ ನಿನಗೆ ಶರಣಾರ್ಥಿ ನೆಟ್ಟ
ಮುಳ್ಳಿನಲ್ಲಿ ನಿನಗೆ ಶರಣಾರ್ಥಿ
ಕಳ್ಳರಲ್ಲಿ ನಿನಗೆ ಶರಣಾರ್ಥಿ ಮಹ
ಕುಳ್ಳರಲ್ಲಿ ನಿನಗೆ ಶರಣಾರ್ಥಿ
ಬಿಲ್ಲುಧರಿಸಿ ವೈರಿ ಕೊಲ್ಲಲುಬರಲವ
ರಲ್ಲೆ ನಿನಗೆ ಬಹು ಶರಣಾರ್ಥಿ ೧

ಊರೊಳು ನಿನಗೆ ಶರಣಾರ್ಥಿ ಮಹ
ದಾರಣ್ಯದಲಿ ನಿನಗೆ ಶರಣಾರ್ಥಿ
ಘೋರತಾಪದಿ ನಿನಗೆ ಶರಣಾರ್ಥಿ ಬಿಡದಾ
ಪಾರ ಸೌಖ್ಯದಿ ನಿನಗೆ ಶರಣಾರ್ಥಿ
ಸಾರವಿಲ್ಲದ ಸಂಸಾರದಿ ನಿನಗೆ
ಬಾರಿಬಾರಿಗೆ ಬಹು ಶರಣಾರ್ಥಿ ೨

ನಿನಗೆ ಜಾಗ್ರದಲಿ ಶರಣಾರ್ಥಿ ಬಿದ್ದ
ಕನಸಿನಲಿ ನಿನಗೆ ಶರಣಾರ್ಥಿ
ಘನ ನಿದ್ರದಿ ನಿನಗೆ ಶರಣಾರ್ಥಿ ಬಿಡ
ದನುದಿನದಲಿ ನಿನಗೆ ಶರಣಾರ್ಥಿ
ತನುಮನಧನದಲಿ ಜನಕ ಶ್ರೀರಾಮ
ನಿನಗೆಣಿಕಿಲ್ಲದ ನಿಜ ಶರಣಾರ್ಥಿ ೩

೧೮

ಎಸೆವ ಸಮುದ್ರವ ಮಥನ ಮಾಡಿತಯ್ಯಾ ನಿನ್ನ ನಾಮ ಹರಿ
ಶಶಿಧರ ಶಿವನಿಗೆ ಶಾಂತಿಮಂತ್ರಾಯ್ತಯ್ಯಾ ನಿನ್ನ ನಾಮ ಪ

ಚೋರನೆನಿಸಿವನ ಸೇರಿಕೊಂಡವನಿಗೆ ನಿನ್ನ ನಾಮಾ
ಪಾರ ಜ್ಞಾನವಿತ್ತು ಮುಂದಕ್ಹಾಕಿತಯ್ಯಾ ನಿನ್ನ ನಾಮ ೧

ಮೀರಿದ ನಿನ್ನ ಮಾಯೆಗೆ ಸಿಲ್ಕಿದೈತಿವರಗೆ ನಿನ್ನ ನಾಮ
ಭೂರಿಕರುಣದಿನೆರಗಿ ರಕ್ಷಿಸಿತಯ್ಯಾ ನಿನ್ನ ನಾಮ ೨

ಬಾಲಪ್ರಹ್ಲಾದಗೆ ಕಾಲಕೂಟವಿಷ ನಿನ್ನ ನಾಮ
ಮೇಲು ಅಮೃತ ಮಾಡುಣಿಸಿ ಪಾಲಿಸಿತಯ್ಯಾ ನಿನ್ನ ನಾಮ ೩

ಕಡುರೋಷದೆಸೆದ ವಜ್ರಾಯುಧದೆಚ್ಚೆ ನಿನ್ನ ನಾಮ
ಸಿಡಿ ಮುಳ್ಳಿಗಿಂತ ಕಡೆಮಾಡಿಬಿಟ್ಟಿತಯ್ಯಾ ನಿನ್ನ ನಾಮ ೪

ನೂರುಯೋಜನದ ವಿಸ್ತೀರ್ಣದ್ವಾರಿಧಿಯ ನಿನ್ನ ನಾಮ
ತೋರಿಸಿತೊಂದು ಕಿರಿ ಸರೋವರ ಸಮಮಾಡಿ ನಿನ್ನ ನಾಮ ೫

ಮೀರಿದ ದೈತ್ಯರಪಾರಂಗರುವಮಂ ನಿನ್ನ ನಾಮ
ಹೀರಿ ಕ್ಷಣದಿ ಸುರಲೋಕ ಸೇರಿಸಿತಯ್ಯಾ ನಿನ್ನ ನಾಮ ೬

ತ್ರಿಣಯರ್ಗೊಗಳಲು ಶಕ್ತಿ ಸಾಲದ ಪಟ್ಟಣ ನಿನ್ನ ನಾಮ
ಅಣುಗಿಂತ ಅಣುಮಾಡಿ ತೋರಿಸಿತ್ಹನುಮಂಗೆ ನಿನ್ನ ನಾಮ ೭

ಅಸಮಪರಾಕ್ರಮ ಅಸುರಕುಲಾಳಿಯಂ ನಿನ್ನ ನಾಮ
ನಶಿಸೆ ಶಿವಪುರ ಭಸ್ಮಮಾಡಿತಯ್ಯಾ ನಿನ್ನ ನಾಮ ೮

ಪಕ್ಷಿಗಮನ ಪಾಂಡುಪಕ್ಷನೆನಿಸಿತಯ್ಯಾ ನಿನ್ನ ನಾಮ
ಅಕ್ಷಯಾಂಬರವಿತ್ತು ಸತಿಯ ರಕ್ಷಿಸಿತಯ್ಯಾ ನಿನ್ನ ನಾಮ ೯

ಕಾದು ದಳ್ಳುರಿಹತ್ತಿದೆಣ್ಣೆ ಕೊಪ್ಪರಿಗೆಯ ನಿನ್ನ ನಾಮ
ಸುಧನ್ವಂಗನುಪಮ ಶೀತಲವೆನಿಸಿತು ನಿನ್ನ ನಾಮ ೧೦

ಅರಿತು ಭಜಿಪರ ಭವರೋಗಕ್ವೈದ್ಯೆನಿಸಿತು ನಿನ್ನ ನಾಮ
ಅರಿದು ಭಜಿಪೆ ನಿನ್ನವರ ಮುಕ್ತಿ ಕರುಣಿಸೋ ಸಿರಿರಾಮ ೧೧

೧೯

ಎಂಥ ಆಟವಿದು ಕ್ಷಿತಿಜಪತಿದೆಂಥ ಆಟವಿದು ಪ

ಎಂಥ ಆಟ ಶ್ರೀ ಕಂತುಜನಕ ಭ
ಕ್ತಾಂತರಂಗ ಸುರಚಿಂತಾಮಣಿಯೇ ನಿನ್ನದೆಂಥ ಅ.ಪ

ಮಡುವಿನೊಳಡಗಿರುವ ಉರಗನ
ಹೆಡೆಮೆಟ್ಟಿ ನಾಟ್ಯಮಾಡುವ ಸಡಗರದಲಿ ಗೊಲ್ಲ
ರ್ಹುಡುಗರ ಕೂಡಿಸಿ ಒಡನೆ ಬಿಲ್ಲಿನಾಟ ರಚಿಸಿ ಮಧುರಪುರ
ಬಿಡದೆ ಸೇರಿ ಗಡಕಡಿದು ಮಾವನ ಶಿರ
ತಡೆಯದೆಮನಪುರಪಥವ ಪಿಡಿಸಿದ್ದು ೧

ಗೋವಳರೊಡಗೂಡಿ ಗೋವುಗಳ ಕಾಯಲ
ಡವಿಸೇರಿ ಮಾಯವೃಷ್ಟಿ ಅತಿಭರದಿ ಗೈಯಲಾಗ
ಗೋವರ್ಧನ ಗಿರಿಯೆತ್ತಿ ಏಳುದಿನ
ಗೋವುಗಳನು ಮತ್ತು ಗೋವಳರೆಲ್ಲರ
ಜೀವ ಸಮಾನಮಾಡಿ ಪ್ರೇಮದಿ ಸಲಹಿದ್ದು ೨

ಎಷ್ಟು ಕ್ಷೀರ ನೀಡೆ ಜನನಿಗಿನ್ನಿಷ್ಟೆಂದ್ಹಟ ಮಾಡೆ
ಸಿಟ್ಟಿನಿಂದ ತಾಯಿ ಕಟ್ಟಲು ಒರಳಿಗೆ
ಅಟ್ಟಹಾಸದಿ ಡುರುಕಿಟ್ಟು ನಡೆದು ಶಾಪ
ಪಟ್ಟು ಪಟ್ಟಣಮುಂದೆಷ್ಟೋಕಾಲದಿಂದ
ಕಷ್ಟಪಡುವರ ದಯದೃಷ್ಟಿಯಿಂ ಸಲಹಿದ್ದು ೩

ದುರುಳ ಭಸ್ಮನಂದು ಹರನಿಂ ಉರಿಹಸ್ತವನು ಪಡೆದು
ಪರಮಪಾಪಿ ವರ ಕರುಣಿಸಿದವನಿಗೆ
ಗರುವದಿ ಬೆನ್ನಟ್ಟಿರುವ ದುರಾತ್ಮನ
ಮರುಳಮಾಡವನ ಕರವೆ ಅವನ ಮೇ
ಲ್ಹೊರೆಸಿ ಉರುವಿಸಿ ಹರನ ರಕ್ಷಿಸಿದ್ದು ೪

ಬತ್ತಲೆ ಪುರಗಳನ್ನು ಪೊಕ್ಕು ನೀ ಸತಿಯರ
ವ್ರತಗಳನು ಹತಗೈದು ತ್ರಿಪುರದ
ಪಥಪಿಡಿಸೆಮಪುರ ಹಿತದಿಂ ಸುರಗಣಕತಿಸೌಖ್ಯವ
ನಿತ್ತು ಜತನಗೈದಿ ಸಿರಿಪತಿಯ ಶ್ರೀರಾಮನೆ
ಸತತದಿಂಥ ಮಹಪತಿತ ಮಹಿಮದಿಹ ೫

೨೦

ಎಂಥಾತ ಎಂಥಾತನೋ ನಮ್ಮಯ ರಂಗ
ಎಂಥಾತ ಎಂಥಾತನೋ ಪ

ಎಂಥಾತ ಎಂಥಾತ ಚಿಂತಾಯಕ ಭಕ್ತ
ರಂತರಾತ್ಮಕ ಲಕ್ಷ್ಮೀಕಾಂತ ತ್ರಿಲೋಕ ಕರ್ತ ಅ.ಪ

ದಿವನಿಶಿಯಾಗಿಹ್ಯನೋ ತಾನೆ ತ್ರಿ
ಭುವನವ ಬೆಳಗುವನೋ
ಸವಿಯದ ಮಹಿಮರಲವಬಿಡದ್ವೇದ ಒಂದೇ
ಸಮನೆ ಪೊಗಳುತಿರೆ ಇವನು ಕಾಣದಲಿಹ್ಯ ೧

ತಿಥಿ ವಾರ ಪಕ್ಷ ತಾನೇ ತಾನೆ ಮಾಸ
ಋತುಕಾಲ ನಿತ್ಯ ತಾನೇ
ಶ್ರುತಿತತಿ ಯತಿಗಳು ಸತತ ಪೊಗಳುತಿರೆ
ಮತಿಗೆ ನಿಲುಕದಂಥ ಅತಿ ಚರಿತ್ರನಿವ ೨

ನಗುವಳುವರಲಿ ಈತನೇ ನಿಂತುಕೊಂಡು
ಸಿಗಿವ ಬಗಿವರಲೀತನೇ
ನಿಗಮಾತೀತನ ಮಹಿಮದ್ಹಗರಣ ತಿಳಿಯದು
ಸುಗುಣ ಸಂತರೊಶ ಜಗದಯ್ಯ ಶ್ರೀರಾಮ ೩

೨೧

ಎಂದಿಗೀಪದ ಕರುಣಮಾಡುವೆಯೋ ನಿಮ್ಮ ಧ್ಯಾನಾ
ನಂದ ಅಮೃತಪಾರ ನವಿನುಡಿಯ ಪ

ಎಂದಿಗೀಪದ ಕರುಣಮಾಡಿ
ಕಂದನೆಂದು ಕರವ ಪಿಡಿದು
ಮಂದಮತಿಯ ತರಿದು ಪೊರೆಯುವೆ
ಸಿಂಧುಶಯನ ತಂದೆ ಶ್ರೀಹರಿ ಅ.ಪ

ವಿಷಮಸಂಸಾರ ಮೋಹವನು ಬಿಡಿಸಿ ನಿಮ್ಮ ಭಜನ
ಅಸಮ ಸುಖದೆನ್ನ ಮನವ ನಿಲ್ಲಿಸಿ
ವ್ಯಸನ ಏಳರ ಕಾಟ ತಪ್ಪಿಸಿ ಬಿಡದೆ ಎನ್ನ
ರಸನೆಮೇಲ್ನಿಮ್ಮ ನಾಮ ಸ್ಥಾಪಿಸಿ
ವಸುಧೆ ಜನರ ಸುದ್ದಿ ಮರೆಸಿ
ನಶಿಪ ಲೌಕಿಕದಾಸೆ ಕೆಡಿಸಿ
ಕುಶಲಮತಿಯಿತ್ತು ಪಾಲಿಸುವ ಮಹ
ಅಸಮಶುಭದಿನ ಕುಸುಮನಾಭ ೧

ಹತ್ತು ಇಂದ್ರಿಯ ಮೂರು ಬಾಧೆ ತೊಲಗಿಸಿಬಿಡದೆ ಎನ್ನ
ನೇತ್ರದೊಳು ತವಮೂರ್ತಿ ನಿಲ್ಲಿಸಿ
ಸುತ್ತಿ ಕೊಲುವ ಮಾಯ ಮುಸುಕು ಹಾರಿಸಿ
ನಿತ್ಯದೆನ್ನ ಚಿತ್ತದೊಳು ನಿಜಜ್ಞಾನ ಸ್ಥಿರಪಡಿಸಿ
ಸತ್ಯ ಸನ್ಮಾನ್ಯಕ್ತನೆನಿಸಿ
ನಿತ್ಯ ನಿರ್ಮಲ ನಿಮ್ಮ ಭಕ್ತರ
ಉತ್ತಮ ಸಂದರುಶನವಿತ್ತು ತವ
ಭೃತ್ಯನೆನಿಸೆನ್ನ ಸಲಹುವಂಥ ೨

ಕ್ಲೇಶ ಪಂಚಕದುರುಲು ಪರಿಹರಿಸಿ ಅನುಮೇಷ ನಿಮ್ಮ
ದಾಸಜನರಾವಾಸದೆನ್ನಿರಿಸಿ
ಮೋಸಮರವೆಯ ಜಾಲ ಛೇದಿಸಿ
ನಿಶಿದಿವದಿ ನಿಮ್ಮ ಧ್ಯಾನದೊಳೆನ್ನ ಮನವಐಕ್ಯನಿಸಿ
ಮೋಸ ಪಾಶಗಳೆಲ್ಲನಾಶಿಸಿ
ದೋಷರಾಶಿಯಿಂ ಮುಕ್ತನೆನಿಸಿ
ಶ್ರೀಶ ಶ್ರೀರಾಮ ನಿಮ್ಮ ಚರಣ
ದಾಸನೆನಿಸಿ ಪೋಷಿಸುವಂಥ ೩

೨೨

ಎಂದು ಕಾಣ್ವೆನೊ ಇಂದಿರೇಶನ ದಿವ್ಯಚರಣ
ಎಂದು ಕಾಣ್ವೆನು ಪ

ಎಂದು ಕಂಡಾನಂದಿಸುವೆನು ಮಂದರೋದ್ಧರ
ಸಿಂಧುಶಾಯಿಯ ಸುಂದರ ಪಾದಾರವಿದಂಗಳನು
ನಿಂದು ಮನದಣಿ ನೇತ್ರದಿಂದ ಅ.ಪ

ದನುಜಾರಿಯ ಘನಮಹಿಮೆ ಜನಕಜೆಯ ಪ್ರಾಣಪ್ರಿಯನ
ಮಿನುಗುವ ದಿನಮಣಿಕೋಟಿತೇಜೋಮಯನ
ಘನಕೋಮಲ ನಿಜರೂಪ ಕಣ್ಣಿಲಿಂ ನೋಡ್ಹಿಗ್ಗುವ ದಿನ ೧

ಕರಿಯ ಕಾಯ್ದನ ಕರುಣದಿಂದ ತರುಣಿಗ್ವಂದನ
ಶರಣೆನುತ ಮರೆಬಿದ್ದವಗೆ ಸ್ಥಿರಪಟ್ಟವ ಕರುಣಿಸಿದನ
ಪರಮಪಾವನ ವರ ನೀಲಾಂಗ ನಿರುತ ಕಂಡು
ಹರುಷಿಪ ಕಾಲ ೨

ಪಕ್ಷಿಗಮನನ ಲಕ್ಷ್ಮೀನಾಥ ಸಹಸ್ರಾಕ್ಷಶಯನನ
ಲಕ್ಷವಿಟ್ಟು ಭಕ್ತರನ್ನು ರಕ್ಷಿಸಿ ಭಕ್ತವತ್ಸಲನೆಂಬ
ಅಕ್ಷಯ ಬಿರುದುಳ್ಳ ಶ್ರೀರಾಮನ ಅಕ್ಷಿಯಿಂದ
ನೋಡುವ ಪದವಿ ೩

೨೩

ಏನಿದ್ದೀತೇನಿದ್ದೀತೋ ಈ ನಾಮದ
ಲ್ಲೇನಿದ್ದೀತೇನಿದ್ದೀತೋ ಪ

ಏನಿದ್ದೀತೇನಿದ್ದೀತೇನ ಪೇಳಲಿ ನಾ
ಜಾನಕೀಶನ ನಾಮ ಹಾನಿಮಾಡದೆ ಕಾಯ್ವುದೇ ಅ.ಪ

ಜ್ಞಾನ ಕೊಡುವುದಲ್ಲೋ ಅ
ಜ್ಞಾನ ಖೂನಕ್ಕುಳಿಸದಿರೆಲೋ
ಸಾನುರಾಗದಿ ನಿಜಜ್ಞಾನ ಬೋಧಿಸಿ ಮಹ
ಹೀನ ಬವಣೆಕಳೆದಾನಂದ ಕೊಡುವುದು ೧

ನರಕಕ್ಹೋಗುವನನ್ನು ಭರದಿ
ಕರುಣಿಸಿ ಪದವನ್ನು
ಕರುಣದಿತ್ತು ಹರಿಶರಣರೊಳಾಡಿಸಿ
ಪರಮ ಪರತರವೆನಿಪ ಸ್ಥಿರಸುಖ ಪಾಲಿಸಿತು ೨

ಜರಮರಣಳಿಯುವುದು ಅದರೊಳ್
ಕರುಣವೆ ತುಂಬಿಹ್ಯದು
ದುರಿತದಿ ಸಿಲ್ಕೆಲ್ಲಿ ಕರೆದರು ಅಲ್ಲಿಗೆ
ತ್ವರಿತದೊದಗಿ ಬಂದು ನಿರುತದಿಂ ಸಲಹುವುದು ೩

ಭವಬಾಧೆ ಕಳೆಯುವುದು
ಜವನ ಭಯವೆ ತಪ್ಪಿಸುತಿಹ್ಯದು
ದಿವರಾತ್ರಿ ಎನ್ನದೆ ನಯದಿ ಭಜಿಪರೊಳು
ದಯದಿ ನಿಂತು ತಾನೆ ಜಯವ ನೀಡುವುದು ೪

ಅಂತ್ಯಪಾರಿಲ್ಲ ಕಾಣೋ ಶ್ರೀರಾಮನಾಮ
ದ್ದೆಂಥ ಶಕ್ತಿಯೇನೋ
ಚಿಂತಿಪ ಭಕ್ತರ ಅಂತರಂಗವನರಿತು
ಸಂತಸ ನೀಡಿ ಮುಕ್ತಿಸಂಪದ ಕೊಡುವುದು ೫

೨೪

ಏನು ಮಾಡಿದರೇನು ಏನು ನೋಡಿದರೇನು
ದಾನವಾಂತಕ ನಿನ್ನನರಿಯದ ಪಾಪಿ ಪ

ನಾನಾದೇಶವ ತಿರುಗಿ ಯಾತ್ರೆ ಮಾಡಿದರೇನು
ನಾನಾತೀರ್ಥವ ಮುಳುಗಿ ಸ್ನಾನ ಮಾಡಿದರೇನು
ನಾನಾಕ್ಷೇತ್ರದಿ ನಿಂದು ದಾನ ಮಾಡಿದರೇನು
ದೀನರಕ್ಷಕ ನಿನ್ನ ಒಲುಮಿಲ್ಲದವರು ೧

ನಾನಾಗುಹೆಗಳ ಪೊಕ್ಕು ತಪವ ಮಾಡಿದರೇನು
ಮೌನದಿಂ ಕುರಿತು ಬಲುಜಪ ಮಾಡಿದರೇನು

ನಾನಾಶಾಸ್ತ್ರವ ಅರ್ಥಮಾಡಿದರೇನು
ಜಾನಕೀಶನೆ ನಿನ್ನ ದಯವಿಲ್ಲದವರು ೨

ನಾನಾಗುಡಿಗಳ ಪೊಕ್ಕು ಪ್ರತಿಮೆ ನೋಡಿದರೇನು
ನಾನಾಸತ್ಯರ ಮುಖವ ನಿತ್ಯ ನೋಡಿದರೇನು
ಧ್ಯಾನಿಕರಸುಲಭ ಶ್ರೀರಾಮ ನಿನ್ನಡಿ ಕುಸುಮ
ಕಾಣದಧಮರು ಈ ಜಗದೊಳಗೆ ಪುಟ್ಟಿ ೩

೨೫

ಗುಮಾನ ಆರದು ಇನ್ನ್ಯಾಕೆ ಹರಿ
ನಾಮದ ಬಲವೊಂದಿರಲಿಕ್ಕೆ ಪ

ಸ್ವಾಮಿಮಾಧವನ ಪ್ರೇಮಪಡೆದು ಮಹ
ನಾಮಮೃತದ ಸವಿಯುತಲಿರುವರ್ಗೆ ಅ.ಪ

ರೊಚ್ಚಿಗೆದ್ದು ಮಾಡುವುದೇನೋ ಜನ
ಸ್ವಚ್ಛದಿ ಒಡಗೂಡಿದರೇನೋ
ಮೆಚ್ಚಿ ಕೊಡುವಫಲ ಇವರೇನೋ ಅತಿ
ಹುಚ್ಚ ನೆಂದರಾಗುವುದೇನೋ
ನಿಶ್ಚಲಚಿತ್ತದಿ ಅಚ್ಯುತಾನಂತನ
ಬಚ್ಚಿಟ್ಟು ಮನದೊಳು ಉಚ್ಚರಿಸುವರಿಗೆ ೧

ಸತಿಸುತರಿವರಿಂದ್ಹಿತವೇನೊ ತನ್ನ
ಪಿತಮಾತೆ ಮುನಿದರೆ ಕೊರತೇನೋ
ಅತಿಸಂಪತ್ತಿನಿಂದ ಗತಿಯೇನೋ ಈ
ಕ್ಷಿತಿಜನ ಮೆಚ್ಚಲು ಬಂತೇನೋ
ರತಿಪತಿಪಿತನಂ ಅತಿ ಗೂಢತ್ವದಿ
ಸತತದಿ ನುತಿಸುವ ಕೃತಕೃತ್ಯರಿಗೆ ೨

ಭೂಮಿಪ ಕೋಪಿಸಲಂಜುವರೆ ಈ
ತಾಮಸರಿಗೆ ತಲೆ ಬಾಗುವರೇ
ಭೂಮಿ ದೈವಗಳ ಬೇಡಿದರೆ ಮನ
ಕಾಮಿತವನ್ನು ಪೂರೈಸುವರೇ
ಕಾಮಿತಾರ್ಥನೀಗಿ ಮಹಾಮಹಿಮನ
ನೇಮದಿ ಪಠಿಪ ಶ್ರೀರಾಮದಾಸರಿಗೆ ೩

೨೬

ತಿರುಪತಿಯ ಶ್ರೀವೆಂಕಟೇಶ

ಗೋವಿಂದ ಹರಿ ಗೋವಿಂದ
ಪರತರ ಪರಮಾನಂದ ಪ

ಮಂದರಗಿರಿಧರ ಸುಂದರಮೂರುತಿ
ನಂದನಕಂದ ಗೋವಿಂದ ಮುಕ್ಕುಂದ ಅ.ಪ

ದುರಿತರಾಶಿ ನಾಶ ಗೋವಿಂದ
ಪರಮಪದವಿಗೀಶ ಗೋವಿಂದ
ಸುರಮುನಿಸೇವಿತ ಹರಅಜವಿನಮಿತ
ಪರಮಚರಿತ ಸಿರಿಗೋವಿಂದ ೧

ಹುಟ್ಟುಸಾವಿಲ್ಲದ ಗೋವಿಂದ
ತಟ್ಟು ಮುಟ್ಟಿಲ್ಲದ ಗೋವಿಂದ
ಸೃಷ್ಟಿ ತನ್ನಾಧೀನದಿಟ್ಟು ಆಳುವ ದಿಟ
ಸೃಷ್ಟಿಗೆ ಸಿಲುಕದ ಗೋವಿಂದ ೨

ಆದಿಅಂತಿಲ್ಲದ ಗೋವಿಂದ
ನಾದಕಲೆಯಿಲ್ಲದ ಗೋವಿಂದ
ಸಾರಿ ಪೊಗಳುವ ವೇದಕೆ ಕಾಣದ
ಆದಿಅನಾದಿ ಬ್ರಹ್ಮ ಗೋವಿಂದ ೩

ಮುಚ್ಚಲು ಮಾಜದ ಗೋವಿಂದ
ಬಿಚ್ಚಲು ಕಾಣದ ಗೋವಿಂದ
ಅಚ್ಚುತಾನಂತೆಂದು ಬಚ್ಚಿಟ್ಟೊಗಳುವರ
ಸಚ್ಚಿತ್ತದ್ದೊಳೆಯುವ ಗೋವಿಂದ ೪

ನಶ್ವರವಿಲ್ಲದ ಗೋವಿಂದ
ಶಾಶ್ವತ ಮಹಿಮೆಯ ಗೋವಿಂದ
ವಿಶ್ವ ವಿಶ್ವರಕ್ಷ ವಿಶ್ವನಾಟಕ ಮಹ
ವಿಶ್ವ ವಿಶ್ವಾಕರ ಗೋವಿಂದ ೫

ಅಸಮ ಲೀಲಾಜಾಲ ಗೋವಿಂದ
ಅಸುರಕುಲದ ಕಾಲ ಗೋವಿಂದ
ದಶವಿಧವತಾರದಿ ವಸುಧೆಯ ಭಾರವ
ಕುಶಲದಿಂದಿಳುಹಿದ ಗೋವಿಂದ ೬

ತಿಳಿಯಲು ತಿಳಿಯದ ಗೋವಿಂದ
ತಿಳಿವಿಗೆ ಸುಲಭದ ಗೋವಿಂದ
ಬೆಳಕುಕತ್ತಲೆದೆಸೆಸುಳಿವಿಲ್ಲದಸ್ಥಾನ
ದ್ದೊಳೆಯುವ ಅಕಳಂಕ ಗೋವಿಂದ ೭

ಭೂಷಣ ಮಣಿಮಾಲ ಗೋವಿಂದ
ಶ್ರೀಶ ಶ್ರೀನಿವಾಸ ಗೋವಿಂದ
ವಾಸುಕಿಶಯನ ಶೇಷಾರಿಗಮನ
ಸಾಸಿರನಾಮದ ಗೋವಿಂದ ೮

ನಾಮರೂಪಿಲ್ಲದ ಗೋವಿಂದ
ನೇಮನಿತ್ಯಿಲ್ಲದ ಗೋವಿಂದ
ಶಾಮಸುಂದರ ಮುಕ್ತಿ ಸೋಮಭೀಮಸುಖ
ದ್ಧಾಮ ಶ್ರೀರಾಮ ನಿಜಗೋವಿಂದ ೯

೨೭

ಗೋವಿಂದ ಹರಿ ಗೋವಿಂದ
ಮಂದರಗಿರಿಧರ ಸಿಂಧುಶಯನ ಬಾರೋ ಪ

ಪೋದ ವರವೇದಗಳತಂದ ಗೋವಿಂದ
ಬಲುಭಾರ ಬೆನ್ನಲಿ ಪೊತ್ತ ಗೋವಿಂದ
ದೇವವರಾಹಾವತಾರದ ಗೋವಿಂದ
ಇಡೀಧರೆಯ ನೀರಡಿಗೈದ ಗೋವಿಂದ
ತರಳನ್ನ ಗೋವಿಂದ ಪೊರೆದಂಥ ಗೋವಿಂದ
ನರಸಿಂಹ ಗೋವಿಂದ ಬಾರಯ್ಯ ಗೋವಿಂದ ೧

ಕ್ಷತ್ರಿ ಕುಲಮೂಲವಳಿದನೆ ಗೋವಿಂದ
ಪಿತನೊಲಿದಿತ್ತ ವಾಕ್ಯಕ್ಕೆ ಗೋವಿಂದ
ತಾನಳಿಯದ್ವಿಪಿನಕ್ಕೈ(ದಿ)ದ ಗೋವಿಂದ
ಬಲು (ಮೊನೆ) ಯ ದೈತ್ಯನಕೊಂದ ಗೋವಿಂದ
ಖಲನವಗೆ ಗೋವಿಂದ ಇಳೆಪಟ್ಟ ಗೋವಿಂದ
ಒಲಿದಿತ್ತ ಗೋವಿಂದ ಒಲಿದು ಬಾ ಗೋವಿಂದ ೨

ನೀನು ವರದೇವಕ್ಯುದರದಿ ಗೋವಿಂದ
ಅವತರಿಸಿ ಗೋಕುಲದೊಳು ಗೋವಿಂದ
ಅಲ್ಲಿ ಪರಿಪರಿ ಮಹಿಮೆಯ ಗೋವಿಂದ
ತೋರಿ ಧರೆಭಾರನಿಳುಹಿದೆ ಗೋವಿಂದ
ಸಿರವರ ಗೋವಿಂದ ಮುರಹರ ಗೋವಿಂದ
ಪರತರ ಗೋವಿಂದ ತ್ವರಬಾರೋ ಗೋವಿಂದ ೩

ತುಸುವಸನ ಕಾಣದ ಗುಪ್ತ ಗೋವಿಂದ
ಪುರದೇಶ ಬತ್ತಲ್ಹೊಕ್ಕನೆ ಗೋವಿಂದ
ಮಹಶಶಿಮುಖಿಯರ ವ್ರತಭಂಗ ಗೋವಿಂದ
ಹಯ ಕುಶಲದಿಂದೇರ್ವನೆ ಗೋವಿಂದ

ನಿಶಿವರ್ಣ ಗೋವಿಂದ ಕುಸುಮಾಕ್ಷ ಗೋವಿಂದ
ಅಸುರಾರಿ ಗೋವಿಂದ ಒಲಿದು ಬಾ ಗೋವಿಂದ ೭

ಸಿರಿ ಇಂದಿರೇಶನೆ ರಾಮ ಗೋವಿಂದ
ಎನ್ನ ತಂದೆತಾಯಿ ನೀನೆ ಗೋವಿಂದ
ಭವಬಂಧನ ಪರಿಹರಿಸು ಗೋವಿಂದ
ಇನ್ನು (ನೋಯಿ) ಸದಲೆ ಪೊರೆ ಗೋವಿಂದ
ಸುಂದರ ಗೋವಿಂದ ಚಂದದಿಂ ಗೋವಿಂದ
ವಂದಿಪೆ ಗೋವಿಂದ ತಂದೆ ಬಾ ಗೋವಿಂದ ೫

೨೮

ಗೋವಿಂದ ನಮೋ ಗೋವಿಂದ ಹರಿ
ಗೋವಿಂದಂ ನಮೋ ಗೋವಿಂದ ಪ

ಗೋವಿಂದಂ ನಮೋ ಗೋವಿಂದೆಂದೊಡೆ
ಬಂದ ಜರಾಮರಣ್ಹರಿದುಪೋಪುದು ಅ.ಪ

ಶರಧಿ ಮುಳುಗಿದ ಗೋವಿಂದಂ ನಮೋ
ಶರಧಿ ಈಸಿದ ಗೋವಿಂದ
ಕರಿಕೆಯನು ಮೆದ್ದ ಗೋವಿಂದಂ ನಮೋ
ನರಮೃಗಾಕಾರ ಗೋವಿಂದ
ಪರಶು ಧರಿಸಿದ ಗೋವಿಂದಂ ನಮೋ
ಧರೆಯ ಬೇಡಿದ ಗೋವಿಂದ
ಶರಧಿ ಹೂಳಿದ ಗಿರಿಯನೆತ್ತಿದ
ಪುರವ ಭಂಗಿಸಿದ ತುರಗವೇರಿದ ೧

ಸಿಂಧು ಕಲಕಿದ ಗೋವಿಂದಂ ನಮೋ
ಸಿಂಧುಮಂದಿರ ಗೋವಿಂದ
ಮಂದರೋದ್ಧಾರ ಗೋವಿಂದಂ ನಮೋ
ಇಂದಿರೆಯ ಪ್ರಿಯ ಗೋವಿಂದ

ಬಂದ ಭುವನಕೆ ಗೋವಿಂದಂ ನಮೋ
ನಿಂದ ಗಿರಿಯಲಿ ಗೋವಿಂದ
ಬಂದ ಭಕುತರ ಬಂಧ ಕಳೆದಾ
ನಂದ ನೀಡುತ ಚೆಂದದಾಳುವ ೨

ದನುಜ ಸಂಹರ ಗೋವಿಂದಂ ನಮೋ
ಚಿನುಮಯಾತ್ಮಕ ಗೋವಿಂದ
ಮ(ನುಮುನಿಯಾ) ನಂದಗೋವಿಂದಂ ನಮೋ
ಚಿನುಮಯಾತ್ಮಕ ಗೋವಿಂದ
ವಿನಮಿತಾಗಮ ಗೋವಿಂದಂ ನಮೋ
ಜನಕಜೆಯ ವರ ಗೋವಿಂದ
ವನಜಸಂಭವವಿನುತ ವಿಶ್ವೇಶ
ಜನಕ ಜಾಹ್ನವೀ ಸುಜನ ಶುಭಕರ ೩

ನೀಲಶ್ಯಾಮ ಹರಿ ಗೋವಿಂದಂ ನಮೋ
ಲೋಲಗಾನ ಸಿರಿಗೋವಿಂದ
ಕಾಲಕುಜ(ನ) ಕುಲ ಗೋವಿಂದಂ ನಮೋ
ಪಾಲಮೂರ್ಲೋಕ ಗೋವಿಂದ
ಮಾಲಕೌಸ್ತುಭ ಗೋವಿಂದಂ ನಮೋ
ಮೇಲು ಆಲಯ ಗೋವಿಂದ
ಕಾಳಿಮರ್ದ್ನ ಕಾಲಭಯಹರ
ಲೀಲಸಮ ವಿಶಾಲಮಹಿಮ ೪

ಸತ್ಯ ಸಂಕಲ್ಪ ಗೋವಿಂದಂ ನಮೋ
ಸತ್ಯ ಸನ್ನುತ ಗೋವಿಂದ
ಭಕ್ತವತ್ಸಲ ಗೋವಿಂದಂ ನಮೋ
ನಿತ್ಯ ನಿರ್ಮಲ ಗೋವಿಂದ
ಚಿತ್ತಜನಪಿತ ಗೋವಿಂದಂ ನಮೋ
ಮೃತ್ಯು ಸಂಹರ ಗೋವಿಂದ
ಭಕ್ತಜನರಾಪತ್ತು ಪರಿಹರ
ಮುಕ್ತಿದಾಯಕ ಕರ್ತು ಶ್ರೀರಾಮ ೫

೨೯

ಗೋವಿಂದ ನಮೋ ಗೋವಿಂದ ಪ

ಮಂದ ಮನವೇ ನೀನು
ಅಂದು ನೋಡೆಲೊ ಒಮ್ಮೆ ಅ.ಪ

ತಂದೆ ಗೋವಿಂದ ಎನ್ನೆಲೊ ಮನವೆ
ಬಂದ ಬಂಧನವೆಲ್ಲವ ಕಳೆವ
ಕುಂದುನಿಂದೆಗಳಿಲ್ಲದೆ ಕಾಯ್ವ ಹಿಂದೆ
ಮುಂದೆ ತಾನೆ ನಿಂತಿರುವ ಆಹ
ಸಿಂಧುಶಯನ ತನ್ನನ್ನೊಂದಿ ಭಜಿಪರನ್ನು
ಕಂದರೆನ್ನುತಾನಂದದಿ ಸಲಹುವ ೧

ಎಲ್ಲಿ ಕರೆದರಲ್ಲೆಬರುವ ಸೊಲ್ಲು
ಸೊಲ್ಲಿನೊಳಗೇ ನಿಂತಿರುವ
ಅಲ್ಲಿಇಲ್ಲಿ ಎಂದೆಂಬ ಹೇವ ಇಲ್ಲ
ಮಲ್ಲಮರ್ದನ (ಉಂ) ಚಲುವ ಆಹ
ಪುಲ್ಲನಯನ ತನ್ನ ನಿಲ್ಲದೆ ಭಜಿಪರ
ಲಲ್ಲೆನಿಂತುಕೊಂಡುಲ್ಲಾಸದಿ ಕಾಯುವ ೨

ಇವರವರೆಂಬುವ ಭಾವ ದೇವ
ಮಾವ ಮರ್ದನಗಿಲ್ಲೆಲವೋ
ದಿವ್ಯಭಾವ ಭಕ್ತರ ಪಿಡಿದು ಕರೆವ
ಕಾವ ಜೀವದಿ ಬಿಡಿದನುದಿನವು ಆಹ
ಜಾವಜಾವಕೆ ಶ್ರೀರಾಮನ ಚರಣವ
ಭಾವಿಸಿ ಭಜಿಪರ ಭಾವದೋಳ್ ಬೆರೆತಿರುವ ೩

೩೦

ಚರಣದಾಸರ ಸದುಹೃದಯ ನಿವಾಸನೆ ಸಿರಿರಾಮ
ಪರಮ ಪಾವನೆ ವರಜಾಹ್ನವೀ ಜನಕನೆ ಸಿರಿರಾಮ ಪ

ಶರಣಜನರ ಮೇಲ್ಕುಡಿಯೋಳ್ಸಂಚಾರನೆ ಸಿರಿರಾಮ
ನೆರೆನಂಬಿ ಭಜಿಪರ ಭವಮಲಹರಣನೆ ಸಿರಿರಾಮ
ಕರುಣದೊದೆದು ಯುವತಿಕುಲವನುದ್ಧರಿಸದನೆ ಸಿರಿರಾಮ
ವರದ ವಾಸುಕಿಶಾಯಿ ಜಗದೇಕ ಬಂಧುವೇ ಸಿರಿರಾಮ ೧

ಧುರಧೀರವಾಲಿಯ ಗರುವನಿವಾರನೆ ಸಿರಿರಾಮ
ಮರೆಬಿದ್ದ ಸುಗ್ರೀವನ ದು:ಖಪರಿಹಾರನೆ ಸಿರಿರಾಮ
ಪರಮಭಕ್ತ್ಹನುಮಗೆ ಕರವಶನಾದನೆ ಸಿರಿರಾಮ
ಶರಣುಬಂದಸುರಗೆ ಸ್ಥಿರಪಟ್ಟವಿತ್ತನೆ ಸಿರಿರಾಮ ೨

ಶರಧಿಮಥನಮಾಡಿ ಸುರರ ರಕ್ಷಿಸಿದನೆ ಸಿರಿರಾಮ
ಹರನಕೊರಳ ಉರಿ ಕರುಣದ್ವಾರಿಸಿದನೆ ಸಿರಿರಾಮ
ವರಗಿರಿನಂದನೆಮನ ಸೂರೆಗೈದನೆ ಸಿರಿರಾಮ
ಸರುವದೇವರದೇವ ಅದ್ಭುತಮಹಿಮನೆ ಸಿರಿರಾಮ ೩

ಕರಿಯ ರಕ್ಷಣೆಗಾಗಿ ಕಾಸಾರಕ್ಕಿಳಿದನೆ ಸಿರಿರಾಮ
ತರುಣಿಮೈಗಾವಗೆ ಚರನಾಗಿ ನಿಂತನೆ ಸಿರಿರಾಮ
ಚರಣದಾಸರಮನೆ ತುರಗವ ಕಾಯ್ದನೆ ಸಿರಿರಾಮ
ಪರಮಭಾಗವತರನರೆಲವ ಬಿಟ್ಟಿರನೆ ಸಿರಿರಾಮ ೪

ಅನುಪಮ ವೇದಗಳಗಣಿತಕ್ಕೆ ಮೀರಿದನೆ ಸಿರಿರಾಮ
ಸನಕಸನಂದಾದಿ ಮನುಮುನಿ ವಿನಮಿತನೆ ಸಿರಿರಾಮ
ವನರುಹ ಬ್ರಹ್ಮಾಂಡ ಬಲುದರದಿಟ್ಟಾಳ್ವನೆ ಸಿರಿರಾಮ
ಮನಮುಟ್ಟಿ ಭಜಿಪರ ಘನಮುಕ್ತಿ ಸಾಧ್ಯನೆ ಸಿರಿರಾಮ ೫

೩೧

ಜಗದಯ್ಯ ನಿನ್ನಪಾದ ಜಗದಖಿಲ ಜನರು
ಬಗೆ ತಿಳಿಯಲಾರರು ಸುಗುಣಿರೊಂದಲ್ಲದೆ ಪ

ಜಾರೆ ಸೇರುವಳೆ ಸುವಿಚ್ಚಾರದ ಮಾತುಗಳ
ಜಾರ ಸೇರುವನೆ ಜ್ಞಾನಸಾರ ಬೋಧಾಮೃತವ
ಚೋರ ಸೇರುವನೆ ಇನತೋರಿಸಲು ಕಿರಣಗಳ
ಕ್ಷೀರಮಂ ಸೇರುವನೆ ಸುರಪಾನಿಗೀಯಲು ೧

ವಿಧವೆಗೆ ಸೇರುವುದೆ ಒದಗುವವರ ಬಸಿರು
ಮುದುಕನಿಗೆ ಸೇರುವುದೆ ಹದದ್ಹೆಣ್ಣಿನೊನಪು
ಅಧಮರಿಗೆ ಸೇರುವುದೆ ಸದಮಲಿನ ಕಥಾಶ್ರವಣ
ಬುಧಜನಕೆ ಸೇರುವುದೆ ಕದನಿಕರ ನೆರೆಯು ೨

ಜೀನನಿಗೆ ಸೇರುವುದೆ ದಾನಿಗಳ ಗಾಂಭೀರ್ಯ
ಹೀನನಿಗೆ ಸೇರುವುದೆ ಜಾಣರೊಡನುಡಿಯು
ನಾನಾಜನ್ಮದ ಸುಕೃತ ಕಾಣದ ಪಾಪಿಗೆ ಮಮ
ಪ್ರಾಣ ಶ್ರೀರಾಮ ನಿನ್ನ ಧ್ಯಾನ ಸೇರುವುದೆ ೩

೩೨

ಜನುಮಪಾವನ ಪರಿನಾಮ ಭಜನೆ
ಜನುಮ ಪಾವನ ಪರಲೋಕಸಾಧನ ಪ

ದಿನದಿನದಿ ಘನವಾಗಿ ಕನಸುಮಸಿನೊಳು ಬಿಡದೆ
ವನಜನಾಭನ ನೆನೆದರಿಲ್ಲ ಜನನ ಮರಣ ೧

ಒಂದು ಸಲ ಆ ತಂದೆ ಗೋವಿಂದನಂಘ್ರಿವೊಂದಿ ಭಜಿಸ
ಲೊಂದುಭವದ ಬಂಧನಗಳ್ ಸಂಧಿಸವೆಂದಿಗು ೨

ಕಾಮಜನಕ ಸ್ವಾಮಿ ಶ್ರೀರಾಮಮಂತ್ರ ಗೂಢದಿಟ್ಟು
ನೇಮದಿಂದ ಪೊಗಳುತಿರೆ ಆ ಮಹಮೋಕ್ಷ ಸಿದ್ಧಿ ೩

೩೩

ಜಯ ಜಯ ಮುರಹರ ಜಯ ಭವ ಭಯಹರ
ಜಯ ಪಾಂಡುಪಕ್ಷಕರಜಯ ಪುಂಡಲೀಕೋದ್ಧಾರ ಪ

ಜಯ ಜಯ ಯಾದವ ಜಯ ರಘುಕುಲೋದ್ಭವ
ಜಯ ದಶಶಿರಹರ ಜಯ ದಶ ಅವತಾರ ೧

ಜಯ ಜಯ ಕೇಶವ ಜಯ ಹರಿ ಮಾಧವ
ಜಯ ಶೇಷಶಾಯಿ ಈಶ ಜಯ ದೋಷಹರ ಕೇಶ ೨

ಜಯ ಜಯ ಜಗತ್ರಾಣ ಜಯ ಮಧುಸೂದನ
ಜಯ ನುತಭಕ್ತ ಪ್ರೇಮ ಜಯ ಸೀತಾ ಶ್ರೀರಾಮ ೩

೩೪

ಜೈ ಜೈ ವೆಂಕಟರಾಯ ಸಲಹು ಗಡ ಪ

ರಾಯಚೂರ ಒಡೆಯ ಮೊರೆಯ
ಕಾಯೊ ಕರುಣಿ ಶುಭ ಕಾಯ
ಐಹಿಕ ಮಹಮಾಯವ ಬಿಡಿಸಯ್ಯ ಅ.ಪ

ಪಂಕಜಾಕ್ಷ ಹರಿ ಸಂಕರುಷಣ ಭವ
ಸಂಕಟ ಪರಿಹಾರ ಶುಭಕರ
ಶಂಖಚಕ್ರಧರ ಮಂಕುದನುಜಹರ
ಕಿಂಕರಘದೂರ
ಶಂಖಸುರನ ಬಲು ಬಿಂಕಮುರಿದ
ಬಲದಂಕ ಅದಟವೀರ ಶೂರ
ಅಂಕುರಿಸೆನ್ನೊಳಾತಂಕತಾರದೆ ಪೊರೆ
ಲಂಕಾ ವಿಜಯಕಾರ ೧

ದಾತ ಮೂರುಜಗನಾಥ ಪರಮ ಅ
ದ್ಭೂತ ಮಹಿಮೆಗಾರ ಚದುರ
ಪ್ರೀತ ಭಕುತ ಭವಭೀತರಹಿತ ಮಾಯಾ
ಪೂತನಿ ಸಂಹಾರ

ನೀತಿಕೋವಿದ ವಿಧಿತಾತ ಅಸಮ ವಿ
ಖ್ಯಾತ ಕರುಣನಿಕರ ಸುಂದರ
ಘಾತಿಸಿ ಕಂಸನ ಮಾತಪಿತರ ಕಾಯ್ದ
ಪಾತಕ ನಿವಾರ ೨

ಬಾಲನಂತರಿಯದೆ ಆಲಯಗಳ ಪೊಕ್ಕು
ಪಾಲು ಮೊಸರು ಕದಿದ ಸವಿದ
ಬಾಲೆರುಡುವ ದುಕೂಲ ಕದಿದು ತಾ
ಮೇಲು ಮರವನೇರ್ದ
ಕಾಲಿಂದಿ ಧುಮಕಿದ ಕಾಳಿಯಮೆಟ್ಟಿದ
ಕಾಳರಕ್ಕಸರೊದೆದ ಸದೆದ ಲೀಲಾ
ಜಾಲ ನಂದ ಬಾಲನಾಗಿ ಬಲು
ಬಾಲಲೀಲೆಗೈದ ೩

ಪರಮ ಪರಾತ್ಪರ ಪರಮಪುರುಷ ಸಿರಿ
ಪರಮ ಪಂಚಪ್ರಾಣ ದುರಿತ
ಹರಣಜನನಮರಣ್ಣರಸುರವಿನಮಿತ
ಧರಣಿಗಧಿಕ ತ್ರಾಣ
ಕರಿಧ್ರುವರಿರ್ವರನು ಭರದಿ ನೀಡಿ ನಿಂತು
ಪೊರೆದ ಪಾಂಚಾಲೀಮಾನ ಜಾಣ
ಶರಣಜನರ ಮೈನೆರಳು ನಿಗಮಾತೀತ
ನಿರುಪಮ ನಿರಂಜನ ೪

ಸೋಮವದನ ಸತ್ಯಭಾಮಾರಮಣ ಸುಖ
ಧಾಮ ಸುಜನಹೃದಯನಿಲಯ
ಕಾಮಜನಕ ಪುಣ್ಯನಾಮ ರಕ್ಕಸಕುಲ
ಭೀಮ ಪಾಲಿಸಭಯ
ಶಾಮವರ್ಣ ಮಮಸ್ವಾಮಿ ಭಜಿಪೆ ಶ್ರೀ

ರಾಮಪಿಡಿಯೋಕಯ್ಯ ಸದಯ
ಕಾಮಿತ ವರ ಸುಪ್ರೇಮದಿ ಇತ್ತೆನ್ನ
ಪ್ರೇಮದುದ್ಧರಿಸಯ್ಯ ೫

೩೫

ಜೈ ತಿರುಪತಿ ವೆಂಕಟರಮಣ
ಕಿಂಕರಜನ ಮಹ ಸಂಕಟಹರ ಜೈ ಪ

ಶಂಖಚಕ್ರಧರ ಮಂಕುದಾನವಹರ
ಪಂಕಜಪಾಣಿಯಕಳಂಕ ಮಹಿಮ ಜೈ ೧

ಸೃಷ್ಟಿಮೇಲೆ ಪ್ರತಿಷ್ಠನಾಗಿ ಮಹ
ಬೆಟ್ಟವ ಭೂವೈಕುಂಠವೆನಿಸಿದಿ ಜೈ ೨

ತಪ್ಪದೆ ಭಕುತರಿಂ ಕಪ್ಪಗೊಳ್ಳುತ ನೀ
ಅಪ್ಪಿಕೊಂಡಿರಿವೀ ಅಪ್ಪ ತಿಮ್ಮಪ್ಪ ಜೈ ೩

ಕೋಟಿ ಕೋಟಿ ಮಹತ್ವ ಸಾಟಿಗಾಣದೆ ತೋರಿ
ಆಟವಾಡುವಿ ಜಗನಾಟಗಾರನೆ ಜೈ ೪

ಕಪ್ಪು ವರ್ಣದಿಂದೊಪ್ಪುವಿ ಸಿರಿಯಿಂ
ದಪ್ಪಿಕೋ ದಯದೆನ್ನಪ್ಪ ಮುರಾರಿ ಜೈ ೫

ಬೇಡಿದ ವರಗಳ ನೀಡಿದೆ ದಯದಿ ಹರಿ
ಗಾಢಮಹಿಮೆ ಇಹ್ಯನಾಡಿಗರುಹಿದಿ ಜೈ ೬

ಕೋರಿದವರ ಮನಸಾರ ವರವನೀಡಿ
ಧಾರುಣಿಯಾಳಿದ್ಯಪಾರ ಮಹಿಮ ಜೈ ೭

ಲಕ್ಷ್ಮೀಸಮೇತನಾಗಿ ಲಕ್ಷ್ಯದಿಂ ಮೂಲೋಕ
ಕುಕ್ಷಿಯೊಳ್ ಧರಿಸಿ ನೀ ರಕ್ಷಿಸಿದೆ ಜೈ ೮

ಭಕ್ತವತ್ಸಲ ನಿನ್ನ ಭಕ್ತನೆನಿಸಿ ಎನಗೆ
ಮುಕ್ತಿಸಂಪದ ದೇ ಕರ್ತು ಶ್ರೀರಾಮ ಜೈ ೯

೩೬

ತಪ್ಪು ಮಾಡಿದ್ದು ಸತ್ಯ ನಾನಪ್ಪ ಮಿಥ್ಯಲ್ಲ ತಿಮ್ಮಪ್ಪ
ತಪ್ಪು ಮಾಡಿದ್ದು ಸತ್ಯ ನಾನಪ್ಪ ಪ

ತಪ್ಪು ಎನ್ನದು ಗಪ್ಪು ಮಾಡಿ ಪರರೊಪ್ಪುವಂತೆ ಮಂದಿ
ತಪ್ಪು ತೋರಿಸಿ ತಪ್ಪು ಒಪ್ಪಿಸುತಿಪ್ಪ
ಮೃತ್ಯುಗೆ ಕಷ್ಟವಾಗ್ವುದ ತಪ್ಪಿಸೋ ತಪ್ಪ ಅ.ಪ

ಪರರ ದುರ್ಗಣ ಗಿರಿಯು ಪರ್ವತಪ್ಪ ಬೆಳಸಿ ಎನ್ನಯ
ಪರಮದುರ್ಗುಣ ತೃಣಕೆ ಸಮನಪ್ಪ ಮಾಡಿತೋರಿಸಿ
ಜರೆದು ಬೀಳುವೆ ನರಕಗುಂಟಪ್ಪ ದುರಿತಶೇಷಪ್ಪ
ಹರಿದುಕೊಳ್ಳದೆ ಮರವೆಲಿ ಮತ್ತು ಪರರ ಜರಿಯುತ
ದುರಿತದಿಂದೆಮಪುರವ ಸಾಧಿಪೆ ತಿರುಗಿ ನೋಡದೆ
ಅರಿವು ಕರುಣಿಸು ಶರಣರ್ಹೊನ್ನಪ್ಪ ೧

ಎಷ್ಟೋ ಎಷ್ಟೋ ಪಾಪಕೋಟೆಪ್ಪಾ ಆಚರಿಸಿ ನಾನು
ಕೆಟ್ಟು ಭ್ರಷ್ಟನಾದೆ ಕಲ್ಲಪ್ಪ ದುಷ್ಟತನದಿ
ನಷ್ಟಮಾಡಿದೆ ಪರರ ಮಾನಪ್ಪ ಮುಷ್ಟಿದಾನಪ್ಪ
ಹುಟ್ಟಿದಂದಿನಿಂದ ಕೊಟ್ಟು ಪಡಿಲಿಲ್ಲ
ಶಿಷ್ಟರೊಲುಮೆಯ ನಿಷ್ಠೆಯಿಂ ನಾ ಸೃಷ್ಟಿಕರ್ತ
ದೃಷ್ಟಿಲಿಂದಿನ್ನು ಹುಟ್ಟಿಸೆನ್ನಗೆ ನಿಷ್ಠ ಜ್ಞಾನಪ್ಪ ೨

ಎಲ್ಲ ಪಾಪಕ್ಕೆಚ್ಚು ನಂದಪ್ಪ ಜಗದಿ ಎಲ್ಲ
ಖುಲ್ಲರಿಗೆ ನಾನ್ಹಿರಿಯ ಬಾಲಪ್ಪ ಕೇಳಲೇನು
ಕಳ್ಳ ಸುಳ್ಳತನದಿ ವೀರಪ್ಪ ಕಾಲಯಮನಪ್ಪ
ಅಲ್ಲ ಅಹುದೆನ್ನುವುದನೆಲ್ಲ ಬಲ್ಲೆ ನೀ

ಇಲ್ಲವೆನಿಪ ಸಾಧ್ಯವೆಲ್ಲಿದೆ ಎನಗೆ ಪುಲ್ಲನಯನ ಕ್ಷಮೆ
ಪಾಲಿಸು ಸಿರಿಯರ ನಲ್ಲ ಶ್ರೀರಾಮ ಗೊಲ್ಲ ಕೃಷ್ಣಪ್ಪ ೩

೩೭

ದೀನದಯಾಪರ ಜಾನಕೀನಾಥ
ನೀನೆ ದಯಾರ್ಣವಅನಾಥಜನಾಪ್ತ ಪ

ಘನತರ ಭವತಾಪವನು ಪರಿಹರಿಸೊ
ಕನಿಕರಯುತ ನೀನೆ ಮನುಮುನಿವಿನುತ ೧

ಲಾಖಚೌರ್‍ಯೆಂಸಿಜನ್ಮ ಸಾಕಾದೆ ತಿರುತಿರುಗಿ
ಕಾಕುಬವಣೆ ಸಾಕೋ ಲೋಕೇಶ ಕೃಪಾ ದೇ ೨

ಭಕುತಾಭಿಮಾನಿ ನೀ ನಿಖಿಲಜಗಸೂತ್ರ
ಭಕುತನ ಮೊರೆ ಕಾಯೊ ಭಕುತಾಭಿರಾಮ ೩

೩೮

ದೀನಪಾಲನ ನಾರಿಮಾನರಕ್ಷಣ ಸಿರಿ
ಪ್ರಾಣರಮಣ ಹರಿ ನಾರಾಯಣ ಪ

ಸೋಮಕಾಸುರಹರ ಕಾಮಿತ ಪರಿಹರ
ಭೂಮಿಜೆಜನಕಜಯ ಜನಾರ್ದನ
ಸ್ವಾಮಿ ಗೋವಿಂದ ಮೇಘಶ್ಯಾಮ ಮುಕ್ಕುಂದ ಭಕ್ತ
ಪ್ರೇಮ ಆನಂದ ಹರಿ ನಾರಾಯಣ ೧

ಪಾಷಾಣಪಾವನ ದೋಷನಿವಾರಣ
ನಾಶರಹಿತ ಸುಪ್ರಕಾಶನೆ
ಶೇಷಶಯನ ಗಿರಿವಾಸ ದಾಸರ ಪ್ರಾಣೇಶ
ಕೇಶವ ಹರಿ ನಾರಾಯಣ ೨

ವಾರಿಧಿಮಥನ ನಾರದವಂದನ
ಕಾರುಣ್ಯನಿಧಿ ಕರುಣಾಂತರ್ಗತ
ನಾರಸಿಂಹ ದಿವ್ಯಾಪಾರಮಹಿಮ ಸುರ
ಘೋರನಿವಾರ ಹರಿ ನಾರಾಯಣ ೩

ಶಾಂತ ಶಾಂತಾಕಾರ ಶಾಂತಜನಾಧಾರ
ಶಾಂತಿ ಸದ್ಗುಣಧಾಮ ಶುಕ್ಲಾಂಬರ
ಶಾಂತಮೂರುತಿ ಭೂಕಾಂತ ಪರಮವೇ
ದಾಂತಾತೀತ ಹರಿ ನಾರಾಯಣ ೪

ನಾಥ ಜಾನಕೀಪ್ರಾಣ ಭೂತಳಪಾವನ
ದಾಥ ಜಗನ್ನಾಥ ವಿಶ್ವಾಂಬರ
ಪಾತಕಹರ ವಿಧಿತಾತನೆ ನಿಜಸುಖ
ದಾತ ಶ್ರೀರಾಮ ಹರಿ ನಾರಾಯಣ ೫

೩೯

ಧನ್ಯನಲ್ಲವೇ ಇವನು ಧನ್ಯನಲ್ಲವೇ ಪ

ಧನ್ಯನಲ್ಲವೇ ಪನ್ನಂಗಶಯನ
ನುನ್ನತ ಮಹಿಮೆ ತನ್ನೊಳ್ಳಿಳಿದವ ಅ.ಪ

ಕರಿ ಮೊಸಳಿಗೆ ಸಿಲ್ಕಿ ಮೊರೆಯೊ ಹರಿಯೆನಲು
ಕರುಣದಿಂದಲಿ ಬಂದು ಪೊರೆದನೆಂದರಿತವ ೧

ದುರುಳ ದುಶ್ಯಾಸನನು ಸೀರೆ ಸೆಳೆಯುತಿರೆ
ತರುಣಿಗ್ವರದ ಶ್ರೀಪರಮನೆಂದರಿತವ ೨

ಬಲಿಯನು ರಸಾತಳಕಿಳಿಸಿ ತಾ ಪಾದದಿ
ಒಲಿದು ಮನೆಯ ಬಾಗಿಲ ಕಾಯ್ದೆಂದರಿತವ ೩

ಮಲತಾಯಿ ಧ್ರುವನೊದೆದು ಛಲದಿ ನೂಕಲು ಕಂದ
ನಳಿನಾಕ್ಷ ಗತಿಯೆನಲು ಒಲಿದು ಸಲಹಿದ್ದರಿತವ ೪

ನೀನೆಗತಿಯೆನಗೀ ಭುವನದಾರು ಗತಿಯಿಲ್ಲ
ವೆನುತ ಶ್ರೀರಾಮನ ಪಾದ ನೆನವಿನೊಳಿರ್ದವ ೫

೪೦

ಧನ್ಯರಲ್ಲವೆ ಬಹು ಮಾನ್ಯರಲ್ಲವೆ ಪ

ಸನ್ನುತಾಂಗ ಹರಿಯ ಚರಣ
ಕಣ್ಣಿನೋಳ್ಕಂಡು ಹಿಗ್ಗುವರು ಅ.ಪ

ಭಿನ್ನಭೇದವಳಿದು ಪರರ
ತನ್ನ ಸ್ವರೂಪತಿಳಿದು ಪರಮ
ಪನ್ನಂಗಶಾಯಿ ಉನ್ನತಚರಿತ
ವನ್ನು ಬರೆದು ಪಾಡುವವರು ೧

ವಿಷಮಸಂಸಾರ ಕನಸೆಂದು
ವಿಷಯಸುಖಕೆ ಮೋಹಿಸದೆ
ಕುಸುಮನಾಭನ ಅಸಮನಾಮ
ರಸನೆಯಿಂದ ಪೊಗಳುವರು ೨

ಕಡುಬಂಧ ಈ ಜಡಭವದ
ಜಡರನಳಿದು ದೃಢವಹಿಸಿ
ಒಡೆಯ ಶ್ರೀರಾಮನಡಿಯ ಭಕುತಿ
ಪಡೆದು ಆನಂದದಾಡುವವರು ೩

೪೧

ಧ್ಯಾನಿಪೆ ನಿನ್ನ ಧ್ಯಾನಿಪರಘಹರ ಧ್ಯಾನಿಪೆ ನಿನ್ನ
ಜಾನಕೀಧವ ತವಚರಣ ಕರುಣ ಕೋರಿ ಪ

ಪರತರ ಮಹಿಮನೆ ಶರಣರ ಪ್ರಿಯ
ಗಿರಿಧರ ಸಿರಿವರ ಮರೆ ಕರುಣಿಸು ನರಹರಿ ೧

ಪತಿತಪಾವನ ನಿಮ್ಮ ಶ್ರುತಿಬೋಧ್ವಾಕ್ಯಗಳಭಿ
ರತಿ ಹಿಡಿದಿತ್ತು ಯತಿನುತಕ್ಷಿತಿಪತಿ ಪೊರೆ ೨

ಪೋಷಿಸೆನ್ನನು ನಿನ್ನ ದಾಸತ್ವ ನೀಡಿ ಮುನ್ನ
ದೋಷನಾಶನೆ ಜಗದೀಶ ಶ್ರೀರಾಮನೆ ೩

೪೨

ವಿಠ್ಠಲ ದೇವರು

ನಮೋಯೆಂಬೆ ನಮೋಯೆಂಬೆ
ನಮ್ಮಯ ವಿಠಲಗೆ ಪ

ಕಾಷ್ಟಹಾರನ ಇಷ್ಟಮಿತ್ರನ
ದಿಟ್ಟಪುತ್ರನ ಮನದಿಷ್ಟವಿತ್ತವಗೆ ೧

ಉತ್ತರಿತ್ತರಿ ತಮ್ಮ ಕತ್ತಲಮನೆಯೊಳು
ನೆತ್ತಿ ಹೊಡೆಸಿದಸ್ತ್ರೀನೆತ್ತಿ ಸಲಹಿದಗೆ ೨

ಮಂಗಲಮುನಿಯಿಂದ ಭಂಗಪಟ್ಟವನ
ಅಂಗಜನಶ್ವ ಶೃಂಗಾರದ್ಧಿಡಿದಗೆ ೩

ಕುರುಪನನುಜೆಯ ಪರಪತಿಶಿವ
ತರಣಿಯಿದಿರಿನೋಳ್ ತರಿಸಿದ ಮಹಿಮಗೆ ೪

ಭಕ್ತವತ್ಸಲ ಮುಕ್ತಿದಾಯಕ
ಭಕ್ತರ ಇಷ್ಟವ ಪೂರ್ತಿಪ ಶ್ರೀರಾಮಗೆ ೫

೪೩

ನಾ ಮಾಡಿದಪರಾಧ ನನ್ನನ್ನು ಕಾಡಲು
ನೀ ಮಾಡುವದೇನೋ ಜಾನಕೀನಾಥ ಪ

ಕಾಮಕ್ರೋಧಗಳಳಿದು ತಾಮಸಂಗಳು ನೀಗಿ
ನೇಮನಿತ್ಯದಿ ಹರಿನಾಮ ಭಜಿಸಲಿಲ್ಲ ೧

ಪರನಿಂದೆ ಪರನಾರಿಯರ ಮೋಹ ತೊರೆಯದೆ
ಗುರುಹಿರಿಯರ ಜರಿದು ನರಕಕ್ಕೆ ಗುರಿಯಾದೆ ೨

ತಂದೆ ಶ್ರೀರಾಮನೆ ಕಂದನ ತಪ್ಪು ದಯ
ದಿಂದ ಕ್ಷಮಿಸಿ ಇನ್ನು ಚೆಂದದಿಂ ಸಲಹಯ್ಯ ೩

೪೪

ನಾಮ ಭಜೇ ಹರಿನಾಮ ಭಜೇ ಹರಿ
ನಾಮ ಭಜೇ ಹರಿ ನಾಮ ಭಜೇ ಪ

ಕಾಮಿತದಾಯಕ ಕಾಮಧೇನು ಭಕ್ತ
ಪ್ರೇಮಮಂದಿರನ ನಾಮ ಭಜೇ ಅ.ಪ

ವಂದಿತ ಅಜಹರ ಮಂದರ ಗಿರಿಧರ
ಸುಂದರಮೂರುತಿಪಾದ ಭಜೇ
ಸಿಂಧುಶಯನ ಗೋಪೀಕಂದ ಮುಕ್ಕುಂದ
ಗೋವಿಂದನ ಆನಂದ ನಾಮ ಭಜೇ ೧

ಪಂಕಜಪಾಣಿಪಾದ ಕಿಂಕರಪಾಲಕ
ಳಂಕಮಹಿಮನಾಪಾದ ಭಜೇ
ಕೊಂಕಿನ ದೈತ್ಯರ ಬಿಂಕಮುರಿದ ಮಹ
ಶಂಖಪಾಣಿಯ ನಾಮ ಭಜೇ ೨

ಶೇಷಶಯನ ಜಗದೀಶ ಪರಮಪ್ರ
ಕಾಶ ನಿರಂಜನಪಾದ ಭಜೇ
ವಾಸುದೇವ ಭವನಾಶ ಜಾನಕಿಪ್ರಾ
ಣೇಶನ ವಿಮಲನಾಮ ಭಜೇ ೩

ನೀಲಮೇಘಶ್ಯಾಮ ಶೂಲಪಾಣಿಸಖ
ಬಾಲಗೋಪಾಲನ ಶ್ರೀಪಾದ ಭಜೇ
ಪಾಲ ಮೂಲೋಕನ ಮೇಲು ಮೇಲೆನ್ನುತ
ಕಾಲಕಾಲದಿ ಸುನಾಮ ಭಜೇ ೪

ಜಯ ಜಯ ಅಚ್ಯುತ ಜಯ ಜಯ ಸಚ್ಚಿತ್ತ
ಜಯ ಜಯಾನಂತನ ಪಾದ ಭಜೇ
ಜಯ ಜಯ ಸ್ಮರಪಿತ ಜಯ ಜಯ ಮುಕ್ತಿನಾಥ
ಜಯವೆಂದು ಶ್ರೀರಾಮ ನಾಮ ಭಜೇ ೫

೪೫

ನಿಗಮವಿನುತ ಜಗವ ಭರಿತ
ಬಗೆದು ಸಲಹೈ ವೆಂಕಟೇಶ ಪ

ಶ್ರೀನಿವಾಸ ದೀನಪೋಷ
ಧ್ಯಾನದಾಯಕ ವೆಂಕಟೇಶ
ಮಾನದಿಂ ಪೊರೆ ಜ್ಞಾನಪಾಲಿಸಿ
ನೀನೆಗತ್ಯನಗೆ ವೆಂಕಟೇಶ ೧

ಕಮಲನಾಭ ಕಮಲವದನ
ಕಮಲಜಪಿತ ವೆಂಕಟೇಶ
ಕಮಲಪಾಣಿ ಕಮಲನೇತ್ರ
ಅಮಿತಮಹಿಮ ವೆಂಕಟೇಶ ೨

ಹೇಸಿಭವನ ವಾಸನ್ಬಿಂಗಿಸು
ವಾಸುದೇವ ವೆಂಕಟೇಶ
ತಂದೆ ನಿಮ್ಮ ಹೊಂದಿ ಭಜಿಪಾ
ನಂದ ಕರುಣಿಸು ವೆಂಕಟೇಶ ೩

ಕುಂದು ನಿಂದೆ ದಂದುಗಂಗಳ
ಬಂಧ ತಪ್ಪಿಸು ವೆಂಕಟೇಶ

ತಂದೆ ನಿಮ್ಮ ಹೊಂದಿ ಭಜಿಪಾ
ನಂದ ಕರುಣಿಸು ವೆಂಕಟೇಶ ೪

ಸತ್ಯ ಸನ್ಮಾರ್ಗ್ಯಕ್ತನೆನಿಸೆನ್ನ
ಮೃತ್ಯು ಸಂಹರ ವೆಂಕಟೇಶ
ನಿತ್ಯ ನಿಮ್ಮಡಿಭಕ್ತನೆನಿಸೆನ್ನ
ಕರ್ತು ಶ್ರೀರಾಮ ವೆಂಕಟೇಶ ೫

೪೬

ನಿನ್ನ ಕೃಪೆಯಿರೆ ಬಲುಸುಖ ಈ ಸಂಸಾರ
ನಿನ್ನ ಕೃಪೆಯಗಲಿದರೆ ಘನಗೋಳು ಹರಿಯೆ ಪ

ಅಲ್ಲ ಅಹುದಾಗುವುದು ಸುಳ್ಳೆ ಖರೆಯಾಗುವುದು
ಎಲ್ಲಸಿರಿ ಒದಗುವುದು ಒಲ್ಲೆನಲು ಬಿಡದೆ
ಪುಲ್ಲನಾಭನ ಒಲುಮೆವುಳ್ಳ ಮಾನವರಿಗೆ
ಕಲ್ಲಿನೊಳು ಜಲಪುಟ್ಟಿ ಹೊಳೆಯಾಗಿ ಹರಿಯುವುದು ೧

ಹೀನನಾದರು ಬಹುಮಾನ ಸಿಗುವುದು ಗೊಡ್ಡು
ಧೇನುಗಳೆಲ್ಲ ಬಿಡದೆ ಹೈನಗರೆಯುವುವು
ದೀನನಾಥನು ಒಲಿಯೆ ನಾನಾ ಸಿರಿಸೌಭಾಗ್ಯ
ತಾನೆ ಬರುವುದು ತೆಂಗಿನೊಳುದಕದಂತೆ ೨

ವಿಷವೆ ಅಮೃತವಹುದು ಕಸವೆ ಕರ್ಪೂರವಹುದು
ವಿಷಮ ವಿಷಯದ ಎಡರು ಹಸನಹುದು ನಿಖಿಲ
ವಸುದೆಗಧಿಕ ನಮ್ಮ ಬಿಸಜಾಕ್ಷ ಶ್ರೀರಾಮ
ನೊಶವಾದ ಬಳಿಕ ನಿಜ ಅಸಮ ಮುಕ್ತಿಹುದು ೩

೪೭

ನಿನ್ನದೇ ಹಂಗೆನಗೆ ಶ್ರೀಹರಿ
ನಿನ್ನದೇ ಹಂಗೆನಗೆ ಪ

ನಿನ್ನದೇ ಹಂಗೆನಗುನ್ನತ ಸುಖವಿತ್ತು
ಮನ್ನಿಸಿ ದಯದಿಂದೆನನುದ್ಧರಿಸಯ್ಯ ಅ.ಪ

ಜಿಹ್ವೆಗೆ ನಿಮ್ಮಯ ಧ್ಯಾನದ ಸವಿಸಾರವಿತ್ತಯ್ಯಾ
ಭವಭವದಲ್ಲಿ ಪುಟ್ಟಿ ಜನಗೀಡೆನಿಸುವ
ದಯದಿ ಪಿಡಿದು ಎನ್ನ ಭವಭಯಹರಿಸಿದಿ ೧

ವಿಸ್ತಾರ ತವಚರಿತ ಪಾಮರನ್ಹಸ್ತದಿಂ ಬರೆಸುತ್ತ
ಅಸ್ತವ್ಯಸ್ತವೆಲ್ಲ ನಾಸ್ತಿ ಮಾಡಿ ನೀನೆ
ಪುಸಿಯಾಗೆನ್ನಗೆ ಸ್ವಸ್ಥಪಾಲಿಸಿದಿ ೨

ಸದಮಲ ಶ್ರೀರಾಮ ಭಕುತಾಭಿ ಸದಮಲ ತವನಾಮ
ಸುದಯದಿಂದೆನ್ನಯ ವದನದಿ ನಿಲ್ಲಿಸಿ
ಸದಮಲವೆನಿಪ ಸಂಪದವಿಯ ನೀಡಿದಿ ೩

೪೮

ನಿನ್ನದೋ ನಿಖಿಲ ನಿನ್ನದೋ
ಕುನ್ನಿ ಮನುಜರಾಧೀನೇನಿಲ್ಲ ಶ್ರೀಹರಿ ಪ

ನೀನಿಟ್ಟ ರವಿಶಶಿಗಳು ಹರಿ
ನೀನಿಟ್ಟ ದಶದಿಕ್ಕುಗಳು ಹರಿ
ನೀನಿಟ್ಟ ಅಗ್ನಿಜ್ಯೋತಿಗಳು ಹರಿ
ನೀನಿಟ್ಟ ನದಿತಟಗಳು ಅಹ
ನೀನಿಟ್ಟ ಚಳಿಗಾಳಿ ನೀಕೊಟ್ಟ ಮಳೆಬೆಳೆ
ನೀನಿಟ್ಟ ಉತ್ಪತ್ತಿ ಸ್ಥಿತಿಲಯ ಸಕಲವು ೧

ನಿನ್ನ ಅಡಿಯೆ ಮಹಾಕ್ಷೇತ್ರ ಹರಿ
ನಿನ್ನ ನುಡಿಯೆ ವೇದಮಂತ್ರ ಹರಿ
ನಿನ್ನ ದೃಢವೆ ಸತ್ಯಯಾತ್ರೆ ಹರಿ
ನಿನ್ನ ಬೆಡಗು ಸ್ಮತಿಶಾಸ್ತ್ರ ಅಹ

ನಿನ್ನ ಅರಿವೆ ನಿತ್ಯ ನಿನ್ನ ಮರವೆ ಮಿಥ್ಯ
ನಿನ್ನ ಕರುಣ ಎಲ್ಲ ಪ್ರಾರಬ್ಧಗಳ ಗೆಲವು ೨

ನಿನ್ನ ನಾಮವೆ ಕ್ಷೇಮಕವು ಹರಿ
ನಿನ್ನ ನಾಮವೆ ಭವಗೆಲವು ಹರಿ
ನಿನ್ನ ನಾಮವೆ ಚಾರುಪದವು ಹರಿ
ನಿನ್ನ ನಾಮದ ಬಲವೆ ಬಲವು ಹರಿ
ನಿನ್ನ ನಾಮ ಗಾಯತ್ರಿ ನಿನ್ನ ನಾಮ ತಾರಕ
ನಿನ್ನ ನಾಮ ಭಕ್ತಿ ಯುಕ್ತಿ ಎನ್ನಯ್ಯ ಶ್ರೀರಾಮ ೩

೪೯

ನಿನ್ನ ಧ್ಯಾನ ಶುಭಮೂಹೂರ್ತ ನಿನ್ನ ಭಜನ ಶುಭದಿನವು ಪ

ನಿನ್ನ ನಾಮ ಜಯಕಾರವು ನಿನ್ನ ಸ್ಮರಣ ಶುಭತಿಥಿಯು
ನಿನ್ನ ಸ್ತುತಿಯೆ ಶುಭಕಾಲ ಅನ್ಯ ಎಲ್ಲ ಹುಸಿ ಮಾಧವದೇವ ಅ.ಪ

ನಿತ್ಯ ನಿರುಪಮ ನಿನ್ನ ನಿತ್ಯದಲ್ಲಿ ಪೊಗಳುವುದೆ
ಉತ್ತಮ ಶುಭವಾರವು
ಚಿತ್ತಜಪಿತ ನಿನ್ನ ಚಿತ್ತದಲಿ ನೆನೆಯುವುದೆ
ಅತ್ಯಧಿಕ ಪಕ್ಷಮಾಸವು
ಮೃತ್ಯುದೂರನೆ ನಿನ್ನ ಸತ್ಕಥೆಯನಾಲಿಪುದೆ ನ
ಕ್ಷತ್ರ ಶುಭಕರಣವು
ಭಕ್ತವತ್ಸಲ ನಿನ್ನ ಭಕ್ತಿಯಿಂ ಪಾಡುವುದೆ
ನಿತ್ಯ ಅಮೃತಯೋಗವು ನಿಜವು ೧

ದಿವನಿಶೆಯ ಇಡದೊಂದೆಸವನೆ ನಿನ್ನರಸುವುದೆ
ರವಿಚಂದ್ರ ಭೌಮ್ಯ ಒಲವು
ಭವಪರಿಹರ ಸಿರಿಧವ ನಿನ್ನ ಸಚ್ಚರಿತ
ಕವಿಗುರುಸೌಮ್ಯ ಬಲವು
ಬುವಿಯರಸ ನಿನ್ನಸಮ ಸುವಿಲಾಸ ಲೀಲೆ ಕೇ

ಳಾವುದಮಿತ ಶನಿಬಲವು
ಭುವಿಜಪತಿ ಭಕ್ತಿಯ ಭವಭವದಿ ರಾಹುಕೇತು
ನವಗ್ರಹಂಗಳ ಬಲವು ಗೆಲವು ೨

ಕರಿಧ್ರುವರ ಪೊರೆದ ತವಪರಮ ಬಿರುದುಗಳನ್ನು
ಸ್ಮರಿಸುವುದೆ ಭವದೂರವು
ಹರದಿಗಕ್ಷಯವಿತ್ತ ವರದ ನಿನ್ನಡಿ ದೃಢವು
ಸ್ಥಿರಶಾಂತಿ ಸುಖಸಾರವು
ಸುರಗಣಕೆ ಸೌಖ್ಯವನು ಕರುಣಿಸಿದ ನಿಮ್ಮ ಮೊರೆ
ಪರಲೋಕ ನಿಜಸ್ವಾದವು
ವರದ ಶ್ರೀರಾಮ ನಿಮ್ಮ ಚರಣದಾಸತ್ವದೆ
ವರಮುಕ್ತಿ ಕೈಸಾಧ್ಯವು ಸ್ಥಿರವು ೩

೫೦

ನಿನ್ನ ನಾಮದ ಸವಿ ಎಲ್ಲರರಿಯರಂತೆ
ಬಲ್ಲವರೆ ಬಲ್ಲರಂತೆ
ನಿನ್ನ ನಾಮದ ಸವಿ ಎಲ್ಲರರಿಯರಂತೆ ಪ

ಸ್ಥಿರಪದವನುಭವಿ ಧ್ರುವನು ಬಲ್ಲನಂತೆ
ಪರಮಕಂಟಕ ಗೆದ್ದ
ವರಪ್ರಹ್ಲಾದ ನಾಮನೆಲೆ ತಿಳಿದನಂತೆ
ಸ್ಥಿರಪಟ್ಟ ಪಡೆದಂಥ ವರವಿಭೀಷಣನು
ಸರಿಯಾಗಿ ನಾಮದ ಸವಿಯುಸುರಿದನಂತೆ ೧

ಅಂಬರೀಷನೆಂಬ ನೃಪನು ಬಲ್ಲನಂತೆ
ಪರಮಪಾವನಪಾದ
ಅಂಬುಜಾಕ್ಷಿಯಳಾದ ಅಹಲ್ಯೆ ಬಲ್ಲಳಂತೆ
ಅಂಬುಜಾಕ್ಷನ ಪಾದಸಂಭ್ರಮದಸವಿ
ಕುಂಭಿನಿಯೊಳು ಕರಿ ತುಂಬಬಲ್ಲನಂತೆ ೨

ಪರಮಜ್ಞಾನಿಯಾದ ವಿದುರ ಬಲ್ಲನಂತೆ
ವರನಾಮದ ಸವಿ
ತರುಣಿ ಪಾಂಚಾಲಿಯು ಅರಿತುಕೊಂಡಳಂತೆ
ಪರಿಯಲಿ ಅವರ ಧರ್ಮಜನು
ನಿರುತ ನಾಮಾಮೃತ ಅರಿತುಸುರಿದನಂತೆ ೩

ತುಂಬುರಾದಿಮುನಿಸುರರು ಬಲ್ಲರಂತೆ
ವಿಮಲನಾಮದ ಸವಿ
ಅಂಬುಜಾಸನ ಕಂಡು ಪೊಗಳುತಿರುವನಂತೆ
ಕುಂಭಿಜಾತೆ ಸಿರಿ ಅಂಬರೇಶನ ಸುತೆ
ಎಂಬುವರು ನಿನ್ನ ಅಂದ ಬಲ್ಲರಂತೆ ೪

ಚರಣದೆಡೆಯಲ್ಲಿರ್ದ ಗರುಡ ಬಲ್ಲನಂತೆ
ರಾಗರಹಿತನಾಗ
ವರಹನುಮಂತನು ಪೂರ್ಣಬಲ್ಲನಂತೆ
ಪರಿಯೇನಿರುವುದು ಅರಿತು ಭಜಿಪೆ ನಿನ್ನ
ಕರುಣದೆನತು ತೋರು ರಾಮನಾಮದ ಸವಿ ೫

೫೧

ನಿನ್ನಯ ಬಲವೊಂದಿದ್ದರೆ ಸಾಕಯ್ಯ ಸೀತಾನಾಥ ಮಿಕ್ಕ
ಅನ್ಯರ ಬಲವಿನ್ನ್ಯಾಕೆ ಬೇಕಯ್ಯ ಸೀತಾನಾಥ ಪ

ತನ್ನ ಮುಖವ ಕಂಡ ಜನರಿಂ ಕೇಳ್ವುದಕಿಂತ ಸೀತಾನಾಥ
ತನು ಉನ್ನತವಾದಂಥ ಕನ್ನಡ್ಯೊಂದೇ ಸಾಕೊ ಸೀತಾನಾಥ
ತನ್ನಿಷ್ಟಗರೆವಂಥ ಸುರಧೇನೊಂದೆ ಸಾಕೊ ಸೀತಾನಾಥ ಮತ್ತು
ಇನ್ನು ಬನ್ನಬಡುತಾನಂತಾಕಳ್ಯಾಕೊ ಸೀತಾನಾಥ ೧

ವರ ಹೆಣ್ಣು ಹೊನ್ನು ಮಣ್ಣಿನಕಿಂತ ಸೀತಾನಾಥ
ಸ್ಥಿರ ಸ್ಮರಿಸಿದ್ದನ್ನೀವಂಥ ಸುರತರೊಂದೆ ಸಾಕೊ ಸೀತಾನಾಥ
ಪರಮ ಚಿಂತಾಮಣಿಯ ಸಾಧ್ಯವೊಂದೆ ಸಾಕೊ ಸೀತಾನಾಥ
ಪರಿ ಪರಿ ಮಂತ್ರ ತಂತ್ರದಿ ಸಿದ್ಧಿಗಳ್ಯಾಕೊ ಸೀತಾನಾಥ ೨

ಪಾಮರ್ಥಲವು ಬಂಧುಬಳಗ ಬಲದಕಿಂತ ಸೀತಾನಾಥ ಮಹಾ
ಸ್ವಾಮಿಪ್ರೇಮವೆಂಬ ಪರುಷವೊಂದೆ ಸಾಕೊ ಸೀತಾನಾಥ
ಕಾಮಿಸ್ವಲವು ದೈವ ಭಜಿಸಲಿನ್ಯಾತಕೊ ಸೀತಾನಾಥ ಶ್ರೀ
ರಾಮ ನಿಮ್ಮಯ ನಿಜ ಧ್ಯಾನವೊಂದೆ ಬೇಕೊ ಸೀತಾನಾಥ ೩

೫೨

ನಿನ್ನ ಬೆನ್ನುಬಿದ್ದು ಧನ್ಯನಾದೆನು ಪನ್ನಂಗಶಯನ
ನಿನ್ನ ಬೆನ್ನುಬಿದ್ದು ಧನ್ಯನಾದೆನು ಪ

ಇನ್ನು ಭವದೊಳು ಅನ್ಯರಂಜಿಕೆಯನ್ನು ತಪ್ಪಿಸಿ
ನಿನ್ನ ಕರುಣವನು ತೋರಿದಿ ಸನ್ನುತಾಂಗ
ರೂಢಿಯೊಳು ನಾನು ಮೂಢನಾದೆನು ಧೃಢದಿ ನಿನ್ನ
ಗಾಢಮಹಿಮೆಯ ಅರಿಯದಲೆ ಇನ್ನು ಬಡಬಡಿಸಿಕೊಂಡು
ಕೇಡಿಗೊಳಗಾಗಿ ಕೆಡುತಲಿರ್ದೆನು ಬಿಡದೆ ಪರರನು
ಬೇಡಿ ಆಸೆಯಿಂ ಭಂಗಮಾಡುತ ಖೋಡಿಯಪ್ಪುದ ಕಂಡು ನೀನೆ
ಮೂಢನೊಳು ದಯಮಾಡಿ ಕರುಣವ
ನೀಡಿ ಕುರುಹನು ತೋರ್ದಿ ದೇವ ೧

ಹೊಂದಿಕೊಂಡೀ ಮಾಯಾಜಾಲವನು ಒಂದನರಿಯದೆ
ಮಂದಮತಿಯಾಗಿ ಕೆಡುತಲಿ ನಾನು
ಬಂಧನದ ಭವದ ಸಿಂಧುವಿನೊಳಗಾಡುತಿರ್ದೆನು
ನೊಂದು ಬೆಂದೆನು ಮಂದ ಭಾಗ್ಯನ ಮಂದಮತಿಗಳು
ಒಂದು ಉಳಿಯದಂತೆ ಮಾಡೆನ್ನ್ಹೃದಯ ಮಂದಿರದೊಳು
ನಿಂದು ನೀನೆ ಮುಂದಕ್ಹಾಕಿದಿ ಮಂದರೋದ್ಧಾರ ೨

ಮರುಳತನವನು ದೂರಮಾಡಿದಿ ಹರಿಯೆ ಎನ್ನ
ಸರುವ ದುರ್ಗುಣ ತರಿದು ಹಾಕಿದಿ ಕರುಣದೆನ್ನ
ದುರಿತಪರ್ವತಮೂಲ ಕಿತ್ತಿದಿ ಮರೆವು ಹರಿಸಿದಿ

ಪರಮ ಕರುಣಾಕರನೆ ನಿನ್ನುಪಕಾರ ಮರಿಯೆನಾವಕಾಲದಿ
ಪರರ ಬೇಡದ ಪದವಿ ನೀಡಿದಿ
ಶರಣಜನಪ್ರಿಯ ಸಿರಿಯರಾಮ ३

೫೩

ನಿನ್ನ ಸಮಾನ ದೇವರುಂಟೇನೋ ಎನ್ನಯ್ಯ ರಂಗ ಪ

ನಿನ್ನ ಸಮಾನ ದೇವರುಂಟೇ ಇನ್ನೀ ಭುವನಭವಾಂಡದೊಳಗೆ
ಬನ್ನ ಬಡಿಸದೆ ದಾಸಜನರ ನಿನ್ನ ಪ್ರಾಣಸಮ
ಮಾಡಿ ಪೊರೆಯುವಿ ಅ.ಪ

ಸೋಮಕಾಸುರ ದೈತ್ಯನ್ನ ವಧಿಸಿ ವೇದವನು ತಂದು
ನೇಮದಿಂ ಮತ್ತೀ ಸೃಷ್ಟಿ ನಿಲ್ಲಿಸಿ ಸಾಗರವ ಮಥಿಸಿ
ಪ್ರೇಮದಮೃತ ಸುರರಿಗುಣಬಡಿಸಿ ನಿಸ್ಸೀಮನೆನಿಸಿ
ಸೋಮಶೇಖರನಮಿತ ಕಷ್ಟವ ಪ್ರೇಮ ದೃಷ್ಟಿಯಿಂ ದೂರ ಮಾಡಿ
ಭೂಮಿತ್ರಯಕೆ ಕ್ಷೇಮ ನೀಡಿದಿ ಕಾಮಿತ ಭಕ್ತರ್ವರಪ್ರದಾತ ೧

ಎರಡೆ ಅಡಿಗಿಡಿಭುವನವನು ತುಳಿದಿ ಅಮಿತಮಹಿಮ
ಪರಮ ಉಗ್ರರೂಪ ಧರಿಸಿದಿ ಭಕುತಗಾಗಿ
ಅರಮನೆಯ ಸ್ತಂಭೊಡೆದು (ಮೂ) ಡಿದಿ ಪರಮದಯಾನಿಧಿ
ಚರಣದಾಸರ ಪೊರೆಯುಲೋಸುಗ ನರನ ರೂಪದಿ
ನಿರುತ ವಿಪಿನಕೆ ತೆರಳಿ ದಕ್ಷಿಣಶರಧಿ ಹೂಳಿಸಿ
ದುರಳರ್ಥಾವಳಿ ದೂರ ಮಾಡಿದಿ ೨

ದ್ವಾರಕೆಂಬ ಪುರವ ನಿರ್ಮಿಸಿ ಅದಕೊಡೆಯನೆನಿಸಿ
ಸಾರಭಕುತರ ಇಷ್ಟಪೂರೈಸಿ ಮಹಲೀಲೆ ನಡೆಸಿ
ಪರಮಕಂಟಕರನ್ನು ನಾಶಿಸಿ ಧರೆಭಾರಮಿಳಿಸಿ
ಪರಮಸುರಗಣಕ್ಹರುಷವಿತ್ತು ಧಾರುಣಿಯನು ಪರಿಶುದ್ಧಮಾಡಿ
ಕರುಣದಾಳುವಿ ಭುವನತ್ರಯವನು ಶರಣಜನಪ್ರಿಯ
ವರದ ಶ್ರೀರಾಮ ३

೫೪

ನೀ ದಯದಿ ನೋಡಿದರೆ ನಾ ಧನ್ಯ ಶ್ರೀರಂಗ
ನೀ ಮುಖವ ತಿರುವಲು ನಾ ಪರದೇಶಿ ವಿಮಲಾಂಗ ಪ

ವನಜಾಕ್ಷ ನೀ ಕೊಡಲು ಧನವಂತನೆನಿಸಿಹ್ಯದೀ
ಜನರೊಳಗೆ ಘನವಂತನೆನಿಸಿಕೊಂಬೆ ಅನುಗಾಲ ೧

ಹರಿ ನಿಮ್ಮ ವರಚರಣಕರುಣವಿರೆ ಧರೆಮೇಲೆ
ದುರುವಾದಿಗಳ ಜೈಸಿ ನಿರುತನೆನಿಪಿ ಅನವರತ ೨

ವರವೇದಸ್ಮೃತಿಶಾಸ್ತ್ರ ಸ್ಥಿರದರಿವು ನಿಜಜ್ಞಾನ
ವರಮುಕ್ತಿ ಲಭ್ಯತವಕರುಣದಿಂ ಶ್ರೀರಾಮ ೩

೫೫

ನೀನೆ ಕರುಣಿ ಗುರುವಾಸ
ದೀನಬಂಧು ಭಕುತಪೋಷ ಪ

ನೆರೆದು ಭಕುತಜನರು
ಸ್ಮರಿಪ ವರವ ನಡೆಸಿ
ದರುಶನಿತ್ತು ದುರಿತರಾಸಿ ಪರಿಹರಿಸಿ
ಪೊರೆವೆ ಸತತ ಪರಮ ಚರಿತ ೧

ಒಪ್ಪಿ ಕಾಸುರುಪ್ಪಿಬಿಡದೆ
ತಪ್ಪದೆ ಮೂರುಲೋಕದವರಿಂ
ಕಪ್ಪಕೊಳ್ಳುವಿ ಅಸಮಲೀಲ
ಅಪ್ಪ ತಿರುಪತಿ ತಿಮ್ಮಪ್ಪ ೨

ಮಾರನಯ್ಯ ಮರಣದೂರ
ಮೂರಜಗದ ಸಾರ್ವಭೌಮ
ಧೀರ ಶ್ರೀರಾಮ ನಿಮ್ಮ ಪಾದ
ವಾರಿಜದಾಸನೆನಿಸು ಎನ್ನ ೩

೫೬

ನೀನೆ ಗತಿಯೊ ಎನಗೆ ಜಾನಕೀಶನೆ ಎನ್ನ
ಮಾನದಿಂ ಕಾಯಲಿಕ್ಕೆ ಪ

ದೀನರ ಸಮಯಕ್ಕೆ ನೀನಾಗದಿರ್ದರೆ
ಜ್ಞಾನಿಗಳೊಪ್ಪುವರೇ ಜಾಹ್ನವೀಜನಕ ೧

ಮೃತ್ತಿಕೆ ಬಾಯೊಳು ತತ್ತರಬಹುತಿಹ್ಯೆ
ಭಕ್ತನ ಪಿಡಿದೆತ್ತಿ ತುರ್ತು ಸಲಹು ದೇವ ೨

ಉಗ್ರತಾಪದಿ ಸಮಗ್ರ ಪರಿಹರಿಸೆನ್ನ
ಶೀಘ್ರದಿ ಬಾ ಭಕುತಾಗ್ರಣಿ ಶ್ರೀರಾಮ ೩

೫೭

ನೀನೆ ದಯಾಶರಧಿ ತ್ರಿಜಗದಿ
ಧ್ಯಾನದಾಯಕ ಮಮಪ್ರಾಣ ಜಾನಕೀ ಜೀವ ಪ

ದೀನರ ಪಾಲಿಪ ಜಾಣ ಮಹಿಮ ಪ್ರಭು
ಕ್ಷೋಣಿಯೋಳ್ನಿನ್ನ ಸಮಾನ ದೇವರ ಕಾಣೆ ೧

ಒಲಿದು ಕಂಬದಿ ಬಂದಿ ಬಲಿಯ ಬಾಗಿಲ ಕಾಯ್ದಿ
ಲಲನಾಮಣಿಗೆ ಒಲಿದು ಕುಲವನುದ್ಧರಿಸಿದಿ ೨

ಕರಿಯು ಕರೆಯಲು ಬಂದಿ ತರುಣಿ ಬೆಂಬಲ ನಿಂದಿ
ಚರಣದಾಸರ ಪ್ರಿಯ ಕರುಣಿ ಶ್ರೀರಾಮ ೩

೫೮

ನೀನೆ ದಯ ಸಂಪನ್ನನೆಲೋ
ದೀನನಾಥ ಜಾಹ್ನವೀ ತಾತ ಪ

ಕಮಲಕಿಂತ ಮೃದು ನಿನ್ನ
ವಿಮಲಹೃದಯಭಕ್ತಿ ಜನಕೆ
ನಮಿಪೆ ನಿನ್ನ ಪಾದಕಮಲ
ವಿಮಲಸುಖದ ಪಥದೋರೋ ೧

ಕೊಟ್ಟು ಎನಗೆ ಶಿಷ್ಟಸಂಗ
ಇಟ್ಟು ನಿನ್ನ ಭಜನಾನಂದ
ನಿಷ್ಠೆ ಭಕುತಿ ನಿನ್ನ ಪಾದ
ದಿಟ್ಟ ದಾಸನೆನಿಸಿ ಕಾಯೋ ೨

ರಾಕ್ಷಸಾರಿ ಎನ್ನ ಮನದ
ಪೇಕ್ಷ ಪೂರ್ತಿಮಾಡಿ ಮೆರೆವ
ಮೋಕ್ಷಪುರಿಗೆ ತಲ್ಪಿಸೆನ್ನ
ಮೋಕ್ಷದಾಯಕ ಶ್ರೀರಾಮ ಪ್ರಭೋ ೩

೫೯

ನೀನೆ ನಿಜಗುರುವಾಗುಎನಗೆ
ಪ್ರಾಣನಾಥ ಮಮದೇವ ಮಾಧವ ಪ

ಮರವೆಯೆಂಬ ಪರದೆ ಹರಿದು
ಅರಿವುಯೆಂಬಾಲಯದೊಳಿರಿಸಿ
ದುರಿತಪರ್ವತ ತರಿದು
ಪೊರೆಯುವ ಚರಣದಾಸರ ಭಾಗ್ಯನಿಧಿಯೆ ೧

ಹೀನಸಂಸಾರೆಂಬುವ ಮಹ
ಕಾನನದಿ ಬಳಲಿಸದೆ ಅನುದಿನ
ಧ್ಯಾನಮೃತ ಪಾನಗೈಸುವ
ಧ್ಯಾನಿಪರ ಮಹಪ್ರಾಣದರಸೇ ೨

ಆವಕಾಲದಿ ಬಿಡದೆ ನಿಮಿಷ
ಜೀವ ಭಕುತರ ಭಾವದ್ವಾಸಿಸಿ

ಜಾವ ಜಾವಕೆ ಬುದ್ಧಿ ಕಲಿಸುವ
ದೇವದೇವರ ದಿವ್ಯದೇವರೆ ೩

ಸಕಲಕೋಟಿಮಂತ್ರಗಳಿಗೆ
ನಿಖಿಲ ನೀನೆ ಆಧಾರನಾಗಿ
ಅಖಿಲರೂಪದಿ ಜಗವ ಬೆಳಗುವ
ಭಕುತಿದಾಯಕ ಸುಖದ ಶರಧಿಯೆ ೪

ಸಾರಿ ಭಜಕರ ಭಾರವಹಿಸಿ
ಘೋರಭವಸಾಗರವ ಗೆಲಿಸಿ
ಸಾರತರಮೋಕ್ಷವನು ಕರುಣಿಪ
ಧೀರ ಶ್ರೀಗುರುರಾಮ ಪ್ರಭುವೇ ೫

೬೦

ನೀನೆ ಪಾಲಿಸು ಕರುಣಾವಾರಿಧಿ
ದೀನಜನರಾಧಾರ ಹರಿಯೆ ಪ

ನಿನ್ನಾಧೀನವು ತೋರ್ಪುದೆಲ್ಲ
ಮಾನವನ ಸ್ವಾಧೀನವೇನಿದೆ
ನಿನ್ನ ನೆರಳಲಿ ಮೂರು ಜಗವು
ಭಿನ್ನವಿಲ್ಲದೆ ಬದುಕಿ ಬಾಳ್ವುದು ೧

ನಿನ್ನ ಸಹಾಯವಿಲ್ಲದೀ ಭವ
ವನ್ನು ಗೆಲಿಯುವ ಸಾಧ್ಯದಾರಿಗೆ
ನಿನ್ನ ಕೃಪಾಕಟಾಕ್ಷದಿಂದಲೆ
ಮುನ್ನ ಹಿರಿಯರು ಧನ್ಯರಾದರು ೨

ಮರ್ತ್ಯಲೋಕಕ್ಕೆಳೆದು ತಂದೆನ್ನ
ಮರ್ತುಬಿಡುವುದುಚಿತವೇನಯ್ಯ
ನಿರ್ತಸುಖವಿತ್ತು ರಕ್ಷಿಸಭವ
ಕರ್ತು ಶ್ರೀಗುರು ರಾಮ ಪ್ರಭುವೆ ೩

೬೧

ನೀನೆ ಭಕುತಾಭಿಮಾನಿ ಕರುಣಿ ಪ

ಮರೆಬಿದ್ದ ಭಕುತರ ಪೊರೆಯಲು ತವಸಮ
ಕರುಣಿ ದೇವರ ಕಾಣೆ ಧರೆ ಎರಡೇಳರೊಳ್ ೧

ಶಿಲೆಯನು ಪೆಣ್ಣೆನಿಸಿ ಕುಲದೊಳು ಕಲೆಸಿದಿ
ಸಲಹಿದಿ ಗಜನ ಮಹ ವಿಲಸಿತಮಹಿಮ ಪ್ರಭು ೨

ಮೊರೆಯಿಟ್ಟು ಸ್ಮರಿಸುವ ಚರಣದಾಸನ ಆಸೆ
ಕರುಣದಿಂ ಪೂರೈಸು ಪರತರ ಶ್ರೀರಾಮ ೩

೬೨

ನೀನೆ ಸ್ವತಂತ್ರ ಸರ್ವೇಶ
ಧ್ಯಾನಮಾಳ್ಪದಾಸರ ಪ್ರಾಣ ಪ

ಭುವನ ತ್ರಯದಿ ಬಿಡದೆ ಒಂದೇ
ಸಮದೆ ದೃಢದಿ ವೇದಸ್ಮೃತಿ
ಭಯನಿವಾರಣನೆಂಬ ಬಿರುದು
ಜಯಭೇರಿ ನುಡಿಸುತಿಹ್ಯವು ೧

ರಂಗ ನಿನ್ನ ದಾಸಜನಕೆ
ಭಂಗವೇನು ಭುವನತ್ರಯದಿ
ಮಂಗಲಮಹಿಮ ಭಕುತಾಂತ
ರಂಗ ಭಜಿಪೆ ಭಂಗ ಗೆಲಿಸು ೨

ಮಾಯ ನಾಟಕವಾಡುವ ಮಹ
ಮಾಯಾಮಹಿಮ ಶ್ರೀರಾಮ ತಂದೆ
ಮಾಯಮೋಹಿಗಳಿಂದುಳಿಸಿ ಎನ್ನ
ಕಾಯೊ ಕೈಯ ಪಿಡಿದು ಸತತ ೩

೬೩

ನೋಡಿರೆ ಯಶೋದೆಯ ಪುಣ್ಯ
ಪಡೆದಿಹ್ಯಳೆಂಥ ಮಾನ್ಯ ಪ

ಪೊಡವಿ ಈರೇಳನ್ನು ಒಡಲೊಳಿಟ್ಟವನನ್ನು
ತೊಡೆಮೇಲಾಡಿಸುವಳು ಅ.ಪ

ವಿಲಸಿತಮಹಿಮನ ಕಳೆಯ ತಿಳಿಯಲು ವೇದ
ಬಲುವಿಧ ಪೊಗಳುತ ನೆಲೆಯುಗಾಣದ ಘನ
ಕಳವಳಗೊಳುತಿಹ್ಯವಭವನ ದೆಸೆಯಿಂ
ಸುಲಭದೆತ್ತಿ ತನ್ನ ಮೊಲೆಯನುಣಿಸುವಳೀಕೆ ೧

ಭುಜಗಭೂಷನು ತನ್ನ ನಿಜಪದವನುದಿನ
ಭಜಿಸಿ ಬೇಡಲು ಕಾಣರಜಸುರಮುನಿಗಣ
ಸುಜನಗುಣಾಂತರಂಗ ತ್ರಿಜಗವ್ಯಾಪಕನ
ನಿಜವನು ಮನದಣಿ ಕಂಡು ಹಿಗ್ಗಿದಳೀಕೆ ೨

ಸೀಮರಹಿತಮಹಿಮ ನಾಮರೂಪಿಲ್ಲದ ನಿ
ಸ್ಸೀಮ ಸುಗುಣಸುಖಧಾಮ ಭೂಮಿಜೆಪತಿ
ಸ್ವಾಮಿ ಶ್ರೀರಾಮನ ವಿಮಲದಾಟದಲಿ
ಭೂಮಿಯೊಳ್ಹಿಗ್ಗಿಲಾದಾನಂದೊಳಿಹಳೀಕೆ ೩

೬೪

ಪಾಠವ ಕೊಡು ಹರಿಯೆ ಮುಂದೆನಗೆ
ಸಾಟಿಯಿಲ್ಲದೆ ನಿನ್ನ ಆಟಕಾಣುವ ವಿದ್ಯೆ ಪ

ಸುಜನ ಸನ್ನುತ ತವ ನಿಜಮಹಿಮೆನ್ನ ಮನದಿ
ನಿಜಪಿಡಿದನುದಿನ ಭಜಿಪ ಸುವಿದ್ಯ ೧

ನಿಪುಣತೆಯಲಿ ನಿಮ್ಮ ಸಫಲಸಚ್ಚರಿತವ
ಅಪರೋಕ್ಷದ್ಪೊಗಳುವ ಗುಪಿತ ಸುವಿದ್ಯ ೨

ಪ್ರಾಣೇಶ ಶ್ರೀರಾಮ ಮಾಣದೆ ತವಪಾದ
ಧ್ಯಾನ ಸದೃಢಭಕ್ತಿ ಜ್ಞಾನ ಸುವಿದ್ಯ ೩

೬೫

ಪಾದಪ್ರೇಮ ಪಾಲಿಸು ಪಾದಪ್ರೇಮ ಪ

ಪಾಪವಿರಾಮ ಪಾವನನಾಮ ಅ.ಪ

ಸ್ಮರಿಪರ ಪ್ರೇಮ ವರಬಲಭೀಮ
ವರ ನೀಲಶ್ಯಾಮ ರಘುಕುಲಸೋಮ
ಶರಣರ ಸುರತರು ಜಗದೋದ್ಧಾಮ ೧

ಗೋವುಗಳ ಪಾಲ ಗೋಕುಲಬಾಲ
ಪಾವನಮಾಲ ಗಾನವಿಲೋಲ
ಸಾವಿರನಾಮಕ ಸುಜ್ಞಾನಸಪಾಲ ೨

ಸಾಗರ ಕನ್ನಿಕಾ ಪ್ರಾಣರಮಣ
ನಾಗಾರಿಗಮನ ನಾಗಶಯನ
ಆಗಮನುತ ಮಮಪ್ರಾಣ ಶ್ರೀರಾಮ ನಿನ್ನ ೩

೬೬

ಪಾದವ ತೋರೋ ಪಾವನಮಹಿಮೆ ಪ

ಪಾದವ ತೋರೋ ರಂಗಯ್ಯ
ಪಾದಕೆ ಬಿದ್ದು ಪಾವನನಾಗುವೆ ಪಾದವ ತೋರೋ ಅ.ಪ

ಥಳಥಳ ಹೊಳೆಯುತ ಜಲದಿ ಸಂಚರಿಸಿದ
ಪಾದವ ತೋರೋ ಎನ್ನಯ್ಯ
ಬಲುಗೌಪ್ಯದಿ ಒಳಗೆಳೆದು ಮುದುರಿಕೊಂಡ
ಪಾದವ ತೋರೋ
ಬಲಿಯಮೆಟ್ಟಿ ರಸಾತಳಕಿಳಿಸಿದ ಘನ

ಪಾದವ ತೋರೋ ಎನ್ನಯ್ಯ
ಇಳೆಯ ಮೇಲೆ ಬಿದ್ದ ಶಿಲೆಯ ತುಳಿದ
ಮಹಪಾದವ ತೋರೋ ೧

ಗಾಬರಿಯಿಂದ ಭರತ ಬಂದೆರಗಿದ
ಪಾದವ ತೋರೋ ಎನ್ನಯ್ಯ
ಶಬರಿ ಭಕ್ತಿಯಿಂದ ಮುಟ್ಟಿ ಪೂಜಿಸಿದ ಪಾದವ ತೋರೋ
ಪ್ರಭು ಹನುಮಂತನ ಹೃದಯದೋಳ್ಹೊಳೆಯುವ
ಪಾದವ ತೋರೋ ಎನ್ನಯ್ಯ
ನಭೋಮಾರ್ಗದಿ ನಿಂದು ವಿಭೀಷಣ ನಮಿಸಿದ
ಪಾದವ ತೋರೋ ೨

ಕರಿರಾಜ ಸ್ಮರಿಸಲು ಸರಸಿಗೆ ಇಳಿದ
ಪಾದವ ತೋರೋ ಎನ್ನಯ್ಯ
ಉರಗನ ಶಿರಮೆಟ್ಟಿ ಪರಿಪರಿನಲಿದ ಪಾದವ ತೋರೋ
ಗರುಡನ ಏರಿ ಗಮಿಸುವ ಪರತರ
ಪಾದವ ತೋರೋ ಎನ್ನಯ್ಯ
ಪರಮಪಾವನೆ ಸುರಗಂಗೆಯನು ಪೆತ್ತ ಪಾದವ ತೋರೋ ೩

ಸದಮಲ ರಾಧೆ ತನ್ನ್ವದನದಿಂ ಚುಂಬಿಸಿದ
ಪಾದವ ತೋರೋ ಎನ್ನಯ್ಯ
ವಿದುರನ ಸದನವ ಸುದಯದಿಂದ ಪೊಕ್ಕ ಪಾದವ ತೋರೋ
ಅಧಮಪೂತನಿಯ ಕೊಂದೊದೆದ
ಪಾದವ ತೋರೋ ಎನ್ನಯ್ಯ
ವಿಧವಿಧದೆಶೋದೆ ತೊಡೆಯ ಮೇಲಾಡಿದ
ಪಾದವ ತೋರೋ ೪

ಧರೆಯನು ಮೀಂಟಿ ಕುರುಪನ ಕೆಡಹಿದ
ಪಾದವ ತೋರೋ ಎನ್ನಯ್ಯ
ಧುರದಲಿ ನರನ ವರೂಥ ನೆಲಕೊತ್ತಿದ ಪಾದವ ತೋರೋ

ಚರಣದಾಸರಿಗೆ ಪರಮಮುಕ್ತಿನೀಯ್ವ
ಪಾದವ ತೋರೋ ಎನ್ನಯ್ಯ
ವರದ ಶ್ರೀರಾಮನ ಮರೆಯಬಿದ್ದ ನಿಜ ಪಾದವ ತೋರೋ ೫

೬೭

ಪಾದಕಂಡು ಪಾವನಾದೆನು ಶ್ರೀಗಿರಿಯ ನಿಲಯನ
ಪಾದಕಂಡು ಪಾವನಾದೆನು ಪ

ಪಾದಕಂಡು ಪಾವನಾದೆನು
ಮಾಧವನ ಪ್ರಸಾದ ಪಡೆದೆನು
ಹಾದಿಗಾಣದೆ ಪರಮ ದುರ್ಭವ
ಬಾಧೆಯೊಳು ಬಿದ್ದು ತೊಳಲಿ ಬಳಲುತ
ಮೇದಿನಿಯೊಳು ಜನುಮ ತಾಳಿ
ಭೇದಮತದ ಹಾದಿಬಿಟ್ಟು ಅ.ಪ

ನೀಲಬಣ್ಣದೊಪ್ಪುವ ಸುಂದರ ಶುಭಕಾಯ ಇಂದಿರೆ
ಲೋಲ ತ್ರಿಜಗಮೋಹನಾಕಾರ ಕೊರಳಪದಕ
ಮಾಲ ಕೌಸ್ತುಭ ಮುಕುಟಮಣಿಹಾರ ರತ್ನದುಂಗುರ
ಕಾಲೊಳ್ಪೊಳೆಯುವ ಗೆಜ್ಜೆಸರಪಳಿ
ಶೀಲವೈಷ್ಣವ ನಾಮ ಪಣೆಯಲಿ
ಕಾಳರಕ್ಕಸಕುಲಸಂಹಾರನ
ಪಾಲಸಾಗರಕನ್ನೆವರನ
ಪಾಲಮೂಲೋಕಸಾರ್ವಭೌಮನ
ಮೇಲು ಭೂವೈಕುಂಠದಲ್ಲಿ ೧

ಉಟ್ಟದುಕೂಲ ಶಲ್ಯ ಜರತಾರ ಕೈಯಲ್ಲಿ ಕಂಕಣ
ಪಟ್ಟ ರತ್ನದ ನಡುವಿಗುಡಿದಾರ ವರ್ಣಿಸುವರಾರು
ಸೃಷ್ಟಿಯೊಳಗೀತ ಮೀರಿದವತಾರ ಇನಕೋಟಿ ಪ್ರಭಾಕರ
ಬಿಟ್ಟು ವೈಕುಂಠ ಇಹ್ಯಕೆ ಸಾಗಿ

ಬೆಟ್ಟದ ಮೇಲೆ ವಾಸನಾಗಿ
ಕೊಟ್ಟು ವರಗಳ ಮೂರು ಜಗಕೆ
ಶೆಟ್ಟಿಯಂದದಿ ಕಾಸುಕೊಳ್ಳುವ
ದುಷ್ಟಭ್ರಷ್ಟ ಶಿಷ್ಟರೆಲ್ಲರ
ಇಷ್ಟದಾಯಕದಿಟ್ಟ ದೇವನ ೨

ಒಂದೆ ಮನದಲಿ ಸಕಲ ಸೇವಕರು ಭಯಭಕುತಿಯಿಂದ
ಬಂದು ಹರಕೆಯ ತಂದು ನೀಡುವರು ತುಂಬರನಾರದ
ರೊಂದಿಗಾನದಿಂ ಪಾಡಿ ಪೊಗಳುವರು ಆನಂದ ಕೋರುವರು
ಹೊಂದಿ ಭಜಿಸುತ ಸಪ್ತಋಷಿಗಣ
ಬಂದು ಇಳಿವರು ಬಿಡದೆ ಅನುದಿನ
ವಂದ್ಯ ನಿಗಮಾದಿಬಂಧು ಭಜಿಪರ
ಕಂದುಗೊರಳಾದಿ ಬ್ರಹ್ಮಸುರರಿಂ
ಗಂಧಪರಿಮಳ ಕುಸುಮ ದ್ರವ್ಯಗ
ಳಿಂದ ಸೇವೆಯ ಗೊಂಬದೇವನ ೩

ಉದಯಕಾಲದಿ ಬಾಲನವತಾರ ಮಧ್ಯಾಹ್ನಕಾಲದಿ
ಸದಮಲಾಂಗ ಯೌವನಾಕಾರಸುಸಂಧ್ಯಾಕಾಲದಿ
ಮುದುಕನಾಗಿ ಕಾಂಬ ಮನೋಹರ ಬಹುಮಹಿಮಗಾರ
ಪದುಮವದನ ಮದನನಯ್ಯ
ಪದುಮವತಿಯ ಪ್ರಾಣಪ್ರಿಯ
ಒದಗಿಬಂದ ಭಕುತಜನರನು
ಸುದಯದಿಂದ ಕರೆದು ಪ್ರಸಾದ
ಮುದದಿ ನೀಡುತ ಕೃಪೆಯದೋರಿ
ಸದಮಲಸಂಪದವನೀವನ ೪

ತೀರದೀತನ ಲೋಕಶೃಂಗಾರ ಏರಿ ನೋಡಲು
ಪಾರಗಿರಿತುದಿ ಗಾಳಿಗೋಪುರ ಮುಂದೆ ನಡೆಯಲು
ದಾರಿಯಲಿ ಕೊಳ್ಳ ಏಳು ವಿಸ್ತಾರ ಪರಮಪರತರ
ತೋರುವ ಮಹ ಗುಡಿಯು ಗೋಪುರ

ದ್ವಾರ ಚಿನ್ನದ ಕಳಸ ಬಂಗಾರ
ಗಾರು ಮಾಡದೆ ದಾಸಜನರನು
ತಾರತಮ್ಯದಿ ಪೊರೆಯಲೋಸುಗು
ಸೇರಿಧಾರುಣಿ ವೈಕುಂಠವೆನಿಸಿದ
ಧೀರವೆಂಕಟ ಶ್ರೀಶ ರಾಮನ ೫

೬೮

ಪಾಲಿಸು ಶ್ರೀಪಾದಭಜಕೋದ್ಧಾರಣ ಪ

ಮನುಮುನಿವಿನಮಿತ ಘನಗುಣಚರಿತ
ಕನಿಕರಸದನ ೧

ದೀನಜನಾಧಾರ ದಾನವಭಂಜನ
ಜಾಹ್ನವೀಜನಕ ೨

ಕಾಮಿತದಾಯಕ ಕೋಮಲನಾಮ
ಸ್ವಾಮಿ ಶ್ರೀರಾಮ ೩

೬೯

ಪಿಡಿಯೆನ್ನ ಕೈಯ ಬಿಡಬೇಡೆನ್ನಯ್ಯ
ಮೃಡನ ಭಕ್ತರ ಒಡೆಯ ಪಂಢರಿರಾಯ ಪ

ಘೋರ ಬಡುವೆ ಸಂಸಾರಶರಧಿಯೊಳು
ಮೀರಿತು ಈ ಬಾಧೆ ಸೈರಿಸೆ ಮಹರಾಯ ೧

ಹಲವು ವಿಧದಿ ಕಷ್ಟಕ್ಕೊಳಗಾಗಿ ಅತಿಶಯ
ಬಳಲುವ ಬಾಲನ ಉಳಿಸಿಕೊ ಮಹರಾಯ ೨

ಬರುವ ಸಂಕಟದೆನ್ನ ಪಾರುಮಾಡುವಂಥ
ಭಾರನಿನ್ನದು ಸರ್ವಧೀರ ಶ್ರೀರಾಮಯ್ಯ ೩

೭೦

ಪೊರೆ ಸುರೇಶ ಶ್ರೀಶ ಶ್ರೀನಿವಾಸ
ದುರಿತವಿನಾಶ ಪರಮಪ್ರಕಾಶ ಪ

ಅನುದಿನ ನಿಮ್ಮಯ ನೆನವಿನಘನಸುಖ
ಕರುಣಿಸಿ ಎನ್ನ ಕನಿಕರದೊಡನೆ ೧

ಚಿಂತೆನಿವಾರಣ ಚಿಂತೆನೀಗಿಸಿ ಎನ್ನ
ಸಂತತದಿಂಪೊರೆ ಸಂತರ ಪ್ರಿಯಕರ ೨

ಹರಣಹೋದರು ನಿಮ್ಮ ಚರಣಭಕ್ತಿಯನು
ಮರೆಯದದಟ ಮಿಗೆ ಕರುಣಿ ಶ್ರೀರಾಮ ೩

೭೧

ಪೋಷಿಸೆನ್ನ ವೆಂಕಟೇಶ ಶ್ರೀಶ ಶ್ರೀನಿವಾಸ
ಶೇಷಗಿರಿನಿಲಯ ಶ್ರೀ ಇಂದಿರೇಶ ಈಶ ಪ

ಹೇಸಿಯಿವನೆಂದೆನುತ ದೂಷಣೆಯ ಮಾಡದಿರು
ದೋಷದೂರನೆ ನಿನ್ನ ದಾಸ ನಾನಭವ
ದಾಸಜನರ ಮನದುಲ್ಲಾಸದೇವರು ನೀನು
ದಾಸನ ಆಸೆಯನು ಪೂರೈಸಿ ಸಲಹಯ್ಯ ೧

ಕುನ್ನಿಕುಲದಲಿ ಜನಿಸಿ ಬನ್ನಬಡಲಾರದೆ
ಉನ್ನತೋನ್ನತಮಹಿಮ ನಿನ್ನ ಬೆನ್ನು ಬಿದ್ದೆ
ಭಿನ್ನತಾರದೆ ಎನಗೆ ನಿನ್ನ ದರ್ಶನವಿತ್ತು
ಉನ್ನತಮತಿ ನೀಡಿ ಮನ್ನಿಸಿ ಸಲಹು ೨

ನರರ ಹಂಗನು ಬಿಡಿಸಿ ಕರುಣಿಸೆಲೊ ನಿತ್ಯ ತವ
ಶರಣಜನರುಂಡು ಮಿಕ್ಕ ಪರಮಪ್ರಸಾದ
ಶರಣೆಂದು ಚರಣಕ್ಕೆ ಮರೆವೊಕ್ಕೆ ನೆರೆನಂಬಿ
ತಿರುಪತೀಶನೆ ಭಕ್ತ ಕರುಣಿ ಶ್ರೀರಾಮ ೩

೭೨

ಬಲು ಚಂದ ಮಹದಾನಂದ ಶ್ರೀಹರಿ ಭಜನೆ ಪ

ಬಲು ಚಂದ ಬಲು ಚಂದ ಮಹದಾನಂದ
ಜಲಜನಾಭನ ನಾಮ ನಲಿನಲಿದ್ಹೊಗಳ್ವುದು ಅ.ಪ

ಬಲಿಯ ಕಾಯ್ದನ ನಾಮ ಬಲು ಚಂದ
ಲಲನೆಗೊಲಿದನ ಧ್ಯಾನ ಆನಂದ
ಕಲುಷಹರಣ ಕರಿಪಾಲನೆಂದೊದರಲು
ಗಳಿಲನೆ ಪರಿಹಾರ ಭವಬಂಧ ೧

ಮಾವಮರ್ದನನಾಮ ಬಲು ಚಂದ
ಗೋವಳರೊಡೆಯನ ಧ್ಯಾನ ಆನಂದ
ಗೋವುಪಾಲನೆಂದು ಭಾವಿಸಿ ಕೂಗಲು
ಸಾವು ಹುಟ್ಟು ಇಲ್ಲ ಎಂದೆಂದು ೨

ಕಾಮಪಿತನ ನಾಮ ಬಲು ಚಂದ
ಕಾಮಿತಾರ್ಥನ ಧ್ಯಾನ ಆನಂದ
ಭೂಮಿಗಧಿಕ ನಮ್ಮ ಸ್ವಾಮಿ ಶ್ರೀರಾಮನ ಪಾದ
ನೇಮದಿ ನುಡಿಯೆ ಮುಕ್ತಿಪದ ಆನಂದ ೩

೭೩

ಬಾಲನಮ್ಮ ಬಾಲಕೃಷ್ಣ ಬಹಳ ಮಾಯಕಾರನೀತ ಪ

ಬಾಲನೀನೆ ಗೋಪಾಲ ನೀಲಶ್ಯಾಮ ವನಮಾಲ
ಬಾಲನಂತೆ ಕಣ್ಗೆತೋರಿ ಆಲಯ ಗೌಪ್ಯದಿಂದ ದೂರಿ
ಬಾಲೆರುಟ್ಟ ದುಕೂಲ ಬಿಡಿಸಿ ಬಿಗಿದಪ್ಪಿ ಅಧರ ಸುರಿವ ಅ.ಪ

ಮಿಂದು ಮಡಿಯನುಟ್ಟಾನಂದದಿ ಶೋಭಿಸುವ
ಅಂದಮಾದ ಹಂಸತಲ್ಪದಿ ಪವಡಿಸಿರುವ
ಇಂದು ಮುಖಿಯವರ ಬಳಿಗೆ ಮುದದಿ ಮಂದಹಾಸದಿ

ಬಂದು ಚೆಂದದ ತೊದಲುನುಡಿಯಿಂದ
ಮೋಹ ಮಾತನಾಡಿ
ಇಂದುಮುಖಿಯರಂ ಮೋಹಪಾಶದಿಂದ
ಬಾಧಿಸಿ ಕಂದರ್ಪನ್ಹೇವದಿ
ಕುಂದರದನೆಯರಂದಗೆಡಿಸಾನಂದ ಮನಸು
ಸುಲಿದುಕೊಂಡವ ೧

ನಲಿನಲಿದು ಬೀಳುತೇಳುತ ಲಲನೆಯರಿಗೀ
ಸುಲಿಯಪಲ್ಲು ತೋರಿನಗುತ ದಾರಿ ತರುಬಿ
ಚೆಲುವಾದಾಟಗಳನೆ ಆಡುತ ಕೊಳಲನೂದುತ
ಲಲಿತಾಂಗಿಯರೊಲುಮೆ ಮಾಡಿ ನಿಲ್ಲಿಸಿ
ಅರಿವು ಮರವೆಮಾಡಿ
ತಿಳಿಯದ್ಹಾಗೆ ಘಳಿಲಿನ್ಹಾರಿ ಎಳೆದು ಏಕಾಂತಸ್ಥಳಕ್ಕೊಯ್ದು
ಹಲವು ಕ್ರೀಡದಿಕಳೆಯ ಸೆಳೆದು ಗಲ್ಲಕಚ್ಚುವ ಜಿಗಿದು ಓಡುವ ೨

ಹಿತದಿ ಆಡುವ ಸುತರ ಕೆಣಕುವ ಬಿಡಿಸಲ್ಹೋದ
ಸತಿಯರ ಮೈಮೇಲೆ ಬರುವ ಸಣ್ಣವನೇನೇ
ಪತಿ ನಾ ನಿಮಗೆಂದ್ಯವ್ವನ ತಾಳುವ ವ್ಯಥೆಯಬಡಿಸುವ
ವ್ರತದಕನ್ನೆಯರವ್ರತವ ಕೆಡಸಿ ಹಿತದಿಹಾಕಿದ
ಮೀಸಲು ಮುರಿಸಿ
ಸತತ ಗೋಪಿಕಾ ಸತಿಯರೆಲ್ಲರಿಗ್ಹಿತದ
ದೇವರು ತಾನೆಯೆನಿಸಿ
ನುತಿಪ ಭಕ್ತರಿಗುನ್ನುತ ಮುಕ್ತಿಗತಿಯ ನೀಡುವ
ಪತಿತ ಶ್ರೀರಾಮ ೩

೭೪

ಬಿಡಿಸಯ್ಯಾ ಭವ ಬಿಡಿಸಯ್ಯ ಹರಿ ನಿನ್ನ ನಾಮ
ದೃಢವಾಗಿ ನುಡಿಸಯ್ಯ ಬಿಡದೆ ಸನ್ಮಾರ್ಗದಿ
ನಡೆಸಯ್ಯ ದೇವ ಗಡ ನಿನ್ನ ಕೃಪಾಕವಚ ತೊಡಿಸಯ್ಯ ಪ

ಹಾಳು ಭ್ರಾಂತಿಗಳೆಲ್ಲ ಕೆಡಿಸಯ್ಯ ಎನ್ನ
ಕೀಳುಯೋಚನೆ ಸರ್ವ ಕಡಿಸಯ್ಯ
ಜಾಳು ಪ್ರಪಂಚದಾಸೆ ತಿಳಿಸಯ್ಯ ಸ್ವಾಮಿ
ಮೂಳಮಾನವರ ಮಾತು ಮರೆಸಯ್ಯ ೧

ನಿತ್ಯ ಸುಜನರೊಳಿರಿಸಯ್ಯ ಎನ್ನ
ಸತ್ಯ ಶರಣರೊಳಾಡಿಸಯ್ಯ
ಅರ್ತಿಯಿಂ ತತ್ವಾರ್ಥ ತಿಳಿಸಯ್ಯ ಎನ್ನ
ಮಿಥ್ಯಗುಣಂಗಳನ್ನು ಹರಿಸಯ್ಯ ೨

ಕೋಪತಾಪಂಗಳ ವಧಿಸಯ್ಯ ಎನ್ನ
ಪಾಪ ಮಾಫಿಗೊಳಿಸೆನ್ನಯ್ಯ
ಕೋಪಿ ಪಾಪಿಗಳಿಂದುಳಿಸಯ್ಯ ನಿನ್ನ
ಗೌಪ್ಯದ ಧ್ಯಾನ ಮುನ್ನ ತಿಳಿಸಯ್ಯ ೩

ಭೂತಪ್ರೇತದಂಜಿಕ್ಹರಿಸಯ್ಯ ತಂದೆ
ಜಾತಿಭೀತಿ ಮೊದಲ್ಹಾರಿಸಯ್ಯ
ನೀತಿಶಾಂತಿ ಸ್ಥಿರ ನಿಲ್ಲಿಸಯ್ಯ ಎನ್ನ
ತಾತ ಮಾತೆ ನೀನೆ ನಿಜವಯ್ಯ ೪

ನರರಿಗೆ ಎರಗಿಸದಿರಯ್ಯ ಎನ್ನ
ಶಿರ ನಿನ್ನ ಚರಣದಿ ಇರಿಸಯ್ಯ
ಪರಲೋಕಸಾಧನ ತೋರಿಸಯ್ಯ ಎನ್ನ
ಶರಣ ನೀನಾಗು ಶ್ರೀರಾಮಯ್ಯ ೫

೭೫

ಬೇಕಿಲ್ಲ ಎನಗನ್ಯ ಏನೇನು ಸ್ವಾಮಿ
ಸಾಕು ನಿನ್ನಯ ನಾಮವೊಂದೆ ನುತ ಪ್ರೇಮಿ ಪ

ಪರಮಪಾವನನಾಮ ದುರುಳ ಸಂಹರ ನಾಮ
ದುರಿತ ಪರಿಹರ ನಾಮ ಶರಧಿಮಥನ ನಾಮ

ಸುರರ ಸಲಹಿದ ನಾಮ ಹರನ ಪ್ರೇಮದ ನಾಮ
ಪರಮೇಷ್ಠಿಯನು ಪಡೆದ ಸ್ಥಿರನಾಮದ್ಹೊರತು ೧

ಸೃಷ್ಟಿಯಾಳುವ ನಾಮ ಶಿಷ್ಟಪಾಲನ ನಾಮ
ಕಷ್ಟ ಕಳೆಯುವ ನಾಮ ಇಷ್ಟಪೂರ್ಣ ನಾಮ
ಮುಟ್ಟುಮುಡಿ ಹರನಾಮ ಅಷ್ಟಸಿರಿಪತಿನಾಮ
(ಹುಟ್ಟುಸಾವಿ)ಲ್ಲದ ಶಿಷ್ಟನಾಮದ್ಹೊರತು ೨

ವೇದ ಹೊಗಳಿದ ನಾಮ ಸಾಧುವಂದಿತನಾಮ
ಬೋಧರೂಪದ ನಾಮ ಆದಿಮಹನಾಮ
ಭೇದವಿಲ್ಲವ ನಾಮ ವೇದಗೋಚರ ನಾಮ
ಆದಿ ಅಂತಿಲ್ಲದನಾದಿ ನಾಮದ್ಹೊರತು ೩

ತರಳನ್ಹೊರೆದ ನಾಮ ಕರಿಯ ಸಲಹಿದ ನಾಮ
ತರುಣಿನುದ್ಧಾರ ನಾಮ ಧರೆಪೊತ್ತ ನಾಮ
ಕರುಣೆ ತುಂಬಿದ ನಾಮ ಶರಣಾಗತಪ್ರಿಯ ನಾಮ
ನರನ ಬೆಂಬಲನಾದ ಹರಿನಾಮದ್ಹೊರತು ೪

ಮೂರು ಕಳೆಯುವ ನಾಮ ಆರುಗೆಲಿಸುವ ನಾಮ
ಆರುನಾಲ್ಕು ಸುಲಭದಿ ಹಾರಿಸುವ ನಾಮ
ಸೇರಿದರಿಂಬು ನಾಮ ಸಾರ ಮುಕ್ತಿಯ ನಾಮ
ಧೀರ ಶ್ರೀರಾಮ ನಿಮ್ಮಪಾರನಾಮದ್ಹೊರತು ೫

೭೬

ಬೇಡಿಕೊಂಬುವೆನಯ್ಯ ಬೇಗ ಬಾರಯ್ಯ
ಮಾಡು ಎನ್ನೊಳೂ ದಯ ಪಂಢರಿರಾಯ ಪ

ನಾಶನ ಜಗದೊಳಗೆ ಭಾಷಗಡಕನು ಆಗಿ
ಸಾಸಿರೊರುಷಿರ್ದೇನು ಹೇ ಈ ಜನುಮ
ಶೇಷನಯನನೆ ನಿನ್ನ ದಾಸನ ಅತಿಶಯ
ದೋಷವನು ಗಣಿಸದೆ ಪೋಷಿಸ್ಯೆ ಈಶ ೧

ಅರಿದರಿದು ಪತಂಗ ಉರಿಯೊಳಗೆ ಬೀಳ್ವಂತೆ
ಖರೆಯ ಈ ಸಂಸಾರ ಸ್ಥಿರವೆಂದು ನಂಬಿ
ಪರಿಪರಿಯ ಪಾಪಂಗಳಿರಯದೆ ಮಾಡಿ ನಾ
ನರಕಕ್ಕೆ ಗುರಿಯಾದೆ ಪೊರೆಯೊ ಶ್ರೀ ಹರಿಯೆ ೨

ಸಿಂಧುಶಯನನೆ ಎನ್ನ ಮಂದಮತಿಯತನದ
ಲಿಂದ ಮಾಡಿದ ಪಾಪ ಚಿಂದಿಸೈ ಬೇಗ
ಹಿಂದಕಾದದ್ದಾಯ್ತು ಮುಂದೆ ಎನ್ನಯ ಬವಣೆ
ಚಂದಾಗಿ ತಿದ್ದಯ್ಯ ತಂದೆ ಶ್ರೀರಾಮ ೩

೭೭

ಬೋಲೋ ಸುನಾಮ ಕೇಶವ ಮಾಧವ
ನಾಶನ ಭವನಿಧಿಬಂಧನ ಪ

ಬೋಲೋ ರಾಧಾಕೃಷ್ಣ ಸುಲೀಲ
ಪಾಲಯ ಕುಲಕೋಟಿ ಪಾವನ ಅ.ಪ

ವೃಂದಾವನ ಮಾಲಾನಂದ ಲೀಲಾ
ಇಂದಿರೆಪ್ರಿಯ ಮಣಿಮಾಲನ
ಸಂದರಮಂದರ ಮಂದಿರ ದೇವಕಿ
ಕಂದ ಮುಕ್ಕುಂದ ಗೋಪಾಲನ ೧

ನೀಲಶ್ಯಾಮ ಭವಮಾಲಹರಣ ದಯ
ಆಲಯ ಭಜನಾನಂದನ
ಕಾಲ ಕುಜನ ಕುಲಶೀಲ ಶಿಷ್ಟಪ್ರಿಯ
ಲೋಲಗಾನ ಹರಿ ಗೋವಿಂದನ ೨

ಅಮಿತಮಹಿಮ ಅಸುರಮರ್ದನ
ಕಮಲನಾಭ ಕರಿಪಾಲನ
ಕಾಮಿತದಾಯಕ ಸುಮಶರಪಿತ
ಮಮ ಸ್ವಾಮಿ ಶ್ರೀರಾಮ ಮುಕ್ತಿ ಸೋಮನ ೩

೭೮

ಭಕುತಜನರ ಮುಕುಟಮಾನಸ
ನಿಖಿಲಜಗತ್ರಾಣ ಮಧುಸೂದನ ಪ

ಜಗಜೀವನ ಜಗಪಾಲನ
ಜಗವಂದನ ಜಗಪಾವನ
ಜಗಭರಿತ ಜಗನ್ನಾಥ
ಜಗ ಜಯಕಾರ ಜಗದಾಧಾರ ೧

ಜಲಜಪಾಣಿ ಜಲಜನಾಭ
ಜಲಜನೇತ್ರನೆ ಜಲಜಗಾತ್ರನೆ
ಜಲಜಾಭರಣ ಜಲಧಿಶಯನ
ಜಲಜಸುತೆನಾಥ ಜಲಜಾಸನಪಿತ ೨

ಉರಗಶಯನ ಗಿರಿಧಾರಣ
ಗಿರಿಜಾವಂದಿತ ದುರಿತರಹಿತ
ಜರಾಮರಣಹರಣ ಪರಮ
ಕರುಣಿ ಶ್ರೀರಾಮ ಶರಣಪ್ರೇಮ ೩

೭೯

ಭಕುತಾಭಿಮಾನಿ ಸಕಲದೇವರ ಧಣಿ
ನಿಖಿಲವ್ಯಾಪಕ ವಿಮಲ ಮುಕುತಿದಾಯಕನೆ ನೀ ಪ

ವೇದವೇದಕ್ಕೆ ಸಿಲ್ಕದಾದಿಮೂರುತಿ ನಿನ್ನ
ಪಾದಧ್ಯಾನದ ಶಕ್ತಿ ಸಾಧನಕೊಡು ಹರಿಯೆ ೧

ಕಮಲಪೀಠಾದಿಸುರರು ಭ್ರಮಿಸುವ ತವಪಾದ
ಕಮಲಕೃಪೆಯಿತ್ತೆನಗೆ ವಿಮಲಪತಿಯೆ ನೀಡೊ ೨

ಭವಮಾಲೆ ಗೆಲಿಸೆನ್ನ ದಯದಿಂದ ಸಲಹಯ್ಯ
ಭವರೋಗವೈದ್ಯನೆ ದಯಾಕರ ಶ್ರೀರಾಮ ೩

೮೦

ಭಕುತೋದ್ಧಾರ ಪರಿಭವದ್ವೈದ್ಯ
ನಿಖಿಲಬ್ರಹ್ಮಾಂಡ ಸುಸೂತ್ರ ಸಿರಿಬಾಧ್ಯ
ನಿಖಿಲವ್ಯಾಪಕ ನಿಖಿಲರಕ್ಷ ಭಕುತರಾತ್ಮಕ
ಭಕುತಪಕ್ಷ ಪ್ರಕಟರಕ್ಕಸಕುಲ ನಿರ್ಮೂಲನೆ
ಮುಕುಟಮಾನಸ ಮನದಿ ಭಜಿಪರ
ಮುಕುತಿದಾಯಕ ಮಣಿವೆನ್ನೈ ಮಹ
ಮುಕುತಿಸಂಪದ ಕರುಣಿಸಭವ ಪ

ಕಲ್ಪನೆಯಿಂದೊಂದೆತ್ರಯವೆನಿಸಿ ಕಲ್ಪ ಕಲಿಸಿ
ಕಲ್ಪನೆಯಿಂದ ನಾಲ್ಕುಘೋಷ ರಚಿಸಿ
ಕಲ್ಪನಿಲ್ಲದೆ ಕಲ್ಪಕಲ್ಪದರರ್‍ನೊಗಳಿಸಿ
ಕಲ್ಪಿತದಿ ನೆಲಸಿ ಕಲ್ಪಿತದಿ ಸಂಕಲ್ಪ ತೋರಿಸಿ
ಕಲ್ಪಿತದಿಂ ಸಂಕಲ್ಪ ಮುಳುಗಿಸಿ
ಕಲ್ಪ ಕಲ್ಪಾಂತರದಿ ಉದಿಸಿ
ಕಲ್ಪತಕೆ ನೀ ಬೇರೆಯೆನಿಸಿ
ಕಲ್ಪನದೊಳು ಕಲ್ಪ ಕೂಡಿಸಿ
ಕಲ್ಪನಕೆ ಮಹಪ್ರಳಯವೆನಿಸಿ
ಕಲ್ಪನೆಯನು ಮತ್ತು ತಿರುಗಿಸಿ
ಕಲ್ಪಿಸಿದಿ ಪುನಃ ಸಫಲವೆನಿಸಿ
ಕಲ್ಪನೆಯನು ಪೊಗಳಲಿನ್ನಾವ
ಕಲ್ಪನಕೆ ತುಸು ಶಕ್ಯವಲ್ಲವು
ಕಲ್ಪ ಕಲ್ಪಾಂತರದಿ ಎನ್ನನು
ಕಲ್ಪಿಸದಿರು ಕಲ್ಪತರುವೆ ೧

ಕಲ್ಪಿಸಿದೆ ಕೋಟಿ ತ್ರಿದಶತ್ರಯೆನಿಸಿ
ಕಲ್ಪ ಕಲ್ಪಕೆ ಕಲ್ಪಿತೀಯುವ ಮಂತ್ರ ಕಲ್ಪಿಸಿ
ಕಲ್ಪಿಸಿದಿಯೊ ಕಲ್ಪ ಕಲ್ಪದಿ ಐದು ಮೇಲೆನಿಸಿ

ಕಲ್ಪಸಾರೆನಿಸಿ ಕಲ್ಪನೆ ಮಹತಾರಕೆನಿಸಿ
ಕಲ್ಪನೆ ಘನಗಾಯತ್ರೆನಿಸಿ
ಕಲ್ಪನೆಯಲಿ ಸ್ಥೂಲವೆನಿಸಿ
ಕಲ್ಪನೆ ಬಹುಸೂಕ್ಷ್ಮವೆನಿಸಿ
ಕಲ್ಪನೆಯ ಮಹಕಾರಣೆನಿಸಿ
ಕಲ್ಪನದಿ ಈ ಕಲ್ಪವಿರಿಸಿ
ಕಲ್ಪನಕೆ ನೀನೆ ಸೂತ್ರನೆನಿಸಿ
ಕಲ್ಪನಕೆ ನೀನೆ ಚೈತನ್ಯನೆನಿಸಿ
ಕಲ್ಪ ಕುಣಿಸುವಿ ಕಲ್ಪನಿಲ್ಲದ
ಕಲ್ಪದ ನೆಲೆಬುಡ ನೀನೆನ್ನಯ
ಕಲ್ಪನೆಯೊಳುದಯನಾಗಿ
ಕಲ್ಪನೆಯ ಕಡೆಗಾಣಿಸಭವ ೧

ಕಲ್ಪ ಕಲ್ಪಕೆ ಆಚೆ ನೀನೆನಿಸಿ ಕಲ್ಪ ನಿರ್ಮಿಸಿ
ಕಲ್ಪ ಕಲ್ಪದಿ ನೀನೆ ಆವರಿಸಿ ಕಲ್ಪ ನಡೆಸಿ
ಕಲ್ಪ ಕಲ್ಪದಮೂಲ ನೀನೆನಿಸಿ ಕಲ್ಪದಿಂ ನುಡಿಸಿ
ಕಲ್ಪದಲಿ ಮಿಥ್ಯಕಲ್ಪ ಪುಟ್ಟಿಸಿ
ಕಲ್ಪದಲಿ ನಿಜಕಲ್ಪ ಸೃಷ್ಟಿಸಿ
ಕಲ್ಪದಿಂ ತ್ರಿಕಲ್ಪ ರಕ್ಷಿಸಿ
ಕಲ್ಪದಿಂ ಕಲ್ಪಕ್ಕೆ ಶಿಕ್ಷಿಸಿ
ಕಲ್ಪವೇ ಮಹ ಮಾಯವೆನಿಸಿ
ಕಲ್ಪದಿಂದಲೇ ಅದನು ಗೆಲಿಸಿ
ಕಲ್ಪದಿಂ ಕಲ್ಪವನು ಬೆಳಗಿಸಿ
ಕಲ್ಪದಿಂ ಕಲ್ಪವನು ತೊಲಗಿಸಿ
ಕಲ್ಪನರಿಯುವ ಕಲ್ಪಕೆ ಮಹ
ಕಲ್ಪನಿದು ಬಹು ಸುಲಭವೆನಿಸಿ
ಕಲ್ಪಿತದಿಂ ರಕ್ಷಿಸುವ ಮಮ
ಕಲ್ಪನಿಲ್ಲದವರ ಶ್ರೀರಾಮ ೨

೮೧

ಭಜಿಸಿ ಧನ್ಯನಾದೆ ನಾನು
ಭುಜಗಶಯನನಂಘ್ರಿಯನ್ನು ಪ

ಕುಸುಮ ತರಲು ಸರಸಿಧುಮುಕಿ
ಮೊಸಳೆಬಾಯಿಗೆ ಸಿಲುಕಿ ಕರಿಯು
ಕುಶಲದಿಂದ ಕಂಟಕ ಗೆಲಿದು
ಅಸಮಸೌಖ್ಯ ಪೊಂದಿದ್ದು ಕೇಳಿ ೧

ಪಾಪಿ ಕುರುಪನೋಲಗದಲ್ಲಿ
ದ್ರೌಪದಿಗೊದಗಿಬರಲು ಭಂಗ
ಶ್ರೀಪತಿ ಮೊರೆಯನಿಟ್ಟು ಪರಮ
ಆಪತ್ತು ಗೆಲಿದಳೆಂಬುದ ಕೇಳಿ ೨

ಇಳೆಯೊಳ್ಪತಿಯ ಶಾಪದಿಂದ
ಶಿಲೆಯ ರೂಪದಿ ಬಿದ್ದ ಯುವತಿ
ಗೊಲಿದು ಪಾವನಾಂಗಿಯೆನಿಸಿ
ಕುಲಕೆ ತಂದ ಸುದ್ದಿ ಕೇಳಿ ೩

ತ್ಯಜಿಸಿ ತನ್ನ ಬ್ರಹ್ಮಕುಲವ
ಕುಜಕುಲದ ನಾರಿಗೆ ಕೆಟ್ಟ
ಅಜಮಿಳನ ಅಂತ್ಯಕ್ಕೆ ಒದಗಿ
ನಿಜಪದವಿ ನೀಡಿದ್ದು ಕೇಳಿ ೪

ಅಂಬುಧಿನಿಲಯ ಅಸಮ ಮಹಿಮ
ಕಂಬುಕಂಧರಮಿತ್ರ ಭಕುತ
ಬೆಂಬಲ ಶ್ರೀರಾಮ ಪ್ರಭುವೆ ನಿನ್ನ
ನಂಬಿದವರ ಸಂಭ್ರಮ ಕೇಳಿ ೫

೮೨

ಭಜಿಸುವೆ ನಾ ಯಶೋದೆ ಬಾಲನ ಪ

ವಶಮಾಡಿಕೊಂಡು ರಾಧೆ
ಕುಸುಮನಾಭ ಅಸಮಲೀಲನ
ಎಸೆವ ಮೊಗದೋಳ್ಮೊಗವಿಟ್ಟು
ಅಸಮಸುಖವ ಪಡೆದಳೆಂದು ೧

ಭಾವಜನಯ್ಯ ಭಕುತೋದ್ಧಾರ
ದೇವ ದಿವ್ಯಮಹಿಮನ
ಗೋವಳರೆಲ್ಲ ಒಲಿಸಿ ಬಿಡದೆ
ಗೋವುಕಾಯಿಸಿಕೊಂಡರೆಂದು ೨

ದೀನನಾಥ ಕುಜನ ಕುಠಾರ
ಗಾನಲೋಲ ವೇಣುಗೋಪಾಲ
ಪ್ರಾಣೇಶ ಶ್ರೀರಾಮ ತನ್ನ
ಧ್ಯಾನದಾಸರರಸನೆಂದು ೩

೮೩

ಭವಭಯಹರ ಸಿರಿಧವ ನರಹರಿ ಪೊರೆ
ಭವಭವದಲಿ ನೀಡು ತವಪಾದ ಸೇವೆಯ ಪ

ಮನುಮುನಿ ಘನಸುರ ವಿನಮಿತ ಸುಜನರ
ಅನುಪಮ ಪ್ರಿಯಕರ ಜನಕಜೆ ಮನೋಹರ ೧

ದುರಿತವಿನಾಶ ಪರಮಪ್ರಕಾಶ ಗಿರಿಧರ
ಪರಾತ್ಪರ ಪರತರ ಲಕುಮೀಶ ೨

ಅಸುರಕುಲಾಂತಕ ವಸುಧೆಯುದ್ಧಾರಕ
ಅಸಮ ಶ್ರೀರಾಮ ಮಹ ಮುಕ್ತಿಪ್ರದಾಯಕ ೩

೮೪

ಭವಭಯಹರ ಶ್ರೀ ಮುಕ್ಕುಂದ
ಭವರೋಗಕ್ವೈದ್ಯ ಶ್ರೀ ಗೋವಿಂದ ಪ

ಧ್ರುವ ದ್ರುಪದತನುಜಾತೆಯೊರೆದ ಹರಿ
ಶಿವನುತ ಸಚ್ಚಿತ್ತಾನಂದ ಅ.ಪ

ಪಂಕಜಾನಪಿತ ಗೋವಿಂದ
ಕಿಂಕರಾಶ್ರಿತ ಗೋವಿಂದ
ಶಂಖಧಾರಣ ಸಿರಿಗೋವಿಂದ
ಶಂಖಾಸುರನ ಹರ ಗೋವಿಂದ
ಮಂಕು ದನುಜಕುಲ
ಬಿಂಕ ಮುರಿದ ಅಕ
ಳಂಕಮಹಿಮ ಮಹ ಗೋವಿಂದ ೧

ಸ್ಮರಿಪ ನೆರೆವಾಸ ಗೋವಿಂದ
ದುರುಳರ ಕುಲನಾಶ ಗೋವಿಂದ
ದುರಿತ ನಿವಾರಣ ಗೋವಿಂದ
ಶರಣಜನರಪ್ರಾಣ ಗೋವಿಂದ
ತರಳನೋದ್ಧಾರಣ
ಕರಿರಾಜವರದನ
ತರುಣಿಯ ರಕ್ಷಣ ಗೋವಿಂದ ೨

ಜಗದಾಧಾರನೆ ಗೋವಿಂದ
ಸುಗಣಗುಣಾಂತರಂಗ ಗೋವಿಂದ
ರಘುಕುಲಪಾವನ ಗೋವಿಂದ
ಖಗಪತಿವಾಹನ ಗೋವಿಂದ
ನಿಗಮಕೆ ಸಿಲುಕದ
ಅಗಾಧ ಮಹಿಮ
ಜಗತ್ರಯ ಮೋಹನ ಗೋವಿಂದ ೩

ನೀಲಮೇಘಶ್ಯಾಮ ಗೋವಿಂದ
ಕಾಲಕಾಲಹರ ಗೋವಿಂದ
ಪಾಲಸಾಗರಶಾಯಿ ಗೋವಿಂದ
ಲೋಲ ವಿಶ್ವರೂಪ ಗೋವಿಂದ
ಪಾಲಭಜಕ ಭವ
ಜಾಲಹರಣ ಸರ್ವ
ಮೂಲಮಂತ್ರ ಹರಿ ಗೋವಿಂದ ೪

ಭೂಮಿಜಾತೆಪತಿ ಗೋವಿಂದ
ಕಾಮಜನಕ ಶ್ರೀಶ ಗೋವಿಂದ
ಕೋಮಲಾಂಗ ರಂಗ ಗೋವಿಂದ
ಸ್ವಾಮಿ ಪುಣ್ಯನಾಮ ಗೋವಿಂದ
ಶಾಮವರ್ಣನುತ
ಪ್ರೇಮಮಂದಿರ ಶ್ರೀ
ರಾಮ ದಾಮೋದರ ಗೋವಿಂದ ೫

೮೫

ಭಾಗವತರ ಭಾಗ್ಯೋದಯ
ಭೋಗಿಶಯನ ಭಜಕ ಪ್ರಿಯ ಪ

ಪಾಲಸಾಗರ ಕನ್ಯಾರಮಣ
ನೀಲಶ್ಯಾಮ ಲೋಲಗಾನ
ಕಾಳಿಮರ್ದನ ಕಾಲಹರಣ
ಪಾಲಬಾಲೆ ಶೀಲಮಾನ ೧

ಮೂರುಲೋಕ ಸೂತ್ರಧಾರಿ
ಸಾರನಿಗಮ ವಿನುತ ಶೌರಿ
ವಾರಿಧಿಮಥನ ಮುರಸಂಹಾರಿ
ಧಾರಿಣಿ ಪಾಲಿಪ ದಶಾವಾತಾರಿ ೨

ಶೂಲಪಾಣಿಸಖ ಸುನಾಮ
ಮಾಲಕೌಸ್ತುಭ ಸತ್ಯಭಾಮಾ
ಲೋಲ ಭಜಕರಘ ನಿರ್ನಾಮ
ಮೇಲುಮಂದಿರ ಶ್ರೀರಾಮ ನಮೋ ೩

೮೬

ಭಾಗವತರ ಭಾಗ್ಯನಿಧಿಯೆ ಭೋಗಿಶಯನ ಭೋ ಶ್ರೀರಾಮ ಪ

ವೇದಾಗಮಕೆ ಸಿಲುಕದಂಥ ನಾದಬ್ರಹ್ಮಾಯೋಧ್ಯ ರಾಮ
ಸಾಧುಜನಸಂಪ್ರೀತ ಭವರೋಗ್ವೈದ್ಯ ಸಾಧನ ಸಾಧ್ಯ ರಾಮ ೧

ರಾಧಾಕೃಷ್ಣಾಗಾಧಮಹಿಮ ಭೇಧ ಹರಿಸು ಬೋಧ ರಾಮ
ಪೋದ ವೇದ ಸಂಪಾದಿಸಿದನೆ ನಾದಪ್ರಿಯ
ಮಹದಾದಿ ರಾಮ ೨

ಹರಿವಿರಿಂಚಾದ್ಯಖಿಲಸುರರ ಪರರ ಕಂಟಕ ದೂರ ರಾಮ
ಪರಕೆಪರಮ ಪರಮಪುರುಷ ಸರುವ ಜಗದಾಧಾರ ರಾಮ ೩

ಹತ್ತು ಅವತಾರೆತ್ತಿ ಭೂಭಾರ್‍ಹೊತ್ತು ಇಳುಹಿದ ಸತ್ಯ ರಾಮ
ಮರ್ತ್ಯದ ಮಹ ಕೃತ್ರಿಮರ ಮುರಿದೊತ್ತಿದ್ದೈ
ಜಗತ್ಕರ್ಮ ರಾಮ ೪

ದಾಸಜನರಭಿಲಾಷೆಯನು ಪೂರೈಸಲೋಸುಗ ಈಶ ರಾಮ
ಶೇಷಾಚಲನಿವಾಸನಾದ ದಾಸಗಣ ಸಂತೋಷ ರಾಮ ೫

ಅಸಮ ಪಾದಕುಸುಮಗಳನಿಟ್ಟೊಸುಧೆ ವೈಕುಂಠನಿಸಿ ರಾಮ
ಪಸರಿಸಿದ ಮಹ ಅಸಮಮಹಿಮೆಗಳ ವಸುಧೆ
ಜನರಿಂಗೊಸೆದು ರಾಮ ೬

ಬ್ರಹ್ಮಾದಿಗಳ ಹಮ್ಮನಳಿದ ಕರ್ಮಚರ ಪರಬ್ರಹ್ಮ ರಾಮ
ಸುಮ್ಮನಲ್ಲ ತವ ಮರ್ಮ ತಿಳಿಯಲು ಬ್ರಹ್ಮನಯ್ಯ
ಸುಖಧಾಮ ರಾಮ ೭

ಮಾತೆ ನೀನೆ ತಾತ ನೀನೆ ನಾಥ ಬಂಧು ದಾತ ರಾಮ
ಪ್ರೀತಿಬಂಧು ವಿಖ್ಯಾತ ನೀನೆ ನೀತಿಬೋಧ
ಗುರುನಾಥ ರಾಮ ೮

ತತ್ವದರ್ಥ ಉತ್ತರಿಸೆನ್ನ ಕಟ್ಟುಮಾಡೊ ಶಿಷ್ಟರಾಮ
ಮರ್ತ್ಯದ ಸುಖ ವ್ಯರ್ಥವೆನಿಸಿ ಗುರ್ತುತೋರು
ತವ ಮೂರ್ತಿ ರಾಮ ೯

ಹುಟ್ಟಿಬರುವ ಕಷ್ಟದ್ವಾದಿ ಕಟ್ಟುಮಾಡೊ ಶಿಷ್ಟರಾಮ
ನಿಷ್ಠೆಯಿಂ ನಿಮ್ಮ ಮುಟ್ಟಿ ಭಜಿಪ ಪಟ್ಟಗಟ್ಟೆಲೊ ದಿಟ್ಟ ರಾಮ ೧೦

ದಾಸಜನರ ವಾಸದಿರಿಸೊ ಕೇಶವ ಜಗದೀಶ ರಾಮ
ದೋಷರಾಶಿ ನಾಶಗೈದು ಪೋಷಿಸೆನ್ನನನುಮೇಷ ರಾಮ ೧೧

ವೇದ ವಿದ್ಯದ್ವಾದಿಸಾಧನ ಭೋಧಿಸೆನಗ್ವಿನೋದ ರಾಮ
ಪಾದಭಕ್ತಿ ಮೋದದಿತ್ತು ಭವಬಾಧೆಯಳಿ ಸುಖಸ್ವಾದ ರಾಮ ೧೨

ಮಾಯವೆನಿಪ ಕಾಯಗುಣ ಸಮುದಾಯ
ಕಳಿ ಮಮಜೀವ ರಾಮ
ಬಾಯಿ ಬಿಡಿಪ ಹೇಯಸಂಸಾರ ನೋವು
ಬಿಡಿಸೆನ್ನಯ ರಾಮ ೧೩

ಮತ್ತೆ ಮತ್ತೆ ಪೃಥ್ವಿ ಮೇಲೆ ಸತ್ತು ಹುಟ್ಟಿ ಬೇಸತ್ತೆ ರಾಮ
ಕರ್ತು ನಿನ್ನ ಗುರ್ತು ಅರಿಯದನರ್ಥವಾದೆನಾತ್ಮ ರಾಮ ೧೪

ಆಸೆಯೆಂಬ ಪಾಶದಿಂದ ಘಾಸಿಯಾದೆ ಭವನಾಶ ರಾಮ
ದೋಷದೂರೆನ್ನ ಕ್ಲೇಶಗಳನು ನಾಶಿಸೈ ದಯಭೂಷ ರಾಮ ೧೫

ಅರಿದು ಅರಿದು ಉರಿವದೀಪದೆರಗುವ ಹುಳದಿರವು ರಾಮ
ಧರೆಯ ಸುಖಕೆ ಮರುಳನಾಗಿ ಮರಣಪೊಂದುವೆ
ಸಿರಿಯ ರಾಮ ೧೬

ಮರೆದು ನಾನು ಧರೆಗೆ ಬಿದ್ದು ದುರಿತದೊಳಗೆ ಬೆರೆದೆ ರಾಮ
ಮರವೆ ಹರಿಸಿ ಅರಿವು ನಿಲಿಸಿ ಕರುಣದಿಂದ
ಪೊರೆಯೊ ರಾಮ ೧೭

ಕಂದನ ಕೈ ದಯದಿಂದ ಪಿಡಿದಾನಂದ
ಕರುಣಿಸುತ ತಂದೆ ರಾಮ
ಮಂದಮತಿತನ ಛಿಂದಿಸೀಭವಬಂಧನವ
ಬಯಲ್ಹರಿಸು ರಾಮ ೧೮

ಮಾನ ಅಭಿಮಾನ ನಿನ್ನದು ಧ್ಯಾನಿಪರ ಸುರಧೇನು ರಾಮ
ಜ್ಞಾನವಿತ್ತು ಮಾನದಿಂದ ನೀನೆ ಪೊರೆ ಜಗತ್ರಾಣ ರಾಮ ೧೯

ಭಿನ್ನವಿಲ್ಲದೆ ನಿನ್ನ ನಂಬಿ ಧನ್ಯನಾದೆನಿನ್ನು ರಾಮ
ಎನ್ನ ಮನಸಿಗಿನ್ನು ಸಂತಸವನ್ನು ಕೊಡು ಪಾವನ್ನ ರಾಮ ೨೦

ಭೃತ್ಯನ ಮಹ ಚಿತ್ತಭ್ರಮೆ ಮುರಿದೊತ್ತಿ ಕರಪಿಡಿದೆತ್ತು ರಾಮ
ಭಕ್ತಿಯುಕ್ತಿ ಮುಕ್ತಿ ಸುಖವನಿತ್ತು ಪೊರೆ ಗುರುದತ್ತ ರಾಮ ೨೧

ನಿಖಿಲವ್ಯಾಪಕ ಅಖಿಲರಕ್ಷಕ ಸಕಲಬಲ ನೀನೇಕ ರಾಮ
ಮುಕುತಿಸಂಪದ ಸಿದ್ಧಿ ನೀನೆ ಭಕುತಪ್ರಿಯ ಲೋಕೈಕ ರಾಮ ೨೨

ಭಿನ್ನವಿಲ್ಲದೆ ನಿನ್ನ ನಾಮವನ್ನು ಪೊಗಳುವರಿನ್ನು ರಾಮ
ಮಾನ್ಯರಾಗನನ್ಯ ಸುಖಸಂಪನ್ನರೆನಿಪನನ್ಯ ರಾಮ ೨೩

ಉದಯದೆದ್ದು ಪದುಳದೀನಾಮ ಓದಿಕೇಳಲು ಸದಾ ರಾಮ
ಸದಮಲ ಸಮಪದನಿತ್ತು ಮುದದಿ ಕಾಯುವ
ಸದಯ ರಾಮ ೨೪

ನಿತ್ಯ ನಿತ್ಯ ಭಕ್ತಿಯಿಂ ಬರೆಯುತ್ತ ಪಠಿಸಲು ಕರ್ತುರಾಮ
ಮುಕ್ತಿಯೆಂಬ ಸಂಪತ್ತನಿತ್ತು ಬಿಡದ್ಹತ್ತಿರಿರುವನು ಸತ್ಯ ರಾಮ ೨೫

೮೭

ಭುವನವೀರೇಳ ಪರಿಪಾಲಿಸು ಕರುಣ
ಬುವಿಜಾರಮಣ ಪರಿಭವ ತಾಪಹರಣ ಪ

ದಯದಿ ಯುವತಿಯಕುಲ ಉದ್ಧಾರಣ
ಜವದಿ ಕರಿಧ್ರುವಬಂಧಮೋಚನ
ಯುವತಿಗಕ್ಷಯವಿತ್ತು ಒಲಿದು
ಹಯವ ಪಿಡಿದು ರಥವ ನಡೆಸಿದ
ಭುವನ ಬ್ರಹ್ಮಾಂಡ ಸೂತ್ರಧಾರಕ
ಶಿವಸುರಾರ್ಚಿತ ಪೊರೆ ಸುಹೃದಯ ಅ.ಪ

ಪತಿತಪಾವನ ಶ್ರೀಶಕೇಶವ ಸಹಸ್ರಾಕ್ಷಶಯನ
ಪತಿತಪಾವನ ಮಾಲ ಮಾಧವ ಭೋಗ ಗರುಡಗಮನ
ಪತಿತಪಾವನೆ ಇಂದಿರೆಯ ಜೀವ ಜಗದಾದಿದೇವ
ಯತಿತತಿನುತ ಪವಿತ್ರನಾಮ
ಕ್ಷಿತಿಸುತೆಪತಿ ಪವಿತ್ರ ಮಹಿಮ
ಸತಿಯರವ್ರತಹರ ಜಿತಮಹಮುಪ್ಪುರ
ಕೃತ್ರಿಮ ಮುರಹರ ಮಥನಸಾಗರ
ನುತಿಪರ್ಥಿತಕರ ಸುಪಥರಾಧಾರ
ಹಿತದಿ ಪೊರೆಯೆನ್ನ ಕರುಣಾನಿಕರ ೧

ನಿರುತ ಜನರ ಕಲ್ಪತರು ನೀನು ಭಯಭಕ್ತಿಯಿಂದ
ಸ್ಮರಿಸಿ ಬೇಡ್ವರ ಪರಮಸುರಧೇನು
ಸುರಗಂಗಾಜನಕ ಶರಣು ಸಜ್ಜನರಮಿತ ದಯಾ
ಪರನು ವಿಶ್ವರಕ್ಷಕನು ಮರಣರಹಿತ ಮದನತಾತ
ಸುರಜೇಷ್ಠೊಂದಿತ ಶುಭ ಸಚ್ಚರಿತ

ದುರಿತಪರಿಹರ ದುರುಳ ಸಂಹರ
ಶರಣುಮಂದಾರ ಸುಗುಣರೋದ್ಧಾರ
ಶರಣಭಜಕರ ವರಸುಖಕರ
ಕರಣಿಸಭವನೆ ತ್ವರಿತ ಸುವರ ೨

ಕುಸುಮನಯನ ಸ್ವತಂತ್ರ ಮಹಲೀಲ ದಿವಕೋಟಿ ಪ್ರಭಾಕರ
ಕುಸುಮಗಾತ್ರ ಮಹತಂತ್ರ ಮಾಯಜಾಲ ಗೋವರ್ಧನೋದ್ಧಾರ
ಕುಸುಮಧರ ಕುರುಕುಜನಕುಲಕಾಲ ಗೋಪಾಲಬಾಲ
ಕುಸುಮನಾಭ ಕೌಸ್ತುಭಾಂಬರ
ಅಸಮ ತುಲಸಿಮಾಲಾಲಂಕಾರ
ಒಸೆದು ದಾಸನ ಪುಸಿಯೆಂದೆನಿಸದೆ
ಹಸನುಮತಿಯಿತ್ತು ಪೋಷಿಸನುದಿನ
ಎಸೆವ ತವಪಾದ ನಂಬಿ ಮರೆಬಿದ್ದ
ಅಸಮದಯಾನಿಧಿ ಮಮ ಶ್ರೀರಾಮ ೩

೮೮

ಭೇದವ ಮರೆಸಿದ ನಮ್ಮಯ್ಯ ಸು
ಸಾಧನ ತಿಳಿಸಿದ ಪ

ಭೇದ ಮರೆಸುತ ವಾದನೀಗಿಸಿ ಪರ
ಸಾಧನದ ನಿಜಹಾದಿಗೆ ಹಚ್ಚಿದ ಅ.ಪ

ಮಂದಮತಿಯ ತರಿದ ಎನ್ನಯ ಭವ
ಬಂಧ ಪರಿಹರಿಸಿದ
ಕುಂದುವ ಜಗಮಾಯದಂದುಗ ಗೆಲಿಸಿದ
ಕಂದನೆಂದುದ್ಧಾರಗೈದ ತಂದೆ ಸಿಂಧುಶಾಯಿ ೧

ಜ್ಞಾನಕೆ ಹಚ್ಚಿದ ಎನ್ನದೆ ನಿಜ
ಧ್ಯಾನವ ಪಾಲಿಸಿದ

ನಾನಾಯೋನಿಯೊಳು ಜನಿಸಿ ಜನಿಸಿ ಬಹ
ಹಾನಿಯಿಂದುಳಿಸಿದ ದಾನವಕುಲಹರ ೨

ಏನೆಂದು ಬಣ್ಣಿಸಲಿ ನಮ್ಮಯ್ಯನ
ಆನಂದದ ಕೇಲಿ
ತಾನೆ ಒಲಿದಿತ್ತೆನ್ನಗಾನಂದಮಯಾಂಬುಧಿ
ದೀನಜನಾಪ್ತ ಮಮಪ್ರಾಣ ಶ್ರೀರಾಮಯ್ಯ ೩

೮೯

ಭೋಗಿಶಾಯಿ ಸಲಹೋ ಭವರೋಗದೂರ
ಸಾಗರಕನ್ನಿಕೆಯ ಪ್ರಾಣಮನೋಹರ ಪ

ಶಂಖಾಸುರಮರ್ದನ ಮಂಕುಕುಲಭಂಜನ
ಕಿಂಕರೋದ್ಧಾರಣ ಜಿಂಕೆಸಂಹರಣ
ಲಂಕಾಪುರನಾಶನ ಶಂಖ ಚಕ್ರಧಾರಣ
ಶಂಕರಾದಿವಂದನ ಪಂಕಜನಯನ ೧

ತಾಪತ್ರನಿರ್ಮೂಲ ಪಾಪಮೋಚನ ಶೀಲ
ಗೋಪೇರಾನಂದ ಲೀಲ ಗೋಪಾಲಬಾಲ
ಪಾಪಿಜನಕುಲಕಾಲ ಆಪತ್ತಿನಲ್ಲನುಕೂಲ
ದ್ರೌಪದಿಯ ಪರಿಪಾಲ ಶ್ರೀಪತಿಯ ವಿಠಲ ೨

ದೀನಜನಮಂದಾರ ಧ್ಯಾನಿಪರ ಪ್ರಿಯಕರ
ಜ್ಞಾನಿಗಳ ಆಧಾರ ವನಮಾಲಧರ
ಬಾಣಾರಿ ಧುರಧೀರ ಭಾನುಕೋಟಿ ಪ್ರಭಾಕರ
ಜಾನಕೀರಮಣ ಶ್ರೀರಾಮಪ್ರಭು ಸುಂದರ ೩

೯೦

ಮನದಣಿ ನೋಡಿದೆನೊ ಸನಕಾದಿನಮಿತ
ಮನದಣಿ ನೋಡಿದೆನು ದೃಢದಿ ಪ

ನಿನಗೆ ಸರಿಯಿಲ್ಲ ಭುವನತ್ರಯದಿ
ಮನಕೆ ಬೇಸರವಿಲ್ಲದನುದಿನ
ತನುವನಪ್ಪಿಹಿಡಿದು ಭಕುತರ
ಮನದ ವರಗಳನಡೆಸಿ ಸಲಹುವ
ಕನಿಕರಾರ್ಣವ ವಿಠಲ ನಿನ್ನಡಿ ಅ.ಪ

ಒಂದು ದಿನ ಆ ತ್ರೇತಾಯುಗದಲ್ಲಿ ಋಷಿಗಡಣ ಕೂಡಿ
ಬಂದು ನಿಮ್ಮಯ ಚರಣಸನ್ನಿಧಿಲಿ ಭಯಭಕುತಿಯಿಂದ
ವಂದಿಸಾಲಿಂಗನೆಯ ಕೋರುತಲಿ ಅಭಯ ಬೇಡುತಲಿ
ನಿಂದ ಋಷಿಗಳಿಗ್ಗಲವು ಪರಿಯಲಿ
ತಂದೆ ನೀ ಸಮ್ಮತವ ಪೇಳಿ
ಬಂದು ದ್ವಾಪರಾಂತ್ಯಯುಗದಲಿ
ಒಂದು ಅರಲವ ಅಗಲದಲೆ ನಿಮ್ಮ
ಪೊಂದಿ ಆಲಿಂಗನವನೀಯುವೆ
ನೆಂದು ವರವಿತ್ತ ವಿಠಲ ನಿಮ್ಮಡಿ ೧

ಅಪಾರಮಹಿಮಜಾಲ ಅವತರಿತಿಸಿದಿ
ದ್ವಾಪರಯುಗದಿ ಬಾಲಕೃಷ್ಣ ನೀನಾಗಿ
ಶ್ರೀಪತಿ ಸುಜನಪಾಲ ದನುಜಕುಲಕಾಲ
ಪಾಪಸಂಹಿತ ಅಮಿತಲೀಲ
ಶಾಪಪರಿಹಾರ ವೇಣುಲೋಲ
ತಾಪಸೋತ್ತಮರಿಷ್ಟ ನೀಡಲು
ಗೋಪಿಕಾಸ್ತ್ರೀಯರೆನಿಸಿ ಪುಟ್ಟಿಸಿ
ಗೌಪ್ಯದಾಲಿಂಗನವನಿತ್ತ ಭೂಪ
ಭೂಪತಿ ವಿಠಲ ನಿಮ್ಮಡಿ ೨

ಸುಗುಣ ಸಂತರಹೃದಯಸಂಚಾರ ದಾಸಾನುದಾಸರು
ಪೊಗಳಿ ಭಜಿಸುವ ಗಾನಪ್ರಿಯಕರ ಮೌಲಕೌಸ್ತುಭ
ಜಗದಜೀವನ ಪಾವನಾಕಾರ ಪರಮಸುಖಕರ
ಅಗಣಿತಾಗಣಿತಮಹಿಮಭರಿತ

ಪೊಗಳಲಳವೆ ನಿಮ್ಮ ಚರಿತ ತ್ರಿ
ಜಗನಾಟಕ ಸುಲಭದಲಿ ನೀ
ಅಗಲದನವರತಸಮ ಈ ಕಲಿ
ಯುಗದಿ ಭಕ್ತರಿಗಾಲಿಂಗನೀಯುವ
ನಿಗಮಗೋಚರ ವಿಠಲ ನಿನ್ನಡಿ ೩

ಮಂದಹಾಸ ಮಂದರೋದ್ಧಾರ ಸುರಕಲ್ಪಧೇನು
ಇಂದಿರೆಯರ ಪ್ರಾಣ ಮನೋಹರ ಹೇ ದೀನಬಂಧು
ಸುಂದರಾಂಗ ಸುಗುಣಗುಣಹಾರ ಬಂಧನಿವಾರ
ಸಿಂಧುಕಲಕಿದಪಾರ ಶೂರ
ಕುಂದದೆ ಮೊರೆಕಾಯ್ದ ಸುರರ
ಹೊಂದಿಭಜಿಸುವ ಭಕುತಜನಕಾ
ನಂದ ನೀಡುತ ಚಂದನೋಡುತ
ಸಿಂಧುನಿಲಯ ಮುಕ್ಕುಂದ ಮುರಹರಿ
ಅಂದಮಾದ ವಿಠಲ ನಿಮ್ಮಡಿ ೪

ಸುತ್ತಮುತ್ತ ಭಕ್ತರಾಲಯವು ಹಿಂಭಾಗದಲ್ಲಿ
ಸತ್ಯಭಾಮ ರುಕ್ಮಿಣೀಕಾಂತನು ಮುಂಭಾಗದಲಿ
ನಿತ್ಯನಿರ್ಮಲ ಚಂದ್ರಭಾಗಿನಿಯು ನಡುಮಧ್ಯ ರಂಗವು
ಭಕ್ತಗೊಲಿದು ಭೂವೈಕುಂಠವ
ಸತ್ಯವೆನಿಸಿ ಮೀರಿ ಮೆರೆವ
ಭಕ್ತಜನರ ಕೈಯೆತ್ತಿ ಸಾರುವ
ಪೃಥ್ವಿಗಧಿಕ ಮಹ ಪಂಢರಾಪುರ
ಮುಕ್ತಿ ತವರೆಂಬ ಮಂದಿರದಲ್ಲಿ
ಕರ್ತುಶ್ರೀರಾಮ ವಿಠಲ ನಿನ್ನಡಿ ೫

೯೧

ಮಾಡೋ ಹರಿಭಜನೆ ಮನುಜ ನೀ ಪ

ಮಾಡೋ ಹರಿಭಜನೆ
ಕೂಡಿ ಸುಸಂಗದಿ ಕಡುದೃಢದೊಡನೆ ನೀ ಅ.ಪ

ವನಜನಾಭಧಿಕೆಂಬ ಘನಸ್ಮೃತಿ ವಚನವ
ನೆನವಿಡಿದನುದಿನ ಮನದೃಢ ಬಲಿಸಿ ೧

ಮನುಮುನಿಗಳ ಕುಣಿಕುಣಿದ್ಹೊಗಳುವ ಮಾರ
ಜನಕಗೆ ತನುಮನ ಘನ ದೃಢದರ್ಪಿಸಿ ೨

ಪಿಡಿದು ಬಿಡದೆ ನೇಮ ಪಿಡಿದಡಿಗೆ ನೀ
ಒಡೆಯ ಶ್ರೀರಾಮನಾಮ ದೃಢವಿಟ್ಟು ಮರೆಯದೆ ೩

೯೨

ಮಾಧವ ನಮ್ಮ ಶ್ರೀಧವ
ಬಾಧೆಪಡಿಸದೆ ತನ್ನ ಪಾದದಾಸರ ಕಾಯ್ವ ಪ

ನಿರುತ ನೀರೊಳು ನಿಂದ ಈತ
ಚಾರು ನಿಗಮಗಳ ತಂದ ಬಲು
ಭಾರ ಪೊತ್ತನು ಬೆನ್ನಲಿಂದ ಆಹ
ಕೋರೆದಾಡೆಯಲಿಂದ ಘೋರದೈತ್ಯನ ಸಂ
ಹಾರವ ಮಾಡಿ ಭೂಭಾರವನಿಳುಹಿದ ೧

ಅರಮನೆಕಂಬದಲಿಂದ ಕಡು
ಘೋರ ರೂಪವ ತಾಳಿ ಬಂದ ಮಹ
ದುರುಳನುದರ ಬಗಿದುಕೊಂದ ಆಹ
ಧರೆಯನೀರಡಿ ಮಾಡಿವ ದನುಜನ ತುಳಿದು
ಚರಣದಾಸರ ಮನದೊರವಿತ್ತು ಸಲಹಿದ ೨

ವೀರತನದಿ ಕೊಡಲಿಪಿಡಿದ ಧರೆಯ
ಸಾರಕ್ಷತ್ರಿಯಮೂಲವಳಿದ ದೇವ
ಧಾರುಣಿಯೊಳು ನರನಾದ ಅಹ

ತೋರಿ ವಿಪಿನವಾಸ ಮೀರಿದಸುರನ ಕೊಂದು
ಮೂರುಲೋಕದ ಕಷ್ಟ ದೂರಮಾಡಿದ ಶೂರ ೩

ಗೊಲ್ಲಕುಲದಿ ಜನಿಸಿದ ಪುಂಡ
ಬಿಲ್ಲಿನಾಟವ ರಚಿಸಿದ ವೀರ
ಖುಲ್ಲ ಕಂಸನ ಮದ ಮುರಿದ ಆಹ
ನಲ್ಲೇರ್ಹದಿನಾರು ಸಹಸ್ರಬಲ್ಲಿದತನದಾಳಿ
ಎಲ್ಲ ಭಕ್ತರ ಇಷ್ಟಸಲ್ಲಿಸಿ ಪೊರೆದನು ೪

ಸಾರಿಬತ್ತಲೆ ಕದಲಿದ ಪರಮ
ನಾರಿಯರ ವ್ರತ ಭಂಗಿಸಿ ಮೆರೆದ
ಮೂರುಪುರದ ಗರ್ವಮುರಿದ ಆಹ
ಪಾರುಮಾಡಿದ ಸುರರ ಘೋರಕಂಟಕದಿಂದ
ಏರಿದ ಹಯ ನಮ್ಮ ಧೀರ ಶ್ರೀ ಗುರು ರಾಮ ೫

೯೩

ಮಾಧವ ಮಧುಸೂದನ ಗೋವರ್ಧನ ಪ

ದೋಷನಿವಾರಣ ಶೇಷಾರಿಗಮನ
ವಾಸುಕಿಗಿರಿಶಯನ ೧

ಕೀಟಕ ಸಂಹರ ಹಾಟಕಾಂಬರ
ತಾಟಕಿಪ್ರಾಣಹರಣ ೨

ಕೌಸ್ತುಭಮಾಲಾ ಕುಜನರ ಕಾಲ
ಕಂಸಾಸುರಾದಿ ಮರ್ದನ ೩

ಗೋಕುಲವಾಳಿದ ಗೋಪಿಯರ್ವರದ
ಗೊಪ ಗೋಪತಿ ನಂದನ ೪

ಮಂದರ ನಿಲಯ ಸಿಂಧುಜಾಪ್ರಿಯ
ಬಂಧುವೆ ಅನಾಥಜನ ೫

ಜಗದೋದ್ಧಾರಣ ಜಗತ್ರಯಮೋಹನ
ಜಗಜೀವನ ಪಾವನ ೬

ಶಂಖಚಕ್ರಾಂಕಿತನೆ ಕಿಂಕರಜನ ಪ್ರೀತ
ಶಂಖಸುರಾದಿ ಮರ್ದನ ೭

ಯದುಕುಲಸಂಭವ ಸದಯ ಯಾದವ
ಸದಮಲಸುಖಸದನ ೮

ಹರಿಗೋವಿಂದ ಪರಮಾನಂದ
ನರಹರಿ ಸಿರಿರಮಣ ೯

ಸಿರಿನರಸಿಂಗ ಪರಿಭವಭಂಗ
ಪರತರ ಗಿರಿಧಾರಣ ೧೦

ನಿತ್ಯನಿರಾಮಯ ನಿರ್ಗುಣ ನಿರ್ಭಯ
ನಿರ್ಮಲ ನಿರಂಜನ ೧೧

ಪರಮಪುರುಷ ಹರಿ ಸರ್ವೇಶ
ಸುರಮುನಿನುತಚರಣ ೧೨

ನಿಮಗೋಚರ ಜಗದಾಧಾರ
ಅಘನಾಶ ಭಜಕಜನ ೧೩

ವೇದಾದಿನಮಿತ ವೇದವೇದಾತೀತ
ಸಾಧುಸಜ್ಜನಪ್ರಾಣ ೧೪

ವರದಶ್ರೀರಾಮ ನಿರತರ ಪ್ರೇಮ
ಪರಿತರ ಪರಿಪೂರ್ಣ ೧೫

೯೪

ಮಾಧವ ಮುರಾರಿ ಶ್ರೀಹರಿ
ಯಾದವ ಯದುಪತಿ ರತಿಪತಿಪಿತ ಪೊರಿ ಪ

ಸನಕನಂದನ ಮನುಮುನಿವಂದಿತ
ತನುಮನಧವನು ನಿನಗಿತ್ತು ಮಣಿಯುವೆ ೧

ಪರಮಕರುಣಾಕರ ಪರಮಾತ್ಮನೆ ಎನ್ನ
ಪರಿತರ ದುರಿತವ ಪರಿಹರಿಸಭವ ೨

ಹರಿಶರಣರ ಸಂಗ ಕರುಣಿಸು ಮುದದಿ
ವರಶರಣದೊಳೆನ್ನ ಪೊರೆಯೊ ಶ್ರೀರಾಮನೆ ೩

೯೫

ಮಾಲಕೌಸ್ತುಭ ಸತ್ಯಭಾಮಲೋಲ ನೀಲಶಾಮಸುಂದರ
ಕಾಲಕಾಲದಿ ಬಿಡದೆ ಎನ್ನ ಪಾಲಿಸಭವನೆ ಪ

ಭುವನವೀರೇಳು ಸೂತ್ರಧಾರ ಭವದರೋಗಕ್ವೈದ್ಯ
ಭಕ್ತಭಯ ಪರಿಹಾರ ಸತ್ಯ ಋವಿಜಾಮನೋಹರ ೧

ಕೋಮಲಾಂಗ ಭಜಕಜನರ ಕಾಮಿತಾರ್ಥ ಕೊಡುವ ಸುರ
ಕಾಮಧೇನು ಕಲ್ಪವೃಕ್ಷ ಸ್ವಾಮಿ ದಯಾಕರ ೨

ಮಾರನಯ್ಯ ದುರಿತಸಂಹಾರ ವಿಷಮಘೋರ ಸಂ
ಸಾರ ಮಾಯಾಮೋಹವಿದೂರ ಕೇಶವ ೩

ಪರಕೆ ಪರಮ ಪರಾತ್ಪರ ಮರಣರಹಿತ ಮಾರಮಣ
ಉರಗಶಾಯಿ ಪರಮಪುರುಷ ಶರಣು ಸುಖಕರ ೪

ನಿಗಮವೇದ್ಯ ನಿರುಪಮಾತ್ಮ ಅಗಣಿತಗಣಿತಗಮ್ಯಚರಿತ
ಸುಗುಣ ಶಾಂತಾಕಾರ ಮೂರು ಜಗದ ಪಾಲಯಾ ೫

ಸಕಲವಿಘ್ನದೂರ ನಿನ್ನ ಭಕುತಿಯಿಂದ ಭಜಿಸಿಬೇಡ್ವೆ
ಮುಕುತಿಸಂಪದ ನೀಡಿ ಸಲಹು ಭಕ್ತವತ್ಸಲ ೬

ಕಂದಮಾಡಿದಪರಾಧಗಳ ತಂದೆ ದಯದಿ ಕ್ಷಮಿಸಿ ಬಂದ
ಬಂಧಗಳನು ಪರಿಹರಿಸಯ್ಯ ಸಿಂಧುಮಂದಿರ ೭

ನಾನಾಯೋನಿಯೊಳಗೆ ಪುಟ್ಟಿ ಜ್ಞಾನಗೆಟ್ಟು ಬಳಲುವಂಥ
ಹೀನ ಬವಣೆ ತಪ್ಪಿಸಯ್ಯ ದೀನಪಾಲ ೮

ನಿರುತ ನಿನ್ನ ಚರಣದೆಡೆಗೆ ಬರುವ ಸುಲಭಮಾರ್ಗ ಆವು
ದ್ವರವ ಪಾಲಿಸೊಲಿದು ಎನಗೆ ಕರುಣಸಾಗರ ೯

ದೋಷದಾರಿದ್ರ್ಯಗಳೆಲ್ಲ ನಾಶಗೈದು ಹರಿಯೆ ನಿಮ್ಮ
ದಾಸನೆನಿಸುದ್ಧಾರಮಾಡು ದೋಷನಾಶನ ೧೦

ಮರೆಯಬಿದ್ದ ತರಳನನ್ನು ಕರುಣದೃಷ್ಟಿಯಿಂದ ನೋಡಿ
ಸರ್ವಭಯ ಪರಿಹಾರಮಾಡು ಹರಿಸರ್ವೋತ್ತಮ ೧೧

ನಿನ್ನ ಒಲವು ಬಲವು ಎನಗೆ ಅನ್ಯಬಲವ ಒಲ್ಲೆಸ್ವಾಮಿ
ಮನ್ನಿಸಬೇಕಿನ್ನು ಮಗನ ಸನ್ನುತಾಂಗನೆ ೧೨

ನಂಬಿ ಭಜಿಪ ಬಕ್ತಜನರ ಇಂಬುದಾಯಕ ನೀನು
ಇಂಬುಗೊಟ್ಟು ಸಲಹು ಎನ್ನ ಅಂಬುಜಾಕ್ಷನೆ ೧೩

ಏನುತಪ್ಪು ಇರಲು ನೀನೆ ದಯದಿ ಕ್ಷಮಿಸಿ ಇನ್ನು
ನಾನಾಬೇನೆ ಕಳೆದು ಕಾಯೊ ಜಾನಕೀಶನೆ ೧೪

ಚಾರುವೇದ ಪೊಗಳುವಂಥಪಾರ ನಿನ್ನ ದಿವ್ಯಮೂರ್ತಿ
ತೋರಿಧನ್ಯನೆನಿಸು ಎನ್ನ ನಾರಸಿಂಹನೆ ೧೫

ಭಾರ ನಿನ್ನದಯ್ಯ ಬಂದ ಘೋರ ತಾಪತ್ರಯಂಗಳಿಂದ
ಪಾರುಮಾಡಿ ಕಾಯುವುದು ಕಾರುಣ್ಯ ನಿಧೆ ೧೬

ಪ್ರಾಣಹಾರಿ ಹೋಗಲು ನಿನ್ನ ಧ್ಯಾನವಗಲದಂತೆ ಎನಗೆ
ತ್ರಾಣಪಾಲಿಸಯ್ಯ ಮೊದಲು ಧ್ಯಾನದಾಯಕ ೧೭

ದಾಸನರಿಕೆ ದಯದಿ ಪೂರೈಸಿ ಕಾಯಬೇಕು ದೇವ
ಘಾಸಿಗೈಯದೆ ರಕ್ಷಿಸಯ್ಯ ದಾಸಪ್ರಿಯನೆ ೧೮

ಕೆಟ್ಟಶಕುನರಿಷ್ಟ ಸ್ವಪ್ನ ತಟ್ಟಬೇಕೆ ನಿನ್ನ ಪಾದ
ನಿಷ್ಠೆಯಿಂದ ಭಜಿಪರ್ಗೆ ಸೃಷ್ಟಿಕರ್ತನೆ ೧೯

ನಿತ್ಯ ನಿರ್ಮಲಾತ್ಮ ನಿನ್ನ ನಿತ್ಯಭಕ್ತಿ ಸುಖವನಿತ್ತು
ಸತ್ಯಸಂಧನೆನಿಸು ಎನ್ನ ಸತ್ಯರಾಧಾರ ೨೦

ಅರಿವು ನಿಲಿಸಿ ಮರವೆ ತರಿದು ಹರಿಯೆ ನಿಮ್ಮ ಕರುಣ ನೀಡಿ
ಮರಣ ಭಯವ ಪರಿಹರಿಸಯ್ಯ ಸಿರಿಯವಲ್ಲಭ ೨೧

ಭಾನುಕೋಟಿಪ್ರಕಾಶ ನಿನ್ನ ಧ್ಯಾನಿಸಿ ಮರೆಹೊಕ್ಕೆ
ನಾನಾಬೇನೆ ಗೆಲಿಸಿ ಕಾಯೊ ದಾನವಾಂತಕ ೨೨

೯೬

ಮಾವನ ಮರ್ದನ ಜಗದ ಜೀವನ ಪ

ಸೇವಕಜನ ಭಾವದೊಳಿಪ್ಪ
ದೇವದೇವ ದೇವಕಿ ಕಂದನೋ ಅ.ಪ

ಚೋರ ನವನೀತ ಜಾರತನದಿ ಮೀರಿದವನ
ಪಾರಮಹಿಮ ಪರಮಾತ್ಮ ನೀರಜಾಕ್ಷ ನಿರಂಜನ ೧

ಅಂಗನೆಯರ ಭಂಗಿಸಿದ ಅಂಗನೆಯಾಗಿ ಸಂಗರವ ಗೆಲಿದ
ಪಿಂಗದಿವನಮಹಿಮಾರಿಂದಂಗಜಾರಿ ವಂದ್ಯನೋ ೨

ನಾಮರೂಪಿಲ್ಲದವನು ನಾಮಧಾರಿ ಎನಿಸಿದನೆ
ಸ್ವಾಮಿ ರಾಮನ ಮಹಿಮೆ ಈ ಕಾಮಿಜನಗಳು ಬಲ್ಲರೇ ೩

೯೭

ಮೇಲ್ ಮೇಲ್ ಮೇಲ್ ಮೇಲ್ ಹರಿನಾಮ
ಮೇಲು ಮೂಜಗಸೂತ್ರ ಹರಿನಾಮ ಪ

ಕಾಲಕುಜನಕುಲ ಹರಿನಾಮ
ಪಾಲಸುಜನಗಣ ಹರಿನಾಮ
ಜಾಲಮಾಯ ದರ್ಪಣ್ಹರಿನಾಮ
ಮೂಲಮಂತ್ರ ವಿಶ್ವ ಹರಿನಾಮ ಅ.ಪ

ಶರನಿಧಿಮಂದಿರ ಹರಿನಾಮ
ಶರಧಿಮಥನ ಮುರಹರಿನಾಮ
ಪುರತ್ರಯಸಂಹರ ಹರಿನಾಮ
ಸುರಗಣಭೋಜನ ಹರಿನಾಮ
ಶರಣರ ಸಿರಿತಾನ್ಹರಿನಾಮ
ಪರತರ ಪಾವನ ಹರಿನಾಮ ೧

ಪಾಪನಿವಾರಣ ಹರಿನಾಮ
ಶಾಪವಿಮೋಚನ ಹರಿನಾಮ
ತಾಪತ್ರಯಗಳ್ಹರ ಹರಿನಾಮ
ಗೋಪೇರಾನಂದ ಲೀಲ ಹರಿನಾಮ
ಕಪಾಲಧರನುತ ಹರಿನಾಮ
ಗೌಪ್ಯಕೆ ಗೌಪ್ಯದ ಹರಿನಾಮ ೨

ದುರಿತ ದಾರಿದ್ರ್ಯ ದೂರ್ಹರಿನಾಮ
ಪರಿಹರ ಜರಾಮರಣ್ಹರಿನಾಮ
ನರನ ಸಿರಿಯ ಭಾಗ್ಯ ಹರಿನಾಮ
ಸ್ಮರಿಪರ ಸುರತರು ಹರಿನಾಮ
ಅರಿವಿನ ಅರಮನೆ ಹರಿನಾಮ
ಪರಕ ಪರಮಸಿರಿ ಹರಿನಾಮ ೩

ನಿಜಮತಿ ಭಂಡಾರ ಹರಿನಾಮ
ಕುಜಮತಿ ಖಂಡನ ಹರಿನಾಮ
ಭಜಕರನಿಜಧೇನ್ಹರಿನಾಮ
ಭುಜಗಾದ್ರಿ ಪರ್ಯಂಕ ಹರಿನಾಮ

ದ್ವಿಜರಿಗಮೃತನಿಧಿ ಹರಿನಾಮ
ಅಜನಿಗುತ್ಪತ್ತಿ ಮಂತ್ರ ಹರಿನಾಮ ೪

ವೇದಗಳಾಧಾರ ಹರಿನಾಮ
ಸಾಧುಸಂತ ಪ್ರೇಮ ಹರಿನಾಮ
ಭೇದವಾದರಹಿತ್ಹರಿನಾಮ
ಸಾಧಿಸಲಸದಲ ಹರಿನಾಮ
ಆದಿ ಅನಾದಿವಸ್ತು ಹರಿನಾಮ
ಭೋಧ ಸ್ವಾದಸಾರ ಹರಿನಾಮ ೫

ಕಾಲನಿಗೆ ಕಾಲ ಹರಿನಾಮ
ಕೀಳರ ಎದೆಶೂಲ್ಹರಿನಾಮ
ಶೀಲರ ಜಪಮಾಲ್ಹರಿನಾಮ
ಲೋಲಗಾನಪ್ರಿಯ ಹರಿನಾಮ
ಕೀಲಿ ವೇದಾಂತದ ಹರಿನಾಮ
ಫಾಲನೇತ್ರಗೆ ಶಾಂತಿ ಹರಿನಾಮ ೬

ಪ್ರಳಯಕೆ ಅಳುಕದ ಹರಿನಾಮ
ಪ್ರಳಯ ಪ್ರಳಯಗೆಲುವ್ಹರಿನಾಮ
ಮಲಿನದಿ ಸಿಲುಕದ ಹರಿನಾಮ
ಚಲಿಸದ ನಿರ್ಮಲ ಹರಿನಾಮ
ಬೆಳಗಿನ ಬೆಳಗೀ ಹರಿನಾಮ
ಕುಲಮುನಿ ಪಾವನ ಹರಿನಾಮ ೭

ವಿಷಮಸಂಸಾರಖಡ್ಗ ಹರಿನಾಮ
ವ್ಯಸನಕಾಷ್ಠಕಗ್ನಿ ಹರಿನಾಮ
ವಿಷಕೆ ಮಹದಮೃತ ಹರಿನಾಮ
ಮಸಣಿಮಾರಿಧ್ವಂಸ ಹರಿನಾಮ
ಅಸಮಸುಖದ ಖಣಿ ಹರಿನಾಮ
ವಸುದೇಜೀವಜೀವಳ್ಹರಿನಾಮ ೮

ಧರ್ಮಶಾಸ್ತ್ರದ ಗುಟ್ಟು ಹರಿನಾಮ
ಮರ್ಮ ತಿಳಿಸುವ ರಟ್ಟು ಹರಿನಾಮ
ಕರ್ಮ ಕಡಿಯುವ ಶಸ್ತ್ರ ಹರಿನಾಮ
ನಿರ್ಮಲಾನಂದ ಪದವೀ ಹರಿನಾಮ
ನಿರ್ಮಾಣ ನಿಜಜ್ಞಾನ ಹರಿನಾಮ
ಬ್ರಹ್ಮಕಿಟ್ಟಿಗುರಿ ಹರಿನಾಮ ೯

ಭವಗುಣಮರ್ದನ ಹರಿನಾಮ
ಭವನಿಧಿ ಸೇತುವೆ ಹರಿನಾಮ
ಭವನ ಭೀತಿಹರ ಹರಿನಾಮ
ರವಿಕುಲ ಪಾವನ ಹರಿನಾಮ
ಬುವಿತ್ರಯ ಪವಿತ್ರ ಹರಿನಾಮ
ಸಾಯುಜ್ಯಪದಸ್ಥಾನೀ ಹರಿನಾಮ ೧೦

ಸತ್ಯಕ್ಕೆ ಬಹು ನಿರ್ಕು ಹರಿನಾಮ
ಮಿಥ್ಯಕ್ಕೆ ಅನರ್ಥ ಹರಿನಾಮ
ನಿತ್ಯಕ್ಕೆ ಮಹಸುರ್ತು ಹರಿನಾಮ
ಚಿತ್ತಕ್ಕೆ ಚಿಜ್ಯೋತಿ ಹರಿನಾಮ
ಅರ್ತವರಿಗೆ ಗುರ್ತು ಹರಿನಾಮ
ಭೃತ್ಯಜನರ ಮತ್ತು ಹರಿನಾಮ ೧೧

ಮಾಯಕ್ಕೆ ಪ್ರತಿಮಾಯ ಹರಿನಾಮ
ಮಾಯ ಕತ್ತಲುನಾಶ ಹರಿನಾಮ
ಕಾಯಕ್ಕೆ ಶೋಭಾಯ ಹರಿನಾಮ
ಭಾವಕ್ಕೆ ಪರಿಶುದ್ಧ ಹರಿನಾಮ
ತಾಯಿತಂದೆ ಜೀವಕ್ಹರಿನಾಮ
ಸೇವನ ಅಮೃತ ಹರಿನಾಮ ೧೨

ಪುಣ್ಯ ಶರಧಿಗೆ ಚಂದ್ರ್ಹರಿನಾಮ
ಮನ್ನಣೆ ಮೂಲೋಕದ್ಹರಿನಾಮ
ಧನ್ಯರಿಗೆ ಧನ್ಯ ಹರಿನಾಮ

ಉನ್ನತ ಸಾಮ್ರಾಜ್ಯ ಹರಿನಾಮ
ಮುನ್ನ ಕೈವಲ್ಯಪದ ಹರಿನಾಮ
ಸನ್ನಿಧಿ ವೈಕುಂಠ ಹರಿನಾಮ ೧೩

ನಿಗಮಕೆ ಸೊಬಗಿನ ಹರಿನಾಮ
ಸುಗುಣರೊಳ್ನೆಲೆಗೊಂಡು ಹರಿನಾಮ
ಅಗೋಚರ ಆಗಮಕ್ಹರಿನಾಮ
ಸೊಗಸುವ ಭಕ್ತರಲ್ಹರಿನಾಮ
ಅಗಜೇಶ ಪೊಗಳುವ ಹರಿನಾಮ
ಅಗಜೆಯು ಒಪ್ಪಿದ ಹರಿನಾಮ ೧೪

ವಿಮಲ ಗುಣಗಣ ಹರಿನಾಮ
ದಮೆ ದಯಾನ್ವಿತ ಹರಿನಾಮ
ಶಮೆ ಶಾಂತಿಮಂದಿರ ಹರಿನಾಮ
ಸುಮನಸ ಕಲ್ಪದ್ರುಮ ಹರಿನಾಮ
ನಮಿತ ಸುರಾದ್ಯರಖಿಲ ಹರಿನಾಮ
ಅಮಿತ ವಿಶ್ವರೂಪ ಹರಿನಾಮ ೧೫

ಮೂರು ಕಾಲದರಿವದ್ಹರಿನಾಮ
ಮೂರಾರಿಕ್ಕಡಿಗೈವುದ್ಹರಿನಾಮ
ಪಾರಪಂಚ ಪರುಷ್ಹರಿನಾಮ
ಸಾರಸೌಖ್ಯಾಂಬುಧಿ ಹರಿನಾಮ
ದಾರಿ ವೈಕುಂಠಕ್ಕೆ ಹರಿನಾಮ
ಸೇರಿ ದಾಸರನಗಲದ್ಹರಿನಾಮ ೧೬

ಭಕ್ತವತ್ಸಲ ಜಯ ಹರಿನಾಮ
ಮುಕ್ತಿದಾಯಕ ಜಯ ಹರಿನಾಮ
ಹತ್ತಾವತಾರ ಜಯ ಹರಿನಾಮ
ಸತ್ಯ ಶೀಲ ಜಯ ಹರಿನಾಮ
ನಿತ್ಯ ನಿರುಪಮ ಜಯ ಹರಿನಾಮ
ಕರ್ತೃ ಶ್ರೀರಾಮ ಜಯ ಹರಿನಾಮ ೧೭

೬೮

ರಾಮ ನಿಮ್ಮ ನಾಮಧ್ಯಾನ
ಪಾಮರನ ಜಿಹ್ವೆ ಮೇಲೆ ನಿಲಿಸು ಪ

ಜಗದಭಿಮಾನ ಬಿಡಿಸಿ
ಸುಗುಣ ಸಂತಸಂಗ ಪಾಲಿಸಿ
ಸುಗುಣಾಂತರಂಗ ನಿನ್ನ
ಸಗುಣ ಪೊಗಳಿಸೆನ್ನ ಮುಖದಿ ೧

ಮದಮತ್ಸರಗಳನು ಬಿಡಿಸಿ
ಸದಮಲ ಜ್ಞಾನಾನಂದದಿರಿಸಿ
ಸದಮಲಾತ್ಮ ನಿಮ್ಮ ಮೂರ್ತಿ
ಸದಾಯೆನ್ನ ನೇತ್ರದೊಳ್ನಿಲಿಸು ೨

ಕಾಮಿತಂಗಳ ಕಡೆಹಾಯ್ಸಿ
ಭೂಮಿ ಸೀಮೆ ಮೋಹ ತೊರೆಸಿ
ಸ್ವಾಮಿ ಮಮಪ್ರಾಣದಾರ್ಯ ಶ್ರೀ
ರಾಮದಾಸನೆನಿಸು ಒಲಿದು ೩

೬೯

ರಾಮ ರಾಮ ಹರಿ ರಾಮ ರಾಮ ಸೀತಾ
ರಾಮ ರಾಮ ನುತಪ್ರೇಮ ರಾಮ ಓಂ ಪ

ರಾಮ ರಾಮ ಪುಣ್ಯನಾಮ ಪಾಪವಿ
ರಾಮ ಕುಜನಕುಲ ಭೀಮ ರಾಮ ಓಂ ಅ.ಪ

ಶಾಮಸುಂದರ ಸುಖಧಾಮ ದಾಮೋದರ
ಕಾಮಿತದಾಯಕ ಸ್ವಾಮಿ ಶ್ರೀರಾಮ ಓಂ
ಸೋಮಕಸಂಹರ ಕಾಮಜನಕ ತ್ರೈ
ಭೂಮಿಪಾಲಯ ನಿಸ್ಸೀಮ ರಾಮ ಓಂ ೧

ಕಡಲಮಥನ ಪಾಲ್ಗಡಲನಿಲಯ ಮಹ
ಕಡಲಬಂಧಕ ದಯಗಡಲ ರಾಮ ಓಂ
ಜಡಜನಾಭ ಭವತೊಡರು ನಿವಾರಣ
ಕಡಲಸುತೆಯ ಪ್ರಾಣದೊಡೆಯ ರಾಮ ಓಂ ೨

ದೋಷ ವಿನಾಶನ ಶೇಷಶಯನ ದಯ
ಭೂಷಣ ಕೇಶವ ರಾಮರಾಮ ಓಂ
ಭಾಸುರಕೋಟಿಪ್ರಕಾಶ ಅಪ್ರಮೇಯ
ಸಾಸಿರನಾಮಕ ರಾಮ ರಾಮ ಓಂ ೩

ಭಕ್ತಾಂತರ್ಗತ ಭಕ್ತವತ್ಸಲ
ನಿತ್ಯ ನಿರ್ಮಲಾತ್ಮ ರಾಮ ರಾಮ ಓಂ
ಸತ್ಯ ಸರ್ವೋತ್ತಮ ಮೃತ್ಯು ವಿಜಯ ನಿಜ
ಸತ್ಯಸಂಕುಲಧಾಮ ರಾಮ ರಾಮ ಓಂ ೪

ಜಾನಕಿರಮಣ ದೀನ ಪಾಲನ
ದಾನವಾಂತಕ ಹರಿ ರಾಮ ಓಂ
ಧ್ಯಾನದಾಯಕ ಜಗತ್ರಾಣ ಪ್ರವೀಣ ಮಮ
ಪ್ರಾಣೇಶ ಶ್ರೀರಾಮ ನಮ: ನಮ: ಓಂ ೫

೧೦೦

ರಾಮಯನ್ನಮ: ಎನ್ನೋ ರಾಮಾಯನ್ನಮ:
ನಾಮವರಿತದ್ದೇ ರಾಮಾಯನ್ನಮ: ಪ

ಬಂದದ್ದು ಬಾರದ್ದು ರಾಮಾಯನ್ನಮ:
ತಂದದ್ದು ತಾರದ್ದು ರಾಮಾಯನ್ನಮ:
ಅಂದದ್ದು ಆಡದ್ದು ರಾಮಾಯನ್ನಮ:
ಮಿಂದದ್ದು ಮೀಯದ್ದು ರಾಮಾಯನ್ನಮ: ೧

ಉಂಡದ್ದು ಉಟ್ಟದ್ದು ರಾಮಾಯನ್ನಮ:
ಕೊಂಡದ್ದು ಕೊಟ್ಟದ್ದು ರಾಮಾಯನ್ನಮ:

ಕಂಡದ್ದು ಕಾಣದ್ದು ರಾಮಾಯನ್ನಮ:
ಬಂಡಾದದ್ದಾಗದ್ದು ರಾಮಾಯನ್ನಮ: ೨

ಇದ್ದದ್ದು ಇಲ್ಲದ್ದು ರಾಮಾಯನ್ನಮ:
ಮೆದ್ದದ್ದು ಮೆಲ್ಲದ್ದು ರಾಮಾಯನ್ನಮ:
ಬಿದ್ದದ್ದು ಬೀಳದ್ದು ರಾಮಾಯನ್ನಮ:
ಕದ್ದದ್ದು ಕದಿಯದ್ದು ರಾಮಾಯನ್ನಮ: ೩

ಬಿತ್ತಿದ್ದು ಬೆಳೆದದ್ದು ರಾಮಾಯನ್ನಮ:
ಎತ್ತಿದ್ದು ಎತ್ತದ್ದು ರಾಮಾಯನ್ನಮ:
ಸುತ್ತಿದ್ದು ಮುತ್ತಿದ್ದು ರಾಮಾಯನ್ನಮ:
ಅತ್ತದ್ದು ಹೊತ್ತದ್ದು ರಾಮಾಯನ್ನಮ: ೪

ಭಕ್ತಿ ಭಾವನೆಯೆಲ್ಲ ರಾಮಾಯನ್ನಮ:
ಯುಕ್ತಿ ಯೋಚನೆಯೆಲ್ಲ ರಾಮಾಯನ್ನಮ:
ಯುಕ್ತಾಯುಕ್ತವು ರಾಮಾಯನ್ನಮ:
ಮುಕ್ತಿ ಸಾಧ್ಯ ಶ್ರೀ ರಾಮಾಯನ್ನಮ: ೫

೧೦೧

ರಾಮಾಯನ್ನಮ: ರಾಮ ಸದಾ ಓಂ
ರಾಮಾಯನ್ನಮ: ರಾಮ ಪ

ವೇದಾದಿ ರಾಮ
ವೇದಾಂತರಾಮ
ವೇದಾಂತ ವೇದಾದಿಗಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೧

ವೇದಮಯ ರಾಮ
ವೇದ ನಿರ್ಮಯ ರಾಮ
ವೇದ ವೇದಾತೀತಕಾದಿ ರಾಮ ಮಹ

ದಾದಿಗಾದಿರಾಮ (ಸದಾ) ಓಂ ಮಹ
ದಾದಿಗಾದಿ ರಾಮ ೨

ನಾದಯುತಾದಿ ರಾಮ
ನಾದರಹಿತಾದಿ ರಾಮ
ನಾದಾತೀತಾದ್ಯನಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೩

ಆದಿಗಾದಿರಾಮ ಅ
ನಾದಿಗಾದಿರಾಮ
ಆದಿ ಅನಾದಿಗಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೪

ಸತ್ಪಥದಾದಿರಾಮ ಸ
ಚ್ಚಿತ್ತದಾದಿರಾಮ
ಉತ್ಪತ್ತಿ ಸ್ಥಿತಿಲಯಕಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೫

ಅರ್ಘ್ಯ ಅರ್ಘ್ಯಾದಿ ರಾಮ
ಸ್ವರ್ಗ ಭೋಗಾದಿ ರಾಮ
ಧೀರ್ಘಕ್ಕೆ ದೀರ್ಘಾದಿಗಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೬

ಜಪತಪದಾದಿ ರಾಮ
ಗುಪಿತ ಗುಪ್ತಾದಿ ರಾಮ
ಅಪರೋಕ್ಷ ಪರೋಕ್ಷಾದಿಗಾದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೭

ಮಂತ್ರಮಯಾದಿ ರಾಮ
ಮಂತ್ರ ನಿರ್ಮಯ ರಾಮ
ಮಂತ್ರ ತಂತ್ರಾದಿಗಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೮

ಮಾಯಮಯಾದಿ ರಾಮ
ಮಾಯ ನಿರ್ಮಯ ರಾಮ
ಮಾಯ ಮಾಯಾದಿಗಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೯

ಕಾಲಕಾಲದಿ ರಾಮ
ಕಾಲಮೂಲಾದಿ ರಾಮ
ಕಾಲಕಾಲನಿಗಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೧೦

ದಶರಥರಾಮ
ದಶರಥಗಾದಿ ರಾಮ
ದಶವಿಧೌತಾರದಾದಿಗಾದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೧೧

ದಿವ್ಯಮಹಿಮಾದಿ ರಾಮ
ಭವ್ಯಚರಿತಾದಿ ರಾಮ
ದಿವ್ಯ ದೇವರ ದೇವರಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೧೨

ಬ್ರಹ್ಮನೆಯಾದಿ ರಾಮ
ನಿರ್ಮಲಾತ್ಮಾದಿ ರಾಮ
ಬ್ರಹ್ಮ ಬ್ರಹ್ಮಾದಿಗಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೧೩

ಸತ್ಯ ಸತ್ಯಾದಿ ರಾಮ
ನಿತ್ಯ ನಿತ್ಯಾದಿ ರಾಮ
ತತ್ವ ಪಂಚದಾದಿಗಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೧೪

ಭುವಿತ್ರಯದಾದಿ ರಾಮ
ಭವಭವದಾದಿ ರಾಮ
ದಿವನಿಶಿಗಳಿಗಾದಿ ಆದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೧೫

ಬೋಧಾದಿಮಯ ರಾಮ
ಬೋಧಾದಿಗಾದಿ ರಾಮ ಸ
ಸಾಧನ ಸಿದ್ಧಿಯಾದಿಗಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೧೬

ನಿರುಪಮ ರಾಮ
ನಿರ್ನಾಮ ರಾಮ
ನಿರ್ಗುಣ ನಿರಂಜನಾದಿಗಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೧೭

ಭಕ್ತಭಿರಾಮ
ಮುಕ್ತೀಶ ರಾಮ
ನಿತ್ಯ ನಿರ್ಮಲ ಜಗದಾದಿರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೧೮

ಚಿನುಮಯ ರಾಮ
ಚಿದ್ರೂಪ ರಾಮ
ಜನನಮರಣ ಹರಣಾದಿ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೧೯

ರಮಾಧವ ರಾಮ
ಕ್ಷಮೆಯುತ ರಾಮ
ಸುಮನಸ ಭಕ್ತಾಧೀನ ರಾಮ ಮಹ
ದಾದಿಗಾದಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೨೦

ಜಯ ಜಯ ರಾಮ
ಜಯ ಶ್ರೀರಾಮ
ಜಯವೆಂದು ನೂರೆಂಟು ಪೊಗಳಲೀ ನಾಮ
ದಯದೀಯ್ವಮುಕ್ತಿ ರಾಮ ಸದಾ ಓಂ ಮಹ
ದಾದಿಗಾದಿ ರಾಮ ೨೧

೧೦೨

ರಂಗಧ್ಯಾನ ಶ್ರೀರಂಗನ ಧ್ಯಾನ ಮುಕ್ತಿಗೆ ಸಾಧನ
ಮಂಗಲಮೆನಿಪ ಅಂಗಕೆ ಶೋಭೆ ಪ

ಮನುಮುನಿ ಸುರಗಣ ಮನಮಂದಿರನ
ನೆನವನುದಿನದಲಿ ಮನಕಚಲಾನಂದನ ೧

ಉರಗಶಯನ ಗಿರಿಧರ ಮುರಾರಿ
ಚರಣಸ್ಮರಣ ಸ್ಥಿರ ಪರಲೋಕಕರವಶ ೨

ಆ ಮಹಾಮಹಿಮ ಸ್ವಾಮಿ ಶ್ರೀರಾಮ
ನಾಮಭಜನ ಸದಾ ಕ್ಷೇಮಸಂಪದ ಸುಖ ೩

೧೦೩

ವನಜಾಕ್ಷನ ಪಾದ ಕಂಡೆ ನಾ ಕನಸಿನೊಳ್
ನೆನೆವ ದಾಸರ ಕಾಮಧೇನು ನೀನಹುದೊ ಪ

ಎಂದು ಕಾಂಬೆನು ನಿನ್ನ ಸುಂದರ ಮೂರುತಿಯ
ನೆಂದು ಬಯಸುತಲಿರ್ದೆ ಸಂಧಿಸಿತಿಂದಿಗೆ ೧

ಕಮಲನಾಭನೆ ನಿನ್ನಯ ಅಮರ ಮಹಿಮೆ ಕಾಣ್ವ
ಭ್ರಮೆಯಪಡುತಲಿರ್ದೆ ಕ್ರಮದಿ ಸಾಧಿಸಿತಿಂದು ೨

ಚಿನುಮಯ ಶ್ರೀರಾಮ ಘನ ಮಂದಮತಿ ನಾನು
ನೆನವು ಮರೆದೆ ಕ್ಷಮಿಸಿ ಕನಿಕರದಿ ಕಾಯೊ ೩

೧೦೪

ವಾರಿಧಿನಿಲಯನೆಂಥಾತ
ತೀರದ ಮಹಿಮಗಾರನೀತ ಪ

ಸಾರಿ ನಂಬಿ ಭಜಿಸಿ ಸತತ
ಘೋರ ದುರ್ಭವಳಿರೋ ನಿರುತ ಅ.ಪ

ದೇವದೇವ ದಿವ್ಯಚರಿತ
ದೇವಿದೇವಕಿ ಗರ್ಭಸಂಜಾತ
ಗೋವುಗಳನು ಕಾಯಿದಾತ
ಗೋವಳರೊಡನೆ ಆಡಿದಾತ

ಮಾವನಮರ್ದಿಸಿ ಭುವಿಗೀತ
ಕೇವಲಸೌಖ್ಯ ನೀಡಿದಾತ ೧

ಗೋವರ್ಧನಗಿರಿ ಎತ್ತಿದಾತ
ಗೋವಳರನ್ನು ಸಲಹಿದಾತ
ಮಾಯಾಪೂತನಿಯಸುವನೀತ
ಮಾಯದಿಂದ ಹೀರಿದಾತ
ತಾಯಿ ಯಶೋದಾದೇವಿಗೀತ
ಬಾಯಲಿ ವಿಶ್ವ ತೋರಿದಾತ ೨

ಅಸಮಾಯದಾಟವಾಡುತ
ಶಿಶುವಾಗಿ ತೋರಿದಾತ
ಕುಶಲಗೋಪಿಕಾಸ್ತ್ರೀಯರನೀತ
ವಸನ ಕಳೆದು ನಿಲಿಸಿದಾತ
ವಸುಧೆ ಭಾರವನಿಳುಹಿದಾತ
ನೊಸಲಗಣ್ಣನ ಸಲಹಿದಾತ ೩

ಬಾಲೆಗೋಪಿಯರಿಗೊಲಿದಾತ
ಪಾಲಮೊಸರು ಬೆಣ್ಣೆ ಮೆಲಿದಾತ
ಕೊಳಲನೂದುತ ನಲಿದಾಡಿದಾತ
ಬಾಲನಾಗಿ ಲೀಲೆ ತೋರಿದಾತ
ಕಾಳರಕ್ಕಸರ ಕುಲಭೀತ
ಕಾಳಿಯನ್ನು ಮೆಟ್ಟಿ ಸೀಳಿದಾತ ೪

ಹಿಡಿ ಅವಲಕ್ಕಿಗೆ ಒಲಿದಾತ
ಮಡದಿಯ ಮಾನವ ಕಾಯ್ದಾತ
ದೃಢ ಭಕ್ತರೋಲ್ಲಾಸವಾದಾತ
ಇಡೀ ಭುವನಗಳ್ಪೊತ್ತಾಳುವಾತ
ಮೃಡ ಅಜ ಸುರಾದಿವಂದಿತ
ಒಡೆಯ ಶ್ರೀ ರಾಮಯ್ಯ ಮಮದಾತ ೫

೧೦೫

ವಿಠಲ ನಮೋ ವಿಠಲ
ಮುಟ್ಟಿಭಜಿಪ ದೀನನಿಷ್ಟಾರ್ಥ ಪಾಲಿಸು ಪ

ಹೇಸಿಪ್ರಪಂಚದಿ ನಿಂದು ಮಹ
ಕ್ಲೇಶಪಂಚಕದಲಿ ಬೆಂದು ಕೆಟ್ಟ
ವಾಸನತ್ರಯದಿಂದ ನೊಂದು ಬಲು
ಘಾಸಿಯಾದೆ ದಯಾಸಿಂಧು ಆಹ
ದೋಷದೂರನೆ ಎನ್ನ ದೋಷನಾಶನ ಗೈದು
ಪೋಷಿಸು ಅನುಮೇಶ ದಾಸನೊಳ್ದಯವಾಗಿ ೧

ಹರಿಭಕ್ತ್ಯೆಂಬುವ ಕವಚ ಬಿಟ್ಟು ಮಾಯ
ಮರವೆಯೆಂಬುವ ಕವಚ ತೊಟ್ಟು ಬಲು
ದುರುಳತನಕೆ ಮನಗೊಟ್ಟು ಮಹ
ದರಿವಿನ ಅರಮನೆ ಸುಟ್ಟು ಆಹ
ಪರಮದುರಿತದಿ ಬಿದ್ದು ಮರುಳನಾಗಿ ನಿಮ್ಮ
ಚರಣಸರೋಜಕ್ಕೆ ಮರೆಹೊಕ್ಕೆ ಕರುಣಿಸು ೨

ಹೊಂದಿ ಭಜಿಪೆ ನಿನ್ನ ಬೇಡಿ ಎನ್ನ
ಮಂದಮತಿಯ ಕಡೆಮಾಡಿ ನಿಜಾ
ನಂದ ಸುಜ್ಞಾನಪದ ನೀಡಿ ಭವ
ಬಂಧ ಸಂಕೋಲೆ ಗಡ ಕಡಿ ಆಹ
ಸಿಂಧುನಿಲಯ ಬೇಗ ದಂದುಗ ಪರಿಹರಿಸಿ
ಕಂದನ್ನ ಉದ್ಧರಿಸು ತಂದೆ ಶ್ರೀರಾಮಯ್ಯ ೩

೧೦೬

ವಿಮಲಮತಿಯ ಪಾಲಿಸಭವ
ಅಮಿತದಯಾರ್ಣವ ದೇವ ಪ

ದೀನಬಂಧು ಜ್ಞಾನಸಿಂಧು
ದೀನನೊಳು ನೀನೆ ನಿಂದು
ಹೀನಮತಿಯ ತರಿದು. ತವ
ಧ್ಯಾನ ಸದಾನಂದದಿಡುವ ೧

ಆಶಾಪಾಶಗಳನು ತುಳಿದು
ದೋಷರಾಸಿಗಳನು ಕಡಿದು
ಶ್ರೀಶ ನಿಮ್ಮ ಸಾಸಿರನಾಮವ
ಧ್ಯಾಸಕಿತ್ತು ಜ್ಞಾನ ಕೊಡುವ ೨

ಸತ್ಯ ಶ್ರೀರಾಮ ನಿಮ್ಮ ಪಾದ
ಭಕ್ತಿಯಿಂದ ಬೇಡ್ವೆ ಸದಾ
ಚಿತ್ತ ಶುದ್ಧಿಗೈದು ಎನಗಾ
ನಿತ್ಯ ಮುಕ್ತಿ ನೀಡಿ ಬೇಗ ೩

೧೦೭

ವಿಶ್ವಧಾರನೋ ಶ್ರೀಶ ವಿಶ್ವಕಾರನೋ
ವಿಶ್ವ ವಿಶ್ವ ವಿಶ್ವಭರಿತ ವಿಶ್ವರಕ್ಷ ವಿಶ್ವಚರಿತ ಪ

ನಾದಭರಿತನೋ ಹರಿ ನಾದಾತೀತನೋ
ವೇದಾಧರನೋ ರಂಗ ವೇದ ಗೋಚರನೋ
ವೇದವೇದಾಂತ ಸ್ವಾದ ನಿಖಿಲ
ಬೋಧರೂಪ ಭೇದರಹಿತ
ಆದಿ ಅನಾದಿದಾತ ಸತತ
ಸಾಧುಸಜ್ಜನವಿನುತ ಅಮಿತ ೧

ದೇವದೇವನೋ ಸ್ವಾಮಿ ದಿವ್ಯಚರಿತನೋ
ಕಾವ ಕರುಣನೋ ಭಕ್ತಿ ಭಾವಪೂರ್ಣನೋ
ಸಾವುಹುಟ್ಟು ಭಯವಿದೂರ
ಮಾಯಗೆಲಿದ ಮಹಪ್ರಕಾಶ

ಭಾವಜಜನಕ ಭವಭಂಗ
ಸೇವಕಜನರ ಜೀವದಾಪ್ತ ೨

ದೋಷನಾಶನೋ ಕೃಷ್ಣ ಮೀಸಲಾತ್ಮನೋ
ಭಾಸುರಂಗನೋ ಜಗದೀಶ ಗಮ್ಯನೋ
ವಾಸುಕಿಶಯನ ವಾಸುದೇವ
ಸಾಸಿರನಾಮದೊಡೆಯ ಇಂದಿ
ರೇಶ ಗೋವಿಂದ ಪೋಷಿಸೆನ್ನ
ಶ್ರೀಶ ಶ್ರೀರಾಮದಾಸಪ್ರಿಯ ೩

೧೦೮

ವಂಚನೆಲ್ಲಿಹುದಯ್ಯ ವೈಕುಂಠಪತಿ
ಗೊಂಚನೆಲ್ಲಿಹದಯ್ಯ ಪ

ವಂಚನೆಲ್ಲಿಹ್ಯದು ವಿರಂಚಿತಾತನಿಗೆ
ಕಿಂಚಿತ್ತು ಧ್ಯಾನಕ್ಕಾಗೊಂಚನಿಲ್ಲದೆ ಬಂದ ಅ.ಪ

ಚರಣದಾಸರೆಂದು ಪಾಂಡವರ
ತುರಗಕಾಯ್ದ ನಿಂದು
ನರಗೆ ಬೆಂಬಲನಾಗಿ ತಿರುಗಿದ ಧುರದಲಿ
ಜರ ಮರೆಯಾಗದೆ ಪರಮಕರುಣಾಕರ ೧

ಜಾಗುಮಾಡುತಲಿವ ಭಕ್ತರ
ಯೋಗಕ್ಷೇಮ ತಿಳಿವ
ನೀಗದಂಥ ಮಹಾಭೋಗಭಾಗ್ಯವಿತ್ತು
ಬಾಗಿಲ ಕಾಯ್ದನು ಸಾಗರನಿಲಯ ೨

ಜಾರನೆನಿಸಿಕೊಂಡ ಒಲಿದು
ಚೋರನೆನಿಸಿಕೊಂಡ
ತೋರಿದವರ ಮನಸಾರ ವರವಿತ್ತು ಭೂ
ಭಾರವಿಳುಹಿದ ನಮ್ಮ ಧೀರ ಶ್ರೀಗುರುರಾಮ ೩

೧೦೯

ಶರಣಜನರ ಪಾಲ ಹರಿ ದಯಾಸಿಂಧುವೆ ವೆಂಕಟೇಶ
ಮರೆಯದೆ ಸಲಹೆನ್ನ ದೀನಜನಾಪ್ತನ ವೆಂಕಟೇಶ ಪ

ಕರಿ ಧ್ರುವ ಪ್ರಹ್ಲಾದ ಪಾಂಚಾಲಿ ಪಾಲನೆ ವೆಂಕಟೇಶ
ದುರುಳರಕ್ಕಸಹರ ಹರಸುರನಮಿತನೆ ವೆಂಕಟೇಶ
ಪರಮಪಾವನ ಸಿರಿಯರ ಸಖಜೀವನೆ ವೆಂಕಟೇಶ
ದುರುಳಮಾತ ನೀನಳಿದು ಗೋವಳರ್‍ಪೊರೆದನೆ ವೆಂಕಟೇಶ ೧

ವಸುದೇವ ದೇವಕಿ ಬಸಿರೊಳು ಬಂದನೆ ವೆಂಕಟೇಶ
ಕುಶಲದಿ ವಸುಧೆಲಮಮಹಿಮೆ ತೋರ್ದನೆ ವೆಂಕಟೇಶ
ಅಸುರ ಕಂಸನ ಕುಟ್ಟಿ ಗೋಕುಲರಿದನೆ ವೆಂಕಟೇಶ
ಶಶಿಮುಖಿ ಗೋಪಿಯರಾನಂದಲೀಲನೆ ವೆಂಕಟೇಶ ೨

ಮಂದರಧರ ಗೋವಿಂದ ಮುಕುಂದನೆ ವೆಂಕಟೇಶ
ಸಿಂಧುಶಯನ ಆನಂದನ ಕಂದನೆ ವೆಂಕಟೇಶ
ಇಂದಿರೆಯರ ಬಿಟ್ಟು ಭೂಲೋಕಕ್ಕಿಳಿದನೆ ವೆಂಕಟೇಶ
ಸುಂದರಗಿರಿಯ ಭೂವೈಕುಂಠವೆನಿಸಿದನೆ ವೆಂಕಟೇಶ ೩

ಬಣಗರಸೊಕ್ಕನು ಕ್ಷಣಕ್ಷಣಕೆ ಮುರಿದನೆ ವೆಂಕಟೇಶ
ಮನಮುಟ್ಟಿ ಬೇಡ್ವರ ಮನದಿಷ್ಟವಿತ್ತನೆ ವೆಂಕಟೇಶ
ಎಣಿಕೆಗೆ ಮೀರಿದ ದ್ರವ್ಯ ಕೂಡಿಟ್ಟನೆ ವೆಂಕಟೇಶ
ಘನಘನಮಹಿಮೆಯ ಭುವನದಿ ತೋರ್ದನೆ ವೆಂಕಟೇಶ ೪

ನಂಬಿದೆ ನಿನ್ನ ಪಾದಾಂಬುಜಗಳನ್ನು ವೆಂಕಟೇಶ
ಬೆಂಬಲವಿರ್ದು ನೀ ಸಂಭ್ರಮದಿ ಸಲಹೆನ್ನ ವೆಂಕಟೇಶ
ನಂಬಿದ ದಾಸರ ಭವಾಂಬುಧಿ ಗೆಲಿಪನೆ ವೆಂಕಟೇಶ
ಅಂಬುಜಮುಖಿ ಸೀತಾಪತಿ ಶ್ರೀರಾಮನೆ ವೆಂಕಟೇಶ ೫

೧೧೦

ಶರಣು ಸಹಜಭಾವ ಸಿರಿಯರ ಜೀವ
ಶರಣು ಶರಣು ದೇವ ದೇವ ಪ

ಶರಣು ನಿನ್ನ ಚರಣಸೇವೆ ಕರುಣಿಸೆನಗೆ
ನಿರುತದಭವ ಪರಮಪಾವನ ನಿಮ್ಮ
ಚರಿತ ಕರುಣಿಸೆನ್ನ ಹೃದಯಕ್ಕೆ ಸತತ
ಪೊರೆಯೊ ಪ್ರೇಮದಿ ದುರಿತಪರ್ವತ
ತರಿದು ತೊರೆಸಿ ಜಗದ ಮಮತೆ ಅ.ಪ

ಸಾರ ಸುರಸಮೂಹಸೇವಿತ ಮಾರಾರಿವಿನುತ
ಕ್ಷೀರವಾರಿಧಿ ಸುತೆಯ ಪ್ರಿಯನಾಥ ಸನಕಾದಿನಮಿತ
ಸೇರಿ ಭಕ್ತರಗಣದಲಿ ಗುಪ್ತ ನಲಿಯುವಿ ಮಮತೆ
ತೋರಿ ಎನ್ನನು ಮಾಡು ಪಾವನ
ಮೀರದ ಸಂಸಾರಬಂಧನವಾರಿಯ ದಾಂಟಿಸುಯೀಕ್ಷಣ
ಸೇರಿಸದೆ ಎನ್ನ ಮಾಯಾಜಾಲದಿಂ
ಸೇರಿಸು ನಿಜಜ್ಞಾನ ದಯದಿ ೧

ವೇದವೇದಂಗಳಿಗೆ ಅಗೋಚರ ವೇದಂಗಳಾಧಾರ
ವೇದವೇದ್ಯಮಳ್ಕೈರ್ಕ ಪರತರ
ವೇದಗಳ್ಹಿತಕರ ವೇದವೇದಾಂಗ ಶ್ಯಾಮಸುಂದರ
ವೇದಾದಿ ಮನೋಹರ ವೇದವಿದ್ಯೆ ಬೋಧಿಸಯ್ಯ
ವೇದಸಾಧನ ತೋರಿಸಯ್ಯ ವೇದಮಂತ್ರ ಸಿದ್ಧಿಸಯ್ಯ
ವೇದವೇದಾಂತದೊಳು ಗೌಪ್ಯವಾದ ತತ್ವದ ಮೂಲ ತಿಳಹಿ
ವಾದಬುದ್ಧಿಯ ನೀಗಿಸಿ ನಿಮ್ಮ ಪಾದಭಕ್ತಿಯ ಕರುಣಿಸಭವ ೨

ಭುವನತ್ರಯದ ಪರಮ ಸುಸೂತ್ರ ವಾರಿಜನೇತ್ರ
ಭುವನತ್ರಯದ ಪಾವನ ಸ್ತೋತ್ರ ಪರಮಪವಿತ್ರ

ಭುವನಜಾತೆಯ ಮೋಹದ ಮಿತ್ರ ವನರುಹ ಗಾತ್ರ
ಭುವನದ್ದತ್ತವತಾರ ದೇವ ಭುವನವೀರೇಳು ಹೊತ್ತು ಆಳುವ
ಭುವನ ಭಾರವನಿಳುಹಿ ಕಾವ ಭುವನಯಾತ್ರದಿ
ಜಯವ ಪೊಂದಿಸಿ
ಭುವನಕೆ ತಿರುಗಟ್ಟದೆ ನನ್ನನು ಜವದಿ
ನಿಮ್ಮಯ ಕರುಣದೊರಕಿಸಿ
ದಯದಿ ಮುಕ್ತಿಯ ಕೊಡು ಶ್ರೀರಾಮ ೩

೧೧೧

ಶಾಂತಿನಿಲಯ ಸುಖದ ಪ

ಭ್ರಾಂತನಾದೆ ಪರಿಭವದ
ತಂತು ತಿಳಿಯದಕಟ ಶ್ರೀ
ಕಾಂತ ಕಾಯೊ ಪಿಡಿದು ಕರು
ಣಾಂತರಂಗ ಕುಸುಮನಾಭ ೧

ಉದಧಿಯಂದದುಕ್ಕಿಬರುವ
ಅಧಮನಕೆ ಕಲ್ಪನೆಗಳು
ಒದಗಿ ವಿಧ ವಿಧ ನೋಯಿಪು
ದಿದನು ಬೇಗ ಪರಿಹರಿಸು ೨

ನಂಬಿಭಜಿಪ ಭಕುತಜನರಿ
ಗಿಂಬು ನೀನೆ ಅಂಬುಜಾಕ್ಷ
ಕುಂಭಿಣೀಶ ವರ ಶ್ರೀರಾಮ
ಇಂಬುಗೊಟ್ಟು ಸಲಹು ಸದಾ ೩

೧೧೨

ಶ್ರೀಶ ಶ್ರೀನಿವಾಸ ಎನ್ನ ಧ್ಯಾಸದಿ ನೀ ವಾಸಿಸೈ ಪ

ಹಸನ ಮಾಡೆನ್ನ ಮಸಣ ಮತಿಯ
ಪುಸಿಯು ಎನಿಸದ ಅಸಮ ನಿಮ್ಮ
ಎಸೆವ ಪಾದಕುಸುಮ ಎನ್ನ
ರಸನೆ ಮೇಲ್ಪ್ರಕಾಶಿಸಿ ೧

ಭೃತ್ಯನ ಸಚ್ಚಿತ್ತವೆಂಬ ತಖ್ತಿ
ತೃಪ್ತಿಯಿಂದ್ಹತ್ತಿ ನಿಮ್ಮ
ಸತ್ಯಚರಿತ ಉತ್ತರಿಸಭವ
ಭಕ್ತ ಪ್ರಾಣದಾಪ್ತ ಬಂಧೋ ೨

ಭೂಮಿತ್ರಯದ ಪ್ರೇಮನಿಲಯ
ಸೀಮೆಯಿಲ್ಲದ ನಾಮಮಹಿಮ
ಸ್ವಾಮಿ ನಿಮ್ಮ ಪ್ರೇಮದಾಸರ
ಕ್ಷೇಮನಿಧಿ ಶ್ರೀರಾಮ ಪ್ರಭೋ ೩

೧೧೩

ಶ್ರೀಶಾಯ ನಮ: ಓಂ ರಮೇಶಾಯ ನಮ:
ಈಶಾಯ ನಮ: ಜಗದೀಶಾಯ ನಮ:
ಸುರೇಶಾಯ ನಮ: ಪ

ಭೂಧವ ನಮ: ಓಂ ಯಾದವ ನಮ:
ಮಾಧವ ನಮ: ಮಧುಸೂದನ ನಮ: ಭವಭೇದ ನಮ: ೧

ಅಚ್ಯುತ ನಮ: ಓಂ ಸಚ್ಚಿತ್ತ ನಮ:
ಅಚ್ಯುತಾನಂತ ನಮ: ಮತ್ಸ್ಯಾವತರ ನಮ: ಇಚ್ಛಜಪಿತ ನಮ: ೨

ತನುಶೀಲ ನಮ: ಓಂ ವನಮಾಲ ನಮ:
ಘನಲೀಲ ನಮ: ಸುಜನಪಾಲ ನಮ: ಕುಜನಕಾಲ ನಮ: ೩

ನರಹರಿ ನಮ: ಓಂ ಸಿರಿದೊರಿ ನಮ:
ಮುರವೈರಿ ನಮ: ತ್ರಿಪುರಾರಿ ನಮ: ಅಘಹರ ಶೌರಿ ನಮ: ೪

ನುತಪ್ರೇಮ ನಮ: ಓಂ ಖಿತಕಾಮ ನಮ:
ಸುಖಧಾಮ ನಮ: ಭಕ್ತ ಮುಕ್ತಿ ಸೋಮ ನಮ:
ಓಂ ಶ್ರೀರಾಮ ನಮ: ೫

೧೧೪

ಸ್ವಾಮಿ ಕ್ಷೇಮೇಂದ್ರರ ಪ್ರೇಮ ಭಜಕ
ಶ್ಯಾಮಸುಂದರ ಪ

ಅಷ್ಟಭೋಗ ಪಟ್ಟಾರೋಹಣ
ನಿಷ್ಟಜನರ ಕಷ್ಟಹರಣ
ಸೃಷ್ಟಿ ಈರೇಳು ಇಟ್ಟು ಹೃದಯದಿ
ಮುಟ್ಟಿರಕ್ಷಿಪ ಅಷ್ಟಮೂರುತಿ ೧

ಕಮಲನಾಭ ಕಮಲವದನ
ಕಮಲಪಾಣಿ ವಿಮಲಚರಿತ
ಕಮಲಪೀಠನಯ್ಯ ಸುದಯ
ಕಮಲನೇತ್ರ ಕಮಲಪ್ರಿಯಾ ೨

ಭಕ್ತಜನರ ಪ್ರಾಣಧವ
ನಿತ್ಯ ನಿರ್ಮಲ ಮುಕ್ತಿಪದವ
ಭಕ್ತಗಿತ್ತು ನೀಡು ಕ್ಷೇಮ
ನಿತ್ಯ ನಿರ್ಮಲಾತ್ಮ ಶ್ರೀರಾಮ ೩

೧೧೫

ಸುದಯನೆ ಮಲಗಿದ್ಯಾ ತಂದೆ ಗೋವಿಂದ
ಇದು ಏನು ಮಾಡಿದ್ಯೋ ಭಕುತರಾನಂದ ಪ

ಗಳಿಗೆಬಿಡದೆ ಹೊನ್ನು ಅಳೆದಳೆದು ಬೇಸತ್ತು
ಮಲಗಿದಿ ಸುಮ್ಮನೆ ಕಲಿಜನರ ಗತಿಯೇನು ೧

ಮಹಂತರ ಅಧಿಕಾರ ಭ್ರಾಂತರೊಶಕೆ ನೀಡಿ
ಚಿಂತೆ ಪರಹಿತ ಮರೆದು ಸಂತಸದ್ಭಾವಿನ ಮೇಲೆ ೨

ಪ್ರತಿ ವರುಷದುತ್ಸವಕೆ ಅತಿಭಕುತಲಿ ಬರುವ
ಸುತರೊಳು ದಯತಪ್ಪಿ ಅತಿ ಆನಂದದಲ್ಲಿ ೩

ಬೇಡಿದವರ ಇಷ್ಟ ನೀಡದೆ ನೀ ಕಡೆಮಾಡಿ
ರೂಢಿಯ ಮೇಲೆ ಗಾಢನಿದ್ರೆಯೊಳು ೪

ಕಾಮಿತಜನರ ಸುರಕಾಮಧೇನಲ್ಲವೆ ನೀನು
ಭೂಮಿಪಾಲಿಸು ಏಳು ಸ್ವಾಮಿ ಶ್ರೀರಾಮಯ್ಯ ೫

೧೧೬

ಹರಿ ಗೋವಿಂದ ಮುಕುಂದ ಮನುವಂದ್ಯ ಮಾಧವ
ಹರ ಅಜನುತ ಪರಮಾನಂದ ಪ

ದೇವ ಗಿರಿಧರ ಸುರನರ ಮುರಹರ ಪರತರ ಶರಧಿಜಾ
ವರ ನರಹರಿ ಕೇಶವ ಸ್ಮರಿಪರ ಸುರತರು
ಪರಮಪ್ರಕಾಶನೆ ಪುರಹರವರಸುಖ ಸುರೇಶ ೧

ಈಶ ಮುನಿಕುಲ ವಸುಕಾಲ ತನುಶೀಲ ವನಮಾಲ
ಜನಕಜೆಪತಿ ಭಕ್ತರಾನಂದ ವನಜಾಕ್ಷ ದಿನಕರ
ಘನಪ್ರಭೆತನುಶೋಭ ವಿನಮಿತ ಸನಕಾದಿಸಾನಂದ ೨

ಜಗದೀಶ ಅಘಪೋಷ ಮೃಗನಾಶ ಲಕುಮೀಶ
ಖಗಗಮನ ದಶಶತನಾಮ ಬಗೆಬಗೆ ಪೊಗಳುವ
ರಘನಾಶ ರಘುವರ ನಿಗಮ ಆಗಮನುತ ಶ್ರೀರಾಮ ೩

೧೧೭

ಹರಿ ಹರಿ ಹರಿ ಹರಿ ಹರಿ
ಪರಿಹರ ಸಂಸಾರ ಕಿರಿ ಕಿರಿ ಪ

ಸಿರಿಯರಸನ ನಾಮ ಪರಿ ಪರಿ ನಿಜ
ಸ್ಮರಿಪದಾಸರಿಗಾರು ಸರಿ ಸರಿ ಅ.ಪ

ಹರಿಯೆಂದು ಹೊಗಲು ಉರಿ ಉರಿ
ಪರಮ ಶೀತಲದೆಂದರಿ
ಹರಿ ಹರಿಯೆಂದು ವಿಷವನ್ನು ಸುರಿ ಸುರಿ
ಮರಣವಿಲ್ಲರಿದು ನೀ ಮೆರಿ ಮೆರಿ
ಹರಿಧ್ಯಾನಧಿಕವೆಂದು ಸಾರಿ ಸಾರಿ ನಿತ್ಯ
ಹರಿಸರ್ವೋತ್ತಮನೆಂದು ಬರಿ ಬರಿ ೧

ದುರುಳರ ಉಪಟಳ ತಾಳಿ ತಾಳಿ
ಹರಿಯೆಂದು ಕೂಗಿ ಆಗ ತಿಳಿತಿಳಿ
ಮರುಳರ ಅವಾಚ್ಯ ತುಳಿ ತುಳಿ
ಹರಿಧ್ಯಾನ ಸವಿಸವಿದು ನಲಿನಲಿ
ಹರಿಭಜನಾನಂದ ಕಲಿಕಲಿ ಅದೆ
ಮರಣ ಗೆಲಿಯುವ ನಿಜ ಕೀಲಿ ಕೀಲಿ ೨

ತರಿಯೋ ಮನದ ದುರ್ಭೇದ ಭೇದ
ಹರಿಯೆನೆ ಇಲ್ಲ ಭವ ಬಾಧೆ ಬಾಧೆ
ಹರಿನಾಮಕೀರ್ತನೆ ಸದಾಸದಾ
ಕರತಲಸ್ಥಿರ ಮುಕ್ತಿಪದ ಪದ
ತೆರಿ ತೆರಿ ಮರೆವಿನ ಕದ ಕದ ಅಲ್ಲಿ
ಅರಿತ್ತಿಡಿ ಶ್ರೀರಾಮ ಪಾದ ಪಾದ ೩

೧೧೮

ಹಸ್ತವ ಕರುಣಿಸು ವಿಸ್ತಾರ ಮಹಿಮದ ಪ

ಹಸ್ತವ ಕರುಣಿಸೋ ರಂಗಯ್ಯ ಹಸ್ತ ಕರುಣಿಸೆನ್ನ
ಮಸ್ತಕದ ಮೇಲೆ ಹಸ್ತವ ಕರುಣಿಸೊ ಅ.ಪ

ಸೋಮಕಾಸುರನ ವಧಿಸಿ ವೇದತಂದ
ಹಸ್ತವ ಕರುಣಿಸೋ ರಂಗಯ್ಯ
ತಾಮಸ ದೈತ್ಯನ ಉದರವ ಬಗಿದ
ಹಸ್ತವ ಕರುಣಿಸೊ ರಂಗಯ್ಯ
ಭೂಮಿಭಾರ ಶಿವಧನುವನು ಮುರಿದ
ಹಸ್ತವ ಕರುಣಿಸೊ ೧

ಎಸೆದು ಬಾಣ ವಾಲಿಗಭಯ ಪಾಲಿಸಿದ
ಹಸ್ತವ ಕರುಣಿಸೋ ರಂಗಯ್ಯ
ಅಸಮಮೂರುತಿಗೆ ಒಸೆದು ಉಂಗುರವಿತ್ತ
ಹಸ್ತವ ಕರುಣಿಸೊ
ಅಸುರನಿಗೊಲಿದು ಸ್ಥಿರ ಮುಕುಟವನಿಟ್ಟ
ಹಸ್ತವ ಕರುಣಿಸೋ ರಂಗಯ್ಯ
ವಸುಧೆ ಭಾರಿಳುಹಲು ನಿರುತದಿಂದೆತ್ತಿದ
ಹಸ್ತವ ಕರುಣಿಸೊ ೨

ಸುರಗಣಕಮೃತ ಹರುಷದಿ ನೀಡಿದ
ಹಸ್ತವ ಕರುಣಿಸೋ ರಂಗಯ್ಯ
ಪರಮಗೋವರ್ಧನ ಗಿರಿಯನೆತ್ತಿದ
ಹಸ್ತವ ಕರುಣಿಸೊ
ಸಾರಸ ಗಂಧಿಯರುಟ್ಟಿರ್ದ ಸೀರೆಯ ಕದ್ದ
ಹಸ್ತವ ಕರುಣಿಸೋ ರಂಗಯ್ಯ
ಮೆರೆವ ರುಗ್ಮನ ಮಹಗರುವವ ಮುರಿದ
ಹಸ್ತವ ಕರುಣಿಸೊ ೩

ಜನನಿ ಜನಕರ ಸೆರೆಯನು ಬಿಡಿಸಿದ
ಹಸ್ತವ ಕರುಣಿಸೋ ರಂಗಯ್ಯ
ಜನನಿಮುಂದಾಡುತ ಕಡಗೋಲು ಪಿಡಿದ
ಹಸ್ತವ ಕರುಣಿಸೊ

ವರರುಗ್ಮಿಣಿಕೈಯ ಸರಸದಿ ಪಿಡಿದ
ಹಸ್ತವ ಕರುಣಿಸೋ ರಂಗಯ್ಯ
ನರಗೆ ಸಾರಥಿಯಾಗಿ ಕುದುರೆ ತಿರುವಿದ
ಹಸ್ತವ ಕರುಣಿಸೊ ೪

ವಿದುರನ ಮನೆಯಲಿ ಹಾಲೆತ್ತಿ ಕುಡಿದ
ಹಸ್ತವ ಕರುಣಿಸೋ ರಂಗಯ್ಯ
ಸುದತಿಗೆ ಮೆಚ್ಚಿ ಅಕ್ಷಯಾಂಬರವಿತ್ತ
ಹಸ್ತವ ಕರುಣಿಸೊ
ಮುದದಿ ಧ್ರುವಗೆ ಮೆಚ್ಚಿ ಸದಮಲ ಪದವಿತ್ತ
ಹಸ್ತವ ಕರುಣಿಸೋ ರಂಗಯ್ಯ
ಸುದಯದಿಂದ ಅಂಬರೀಷನುದ್ಧರಿಸಿದ
ಹಸ್ತವ ಕರುಣಿಸೊ ೫

ದಿನವಿರೆ ದಿನಮಣಿಯನು ಮಾಯಮಾಡಿದ
ಹಸ್ತವ ಕರುಣಿಸೋ ರಂಗಯ್ಯ
ರಣದಿ ಭಕ್ತರ ಶಿರ ಕನಿಕರದೆತ್ತಿದ
ಹಸ್ತವ ಕರುಣಿಸೊ
ಸೆಣಿದಾಡಿ ಭಕ್ತನಿಂ ದಣಿದು ಕಟ್ಟಿಸಿಕೊಂಡ
ಹಸ್ತವ ಕರುಣಿಸೋ ರಂಗಯ್ಯ
ಸನಕಾದಿಗಳು ಘನ ಅನಂದದ್ದೊಗಳಿಸುವ
ಹಸ್ತವ ಕರುಣಿಸೊ ೬

ಘಡ ಘಡ ಎನ್ನುತ ತೊಡೆಯ ಚಪ್ಪರಿಸಿದ
ಹಸ್ತವ ಕರುಣಿಸೋ ರಂಗಯ್ಯ
ಬಿಡದೆ ಸೋಳಸಹಸ್ರ ಮಡದಿಯರ್ಪ್ಪಿಡಿದ
ಹಸ್ತವ ಕರುಣಿಸೊ
ಅಡಿಯ ದಾಸರ ಪಿಡಿದಪ್ಪಿ ರಕ್ಷಿಸುವ
ಹಸ್ತವ ಕರುಣಿಸೋ ರಂಗಯ್ಯ
ಒಡೆಯ ಶ್ರೀರಾಮ ನಿನ್ನಡಿ ನಂಬಿ ಬೇಡುವೆ
ಹಸ್ತವ ಕರುಣಿಸೊ ೭

೧೧೯

ಹುಡುಕಿದಳೆಶೋದ ಕಂದನ
ಪಿಡಿದು ದಾರೆತ್ತಿಕೊಂಡ್ಹೋದರೆನುತ ಪ

ಕಂಗಳನಿಕ್ಕಿ ಕಾದಿಹ್ಯದು
ಸಿಂಗರದ ಗೋಪಿರ್ಬಂಗಳೆಯರು
ರಂಗನ ಸುಖಕವರು
ಗುಂಗುಹಿಡಿದು ಕುಳಿತಿಹ್ಯರು
ರಂಗುಮಂಟಪದೊಳಗೆ ಎನ್ನ
ಕಂಗಳಿದರ ಕಾಣನಾವ
ಅಂಗನೆಯರಡಗಿಸಿದರೆಂದು
ಅಂಗಲಾಚಿ ಅಂತರಂಗದಿ ೧

ಉನ್ನತೋನ್ನತ ಋಷಿಗಣರು
ಪನ್ನಂಗಶಾಯಿಯ ಸನ್ನಿಧಿಲವರು
ಮುನ್ನಾವ ಕಾಲದಿಂ ಕುಳಿತಿಹರು
ಭಿನ್ನವಿಲ್ಲದೆ ತಪವ ಮಾಳ್ಪರು
ಇನ್ನು ಕಾಣಲವರು ತಮ್ಮಿಷ್ಟ
ವನ್ನು ಪೂರ ಪಡೆವನಕ
ಎನ್ನ ಕಣ್ಣಿಗೆ ಹಾಕರೆಂದು
ಬನ್ನಬಡುತ ತನ್ನೊಳ್ತಾನು ೨

ದೂಷಣೆ ಭೂಷಣಗಳನೊದೆದ
ಮೋಸ ಕ್ಲೇಶಗಳನು ತರಿದ
ಆಶಾ ಪಾಶಗಳನು ಜರಿದ
ಈಶನುನ್ನತ ನಿಜವ ತಿಳಿದ
ಶ್ರೀಶ ಶ್ರೀರಾಮ ನಿನ್ನ ಪಾದ
ದಾಸರು ಕಾಣಲು ತಮ್ಮ ಭಕ್ತಿ
ಪಾಶದಿಂದ ಬಿಗಿದು ಕಟ್ಟಿ
ನ್ನೇಸು ಕಾಲದಿ ಬಿಡರೆಂದರಿದು ೩

೧೨೦

ಹೇ ದಯಾಸಾಗರ ಸ್ವಾಮಿ ವೇದ
ಮಾಧವ ಮುಕುಂದ ಮನುಮುನಿ ಪ್ರೇಮಿ ಪ

ವೇದಗೋಚರ ಸಾಧುಸನ್ನುತ
ನಾದಪ್ರಿಯ ಭವಬಾಧೆರಹಿತ ಭೇದಹರ ಜಗ
ದಾದಿ ಮೂರುತಿ ಪಾದ ಭಜಿಸುವೆ ಪಾಲಿಸೆನ್ನ ಅ.ಪ

ಮದಗಜ ಮುದದಿಂದ ಪೊರೆದಿ ಪ್ರಭುವೆ
ಮದಗಜಗಮನೆಯ ಮಾನದಿಂ ಕಾಯ್ದೆ
ಪದುಮವದನೆಶಾಪ ಕಳೆದೆ ಕರುಣಿ
ಸದಮಲಬಾಲನ ತಪಕೆ ನೀನೊಲಿದಿ
ಸುದಯಹೃದಯ ಸುಸದನಪಾಲ್ಸಿದಿ
ಸದಮಲಾಂಗನೆ ಪದುಮವದನ
ಮುದದಿ ನಿಮ್ಮಡಿ ಪದುಮಗಳು ಎ
ನ್ಹೃದಯ ಮಂದಿರದಿರಿಸಿ ರಕ್ಷಿಸು ೧

ಗರುಡಂಗೆ ವರಮೋಕ್ಷ ನೀಡ್ದಿ ನಿನ್ನ
ಸ್ಮರಿಪರಿಗೆ ದರುಶನಕೊಡುತಲಿ ನಡೆದಿ
ತರುಣಿಯ ಎಂಜಲ ಸವಿದಿ ವನ
ಚರನಿಗೆ ವಶನಾಗಿ ಅಭಯ ಪಾಲಿಸಿದಿ
ಭರದಿ ದಕ್ಷಿಣಶರಧಿ ಹೂಳಿಸಿ
ಮೆರೆವ ಲಂಕಾಪುರವ ಮುತ್ತಿದಿ
ದುರುಳರ್ಹಾವಳಿ ದೂರಮಾಡಿ
ಧರೆಯ ಭಾರವ ನಿಳುಹಿದಯ್ಯ ೨

ನುಡಿಸಿದರೆನ್ನಿಂದಲಾವ ವಚನ
ನುಡಿಸಿದ ಬಳಿಕದನು ನಡೆಸಿಕೊಡಭವ
ನುಡಿಯಂತೆ ನಡೆಯೆನಗೆ ಸ್ಥಿರವ ಕೊಟ್ಟೆ

ನ್ನೊಡಲೊಳಗದಂತೆಯಿರು ಅನುದಿನವು
ಪೊಡವಿ ಮೂರನು ಒಡಲೊಳಿಟ್ಟಿಡೆ
ಬಿಡದೆ ಆಳುವ ಒಡೆಯ ಶ್ರೀರಾಮ
ದೃಢದಿ ನಿಮ್ಮಯ ಅಡಿಯ ನಂಬಿದೆ
ಬಿಡಿಸು ಎನ್ನಯ ಮಂದಜ್ಞಾನವ ೩

೧೨೧

ಹಿಂದೆ ನಿನ್ನಯ ದಾಸರನು ಕಂಡು
ಪೊರೆದ್ಯಾಕೋ ಸೀತಾನಾಥ
ತಂದೆ ಮಂದರಧರ ಎನ್ನೊಳ್ದಯ
ಮಾಡಲೊಲ್ಲ್ಯಾಕೋ ಸೀತಾನಾಥ ಪ

ಕರಿರಾಜ ನಿಮ್ಮಯ ಚರಣ ಸರೋಜಕ್ಕೆ ಸೀತಾನಾಥ
ಹರಿ ಬರೆದೋಲೆ ನಿನ್ನನು ಕರೆಕಳುಹಿದನೇನೊ ಸೀತಾನಾಥ
ತರುಣಿ ದ್ರೌಪದಿ ತನ್ನ ಅವಮಾನಕಾಲಕ್ಕೆ ಸೀತಾನಾಥ
ಸಿರಿವರ ನಿನ್ನೊಳ್ವಯ್ಯುಂಠಕೆ ತಾರು ಕೊಟ್ಟಿರ್ದಳೇ ಸೀತಾನಾಥ ೧

ನಂಬಿದ ಪ್ರಹ್ಲಾದ ಪಿತಕೇಳ್ವ ಸಮಯಕ್ಕೆ ಸೀತಾನಾಥ ನಿನ್ನ
ಕಂಬದಿ ಬಾರೆಂದಂಬುಧಿಗೆ ಬಂದ್ಹೇಳ್ದನೇ ಸೀತಾನಾಥ
ಡೊಂಬೆ ಮಾಡುವ ದೂರ್ವಾಸಮುನಿಯಂದು ಸೀತಾನಾಥ
ನಿನ್ನ ಬೆಂಬಲಿಟ್ಟು ಅಂಬರೀಷ ವ್ರತಗೈದನೇ ಸೀತಾನಾಥ ೨

ವರಧ್ರುವ ಧರೆಯೊಳು ಜನಿಸುವ ಕಾಲಕ್ಕೆ ಸೀತಾನಾಥ ದೇವ
ಕರವ ಪಿಡಿದು ನಿಮ್ಮ ಜೊತೆಲಿ ಕರೆತಂದನೇ ಸೀತಾನಾಥ
ಪರಮಪಾಪಿ ಅಜಮಿಳನಗೆ ಪದವಿಯು ಸೀತಾನಾಥ ದೇವ
ಕರುಣಿಸಿದವನಿನಗೆ ನೆರವಾಗಿರ್ದನೇನೊ ಸೀತಾನಾಥ ೩

ಛಲದ ರಾವಣನಳಿದು ವರವಿಭೀಷಣನಿಗೆ ಸೀತಾನಾಥ
ಲಂಕ ಕರುಣಿಸಿ (ದಿವ್ಯೆಕುಂ) ಠ ಬಾಗಿಲೊಳಿರ್ದನೇ ಸೀತಾನಾಥ

ಬಲದ ವಾಲಿಯಕೊಂದು ಸುಗ್ರೀವನ ಕಾಯ್ದಯ್ಯ
ಸೀತಾನಾಥ ಅವ
ಇಳೆಯೊಳು ನಿಮಗೆ ಪಕ್ಷದ ಗೆಳೆಯನೆ ಸೀತಾನಾಥ ೪

ಹಿಂದಿನ ಹಿರಿಯರವರನು ದುರಿತದಿಂ ಸಲಹಿದಿ ಸೀತಾನಾಥ ಇದು
ಚೆಂದವೆ ನಿನಗೆ ಕಂದನ ಬಿಡುವುದು ಸೀತಾನಾಥ
ಇಂದು ಈ ಕಂಟಕ ಬೇಗ ಬಯಲ್ಗರಿಸಯ್ಯ ಸೀತಾನಾಥ ರಂಗ
ಸಿಂಧುಶಯನ ಮಮ ತಂದೆಯೇ ಶ್ರೀರಾಮ ಸೀತಾನಾಥ ೫

III. ದೇವತಾಸ್ತುತಿ

೧೨೨

ಅಂಜಿಕೆ ಬರುತಾದವ್ವ ನಿನ್ನನು ನೋಡ
ಲಂಜಿಕೆ ಬರುತಾದವ್ವ ಪ

ಅಂಜಿಕೆ ಬರುತಿದೆ ಮಂಜುಳಾಂಗಿಯೆ ನಿನ್ನ
ಮಂಜುಳ್ವಾಕ್ಯಕೆ ತಪಭಂಗವಾದದ್ದು ಕೇಳಿ ಅ.ಪ

ಪತಿಗೆ ನೀ ಮೃತ್ಯುವಾದೆವ್ವ ಮತ್ತು ನೀನು
ಸುತರಿಗೆ ಕಷ್ಟಕೊಟ್ಟೆವ್ವ
ಸತಿಯಾಗಿ ತಮ್ಮಗೆ ಭಾವನ್ನ ಕೊಲ್ಲಿಸಿದಿ
ಮತಿಗೇಡಿ ಅಣ್ಣನ ಸತ್ಯನಾಶನ ಗೈದಿ ೧

ಶಾಪಕೊಡಿಸಿದೆವ್ವ ಪತಿಯಿಂದ
ಶಾಪವ ಪಡಕೊಂಡೆವ್ವ
ಶಾಪಕೊಡಿಸಿ ಮುಖ ಕಪ್ಪು ಮಾಡಿಟ್ಟೆವ್ವ
ಕೋಪದಿಂದೊಬ್ಬನ ಬಸಿರು ಮಾಡಿಟ್ಟೆವ್ವ ೨

ಪತಿಗೆ ವಂದಕಳಾದೆವ್ವ ಮೀರಿದ ತಾಯಿ
ಪತಿ ಪ್ರೀತಿ ಕಳಕೊಂಡೆವ್ವ

ಸುತನ ಕತ್ತಿಯಿಂದ ಕುತ್ತಿಗೆ ಕೊಯ್ಸಿಕೊಂಡು
ಪತಿತಪಾವನಳಾಗಿ ಮತ್ತೆ ಮುಂದಕೆ ಬಂದಿ ೩

ಗರಡಿಯ ಮನೆ ಹೊಕ್ಕೆವ್ವ ಪತಿಯಕೈಲೆ
ದುರುಳನ್ನ ವಧಿಸಿದವ್ವ
ಧುರಕೆ ನಿಲ್ಲನೆ ಮತ್ತೆ ಕುರುಪನ ಕುಲಮೂಲ
ತರಿಸಿದಂಥ ಮಹಮರಗಿ ನೀನವ್ವ ೪

ಮಾತ್ಯಾಗಿ ಪಡೆದ್ದಡದವ್ವ ಮತ್ತು ನೀನು
ಸತಿಯಾಗಿ ನಡೆದೆ ಅವ್ವ
ರೀತಿ ತಿಳಿಯಿತು ನಿನ್ನದ್ಯಾತರ ಭೀತಿನ್ನು
ದಾತ ಶ್ರೀರಾಮನ ಪ್ರೀತಿ ದಾಸರಿಗೆ ೫

೧೨೩

ಆರುಸರಿ ಮಾರುತಿಯೆ ನಿನಗೆ
ಆರುಯೆಂಟು ಭುವನದೊಳಗೆ ಪ

ಎತ್ತಿ ತೂಗಿದಿ ಶಿವನಪುರಿ
ಕಿತ್ತು ತಂದಿ ಸಂಜೀವನ ಗಿರಿ
ಮತ್ತೆರಕ್ಕಸಬಲವ ತೂರಿ
ಮುತ್ತಿ ತರಿದೋ ಹಾರಿ ಹಾರಿ ೧

ಲಂಘಿಸಿ ಬಲವಂತ ಭರದಿ
ಲಿಂಗ ತಂದು ಸಮರ್ಪಿಸಿದಿ
ಮಂಗಳಾತ್ಮನಿಂದ ಪಡೆದಿ
ಲಿಂಗಕೋಟಿ ರೋಮರೋಮದಿ ೨

ನಾಮಬಲವ ಗಳಿಸಿದಿ
ಈ ಮಹಭವಸಾಗರ ತುಳಿದಿ
ಭೂಮಿಗಧಿಕ ಸ್ವಾಮಿ ಶ್ರೀ
ರಾಮನೊಲಿಸಿ ಧನ್ಯನಾದಿ ೩

೧೨೪

ಈಶನೀನೆ ದಯಾಸಿಂಧು
ದಾಸಜನರ ಪ್ರೇಮಬಂಧು ಪ

ಹೇವವಿಲ್ಲದೆ ಕಾಸಾರಕ್ಕೈದಿ
ಬೋವನಾಗಿ ಬಂಡಿ ಹೊಡಿದಿ
ಕೇವಲ ಮಾನಕಾಯ್ದಿ ಸತಿಯ
ಸೇವಕಜನರ ಬೆಂಬಲನೆ ೧

ನಿನ್ನ ಭಜಿಸಿ ಬೇಡುವವರ
ಭಿನ್ನವಿಲ್ಲದೆ ದಯದಿ ಒದಗಿ
ಸಾವುಹುಟ್ಟು ಬಂಧಗೆಲ್ಲಿಸಿ
ಧನ್ಯರೆನಿಸಿ ಸಲಹುವಿ ೨

ಕಾಮಿತಾರ್ಥಪೂರ್ಣ ಭಕ್ತ
ಕಾಮಧೇನು ಕಲ್ಪತರು
ಸ್ವಾಮಿ ಶ್ರೀರಾಮ ನಿಮ್ಮ ವಿಮಲ
ನಾಮ ಎನ್ನ ಜಿಹ್ವೆಗೆ ನೀಡೊ ೩

೧೨೫

ಈಶ ಕೇಶವ ಶ್ರೀಶ ಈಶ ಕೇಶವ
ದೋಷನಾಶ ಜಗದೀಶ ಪೋಷನುತ ಪ

ವಿಮಲ ಸುಚರಿತ ಕಮಲ ಸಂಭವನುತ
ಅಮಿತಮಹಿಮ ಹರಿ ಸುಮಶರ ವರಪಿತ ೧

ದನುಜಕುಲಾಂತಕ ಜನಕಜಾನಾಯಕ
ಮನುಮುನಿಜನರತಿ ಕನಿಕರದಾಯಕ ೨

ಲಕ್ಷ್ಮಿಯರಮಣ ಪಕ್ಷಿಯವಾಹನ
ರಕ್ಷಿಸು ಶ್ರೀರಾಮ ಮೋಕ್ಷಪದವನಿತ್ತು ೩

೧೨೬

ಈಶ ಬಾರೋ ಭಯನಾಶ ಬಾರೋ
ದಾಸಜನರ ಪ್ರಾಣೇಶ ಬಾರೋ ಪ

ಉರಗಶಯನ ಬಾರೋ ಗರುಡಗಮನ ಬಾರೋ
ಶರಧಿಸುತೆಯ ಪ್ರಾಣದರಸ ಬಾರೋ ೧

ಕಲುಷಹರಣ ಬಾರೋ ವಿಲಸಿತಮಹಿಮ ಬಾರೋ
ತುಲಸೀಮಾಲನೇ ಸಿರಿಲೋಲ ಬಾರೋ ೨

ತರಳನುದ್ಧರ ಬಾರೋ ಕರಿಯಪಾಲನೆ ಬಾರೋ
ತರುಣಿ ಮಾನವ ಕಾಯ್ದ ಕರುಣಿ ಬಾರೋ ೩

ದೇವರದೇವ ಬಾರೋ ಭಾವಜನಯ್ಯ ಬಾರೋ
ಸೇವಕಜನ ಜೀವದಾಪ್ತ ಬಾರೋ ೪

ಭಕ್ತವತ್ಸಲ ಬಾರೋ ಮುಕ್ತಿದಾಯಕ ಬಾರೋ
ಭಕ್ತಾಂತರಂಗ ಶ್ರೀರಾಮ ಬಾರೋ ೫

೧೨೭

ಎಲ್ಲಮ್ಮ ದಯಮಾಡಮ್ಮ ಕಾಡಬೇಡ ಎನ್ನಮ್ಮ ಪ

ಇಲ್ಲದೆ ಪೋದರೆ ನಿಲ್ಲದೆ ಏನನು
ಬಲ್ಲಿದನ ಕರೆತಂದು ಕೊಲ್ಲಿಸಿಬಿಡುವೆನೆ ಅ.ಪ

ಕೊಡಲಿ ಹೊತ್ತು ಬರುತಾನ ತಾಯಿ
ಗಡನೆ ಹೊರಳಿ ನೋಡಿನ್ನ
ಬಡವರ ದಯಾನಿಧಿ ಕಡುಬಾಧೆ ಕಂಡರೆ
ತಡೆಯದೆ ನಿನ್ನನು ಕಡಿಯದೆ ಬಿಡನವ್ವ ೧

ತಂದೆವಚನ ಪರಿಪಾಲನು ಅವ
ಬಂದರೆ ನಿನ್ನನು ಕೊಂದಾನು

ಕಂದನ ಬಂಧನ ಚಂಗದಿ ಕಳೆದಾ
ನಂದವ ಕೊಡು ಕೊಡು ಸುಂದರಮುಖಿಯೆ ೨

ಕಾರ್ತವೀರ್ಯ ತಂದಾನೇ ಈ
ವಾರ್ತೆ ಕೇಳಲು ನಿನ್ನ ಬಿಟ್ಟಾನೇ
ಅರ್ತುಭಜಿಪೆ ನಿನ್ನ ಗುರ್ತಿಟ್ಟೀಬಾಧೆ
ತುರ್ತು ಕಳೆಯೆ ತಾಯಿ ಅರ್ತು ಶ್ರೀರಾಮನ ೩

೧೨೮

ಏನು ಬಲ್ಲಿದನೋ ಹನುಮಂತ ನೀನು
ಏನು ಬಲ್ಲಿದನೋ ಪ

ಏನು ಬಲ್ಲಿದನಯ್ಯ ನೀನು ಜ್ಞಾನಮೂರುತಿ
ಜಾನಕೀಶನ ಧ್ಯಾನ ಸುಖಸಾಮ್ರಾಜ್ಯದಲ್ಲಿ
ಲೀನನಾಗಿ ಸುಖಿವೆ ಬಲವಂತ ಅ.ಪ

ಶರಧಿ ಜಿಗಿದವನೋ ಭರದಿ ದುರುಳನ
ಪುರವ ಸೇರಿದನೋ ನಿರುತ ದೊರೆಮಾತೆ
ದರುಶನಾದನವನೋ ಪರಮವೀರನೋ
ಧರೆಯ ಮಾತೆ ಕೃಪಾಪಾತ್ರನಾಗಿ
ಪರಮಪಾವನ ವರವ ಪಡೆದು
ಮರಳಿ ದುರುಳನ ವನವ ಸೇರಿ
ಧುರವ ಜೈಸಿದಿ ಧೀರಮಾರುತಿ ೧

ತಿರುಗಿ ಅಂಗದನ ಬಲವನ್ನು ಸೇರಿ
ಸಾರ ಕಥನವನ್ನು ಅರುಹಿ ಮುಂದೆ
ಪರಮಪಾವನನ ಚರಣಕಂಡಿನ್ನು
ಇರಿಸಿ ಹರಿಯಾಜ್ಞಂಗೀಕರಿಸಿ
ತ್ವರದಿ ದಕ್ಷಿಣಶರಧಿ ಹೂಳಿಸಿ
ಭರದಿ ಲಂಕೆಗೆ ಮುತ್ತಿಗಿತ್ತಯ್ಯ ೨

ಬುದ್ಧದೇಹದ ಕುಂಭಕರ್ಣನ
ಕ್ಷುದ್ರ ಇಂದ್ರಜಿತುನ ಮತ್ತವನ ತಂದೆ
ಬುದ್ಧಿಹೀನನ್ನ ಹತ್ತು ತಲೆಯವನ
ಯುದ್ಧದಿಂದ ಬದ್ಧರಕ್ಕಸ
ರೊದ್ದು ಬೇಗನೆ ಛಿದ್ರ ಮಾಡಿ ಜ
ಗದ್ರಕ್ಷ ಶ್ರೀರಾಮ ಪಾದಪದ್ಮಕ್ಕೆ
ಮುದ್ದು ಮುಖಿಯನು ತಂದುಕೊಟ್ಟೆಯ್ಯ ೩

೧೨೯

ಒಲಿಸಿದ್ಯಾಗೆ ಪೇಳೆ ಜನನಿ
ತುಲಸಿ ಹರಿಯ ಮೋಹಮಾನಿನಿ ಪ

ಮೊಲ್ಲೆ ಮಲ್ಲಿಗೆ ಜಾಜಿ ಸಂಪಿಗೆ
ಒಲ್ಲ ಸೇವಂತಿಗಿರವಂತಿಗೆ
ಎಲ್ಲ ಕುಸುಮಗಳನು ನೀ
ನಿಲ್ಲದೆ ತನಗೆ ಸಲ್ಲದೆನುವ ೧

ಗಂಧ ಕಸ್ತೂರಿ ಪುನುಗು ಕೇಸರಿ
ಅಂದಮಾದ ಸುಗಂಧ ಭಾರಿ
ಚಂದದಿ ಪೂಸಲಿದರೊಳ್ನೀ
ನೊಂದಿಲ್ಲದಿನಿತು ಧಿಕ್ಕಾರೆನುವ ೨

ಮಿಗಿಲಾದ ಮಣಿಮಾಲೆಯ
ಬಗೆಯದಿದನು ನಿನ್ನ ಬೇಡುವ
ನಿಗಮಾತೀತ ಶ್ರೀರಾಮ ನಿ
ನ್ನಗಲದಿರೆನೆಂಬ ಸಂತತ ೩

೧೩೦

ಒಳಿತಲ್ಲ ನಿನ್ನ ತಳ್ಳಿ ಅಭಿಮಾನದೇವಿ
ಎಲೆ ತಾಯೆ ನಮಿಸುವೆನು ದೂರಾಗೆ ಮಾಯಿ ಪ

ಬಗೆಗೊಂಡು ಬ್ರಹ್ಮನ ತಲೆಯೊಂದು ಕಳೆದಿಟ್ಟು
ಹೆಗಲೇರಿ ಶಿವನ ಸುಡುಗಾಡದಿಳಿಸಿದಿ
ಜಗರಕ್ಷಕನನು ಹತ್ತು ಅವತಾರದೆಳಸಿದಿ
ನಿಗಯಿಟ್ಟಿಂದ್ರನ ಮೈ ಛಿದ್ರ ಮಾಡಿಟ್ಟಿ ೧

ಸೆರೆಹಿಡಿದು ತಾರಕನ ಆರೆದಿನದವನಿಂ ಕೊಂದಿ
ಕರಪಿಡಿದು ಹಿರಣ್ಯನ ಅಸಮವರ ಸುಟ್ಟಿ
ನೆರೆಯಾಗಿ ರಾವಣ ಆರುಕೋಟ್ಯಾಯುಷ್ಯ
ಉರುತರದ ಸಿರಿಯೆಲ್ಲ ಮಾಯ ಮಾಡಿಟ್ಟಿ ೨

ಸೆಳೆಕೊಂಡು ಕುರುಪನ ಕುಲನಾಶ ಮಾಡಿಟ್ಟಿ
ಒಲಿದು ಕಲಿಯುವಗೆಲ್ಲ ನುಂಗಲ್ಹತ್ತಿರುವಿ
ಸುಲಭದೆನ್ನನು ಬಿಟ್ಟು ಅಗಲದಿರ್ದರೆ ನಿನಗೆ
ಜಲಜಾಕ್ಷ ಶ್ರೀರಾಮನೊನರುಹಂಘ್ರ್ಯಾಣೆ ೩

೧೩೧

ಕಪಾಲಧರ ತ್ರಯತಾಪರಿಹಾರ ಭ
ಜಿಪೆ ಕಾಪಾಡು ಕೃಪೆ ಪಾಲಿಸಿ ಪ

ಅಪಾರ ಪತಿವ್ರತಾಶಾಪವಿಮೋಚನ
ಗೋಪ ಗೋಪತಿ ನಮಿತ ಗೋಪಾಲನೊಲಿಸೆನಗೆ ಅ.ಪ

ಅಗಜಾವಲ್ಲಭ ಸುಗುಣರಘದೂರ
ಜಗದೊಡೆಯ ಮಗುವಿನ ಮೊರೆ ಪಾಲಿಸು
ನಿಗಮ ಆಗಮ ವಿನುತ ಅಗಣಿತಾಗಣಿತಮಹಿಮೆ
ಬಗೆದೆನ್ನ ನುಡಿಯಾಲಿಸು
ನಗಧರ ಖಗರೂಢ ಜಗರಕ್ಷ ಹರಿನಾಮ
ಅಗಲದೆ ಭಜಿಸುವ ಅಗಣಿತ ಮತಿ ನೀಡೊ ೧

ಅಜಭವಸುರ ನಮಿತ ರಜತಾದ್ರಿಮಂದಿರ
ನಿಜಜ್ಞಾನ ದಯಮಾಡೊ

ಭುಜಗಭೂಷಣ ಮೃಡ ಗಜಚರ್ಮಾಂಬರ ಜಗದ
ಗೋಜು ಮುಂದೆನಗೆ ಬೇಡೊ
ಕುಜನ ಕುಲಾಂತಕ ಸುಜನ ಸಂರಕ್ಷಕ
ಅಜನ ಪಿತನ ಪಾದ ನಿಜಧ್ಯಾನ ಸ್ಥಿರಕೊಡೋ ೨

ಮೃತ್ಯುವಿಜಯ ಸತ್ಯ ಚಿತ್ತ ನಿರ್ಮಲ
ನಿತ್ಯ ಸತ್ಯರ ಸಖ್ಯ ನೀಡೊ
ಸತ್ಯಸದ್ಭಕ್ತಿನಿತ್ತು ಮರ್ತ್ಯರಿಂದುಳಿಸೆನ್ನ
ಚಿತ್ತ ಪರಿಶುದ್ಧ ಮಾಡೊ
ಭಕ್ತವತ್ಸಲ ನಿಜಮುಕ್ತಿದಾಯಕ ಮಮ
ಕರ್ತ ಶ್ರೀರಾಮನ ಭಕ್ತನೆಂದೆನಿಸೆನ್ನ ೩

೧೩೨

ಕರುಣದಿ ಒಲಿಯೆನಗೆ ಹೇ ಜನನಿ
ನಿರಭಿಮಾನದ ದೇವಿಯೇ ಕರುಣಿಸು ಪ

ಎನ್ನ ಬಂಧುಗಳೆಲ್ಲ ಕಣ್ಣೆತ್ತಿ ನೋಡದಿರಲಿ
ಪನ್ನಂಗಶಯನನ ನೆನೆವೊಂದೆ ಎನಗಿರಲಿ ೧

ಅವನಿಪರೆನ್ನನು ದಯೆದಪ್ಪಿ ನೋಡಲಿ
ಭವಹರನಂಘ್ರಿಯ ಭಜನೆಸವಿಯೊಂದಿರಲಿ ೨

ಭೂಷಣವಾಗಲಿ ದೂಷಣವಾಗಲಿ
ಶ್ರೀಶ ಶ್ರೀರಾಮನೆನ್ನ ಧ್ಯಾನದೊಳೊಂದಿರಲಿ ೩

೧೩೩

ಕರುಣಿಸು ದೇವದೇವ ಸೆರಗೊಡ್ಡಿ ಬೇಡುವೆನಭವ
ಪರಿಹರಿಸು ಎನ್ನ ಕರುಣಾಳು ಲಕ್ಷ್ಮಿಯ ಜೀವ ಪ

ಅಂಬುಧಿಶಾಯಿಯೆ ನಿನ್ನ ಭಜಿಪೆ ಪಾವನ್ನ
ಅಂಬುಜಸಂಭವಪಿತನೆ ಕಂಬುಕಂಧರಪ್ರಿಯಸಖನೆ
ಅಂಬುಧಿಯಸಂಜಾತೆರಮಣ ಬೆಂಬಲಿಸಿ ಕಾಯೊ ಬಡವನ್ನ ೧

ಮಂದಭಾಗ್ಯನ ಸ್ತುತಿಯ ತಂದೆ ಆಲಿಸು ದಯಮಂದಿರ
ಸುಂದರಕಾಯ ಇಂದಿರೆಯ ಪ್ರಾಣಪ್ರಿಯ
ಬಂಧನದ ಬಡತನ ಕಳಿಯೊ ವಂದಿಸಿ ಮರೆಹೊಕ್ಕೆ ಜೀಯ ೨

ಈಸೀಸಿ ಸಂಸಾರನಿಧಿಯ ಬೇಸತ್ತು ಬಿಡುವೆನೊ ಬಾಯ
ದಾಸನ ಮೊರೆ ಕೇಳಯ್ಯ ಬೇಸರಿಯ ಬೇಡ ಕ್ಷಮಾನಿಧಿಯೇ
ಶ್ರೀಶ ಶ್ರೀರಾಮ ಪಿಡಿಕೈಯ ಘಾಸಿ ಮಾಡದೆ ಸಲಹಯ್ಯ ೩

೧೩೪

ಗೌರೀಶ ಮೃತ್ಯುಂಜಯನುತ ಪಾಲಯ
ಗೌರೀಶ ಮೃತ್ಯುಂಜಯ ಪ

ಸುಮಶರನಾಶ ಸುಮನರಪೋಷ
ಶಮೆಶಾಂತಿದಯಭೂತೇಶ ೧

ಶಂಕರ ಶಶಿಧರ ಕಿಂಕರ ಪ್ರಿಯಕರ
ಶಂಕರಿಮನೋಹರ ೨

ಉಮೆ ಪ್ರಿಯನಾಥ ಅಮಿತವರದಾತ
ಅಮರಾದಿಸುರಾರ್ಚಿತ ೩

ವರಮಹಲಿಂಗ ಪರಿಭವಭಂಗ
ಪರತರ ಪಾವನಾಂಗ ೪

ಗಜಚರ್ಮಾಂಬರ ಭುಜಗಾಲಂಕಾರ
ಸುಜನಾತ್ಮ ಸುಖಂಕರ ೫

ಪುರತ್ರಯ ಸಂಹರ ಪರಿಪಕ್ವರಾಧಾರ
ನಿರಂಜನ ನಿರಾಕಾರ ೬

ಕೆಂಡನಯನ ರುಂಡಮಾಲನೆ
ದಂಡಧರನ ಹರಣ ೭

ಬೇಡುವೆನಭವ ಕಾಡದೆ ಪರಶಿವ
ನೀಡು ಎನ್ನಗೆ ವರವ ೮

ಭೂಮಿತ್ರಯಕೆ ಘನಸ್ವಾಮಿ ಶ್ರೀರಾಮನ
ನಾಮ ಪಾಲಿಸು ಪಾವನ ೯

೧೩೫

ಜಗದಯ್ಯಾ ಜಗದಯ್ಯಾ
ಜಗತ್ರಾಣ ಜಗಜೀವನ ಪಾವನ ಪ

ಸಾವು ಹುಟ್ಟುಯೆಂಬ ಹೇಯಕುಣಿಯೊಳು ಬಿದ್ದು
ನೋಯಲಾರದೆ ಬಲು ಬಾಯಬಿಡುತ ನಿಮ್ಮ
ಪಾವನ ಪಾದಕ್ಕೆ ಮರೆಯಬಿದ್ದೆನಯ್ಯ
ಸೇವಕಜನರಯ್ಯಾ ಕಾಯೋ ಎನ್ನಾರ್ಯ ೧

ಪರಿಭವಶರಧೆಂಬ ಉರಿವಕಿಚ್ಚಿನೊಳು
ಪರಿಪರಿಮರುಗುತ ಕರುಣಾಂಬುಧಿ ನಿನ್ನ
ಅರಿವಿಟ್ಟರಿದೆ ವರ ಪರಮ ಬಿರುದುಗಳು
ಶರಣಾಗತರ ಪ್ರಿಯಕರ ಪಿಡಿದೆತ್ತಯ್ಯ ೨

ವಿಷಯಲಂಪಟವೆಂಬ ವ್ಯಸನಕೂಪದಿ ಬಿದ್ದು
ಬಸವಳಿದನುಪಮ ದೆಸೆಗೆಟ್ಟೆ ಕುಸುಮಾಕ್ಷ
ಶಿಶುವಿನ ತವಪಾದ ಅಸಮದಾಸಜನ
ರೊಶದಿ ಇಟ್ಟು ಪೊರೆ ಕುಶಲಮತಿಯ ನೀಡಿ ೩

ಭವಭವದಲಿ ಬೇಡುವೆನಭವನೆ ಬಾಗಿ
ದಯಪಾಲಿಸಿ ಸ್ಥಿರಜ್ಞಾನಸುಪದವ
ಭವಗುಣಹಿಂಗಿಸಿ ದಿವನಿಶೆನ್ನುವುದಕೆ
ಸವಿನಾಮವಿತ್ತು ಕಾಯೋ ಭವರೋಗವೈದ್ಯನೆ ೪

ಮೂರರಿಂ ಗೆಲುವಿತ್ತು ಮೂರರಿಂದಾಂಟಿಸಿ
ಮೂರರ ಮೋಹನಿವಾರಿಸು ದೇವ
ಮೂರು ನಿನಗರ್ಪಿಸಿ ಸಾರಿಬೇಡುವೆ ನೀಡ
ಪಾರಮೋಕ್ಷಪದ ಧೀರ ಶ್ರೀರಾಮಯ್ಯ ೫

೧೩೬

ಜಯವ ಪಾಲಿಸಿ ಸಲಹೆ ಜನನಿ
ಜಯಲಕ್ಷ್ಮಿ ಜಯಂಕರಿ ಪ

ಭಯವಿಮೋಚನೆ ಭಜಿಪೆ ನಿನ್ನ
ಜಯವ ಪೊಂದಿಸಿ ಭವದಿ ಎನ್ನ
ದಯದಿ ಬೆಂಬಲಿರ್ದು ಬಿಡದೆ
ಕೈಯ ಪಿಡಿದು ಕಾಯೌ ಸುದಯೆ ೧

ಜ್ಞಾನಜ್ಯೋತಿ ಸುಪ್ರಕಾಶ
ಮಾಣದಿತ್ತು ಮಮತೆಯಿಂದ
ಧ್ಯಾನಯುತರ ನೆರೆಯೊಳಿರಿಸಿ
ಹಾನಿತಾರದೆ ಪೊರೆಯೆ ಸತತ ೨

ಕಾಮಿತಾರ್ಥ ಪೂರ್ಣೆ ಸುತಗೆ
ಭೂಮಿಯಾತ್ರೆ ವಿಜಯನೀಡು
ಶಾಮಸುಂದರ ಸ್ವಾಮಿ ಶ್ರೀ
ರಾಮನ ಪಟ್ಟದರಾಣಿ ಕರುಣಿ ೩

೧೩೭

ಜಾಗರ ಮಾಡಿದೆನೇ ಶಿವ ಶಿವ ಜಾಗರ ಮಾಡಿದೆನೇ ಪ

ಜಾಗರ ಮಾಡಿದೆ ಸಾಗರನಿಲಯನ
ನೀಗದಮಹಿಮೆ ಶಿವ ಯೋಗದಿ ತಿಳಿಸೆಂದು ಅ.ಪ

ಲಕ್ಷಪತ್ರರ್ಪಿಸಿ ತ್ರಿಜಗದ್ರಕ್ಷ ನಿನಗೆ ನಮಿಸಿ
ಲಕ್ಷದಿಂದ ಸತಿಗಕ್ಷಯವಿತ್ತ ಭಕ್ತ
ಪಕ್ಷನ ನಾಮ ಎನ್ನ ಕುಕ್ಷಿಗೆ ನೀಡೆಂದು ೧

ಮನವನು ಮಡಿಮಾಡಿ ಹರಹರ ನಿನಗೆ ನಾ ಎಡೆಮಾಡಿ
ಮನಸಿಜಜನಕನ ಘನಸಚ್ಚರಿತೆಯನ್ನು
ಕೊನೆಯ ನಾಲಗೆ ಮೇಲೆ ನೆನವು ಸ್ಥಾಪಿಸೆಂದು ೨

ಪ್ರೇಮ ದೃಷ್ಟಿ ತೆರೆದು ಶಂಭು ಎನ್ನ ಕಾಮಿತಗಳ ಕಡಿದು
ಭೂಮಿಗಧಿಕ ಮಮಸ್ವಾಮಿ ಶ್ರೀರಾಮನ
ಕೋಮಲ ಪಾದವೆನ್ನ ಮಂಡೆಮೇಲ್ಹೊರಿಸೆಂದು ೩

೧೩೮

ತಾಯಿ ಪಾಲಿಸು ಎನ್ನ ದಯದಿ
ಗಾಯತ್ರಿದೇವಿ ಸಿದ್ಧಿಯನಿತ್ತು ಸಲಹಾ ಸಾವಿತ್ರಿ ಪ

ಪಾವನ ಸುಚರಿತ್ರೆ ಮಾಯೆ ತ್ರಿಜಗಸ್ತೋತ್ರೆ
ಕಾಯೆ ಸಿದ್ಧಿಸಿ ಎನ್ನ ಕಾಯಾ ಮಂಗಲಗಾತ್ರೆ ಅ.ಪ

ಸಾರಸಾಕ್ಷಿಯೆ ದಯಾಪಾರಾವಾರಳೆ ನಿನ್ನ
ಚಾರುಚರಿತಂಗಳು ಸಾರುವೆ ನಿಜಮಂತ್ರ
ಮೂರುಲೋಕದ ಸೂತ್ರಧಾರಿ ನೀ ನಿಜ ಓಂ
ಕಾರಿ ಕರುಣಿಸಿ ಸುತನ ಗಾರುಮಾಡದೆ ಪೊರೆ ಅ
ಪಾರ ಮಹಿಮಳೆ ಬಾರಿಬಾರಿಗೆ ಸೇರಿ ನಿನ್ನಪಾದ
ವಾರಿಜಕೆ ನಾ ಸಾರಿ ಬೇಡುವೆ ಧೀರಳೆ ಸುವಿ
ಚಾರಿ ನಿಜಸುಖ ತೋರು ಬೇಗನೆ ೧

ಮನುಮುನಿಗಳಿಗೊಲಿದು ಘನಸುಖಸಾಮ್ರಾಜ್ಯ
ವನು ಕೊಟ್ಟು ಸಲಹಿದಿ ಕನಿಕರದೊಡನೆ
ಮಿನುಗುವ ಶತಕೋಟಿದಿನ ಕರಪ್ರಭಾಮಯೆ
ಅನುಪಮುನಿಜಜ್ಞಾನವನು ನೀಡು ಬೇಗನೆ

ಚಿನುಮಯಾತ್ಮಳೆ ಘನಕೆ ಘನ ನಿನ್ನ
ವರರುಹಂಘ್ರಿಯ ನೆನೆವೆನನುದಿನ ಜನನಿ ಅಣುಗನ
ಕೊನೆಯಜಿಹ್ವೆಯೊಳ್ ಪ್ರಣಮ ಬರಿಯಮ್ಮೆ ಮಣಿವೆ ಕಲ್ಯಾಣೆ ೨

ಪನ್ನಂಗಧರ ಸುರಸನುತ ಶ್ರೀರಾಮ
ಸುನ್ನತ ಮಹಿಮಂಗಳನ್ನು ಬಲ್ಲವಳೆ
ಅನ್ನ ಪೂರ್ಣೆಯೆ ಉಮೆ ಪನ್ನಂಗವೇಣಿಯೆ
ಮನ್ನಿಸು ಬಡವನ ಬಿನ್ನಪ ಕರುಣೆ
ಭಿನ್ನವಿಲ್ಲದೆ ನಿನ್ನ ಬೇಡುವೆ ಉನ್ನತೋನ್ನತ ಪದವನಿತ್ತು
ಧನ್ಯನೆನಿಸೌ ಎನ್ನ ಮನದಿಷ್ಟವನ್ನು ಪಾಲಿಸಿ ವಿಮಲ್ಹೃದಯೆ ೩

೧೩೯

ತುಳಸಮ್ಮ ಎನಗೊಲಿಯಮ್ಮ
ವಿಲಸಿತವಿಮಲೆ ನೀ ಕಲ್ಯಾಣಮಾಡೆನಗೆ ಪ

ನಿಲಯನಿಲಯದಲಿ ನಿಂದು ಭಕ್ತ
ಕುಲವನುದ್ಧರಿಸಿದಿ ಇಂದುಮುಖಿ
ಮಲಿನಹರಣೆ ದಯಸಿಂಧು ಅಹ
ಕುಲವನುದ್ಧರಿಸೆನ್ನ ಹೊಲೆಯ ಬವಣೆಯಲಿ
ಕಳವಳಪಡಿಸದೆ ಸಲಹು ಬೇಗೆನ್ನಮ್ಮ ೧

ಭಯದೂರೆ ಜಯಕಾರೆ ಜಗಕೆ ಲೋಕ
ತ್ರಯದ ಜನನಿ ಎನ್ನ ಮನಕೆ ಬೇಗ
ಜಯವ ನೀಡಿ ಮಾಡು ಜೋಕೆ ಅಹ ರಮೆ
ದಯಯುತೆ ನಿನ್ನ ದಯದಿ ಬೇಡುವೆನವ್ವ
ಭವಭವದಲಿ ಎನ್ನ ಜಯವ ಪೊಂದಿಸಿ ತಾಯಿ ೨

ಜಲಜನಾಭನ ಮೋಹಮಾಲೆ ನೀನು
ಬಲು ದಯಾನ್ವಿತಭಕ್ತ ಶೀಲೆ ಎನ್ನ

ಗಳವೆ ಪೊಗಳಲು ನಿನ್ನ ಲೀಲೆ ಆಹ
ಚೆಲುವ ಶ್ರೀರಾಮನ ಕೂಡಿಕೊಂಡೆನ್ನೊಳು
ನೆಲೆಗೊಳ್ಳು ಬಿಡದೆ ವರ ಫಲ ಪ್ರದಾಯಿನಿ ३

೧೪೦

ದಯವು ಏತಕೆ ಬಾರದೌ ದೇವಿ
ಭಯವಿಮೋಚನೆ ಭಕ್ತ ಸಂಜೀವಿ ಪ

ಚರಣಕಮಲಕ್ಕೆ ಶಿರವ ಬಾಗಿದೆನೆ
ಸೆರಗನೊಡ್ಡಿ ಪರಮಭಕ್ತಿಲಿ ಬೇಡಿಕೊಂಡೆನೆ
ಕರುಣಭರಿತ ಮೊರೆಯ ಕೇಳ
ದಿರು ವಿಜಯವಾಣಿ
ಪರಮಕಲ್ಯಾಣಿ
ಮರೆಯಬಿದ್ದವರನ್ನು ನೀನು ಪೊರೆಯದಿರುವುದು
ಸರಿಯೆ ನಿನಗಿದು
ಶರಣಜನರ ಕರುಣಾಕರಿ ಎಂಬ
ಪರತರ ಬಿರುದು ಇದೆಯೇನೆ ೧

ಮಾರಮರ್ದನರಸಿ ಗಂಭೀರೆ
ಶಾರದಾಂಬೆಯೆ ಮೂರುಲೋಕಂಗಳಿಗೆ ಆ
ಧಾರಿ ಪಾರಮಹಿಮೆಯೆ ತೋರು
ಕರುಣವ ಬೇಗ ವರಗೌರಿ
ಮರೆಯದಿರು ಶೌರಿ
ಸಾರನಿಗಮವಿನುತೆ ನಿಮ್ಮಯ ಚಾರು ಚರಿತವ ಪಾಡಿ ಬೇಡುವೆ
ಕೋರಿದಾಕ್ಷಣ ತೋರಿ ಭಕ್ತರ
ಸಾರಮನದಿಷ್ಟ ಪೂರೈಸಿದ ರೌದ್ರಿ ೨

ಸ್ವಾಮಿ ರಾಮನನಾಮಮಹಿಮರತಿ
ನೀ ಮನವ ಸೋತಿ ಪ್ರೇಮದಿಂದಲಿ ತ್ರಿಜ
ಗನ್ಮಾತೆ ವಿಮಲಚರಿತೆ

ಪ್ರೇಮಮಂದಿರೆ ಭಕ್ತ ವರದಾತೆ ಅಮರಾದಿವಿನುತೆ
ಹೈಮವತಿ ನಿನ್ನ ನಂಬಿ ಭಜಿಸುವೆ ಕ್ಷೇಮಪಾಲಿಸೆನ್ವ್ಯಾಧಿ ಕಳೆದು
ನಾಮರೂಪರಹಿತೆ ವಿಮಲೆ
ಅಮಿತಮಹಿಮಳೆ ಮಮತೆದೋರೆ ೩

೧೪೧

ದೇವ ಗಿರಿಜಾಧವ ಪುರಹರ ಗೌರಿವರ
ಕರುಣಾಕರ ಕರುಣಿಸೆನ್ನ ಪ

ಫಾಲನೇತ್ರ ಪಾಲಯ ಜಗ
ನೀಲಕಂಠ ಮೇಲುಮಂದಿರ
ಶೂಲಪಾಣಿ ಕಾಲಮರ್ದನ
ಬಾಲನೆಂದು ಪಾಲಿಸೆನ್ನ ೧

ದುರಿತರಹಿತ ಕರುಣಭರಿತ
ಪರಮಚರಿತ ಸ್ಮರನ ಭಂಜಿತ
ಉರಗಭೂಷ ವರಮಹೇಶ
ಹರಿಯ ಪ್ರೇಮ ದೊರಕಿಸೆನಗೆ ೨

ಒಡೆಯ ಶ್ರೀರಾಮನಡಿಯ ಧ್ಯಾನ
ಪಿಡಿದು ಬಿಡದ ದೃಢಭಕುತಿ
ಗಡನೆಕೊಡೆಲೊ ಮೃಡನೆಯಿದನು
ದೃಢದಿ ಬೇಡ್ವೆ ಜಡಧಿಧರನೆ ೩

೧೪೨

ದೋಷನಾಶ ಜಗದೀಶ ಈಶ ಕೈ
ಲಾಸವಾಸ ಸದಾನಂದ ಹರ ಜೈಜೈ ಪರಮಾನಂದ ಪ

ದಂಡಧರನೆ ಹರ ರುಂಡಮಾಲ ರುದ್ರ
ಕೆಂಡನಯನ ಸದಾನಂದ ಹರ ಜೈ ಜೈ ಪರಮಾನಂದ ೧

ಗೌರಿನಾಥ ಪ್ರಭು ಮಾರಮರ್ದನ ಮೃಡ
ವಾರಿಧಿಧರ ಸದಾನಂದ ಹರ ಜೈ ಜೈ ಪರಮಾನಂದ ೨

ಅಗಜಾವಲ್ಲಭ ನಿಗಮವಂದ್ಯ ಭಕ್ತ
ರಘನಾಶನ ಸದಾನಂದ ಹರ ಜೈ ಜೈ ಪರಮಾನಂದ ೩

ಗಜಚರ್ಮಾಂಬರ ಸುಜನರ ಪರಿಪಾಲ
ತ್ರಿಜಗಪೂಜ್ಯ ಸದಾನಂದ ಹರ ಜೈ ಜೈ ಪರಮಾನಂದ ೪

ತ್ರಿಪುರಸಂಹರ ನುತ ಸುಫಲದಾಯಕ ಮಹ
ಕೃಪಾಕರ ಶಿವ ಸದಾನಂದ ಹರ ಜೈ ಜೈ ಪರಮಾನಂದ ೫

ನೀಲಕಂಠ ಭವಮಾಲನಿವಾರ ತ್ರಿ
ಶೂಲಧಾರಿ ಸದಾನಂದ ಹರ ಜೈ ಜೈ ಪರಮಾನಂದ ೬

ಚಂದ್ರಚೂಡ ಶರಣೇಂದ್ರ ಮೃಕಂಡುಮುನಿ
ಕಂದಗೊಲಿದ ಸದಾನಂದ ಹರ ಜೈ ಜೈ ಪರಮಾನಂದ ೭

ಫಾಲನಯನ ಸುಖದಾಲಯ ನುತಜನ
ಮೇಲುಮಂದಿರ ಸದಾನಂದ ಹರ ಜೈ ಜೈ ಪರಮಾನಂದ ೮

ಭೂತನಾಥ ಭವ ಭೂತಿಖ್ಯಾತ ಜಗ
ನ್ನಾಥ ದಾತ ಸದಾನಂದ ಹರ ಜೈಜೈ ಪರಮಾನಂದ ೯

ನಾದತೀತ ಅಮರಾದಿವಿನುತ ಮಹ
ದಾದಿದೇವ ಸದಾನಂದ ಹರ ಜೈ ಜೈ ಪರಮಾನಂದ ೧೦

ನತಜನ ಸುಖದಾಶ್ರಿತ ಹಿತಮತಿ ದೇ
ನುತಿಪೆ ಸತತ ಸದಾನಂದ ಹರ ಜೈಜೈ ಪರಮಾನಂದ ೧೧

ಭಾಗವತರ ಪ್ರಿಯ ಭಗವತ್ಶಿಖಾಮಣಿ
ನಾಗಭೂಷ ಸದಾನಂದ ಹರ ಜೈ ಜೈ ಪರಮಾನಂದ ೧೨

ಖೊಟ್ಟಿಲೋಹ ಸುಟ್ಟು ಕಿಟ್ಟತೆಗೆವಂತೆನ್ನ
ಭ್ರಷ್ಟತ್ವಕಳಿ ಸದಾನಂದ ಹರ ಜೈ ಜೈ ಪರಮಾನಂದ ೧೩

ಹರಣಪೋದರು ಹರಿಚರಣಸ್ಮರಣೆಬಿಡ
ದ್ವರವ ಪಾಲಿಸು ಸದಾನಂದ ಹರ ಜೈ ಜೈ ಪರಮಾನಂದ ೧೪

ಲಿಂಗಪುರೇಶ ಶಿವಲಿಂಗರೂಪ ಭವ
ಭಂಗಸಂಗ ಸದಾನಂದ ಹರ ಜೈ ಜೈ ಪರಮಾನಂದ ೧೫

ಮಂದರಧರನಡಿ ಚಂದದೊಲಿಸಿ ಎನಗಾ
ನಂದಕೊಡು ಸದಾನಂದ ಹರ ಜೈ ಜೈ ಪರಮಾನಂದ ೧೬

ಮಂಗಳಮೂರುತಿ ತುಂಗವಿಕ್ರಮ ಶ್ರೀ
ರಂಗ ರಾಮ ಭಕ್ತಾನಂದ ಹರ ಜೈ ಜೈ ಪರಮಾನಂದ ೧೭

೧೪೩

ನಮ್ಮವ್ವ ಈಕಿ ನಮ್ಮವ್ವ ಒಮ್ಮನ ಕೂಲ್ಯಕಿ ನಮ್ಮವ್ವ ಪ

ಇಮ್ಮನ ಸಜ್ಜಿಗೆ ಒಮ್ಮೆಗೆ ತಿಂದು
ಸುಮ್ಮನೆ ಕೂತಳ ಗುಮ್ಮವ್ವ ಅ.ಪ

ಆರುಮೂರುಮರ ರೊಟ್ಟಿಗಳು ಒಂದೆ
ಸಾರಿಗೆ ಮುದ್ದೆ ಮಾಡಿ ನುಂಗಿದಳು
ದಾರಿಗೆ ತೋರದಂತೆ ಎಂಟು ಭಾಂಡೆ ಅನ್ನ
ವಾರೆಲಿ ಕೂತು ಸೂರೆ ಮಾಡಿದಳು ೧

ಎತ್ತಿ ತುಪ್ಪದ ಮೂರು ಡಬ್ಬಿಗಳು
ಕುತ್ತಿಗ್ಗೆ ಬೀಳಹಾಗೆ ಕುಡಿದಳು
ಹತ್ತ್ಹೆಡಿಗ್ಹೋಳಿಗೆ ಪತ್ತೆಯಿಲ್ಲದೆ ತಿಂದು
ಮೆತ್ತಗೆ ಸುತ್ತಿಕೊಂಡು ಮಲಗಿದಳು ೨

ಒಡಲನಿಲ್ಲದೆ ಕಾಯುವಳು ಇವಳು
ಇಡೀ ಬ್ರಹ್ಮಾಂಡವ ನುಂಗಿದಳು
ಪಿಡಿದೊಕ್ಕುಡಿತೆಲಿ ಕಡಲೇಳನು
ಕುಡಿದೊಡೆಯ ಶ್ರೀರಾಮನ ಕೂಡಿದಳು ೩

೧೪೪

ನಮೋ ನಮೋ ಶಂಕರ ಉಮೆಪ್ರಿಯ ಶಶಿಧರ
ಕಮಲನಾಭನ ಭಕ್ತಿಕೊಡು ಸುಖಸಾರ ಪ

ಹಿಮಗಿರಿಜೇಶ ಸುಮಶರನಾಶ
ಅಮಿತಮಹಿಮ ನಿಮ್ಮ ವಿಮಲ ಪಾದದಿಬೇಡ್ವೆ ೧

ಕಾಲಮರ್ದನ ತ್ರಿಶೂಲಿಯೆ ಪುರತ್ರಯ
ಕಾಲನೊಶವಗೈದ ಫಾಲನಯನ ಕಾಯೊ ೨

ಭೂಮಿತ್ರಯಕೆ ತಾನೆ ಸ್ವಾಮಿಯೆನಿಪ ಶ್ರೀ
ರಾಮ ನಾಮಾಮೃತ ಪ್ರೇಮದಿ ಕರುಣಿಸು ೩

೧೪೫

ನಮೋ ಹನುಮ ಜೈ ಬಲವಂತ
ನಮೋ ಪರಾಕ್ರಮ ಧೀಮಂತ ಪ

ಹಾರಿ ಮಹಾಸಾಗರ ಸೇರಿ ದುರುಳನಪುರ
ಮೀರಿದ ಬಲು ಶೃಂಗಾರದಿ ಶೋಭಿಪ
ಸೂರಗೈದೆಲೋ ವನ ೧

ಬಿಂಕಮುರಿದು ಅಶಂಕ ದನುಜಕುಲ
ಪಂಕಜಮುಖಿಪಾದಪಂಕಜಕೆರಗಿ
ಲಂಕೆ ದಹನ ಗೈದ್ಯೋ ೨

ಸ್ವಾಮಿ ಶ್ರೀರಾಮನ ಪ್ರೇಮ ಪಡೆದು ನಿ
ಸ್ಸೀಮನೆ ಎನ್ನನು ಪ್ರೇಮದಿ ಪೊರೆಯೈ
ಸ್ವಾಮಿ ಮೂರುತಿ ೩

೧೪೬

ನಿತ್ಯಾತ್ಮ ನಿರಂಜನ ನಿತ್ಯ ನಿರ್ಗುಣ
ನಿತ್ಯಾತ್ಮ ನಿರಂಜನ ಪ

ಸುಗುಣ ಸಂತೃಪ್ತ ನಿಗಮಾದಿವಿನುತ
ಅಗಜೇಶ ಜಗಪಾಲಯ ೧

ಗಜಚರ್ಮಾಂಬರ ರಜತಾದ್ರಿ ಮಂದಿರ.
ಭಜಿಪರ ಭಯವಿದೂರ ೨

ನಂಬಿದ ಭಕುತರ ಇಂಬುಗೊಟ್ಟು ವರ
ಗುಂಭದಿ ಕೊಡುವ ದೇವ ೩

ಮಹಿಮ ನೀ ಉದಯಾಗಿ ಮಹಿಯೊಳು ಮುಂಡರಗಿ
ಮಹಸ್ಥಲವೆನಿಸಿದಿಯೋ ೪

ದೋಷವಿನಾಶನ ಶ್ರೀಶ ಶ್ರೀರಾಮನ
ದಾಸರ ದಯಸಂಪೂರ್ಣ ೫

೧೪೭

ಪರಮಪಾವನ ಪ್ರಾಣದೇವ ನಂಬಿದೆ ನಿನ್ನ
ಹನುಮರಾಯ ಎನ್ನ
ದುರಿತದಾರಿದ್ರ್ಯವ ಪರಿಹರಿಸಿ ಸಲಹೋ ಹನುಮರಾಯ ಪ

ದಿನದಿನ ಘನಘನ ತನುವಿನರೋಗವು ಹನುಮರಾಯ ಇನ್ನು
ಘನವಾಯ್ತು ಕನಿಕರದಿಂದ ಕಡೆಹಾಯ್ಸಯ್ಯ ಹನುಮರಾಯ
ಕ್ಷಣಸುಖವಿಲ್ಲದೆ ಅನುಪಮ ನೋಯುವೆ ಹನುಮರಾಯ

ಎನ್ನಮನಕೆ ಸಂತಸವಿತ್ತು ಘನವಾಗಿ ಸಲಹಯ್ಯ
ಹನುಮರಾಯ ೧

ಕಿರಿಕಿರಿಸಂಸಾರ ಪರಿಪರಿಬಾಧೆಯು ಹನುಮರಾಯ ಬೇಗ
ಪರಿಹರಿಸಿ ಎನಗೆ ಪರಮ ಸುಖವ ನೀಡೊ ಹನುಮರಾಯ
ಇರಬಂದೆನರಲವ ಈ ಪರಿ ಬಾಧ್ಯಾಕೊ ಹನುಮರಾಯ ಇನ್ನು
ಮರವೆಹರಿಸಿ ನಿಜಅರಿವು ಕರುಣಿಸಿ ಕಾಯೊ ಹನುಮರಾಯ ೨

ಸ್ವಾಮಿ ಶ್ರೀರಾಮನ ಪ್ರೇಮದದೂತನೆ ಹನುಮರಾಯ ದೇವ
ನೇಮದಿ ನಿಮ್ಮಯ ಪಾದ ಭಜಿಸುವೆನಯ್ಯ ಹನುಮರಾಯ
ಈ ಮಹಕಷ್ಟದಿ ಕ್ಷೇಮ ಪಾಲಿಸಯ್ಯ ಹನುಮರಾಯ ನಿನ್ನ
ಪ್ರೇಮದಿರಿಸಿ ಎನ್ನ ಮುಕ್ತಿಗ್ಯೋಗ್ಯನ ಮಾಡೊ ಹನುಮರಾಯ ೩

೧೪೮

ಪಾರ ಶಂಭೋ ಪಾಲಿಸಭವ
ಧೀರ ಶ್ರೀಹರಿಸಖನೆ ಪರಶಿವ ಪ

ಮೂರು ಪುರವ ಗೆಲಿದ ಮಹಿಮ
ಮೂರು ಕರಣ ಶುದ್ಧನೆನಿಸಿ
ಮೂರು ಗುಣಗಳ ಹಾರೈಸೆನಗೆ
ನಾರಸಿಂಹನ ಪಾದ ಭಕ್ತಿ ೧

ಪಂಚಮುಖನೆ ಪದಕೆ ನಮಿಪೆ
ಪಂಚಕ್ಲೇಶಗಳಳಿದು ಎನ್ನ
ಪಂಚಕತ್ವ ನೀಗಿಸಿ ವಿ
ರಂಚಿಪಿತನ ದಿವ್ಯಧ್ಯಾನ ೨

ಕಾಮದಹನ ನೀಲಕಂಠ
ಸ್ವಾಮಿ ನಿಮ್ಮನು ನಂಬಿ ಬೇಡ್ವೆ
ಕ್ಷೇಮವಿತ್ತು ಪ್ರೇಮದೆನಗೆ
ಭೂಮಿಪತಿ ಶ್ರೀರಾಮನೊಲುಮೆ ೩

೧೪೯

ಬನ್ನಿ ಮಹಂಕಾಳಿ ಜಯವ ನೀಡಮ್ಮ
ಮನ್ನಿಸಿ ಬಾಲಗೆ ಪ

ನಿನ್ನ ನಂಬಿಕೊಂಡು ಕೆನ್ನೆಯೊಳ್ಮುಡಿವರ
ಬನ್ನ ಕಳೆದು ಜಯವನ್ನು ಕೊಟ್ಟು ನೀ
ಭಿನ್ನವಿಲ್ಲದೆ ಮನ್ನಿಸಿ ಸಲಹು
ಪನ್ನಂಗವೇಣಿಯೆ ಉನ್ನತ ಕರುಣಿ ೧

ಪರಮ ಪವಿತ್ರಳೆಂದು ಪರಮ ಪ್ರೀತಿಯಿಂದ
ಹರನು ಬಿಡದೆ ನಿನ್ನ ಶಿರದಿ ಧರಿಸಿಕೊಂಬ
ಪರಮಮಹಿಮ ನಿನ್ನನರಿನು ಪೇಳುವೆನಾ
ತರಳನ ಮೊರೆ ಕೇಳೆ ಕರುಣಿ ಶುಭಕರಿ ೨

ನೇಮದಿ ಭಜಿಪೆ ನಿಸ್ಸೀಮೆ ನಿರಾಮಯೆ
ಕ್ಷೇಮಶರಧಿ ತ್ರಿಭೂಮಿಜಯಂಕಾರಿ
ಈ ಮಹಭವನಿಧಿ ಕ್ಷೇಮದಿ ಗೆಲಿಸು ಶ್ರೀ
ರಾಮನಾಮ ಪ್ರಿಯೆ ಕೋಮಲಹೃದಯೆ ೩

೧೫೦

ಭಯ ಹಾರಿಣೀ ದಯಾ ಕರುಣೀ ಪ

ಜಯಲಕ್ಷ್ಮಿ ನಿನ್ನ ಪದದಿ ಜಯವು ಕೋರಲು ನಿ
ರ್ದಯವೇನೆ ಜನನಿ ಅ.ಪ

ಏನು ನೀಡಿದಿ ತಾಯಿ ಧ್ಯಾನಿಸಿ ಬೇಡುವಗೆ
ಹೀನ ಅಪಜಯವಿದೇನು ಕಾರಣವು ೧

ಪರಮಪರತರ ಕಲ್ಪತರುವಿನೊಳ್ಸುಖ ಬಯಸೆ
ಪರಮ ಪರಿತಾಪವು ಬರುವುದೇನಮ್ಮ ೨

ಸಿರಿಯರಾಮನ ಪ್ರಿಯೆ ಪರಮಮಂಗಳೆ ನಿನ್ನ
ನೆರೆನಂಬಿ ಬೇಡುವೆ ಈ ಪರಿ ಭಂಗ ಕಳೆಯೆ ೩

೧೫೧

ಭಳಿಭಳಿರೆ ಶನಿರಾಜ ನೀನೆ ಬಲ್ಲಿದನೊ
ಇಳೆ ಮೂರರಲಿ ನಿನಗಿಂ ಬಲ್ಲಿದರ ಕಾಣೆ ಪ

ಧರೆಗೆಲ್ಲ ಒರ್ವನೆ ದೊರೆಯಾದ ನಳನನ್ನು
ಪರರಾಯನಾಳೆನಿಸಿ ತಿರುವಿಸಿದಿ ಅಶ್ವ
ವರ ಸತ್ಯ ಹರಿಶ್ಚಂದ್ರನ್ನೊಲೆಯನಾಳೆನಿಸವನಿಂ
ನಿರುತದಿಂ ಕಾಯ್ಸಿದೆಯೊ ಸುಡುಗಾಡವ ೧

ಭೂಪತಿ ವಿಕ್ರಮಗೆ ಕಳ್ಳನೆಂದೆನಿಸವನ
ತಾಪಬಡಿಸೆದೆಯೊ ಕೈಕಾಲುಗಳ ಕಡಿಸಿ
ರೂಪಗೆಡಿಸಿದಿಂದ್ರಿನ ಮೈಯಲ್ಲಿ ತೂತ್ಹಾಕಿ
ಶಾಪಕೊಡಿಸಿಂದುವಿನ ಕಳೆಯುಗುಂದಿಸಿದಿ ೨

ಕುರುರಾಯನೊಂಶವಂ ನಿರ್ಮೂಲ ಮಾಡಿದೆಯೊ
ತಿರಿದುಣಿಸಿದಿ ಆ ಮಹ ಪಾಂಡುನಂದನರ
ಪರಮ ಸುಖಿಗಳ ಸುಖಕೆ ಕಿಡಿಯಿಟ್ಟು ನೋಡಿದಿ
ವರ ತಪಸ್ವಿಗಳ ತಪಸ್ಸು ಭಂಗಪಡಿಸಿದೆಯೊ ೩

ಒದಗಿ ಯಮದೇವನನ್ವಧೆ ಮಾಡಿಸಿದೆಯೊ ನೀ
ಪದುಮಪೀಠನದೊಂದು ಮಸ್ತಕವ ಕಳೆದಿ
ಎದೆಯೊಡೆಸಿ ಶಿವನನ್ನು ಸುಡುಗಾಡದಿಳಿಸಿದಿ
ಮುದ ಕೃಷ್ಣ ಗಿಡದಡಿಯಸುವ ಬಿಟ್ಟನೆನಿಸಿದಿ ೪

ಇಂತಿಂಥ ಮಹಿಮರನು ಈ ಪಾಡ ಪಡಿಸಿದಿ ನ
ಮ್ಮಂಥ ನರಜನರ ಪಾಡೇನು ನಿನಗೆ
ಕಂತುಪಿತ ಶ್ರೀರಾಮನನುಮತಿಯ ಪಡೆದು ಬಲ
ವಂತನಿನಿಸಿದೆಯೋ ನೀ ಮೂಲೋಕದೊಳಗೆ ೫

೧೫೨

ಭೀಮ ಭುಜಬಲೋದ್ದಾಮ
ಸವರಿದಿ ಕುರುಪನ ಕುಲವ ನಿಸ್ಸೀಮ ಪ

ವಿಷದಿ ಕಜ್ಜಾಯ ತಿನಿಸಿ ಮುಸುಕಿನಿಂ ಬಂಧಿಸಿ
ಎಸೆಯಲು ನದಿಯೊಳು ಕುಶಲದಿಂ ಬಂದೆಯೊ ೧

ಜನನಿ ಗೌರಿಯ ವ್ರತವನು ಮಾಳ್ಪೆನೆಂದೆನಲು ಅಣ್ಣ
ನನುಮತಿಯಂತೆ ಘನ ಸುರಲೋಕ ಕೈದ್ಯೊ ೨

ನಿರುತದಿಂ ಸುರಧೇನು ವರ ಪರುಷಮೃಗವನ್ನು
ಕರೆತಂದು ಗಜಗೌರಿ ವ್ರತವ ಪೂರೈಸಿದಿಯೊ ೩

ಬಕನ ಮರ್ದಿಸಿ ಹಿಡಿಂಬಕನ ತರಿದು ಹಿಡಿಂ
ಬಿಕಿಯಳ ಕರಗ್ರಹಣ ಕೈಕೊಂಡ್ಯೊ ರಣಶೂರ ೪

ಬಲ್ಲಿದತನದಿ ಆ ಖುಲ್ಲಕೀಚಕನೊದೆದು
ಪುಲ್ಲನಯನೆಯ ಕಾಯ್ದೊ ಬಲ್ಲಿದ ಶ್ರೀರಾಮನ ದೂತ ೫

೧೫೩

ಮಾರುತಿಪಾದವ ಸ್ಮರಿಸಿರೋ
ಸಾರದುರಿತ ಪರಹರಿಸ್ಪೊರೆಯುವ ಧೀರ ಪ

ದುರುಳದಾನವನ ವರನಗರುರುಹಿತಾ
ಪರತರ ವಿಭೀಷಣನೊರ ಕರುಣದಿ ಕಾಯ್ದ ೧

ಬುವಿಯಂ ಕೈಲಾಸಕ್ಕೆ ಜವದಿ ಜಿಗಿದು ವೀರ
ಭವಭಯಹರ ವರ ಶಿವನ ಚಿತ್ತರಿದಂಥ ೨

ಭಕ್ತವತ್ಸಲ ವರ ಮುಕ್ತಿಕರ್ತ ಗುರು
ದತ್ತ ಶ್ರೀರಾಮನ ಭೃತ್ಯನೆನಿಸಿಕೊಂಡ ೩

೧೫೪

ಮಾರುತಿ ಪ್ರಾಣ ಮೂರುತಿ ಪ

ಸಾರುವೆ ತವಶ್ರುತಿ ಧೀರ ಭಾರತೀಪತಿ ಅ.ಪ

ಭರದಿ ಸಾಗರ ಹಾರಿ ದುರುಳನ ಪುರ ಸೇರಿ
ವರಮಾತೆಗುಂಗುರ ತೋರಿ ವನಗೈದಿ ಸೆರೆ ಶೂರ ೧

ಸೊಕ್ಕಿನಿಂದ ಮೆರೆವಂಥ ರಕ್ಕಸರನು ಪಂಥ
ಇಕ್ಕಿ ನೀ ಗೆಲಿದಂಥ ಅಃಭಾಪುರೆ ಹನುಮಂತ ೨

ಸಿರಿಯ ರಾಮನಿಗಿತ್ತ ವರ ಸೀತಾವೃತ್ತಾಂತ
ವರ ಸದ್ಭಕ್ತರ ಪ್ರೀತ ಪಾಲಿಸೊ ವಿಖ್ಯಾತ ೩

೧೫೫

ಮಾಯಕಾರಳೆ ಕಾಯೊ ಕರುಣದಿ
ಬಾಯಿ ಬಿಡುವೆನೆ ರುದ್ರಾಣಿ ಪ

ನೋಯಲಾರದೆ ದೇವಿ ಮರೆಹೊಕ್ಕೆ
ನೋವು ಕಳೆಯಮ್ಮ ಭವಾನಿ ಅ.ಪ

ಭಕ್ತಜನರಿಗೆ ಆಪ್ತಮಾತೃ ನೀ
ನಿತ್ಯೆ ನಿರ್ಮಲರೂಪಿಣೀ
ಭೃತ್ಯನೊಳು ದಯವಿತ್ತು ಪೊರೆ ಆದಿ
ಶಕ್ತಿ ದೈತ್ಯಸಂಹಾರಿಣಿ ೧

ಶುಂಭ ನಿಶುಂಭರೆಂಬ ಖಳರ
ಜಂಬ ಮುರಿದೌ ಚಂಡಿಕೆ
ಅಂಬೆನಿನ್ನನು ನಂಬಿ ಭಜಿಪೆ
ಇಂಬುಗೊಟ್ಟು ಸಲಹಂಬಿಕೆ ೨

ಸುರರ ಮೊರೆಕೇಳಿ ದುರುಳರ್ಗಾವಳಿ
ದೂರಮಾಡಿ ಶೌರಿಯೆ
ನೀ(ರಟ)ಸಿದವರಿಗೆ ವರವ ಕರುಣಿಸಿ
ಕರುಣ ದೋರಿದೌದರಿಯೆ ೩

ಅನ್ನಪೂರ್ಣೆಯೆ ನಿನ್ನ ಪಾದ
ವನ್ನು ಭಜಿಸುವೆ ಕಲ್ಯಾಣಿ
ಭಿನ್ನವಿಲ್ಲದೆ ನಿನ್ನ ಸುತಗೆ ಸುಖ
ವನ್ನು ಕೊಡೆ ನಾರಾಯಣಿ ೪

ರಾಮದಾಸರ ಪ್ರೇಮ ಜನನಿಯೆ
ನೇಮದಿಂ ನಿನ್ನ ಪಾಡುವೆ
ಹೈಮಾವತಿ ಎನ್ನ ಕಾಮಿತಾರ್ಥವ
ಪ್ರೇಮದಿಂ ನೀಡು ಕರುಣಿಯೆ ೫

೧೫೬

ಯಕ್ಷಿಣೀ ಸರ್ವಲಕ್ಷ್ಮಿಣೀ
ರಕ್ಷಿಸು ಮಗನ ಅಪೇಕ್ಷವ ಪೂರೈಸಿ ಪ

ಬರುವಂಥ ಕಂಟಕ ಸಕಲಪೂರ್ಣ
ಕರುಣವಿಟ್ಟು ಮಾಡು ಸಫಲ ತ್ರಾಣಿ
ಕರುಣದಿ ಬಡತನವಖಿಲ ಜಾಣೆ
ಪರಿಹರಿಸಿ ಕೊಡು ಎನಗೆ ಸುಫಲನ ಆಹ
ಮೊರೆಯಿಟ್ಟು ಬೇಡುವೆ ಪರಮಪಾವನೆ ಎನ್ನ
ಇರವ ತೀರಿಸು ತಾಯಿ ಸರುವ ಸಿದ್ಧಾಂತಳೆ ೧

ಮನುಮುನಿಗಳಿಗಾದಿ ಒಲುಮೆ ನೀನು
ಘನ ಸಿದ್ಧಿನಿತ್ತು ಸದ್ಧರ್ಮಿ ಜಾಣ
ರೆನಿಸಿದಿ ದಯದಿ ಸುಪ್ರೇಮಿ ಮಾಣ
ದನುಪಮಮತಿ ನಿಜಮಹಿಮೆ ಆಹ

ವನರುಹ ಬ್ರಹ್ಮಾಂಡ ಘನ ಘನ ಎನುವಂಥ
ಅನುಪಮಪದದೆನ್ನ ಕನಿಕರದಿಂ ಕಾಯೆ ೨

ಸರುವ ಸಿದ್ಧಿಯ ನೀಡಿ ಕರುಣಿ ಎನ್ನ
ಸರುವ ಶುದ್ಧವೆನಿಸೆ ಜನನೀ ಪೂರ್ಣೆ
ಸರ್ವಜ್ಞೆ ಪಾಲಿಸೆ ನಿಪುಣೆ ವಾಣಿ
ಸರ್ವಮಂಗಲಿ ಸುಪ್ರವೀಣೆ ಆಹ
ಸರ್ವಶಕ್ತ ಜಗದಾರ್ಯ ಶ್ರೀರಾಮನ
ಭಾರ್ಯೆ ಸಕಲ ಐಶ್ವರ್ಯದಿಂ ಪೊರೆಯೆನ್ನ ೩

೧೫೭

ರೌದ್ರಿ ಭದ್ರಿ ಮಹಕ್ಷುದ್ರ ಛಿದ್ರಿ ಹಿ
ಮಾದ್ರಿಯುದ್ಭವಿಗೆ ನಮೋ ನಮೋ ಪ

ರುದ್ರರೂಪೆ ದಾರಿದ್ರ್ಯಮರ್ದನಿ
ರುದ್ರನರ್ಧಾಂಗಿಗೆ ನಮೋ ನಮೋ ಅ.ಪ

ನಿಗಮಾತೀತೆ ಮಹದಾಗಮನುತೆ ತ್ರೈ
ಜಗದ ಮಾತೆಗೆ ನಮೋ ನಮೋ
ಸುಗುಣಸಂತಜನರಘನಾಶಿನಿ ಸುಖ
ಸ್ವರ್ಗಾಧಿಕಾರಿಗೆ ನಮೋ ನಮೋ ೧

ಮೃಡಮೃತ್ಯುಂಜನನೆಡದೊಡೆಯೊಳು
ಕಡುಸಡಗರವಾಸಿಗೆ ನಮೋ ನಮೋ
ದೃಢತರ ಭಕ್ತರ ದೃಢದ್ವಾಸಿನಿ ಜಗ
ದೊಡೆಯ ಮೃಡಾಣಿಗೆ ನಮೋ ನಮೋ ೨

ಕಮಲೆ ಕಾತ್ಯಾಯಿನಿ ಉಮೆ ಶಿವೆ ಸಾವಿತ್ರಿ
ಕಮಲನೇತ್ರೆಗೆ ನಮೋ ನಮೋ
ಸುಮನ ಸೌಭಾಗ್ಯ ಶಮೆ ದಮೆ ದಯಾನ್ವಿತೆ
ವಿಮಲ ಚರಿತ್ರೆಗೆ ನಮೋ ನಮೋ ೩

ಭಂಡದನುಜಕುಲ ರುಂಡ ಚೆಂಡಾಡಿದ
ಮಂಡ ಉದ್ದಂಡೆಗೆ ನಮೋ ನಮೋ
ಖಂಡ ಕಿತ್ತು ಖಳರ್‍ದಿಂಡು ಭೂತಕಿತ್ತ
ಚಂಡಿ ಚಾಮುಂಡಿಗೆ ನಮೋ ನಮೋ ೪

ರಕ್ತಬೀಜರೆಂಬ ದೈತ್ಯರ ಮದ ಮುರಿ
ದೊತ್ತಿದ ವೀರೆಗೆ ನಮೋ ನಮೋ
ಮತ್ತೆ ಶುಂಭರ ಶಿರ ಮುತ್ತಿ ಕತ್ತಿರಿಸಿದ
ಶಕ್ತಿ ಶಾಂಭವಿಗೆ ನಮೋ ನಮೋ ೫

ಓಂಕಾರರೂಪಿಣಿ ಹ್ರೀಂಕಾರಿ ಕಲ್ಯಾಣಿ
ಶಂಕರಿ ಶರ್ವಾಣಿಗೆ ನಮೋ ನಮೋ ಮ
ಹಂಕಾಳಿ ನತಸುಖಂಕರಿ ಪಾರ್ವತಿ
ಶಂಕರನರಸಿಗೆ ನಮೋ ನಮೋ ೬

ಶೌರಿ ಔದರಿಯ ಶಾರದೆ ಶ್ರೀಕರಿ
ಶೂರ ಪರಾಂಬೆಗೆ ನಮೋ ನಮೋ
ಪಾರಾವಾರ ದಯೆಕಾರಿ ನಿರಾಮಯೆ
ಧೀರ ಚಿದ್ರೂಪೆಗೆ ನಮೋ ನಮೋ ೭

ಉಗ್ರರೂಪಿ ಭವನಿಗ್ರಹ ದುಷ್ಟ ಸ
ಮಗ್ರ ಹರಿಣಿಗೆ ನಮೋ ನಮೋ
ಅಗ್ರಭಕ್ತರಿಷ್ಟ ಶೀಘ್ರ ಕೊಡುವ ಜೈ
ದುರ್ಗಾದೇವಿಗೆ ನಮೋ ನಮೋ ೮

ಹೈಮಾವತಿಯೆ ನಿರ್ಮಾಯೆ ಮೂರುತಿ
ಕೋಮಲ ಹೃದಯೆಗೆ ನಮೋ ನಮೋ
ಭೀಮಪರಾಕ್ರಮಿ ರಾಮದಾಸಜನ
ಪ್ರೇಮಪೂರ್ಣೆಗೆ ನಮೋ ನಮೋ ೯

೧೫೮

ವರಲಕುಮಿ ಕರುಣಿಸೌ ಕರುಣಾಕರಳೆ ಎನ್ನೊಳು ಪ

ಮರೆಹೊಕ್ಕ ದಾಸರ ದಾರಿದ್ರ್ಯ ಖಂಡಿಸು
ಪರಮಪಾವನೆ ನಿನ್ನನರಸಿ ಬೇಡುವೆನವ್ವ ೧

ಗರುವಕ್ಕೆ ಬಾರದ ಸಿರಿಯ ಕರುಣಿಸಿ ಮತ್ತೆ
ಹರಿಸ್ಮರಣೆ ಸೌಭಾಗ್ಯ ವರ ಪಾಲಿಸೆನ್ನವ್ವ ೨

ಕ್ಷೇಮ ಪಾಲಿಸು ತಾಯಿ ಕಾಮಿತ ಜನ ಮಹ
ಪ್ರೇಮಮಂದಿರೆ ಶ್ರೀರಾಮನರ್ಧಾಂಗಿಯೆ ೩

೧೫೯

ವರವ ಕರುಣಿಸು ಕರುಣಿ ಸರಸ್ವತಿಯೆ
ಜಗದಾದಿಮಾತೆಯೆ ಪ

ಮೊರೆಯ ಕೇಳಮ್ಮ ಪರಮ ಪಾವನೆಯೆ
ಕರುಣ ಹಸ್ತವ ಶಿರದಿ ಇಡು ದಯೆ
ಭರಿತೆ ಜಗನ್ಮಯೆ ಅ.ಪ

ಕಮಲಜಾತನ ಪ್ರೇಮ ಸುಂದರಿಯೆ
ಅಮರ ವಿನುತೆಯೆ
ಕಮಲನೇತ್ರೆ ಸಾವಿತ್ರಿ ಶಾರದೆಯೆ
ವಿಮಲಚರಿತಳೆ ದಮೆ ದಯಾನ್ವಿತೆಯು
ಶಮೆ ಶಾಂತಿನಿಲಯೆ
ಕುಮುದಬಾಂಧವಕೋಟಿಪ್ರಭಾಮಯೆ ೧

ವರ ಸುವಿದ್ಯ ಸಂಗೀತ ಶರ್ವಾಣಿ
ಪರಮಕಲ್ಯಾಣಿ
ಶರಣ ಜನಪ್ರಿಯೆ ವೀಣಾಧರಪಾಣಿ

ಸ್ಮರಿಪ ಜನ ಮನದಿಷ್ಟ ಪರಿಪೂರ್ಣ
ದುರಿತದೂರಿಣೆ
ಪೊರೆದೆ ಮನುಗಳ ಜ್ಞಾನದಿಂ ವಾಣಿ ೨

ಸಿರಿಯರಾಮನ ಹಿರಿಯ ಸೊಸೆ ನಿನ್ನ
ಚರಣದಡಿಲೆನ್ನ
ಶಿರವನಿಕ್ಕಿ ಬೇಡಿಕೊಂಬುವೆ ನಾ
ಮರೆವ ಹರಿಸಿ ಭರದಿಂ ಕೊಡು ಜ್ಞಾನ
ಸ್ಥಿರಮತಿಯ ಮುನ್ನ
ನಿರುತದ್ಪೊಗಳುವೆ ನಿಮ್ಮ ಚರಿತವನು ೩

೧೬೦

ವಿಪರೀತ ಮತಿವಂತೆ ಸರಸ್ವತಿಯೆ ನಿನ್ನ
ಕೃಪೆ ಬಯಸಿ ಭಜಿಸುವೆನು ಸಫಲನೆನಿಸೆನ್ನ ಪ

ಶುಂಭಾರಾವಣಗಿತ್ತ ಮತಿಯೆನಗೆ ಬೇಡಮ್ಮ
ಗುಂಭದಿಂ ವಿಭೀಷಣಗೆ ಕೊಟ್ಟ ಮತಿ ನೀಡು
ಕುಂಭಕರ್ಣನಿಗಿತ್ತ ಮತಿ ಕನಸಿನಲಿ ಬೇಡ
ಕುಂಭಿನಿಯೊಳ್ಹನುಮನಂಥ ಮತಿ ನೀಡಿ ಸಲಹು ೧

ಕೀಲ ಮಾರೀಚಗಿತ್ತ ಕೀಳಮತಿ ನೀಡದಿರು
ಪಾಲಿಸು ಜಟಾಯುನಂಥ ಶೀಲಮತಿಯೆನಗೆ
ವಾಲಿಗೆ ನೀನಿತ್ತ ಜಾಳುಮತಿ ನೀಡದೆ
ಸುಗ್ರೀವಗಿತ್ತ ಮೇಲುಮತಿ ನೀಡು ೨

ಮೂಡಣಾಧಿಪನಂತೆ ಕೇಡುಮತಿ ನೀಡದೆ
ರೂಢಿಯೊಳ್ಕರಿಯಂಥ ಗಾಢಮತಿ ನೀಡು
ನೀಡದಿರು ಶಶಿಯಂಥ ಖೋಡಿ ದುರ್ಮತಿಯನು
ನಾಡಿನಲಿ ಧ್ರುವನಂತೆ ಮಾಡುದಯ ಸುಮತಿ ೩

ದುರುಳ ಕೌರವನಂತೆ ಕಿರಿಮತಿಯ ಕೊಡಬೇಡ
ಪರಮ ಪಾಂಡವರಂಥ ಖರೆಮತಿಯ ನೀಡು
ಧರೆಯೊಳ್ಜಯದ್ರಥನಂತೆ ನರಿಮತಿಯ ಕೊಡದಿರು
ವರ ವಿದುರನಂತೆ ಬಲು ನಿರುತಮತಿ ನೀಡು ೪

ಮರುಳ ಮಾನವರಂತೆ ಮರವೆ ಮತಿ ಒಲ್ಲೆನೌ
ಹರಿಯ ನಿಜ ದಾಸರಂಥ ಸ್ಥಿರತಿಮತಿಯ ನೀಡು
ಹರಣ ಪೋದರು ಬಿಡದೆ ವರದ ಶ್ರೀರಾಮನಡಿ
ಅರಿವಿಟ್ಟು ಭಜಿಸುವಪಾರಮತಿ ನೀಡು ೫

೧೬೧

ಶೈಲಜಾವರ ಕಾಲಭೈರವ ಕೈಲಾಸಾಧಿಪ ಭಜಿಸುವೆ
ಪಾಲನುತ ಶ್ರೀಶೈಲಮಂದಿರ ಮಲ್ಲಿಕಾರ್ಜುನ ರಕ್ಷಿಸು ಪ

ಏಳುಕೊಳ್ಳಗಳೇಳು ನೆಲೆಗಳ ಮೇಲೆ ತೋರ್ಪ ಲಿಂಗನೆ
ಕಾಲಕಾಲದಿ ಬಾಲನೆಂದೆನ್ನ ಮಲ್ಲಿಕಾರ್ಜುನ ರಕ್ಷಿಸು ೧

ಶೀಲ ಭಕುತರ ಪಾಲಿಸಲು ಪಾತಾಳಗಂಗೆಯ ನಿರ್ಮಿಸಿ
ಪಾಲಿಸಿದಿ ಬುವಿ ಪಾಲಿಸಿ ವರ ಮಲ್ಲಿಕಾರ್ಜುನ ರಕ್ಷಿಸು ೨

ವೀರಪತಿವ್ರತೆಯಪಾರ ಭಕ್ತಿಗೆ ತೋರಿ ಜ್ಯೋತಿರ್ಲಿಂಗವ
ಸಾರಸೌಖ್ಯ ನೀಡುದ್ಧಾರ ಮಾಡಿದ ಮಲ್ಲಿಕಾರ್ಜುನ ರಕ್ಷಿಸು ೩

ಅಂಗಜಹರ ಗಂಗಾಧರ ಗುರುಲಿಂಗಜಂಗಮಾತ್ಮಕ
ಭಂಗಿಸದೆ ಎನ್ನ ಹಿಂಗಿಸಿ ಭವ ಮಲ್ಲಿಕಾರ್ಜುನ ರಕ್ಷಿಸು ೪

ಕಾಲಕಾಲ ಕಾಲಕೇಶ್ವರ ಶೂಲಪಾಣಿಯೆ ನಂಬಿದೆ
ಕಾಲನ ಮಹದಾಳಿ ಗೆಲಿಸೆನ್ನ ಮಲ್ಲಿಕಾರ್ಜುನ ರಕ್ಷಿಸು ೫

ಕಳೆದೆ ದಿನಗಳ ಇಳೆಯ ಸುಖಮೆಚ್ಚಿ ತಿಳಿಯದೆ ತವಮಹಿಮೆಯ
ಒಲಿದು ಕ್ಷಮಿಸೆನ್ನ ಬಾಲನೆಂದೆತ್ತಿ ಮಲ್ಲಿಕಾರ್ಜುನ ರಕ್ಷಿಸು ೬

ಅಷ್ಟವರ್ಣ ವಿಶಿಷ್ಟಭಕ್ತಿಯ ಕೊಟ್ಟು ಕುರಣಾದೃಷ್ಟಿಯಿಂ
ಶಿಷ್ಟ ಸಂಗದೆನ್ನಿಟ್ಟು ಅನುದಿನ ಮಲ್ಲಿಕಾರ್ಜುನ ರಕ್ಷಿಸು ೭

ದುಷ್ಟಭವಕಿನ್ನು ಹುಟ್ಟಿಬರುವಂಥ ಕೆಟ್ಟ ಬವಣೆಯ ತಪ್ಪಿಸು
ಇಷ್ಟದಾಯಕ ಮುಟ್ಟಿಪೂಜಿಪೆ ಮಲ್ಲಿಕಾರ್ಜುನ ರಕ್ಷಿಸು ೮

ಪರಕೆ ಪರತರ ಪರಮಪ್ರಕಾಶ ವರದ ಶ್ರೀರಾಮಮಿತ್ರನೆ
ಮರೆಯ ಬಿದ್ದೆನು ಕರುಣಿಸಿ ಮುಕ್ತಿ ಮಲ್ಲಿಕಾರ್ಜುನ ರಕ್ಷಿಸು ೯

೧೬೨

ಸರಿಯೇನು ನಿನಗಿದು ಸರಸಿಜನಯನನೆ
ಚರಣ ಭಜಿಪರೊಳು ಕರುಣಿಸದಿರುವಿ ಪ

ದೀನಜನರ ಬಂಧು ನೀನೆ ನಿರ್ದಯನಾದರಿ
ನ್ನೇನು ಗತಿಯು ಎನಗೆ ಪ್ರಾಣಾಂತರ್ಗತನೆ
ಧ್ಯಾನಿಪ ಭಕ್ತರ ಮಾನ ನೀ ಕಾಯದಿರೆ
ಹೀನ ನಿನಗಲ್ಲೇನ್ಯೆ ಗಾನವಿಲೋಲ ೧

ಇಂದಿರೇಶಾನಾಥಬಂಧುವೇ ನೀ ದಯಾ
ಸಿಂಧು ನೀ ಸಲಹೆಂದು ಬಂದು ಮರೆಯ ಬಿದ್ದೆ
ಬಂದ ಸಂಕಟದೊಳಗಿಂದ ಸಲಹದಿರೆ
ಕುಂದು ನಿನಗಲ್ಲೇನ್ಯೆ ಮಂದರನಿಲಯ ೨

ನಂಬಿದ ಭಕ್ತರ ಇಂಬುದಾಯಕನು ನೀ
ನೆಂಬ ಬಿರುದ್ಹೊತ್ತಿರುವಿ ಅಂಬುಜನಯನ
ನಂಬಿದೆನು ನಿನ್ನ ಪಾದಾಂಬುಜ ದೃಢವಾಗಿ
ಬೆಂಬಲಿ (ಪೊ) ರೆಯೆನ್ನ ಸಂಭ್ರಮದಿ ಶ್ರೀರಾಮ ೩

೧೬೩

ಸರಸ್ವತಿಮಾತೆ ಪರತರಚರಿತೆ
ವರ ಪುಣ್ಯನಾಮಳೆ ಪ

ಕರುಣಿಸಿವರವ ಕರುಣಾಕರಳೆ
ಕರುಣದಿ ಕಾಯೆ ಅ.ಪ

ಪದುಮಾಸನನ ಸುವದನ ನಿವಾಸೇ
ತ್ರಿಭುವನಾರ್ಚಿತೆ
ಸತತವಾಗಿ ಸುದಯೆ ಹೃದಯೆ ಸ್ಥಿರ
ಸದುಮತಿ ಪಾಲಿಸೆ ಪರಮದಯದಿ ಪದುಳಂಗೆ ದಯದಿ ೧

ವೀಣಾಧರಿ ಸುವಾಣಿ ಕಲ್ಯಾಣಿ ಮಾನಿನಿ
ಬ್ರಹ್ಮನ ಜನನಿಯೆ
ಜಗದಜಾಣೆ ಸುತ್ರಾಣೆ ನಿಜ
ಜ್ಞಾನಾಧಿಕಾರಿ ಜ್ಞಾನವ ನೀಡೆ ಮಾಣದೆ ಎನಗೆ ೨

ಪಾಮರತನ ನಿವಾರಣೆಗೊಳಿಸೆ
ಪ್ರೇಮದೆನಗೆ ಸುಜಾಣೆ
ನುಡಿಗಲಿಸಿ ವಿಮಲೆ ಅಮಲಸುಖ
ಗಮಕದಿ ನೀಡ್ವೆ ಭುವಿಜಪತಿ ಶ್ರೀರಾಮನ ಸೊಸೆಯೆ ೩

೧೬೪

ಹನುಮ ಮಧ್ವಾಧಿಪತೇ ನಮೋ ನಮೋ ಪ

ಹನುಮ ಮಧ್ವಾಧಿಪತೇ ಘನಶ್ರೇ
ಷ್ಠನುಪಮಮುನಿವರನೆನಿಸಿದ ಅ.ಪ

ಉದ್ಧರಿಸೆಂದು ಮರೆಬಿದ್ದ ಭಕ್ತನಂ
ಮುದ್ದಿಟ್ಟೆತ್ತೆ ನಿರ್ಧಾರದಭಯವಿತ್ತು
ಪದ್ಮನಾಭ ನಿಂದುದ್ಧರಿಸಿದಿ ಪರಿ
ಶುದ್ಧಮೂರುತಿ ಪ್ರಸಿದ್ಧನೆನಿಸಿದಂಥ ೧

ಶಕ್ತಿಯಿತ್ತ ಮಹ ಮೌಕ್ತಿಕ ಮಾಲೆಯ
ಸುತ್ತಿ ಶಿಲೆಯ ಮೇಲೆತ್ತಿ ಹೊಡೆದು ಘನ

ಭಕ್ತಿತೋರಿ ಹರಿಚಿತ್ತ ತೃಪ್ತಿಬಡಿಸ
ತ್ಯುತ್ತಮ ನಿಜಭೃತ್ಯನೆನಿಸಿದಂಥ ೨

ಸುದತಿ ಸೀತೆ ತನ್ನ ಸದಯನ ನೆನೆಯಲು
ಎದೆಸೀಳಿ ತೋರಿಸಿ ಸದಮಲನಂಘ್ರಿಯ
ಸದಮಲಾಂಗಿ ವ್ರತ ಮುದದಿ ತೀರಿಸಿ ನಿಜ
ಸದಮಲ ಭಕ್ತ ನೀನಹುದುಹುದೆನಿಸಿದ ೩

ಶ್ರೀಕರನಪ್ಪಣೆ ಪಡೆದು ಅಸಮಬಲ
ದೇಕ ಕಾಲದ್ವಾರಿ ಹುಡುಕಿ ಕಾಶಿಯಿಂ
ಏಕಾಗ್ರಚಿತ್ತದಿ ತಂದು ಲಿಂಗ ಮೂ
ಲೋಕ ಮೋಹನನಿಂ ಲೋಕಪೂಜ್ಯೆನಿಸಿದ ೪

ಮೀರಿದ ಗರುಡನಪಾರ ಗರುವಮಂ
ಸೂರಗೈದು ದ್ವಾಪರ ಯುಗದಿಅ
ಪಾರ ಮಹಿಮ ಶ್ರೀ ಧೀರ ಶ್ರೀರಾಮನ
ಚಾರುಚರಣ ಕಂಡು ನಿರುತನೆನಿಸಿದಂಥ ೫

೧೬೫

ಹನುಮ ಸದ್ಭಕ್ತರ ಪ್ರೇಮ ನೆನೆವರ
ಮನದಿಷ್ಟ ಕನಿಕರದಿಂ ಕೊಡುವ ಪ

ಕುಂತಿಗರ್ಭಜ ಬಲವಂತನೆನಿಸಿದ್ಯೊ ಭೀಮ
ಪಂಥದಿಂ ಕರುಪನ ಸ್ವಂತು ಜೈಸಿದ್ಯೊ ವೀರ ೧

ಮಧ್ವಕುಲದಿ ಜನಿಸಿ ಮಧ್ವಮುನಿಯೆನಿಸಿದಿಯೊ ತಿದ್ದಿ
ಮಧ್ವಾಂತಗ್ರಂಥ ಸಿದ್ಧಾಂತಪಡಿಸಿದ್ಯೊ ೨

ಅಂಜನ್ಯುದರದಿ ಬಂದು ಭಂಜಿಸಿ ಲಂಕೆಯ
ಕಂಜಾಕ್ಷಿಯುಳ್ಳೃತ್ತಾಂತ ಕಂಜನಾಭನಿಗಿತ್ಯೊ ೩

ಮಂಗಳಾಂಗನೆ ರಣರಂಗಮಧ್ಯದಿ ನೀ
ಪಿಂಗದಸುರರ ಸದೆದು ಭಂಗಪಡಿಸಿದ್ಯೊ ಖಳರ ೪

ಸೀತಾದೇವಿಯ ತಂದು ನಾಥ ಶ್ರೀರಾಮನಿಗಿತ್ತ ವಿ
ಖ್ಯಾತ ಮಾರುತಿ ಎನ್ನ ಪ್ರೀತಿಲಿ ಸಲಹಯ್ಯ ೫

೧೬೬

ಹನುಮಂತ ನೀನೆಂಥ ಬಲವಂತ
ಘನತರಕೈಲಾಸವನು ಬಾಲದೆತ್ತಿದೆ ಪ

ಹದಿನಾಲ್ಕು ಲೋಕಂಗಳುದರದಿಟ್ಟವನನ್ನು
ಸದಮಲಭಕ್ತಿಯಿಂ ಮುದದ್ಹೊತ್ತು ಹಾರಿದಿ ೧

ಅಪರಿಮಿತ ಭುಜಬಲ ಕಪಿವರರೆಲ್ಲ ಬಿಟ್ಟು
ಕೃಪಾಕರನು ನಿನಗೆ ಗುಪಿತದುಂಗುರವಿತ್ತು ೨

ಸಾಗರ ಹಾರಲು ಆಗದೆ ಸರ್ವರು
ನೀಗದ್ಯೋಚನೆ ಗೈಯೆ ಬೇಗ ಸಾಗರ ಜಿಗಿದಿ ೩

ಲಂಕೆಯೆಲ್ಲವು ಒಂದೇ ಲಂಕಿಣ್ಯೋರ್ವಳು ಒಂದೇ
ಮಂಕುಹೆಣ್ಣೆಂದು ನೀ ಶಂಕೆಯಿಂ ಸದೆದೆಯೊ ೪

ದುರುಳನ ಪುರ ಪೊಕ್ಕು ಸರುವ ಭವನಗಳ
ಪರಿಪರಿ ಶೋಧಿಸಿದಿ ಪರಮಪಾವನೆಯಳ ೫

ಲೋಕಮಾತೆಯನು ಅಶೋಕವನದಿ ಕಂಡು
ಲೋಕವೀರನ ಅಂಗುಲೀಕವನಿತ್ತಯ್ಯ ೬

ಕ್ಷಿತಿಜೆ ದರುಶನದಿಂದ ಮತಿವಂತನೆನಿಸಿ ನೀ
ಕೃತಕೃತ್ಯನಾದಯ್ಯಾ ಸತತ ಕ್ಷಿತಿಯ ಮೇಲೆ ೭

ಬಣಗು ರಕ್ಕಸಕುಲ ಕ್ಷಣದಿ ಅಳಿದು ನೀನು
ವನವ ನಾಶಗೈದು ದಿನಮಣಿಯಂತೊಪ್ಪುವಿ ೮

ಶೂರ ಅಕ್ಷಯಕುಮಾರಾದಿಗಳ ಮಹ
ಮೇರೆದಪ್ಪಿದಬಲ ಸೂರೆಗೈದಾಕ್ಷಣ ೯

ಮಂಕುದಶಕಂಠನ ಬಿಂಕವ ಮುರಿದಿ ಅ
ಸಂಖ್ಯ ವೀರರ ಕೊಂದು ಲಂಕಾದಹನ ಗೈದಿ ೧೦

ಅತಿಭರದಿಂ ಬಂದು ಕ್ಷಿತಿಜಪತಿ ಶ್ರೀರಾಮ
ಗತಿ ಶುಭದ್ವಾಯ ಶ್ರುತಪಡಿಸಿ ಹಿತ ಪಡೆದ್ಯೋ ೧೧

IV. ಯತಿಗಳು, ದಾಸರು

೧೬೭

ಆಸೆಗಾರ ನಾನು ದಾಸಯ್ಯ ನಿನ್ನ ಧ್ಯಾ
ನಿಸಿ ಬಂದೆನು ದಾಸಯ್ಯ ಪ

ದೋಷದೂರನೆ ಎನ್ನ ಆಸೆಯ ತೀರಿಸಿ
ಪೋಷಿಸು ಬೇಗನೆ ದಾಸಯ್ಯ ಅ.ಪ

ಬಡತನಗಳು ಎನ್ನ ದಾಸಯ್ಯ ಇನ್ನು
ಕಡೆತನಕಳಿಯಲೋ ದಾಸಯ್ಯ
ಗಡಕಡಿ ಜಡಭವದೆಡರು ತೊಡರುಗಳು
ಕೆಡದಪದವಿ ನೀಡು ದಾಸಯ್ಯ ೧

ನುಡಿಯಂತೆ ನಡೆಕೊಡು ದಾಸಯ್ಯೆನ್ನ
ಒಡಲ ಜಡರುತೊಳಿ ದಾಸಯ್ಯ
ಕಡಿದು ಹಾಕಲು ಎನ್ನ ಪಿಡಿದು ನಿನ್ನಡಿಭಕ್ತಿ
ಬಿಡದ ಮನವು ಕೊಡು ದಾಸಯ್ಯ ೨

ಸುಂದರ ಶ್ರೀರಾಮ ದಾಸಯ್ಯ ಎನ್ನ
ತಂದೆ ತಾಯಿ ನೀನೆ ದಾಸಯ್ಯ
ಕುಂದುವ ಜಗದೊಳು ಬಂಧನಪಡಿಸದೆ
ಕುಂದದ ಸುಖ ನೀಡು ದಾಸಯ್ಯ ೩

೧೬೮

ಎಂದು ಕಾಂಬುವೆ ಮಾಧವತೀರ್ಥರ
ಸುಂದರ ಮಂದಿರ ಪ

ಚಾರುಚಿತ್ರ ಕಲಶಕನ್ನಡಿ
ಆರೊಂದು ನೆಲೆಗೋಪುರವ ಸವಿ
ಸ್ತಾರಮಾಗಿ ತೋರುವ ಮಹಾ
ದ್ವಾರದಮುಂದೆ ಬಿದ್ದು ನಮಿಸಿ ೧

ತೊಲೆತುಂಡು ಕಂಭ ಬೋದುಗೆ
ಶಿಲೆಯಿಂದ ನಿರ್ಮಿತವಾಗಿ
ಹೊಳೆವ ಮಂಟಪ ರಂಗು ಮಧ್ಯ
ದೊಳಗೆಚೆಲುವ ವೃಂದಾವನವ ೨

ಮೂಲ ಪ್ರತಿಮೆ ಸಾಲು ಸಾಲು ವಿ
ಶಾಲ ಜ್ಯೋತಿ ದಿವ್ಯಪ್ರಕಾಶ
ಮೂಲಪೀಠದ ಪವಿತ್ರಶಾಲೆ
ಕಾಲತ್ರಯದಿ ವೇದಘೋಷ ೩

ಧಾತ್ರಿಜನರು ಬಂದು ಕೂಡಿ
ಯಾತ್ರೆಗೈದು ಜನುಮ ನಿತ್ಯ
ಸಾರ್ಥಮಾಡಿಕೊಂಡು ಸತತ
ಅರ್ಥಿಯಿಂದ ಪೋಪ ಸಮಯ ೪

ಧರೆಯೊಳಧಿಕ ಬುದ್ಧಿನ್ನಿಪುರದಿ
ಮೆರೆವ ಶ್ರೀಗುರು ಮಾಧವೇಂದ್ರ
ವರಮಂದಿರದಮಿತ ವೈಭವ
ಕರುಣಿ ಶ್ರೀರಾಮ ನಿಂತು ನಡೆಸುವ ೫

೧೬೯

ಏನೆಂದು ಪೇಳಲಿ ಹರಿಶರಣರ ನಿಜ
ಆನಂದ ಸೌಭಾಗ್ಯದಲಂಕಾರ ಪ

ಆನಂದ ಪರಮ ಆನಂದ ಹರಿಧ್ಯಾ
ನಾನಂದ ಸಂಪದ ಶೃಂಗಾರ ಅ.ಪ

ಮಾಧವನ ನಾಮಮಕುಟಿಟ್ಟಿಹ್ಯರು ಮಧು
ಸೂದನನ ಭಕ್ತಿ ಕವಚ ತೊಟ್ಟಿಹ್ಯರು
ಯಾದವನ ಜಪಮಾಲ್ಯಾಕಿಹ್ಯರು ಯ
ಶೋದ ಬಾಲನ ದಯ ಪಡೆದಿಹ್ಯರು ೧

ಶ್ರೀಶನ ಧ್ಯಾಸಶಸ್ತ್ರ ಧರಿಸಿಹ್ಯರು ದೋಷ
ರಾಶಿಪರ್ವತ ತರಿದೊಟ್ಟಿಹ್ಯರು
ಕೇಶವನ ದಾಸತ್ವ ವಹಿಸಿಹ್ಯರು ಯಮ
ಪಾಶ ಜೈಸಿ ನಿರ್ಭೀತಾಗಿಹ್ಯರು ೨

ಹರಿಸ್ಮರಣೆಂಬ ಸರಕು ತುಂಬಿಹ್ಯರು ನರ
ಹರಿ ಪ್ರೇಮ ನೌಕೆ ಏರಿಹ್ಯರು
ವರದ ಶ್ರೀರಾಮಮಂತ್ರ ಪಠಿಸುವರು ಭವ
ಶರಧಿ ಸುಲಭದಿಂದ ದಾಂಟುವರು ೩

೧೭೦

ದಯಮಾಡು ಬಡವಗೆ ಮಹರಾಯ
ದಯಾಕರ ವಿಜಯವಿಠಲರಾಯ ಪ

ದೃಢದಿಂದಲಿ ನಂಬಿ ಬೇಡುವೆನು
ಕೊಡುಗಡ ನಿನ್ನಡಿಭಕ್ತಿಯನು
ಕಡುಪೀಡಿಪ ಈ ಜಡಬಡತನದಿಂ
ಕಡೆಹಾಯ್ಸೆನ್ನನು ಕಡುದಯದಿಂ ಪೊರೆ ೧

ಸೆರೆಗೊಡ್ಡಿ ಬೇಡುವೆ ಮಾಧವ
ಕರುಣದಿ ಕರುಣಿಸು ವರವ
ತ್ವರಿತದಿ ಎನ್ನ ಪರಿಭವ ದು:ಖವ
ಪರಿಹರಿಸಿ ನಿಮ್ಮ ಸ್ಮರಣೆಯೊಳಿರಿಸೆನ್ನ ೨

ಸತ್ಯಭಾಮೆರಮಾಕಾಂತನೆ
ಭಕ್ತರ ಕಕ್ಕುಲಾತಿದೇವನೆ
ನಿತ್ಯನಿರಂಜನ ಮುಕ್ತಿದಾಯಕ
ಉತ್ತಮಮತಿಕೊಡು ನಿತ್ಯಾತ್ಮ ಶ್ರೀರಾಮ ೩

೧೭೧

ದಾಸರ ಶಿಶು ನಾನು ಶ್ರೀಹರಿ
ದಾಸರು ಶಿಶು ನಾನು ಪ

ಹೇಸಿ ಪ್ರಪಂಚದ ವಾಸನಳಿದು ಜಗ
ದೀಶನ ಶ್ರೀಪಾದದಾಸಾನುದಾಸರ ಅ.ಪ

ಮರವೆ ಮಾಯ ತರಿದು ಲೋಕ
ದರಿವಿನೊಳಗೆ ಬೆರೆದು
ಪರಿಪರಿಯಿಂದಲಿ ನರಹರಿ ಚರಣವ
ಸ್ಮರಣೆಯೊಳಿಟ್ಟು ಬಲು ಹಿರಿಹಿರಿ ಹಿಗ್ಗುವ ೧

ಮೋಸಕ್ಲೇಶವನಳಿದು ಭವದ
ಆಶಾಪಾಶತುಳಿದು
ಸೋಸಿಲಿಂದ ಅನುಮೇಷ ಬಿಡದೆ ಹರಿ
ಸಾಸಿರ ನಾಮಮಂ ಬೇಸರದ್ಹೊಗಳುವ ೨

ಸತ್ಯ ಸನ್ಮಾರ್ಗಬಿಡದೆ ಮನವಂ
ಎತ್ತ ಕದಲಗೊಡದೆ
ಚಿತ್ತ ಶುದ್ಧಿಯಿಂದ ನಿತ್ಯ ನಿರ್ಮಲಾತ್ಮ
ಕರ್ತು ಶ್ರೀರಾಮನ ಅರ್ತು ಭಜಿಸುವಂಥ ೩

೧೭೨

ದಾಸರ ಸಖ ಮಾಡಂದೆ ಎನ್ನ
ಧ್ಯಾಸದಿರಗಲದೆ ಶ್ರೀಹರಿ ತಂದೆ ಪ

ಕನಕರಾಯನು ನಿಜದಾಸ ನಿನ್ನ
ಘನತರ ಪ್ರಸನ್ನತೆ ಪಡೆದನುಮೇಷ
ಅನುದಿನ ನಿಮ್ಮಯ ಘನಮಹಿಮೆಯನು ತೋರಿ
ಮುನಿವ್ಯಾಸರಾಯರ ಮನವ ತಣಿಸಿದಂಥ ೧

ಘನ ಸತ್ಯ ಕಬೀರದಾಸ ತನ್ನ
ತನುಮನಧನವನ್ನು ನಿನಗರ್ಪಿಸೀತ
ವನಿತೆಯನೊತ್ತಿಟ್ಟು ತನುಜಾತನನು ಕೊಂದು
ಉಣಿಸಿ ಸಂತರಿಂ ಸುತನ ಪ್ರಾಣವ ಪಡೆದಂಥ ೨

ವಾಸನಳಿದು ಪುರಂದಾಸ ತನ್ನ
ನಾಶಬುದ್ಧಿಗೆ ನಾಚಿ ನೀಗಿ ಮನದಾಸೆ
ಸೋಸಿಲಿಂ ತವಪಾದಧ್ಯಾಸ ಬಲಿಸಿ ಜಗದೀಶ
ಹೇಸದೆ ನಿಮ್ಮನು ಗಿಂಡಿಲ್ಹೊಡೆದಂಥ ೩

ವರನಾಮದೇವ ನಿಜದಾಸ ತನ್ನ
ಪರಮಸಂತರಿಗೆಲ್ಲ ಪಾಲಿಸಿ ಭಾಷ
ಸಮು ಗೌಪ್ಯದಿಂ ಪಂಪಾಪುರಿಗೈದಿರಲು ನಿನ್ನ
ತಿರುಗಿ ಕರೆದೊಯ್ದು ಇರವ ಪೂರೈಸಿದಂಥ ೪

ಬಲ್ಲಿದ ತುಕಾರಾಮದಾಸ ಬಲು
ಕ್ಷುಲ್ಲಕರುಪಟಳ ಸಹಿಸಿ ಮನದಕ್ಲೇಶ
ಎಲ್ಲವ ನೀಗಿ ಹರಿ ಪುಲ್ಲನಾಭನ ಪಾದ
ದಲ್ಲೆ ಮನ ನಿಲ್ಲಿಸಿ ಉಲ್ಲಾಸದಿರುವಂಥ ೫

ಬಗೆಯ ತಿಳಿದು ಜಗನ್ನಾಥ ನಿಮ್ಮ
ಸುಗುಣದರಿದು ವ್ಯಾಧಿ ಕಳೆದುಕೊಂಡು ಪ್ರಮಥ

ನಿಗಮಗೋಚರ ನಿನ್ನ ಬಗೆಬಗೆ ಪೊಗಳುತ
ಜಗದಮಾಯವ ಗೆಲಿದು ಸೊಗಸಿನಿಂ ನಲಿವಂಥ ೬

ಉದಧಿಜಿಗಿದ ಹನುಮಂತ ಮಹ
ಪದುಮಾಕ್ಷಿಯಳ ಕಂಡು ನಮಿಸಿದ ಬಲವಂತ
ಸದಮಲಾಂಗಿಗೆ ತನ್ನ ಹೃದಯಸೀಳಿದ್ಧಟದಿಂ
ಮುದ ಶ್ರೀರಾಮನ ಪಾದ ತೋರಿಸಿದಂಥ ೭

೧೭೩

ನಿನ್ನ ದಯಾ ದೃಷ್ಟಿಯು ಎನ್ನ ಮೇಲಿರಬೇಕು
ಪನ್ನಂಗಶಯನ ಭಕ್ತ ವಿಜಯವಿಠಲಯ್ಯ ಪ

ಮುನ್ನ ಭಕ್ತನಿಗೊಲಿದು ಭಿನ್ನವಿಲ್ಲದೆ ಬಂದು
ಮಣ್ಣಿನ್ಹೆಂಟೆಯ ಮೇಲೆ ಇನ್ನು ನಿಂತುದನು
ಕಣ್ಣಿನಿಂದ ನಾ ಕಂಡು ಧನ್ಯನಾದೆನು ಜಗದಿ
ಇನ್ಯಾಕೆ ಭವದಂಜು ತನು ನಿನ್ನದಯ್ಯ ೧

ಹೆತ್ತಮಕ್ಕಳ ತೆರದಿ ಅತ್ಯಧಿಕ ಪ್ರೀತಿಯಿಂ
ಭಕ್ತರನು ಬಿಗಿದಪ್ಪಿ ಮುಕ್ತಿ ಸೋಪಾನ
ಹತ್ತಿಸಿದ ನಿನ್ನಡಿ ಭಕ್ತಿಯಿಂ ಕಂಡೆ
ಮತ್ತು ಮೃತ್ಯುವಿನ ಭೀತ್ಯಾಕೆ ಮನ ನಿನ್ನದಯ್ಯ ೨

ಕಡಲನಿಲಯನೆ ನಿನ್ನ ಅಡಿ ನಂಬಿ ಮರೆಹೊಕ್ಕೆ
ದೃಢಭಕುತಿ ನೀಡೆನ್ನ ನುಡಿಯೊಳಗೆ ನೆಲಸು
ಎಡರು ತೊಡರನು ಕಡಿದು ದೃಢಕರನು ಬಿಡದಾಳ್ವ
ಒಡೆಯ ಶ್ರೀರಾಮಯ್ಯ ಧನ ನಿನ್ನದಯ್ಯ ೩

೧೭೪

ನೋಡಿರೋ ನೋಡಿರೋ ನಾಡಿನೊಳಗೆ ಮಹ
ಗೂಢದಿ ಹೊಳೆಯುವ ಶ್ರೀಗಳ ಚರಣ ಪ

ಪಾಡಿ ಬೇಡಿ ಹುಡುಕಾಡಿ ಪಡೆಯಿರೋ ವರ
ಗಾಢ ಜ್ಞಾನದಿಗೂಡಿದ ಯತಿಗಳ ಅ.ಪ

ಮಾಧವತೀರ್ಥರ ಮತದೊಳುದಿಸಿ
ಬಾಧಕರೂಪಿನ ಭವಭಯಭೇದಿಸಿ
ವೇದಸುಸ್ವಾದವ ಬೋಧಿಸಿ ನಿಜದ
ಹಾದಿ ತೋರಿಪ ನಿಜ ಬೋಧ ಶ್ರೀಗುರುಗಳ ೧

ಭಕ್ತರ ಕೂಡಿಸಿ ಮತ್ತು ಮಮತೆಯನೆ
ಬಿತ್ತರಿಸುತ ನಿತ್ಯ ಸತ್ಯವ ಸಾಧಿಸಿ
ಚಿತ್ತನಿಲಿಸಿ ಪುರುಷೋತ್ತಮನೊಳು ಬಿಡ
ದತ್ಯಾನಂದಿಪ ಮುಕ್ತಿಗೆ ಮೂಲರ ೨

ಆಶಾಪಾಶ ಮಾಯಮೋಸವ ಗೆಲಿದು
ನಾಶ ಪ್ರಪಂಚದ ವಾಸನೆ ಅಳಿದು
ಶ್ರೀಶ ಶ್ರೀರಾಮನ ಲೀಲದಿ ಬಿಡದನು
ಮೇಷದಾಡುವ ಮಹ ಪಾವನಶೀಲರ ೩

೧೭೫

ಬಯಸಿ ಕರೆದರೆ ಬರುವರೇನಯ್ಯಾ ನರಹರಿಯ ದಾಸರು
ಬಯಸಿ ಕರೆದರೆ ಬರುವರೇನಯ್ಯಾ ಪ

ಬಯಸಿಕರೆದರೆ ಬರುವರೇನೋ
ಜಯಶ್ರೀ ಮುರಹರಿಯ ನಾಮ ಓದಿ
ಬಾಯಿಪಾಠಮಾಡಿ ಭವದ ಭಯವ
ಕಳೆದುಕೊಂಡ ಶೂರರು ಅ.ಪ

ತನುವು ಎಂಬ ಆಲಯವ ತೊಡೆದು
ಮಹ ವಿಷಯಲಂಪಟ
ಬಿನುಗು ತ್ರಿಗುಣೆಂಬ್ಹೇಸಿಕೆಯ ಬಳಿದು ಸುಸ್ಸಂಗಶ್ರವಣ
ಮನನದಿಂ ನಿಜಮೂಲ ಮರ್ಮರಿದು ಆಸನವ ಬಲಿದು

ಮನವುಯೆಂಬು ಲೇಖಣ್ಣಿಡಿದು ಘನಚಿತ್ತೆಂಬ
ಲೇಖ್ಯದಮೇಲೆ
ಚಿನುಮಯಾತ್ಮನ ನಾಮ ಬರೆದು ಘನಕೆ
ಘನ ಅನಂದದಿರುವರು ೧

ಆರು ದ್ವಯಗಜ ಇಕ್ಕಡಿಯ ಗೈದು ಬಿಡದ್ವಾರಿಬರುವ
ಆರು ಹುಲಿಗಳ ತಾರ ಸೀಳೊಗೆದು ಬಲುಘೋರಬಡಿಪ
ಆರುನಾಲ್ಕು ಶುನಕಗಳು ತುಳಿದು ಸತ್ವಥವ ಪಿಡಿದು
ಸಾರಾಸಾರ ಸುವಿಚಾರಪರರಾಗಿ ಮಾರನಯ್ಯನ –
ಪಾರಮಹಿಮೆಯ
ಬಾರಿಬಾರಿಗೆ ಪಠಣ ಮಾಡಿ ಸುಸಾರ ಅಮೃತ ಪೀರುವವರು ೨

ತಾಸಿನ ಜಗಮಾಯವೆಂದರಿದು ಇದು ಸತ್ಯವಲ್ಲೆಂದು
ಬೇಸರಿಲ್ಲದೆನುಭವದಿ ದಿನಗಳೆದು ಸುಚಿಂತದನುದಿನ
ದಾಸದಾಸರ ಸಾಕ್ಷಿಗಳ ತಿಳಿದು ನಿಜಧ್ಯಾಸದ್ಹುಡಿಕ್ಹಿಡಿದು
ನಾಶನಭವದ್ವಾಸನೆಯ ನೀಗಿ ಸಾಸಿರನಾಮದೊಡೆಯ ನಮ್ಮ
ಶ್ರೀಶ ಶ್ರೀರಾಮಚರಣಕಮಲದಾಸರಾಗಿ ಸಂತೋಷದಿರುವರು ೩

೧೭೬

ಬೇಡುವರೋ ಬೇಡುಣುತಿಹ್ಯರೋ
ಬೇಡಿ ಬೇಡದಂತೆ ನಾಡೊಳ್ಹರಿದಾಸರು ಪ

ಕೊಟ್ಟರೆ ಶ್ಲಾಘನೆ ಮಾಡರೊ ಕೊಡದಿದ್ದರೆ
ಸಿಟ್ಟಿಗೆ ಬಾರರೊ
ಕೊಟ್ಟಕೊಡವದರೆಲ್ಲ ಅಷ್ಟೆಯೆಂದೆನ್ನುತ
ಸೃಷ್ಟಿಗೀಶನ ಘಟ್ಟ ತಿಳಿದಿಹ್ಯರೂ ೧

ಸಂಚಿತದಿಂ ಜನ್ಮ ತಾಳಿಹ್ಯರೂ ವಿ
ರಂಚಿಪಿತಗೆ ಭಾರಹೊರಿಸಿಹ್ಯರೊ
ಹಂಚಿಕಿಯಿಂದ ನಿರ್ವಂಚಿತರಾಗಿ ಬಂದ
ಸಂಚಿತಾದಡಾಗಮ ಗೆಲಿಯುವರೊ ೨

ಕಾಮಿತಗಳೆಲ್ಲ ಕಡೆದಿಪ್ಪರು ಈ
ಭೂಮಿಸುಖಕೆ ಮನಮೋಹಿಸರೊ
ನೇಮದಿಂದ ಮಹ ಕ್ಷೇಮವಾರಿಧಿ
ಸ್ವಾಮಿ ಶ್ರೀರಾಮ ಪಾದಕ್ಹೊಂದಿಪ್ಪರೊ ೩

೧೭೭

ಮಾಧವ ಗುರುವರ ಬೋಧಿಸು ಸುಖಸಾರ
ಪಾದವ ಸ್ತುತಿಪೆನು ದಯವಾಗೊ ಸುಖಕರ ಪ

ನಶಿಸಿಪೋಗುವ ಈ ವಿಷಮಸಂಸಾರದ
ವಿಷಯದಾಸ್ಥರಿಸೆನಗೆ ಅಸಮಸುಖದ ಮಾರ್ಗ ೧

ಭ್ರಮಿಸದೆ ಅನುದಿನ ತ್ರಿಮಲಮೋಹಂಗಳ
ಕ್ರಮದಿ ಖಂಡ್ರಿಸಿ ಮಹ ವಿಮಲಪದವಿ ಮಾರ್ಗ ೨

ಮರವೆ ಮಾಯವ ತರಿದು ಅರಿವಿನಾಲಯದಿರಿಸಿ
ಪರಮ ಶ್ರೀರಾಮನ ಚರಣಕಮಲಭಕ್ತಿ ೩

೧೭೮

ಯತಿರಾಜ ಯತಿರಾಜ ಮಾಧವೇಂದ್ರ
ಗುರು ಸಾರ್ವಭೌಮ ಪ್ರಭು ಪ

ಧಾರುಣಿಯೊಳಗಪಾರವಾದ ವಿದ್ಯಾ
ವಾರಿಧಿಚಂದ್ರಮ ವೈರಾಗ್ಯಮೂರುತಿ ೧

ಶಿಷ್ಟಶಿರೋಮಣಿ ಕಟ್ಟಳೆಯಿಂದ ಬಲು
ದಿಟ್ಟತನದಿ ಯತಿಪಟ್ಟವೇರಿದನೀತ ೨

ಭೇದದಿಂದತಿಶಯ ವಾದಿಪ ಮಹದು
ರ್ವಾದಿಗಳನು ಗೆದ್ದು ನೀ ಸಾಧಿಸಿದಧಿಕಾರ ೩

ಅಧಮರ ಉಪಟಳಕೆದೆಪೊಡೆಯದೆ ನಿಜ
ಸದಮಲ ವೈಕುಂಠಪದವಿಗೆ ನಡೆದನು ೪

ಮಧ್ವಶಾಸ್ತ್ರ ಪ್ರಸಿದ್ಧ ಪದ್ಧತಿಗಳ
ಸಿದ್ಧಿಪಡೆದು ಪರಿಶುದ್ಧನೆನಿಸಿಕೊಂಡ ೫

ಗುರುವೆಂದೆನಿಸಿ ಭೂಸುರರನುದ್ಧರಿಸೀತ
ಸ್ಥಿರವಾಗಿ ನಿಂತನು ಮೆರೆವ ಬುದ್ಧಿನ್ನಿಯೊಳು ೬

ಪರಮಭಕ್ತಿಯಿಂದ ನಿರುತ ಸೇವೆಗೈದು
ವರವ ಬೇಡಿರೆಲೋ ಭರದಿ ಕೊಡುವ ಮೆಚ್ಚಿ ೭

ಆಸೆರಹಿತನನುಮೇಷ ಪೂಜಿಸಿರೊ
ದೋಷ ದಾರಿದ್ರ್ಯವ ನಾಶಮಾಡುವನು ೮

ಸ್ವಾಮಿ ಕೃಷ್ಣ ಶ್ರೀರಾಮನಾಮಾಮೃತ
ಪ್ರೇಮದಿಗರೆಯುವ ಕಾಮಧೇನು ಸತ್ಯ ೯

೧೭೯

ಶರಣ ನೀನೆಲೊ ನರಹರಿ
ಶರಣನೀನೆಲೊ ನರಹರಿ ಚರಣ ಪ

ಶರಣ ನೀನಿರ್ದು ಮರವೆಗೂಡಿ
ಜರಾಮರಣ ಪಡೆವರೇನೊ ಅ.ಪ

ಯೋಗಮಾರ್ಗ ವಹಿಸಿ ನಿಜವಾದ
ಭಾಗವತರ ಒಲಿಸಿ

ರಾಗರಹಿತನಾಗಿ ನೀಗದ ಸಂಸಾರ
ಭೋಗ ತ್ಯಜಿಸಿ ಭವರೋಗ ಗೆಲಿಯುವಂಥ ೧

ಮಿಥ್ಯೆ ಮಾಯ ನೀಗಿ ಸತತ ನೀ
ಸತ್ಯ ಜನಕೆ ಬಾಗಿ
ಸತ್ಯಸಂಧನಾಗಿ ಚಿತ್ತಜತಾತನ
ಭಕ್ತನೆನಿಸಿ ಯಮ ಮೃತ್ಯುಗೆಲಿಯುವಂಥ ೨

ಪಾಮರತ್ವ ತೊರೆದು ನಿಜವಾದ
ನೇಮನಿತ್ಯ ಪಿಡಿದು
ಭೂಮಿಗಧಿಕ ಮಥುಸ್ವಾಮಿ ಶ್ರೀರಾಮನ
ನಾಮ ಭಜಿಸಿ ಮುಕ್ತಿ ಸಾಮ್ರಾಜ್ಯಪಡೆಯೆಲೊ ೩

೧೮೦

ಶ್ರೀಹರಿಶರಣರು ನಮ್ಮವರು ಭವ
ಶರಧಿಯ ಜಿಗಿದರು ನಮ್ಮವರು ಪ

ಪರಮನ ಚರಣದಿ ಅರಿವಿಟ್ಟುರತರ
ದುರಿತದಿಂದುಳಿದರು ನಮ್ಮವರು ಅ.ಪ

ನಿತ್ಯತೃಪ್ತರು ನಮ್ಮವರು ಜಗ
ಮಿಥ್ಯೆಂದರಿತರು ನಮ್ಮವರು
ನಿತ್ಯ ನಿತ್ಯ ಸರ್ವೋತ್ತಮ ಹರಿಯೆಂಬ
ವೃತ್ತಿ ಬಲಿಸಿದರು ನಮ್ಮವರು ೧

ಸತ್ತು ಚಿತ್ತರು ನಮ್ಮವರು ಮಹ
ನಿತ್ಯ ಮುಕ್ತರು ನಮ್ಮವರು
ಮುಕ್ತಿದಾಯಕನಂ ಗುರ್ತಿಟ್ಟರಿಯುವ
ಸತ್ವ ಕಾಲಗಳು ನಮ್ಮವರು ೨

ನಿರ್ಮಲಾತ್ಮಕರು ನಮ್ಮವರು ನಿಜ
ಧರ್ಮ ನಿರತರೈ ನಮ್ಮವರು

ಬೊಮ್ಮನಯ್ಯನ ಮರ್ಮ ತಿಳಿದು ದು
ಷ್ಕರ್ಮವ ಗೆಲಿದರು ನಮ್ಮವರು ೩

ದೋಷದೂರರು ನಮ್ಮವರು ನಿ
ರಾಸೆ ತಾರರು ನಮ್ಮವರು
ಹೇಸಿದೈವಗಳ ಆಶಿಸಿ ಬೇಡದ
ಕೇಶವನ ದಾಸರು ನಮ್ಮವರು ೪

ಭಜನಾನಂದರು ನಮ್ಮವರು ಸ್ಥಿರ
ನಿಜ ಪದವರಿದರು ನಮ್ಮವರು
ಕುಜನ ಕುಹಕಿಗಳ ಗಜಿಬಿಜಿಗಳುಕದೆ
ಸುಜನರೆನಿಸಿದರು ನಮ್ಮವರು ೫

ಭೂರಿ ಶೀಲರು ನಮ್ಮವರು ದುಷ್ಟ
ಕೇರಿಯ ಮೆಟ್ಟರು ನಮ್ಮವರು
ಸಾರಸಾಕ್ಷನ ಸವಿಸಾರವರಿದು ಪಾದ
ಸೇರಿಕೊಂಡಿರುವರು ನಮ್ಮವರು ೬

ಸದಮಲಾನಂದರು ನಮ್ಮವರು ದು
ರ್ಮದವ ನೂಕಿದರು ನಮ್ಮವರು
ಅಧಮತನದಲಿಂದೊದರುವ ಹೊಲೆಯರ
ಎದೆಯ ತುಳಿವರ್‍ೈ ನಮ್ಮವರು ೭

ಮೋಸಕೆ ಸಿಲ್ಕರು ನಮ್ಮವರು ಯಮ
ಪಾಶವ ಗೆಲಿದರು ನಮ್ಮವರು
ನಾಶನ ಸಂಸಾರದ್ವಾಸನವಳುಕಿಸಿ
ಈಶನ ತಿಳಿದರು ನಮ್ಮವರು ೮

ಸುಗಣ ಸಂತರು ನಮ್ಮವರು ಮಹ
ಭಗವದ್ಭಕ್ತರು ನಮ್ಮವರು
ರಘು ಶ್ರೀರಾಮ ಜಗಸರ್ವೋತ್ತಮೆಂದು
ಪೊಗಳುತ ನಲಿವರು ನಮ್ಮವರು ೯

೧೮೧

ಶ್ರೀರಾಘವೇಂದ್ರರು

ಸಂತಜನರ ಪ್ರಿಯ ಸಂತತಕರುಣಿಸು
ಮಂತ್ರಾಲಯ ಸುಖದಾತ ನಮೋ ಮಂತ್ರಮೂರ್ತಿ ಗುರುನಾಥ ಪ

ಬಾಗಿವಂದಿಪೆ ದಯಾಸಾಗರ ನಿಜಯತಿ
ರಾಘವೇಂದ್ರ ಸುಖದಾತ ನಮೋ ಮಂತ್ರಮೂರ್ತಿ ಗುರುನಾಥ ೧

ಜ್ಞಾನಕವಚ ತೊಟ್ಟು ಕ್ಷೋಣಿಯೊಳ್ ಅವತರಿಸಿದಿ
ಜ್ಞಾನಶರಧಿ ಸುಖದಾತ ನಮೋ ಮಂತ್ರಮೂರ್ತಿ ಗುರುನಾಥ ೨

ಮೇದಿನ್ಯುದ್ಧರಿಸಿದಿ ವೇದವೇದಾಂತದ
ಸ್ವಾದವರಿದು ಸುಖದಾತ ನಮೋ ಮಂತ್ರಮೂರ್ತಿ ಗುರುನಾಥ ೩

ವಾದಿಮತರ ಕುವಾದ ಮುರಿದು ಸು
ಬೋಧವರಿದಿ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೪

ಜಗದೊಳಗನುಪಮ ಭಗವದ್ಭಕ್ತಿ ಘನ
ಮಿಗಿಲೆನಿಸಿದಿ ಸುಖದಾತ ನಮೋ ಮಂತ್ರಮೂರ್ತಿ ಗುರುನಾಥ ೫

ನಿತ್ಯ ನೆನಿಪ ನಿಜ ತತ್ತ್ವದಾದಿ ಜಗ
ಕುತ್ತರಿಸಿದಿ ಸುಖದಾತ ನಮೋ ಮಂತ್ರಮೂರ್ತಿ ಗುರುನಾಥ ೬

ಸತ್ಯವಾದ ಪರಮಾರ್ಥಪಥದಿ ನಿಂತು
ನಿತ್ಯದಾಡಿದಿ ಸುಖದಾತ ನಮೋ ಮಂತ್ರಮೂರ್ತಿ ಗುರುನಾಥ ೭

ಪೃಥ್ವಿಯೊಳು ನಿಮ್ಮ ಭಕ್ತಜನರ ಬಿಡ
ದೆತ್ತಿ ಪೊರೆದಿ ಸುಖದಾತ ನಮೋ ಮಂತ್ರಮೂರ್ತಿ
ಗುರುನಾಥ ೮

ಕೂಡಿಸಿ ದ್ವಿಜವೃಂದಾಡುತಲನುದಿನ
ನೋಡಿದಿ ಲೀಲೆ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೯

ನಿರುತ ಭೂಸುರಗಣಕ್ಹರುಷವಿತ್ತು ಸದಾ
ಪೊರೆದಿ ಪ್ರೇಮದಿ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೧೦

ಬೇಡಿದವರಿಗೆ ಬೇಡಿದ ವರಗಳ
ನೀಡಿದಮಿತ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೧೧

ಗಾಢಮಹಿಮೆ ತೋರಿ ರೂಢಿಜನರ ಕಾ
ಪಾಡ್ದಿದ್ಧಿತದಿ ಸುಖದಾತ ನಮೋ ಮಂತ್ರಮೂರ್ತಿ ಗುರುನಾಥ ೧೨

ಧರೆಯೊಳು ನರಹರಿ ಶರಣಜನರ ಕೂಡಿ
ಹರುಷದಾಡಿದಿ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೧೩

ಮುಳುಗಿರ್ದ ಪುಣ್ಯಮಯದಿಳೆಯನು ನಿಮ್ಮೊಳು
ತಿಳಿದು ತೆಗೆದಿ ಸುಖದಾತ ನಮೋ ಮಂತ್ರಮೂರ್ತಿ
ಗುರುನಾಥ ೧೪

ಧರ್ಮಗೆಟ್ಟಿಳಗೆ ಸದ್ಧರ್ಮ ಬಿತ್ತಿದಿ ಸ್ಥಿರ
ನಿರ್ಮಲಾನಂದ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೧೫

ಸಾಧಿಸಿ ಮಹ ತಪದಾದಿ ಮೂರ್ತಿಯಿಂ
ಶೋಧಿಸ್ಹಿಡಿದಿ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೧೬

ನಿಗಮಾತೀತನೊಳ್ ಬಗೆಬಗೆಯಾಟವ
ಸೊಗಸಿಲಾಡಿದಿ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೧೭

ಮಂಗಳಮೂರ್ತಿಯ ಕಂಗಳಿಂದ ಕಂಡು
ಹಿಂಗಿದ ಭವ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೧೮

ತುಂಗನಿವಾಸ ಮಹ ಮಂಗಳಾಂಗ ಸುಜ
ನಾಂಗ ಪ್ರೀತಿ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೧೯

ನಿತ್ಯ ನಿಮ್ಮಪಾದ ಭಕ್ತಿಯಿಂ ಭಜಿಸಲು
ಮುಕ್ತಿ ಕೊಡುವ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೨೦

ಮುಕ್ತಿದಾಯಕ ಜಗದಾಪ್ತ ಶ್ರೀರಾಮನಂ
ಗುಪ್ತದರಿದಿ ಸುಖದಾತ ನಮೋ
ಮಂತ್ರಮೂರ್ತಿ ಗುರುನಾಥ ೨೧

೧೮೨

ಹರಿಯಶರಣರಿಗೆ ನಮೋ ನಮೋ
ಗುರುಸೇವೆ ನಿರತರಿಗೆ ನಮೋ ನಮೋ ಪ

ಅರಿವು ನಿಲ್ಲಿಸಿ ಪರಸಾಧನದಿರುತಿಪ್ಪ
ಪರಮಪಾವನರಿಗೆ ನಮೋ ನಮೋ ಅ.ಪ

ತಾಪಸಾರ್ಯರಿಗೆ ನಮೋ ನಮೋ ಮಹ
ಪಾಪ ದೂರರಿಗೆ ನಮೋ ನಮೋ
ಕೋಪಲೋಪರಿಗೆ ನಮೋ ನಮೋ ಇಹ
ವ್ಯಾಪಾರರಿತವರಿಗೆ ನಮೋ ನಮೋ

ತಾಪತ್ರಯವ ನೀಗಿ ಶ್ರೀಪತಿ ಚರಣವ
ಗೌಷ್ಪದಿ ನೆನೆವರ್ಗೆ ನಮೋ ನಮೋ ೧

ವೇದ ಸಂಪನ್ನರಿಗೆ ನಮೋ ನಮೋ ಭವ
ಬಾಧೆ ಗೆಲಿದವರಿಗೆ ನಮೋ ನಮೋ
ಸಾಧನ ಚತುಷ್ಟರಿಗೆ ನಮೋ ನಮೋ ಮಹ
ಸಾಧುಸಂತರಿಗೆ ನಮೋ ನಮೋ
ವಾದಿ ಮೂರ್ಖರೊಳು ವಾದಿಸದಂಥ ಸು
ಬೋಧ ಗುರುವರಗೆ ನಮೋ ನಮೋ ೨

ಭಾಗವತರಿಗೆ ನಮೋ ನಮೋ ಇಹ
ಭೋಗನಿರಾಸ್ಯರಿಗೆ ನಮೋ ನಮೋ
ಯೋಗಸಾಧಕರಿಗೆ ನಮೋ ನಮೋ ಮಹ
ಯೋಗಿ ಮಹಾತ್ಮರಿಗೆ ನಮೋ ನಮೋ
ಆಗಯಿೀಗೆನ್ನದೆ ಸಾಗರನಿಲಯನನ್ನ
ಬಾಗಿಭಜಿಪರಿಗೆ ನಮೋ ನಮೋ ೩

ಭಕ್ತಜನರಿಗೆ ನಮೋ ನಮೋ ವಿ
ರಕ್ತ ಪುರುಷರಿಗೆ ನಮೋ ನಮೋ
ಸತ್ಯಶೀಲರಿಗೆ ನಮೋ ನಮೋ ತಮ್ಮ
ಗುರ್ತು ಅರ್ತವರಿಗೆ ನಮೋ ನಮೋ
ಭಕ್ತಿಯುಕ್ತಿ ವಹಿಸೆತ್ತಗಲದಂಥ
ಚಿತ್ತಶುದ್ಧರಿಗೆ ನಮೋ ನಮೋ ೪

ನಿತ್ಯ ನಿರ್ಮಲರಿಗೆ ನಮೋ ನಮೋ ಭವ
ಮರ್ತ ನಿರ್ತರಿಗೆ ನಮೋ ನಮೋ ತ
ತ್ವರ್ಥಿಕರಿಗೆ ನಮೋ ನಮೋ ಮಹ
ಮುಕ್ತಿ ಸಾಧ್ಯರಿಗೆ ನಮೋ ನಮೋ
ಮೃತ್ಯುವ ಗೆಲಿದು ಕರ್ತ ಶ್ರೀರಾಮನ
ಅರ್ತವರಿಗೆ ಬಹು ನಮೋ ನಮೋ ೫

V. ಆತ್ಮನಿವೇದನೆ

೧೮೩

ಅಗಲದಿರೆಲೋ ನೀನೆನ್ನ ಬಿಟ್ಟು ಅಗಲದಿರೆಲೋ
ನಿಗಮಾತೀತ ನಿರ್ಜರೇಶ ಪ

ಹಗಲು ಇರುಳು ನಿನ್ನ ಬಿಟ್ಟು
ಅಗಲಿ ಇರಲಾರೆ ನಾನು
ಸುಗುಣ ಸಂತರಾತ್ಮನೆನ್ನ
ಬಗೆಗೊಂಡು ರಕ್ಷಿಸಭವ ೧

ಮುಟ್ಟಿಭಜಿಪೆ ನಿನ್ನ ಚರಣ
ಕೆಟ್ಟಗುಣಗಳೆಣಿಸದೆನ್ನ
ನಿಷ್ಠೆಯೊಳಗೆ ನಿಂತು ಸಲಹೋ
ಕಷ್ಟಹರಣ ಕರುಣಾಶರಧಿ ೨

ಶ್ರೀಶರಾಮ ನಿನ್ನ ಚರಣ
ದಾಸ ನಾನು ಮನ್ನಿಸೆನ್ನ
ಧ್ಯಾನದಲ್ಲಿ ನೀ ವಾಸನಾಗಿ
ಪೋಷಿಸನುಮೇಷ ಬಿಡದೆ ೩

೧೮೪

ಅಸೂಯೆ ಬಿಡಿಸೆನ್ನ ಮನಸಿನ
ಅಸೂಯೆ ಬಿಡಿಸೆನ್ನ ಪ

ಅಸೂಯೆ ಬಿಡಿಸೆನ್ನ ಹೇಸಿಮನಸಿನ
ಈಶ ನಿನ್ನಪಾದ ದಾಸಾನುದಾಸೆನಿಸೋ ಅ.ಪ

ಕೊಟ್ಟರು ಅಷ್ಟೆಯೆನಿಸೋ ಕೊಡದೊದ್ದು
ಅಟ್ಟಿದರಷ್ಟೆನಿಸೋ

ಕೊಟ್ಟು ಕೊಡದವರೆಲ್ಲ ಅಷ್ಟೆನಿಸೆನ್ನಗೆ
ಶಿಷ್ಟಗುಣಿತ್ತು ಪೊರೆ ಸೃಷ್ಟಿಮೇಲೆ ಹರಿ ೧

ಕಡುಸಿರಿ ಅಷ್ಟೆನಿಸೋ ಎನಗೆ ಬಂದ
ಬಡತನ ಅಷ್ಟೆನಿಸೋ
ಕಡುಸಿರಿ ಬಡತನ ಅಷ್ಟೇಯೆನಿಸಿ ನಿನ್ನ
ಅಡಿದೃಢವಿತ್ತು ಪೊರೆ ಪೊಡವಿ ಮೇಲೆ ಹರಿ ೨

ದೂಷಣ ಅಷ್ಟೆಯೆನಿಸೋ ಜಗದೊಳು
ಭೂಷಣ ಅಷ್ಟೆನಿಸೋ
ದೂಷಣ ಭೂಷಣ ಅಷ್ಟೇಯೆನಿಸಿ ನಿನ್ನ
ಧ್ಯಾಸದಿಟ್ಟು ಪೊರೆ ಶ್ರೀಶ ಶ್ರೀರಾಮ ತಂದೆ ೩

೧೮೫

ಅಂಜ್ಯಾಕೆ ಎಲೆ ಮನುಜ ಭಯವಿಲ್ಲ ನಿನಗೆ
ಕಂಜನಾಭನ ಧ್ಯಾನವಿರಲಿ ಮನದೊಳಗೆ ಪ

ತಾಪತ್ರ ಬಂದೊದಗೆ ಪಾಂಡುಪ್ರಿಯನೆಂದೆನ್ನು
ಶಾಪವೊದಗಲು ಅಂಬರೀಷನ್ವರದೆನಲೋ
ಭೂಪತಿಗಳು ಮುನಿಯೆ ಪಾಂಚಾಲಿಪಾಲಕನೆನ್ನು
ಆಪಾರ ಕಷ್ಟದಲಿ ಕರಿವರದನೆನಲೋ ೧

ಪಿತೃ ವೈರ್‍ಯಾಗಲು ಪ್ರಹ್ಲಾದರಕ್ಷಕನೆನ್ನು
ಮಾತೃ ವೈರ್‍ಯಾದರೆ ಧ್ರುವಪಾಲನೆನಲೋ
ಭ್ರಾತೃವೈರ್‍ಯಾದರೆ ಸುಗ್ರೀವಸಖನೆನ್ನು
ಖಾತ್ರಿಯಿಂ ಸತತದಿ ಸೂತ್ರಧಾರೆನಲೋ ೨

ಸೆರೆಮನೆಯು ಒದಗಿರಲು ಪಿತಮಾತೆರ್‍ವರದೆನ್ನು
ಧುರದೊಳಗೆ ಪೊಕ್ಕಿರಲು ನರಸಹಾಯನೆನಲೋ

ಬರಿ ಮಳೆಯೊಳ್ಸಿಕ್ಕಿರಲು ಗಿರಿಯೆತ್ತಿದವನೆನ್ನು
ದುರುಳರ್ಗಾವಳಿಯೊಳಗೆ ದನುಜಹರನೆನಲೋ ೩

ಕವಿಯಲು ವೈರಿಗಳು ಕಂಸಮರ್ದನನೆನ್ನು
ಶಿವನ ಕಾಯ್ದವನೆನ್ನು ಉರಿಹತ್ತಿಸುಡಲು
ಭವಿಜನುಮ ಬಂದಿರಲು ಭವರೋಗಹರನೆನ್ನು
ದಿವನಿಶೆಯು ಎಡೆಬಿಡದೆ ಭಯದೂರನೆನಲೋ ೪

ಸ್ಥೂಲಭ್ರಷ್ಟನಾದರೆ ಬಲಿದ್ವಾರಪಾಲಕನೆನ್ನು
ಕುಲಭ್ರಷ್ಟನಾದರಜಮಿಳನ್ನುರಧನೆನಲೋ
ಇಳೆಮೂರು ಸಂರಕ್ಷ ಚೆಲುವ ಶ್ರೀರಾಮನಂ
ಹಲವು ವಿಧದಲಿ ಭಜಿಸಿ ಫಲಗಳಿಸು ಬಿಡದೆ ೫

೧೮೭

ಆಗಿದ್ದ ಹರಿ ಈಗಿಲ್ಲವೇನು
ಸಾಗರಶಾಯಿ ಭಕ್ತರಭಿಮಾನ್ಯಲ್ಲೇನು ಪ

ಖುಲ್ಲರ್ಗಾವಳಿಯಿಂದ ಝಲ್ಲು ಬಿಡಿಸಿ ಮುನಿಯ
ಕಲ್ಲನ್ನು ಸತಿಮಾಡ್ದ ಬಿಲ್ಲು ಇಕ್ಕಡಿಗೈದ
ಕೊಲ್ಲಿ ದಶಮುಖನನ್ನು ನಲ್ಲೆಯಳ ಕರೆತಂದ
ಒಲ್ಲಿದು ರಾಜ್ಯವನಿತ್ತ ಸುಲಭದ್ವಿಭೀಷಣಗೆ ೧

ಅರಮನೆಕಂಬದಿ ಅರಿಯದಂತಡಗಿ ತಾ
ದುರುಳನ ಸದೆಬಡಿದು ತರಳ ಸಲಹಿದ
ಬರುವ ಮುನಿಶಾಪವಂ ವರಚಕ್ರದಿಂ ತಡೆದು
ಕರುಣದಿ ನೃಪನನ್ನು ಪೊರೆದ ಪರಮಾತ್ಮ ೨

ಕರುಣಾಳು ಶ್ರೀರಾಮ ಚರಣದಾಸರ ಮನಕೆ
ಕೊರತೆಯ ತರದಂತಿರುವ ಬೆಂಬಿಡದೆ
ಮರುಗಿ ಸೊರುಗುವುದ್ಯಾಕೊ ಸರುವ ಭಾರವನ ಮೇ
ಲ್ಹೊರೆಸಿ ಮೊರೆಯಿಟ್ಟ ಬಳಿಕರಿಯನೇನೀತ ೩

೧೮೭

ಆನಂದಕರಮಾದ ಇಂದಿರಾರ್ಯ ತವ
ಧ್ಯಾನಾನಂದೆನಗೆ ದಯಪಾಲಿಸು ಪ

ನೊಂದೆ ಭವದೊಳು ಬಿದ್ದು ಮಂದನಾಗಿ ತಿಳಿಯದೆ
ಅಂದವಾದ ತವ ಮಹಿಮೆಯ ದೇವ ಅ.ಪ

ಕಾಣುವ ಜಗವೆಲ್ಲ ಏನೆಂಬ ನಿಜತವನು
ನಾನರಿಯದೊರಲುತಿಹೆನು
ನಾನಿಲ್ಲದಮೊದಲು ಏನಿತ್ತು ಎಂಬುದನು
ನಾನೆಂತು ತಿಳಿಯುವೆನು
ನಾನು ಯಾರೆಂಬ ನಿಜ ಖೂನವರಿಯದೆ ಬಲು
ಹೀನತೆಗೆ ಬಂದಿದ್ದೆನು
ನೀನೆ ಸ್ವತಂತ್ರಖಿಲ ದೀನಗರಿವಿಕೆ ನೀಡಿ
ಜ್ಞಾನದಿಂ ಪೊರೆ ದಯದಿ ಜವದಿ ೧

ಎಲ್ಲಿರ್ದೆಮೊದಲು ನಾನೆಲ್ಲಿಂದ ಬಂದೆ ಮ
ತ್ತೆಲ್ಲಿಗೆ ಪೋಗುವೆನು
ಎಲ್ಲಿರುವೆ ಈಗ ನಾನೆಲ್ಲಿಂದ ನುಡಿಯುವೆನು
ಎಲ್ಲಿಗೆ ಕೊಡುವೆನು
ಎಲ್ಲನಿಂದಿದರೊಳಗೆ ಇಲ್ಲದ್ದು ಕಲ್ಪಿಸಿ
ಎಲ್ಲಿಂದ ಕಾಂಬುವೆನು
ಎಲ್ಲಿಟ್ಟಿರುವಿದರ ಸಲ್ಲಲಿತ ಸೂತ್ರವನು
ಪುಲ್ಲನಾಭ ದಯಪಾಲಿಸು ತಿಳಿಸು ೨

ಆರೊಂದುಗೇಣಿನಾಪಾರ ಸೂತ್ರದಗೊಂಬೆ
ಆರಿಂದಲಾಗಿಹ್ಯದು
ಸೋರುತಿಹ್ಯ ಒಂಬತ್ತು ದ್ವಾರಹಜ್ಜಲು ಇದರ
ಕಾರಣವೇನಿಹ್ಯದು

ತೋರುವುವು ಇದರೊಳಗೆ ಮೂರುವಿಧಮಾಗಿ
ಆರಸಾಕ್ಷದಕ್ಕಿಹ್ಯದು
ತೋರದೇನೇನಿದರ ತಾರತಮ್ಯಜ್ಞಾನ ಸುವಿ
ಚಾರ ಎನಗೊಲಿದು ತಿಳುಹು ಸಲಹು ೩

ಕಾಲು ಕಯ್ಯಿಗಳಾಡಿ ಬೀಳುವೇಳುವ ಮೂಲ
ಕೀಲಿಯೆಲ್ಲಿರುತಿಹ್ಯದು
ಜ್ಯಾಲದಂದದಿ ಹರಕು ಚೀಲದೊಳು ತುಂಬಿರುವ
ಗಾಳ್ಯೆಂತುನಿಂತಿಹ್ಯದು
ಕಾಲಮಹಿಮ ನೀ ಗೈದ ಮೇಲುಯಂತ್ರದಿ ಇಂದ್ರ
ಜಾಲವೇ ತುಂಬಿಹ್ಯದು
ಕಾಲಚಕ್ರನ ಮಹ ದಾಳಿಯನು ಗೆಲಿಸಿ ತವ
ಲೀಲೆಯೊಳೆನ್ನಾಡಿಸು ಪಾಲಿಸು ೪

ಬಂಧರೂಪಕಮಾದ ದಂದುಗದ ಭವವು ದಾ
ರಿಂದಲುತ್ಪತ್ತಿ ಯಾಯ್ತು
ತಂದೆ ತಾಯಿ ಸತಿ ಸುತರು ಬಂಧಬಳಗ ಎ
ಲ್ಲಿಂದ ಬಂದಿವಗೆ ಜೊತೆಗೂಡಿತು
ಒಂದಕ್ಕೊಂದರ ಸಂಬಂಧವೇ ಇಲ್ಲಿವಗೆ
ಬಂಧ ಮತ್ತೆಲ್ಲೊದಗಿತು
ನಿಂದುನೋಡಲು ಸಕಲ ತಂದೆ ಶ್ರೀರಾಮ
ನಿನ್ನಿಂದ ಕಂಡು ನಿನ್ನೊಳೈಕ್ಯ ಮಾಯ ಖರೆಯ ೫

೧೮೮

ಆರಗೊಡವೆ ನಮಗಿನ್ಯಾಕೊ ಹರಿ ಅ
ಪಾರ ಮಹಿಮನ ದಯವೊಂದೆ ಸಾಕೊ ಪ

ಮಾರಿಗೀರಾಗಲಿ ದೂರಿ ಸಕಲರೆನ್ನ
ಸಾರಸಾಕ್ಷನ ಬಲವೊಂದೆ ಬೇಕೊ ಅ.ಪ

ಜಗಜನ ಕಂಡಂತೆ ಬೊಗಳಲಿ
ಬೊಗಳಿ ಬೊಗಳಿ ನಮ್ಮ ಶಪ್ಪರಿಯಲಿ
ನಿಗಮಾಗಮನುತ ಜಗಜೀವೇಶನ
ಸೊಗಸಿನ ಕೃಪೆಯೊಂದೆ ನಮಗಿರಲಿ ೧

ದುರುಳ ಕೃತ್ತಿಮನೆಂದು ಜರಿಯಲಿ
ಜರಿಜರಿದು ಮರೆದ್ಹೋಗಲಿ
ಚರಣದಂತಿ ಪರಮ ಪಾವನಂಘ್ರಿ
ಕರುಣಾಮೃತವೊಂದೆ ನಮಗಿರಲಿ ೨

ಪ್ರೇಮದಪ್ಪಿ ಎನ್ನ ಬಳಲಿಸಲಿ ಅವರು
ಕ್ಷೇಮ ತುಸು ಕಾಣದಳಿದ್ಹೋಗಲಿ
ಕಾಮಜನಕ ನಮ್ಮ ಸ್ವಾಮಿ ಶ್ರೀರಾಮನ
ನಾಮಧ್ಯಾನವೊಂದೇ ನಮಗಿರಲಿ ೩

೧೮೯

ಆರ ನಂಬುಗೆ ಜಗದೆನಗಿಲ್ಲ ಹರಿಯೆ
ಕಾರುಣ್ಯನಿಧಿ ನೀನೆ ಗತಿಯೆನಗೆ ಪೊರೆಯೈ ಪ

ತಿಂಡಿಗ್ಹಾಕುವತನಕ ಹೆಂಡತಿಯು ನುಡಿಯುವಳು
ಗಂಡನೇ ಗತಿಯೆಂದು ಮಂಡೆಯನು ಬಾಗಿ
ತಿಂಡಿತಪ್ಪಿದ ಕ್ಷಣದಿ ಕಂಡಕಂಡತೆ ಕೂಗಿ
ಬಂಡುಮಾಡುವಳಿಹ್ಯದಿ ಷಂಡನೆಂದಭವ ೧

ಬಂಧುಬಾಂಧವರೆಲ್ಲ ಸಂದುಬಿಡಿದಡಿಗಡಿಗೆ
ವಂದಿಸಿ ನುಡಿಯುವರು ತಿಂದುಡುವನತಕ
ಸಂಧಿಸಲು ಬಡತನವು ವಂದಿಸಿದವರೆ ಮನ
ಬಂದಂತೆ ನಿಂದಿಪರು ಕುಂದ್ಹೊರಿಸಿ ದೇವ ೨

ಭೂಮಿಯ ಜನರೆಲ್ಲ ಕ್ಷೇಮ ನೀ ಕೊಟ್ಟಿರಲು
ತಾಮಸವ ಬಿಟ್ಟು ಬಲು ಪ್ರೇಮ ಬಳಸುವರು

ಸ್ವಾಮಿ ಶ್ರೀರಾಮ ನಿಮ್ಮ ಪ್ರೇಮ ತುಸು ತಪ್ಪಿದರೆ
ಭೂಮಿಯೊಳಗಿನ ಕೇಡು ನಾ ಸ್ಮರಿಸಲಾರೆ ೩

೧೯೦

ಆವ ತ್ರಾಣವು ಎನ್ನೊಳಿನಿತಿಲ್ಲವಯ್ಯ
ಭಾವಜಪಿತ ನೀನೆ ದಯಮಾಡಬೇಕೊ ಪ

ಗುಡಿಯ ಕಟ್ಟಿಸಲೆ ನಾ ಒಡುಕುಕವಡೆನಗಿಲ್ಲ
ಬಡವರಿಗೆ ಅನ್ನಿಟ್ಟಿಲೆ ಹಿಡಿಧಾನ್ಯವಿಲ್ಲ
ಕೊಡುವೆನೆನೆ ಧರ್ಮವ ಪಡೆದು ನಾ ಬಂದಿಲ್ಲ
ಬಿಡುವೆನೇ ದುಃಸ್ಸಂಗ ಅಡರಿಹ್ಯರು ರಿಣವು ೧

ದೃಢಧ್ಯಾತ್ಮಗ್ಯೆವೆನೆನೆ ನಡೆವ ಶಕ್ತ್ಯೆನಗಿಲ್ಲ
ಮಡಿಮಾಡ್ವೆನೆನೆ ಮನವು ತಡೆವಶಕ್ತಿಲ್ಲ
ಸುಡಲೆ ಕಾಮಾದಿಗಳು ತೊಡರಿಹ್ಯದು ಸಂಸಾರ
ನುಡಿಯಲೆ ಸತ್ಯ ಸದಾ ಬಡವನಾಗಿಹೆನು ೨

ಒಡೆಯ ಶ್ರೀರಾಮ ನಿನ್ನಡಿಯ ಗುರುತರಿಯೆ
ಕಡುಮೂರ್ಖ ಜನ್ಮವನು ಪಡೆದಿಹೆನು ಜಗದಿ
ಒಡೆಯ ಸರ್ವಕೆ ನೀನೆ ಜಡಮತಿಯು ಗಡ
ಕಡಿದು ದೃಢಭಕ್ತಿ ಸುಖವಿತ್ತು ಪಿಡಿದು ಸಲಹಯ್ಯ ೩

೧೯೧

ಆವ ನ್ಯಾಯವೋ ಭಾವಜರಿಪುವಿನುತ ನಿಂದು
ದಾವ ನ್ಯಾಯವೊ ಪ

ಆವ ನ್ಯಾಯವೋ ದೇವ ದೇವ
ಮಾವಕಂಸಜೀವಘಾತಕ ಅ.ಪ

ಕಪ್ಪು ವರ್ಣನು ಭಕ್ತಜನರ
ಲ್ಲಿರ್ಪೆ ಸದಾ ನೀನು ನಿ

ನ್ನ ಪಾದದಿ ತಪ್ಪು ಎಲ್ಲನು
ಒಪ್ಪಿಬಂದಿಹ್ಯ ಭಕ್ತಜನರ
ತಪ್ಪು ಒಪ್ಪಿ ಕ್ಷಮಿಸಿ ದಯದಿ
ಬಪ್ಪ ದುರಿತ ನಿವೃತ್ತಿಗೈದು
ಅಪ್ಪಿಕೊಂಡು ಸಲಹದಿರುವಿ ೧

ತಂದೆ ತಾಯಿ ನೀನು ಎಂದು ನಂಬಿ
ಬಂದು ಬಿದ್ದೆನು ನಿನ್ನ ಪಾದಕೆ
ಮಂದಭಾಗ್ಯನು ನೊಂದು
ಬೆಂದು ಸಂಸಾರವೆಂಬ
ಸಿಂಧುವಿನೊಳು ತಾಪಬಡುತ
ಬಂದು ಮೊರೆಯಬಿದ್ದ ಕಂದನ
ಮಂಧರಮಂದಿರ ಸಲಹದಿರುವಿ ೨

ನಿನ್ನನರಿಯದ ಅಜಮಿಳನು
ಬಿನುಗನೆನಿಸಿದ ಪಾಪಗೈದವ
ಗಣನೆಯಿಲ್ಲದ ಕನಿಕರದಿಂದ
ವನಿಗೊಲಿದು
ಘನಪದವನಿತ್ತು ಪೊರೆದೆ
ಎನ್ನನ್ಯಾಕೆ ರಕ್ಷಿಸದಿರುವಿ
ಚಿನುಮಯಾತ್ಮ ಸಿರಿಯರಾಮ ೩

೧೯೨

ಆವಬಲವಿರಲೇನು ದೇವ ಹರಿಬಲ
ಸಹಾಯವಿಲ್ಲ ಪಾಪಿಜೀವಿಗೆ ಜಗದಿ ಪ

ಶಶಿಧರ ಶಿವನ್ವರವು ದಶಶತಭುಜಬಲವು
ಅಸುರಬಾಣಗೆ ಒಲಿದು ಪಶುಪತಿ ಕದವ
ಕುಶಲದಿಂ ಕಾಯುವ ಅಸಮಬಲವಿರಲವನು
ಕುಸುಮಾಕ್ಷಗ್ವೈರೈನಿಸಿ ಅಸುವ ಕಳೆದುಕೊಂಡ ೧

ಆರಿಂದ ಮರಣವು ಬಾರದಂತ್ವಿರಣ್ಯ
ಕೋರಿಕೊಂಡ್ವರನಿಂದ ಮೀರಿ ಮೆರೆಯುತಲಿ
ಮೂರುಲೋಕಗಳನ್ನು ಘೋರಿಸಲತಿಶಯ
ಮಾರಜನಕ ಮುನಿದು ಸೇರಿಸಿದೆಮಪುರ ೨

ಹರನು ಭಸ್ಮಗೆ ಬಲಪರಿಪೂರ್ಣವಾಗಿ ತ
ನ್ನುರಿಹಸ್ತ ವರವನ್ನು ಕರುಣಿಸಿಯಿರಲು
ದುರುಳಂಗೆ ಘನತರ ಹರನ ಕರುಣವಿರಲು
ನರಹರಿ ತಡೆಯದೆ ಉರುವಿದ್ಯರಲವದಿ ೩

ನೂರುಯೋಜನ ಮಹ ವಾರಿಧಿಯೊಳು ಮನೆ
ಆರು ಕೋಟ್ಯಾಯುಷ್ಯ ಶೂರತಮ್ಮನ ಬಲವು
ಮೀರಿದವರ ಬಲ ಮೇರಿಲ್ಲದೈಶ್ವರ್ಯ
ಸಾರಸಾಕ್ಷನು ಮುನಿಯೆ ಹಾರಿತು ನಿಮಿಷದಿ ೪

ಈ ಪರಿ ಬಲವಿರ್ದು ಸಾಫಲ್ಯಹೊಂದದೆ
ಲೋಪಾಯಿತು ಸರ್ವರಾಪಾರ ಬಲವು
ವ್ಯಾಪಿಸಿ ತ್ರೈಜಗ ಕಾಪಾಡ್ವ ಶ್ರೀರಾಮನಪ
ರೂಪಪಾದಕೃಪೆ ನೋಂಪಿ ಸಂಪಾದಿಸದೆ ೫

೧೯೩

ಆವಬಂಧುಗಳೆಲೋ ಜೀವ ವಿಚಾರಿಸೋ
ಕಾವ ಸಮರ್ಥದೇವ ಹರಿಯಲ್ಲದೆ ಪ

ಮಾಯಮೋಹವ ನೀಗಿ ಕಾಯಶುದ್ಧಲಿ ಮನ
ತೋಯಜಾಕ್ಷನ ಪಾದ ದಿವ್ಯಭಕ್ತಿಲಿ ಭಜಿಸೊ ಅ.ಪ

ಜನನಿ ಬಂದಹಳೆಂಬೆ ಜನನಿರ್ದಳಾದ್ರುವಗೆ
ಜನಕನ ತೊಡೆಯಿಂದ ಕನಿಕರಿಲ್ಲದೆ ಮಲ–

ಜನನಿ ನೂಕಲು ಕಂದ ವನಕ್ಹೊರಟು ಪೋಗಲು
ಜನನಿ ಸಲಹಿದಳೇನೋ ವನಜಾಕ್ಷನಲ್ಲದೆ ೧

ಸತಿಹಿತದವಳೆನುವೆ ಸತಿಯಿರ್ದು ಸುಗ್ರೀವ
ಖತಿಪಟ್ಟಾಗ್ರಜನಿಂ ವ್ಯಥೆಯಿಂದುಸುರ ಬಿಡಲು
ಸತಿಬಂದು ಪತಿಯನ್ನು ಹಿತದಿ ಕರೆದೊಯ್ದಳೆ
ಹಿತದ ಬಂಧುಗಳಿವರೇ ಕ್ಷಿತಿಪತಿಯಲ್ಲದೆ ೨

ಸುತರ ಬಲವಿಹುದೆನುವೆ ಸುತರತಿ ಬಲಾನ್ವಿತರು
ಜಿತಮಾರನಿಗಿರೆ ಉರಿಹಸ್ತ ವರವಿತ್ತು
ಗತಿದೋರದಿರುತಿರೆ ಸುತರು ನೆರವಾದರೆ
ಗತಿ ರಮಾಪತಿಯೆನೆ ಹಿತದಿಂ ಮೊರೆಕಾಯ್ದ ೩

ಬಂಧುಗಳತಿಶಯದ ವೃಂದನೆರೆದು ಇರ
ಲಂದು ಕರಿಮಕರಿಕೆಯಿಂದ ಬಂಧನ ಪಡಲ
ವಂದು ಬೆಂಬಲಗೊಟ್ಟು ಬಂಧನವ ಬಿಡಿಸಿದುವೆ
ತಂದೆಯಾ ಶ್ರೀ ಮುಕ್ಕುಂದನಲ್ಲದಲೆ ೪

ಹರಿಯೆ ಪರದೈವವೋ ಹರಿಯೆ ಪರಲೋಕವು
ಹರಿಯೇ ಸ್ಥಿರಸುಖವು ಹರಿಯೆ ವರ ಮುಕ್ತಿಯೋ
ಹರಿಯೆಂದು ಅಜಮಿಳ ನರಕಯಾತನೆ ಗೆದ್ದ
ನೆರೆನಂಬಿ ಸುಖಿಯಾಗೋ ವರ ಶ್ರೀರಾಮನ ಪಾದ ೫

೧೯೪

ಆವಭೂತ ಬಡಕೊಂಡಿತೆಲೊ ನಿನಗೆ
ದೇವ ಕೇಶವನಂಘ್ರಿಧ್ಯಾಸವೆ ಮರೆದಿ ಪ

ಸತಿಸುತರ ಮಮತೆಂಬ ವ್ಯಥೆ ಭೂತ ಬಡಿಯಿತೆ
ಅತಿ ವಿಷಯಲಂಪಟದ ದುರ್ಮತಿಭೂತ ಹಿಡಿಯಿತೆ

ಅತಿ ಸಿರಿಯಭೂತ ನಿನ್ನ ಮತಿಗೆಡಿಸಿತೇನೆಲೊ
ರತಿಪತಿಪಿತನಂಘ್ರಿಸ್ತುತಿಯನೆ ಮರೆತಿ ೧

ಸೂಳೆಯರ ಗಾಳ್ಯೆಂಬ ಹಾಳುಬವ್ವ ತಾಕಿತೇ
ಕೀಳು ಸಂಸಾರದ ಮಹ ಗೋಳು ಭೂತ್ಹಿಡೀತೇ
ಸಾಲಿಗರ ಭಯಭೂತ ನಾಲಿಗೆಯ ಸೆಳೆಯಿತೇ
ನೀಲಶಾಮನ ಭಜನಫಲವೆ ಮರೆತೆಲ್ಲೊ ೨

ಪೋದವಯ ಪೋಯಿತು ಆದದ್ದಾಗ್ಹೋಯಿತು
ಪಾದದಾಸರಕೂಡಿ ಶೋಧಮಾಡಿನ್ನು
ಭೂಧವ ಶ್ರೀರಾಮನ ಪಾದವನು ನಂಬಿ ಭವ
ಬಾಧೆ ಗೆಲಿದಿನ್ನು ಮುಕ್ತಿ ಹಾದಿಯ ಕಾಣೊ ೩

೧೯೫

ಆವರೀತಿಲಿ ಎನ್ನ ಕಾವದೇವರು ನೀನಿ
ನ್ನಾವ ದೈವದ ಬಲವು ನಾನೊಲ್ಲೆ ಸ್ವಾಮಿ ಪ

ಆವರೀತಿಲಿ ಬಿಡದೆ ನೀ ಎನ್ನ ಕಾಯೊ ಭಕ್ತರ
ಜೀವದರಸನೆ ಭಾವಜಪಿತ ನಿನ್ನ ಬಿಟ್ಟ
ನ್ಯಾವ ದೇವರು ಇಲ್ಲ ಎನಗೆ ಅ.ಪ

ಕುಸುಮಾಕ್ಷ ತವಧ್ಯಾನ ನಿಶಿದಿವದೊಳು ಬಿಡದೆ
ಹಸನಾಗಿ ಭಜಿಪಂಥ ಕುಶಲಮತಿ ನೀಡಿ
ಪುಸಿಯ ಸಂಸಾರದ್ವೆಸನವಳುಕಿಸಿ
ಅಸಮ ಸಂತಸಸುಖವ ಕರುಣಿಸಿ
ಅಸುವುಪೋದರು ಪುಸಿಯನಾಡದ
ಸುಶೀಲ ಮನವಿತ್ತು ಪೋಷಿಸಭವ ೧

ಬಿಡದೆಕಾಡುವ ಎನ್ನ ಕಡು ಜಡಮತಿಯನ್ನು
ಕಡಿದೊಡನೆ ನುಡಿಯಂತೆ ನಡೆಯನೆನ್ನೊಡಲಿಗೆ
ಗಡನೆ ಸ್ಥಿರಮಾಡಿ ಎಡರು ತೊಡರಿನ

ಜಡರಿನೊಳಗಿಂದ ಕಡೆಗೆ ನಿಲ್ಲಿಸಿ
ಒಡೆಯ ನಿನ್ನ ಅಡಿದೃಢವನಿತ್ತು
ಪಿಡಿದು ನೀ ಎನ್ನ ಬಿಡದೆ ಸಲಹೊ ೨

ರತಿಪತಿಪಿತ ನೀನೆ ಗತಿಯೆಂಬ ಸಿದ್ಧಾಂತ
ನುತಿಯ ಮಂತ್ರವನೆನಗೆ ಹಿತದಿಂ ಪಾಲಿಸು
ಸತತ ನಿನ್ನನು ಸ್ತುತಿಪ ಭಕ್ತರ
ಹಿತದ ದರುಶನ ಪ್ರಥಮವಿತ್ತೆನ್ನ
ಗತಿಸದಂಥ ನಿಜಸ್ಥಿತಿಯ ಸಂಪದ
ವಿತ್ತು ರಕ್ಷಿಸೋ ಶ್ರೀರಾಮ ಪ್ರಭುವೆ ೩

೧೯೬

ಆವ ಸಾಧನದ ಗೋಜ್ಯಾಕೆ ನಿನ್ನ
ಭಾವದೊಳಗೆ ಹರಿಯಿರಲಿಕ್ಕೆ ಪ

ಜಾವಜಾವಕೆ ಗೋವಳರೊಡೆಯನ
ಕೇವಲಭಕ್ತಿಯಿಂ ಕೂಗಲು ಸಾಲದೆ ಅ.ಪ

ಎಷ್ಟು ಆಸನ್ಹಾಕಿದರೇನೋ ಬಲು
ಕಷ್ಟದಿ ದೇಹದಂಡಿಸಲೇನೋ
ಬೆಟ್ಟವೇರಿ ಕೂತರೆ ಏನೋ ಅನ್ನ
ಬಿಟ್ಟು ಉಪವಾಸ ಮಲಗಿದರೇನೋ
ಕಷ್ಟಹರಣ ಮಹ ಶಿಷ್ಟಪಾಲನೆಂದು
ನಿಷ್ಠೆಯಿಂ ಭಜಿಸಲಿ ಸಾಕಾಗದೇನೋ ೧

ತೊಪ್ಪಲ ತಿಂದು ಬಾಳಿದರೇನೋ ಮತ್ತು
ತಿಪ್ಪೆಯೊಳಗೆ ಉಣಕೂತರೇನೊ
ಕಪ್ಪೆಯಂತೆ ಜಲ ಮುಳುಗಿದರೇನೋ ಎಲೊ
ಮುಪ್ಪಿನ್ಹದ್ದಿನಂತೆ ಮೇಲಕ್ಹೋದರೇನೋ

ತಪ್ಪದೆ ಅನುದಿನ ಮುಪ್ಪುರಾಂತಕನ
ಗೌಪ್ಯದಿಂ ನೆನೆಯಲು ಸಾಕಾಗದೇನೊ ೨

ಸೊಟ್ಟಿ ಹಾಕಿಕೊಂಡು ಪೋದರೇನೋ ಚರ್ಮ
ಉಟ್ಟುಕೊಂಡು ತಿರುಗಿದರೇನೋ
ಬಟ್ಟೆ ನುಂಗಿ ದೇಹ್ಯ ತೊಳೆದರೇನೋ ಬಲು
ಕಷ್ಟದೆಷ್ಟು ಸಾಧಿಸಲೇನೋ
ಕೆಟ್ಟಗುಣವ ಬಿಟ್ಟು ದಿಟ್ಟ ಶ್ರೀರಾಮನ
ಗಟ್ಯಾಗಿ ನಂಬಲು ಮುಕ್ತಿಕಾಣೊ ೩

೧೯೭

ಆವುದು ಸ್ಥಿರವೆಲೋ ಮನವೆ ಇದು ಮಾಯವು ಕಾಣೆಲೊ ಪ

ಆವದು ಸ್ಥಿರವೆಲೋ ಮಾಯವಿದೆಲ್ಲವು
ಭಾವದಿ ಕುದಿಯುತ ನೋಯುವಿ ಯಾಕೆಲೊ ಅ.ಪ

ಅರ್ಥವೆಂಬುವುದೆಲ್ಲ ವ್ಯರ್ಥವು ಮೃತ್ಯು ತಿಳಿಯೆ ನಿಖಿಲ
ಅರ್ತುವಿಚಾರಿಸು ಸಾರ್ಥಕವಾವುದು
ಮರ್ತುಕೆಡದೆ ಭವನಿರ್ತದಿಂ ಗೆಲೆಯೆಲೊ ೧

ಸತಿಸುತರಿವರೆಲ್ಲ ಹಿತವಿರಲತಿ ಸೇವಿಪರೆಲ್ಲ
ಗತಿಸಲು ಭಾಗ್ಯವು ಹಿತದೋರಿದವರೇ
ಅತಿಜರೆಯುತ ನಿನ್ನ ವ್ಯಥೆಯ ಬಡಿಪರೆಲೊ ೨

ಒಂದಿನ್ಹೋಗ್ವುದಂತು ತಪ್ಪದು ನೋಯುವುದ್ಯಾಕಿಂತು
ಇಂದು ನಾಳೆನ್ನದೆ ತಂದೆ ಶ್ರೀರಾಮನ
ಬಂಧುರಂಘ್ರಿಗಳಿಗ್ಹೊಂದಿ ನೀ ಸುಖಿಯಾಗೊ ೩

೧೯೮

ಆಸೆಗೆ ಮೇರೆಯನು ನಿರ್ಮಿಸಿದಿಯಿಲ್ಲವೋ
ಬೇಸರವೆ ಇಲ್ಲಿದಕೆ ಎಷ್ಟಾದರಕಟ ಪ

ಅನ್ನ ಸಿಗದ್ಹೊತ್ತಿನಲಿ ಅನ್ನ ಸಿಕ್ಕರೆ ಸಾಕು
ಅನ್ಯಮೇನೊಲ್ಲೆಂದು ನಿನ್ನ ಕೋರುವುದು
ಅನ್ನ ಚೆನ್ನಾಗಿ ಸಿಗಲು ತಣ್ಣಗಿರದುಂಡುಟ್ಟು
ಹೊನ್ನು ಚಿನ್ನಕೆ ಸೋತು ಬನ್ನಬಡಿವುದಭವ ೧

ಕಡುಕ್ಷೇತ್ರ ಮಾನ್ಯತನಗಡವಿ ತುಂಬಿರ್ದರು
ಮಿಡುಕುವುದು ತಡೆಯದೆ ಎಡಬಲದಲಿರುವ
ಬಡವರಾಸೆಗೆ ಕಂಡು ಪಡೆವ ಲವಲವಿಕೆಯಿಂ
ಬಿಡದೆ ಅವರಿಗೆ ಕೆಡುಕು ಹುಡುಕುವುದು ಹರಿಯೆ ೨

ಪೊಡವಿಯೆಲ್ಲನು ಒಂದೇ ಕೊಡೆಯಿಂದಾಳಲು ಮತ್ತು
ಪಡೆಯಲಿಚ್ಛಿಪುದಿತರ ಪೊಡವಿಪರ ರಾಜ್ಯ
ಸುಡುಗಾಡು ಕಡೆತನಕ ಸುಡುಸುಡೀ ಆಸೆಯನು
ಬಿಡಿಸೆನ್ನ ರಕ್ಷಿಸೈ ಒಡೆಯ ಶ್ರೀರಾಮ ೩

೧೯೯

ಆಸೆ ತೋರಿಸಿ ಈಶ ನಿರಾಸೆಮಾಳ್ಪರೆ
ಲೇಸೋ ನಿನಗೆ ಶೇಷಶಾಯಿ ಶ್ರೀಶ ಅಭಿಲಾಷಿಗಳಿಗೆ ಪ

ಬಡಜನರ ಪರ್ವತ ಒಡಲ ಆಸೆಯ
ಕೊಡುವೆನೆಂದು ನುಡಿಯಲವರು
ಎಡೆಬಿಡದೆ ಬೇಡಿ ಬೇಡಿ ಕಾಡಿ ಕಾಡಿ
ಕಡೆಗೆ ನೋಯ್ವರು ೧

ಆಡಿದ್ಯಾತಕೊ ವಾಕ್ಯ ಸುಳ್ಳು ಮಾಡಿದ್ಯಾತಕೊ
ಖೋಡಿದೈವಿನಾ ಬೇಡುವಂತೆ ನಿನ್ನ
ಬೇಡಿಕೊಂಬೆ ಗಾಢಮಹಿಮ
ನೋಡದಿರೊಳಿತಿತ್ತಾಡಿದ್ಯಾಕ ೨

ರೂಢಿಗಧಿಕನೆ ದಯವ ಮಾಡು ಎನ್ನೊಳು
ಮೂಢತನದಿ ನಾ ಮಾಡಿದಂಥ

ಕೇಡುಗುಣಗಳೆಣಿಸದೆನ್ನೊ
ಳಾಡಿದ್ವಾಕ್ಯ ನೀಡು ಶ್ರೀರಾಮ ೩

೨೦೦

ಆಸೆನೀಗೋ ಹೇಸಿಮನವೆ
ಕೇಶವನಂಘ್ರಿ ದಾಸನಾಗೊ ಪ

ಸಕಲಭೋಗಭಾಗ್ಯ ಬರುವ
ಅಖಿಲ ಸುಖದು:ಖಂಗಳೆಲ್ಲ
ಭಕುತಿದಾರ್ಯಗರ್ಪಿಸಿ ಹರಿ
ಭಕುತಿಯಿಂದಪಮೃತ್ಯು ಗೆಲಿಯೊ ೧

ವಂದನೆ ಸ್ತುತಿ ಮಾನ ಮನ್ನಣೆ
ಬಂದು ಕುಂದು ನಿಂದೆಯೆಲ್ಲ
ಮಂದರಾದ್ರಿಯ ನಿಲಯಗೆಂದಾ
ನಂದದಿಂ ಭವಬಂಧ ಗೆಲಿಯೊ ೨

ಪೊಡವಿಸುಖಕೆ ಮೋಹಿಸದೆ ನೀ
ಕೆಡುವಕಾಯಮೋಹ ತೊಡೆದು
ಒಡೆಯ ಶ್ರೀರಾಮನಂಘ್ರಿ ಕಮಲ
ಧೃಢದಿ ಭಜಿಸಿ ಮುಕ್ತಿ ಪಿಡಿಯೊ ೩

೨೦೧

ಇದನೆ ಪಾಲಿಸೆನಗೆ ದೇವ
ಸುದಯದೇನುಕೊಟ್ಟರು ಒಲ್ಲೆ ಪ

ಸದಾ ಎಡೆಬಿಡದೆ ನಿಮ್ಮ
ಸದಮಲ ನಾಮೆನ್ನೊದನಕೆ ಅ.ಪ

ಹಲವು ಚಿಂತನೆಯೊಳಗಿರಲಿ
ನಲಿಯುತಿರಲು ಮಲಗಿರಲಿ
ಚಲಿಸದೆ ತವ ಚೆಲುವಮೂರ್ತೆ
ನ್ನೊಳನೇತ್ರದ್ವೊಳೆಯುತಿರಲಿ ೧

ಘನತರದ ದುಃಖದೊಳಗೆ
ಅನುಪಮ ಆನಂದದೊಳಗೆ
ಕನಸುಮನಸಿನೊಳಗೆ ನಿಮ್ಮ
ನೆನವು ಕ್ಷಣ ಮರೆಯದಂತೆ ೨

ಕ್ಷೇತ್ರದಿರಲಿ ಯಾತ್ರದಿರಲಿ
ಧಾತ್ರಿ ತಿರುಗುತ್ತಿರಲಿ ಜಗ
ತ್ರಾತ್ರ ಶ್ರೀರಾಮ ನಿಮ್ಮ ಪಾದ
ಮಾತ್ರೆನ್ನ ಮಂಡೆಮೇಲೆ ಇರಲಿ ೩

೨೦೨

ಇದು ಎಂಥ ಸವಿ ಇಹ್ಯದು ಶ್ರೀಹರಿ ನಾಮ
ಮಧುಗಿಂತ ಮಧುವಿಹ್ಯದು ಪ

ಅಧಮ ಮನಸೇ ನೀನು ಸ್ವಾದ ಸವಿದುನೋಡೋ
ಅಧಿಕ ಅಮೃತಕಿಂತ ಮಾಧುರ್ಯ ತುಂಬಿಹ್ಯದು ಅ.ಪ

ಸುಧೆಗಿಂತ ಸುಧೆಯಿಹ್ಯದು ಮೃಷ್ಟಾನ್ನದ
ಮೃದುಗಿಂತ ಮೃದುವಿಹ್ಯದು
ವದನದೊಳಿಟ್ಟರೆ ವಿಧವಿಧದ್ವಸುತೃಷೆ ಸದೆದು
ಸದಮಲಸುಖ ಒದಗಿಸಿ ಕೊಡುವುದು ೧

ಶುಚಿಗಿಂತ ಶುಚಿಯಿಹ್ಯದು ಹೆಚ್ಚಿಗೆ ಹೆಚ್ಚು
ರುಚಿಗಿಂತ ರುಚಿಯಿದ್ಯದೋ
ಉಚ್ಚಿಷ್ಟರಾಗದೆ ಬಚ್ಚಿಟ್ಟು ಸುರಿವರ್ಗೆ
ನಿಶ್ಚಲಸುಖಪದ ಮೆಚ್ಚಿ ತಾ ಕೊಡುವುದು ೨

ಶಾಶ್ವತಸುಖವೀಯುವುದೋ ಭವರೋಗ
ಕೌಷಧ ಮಾಗಿಪ್ಪದೋ
ದಾಸಜನರಿಗನುಮೇಷ ಸವಿಯುದೋರಿ
ಪೋಷಿಸುತಿರುವುದು ಶ್ರೀಶ ಶ್ರೀರಾಮನಾಮ ೩

೨೦೩

ಇನ್ಯಾಕೆ ಭವಬಾಧೆ ಇವಗೆ
ಪನ್ನಂಗಶಯನನಡಿ ಚೆನ್ನಾಗಿ ಭಜಿಪವಗೆ ಪ

ದುರಿತ ದುರ್ಗುಣಗಳನು ತರಿದೊಟ್ಟಿ ನ
ಶ್ವರದ ಸಿರಿಯನಾಪೇಕ್ಷಿಸಿದೆ ನಿರುತ ಮಾನಸದಿ
ಪರಕೆ ಪರತರವೆನಿಪ ಹರಿಯಂಘ್ರಿ ಎಡೆಬಿಡದೆ
ಸ್ಮರಿಸುತ ಮನದೊಳಗೆ ಹರುಷಬರುವವಗೆ ೧

ಹೀನಸಂಸಾರದ ನಾನಾ ಸಂಪದವೆಲ್ಲ
ಶ್ವಾನನ ಕನಸಿನಂತೇನಿಲ್ಲವೆನುತ
ಜ್ಞಾನದೊಳಳವಟ್ಟು ಜಾನಕೀಶನ ಧ್ಯಾನ
ಮಾನಸದಿ ಒಲಿಸಿಕೊಂಡಾನಂದಿಸುವವಗೆ ೨

ಹೇಸಿಯ ಪ್ರಪಂಚದ್ವಾಸನವನಳುಕಿಸಿ
ದಾಸಜನ ಸಂಪದವೆ ಶಾಶ್ವತವೆನುತ
ಶ್ರೀಶ ಶ್ರೀರಾಮನ ಸಾಸರನಾಮಗಳ
ಧ್ಯಾಸದ್ಹೊಗಳುತ ಸಂತೋಷದಿರುವವಗೆ ೩

೨೦೪

ಇನ್ನೆಲ್ಲಿತನಕ ಇವಗೆ ದುರ್ಬವಣೆ ಹರಿಯೆ ನಿನ್ನ
ಉನ್ನತವಾದ ಮರೆಬಿದ್ದ ಬಳಿಕ ಪ

ಮಂದಮತಿ ತೊಲಗದು ಕುಂದು ನಿಂದೆ ಅಳಿವಲ್ಲದು
ಮಂದಿಮಕ್ಕಳ ಮೋಹವೊಂದು ಕಡಿವಲ್ಲದು

ಸಿಂಧುಶಯನನೆ ಗೋವಿಂದ ನಿಮ್ಮ ಚರಣ
ವೊಂದೆ ಮನದಲಿ ಭಜಿಸಾನಂದಪಡಿವಲ್ಲದು ೧

ಮೋಸಮರವೆ ಹರಿವಲ್ಲದು ಆಶಪಾಶ ಬಿಡವಲ್ಲದು
ಹೇಸಿ ಸಂಸಾರದ ದುರ್ವಾಸನೆಯು ಹಿಂಗದು
ದೂಷಣೆಗೆ ನೋಯುವುದು ಭೂಷಣೆಗೆ ಹಿಗ್ಗುವುದು
ದೋಷದೂರನೆ ನಿನ್ನ ಧ್ಯಾಸನಿಲ್ಲವಲ್ಲದು ೨

ಕೃಪಣತ್ವ ಮದಮೋಹ ಕಪಟ ಮತ್ಸರಬುದ್ಧಿ
ಚಪಲತನ ಅತಿಕ್ರೋಧ ಕಪಿಮನದ ಚೇಷ್ಟೆ
ಈಪರ್‍ಯೊಂದೂ ಅಳಿವಲ್ಲದು ಅಪರೋಕ್ಷ ನಿಲ್ಲವಲ್ಲದು
ಅಪ್ಪ ಶ್ರೀರಾಮ ನಿಮ್ಮ ಜಪತಪ ಸಿದ್ಧಿಸವಲ್ಲದು ೩

೨೦೫

ಇನ್ನೇನು ಬಲ್ಲವನು ನಾನಲ್ಲ ಹರಿಯೆ
ನಿನ್ನ ಧ್ಯಾನಧಿಕೆಂಬುದೊಂದೆ ನಾ ಬಲ್ಲೆ ಪ

ನಿನ್ನ ಧ್ಯಾನವೆ ಮರೆವ ತರಿದ್ಹಾಕುವುದೆಂಬೆ
ನಿನ್ನ ಧ್ಯಾನವೆ ಅರಿವ ಸ್ಥಿರ ಮಾಳ್ಪುದೆಂಬೆ
ನಿನ್ನ ಧ್ಯಾನವೆ ಭವದ ಶರಧಿ ಹೀರುವುದೆಂಬೆ
ನಿನ್ನ ಧ್ಯಾನವೆ ಪರಮ ಸಿರಿ ನೀಡ್ವುದೆಂಬೆ ೧

ನಿನ್ನ ಧ್ಯಾನವೆ ದು:ಖದೂರ ಮಾಡುವುದೆಂಬೆ
ನಿನ್ನ ಧ್ಯಾನವೆ ಸುಖದ ವಾರಿಧಿಯೆಂಬೆ
ನಿನ್ನ ಧ್ಯಾನವೆ ಮುಖ್ಯ ಚಾರುವೇದಗಳೆಂಬೆ
ನಿನ್ನ ಧ್ಯಾನವೆ ಜ್ಞಾನಮೂಲಸಾರೆಂಬೆ ೨

ನಿನ್ನ ಧ್ಯಾನವೆ ತತ್ವರೂಪವಾಗಿಹ್ಯದೆಂಬೆ
ನಿನ್ನ ಧ್ಯಾನವೆ ಮುಕ್ತಿಮೂಲಾಧಾರೆಂಬೆ
ನಿನ್ನ ಧ್ಯಾನವೆ ಭಕ್ತ ಜನಪ್ರಾಣಪದಕೆಂಬೆ
ಎನ್ನಯ್ಯ ಶ್ರೀರಾಮ ನಿನ್ನಿಂದೆ ನಾನೆಂಬೆ ೩

೨೦೬

ಇರಲಯ್ಯಾ ಶ್ರೀಹರಿ
ಇರಲಯ್ಯಾ ದಾಸನ ಮೇಲೆ ದಯೆ ಪ

ಮರಿಯಾದೆ ಹೋಗಲಿ ಮರಿಯಾದೆ ಇರಲಿ
ಧರೆಯಮೇಲೆ ಇವ ಇರುವತನಕ ದಯೆ ೧

ದು:ಖದಿಂದಿರಲಿ ನಾ ಸುಖದಿಂದಿರಲಿ
ನಿಖಿಲರು ಜರಿಯಲಿ ಭಕುತನಮೇಲೆ ದಯೆ ೨

ಬಂದದು ಬರಲಿ ಮಮ ತಂದೆ ಶ್ರೀರಾಮ ನಿಮ್ಮ
ಬಂಧುರಧ್ಯಾನಮಾತ್ರವೊಂದೆನ್ನಗಲದಂತೆ ೩

೨೦೭

ಇಂದಿಗೆ ಕಡೆಮಾಡು ಎನ್ನ ಮಂದಬುದ್ಧಿ
ತಂದೆ ಕೇಳಿ ಮರೆಬಿದ್ದೆ ನಿನ್ನವರ ಸುದ್ದಿ ಪ

ಒಪ್ಪಿದ್ಯವಲಕ್ಕಿಗೆ ಒಪ್ಪಿ ಘನ ಬಡತನವ
ತಪ್ಪಿಸಷ್ಟೈಶ್ವರ್ಯ ಅಪ್ಪಿಕೊಂಡಿತ್ತೀ
ಕಪ್ಪುಕುಲದವನಿಂಗೆ ತುಪ್ಪ ಸಕ್ಕರೆಯನ್ನು
ಗಪ್ಪತ್ತಿಲುಂಡು ಮುಕ್ತಿ ಸಂಪದ ೧

ವಿದುರನರ್ಧಾಂಗಿಯ ಸದಮಲದ ತವಪಾದ
ಸದನಕ್ಕೈಯಲು ಪದುಮವದನೆ ಮೈ ಮರೆದು
ಕದಳಿಫಲ ಮೇಲ್ಭಾಗ ವದನದಿಕ್ಕಲು ಸವಿದು
ಸದುಯಾಂಬುಧೊಲಿದಸಮಪದವಿ ದಯಮಾಡ್ದಿ ೨

ಅಧಮಾಧಮಾಗಿ ದುರ್ಮದದಿಂದ ಮತಿಗೆಟ್ಟು
ಸದಮಲ ಕುಲಪದ್ಧತಿ ವಿಧಿಯನ್ನು ಮರೆತು

ಅಧಮಕುಲಜಳಿಗೊಲಿದು ಮದುವ್ಯಾದ ಅಜಮಿಳಗೆ
ಒದಗಿ ಬಂದಂತ್ಯಕೆ ನಿಜಪದವಿ ಕರುಣಿಸಿದಿ ೩

ವರಧರ್ಮ ಹಿತಭಕ್ತ ನರನಿವರ ಲೆಕ್ಕಿಸದೆ
ಕರುಣದ್ವಿದುರನ ಮನೆಗೆ ಭರದಿ ಬಂದಿಳಿದಿ
ಪರಮಪಾವನ ನಿಮ್ಮ ಚರಣಭಕ್ತ್ಯೊಂದೆನಗೆ
ಕರುಣಿಸು ಮತ್ತಾವ ಸಿರಿಯ ನಾನೊಲ್ಲೆ ೪

ನಿನ್ನ ಎಂಜಲು ಉಣಿಸಿ ನಿನ್ನವರೊಳಾಡಿಸಿ
ನಿನ್ನ ಉನ್ನತ ಧ್ಯಾನವನ್ನೆ ದಯಮಾಡಿ
ಮನ್ನಿಸಿ ಸಲಹಯ್ಯ ನಿನ್ನ ದಾಸನೆಂದೆನಿಸಿ
ಎನ್ನಯ್ಯ ಶ್ರೀರಾಮ ನಿನ್ಹೊರತನ್ಯರಿಯೆ ೫

೨೦೮

ಇಂದಿರೇಶನ ಭಜಿಸೋ ಹೇ ಮನಸೆ ನೀ
ಕುಂದುವ ಜಗಮಾಯದಂದಕ್ಕೆ ಮೋಹಿಸದೆ ಪ

ಅರಿವಿನೀಸಮಯವ ಅರಲವ ಕಳೆಯದೆ
ಹರಿಶರಣರವಚನ ಶ್ರವಣ ಮಾಡುತ ನೀ ೧

ಮನುಷ್ಯ ಜನುಮದ ಫಲವ ನೆನೆಸೀನಿಜಜ್ಞಾನದಿ
ವನಜನಾಭನ ಕತೆ ಮನನಮಾಡನುದಿನ ೨

ಹೇಸಿಕೆಸಂಸಾರ ನಾಶನೆಂದರಿದು ನೀ
ಶ್ರೀಶ ಶ್ರೀರಾಮನ ನಿಜಧ್ಯಾಸದಿಟ್ಟೆಡೆಬಿಡದೆ ೩

೨೦೯

ಈ ನೀಚಮನಸಿಗೆ ಮಾಡಲಿನ್ನೇನು
ಥೂ ನಾಚಿಕಿಲ್ಲದಕೆ ಉಪಾಯವೇನು ಪ

ಹರಿಚರಣ ಸ್ಮರಿಸುವುದು ಹರಿದಾಟ ಮರಿವಲ್ಲದು
ಪಿರಿದುನುಡಿಯಾಡುವುದು ಕಿರಿಗುಣವ ಬಿಡದು
ಪರಲೋಕ ಬಯಸುವುದು ನಿರುತದಿಂ ನಡಿವಲ್ಲದು
ಶರಣರೊಡನೆನದಿಹ್ಯದು ಪರನಿಂದೆ ಬಿಡದು ೧

ಜ್ಞಾನನುಡಿ ಪೇಳುವುದು ನಾನೆಂಬುದಳಿವಲ್ಲದು
ಧ್ಯಾನದೊಳಗಿರುತಿಹ್ಯದು ಶ್ವಾನಕಲ್ಪನ್ಹಿಂಗದು
ದಾನಗುಣ ಬೋಧಿಪುದು ಜೀನತ್ವ ತೊರಿವಲ್ಲದು
ಆನಂದ ಬೇಡುವುದು ಹೀನಭ್ರಾಂತಿ ಬಿಡದು ೨

ವೇದಸುದ್ದ್ಹೇಳುವುದು ವಾದಬುದ್ಧಿಯ ಬಿಡದು
ಸಾದುಪಥದಾಡುವುದು ಭೇದ ಕಡಿವಲ್ಲದು
ವೇದಾಂತ ಕೇಳುವುದು ಸಾಧನಕೆ ಒಲ್ಲದು
ಪಾದಭಕ್ತಿ ಬೇಡುವುದು ಕ್ರೋಧ ತೊಡಿವಲ್ಲದು ೩

ನಾಮಭಜನೆ ಮಾಡುವುದು ತಾಮಸವ ತುಳಿವಲ್ಲದು
ಸ್ವಾಮಿಯೊಲುಮೆ ಕೋರುವುದು ಪಾರತ್ವ ಬಿಡದು
ಕಾಮಿತೊಲ್ಲೆನ್ನುವುದು ಭಾಮೆ ಭೂಮಿಪ್ರೇಮ ಬಿಡದು
ಕ್ಷೇಮ ಸದಾ ಬೇಡುವುದು ನೇಮನಿತ್ಯ ಒಲ್ಲದು ೪

ಶಾಸನವ ಪೇಳುವುದು ತಾಸು ಸ್ಥಿರ ನಿಲ್ಲದು
ನಾಶಜಗವೆನುತಿಹ್ಯದು ಕಾಸು ಒಲ್ಲೆನ್ನದು
ದೋಷನಾಶನ ಜಗದೀಶ ಶ್ರೀರಾಮನಡಿ
ದಾಸನಾನೆಂಬುವುದು ವಾಸನೆಯ ಬಿಡದು ೫

೨೧೦

ಉದ್ಧರಿಸೆನ್ನಯ್ಯ ಮುದ್ದು ಶ್ರೀಹರಿಯೆ
ಬಿದ್ದು ಬೇಡುವೆ ನಿಮ್ಮ ಪಾದಪದ್ಮದೊಳು ಪ

ಬದ್ಧಗುಣ ಬಚ್ಚಿಟ್ಟು ಶುದ್ಧ ಮನದವನಂತೆ
ಪದ್ಮನಾಭ ವಿಮಲ ಸುದ್ದಿಯು ಜನಕೆ
ಸುದ್ದಿ ಹೇಳುತ ಸತತ ಕದ್ದು ತಿನ್ನುವ ಎನ್ನ
ಬದ್ಧ ಮನಸಿನ ಡೊಂಕ ತಿದ್ದು ಬೇಗದೊಳು ೧

ನಂಬಿಗುಳ್ಳವನಂತೆ ಹೇಳುವ ಪರರ
ಅಂಬುಜಾಕ್ಷಯರೊಲುಮೆ ಹಂಬಲವ ಮನದಿ
ತುಂಬಿಕೊಂಡಿಹ್ಯ ಎನ್ನಡೊಂಕ
ಶಂಭುವಿನುತನೆ ತಿದ್ದಿ ಇಂಬುಗೊಡು ಜವದಿ ೨

ಸಫಲಮಾನಿಸನಂತೆ ಜಪಮಾತುಗಳಾಡಿ
ಕಪಟತ್ವದಿಂದಿತರ ಅಪಹರಿಸುವ
ಕುಪಿತ ಮನಸಿನ ಡೊಂಕ ಅಪರೂಪತಿದ್ದಿ ನುತ
ಸುಫಲದಾಯಕ ಹರಿ ಕೃಪೆಮಾಡು ಜವದಿ ೩

ಹಸುತೃಷಳಿದವನಂತೆ ವಸುಧೆಜನರಿಗೆ ತೋರಿ
ಬಸವಳಿದು ಬಾಯಾರಿ ದೆಸೆಗೆಟ್ಟು ಪರರ
ಅಶನ ಬೇಡುಂಬ ಪುಸಿಯ ಮನಸಿನ ಡೊಂಕ
ಹಸನಾಗಿ ತಿದ್ದಿ ಲಕುಮೀಶ ಒಲಿ ದಯದಿ ೪

ಪಾಮರಮನದ ದುಷ್ಕಾಮಿತಗಳನೆಲ್ಲ
ಕ್ಷೇಮದಿಂ ಕಡೆಹಾಯ್ಸಿ ಸ್ವಾಮಿಯೇ ನಿಮ್ಮ
ನಾಮಧ್ಯಾನದ ನಿತ್ಯನೇಮವನು ಪಾಲಿಸಿ
ಪ್ರೇಮದ್ಹಿಡಿಕರ ಶ್ರೀರಾಮಪ್ರಭುತಂದೆ ೫

೨೧೧

ತಿಳಿಸು ದಾಸನ ನಿರುತ ನಿಲಯ ಕರುಣಾರ್ಣವ
ತಿಳಿಯದಾಡಿದ ವಚನ ಹೊಲೆಗಲಿಸದಿಳೆಯೊಳು ಪ

ಗುಪಿತದಿಂ ತವಪಾದ ಜಪಿಸಿ ಆನಂದಿಸದೆ
ಅಪರಾಧಿಯಾಗಿರುವೆ ಕೃಪೆಯಿಂದ ಕ್ಷಮಾಮಾಡಿ ೧

ಬಿನುಗುಮತಿಗೈದಂಥ ಘನತಪ್ಪುಗಣಿಸಧೆ
ಚಿನುಮಯಾತ್ಮನೆ ಬೇಗ ಕನಿಕರದಿ ಮೊರೆ ಕೇಳಿ ೨

ಒಲದುಬಾರೈ ಸ್ವಾಮಿ ಬಲಗೊಂಬೆ ತವಪಾದ
ಸುಲಭಭಜಕರಿಗತಿ ಚೆಲುವ ಶ್ರೀರಾಮಯ್ಯ ೩

೨೧೨

ಎನ್ನಪಾಪವೇ ಎನ್ನ ಕಾಡುವುದು ಎನ್ನಯ್ಯ ಹರಿಯೆ
ನಿನ್ನದಿದರೊಳನ್ಯವೇನಿಹ್ಯದು ಪ

ಮುನ್ನಮಾಡಿದ ಪಾಪಕರ್ಮವು
ಬೆನ್ನಬಿಡದೆ ಕಾಡುತಿರಲು
ನಿನ್ನಗನ್ನುವುದಾವ ನ್ಯಾಯವು
ಪನ್ನಂಗಶಾಯಿ ಸನ್ನುತಾಂಗ ಅ.ಪ

ನಾನಾಜೀವಿಗಳ ಪ್ರಾಣಹಾರಿಸಿದೆ ಅನ್ಯರಿಗೆ ಬಿಡದೆ
ಜಾಣನುಡಿ ಪೇಳಿ ಹಾನಿ ಬಯಸಿದೆ ದುಗ್ಗಾಣಿ ರಿಣಕಾ
ಗೇನುಯಿಲ್ಲೆಂದಾಣೆ ಮಾಡಿದೆ ನಾ ನಿನ್ನ ಮರೆದೆ
ಏನು ತಿಳಿಯದೆ ಜ್ಞಾನ ಪೇಳಿದೆ
ಜ್ಞಾನವಂತರಿಗ್ಹೀನ ನುಡಿದೆ
ಮಾನವಂತರ ಮಾನ ಕಳೆದೆ
ಹೀನಬವಣೆಯೊಳ್ಬಿದ್ದೆನಭವ ೧

ಅಂಗನೆಯರ ಸಂಗ ಬಯಸಿದೆ ದುರಿತಕ್ಕೆ ಹೇಸದೆ
ಅಂಗನೆಯರ ಗರ್ಭ ಭಂಗಿಸಿದೆ ಅನ್ಯರ ಒಡವೆಗೆ
ಕಂಗಳಿರೆ ಭಂಗಕೊಳಗಾದೆ ಮಂಗ ನಾನಾದೆ
ಭಂಗಗೈದೆನು ನಿತ್ಯ ನೇವಹಕೆ
ಅಂಗನೆನಿಸದೆ ಬಡವರ್ದ್ವಿಮಹಕೆ

ನುಂಗಿ ಕೂತೆನು ಪರರ ದ್ರವ್ಯ
ನ್ಯಾಕ್ಯಾಂಗೆ ನಿನ್ನೊಲಿಮೆನಗೆ ಅಭವ ೨

ಕೊಟ್ಟ ಒಡೆಯರಿಗೆರಡನೆಯ ಬಗೆದೆ ನಂಬಿ ಎನ್ನೊ
ಳಿಟ್ಟ ಗಂಟನು ಎತ್ತಿಹಾಕಿದೆ ಪಡೆದ ಮಾತೆಯ
ಬಿಟ್ಟು ಬೇಸರ ಮಾಡಿನೋಡಿದೆ ಭ್ರಷ್ಟನಾನಾದೆ
ದುಷ್ಟಗುಣಗಳನೊಂದುಬಿಡದೆ
ಶಿಷ್ಟಪದ್ಧತಿ ಜನಕೆ ಉಸುರಿದೆ
ಕೊಟ್ಟವಚನೊಂದು ನಡೆಸದಿಂದುಳಿದು
ದಿಷ್ಟೆಂದೆನ್ನ ಕೃತಿ ಪೇಳೆನಭವ ೩

ಒಂದೆ ಮನದವನಂತೆ ತೋರಿದೆ ಮರ್ತ್ಯದವರಿಗೆ
ಮುಂದೆ ಭಲಾಯೆಂದು ಹಿಂದೆ ನಿಂದಿಸಿದೆ ದೋಷವಿನಿತು
ಹೊಂದದವರಿಗೆ ಕುಂದು ಹೊರೆಸಿದೆ ನಾನೇ ಅಹುದಾದೆ
ಸಿಂಧುಶಯನ ಭಕ್ತರನ್ನು ಕಂ
ಡೊಂದಿಸದೆ ಮುಖವೆತ್ತಿ ನಡೆದೆ
ಮುಂದುಗಾಣದೆ ದೋಷ ಮಾಡಿದೆ–
ನೊಂದು ಪುಣ್ಯವನರಿಯೆನಭವ ೪

ಕೊಡುವ ಧರ್ಮಕೆ ಕಿಡಿಯನ್ಹಾಕಿದೆ ಕೂಡಿದ್ದವರಿಗೆ
ಕೆಡಕು ಬೋಧಿಸಿ ಒಡಕು ಹುಟ್ಟಿಸಿದೆ ಅಡಿಗೆ ಬಾಗಿ
ಮಿಡುಕುವವರಿಗೆ ದುಡುಕನಾಡಿದೆ ಕಡುಪಾಮರಾದೆ
ಪಿಡಿದು ಕಾಯುವ ಒಡೆಯನ್ಹೆಸರಿನ
ಮುಡಿಪು ನುಂಗಿ ಕಡುಪಾಪಾತ್ಮಾದೆನು
ಸುಡುಸುಡೆನ್ನಯ ಜನ್ಮವ್ಯಾಕಿನ್ನು
ಒಡೆಯ ಶ್ರೀರಾಮ ಸಾಕುಮಾಡೋ ೫

೨೧೩

ಎನ್ನ ಪೂರ್ವದ ಕರ್ಮ ಬೆನ್ನಟ್ಟಿ ಕಾಡಲು
ನೀ ಮಾಡುವುದೇನೊ ರಂಗ ಪ

ಕೊಟ್ಟು ಕುದಿದೆನು ಮನದಿ ಇಟ್ಟುಂಗಿಸಿದೆ ಜವದಿ
ಬಿಟ್ಟುಂಡೆನತಿಥಿಗಳೆಷ್ಟೆಷ್ಟೋ ನಾನು
ಕೆಟ್ಟ ಕೃತ್ಯವ ಮಾಡಿ ಕೊಟ್ಟೆ ಪರರಿಗನಿಷ್ಟ
ನಿಷ್ಠವಂತರ ಕಂಡು ನಿಷ್ಠೂರವಾಡಿದೆ ೧

ಮತಿಭ್ರಷ್ಟನಾಗಿ ಪರಸತಿಯರಿಗೆ ಮನಸೋತೆ
ಇತರ ವನಿತೆಯ ಗರ್ಭ ಪತನಗೈಸಿದೆನೊ
ಕೃತಿಮಥನದಿ ಬಲುಹಿತಬೋಧವನೆ ಬೋಧಿ
ಸುತ ನಾಶಗೈದೆನ್ನಹಿತಕಾಗಿ ಪರರ ೨

ಕೊಡುವರಿಗೆ ಕಿಡಿಯಿಟ್ಟೆ ಬಡವರನು ಬಳಲಿಸಿದೆ
ಒಡನುಡಿದ ಭಾಷೆಯ ನಡೆಸಲಿಲ್ಲೊಂದು
ಒಡಗೂಡಿರ್ದರರೊಳು ಕೆಡಕುಹುಟ್ಟಿಸಿ ನಾನು
ಜಡತನದಿ ದಿನಗಳೆದೆ ಕಡುಭ್ರಷ್ಟನಾಗಿ ೩

ಪರಧನಪಹರಿಸಿದೆ ಪರರ ಗೃಹ ಮುರಿದೆನು
ವರ ಮಾತಾಪಿತರ ಬಲ್ವರಿಯಿಂ ನೋಯಿಸಿದೆ
ಗುರುಹಿರಿಯರ ಜರೆದೆ ಪರನಿಂದೆಗೆಳಿಸಿದೆ
ಗರುವದಿಂ ಚರಿಸಿದೆ ಶರಣಜನರೊಂದಿಸದೆ ೪

ಕೃಪಣತ್ವ ಕಳಿಲಿಲ್ಲ ಚಪಲ ಚೇಷ್ಟಳಿಲಿಲ್ಲ
ಚಪಲಾಕ್ಷನ ದಿನದಿ ಉಪವಾಸ ಗೈಯಲಿಲ್ಲ
ಸುಪಥದಿ ಮನವಿಟ್ಟು ಶಪಿಸುತಲೆಡೆವಿಡದೆ
ಜಪಿಸಿ ಶ್ರೀರಾಮಪಾದ ಕೃಪೆಯ ಪಡೆದವನಲ್ಲ ೫

೨೧೪

ಎಲ್ಲನು ನಿನಗೆ ಕೂಡಿತಯ್ಯ ಹರಿ
ಪುಲ್ಲನಾಭ ದಯ ಮಾಡಯ್ಯ ಪ

ಖುಲ್ಲನು ನಾಬಲು ಎಲ್ಲಿಯುಸಲ್ಲದೆ
ತಲ್ಲಣಿಸುತ ನಿನ್ನ ಬಲವಂದೆ ದೇವ ದೇವ ಅ.ಪ

ಧೃಢಗುಣ ಎನ್ನೊಳಿಲ್ಲಯ್ಯ ಬಲು
ನುಡಿ ಹೀನ ನಾಕಡು ಪಾಪ್ಯಯ್ಯ
ನಡೆ ನುಡಿ ಇಲ್ಲದೆ ಕಡುನೊಂದೀಗ ನಿಮ್ಮ
ನ್ನುಡುಕುತ ತಿರುಗುವೆ ಜಡಜಾಕ್ಷನೆ ಪೊರೆ ೧

ಪರರದ್ರವ್ಯವಪಹರಿಸಿದೆನೊ ನಾ
ಪರಮನೀಚನಾಗಿ ಚರಿಸಿದೆನೊ
ಮರವೆಲಿ ಅಗಣಿತ ದುರಿತವನುನಾ
ಜರೆಯದೆ ಪರಿಪರಿ ಮಾಡಿದೆನೊ
ಮರೆವೆಲಿ ಮಾಡಿದ ಪರಮ ಎನ್ನತಪ್ಪು
ಕರುಣಾಕರನೆ ನೀಕರುಣದಿ ಕ್ಷಮಿಸಯ್ಯ ೨

ಶರಣಾಗತ ವತ್ಸಲನೆಂದು ನಿನ್ನ
ಮರೆಯಹೊಕ್ಕೆನೆಯ್ಯ ದಯಾಸಿಂಧು
ಮೊರೆಕೇಳು ಭಕ್ತರ ಪ್ರಿಯಬಂಧು ಎನ್ನ
ದುರಿತದಿ ಕಡೆ ಹಾಯ್ಸಯ್ ಇಂದು
ಶಿರಬಾಗಿ ನಿಮಗೆ ಸೆರೆಗೊಡ್ಡಿ ಬೇಡುವೆ
ಕರಪಿಡಿ ಬಿಡಬೇಡ ಸಿರಿವರ ಶ್ರೀರಾಮ ೩

೨೧೫

ಎಲ್ಲಿರುವೆ ಬಾರಯ್ಯದೇವ
ಬಲ್ಲಿದ ನೀನೆ ಅನಾಥಜನಜೀವ ಪ

ಪುಲ್ಲನಾಭ ನೋಡೆನ್ನ ಪರಿಭವದ ದುಃಖವನು
ನಿಲ್ಲದೆ ದಯಮಾಡು ಬೇಗದೊಳಭವ ಅ.ಪ

ಕ್ಷಣಕ್ಷಣಕೆ ಒದಗುತಿಪ್ಪ ದಣಿವು ಬೇನ್ಯಾಪತ್ತು
ಅನುಪಮ ಬಡತನದ ಘನ ಘನ ವಿಪತ್ತು
ದಿನದಿನ ಪರರನು ಮಣಿದುಬೇಡುವ ಹೊತ್ತು
ಇನಿತೆಲ್ಲ ಕನಿಕರದಿ ನೀನೆ ಕಳೆಯಭವ ೧

ಕನಕ ವಸ್ತ್ರಾಭರಣ ವನಿತೆಗ್ಹಾಕುವ ಚಿಂತೆ
ಧನಧಾನ್ಯವಿಲ್ಲೆಂಬ ಎಣಿಕಿಲ್ಲದ ಚಿಂತೆ
ಮನಕೆ ತುಸುಗೊಡದ ರಿಣಬಾಧದ್ದತಿ ಚಿಂತೆ
ವನಜಾಕ್ಷ ಕೃಪೆಯಿತ್ತು ನೀನೆ ಬಿಡಿಸಯ್ಯ ೨

ಧರೆಯಸುಖೆನಗಿಲ್ಲೆಂಬ ಪರಿಪರಿಯು ಉರಿ ತಾಪ
ಪರರಸೇವೆಯ ಮಾಡ್ವ ಪರಮ ಪರಿತಾಪ
ಜರಜರಕೆ ಬಂದು ಆವರಿಸುವುವು ಮಹಪಾಪ
ಪರಹರಿಸೆಲವೋ ಶ್ರೀರಾಮಪ್ರಭು ಭೂಪ ೩

೨೧೬

ಎಲೆ ಎಲೆ ಎಲೆ ಮನ ಉಳಿ ಉಳಿ ಸಿರಿ
ವಲ್ಲಭನ ಭಜನೆಯೋಳ್ನಲಿ ನಲಿ ಪ

ಮಲಿನ ಮಲದಭಾಂಡ ತೊಳಿತೊಳಿ ಈ
ಹೊಲೆಮಯ ಸಂಸಾರ ತುಳಿ ತುಳಿ ಅ.ಪ

ಶಮೆಶಾಂತಿ ಖಡ್ಗವ ಹಿಡಿಹಿಡಿ ಕಾಲ
ಯಮನ ಭಟರ ಭೀತಿ ಕಡಿ ಕಡಿ
ಕ್ರಮದಿ ಬಿಡದೆ ಸತ್ಯ ನುಡಿ ನುಡಿಮಹ
ಸುಮನಸಜನ ಕೃಪೆ ಪಡಿ ಪಡಿ
ವಿಮಲ ಸನ್ಮಾರ್ಗದಿ ನಡಿ ನಡಿ
ರಮಾರಮಣನ ಪಾದಕಮಲ್ಪಿಡಿ ಹಿಡಿ ೧

ಮಾನಾಪಮಾನ ಸಮ ತಿಳಿ ತಿಳಿ ನಿಜ
ಜ್ಞಾನ ಬೆಳಗಿನೊಳು ಸುಳಿ ಸುಳಿ
ನಾನಾ ಕಲ್ಪನೆ ಕಳಿ ಕಳಿ ಸ್ಥಿರ
ಧ್ಯಾನ ದಾಸರೊಳು ಹೊಳಿ ಹೊಳಿ
ಹೀನ ಭವಾಂಬುಧಿಬಂಧ ಗೆಲಿ ಗೆಲಿ ಹರಿ
ಧ್ಯಾನ ಅಮೃತ ಸದಾ ಮೆಲಿ ಮೆಲಿ ೨

ಗಜಿಗಜಿ ಮಾಯ ಮುಸುಕು ತೆಗಿ ತೆಗಿ ನೀ
ಕುಜನ ಕುಹಕಸಂಗ ಒಗಿ ಒಗಿ
ಸುಜನ ಸುಸಂಗವ ಬಗಿ ಬಗಿ ಬಾಳು
ಭಜನಾನಂದಕೆ ತಲೆದೂಗಿದೂಗಿ
ಭಜಿಸಿ ಶ್ರೀರಾಮಪಾದ ಲಗಿಲಗಿ ಹಿಗ್ಗಿ
ನಿಜಮುಕ್ತಿ ಸಾಮ್ರಾಜ್ಯದಿ ಜಿಗಿ ಜಿಗಿ ೩

೨೧೭

ಎಲೆ ಮನಸೆ ಎಲೆ ಮನಸೆ ಹರಿಪಾದ ನಂಬು
ಸುಲಭ ಭಕ್ತರಿಗಾತ ಕೊಡುವ ನಿನಗಿಂಬು ಪ

ಕುಲಹೀನನೆನಬೇಡ ಹಳಿದುಕೊಳ್ಳಲಿ ಬೇಡ
ತಿಳಿಗೇಡಿಯೆನಬೇಡ ಕಳವಳಿಸಬೇಡ
ಮಲಿನವೆಂದೆನಬೇಡ ಜಳಕ ಮಡಿಯೆನಬೇಡ
ತಿಳಿದು ಭಜಿಪರ ಬೆಂಬಲನು ನಾನೆಂಬ ೧

ತಪವ ಮಾಡಲಿ ಬೇಡ ವಿಪಿನ ಸೇರಲಿಬೇಡ
ಜಪವ ಮಾಡಬೇಡ ಕೌಪೀನ ಬೇಡ
ಕಪಟಬುದ್ಧಿಯ ಬಿಟ್ಟು ಸಫಲ ಮಾನಸದಿಂದ
ಆಪತ್ತು ಬಂಧುಯೆನೆ ಕೃಪೆಮಾಡ್ವ ಬಂದು ೨

ದಾನಧರ್ಮವು ಬೇಡ ನಾನಾ ಕರ್ಮವು ಬೇಡ
ಮೌನದೊಳಿರಬೇಡ ಏನುವ್ರತಬೇಡ
ಧ್ಯಾನದಾಯಕ ಎನಗೆ ನೀನೆ ಗತಿಯೆಂದೆನಲು
ದೀನದಯ ಶ್ರೀರಾಮ ಮಾಣದೆ ಕಾಯ್ವ ೩

೨೧೮

ಎಲೆ ಮನಸೆ ನಾಂ ಪೇಳ್ವ ಬುದ್ಧಿ ಮಾತುಗಳ
ಕಲಿತು ಜಾಣನಾಗಿ ನಿಜಸುಖದಿ ಬಾಳು ಪ

ಪರನಿಂದೆ ಬೆರೆಸದಿರು ನಿರುತರನು ಜರಿಯದಿರು
ದುರಿತದೊಳಗುರುಳದಿರು ಪರಚಿಂತೆ ಮಾಡು
ಗುರುಹಿರಿಯ್ರುರಳಿಯದಿರು ದುರುಳರೊಳಗಾಡದಿರು
ಹರಿಯಶರಣರ ಸೇವೆ ಸ್ಥಿರವಾಗಿ ಮಾಡು ೧

ಮರವೆ ಪರದೆಯ ಹರಿ ಅರಿವಿನಮೃತ ಸುರಿ
ಸ್ಥಿರಜಾನ್ನದೊಳು ಸೇರಿ ಹರಿಚರಿತ ಬರಿ
ಹರಿದಾಟವನು ಮರಿ ಜರೆಮರಣದು:ಖ ತರಿ
ಪರಮಹರುಷದಿ ಮರೆ ದುರ್ವ್ಯಸನ ತೂರಿ ೨

ಕ್ರೋಧವನು ಕಡೆಮಾಡು ವಾದಬುದ್ಧಿಯ ದೂಡು
ಸಾಧುಜನರೊಳಗಾಡು ಶೋಧನ ಮಾಡು
ಖೇದವನು ಈಡ್ಯಾಡು ವೇದದರ್ಥವ ಮಾಡು
ಪಾದಸೇವೆಯ ಮಾಡು ಮಾಧವನ ಕೂಡು ೩

ಕಾಮಲೋಭವ ಕಡಿ ಭೂಮಿಮೋಹವ ತೊಡಿ
ಭಾಮೆಯರ ಪ್ರೇಮ ಬಿಡಿ ಕ್ಷೇಮಪಥ ಪಿಡಿ
ತಾಮಸದೂರಮಾಡಿ ಸಾವಧಾನದ್ಹಿಡಿ
ಕೋಮಲಾನಂದ ಪಡಿ ನೇಮದ್ದುಡುಕಾಡಿ ೪

ಮೋಸಪಾಶವ ಗೆಲಿ ಕ್ಲೇಶಗುಣಗಳ ತುಳಿ
ದಾಸಜನರೊಳು ನಲಿ ಶಾಶ್ವತವ ತಿಳಿ
ಹೇಸಿಕ್ವಾಸನೆಯಳಿ ದೋಷರಾಸಿಯಿಂದುಳಿ
ಶ್ರೀಶ ಶ್ರೀರಾಮನಲಿ ದಾಸನಾಗಿ ಸೆಳಿ ೫

೨೧೯

ಎಲೊ ರಂಗ ಎಲೋ ರಂಗನೇ
ಸಲಹೊ ಶುಭಾಂಗನೆ ಪ

ಜಯಕರ ಶ್ರೀಹರಿಯೆ ದಯವಂತನಾಗಯ್ಯ
ಭಯ ಭಕ್ತಿಯಲಿ ನಿಮ್ಮ ದಯವ ಬೇಡುವೆನಯ್ಯ ೧

ನಿನ್ನ ಭಕ್ತನು ನಾನು ಬನ್ನಬಡಿಸುವಿ ಯಾಕೋ
ಮುನ್ನಿನ ಭಕ್ತರಂತೆನ್ನನು ಸ್ಮರಿಸಯ್ಯ ೨

ಶರಣೆಂದು ವಿಭೀಷಣಗೆ ಕರುಣಿಸಿ ಲಂಕೆಯ
ಸ್ಥಿರಪಟ್ಟ ಕೊಟ್ಟಂಥ ಕರುಣಾಳು ಮೊರೆ ಕೇಳೊ ೩

ಯತಿವರನ ಯಾಗವ ಹಿತದಿ ರಕ್ಷಿಸಿದಂಥ
ಪತಿತಪಾವನ ಎನ್ನ ಹಿತದಿಂದ ಕಾಯೆಲೊ ೪

ಸತತ ನಿಮ್ಮಯ ಪಾದಸ್ತುತಿಯೊಳಿರಿಸಿ ಎನ್ನ
ಮೃತ್ಯುಬಾಧ್ಹರಿಸಯ್ಯ ಕ್ಷಿತಿವರ ಶ್ರೀರಾಮ ೫

೨೨೦

ಎಷ್ಟು ಪೊಗಳಿದರೇನೀ ಭ್ರಷ್ಟಮಾನವರು
ಶಿಷ್ಟಪದ್ಧತಿಗಳನಗಲಿ ಸೃಷ್ಟಿಕರ್ತ ನಿನ್ನ ಪಾದ ಪ

ಸ್ವಾಭಿಮಾನ ನೀಗಿ ದೇಹಾಭಿಮಾನ ತೊರೆಯದೆ
ಪ್ರಭುನಿನ್ನ ನಿಜಲೀಲೆ ಸೊಬಗು ತಿಳಿಯುವುದೆ ೧

ಭ್ರಷ್ಟ ಭ್ರಾಂತಿಗಳಳಿದು ದುಷ್ಟನಡೆ ನೀಗದೆ
ಶಿಷ್ಟರೊಡೆಯ ನಿನ್ನ ನಿಜಗುಟ್ಟು ತಿಳಿಯುವುದೆ ೨

ವಿಷಯವಾಸನೆ ನೀಗಿ ಹಸನುಮಾಡದೆ ಮನವ
ಶ್ರೀಶ ಶ್ರೀರಾಮ ನಿನ್ನ ದಾಸತ್ವಬಹುದೆ ೩

೨೨೧

ಎಷ್ಟು ಮಾತ್ರ ನಿಂದಲ್ಲದ್ದು ಹರಿ
ಸೃಷ್ಟಿಯೊಳಗೆ ಎನ್ನ ಹುಟ್ಟಿಸಿದ್ದು ಪ

ನಷ್ಟದೇಹ ಕೊಟ್ಟು ದುಷ್ಟ ಬವಣೆಯಿಂದ
ಕಷ್ಟದೊಳಗೆ ಎನ್ನ ನೂಕಿದ್ದು ಅ.ಪ

ಉಳಿದ ಪಾಪಶೇಷ ಕಳೆಯದಲೆ ಎನ್ನ
ಇಳೆಯವಾಸಕ್ಯಾಕೆಳೆಸಿದಲೇ
ನಳಿನನಾಭ ನಿನ್ನ ಬಳಿ ಇದೆ ನ್ಯಾಯವೆ
ಕಳವಳಪಡಲು ನಾನೊಳಿತೇನು ನಿನಗೆ ೧

ಎಷ್ಟು ರೀತಿ ಕಷ್ಟ ತಡಿಬೇಕೊ ಇ
ನ್ನೆಷ್ಟುದಿನ ಹೀಗೆ ಕಳೀಬೇಕೊ
ಇಷ್ಟು ಕರ್ಮ ಎನ್ನದಿರಲಿಕ್ಕಾಗಿನು
ಶಿಷ್ಟಜನುಮ ಮತ್ತು ಕೊಟ್ಟ್ಯಾಕೊ ೨

ಭಕ್ತವತ್ಸಲನೆಂಬ ಬಿರುದೇನೋ ನಿನ್ನ
ಭಕ್ತರ ಅಭಿಮಾನ ತೊರೆದೇನೊ
ಭಕ್ತರಿಗೀತೆರ ಮೃತ್ಯುಬಾಧೆಯೇನು
ಮುಕ್ತಿದಾಯಕ ಜಗತ್ಕರ್ತ ಶ್ರೀರಾಮನೆ ೩

೨೨೨

ಎಂತು ದೊರೆವುದೋ ಸಂತಸವೆಂತು ದೊರೆವುದೋ
ಕಂತುಪಿತನ ಕರುಣವಿಲ್ಲದೆ ಪ

ರಣಜಯವು ಹಣಪ್ರಾಪ್ತಿ ವನಿತೆಲಾಭವಿನಿತು ಎಲ್ಲ
ವನಜನಾಭನೊಲಿಮೆಯಾಗೋತನಕ ಮಂದಮನುಜನಿಗೆ ೧

ಕ್ಷೋಣಿಗೆಲುವ ತ್ರಾಣ ಬಲವು ಮಾಣದಿಹ್ಯ ನಾನಾ ಸೌಖ್ಯ
ಜಾನಕೀಶ ಮೆಚ್ಚುವನಕ ಹೀನಭಾಗ್ಯ ಮಾನವನಿಗೆ ೨

ಭೂಮಿಜನಕೆ ಬಾಗದಂಥ ಆ ಮಹ ಸುಕ್ಷೇಮ ಲಾಭ
ಸ್ವಾಮಿ ಶ್ರೀರಾಮ ಪ್ರೇಮಸದನ ಪ್ರೇಮದೀಯದೆ ಪಾಮರರಿಗೆ ೩

೨೨೩

ಎಂತೊಲಿವನೋ ತನಗಿನ್ನೆಂತೊಲಿವನೋ
ಕಂತುಪಿತ ಶ್ರೀಕಾಂತ ಹರಿ ಪ

ಜಡಮನದ ಜಡರು ತೊಡೆದು
ಪಿಡಿದು ಸತ್ಯ ನುಡಿಯ
ಬಿಡದೆ ಅಡರಿಬರುವ ಎಡರಿಗೆದೆ
ಒಡೆಯದೆ ಧೃಢಬಲಿಸುವನಕ ೧

ದೋಷದೆಳಿಪ ಹೇಸಿ ಭವದ
ವಾಸನಳಿದು ಕ್ಲೇಶನೀಗಿ
ದಾಸಜನರ ವಾಸದಿರ್ದು
ಈಶಭಜನೆ ಬಲಿಸುವನಕ ೨

ಕಾಮಿತಾರ್ಥನೀಗಿ ನಿತ್ಯ
ನೇಮಬಿಡದೆ ತಪವ ಮಾಡಿ
ಸ್ವಾಮಿದಾಸನಾಗಿ ಶ್ರೀ
ರಾಮಮಂತ್ರ ಪಡೆಯುವನಕ ೩

೨೨೪

ಎಂದಿಗೆ ಕಾಂಬುವೆ ಇಂದಿರೇಶನೆ ನಿನ್ನ
ಸುಂದರ ಪಾದ ಕೃಪೆಯ ಪ

ಒಂದರಲವ ನಿಂದು ಒಂದೇ ಮನದಿ ನಿನ್ನ
ಚಂದದಿಂ ಭಜಿಸದ ಮಂದ ಭಾಗ್ಯನು ನಾನು ಅ.ಪ

ಎನ್ನ ಮನಸಿನ ಚೇಷ್ಟೆ ವರ್ಣಿಸಲಳವಲ್ಲ
ಕ್ಷಣಕೊಂದು ಪರಿಯಪ್ಪುದು
ಘನದೃಢ ಹರಿಪಾದ ನೆನೆಯುವುದು ನಿಮಿಷದಿ
ಎಣೆಯಿಲ್ಲದೈಶ್ವರ್ಯವನು ಭೋಗಿಸುವುದು ೧

ಗಳಿಗೆಯೊಳ್ದಶಲಕ್ಷ ಸುಲಭದಿಂ ಗಳಿಸರ್ಥ
ಬಲವಾಗಿ ನಿಲಯದಿಟ್ಟು
ಲಲನೆಯೊಳೊಡಗೂಡಿ ಬಲುಸೌಖ್ಯ ಬಡುಕೊಂಡು
ಗಳಿಗೆಯೊಳ್ ದೇಶಾಂತರಕೆಳಸುವುದಭವ ೨

ಅರಿಗಳಂ ಬಂಧಿಸಿ ಸೆರೆಯೊಳಿಟ್ಟರಲವದಿ
ಶಿರವರಿಪೆನೆನುತಿಹ್ಯದು
ಪರಮ ವೈರಾಗ್ಯದಿಂ ಚರಿಸುವುದರಲವದಿ
ಪರಲೋಕ ಸಾಧನದಿರುತಿಹ್ಯದಕಟ ೩

ದೃಢದಿ ನಡೆವುದು ನಿಮಿಷ ಪೊಡವಿಜನಕೆ ಸತ್ಯ
ನುಡಿಯು ಬೋಧಿಸುತಿಹ್ಯದು
ದೃಢತರಬಲದಿ ತಾ ಕಡುಗಲಿಯೆನಿಸೊಂದೇ
ಕೊಡೆಯಿಂದಲಾಳುವುದು ಪೊಡವಿಯಂ ಸಕಲ ೪

ಕಾಮಿಸುತೀಪರಿ ಕಾಮಕೊಳಪಡಿಸೆನ್ನ
ಪಾಮರನೆನಿಸುವುದು
ಸ್ವಾಮಿ ಶ್ರೀರಾಮ ಎನ್ನ ಪಾಮರಮನಸಿನ
ಕಾಮಿತವಳುಕಿಸಿ ಪ್ರೇಮದಿಂ ಸಲಹಯ್ಯ ೫

೨೨೫

ಎಂದಿಗ್ಹೋದೀತಯ್ಯಾ ಹರಿ ಹರೀ
ಎಂದು ಮುಳುಗೀತಯ್ಯಾ ಪ

ಎಂದಿಗ್ಹೋದೀತು ಸುಖ ಅಂದಗೆಡಿಪ ಮಹ
ಮಂದಮತಿಯು ಎನ್ನಿಂದ ಬಿಟ್ಟು ದೂರ ಅ.ಪ

ಕತ್ತಲ ಕಾಳಿದು ಎನ್ನನು
ಸುತ್ತಿಕೊಂಡು ಸೆಳೆದು
ಸತ್ಯಮರೆಸಿ ಸ್ಥಿರಚಿತ್ತ ಕೆಡಿಸಿ ಪಿಡಿ
ದೆತ್ತಿ ಹಾಕುತಿದೆ ಮತ್ತೆ ಭವಬಂಧದಿ ೧

ಮುಂದರಿಗೊಡದಿದು ನಿರುತದ
ಅಂದವ ತಿಳಿಗೊಡದು
ಬಂಧಿಸಿ ಬಲುಘೋರಾಂಧಕಾರ ಮುಚ್ಚಿ
ಸಂದಿನೊಳ್ನೂಕೆನ್ನ ಕೊಂದು ತಿನ್ನುತಿದೆ ೨

ತೆರೆದು ನೋಡಲೀಯದು ಕಣ್ಣಿಗೆ
ಪರದೆಯ ಹಾಕುವುದು
ನರಹರಿಶರಣರ ಕರುಣಮಂ ತಪ್ಪಿಸಿ
ಪರಮ ಶ್ರೀರಾಮ ನಿಮ್ಮ ಚರಣ ದೂರೆನಿಪುದು ೩

೨೨೬

ಎಂದು ಕಾಣಬೇಕೋ ಹೀಂಗಾದ ಮೇ
ಲೆಂದು ಕಾಣಬೇಕೋ ಪ

ಎಂದು ಕಾಣಬೇಕು ಮಂದಮನವೇ ನೀ
ಹೊಂದಿ ಭಜಿಸವಲ್ಲ್ಯಾಮಂದರಧರನಡಿ ಅ.ಪ

ದುರಾಸೆ ತೊರಿವಲ್ಲಿ ನಿನ್ನ ದುರ್ಗುಣ ಬಿಡವಲ್ಲಿ
ಅರಿವು ನಿಲ್ಲಿಸವಲ್ಲಿ ಮರುಳುಗುಣಳಿವಲ್ಲಿ
ನಿರುತ ಭಜಿಸುವಲ್ಲಿ ನರಹರಿ ಚರಣ ೧

ಸಂಶಯ ಬಿಡವಲ್ಲಿ ಮನದ ಹಿಂಸಗುಣಳಿವಲ್ಲಿ
ಧ್ವಂಸ ಮಾಡುವಲ್ಲಿ ಸಂಸಾರದ ಬಲೆ
ಹಿಂಸನೆ ನೆನೆವಲ್ಲಿ ಕಂಸಾರಿಯಪಾದ ೨

ಕ್ಲೇಶ ನೀಗುವಲ್ಲಿ ವಿಷಯದಾಸೆ ತೊರೆಯವಲ್ಲಿ
ವಾಸನಳಿಯುವಲ್ಲಿ ಮೋಸಬಿಡವಲ್ಲಿ
ದಾಸನಾಗವಲ್ಲಿ ಈಶ ಶ್ರೀರಾಮ ಪಾದ ೩

೨೨೭

ಎಂದು ದೂರಮಾಡುವಿ ಎನ್ನ ಬಂಧನವನು
ಸಿಂಧುಶಯನ ತಂದೆ ಈ ಭವದಂದುಗವನು ಸಹಿಸಲಾರೆ ಪ

ಸತಿಪತಿಯ ರತಿಯ ಕಲಹದಿ
ಪತನಾದಿಂದ್ರಿಯಿಂದೆ ನಾನು

ಪೃಥಿವಿಮೇಲೆ ಬಿದ್ದು ಘನ
ವ್ಯಥೆಯಬಡುವ ತಾಪತ್ರಯವ ೧

ಮಂದಭಾಗ್ಯನಾಗಿ ಆಗಿ ನಾನಾ
ಸಂದಿನೊಳಗೆ ಬಂದು ಬಂದು
ಮಂದಿಸೇವೆಗೈದು ನರಕ
ಬಂಧರುರುಳವಂಥ ಕೆಡುಕು ೨

ಆಸೆದೆಳಸಿ ಪರರಾಸ್ತಿ
ಮೋಸತನದಿ ಕದಿಸಿ ಯಮನ
ಪಾಶದೊಳಗೆ ನೂಕುವಂಥ
ಹೇಸಿ ಎನ್ನ ನಾಶಬುದ್ಧಿ ೩

ಅವನಿಯೊಳು ಜನಿಸಿಬಿಟ್ಟ
ಬವಣೆ ನೆನೆಸಿ ನೆನೆಸಿ ಎನಗೆ
ಸವೆಯದಯ್ಯೋ ದು:ಖ ಈ ದು
ರ್ಭವ ಪಾಪ ಸಂಕಟ ೪

ದಾಸಜನರ ಪ್ರಾಣಪ್ರಿಯ
ಶ್ರೀಶ ಶ್ರೀರಾಮ ನಿಮ್ಮ ಚರಣ
ಧ್ಯಾಸ ಮರೆಗೆ ಬಳಲಿಸುವ
ಹೇಸಿಭವದ ವಾಸನವ ೫

೨೨೮

ಎಂದು ಪೇಳಯ್ಯ ಕಂದಗೆಂದು ಪೇಳಯ್ಯ ಹರಿ
ಯೆಂದು ಪೇಳಯ್ಯ ಮಂದಮತಿ ನಿವಾರಣೋದಯ ಪ

ಜಡಭವದ ಜಡರು ಕಡಿದು
ದೃಢತರದ ಜ್ಞಾನ ಕೊಡುವ
ಒಡೆಯ ನಿಮ್ಮ ಪುಣ್ಯ ನಾಮ
ಕಡು ಪಾಪಿ ಜಿಹ್ವೆಗುದಯ ೧

ಸೂತ್ರಧಾರ ನಿನ್ನ ಪಾದ
ಖಾತ್ರಿಗೊಳಿಸಿ ನಿಜ ಸುಖದ
ಪಾತ್ರನೆನಿಪ ಸತತ ಎನ್ನ
ನೇತ್ರಕೆ ನಿನ್ನ ದರ್ಶನೋದಯ ೨

ಅಧಮತನ ದೂರಮಾಡಿ
ಸದಮಲ ಮತಿಯಿತ್ತು
ವಿಧ ವಿಧದಿ ಕಾಯ್ವ ಸದಾಯೆನ್ನ
ಹೃದಯದಿ ಶ್ರೀರಾಮೋದಯ ೩

೨೨೯

ಏಕೆ ಎನ್ನೊಳು ಮೂಕನಾದ್ಯೊತ್ರಿ
ಲೋಕ ಜೀವಾಳು ಪ

ಪಿತ ಮಾತೃದ್ರೋಹಿಯೆಂದು ಅತಿಥಿಗಳನಾದರನುಯೆಂದು
ಅತಿ ಪಾತಕಿಯಿವನುಯೆಂದಹಿತದಿ ಮುಖವೆತ್ತದಿರುವ್ಯೋ ೧

ವಾಚಹೀನ ನೀಚನೆಂದು ಸಾಚಮನವಿಗಳ್ನಿಂದಕನೆಂದು
ಆಚರಿಪನನಾಚಾರವೆಂದು ನೀಚಾರಿ ದಯಸೂಚಿಸದಿರುವ್ಯೋ ೨

ಭಕ್ತರನ್ನು ಕ್ಷಮಿಸಿ ಪೊರೆದು ಭಕ್ತವತ್ಸಲನೆಂಬ ಬಿರುದು
ಹೊತ್ತದ್ದೆಲ್ಲಡಗಿಸಿದ್ಯೋ ಮುಕ್ತಿದಾತೆನ್ನಯ್ಯ ರಾಮ ೩

೨೩೦

ಏಕೆ ಚಿಂತಿಪೆ ನೀ ಎಲೆ ಕೋತಿಮನವೆ
ಲೋಕನಾಥನ ಪಾದ ಗಟ್ಟ್ಯಾಗಿ ನಂಬದಲೆ ಪ

ಹಿತದ ಭಕ್ತನು ಎಂದು ಮತಿಹೀನ ಭಸ್ಮಗುರಿ
ಹಸ್ತವರವಿತ್ತ್ಹರನು ಮತಿದಪ್ಪೋಡುತಿರೆ
ಗತಿನೀನೆ ಹರಿಯೆನಲು ಅತಿದಯದಿಂ ಶಿವನ್ನುಳಿಸಿ
ಕೃತ್ತಿಮನ್ನಳದ ಹರಿ ಪತಿತಮಹಾತ್ಮರಿಯೆ ೧

ಘುಡುಘುಡಿಸಿ ಹಿರಣ್ಯನು ಜಡಮತಿ ಹರಿಯೆಲ್ಲಿ
ಗಡ ತೋರೀ ಕಂಬದಿ ಎಂದಾರ್ಭಟಿಸಿ ಬರಸೆಳೆಯೆ
ನಡುನಡುಗಿ ಪ್ರಹ್ಲಾದ ಜಡಜಾಕ್ಷ ಪೊರೆಯೆನಲು
ಮೂಡಿ ಕಂಬದಿ ಖಳನ ಒಡಲ ಬಗೆದದ್ದರ್ಲ್ಲಿಯೆ ೨

ಕುರುಪನ ಸಭೆಯೊಳಗೆ ಮೊರೆಯಿಟ್ಟ ದ್ರೌಪದಿಗೆ
ಕರುಣದಕ್ಷಯವಿತ್ತು ಪೊರೆದ ಪರಮಾತ್ಮ
ಕರುಣಾಳು ಶ್ರೀರಾಮ ಚರಣದಾಸರ ನೆರ
ಅರೆಘಳಿಗೆ ಬಿಟ್ಟಿರನು ನಿರುತ ನೀ ಸ್ಮರಿಸೋ ೩

೨೩೧

ಏಕೆ ನಿನ್ನಯ ಸುದೃಷ್ಟ್ಯರಿಯದೀ ಕಾಕು ದೇಹದ ಮೇಲೆ ಪ

ಲೋಕೇಶ ನಿಮ್ಮಯ ಶ್ರೀಪಾದಕಮಲಕ್ಕೆ
ಜೋಕೆ ಮಾಡೆನ್ನೆಂದು ಮರೆಹೊಕ್ಕೆ ಸ್ವಾಮಿ ಅ.ಪ

ಹೀನ ಬವಣೆಯ ಕಳೆದು ಜ್ಞಾನಪಾಲಿಸೆಂದು
ದೈನ್ಯಬಡುವೆನು ನಿನಗೆ ನಾನಾ ಪರಿಯಲಿಂದ
ಏನು ಕಾರಣ ನಿನಗೆ ದಯ ಬಾರದೆನ್ನೊಳು
ದೀನಜನರ ಬಂಧು ಧ್ಯಾನಿಸುವ ಪ್ರಾಣ ೧

ರಿಣದಿ ಮುಕ್ತನ್ನ ಮಾಡೆಂದ್ವಿಧವಿಧ ಬೇಡುವೆ
ದಿನ ದಿನ ಮತ್ತಿಷ್ಟು ಘನವಾಗುತಿಹ್ಯದು
ಮನಸಿಜಪಿತ ನಿನಗಿನಿತು ಭಾರನೆ ನಾನು
ಕನಿಕರಬಡದಿಹಿ ಅನುಗನೋಳ್ವನಜಾಕ್ಷ ೨

ಇಂತು ನಿರ್ದಯನಾಗಿ ಚಿಂತೆಯೆಂದೆಂಬುವ
ಚಿಂತೆಚಿತೆಯೊಳು ನೂಕಿ ಎನ್ನ ಭ್ರಾಂತಿಪಡಿಸಬೇಡೋ
ಅಂತ:ಕರಣದ ದೇವ ಅಂತ:ಕರುಣಿಸಿ ಎನ್ನ
ಅಂತರಂಗದೊಳಿಹ್ಯ ಚಿಂತೆಯಳಿ ಶ್ರೀರಾಮ ೩

೨೩೨

ಏನಬೇಡಲಿ ನಿನ್ನ ನಾ ಬಯಸಿ ಸ್ವಾಮಿ
ಕಾಣುವುದು ಐಹಿಕ ಸುಖ ನಿಖಿಲ ಪುಸಿಯಾಗಿ ಪ

ವನಿತೆಯನು ಬೇಡಲೆ ತನಗೆ ಅಲ್ಲದೆ ಮತ್ತೆ
ಮನೆತುಂಬ ಮರಿಮಾಡಿ ತಿನಿಸಿಗ್ಹಾಕೆಂದು
ಅನುಗಾಲ ಬೆನ್ನ್ಹತ್ತಿ ತಿನುತಿಹ್ಯಳು ಹರಿದ್ಹರಿದು
ಬಿನುಗರಲಿ ಬಿನುಗೆನಿಸಿ ಘನತೆಯನು ಕೆಡಿಸಿ ೧

ಘನವೆಂದು ನಂಬಿ ನಾ ಧನವನಾಪೇಕ್ಷಿಸಲೆ
ಸನುಮತದಿ ಒತ್ತಟ್ಟಕ್ಷಣ ಕೂಡ್ರಗೊಡದೆ
ದಣಿವಿಕಿಲ್ಲದೆ ದುಡಿಸಿ ಅಣುಮಾತ್ರ ಸುಖಕೊಡದೆ
ಚಿನುಮಯಾತ್ಮನೆ ನಿನ್ನ ನೆನವೆ ಮರೆಸುವುದು ೨

ಭೂಮಿಯನು ಬೇಡಲೆ ಸ್ವಾಮಿಯಂತೆ ಸೇವೆಗೊಂಡು
ತಾಮಸದಿ ನೂಕಿ ಬಲು ಪಾಮರೆನಿಸುವುದು
ಸ್ವಾಮಿಯೆನ್ನಯ ಸಕಲ ಕಾಮಿತ ಕಡಿದು ನಿಮ್ಮ
ನಾಮಬಲ ಕರುಣಿಸು ಶ್ರೀರಾಮ ಪ್ರಭುತಂದೆ ೩

೨೩೩

ಏನಾಯ್ತು ಹರಿಪಾದ ನೆನೆವಲ್ಲಿ ಮನವೆ
ದೀನನೆ ನಿನ್ನ ಬಾಯಿಗ್ಹುಣ್ಣುಹ್ಟ್ಟಿತೇನೋ ಪ

ನಿಷ್ಠೆಯಿಂ ಕೈತಾಳವಿಟ್ಟು ಉಲ್ಲಾಸದಿ
ಕಷ್ಟಹರನಂಘ್ರಿ ಮನಮುಟ್ಟಿ ಪಾಡುವಲ್ಲಿ
ಕೆಟ್ಟಾಸೆಯಿಂ ಪರರಲ್ಹೊಟ್ಹೊಟ್ಹೊಡಕೊಂಡು ಬೇಡ್ವ
ಪೆಟ್ಟಿಗೆ ಕರವರೆಡು ಮುರಿದಿರುವವೇನೋ ೧

ವನಜನಾಭನ ದಿವ್ಯ ವನರುಹಂಘ್ರಿಯ ಚರಿತ
ಘನವಾಗಿ ಪೊಗಳುತ ಕುಣಿದಾಡವಲ್ಲಿ

ವನಿತೆ ಮಾತಾಲಿಸಿ ಕುಣಿಕುಣಿದು ನಿನ್ನೆರಡು
ಮೊಣಕಾಲು ಕೀಲ್ಮುರಿದು ನೆಲಕಿ ಬಿದ್ದಿಹ್ಯವೆ ೨

ನೀಲಶಾಮನ ವಿಮಲಲೀಲೆಗಳು
ಶೀಲಮನದಾಲಸಾನಂದೊಳು ಲೋಲ್ಯಾಡವಲ್ಲಿ
ಹಾಳು ಸಂಸಾರದ ಗೋಳಾಟ ಕೇಳಿ ಕೇಳಿ
ಶೂಲೆಯೆದ್ದೆರಡು ಕಿವಿ ಕಿವುಡಾದವೇನು ೩

ಸಾಗರನಿಲಯನ ನೀಗದ ಮಹಿಮೆಗಳ
ಜಾಗರದಿಂ ಪಾಡಿ ಭವರೋಗ ಗೆಲಿವಲ್ಲಿ
ಸೋಗಿನ ಸೂಳೆಸುದ್ದಿ ರಾಗದ್ವಾಡ್ಯಾಡಿ ಭವ
ಸಾಗರದಿ ಬಿದ್ದು ಜಿಹ್ವೆ ಕಳಕೊಂಡಿದ್ಯೇನೋ ೪

ದಾಸನುದಾಸರ ವಾಸದಿಗೂಡಿಯನು
ಮೇಷನು ವಿಚಾರದಿಂ ಶ್ರೀಶನ ಚರಣ
ಧ್ಯಾಸದೊಳಗಿರ್ದು ಯಮಪಾಶವನು ಗೆಲಿದು ದಯ
ಭೂಷ ಶ್ರೀರಾಮನ ಮುಕ್ತಿ ಪಡಿವಲ್ಲಿ ೫

೨೩೪

ಏನಿದು ಎಲೆ ಮನ ಏನು ಇದು
ನೆನೆಸಿದರೆದೆ ಝಲ್ಲೆನುವುದು ಪ

ನಾನು ಯಾರೆಂಬುವ ಖೂನವ ತಿಳಿಯದೆ
ಶ್ವಾನನಂದದಿ ಕೆಟ್ಟ ಹೀನಭವಕೆ ಬಿದ್ದು ಅ.ಪ

ಏತಕ ಬಂದದ್ದೀ ಜನುಮಕ್ಕೆ ತಲೆಯೆತ್ತಿ ನೋಡದೆ
ಕೂತಿಮುಂದಕೆ ನೀತಿಗೇಡಿ ಮಹಪಾತಕನು ಯಮ
ದೂತರು ನಿಂತಾರೊ ಎಳಿಲಿಕ್ಕೆ ೧

ನೆಲೆ ತಿಳಿ ಬಂದ್ಯಾವ ಕಾರ್ಯಕ್ಕೆ ಮತ್ತು
ಬೀಳಬೇಡೋ ಮಾಯದ

ಜಾಲಕ್ಕೆ ಘಳಿಲನೆ ತಿಳಿತಿಳಿ ಸುಲಭದಿ ಸಮಯವು
ಬಲಿಸಿ ಹರಿಯ ಧ್ಯಾನ ಕಾಲನ ನೂಕೋ ೨

ಹುಟ್ಟಿಬಂದಿ ಶಿಷ್ಟಪದ ಪಡಿಲಿಕ್ಕೆ ಮರ್ತುಬಿಟ್ಟಿ ನಿಂತಿ
ಬಿಟ್ಟಗಂಟ್ಯೊರಲಿಕ್ಕೆ ಭ್ರಷ್ಟಗುಣವ ಬಿಟ್ಟು ದಿಟ್ಟರಾಮನ
ಗಟ್ಯಾಗಿ ನಂಬಿ ಮುಟ್ಟು ಮುಕ್ತಿಪದಕೆ ೩

೨೩೫

ಏನಿದು ಮಹದಪರಾಧ ಮಾಡಿದೆ ನಾನು
ನಿನ್ನವರನೆ ನಿಂದಿಸಿದೆ ತಿಳಿಯದಭವ ದೇವ ಪ

ಜ್ಞಾನವಿಡಿದಿ ನೋಡದೆ ತುಸು
ಏನುಕಾಣದೆ ನಾನಾಪರಿಯಲಿ
ಶ್ವಾನನಂದದಿ ಚೀರುತ್ವಾರುತ
ಹೀನವಾಚಗಳ್ವಾಚಿಸಿದೆನೋ ಅ.ಪ

ತತ್ತ್ವದರ್ಥಕರಾಗಿ ಗುಪ್ತದಿಂದಿರ್ಪವರ
ನರ್ತುನೋಡದೆ ಅನರ್ಥವಾಡಿದೆನೋ ಪ್ರಭೋ
ಮರ್ತ್ಯಗುಣಗಳ ಮರ್ತುಬಿಡದೆ
ನಿರ್ತಮಾನಿಸರ ಗುರ್ತುತಿಳಿಯದೆ
ಕತ್ತೆಯಂತೊದರುತ್ತ ಸತ್ಯರ
ಕೃತ್ತಿಮರೆಂದೆನುತ ಜರಿದೆ ೧

ಮೀನು ಜಿಹ್ವೆಯ ರುಚಿಗಾ
ಗೇನು ತಿಳಿಯದೆ ಪೋಗಿ
ಗಾಣ ಸೆಳೆದುನುಂಗಿ ಪ್ರಾಣಕೊಟ್ಟಂತೆ ಹರಿಯೆ
ಗಾನಲೋಲನ ಮನದೊಳಿಟ್ಟು
ಧ್ಯಾನಿಪ ಕೋವಿದಸುಜನರ
ಖೂನವಿಲ್ಲದೆ ಮನಕೆ ಬಂದಂತೆ
ಕಾಣದಂಧಕನಂತೆ ಜರಿದೆ ೨

ನಿನ್ನಿಂದೆ ನಾ ಬಂದೆ ನೀನೆನ್ನ ತಂದೆ ಮುಂ
ದಿನ್ನಿಂಥ ದುರ್ಮತಿಯನ್ನು ಕೊಡದಿರೊ ರಂಗ
ನಿನ್ನ ದಾಸರೊಳಿಟ್ಟು ಅನುದಿನ
ಭಿನ್ನವಿಲ್ಲದೆ ರಕ್ಷಿಸಯ್ಯ
ನಿನ್ನ ಚರಣದಾಸರ ನಾಮ
ಪನ್ನಂಗಶಾಯಿ ವರ ಶ್ರೀರಾಮ ೩

೨೩೬

ಏನಿದೇನಿದನ್ಯಾಯ ಕೇಳಲಾಗದಯ್ಯ
ಧ್ಯಾನದಿಂದಾನೆಂಬ ಹೀನ ಜನರ್ವಚನ ಪ

ಪರಮಪುರುಷರ ಚರಿತ ಪರಮ ಭಕ್ತಿಯಲಿಂದ
ಬರೆದೋದಿಕೇಳಿದರೆ ಪರಮಪದವೆನುತ
ವರವೇದ ಸ್ಮೃತಿವಾಕ್ಯ ಅರಿದರಿದು ಸಚ್ಚರಿತ
ಬರೀಬಾರದೆನ್ನುವ ನರಗುರಿಗಳ ವಚನ ೧

ಕನಸುಮನಸಿನೊಳೊಮ್ಮೆ ಜನಕಜೆಯವರನಂಘ್ರಿ
ನೆನೆವರ್ಗೆ ಭವಬಂಧವಿನಿತಿಲ್ಲವೆನುತ
ಮನುಮುನಿಗಳ್ಬರೆದಿಟ್ಟ ಘನತರದ ವಚನಗಳನು
ಮನನ ಮಾಡಳಿವ ಬಿನಗುಜನರ್ವಚನ ೨

ಬೀಳುತೇಳುತಲೊಮ್ಮೆ ನೀಲಶ್ಯಾಮನ ದಿವ್ಯ
ಮೇಲು ಮಹಿಮೆಯ ಮನದಾಲಿಸಲು ಜವನ
ದಾಳಿ ಸೋಂಕದು ಎಂದು ಶೀಲದೊರೆದ್ವಚನಗಳ
ಕೇಳಿ ತಿಳಿಯದ ಮಹ ಕೀಳುಜನರ್ವಚನ ೩

ಹರಿನಾಮ ಕೀರ್ತನೆಯಿಂ ಜರಾಮರಣ ಕಂಟಕವ
ಕಿರಿದು ಮಾಡಿ ದಾಟಿದರು ಗುರುಹಿರಿಯರೆಲ್ಲ
ನಿರುತ ನಿಜ ತಿಳಿಯದೆ ಹರಿಸ್ಮರಣೆ ಸ್ಮರಿಸದೆ
ಬರಿದೆ ಬ್ರಹ್ಮೆಂಬ ಮಹನರಕಿಗಳ ವಚನ ೪

ಪರಮ ಶ್ರೀಗುರುರೂಪ ವರದ ಶ್ರೀರಾಮನಂ
ನೆರೆನಂಬಿ ಒಲಿಸದೆ ಗುರುವಾಗಿ ಜಗದಿ
ಅರಿವಿತ್ತು ಆತ್ಮನ ಕರುಹು ತೋರಿಸಿ ಪರಮ
ಪರತರದ ಮೋಕ್ಷಮಂ ಕರುಣಿಸುಯೆಂತು ೫

೨೩೭

ಏನು ಕಳೆದ್ಯೋ ಮಾನವ ಜನುಮ
ನಾನು ಯಾರೆಂಬ ಖೂನವಿಲ್ಲದೆ ಪ

ಕಾಲನಾಜ್ಞೆಯನ್ನು ಪಡೆದು
ಸೂಳ ಎಣಿಸಿ ಜಗಕಿಳಿದು
ಜಾಲಹಾಕಿ ಜವನಗೊಲಿದು
ಶೂಲಕ್ಹಾಕುವ ಮಾರಿಗೊಲಿದು ೧

ತಂದ ಪುಣ್ಯವನ್ನು ಕೆಡಿಸಿ
ಮಂದಿಮಕ್ಕಳನ್ನು ಬಿಡಿಸಿ
ಮಂದನೆನಿಸಿ ಕುಂದುಹೊರೆಗೆ
ಬಂಧಕ್ಕೆಳೆವ ರಂಡೆನ್ನೊರೆಸಿ ೨

ಜನನಿಜನಕರನ್ನು ಜರೆದಿ
ಮನೆಯ ಹೆಂಡಿರ ಮಾನ ಕಳೆದಿ
ಬಿನುಗು ಸೂಳೆಗೆ ವಶನಾದಿ
ಬಿನುಗರೊಳಗೆ ಬಿನುಗನಾದಿ ೩

ನೀಗಿದಿ ಕುಲಶೀಲತೆ ಮುದಿ
ಗೂಗೆಯಂದದಿ ದಿನಗಳೆದಿ
ಭಾಗವತದ ಭಾಗ್ಯ ಮರೆದಿ
ಕಾಗೆನುಂಗಿದ ಹೊಲೆಯನಾದಿ ೪

ಸಾಧು ಸುಜನಬೋಧ ಜರೆದಿ
ವೇದವಾಕ್ಯ ಮೀರಿ ನಡೆದಿ
ಶೋಧಿಸಿ ಸಮಯ ತಿಳಿಯದ್ಹೋದಿ
ಆದಿ ಶ್ರೀರಾಮಗ್ಹೊರತಾದಿ ೫

೨೩೮

ಏನು ಕೆಟ್ಟೆಯಲ್ಲೋ ಮನುಜ
ಹಾನಿಯಾದೆಯಲ್ಲೋ ಪ

ಕಾಣದೆ ಏನೇನು ಗಾಣದೆತ್ತಿನಂತೆ
ನಾನಾ ಯೋನಿಗಳು ಖೂನವಿಲ್ಲದೆ ತಿರುಗಿ ಅ.ಪ

ಕಾಲ ಕಳೆದೆಯಲ್ಲ ಕಾಲದ ಮೂಲ ತಿಳಿಯಲಿಲ್ಲ
ಮೂಳನಾದೆಯಲ್ಲ ಭವದ ಮಾಲ ಗೆಲಿಯಲಿಲ್ಲ
ಕಾಳುಕತ್ತಲೆಂಬ ಹಾಳು ಸಂಸಾರ ಮಾಯಾ
ಜಾಲದಿ ಬಿದ್ದೆಮಧಾಳಿಗೀಡಾದೆಯಲ್ಲ ೧

ನಾರಿ ನಿನ್ನವಳಲ್ಲ ಹುಟ್ಟಿದ ಪೋರ ನಿನಗಿಲ್ಲ
ಯಾರಿಗೆಯಾರಿಲ್ಲ ನಿನ್ನ್ಹಿಂದೆ ಯಾರು ಬರುವುದಿಲ್ಲ
ಧಾರುಣಿಸುಖವಿದು ಸಾರಮಯ ಸುವಿ
ಚಾರದೆ ನೋಡದೆ ಘೋರನರಕಿಯಾದೆ ೨

ಮನೆಮಾರು ನಿನಗಿಲ್ಲ ಗಳಿಸಿದ ಧನವು ನಿನ್ನದಲ್ಲ
ಕ್ಷಣಿಕವಾದದ್ದೆಲ್ಲ ಜಗಸುಖ ನಿನಗೊಂದು ಸ್ಥಿರವಿಲ್ಲ
ವನಜನಾಭ ನಮ್ಮ ಜನಕ ಶ್ರೀರಾಮನ
ವನರುಹಂಘ್ರಿ ನಂಬಿ ಘನಮುಕ್ತಿ ಪಡೀಲಿಲ್ಲ ೩

೨೩೯

ಏನು ಖೋಡ್ಯಾದಲ್ಲೋ ಸಂಸಾರ ನಾನು ನೋಡಿದ್ದಿಲ್ಲ ಪ

ಏನು ಖೋಡಿದು ವಿಚಾರ ತಪ್ಪಿಸಿ ಎನ್ನ
ಶ್ವಾನದಂದದಿ ಖೂನವಿಲ್ಲದೆ ಕೂಗಿಸಿತೇನು ಅ.ಪ

ತಾನೆ ನಿಜವಿಲ್ಲ ಎನ್ನನು ಏನು ಕೆಡಿಸಿತಲ್ಲ
ನಾನಾಪರಿಲಿ ಮಾಯಮೋಹದಿ ಮುಳುಗಿಸಿ
ಜ್ಞಾನ ಕೆಡಿಸಿ ಹೀನಬವಣೆಗೆ ತಂದಿತ್ತು ೧

ಕನಸಿನಪರಿಯಂತೀಜಗಸುಖ ಕ್ಷಣಹೊತ್ತಿನ ಸಂತಿ
ಇನಿಸು ತಿಳಿಗೊಡದೆನ್ನ ಮನಸು ಸೆಳೆದುಕೊಂಡು
ಕುಣಿಸಿ ಕುಣಿಸಿ ಮಹ ನರಕಿಯೆನಿಸಿತ್ತು ೨

ಸತ್ಯಮಾರ್ಗ ಮರೆಸಿ ಎನ್ನನಸತ್ಯಮಾರ್ಗಕೆಳಸಿ
ನಿತ್ಯನಿರ್ಮಲನ ಸತ್ಯ ಚರಿತೆಗಳ
ಗುರ್ತು ತಿಳಿಸದೆಮಮೃತ್ಯುತೀಡೆನಿಸಿತ್ತು ೩

ಮರವೆಯು ಮುಚ್ಚಿತ್ತು ಭವಪಾಶ ಕೊರಳಿಗೆ ಹಾಕಿತ್ತು
ಅರಿವಿನ ಕುರುಹನು ತೋರಿಸದೆ
ಪರದಿರವು ಮರೆಸಿ ಧರೆಭೋಗ ಅಹುದೆನಿಸಿತ್ತು ೪

ನೇಮನಿತ್ಯಕೆಡಿಸಿ ಎನಗೆ ಶ್ರೀರಾಮಪಾದಮರೆಸಿ
ಕಾಮಿಸಬಾರದ ಕಾಮಿತಗಳಿಂದ
ಪಾಮರನೆನಿಸೆನ್ನ ಕೊಲ್ಲುತಲಿತ್ತು ೫

೨೪೦

ಏನು ಮಾಡಿದರೇನು ಹೀನಮಾನವನು
ಧಿನದಯಾಸಿಂಧು ಹರಿ ನೀನೊಲಿಯದಿರಲು ಪ

ಸ್ನಾನ ಮಾಡಿದರೇನು ನಾನಾತೀರ್ಥವ ತಿರುಗಿ
ಮೌನ ಮಾಡಿದರೇನು ನಯನಗಳು ಮುಚ್ಚಿ
ದಾನ ಮಾಡಿದರೇನು ಧ್ಯಾನ ಮಾಡಿದರೇನು
ಧ್ಯಾನದಾಯಕ ನಿನ್ನ ದಯವಾಗದಿರಲು ೧

ಜಪವ ಮಾಡಿದರೇನು ಅಪರೂಪ ಮಡಿಯುಟ್ಟು
ತಪವ ಮಾಡಿದರೇನು ವಿಪಿನವನು ಸೇರಿ
ಗುಪಿತಶಾಸ್ತ್ರವ ಕಲಿತು ನಿಪುಣನೆನಿಸಿದರೇನು
ಸುಫಲದಾಯಕ ನಿನ್ನ ಕೃಪೆಯಾಗದಿರಲು ೨

ತತ್ವವನು ವಿಂಗಡಿಸಿ ಅರ್ಥಮಾಡಿದರೇನು
ಪೃಥ್ವಿಬಿಡದ್ಯಾವತ್ತು ಸುತ್ತುಗಟ್ಟಿದರೇನು
ಕುತ್ತಿಗೆಯ ಕೊಯ್ದಿಟ್ಟು ಮತ್ತೆ ಕಲೆಸಿದರೇನು
ಚಿತ್ತಜಪಿತ ನಿನ್ನ ಚಿತ್ತಕ್ಕೆ ಬರದಿರಲು ೩

ಯೋಗವನು ಕಲಿತು ಬಲುಯೋಗ ಮಾಡಿದರೇನು
ಭಾಗವತವೋದಿ ಬಲು ಯಾಗ ಮಾಡಿದರೇನು
ಭೋಗವನ್ನು ತ್ಯಜಿಸಿ ಬಲು ಜಾಗರಣ ಮಾಡಲೇನು
ನಾಗಶಯನನೆ ನಿನ್ನ ನಿಗ ಬೀಳದಿರಲು ೪

ಒಪ್ಪಿಡಿ ಅವಲಕ್ಕಿಗೊಪ್ಪಿ ಸಂಪದ ಕೊಟ್ಟು
ತಪ್ಪುಗಾರನ ಕ್ಷಮಿಸಿ ಅಪ್ಪಿ ಪದವಿತ್ತಿ
ಒಪ್ಪುಗಾರನೆ ನೀನು ಒಪ್ಪಿದ ಬಳಿಕಾವ
ತಿಪ್ಪುಳದ ಗೋಜಿಲ್ಲೆನ್ನಪ್ಪ ಶ್ರೀರಾಮ ೫

೨೪೧

ಏನೆನ್ನುತ್ತಳಿಯಲಿ ನಿನ್ನ । ನಾನಾವಿಧದಿ
ಬೆಳಗುವ ಮಹಮಹಿಮನ ಪ

ಸಾಗರ ನಿಲಯನೆಂದೆನಲೇ
ನೀಗದ್ರೊಯ್ಯುಂತ ಮೇಲು ಮಂದಿರನ
ರಾಗದಿಂ ದ್ವಾರಕೆ ಪುರಮನೆಯವನೆನಲೇ
ಯೋಗದಿಂದಣುರೇಣುತೃಣದಿ ವ್ಯಾಪಕನ ೧

ಪನ್ನಂಗ ಹಾಸಿಗೆ ಮಾಡಿಹ್ಯನೆನಲೇ
ಉನ್ನತಾಸಿಗೆಯ ಮೇಲೆ ಮಲಗಿಕೊಳ್ಳುವನ

ಭಿನ್ನವಿಲ್ಲದೆ ದರ್ಭೆಶಾಯಿಯೆಂದೆನಲೇನು
ಚಿನ್ನಮಂಚದ ಮೇಲೆ ಲೋಲ್ಯಾಡುವವನ ೨

ಹೊಟ್ಟೆಗ್ಹುಲ್ಲ ತಿಂದವನೆನಲೇ
ಶಿಷ್ಟ ದಿವಿಜರಿಟ್ಟ ಮೃಷ್ಟಾನ್ನುಣ್ಣುವವನ
ಕೊಟ್ಟ ಹಣ್ಣಿನ ತೋಟ ಹಸಿದು ತಿಂದವನೆನೆ
ಸೃಷ್ಟಿ ಈರೇಳಕ್ಕೆ ಅನ್ನ ಕೊಡುವವನ ೩

ಅಸುಬಿಟ್ಟ ದಿಕ್ಕಿಲ್ಲದನೆನಲೇ
ಅಸಮಲಬಲವುಳ್ಳಂಥ ಯಾದವಾರ್ಯನ
ಕುಸುಮನಾಭಂಗೆ ಸಂಸಾರಿಯೆಂದೆನಲೇನು
ಎಸೆವ ಪರವಸ್ತು ನಿರ್ಬಯಲು ನಿರ್ಮಯನ ೪

ಅಳವಲ್ಲ ಎನಗೆ ನಿನ್ನ
ವೊಲಿರೆ ದಿವ್ಯ ಮಹಿಮೆ ತಿಳಿಯುವ ತ್ರಾಣ
ಒಲಿದು ಚರಣದಾಸರಾಳಾಗಾಳುವೆನೆಂದು
ಇಳೆಯೊಳು ಸಾರುವೆ ನಳಿನಾಕ್ಷ ಶ್ರೀರಾಮ ೫

೨೪೨

ಏನೆಂದೀದೇಹ್ಯವನು ನಂಬಿದಿ ಮನವೆ ನೀ
ಏನೆಂದೀ ದೇಹ್ಯವನು ನಂಬಿದಿ ಪ

ಏನೆಂದು ನಂಬಿದ್ಯೋ ಆನಂದದ್ಹಿಗ್ಗುತ
ಕ್ಷೀಣವಾಗೊಂದುದಿನ ಮಣ್ಣು ಗೂಡುವುದರಿತು ಅ.ಪ

ತಳಕ್ಹಾಕಿ ಜೋಡಿಸಿ ಹಲವು ನರಗಳಿಂದ
ಬಲವಾಗಿಬಿಗಿದ ಈ ಎಲುವಿನ ಹಂದರ ೧

ರೋಗಕ್ಕೆ ಇದು ತವರಾಗಿ ಒಂದಿನ ನಾಶ
ವಾಗಿ ತಾ ಕೈಬಿಟ್ಟು ಪೋಗುವ ಮಂಟಪ ೨

ಹಲವು ವಿಧದಿ ಮಜ್ಜ ಮಲ ಮೂತ್ರ ಬಲುಹೇಯ
ಮಲಿನ ಭರಿತವಾದ ಹೊಲೆಮಯ ಕುಂಡಲ ೩

ಬಿಲದ್ವಾರ ಒಂಬತ್ತು ತುಳುಕಿತುಂಬ್ಬರಿಯುತ
ತೊಳೆಯದಿರಲು ನಿಮಿಷ ಹೊಲಸಿಕ್ಕಿ ನಾರುವುದು ೪

ತಂದೆ ಶ್ರೀರಾಮನಂ ಹೊಂದಿ ಭಜಿಸದೆ ಗಾಢ
ಅಂಧಕಾರದಿ ಬಿದ್ದು ನಂದಿಪೋಗುವ ತನು ೫

೨೪೩

ಏನೆಂದು ಕರೆದರೆ ಬರುವಿ ನಿನ್ನ
ಧ್ಯಾನಿಸಿ ಕರೆದರೆ ಬಾರದೆ ಇರುವಿ ಪ

ದೀನದಯಾಳು ಶ್ರೀ ಅನಂತ ಮಹಿಮೆಂದು
ಗಾನದಿಂ ಪಾಡಲು ಕೇಳದೆ ಇರುವಿ ಅ.ಪ

ಸೊಪ್ಪಮೆದ್ದವನೆಂದೆನಲೆ ನಿನ್ನ
ತಿಪ್ಪೆತಿರುಕನೆಂದು ಗೌಪ್ಯದಿಂ ಕರಿಲೇ
ಕಪ್ಪುಮೈಯವನೆನ್ನಲೊಪ್ಪಿಕೊಂಡು ಬಂದು
ಅಪ್ಪಿಕೊಂಡ್ವರವೀವ್ಯೋ ಮುಪ್ಪುರಾಂತಕನೆ ೧

ಏಸುಕಾಲದ ಮುದುಕನೆನಲೇ ನಿನ್ನ
ಆಸೆಕಾರನೆಂದು ಆಶಿಸಿ ಕರಿಲೇ
ಹಾಸಿಕೆ ಕಾಣದೆ ಶೇಷನಮೇಲೇರಿ
ವಾಸಿಸುವಿಯೆನಲು ಪೋಷಿಸುವೆಯೋ ಬಂದು ೨

ಬಲುಬಲು ಕಪಟಿಯೆಂದೆನಲೇ ನೀ
ಕಳವಿನೋಳ್ ಪ್ರವೀಣನೆಂದು ಕೂಗಲೇ
ಕುಲಗೆಟ್ಟು ಭಕ್ತರ ಕಲೆಸಿ ಗುಪ್ತದಿಂದ
ಕುಲದಿ ಬಿದ್ದವನೆನಲು ಒಲಿದು ಕಾಯುವೆಯೋ ೩

ಆಲಯ ಕಾಣದೆ ಹೋಗಿ ನೀನು
ಪಾಲಸಾಗರವಾಸನೆಂದು ಕರಿಲೇ
ಬಾಲೆಯರುಡವ ದುಕೂಲ ಚೋರನೆಂದು
ಮೇಲಾಕೂಗಲು ಪಾಲಿಸುವೆಯೋ ಒದಗಿ ೪

ಅರಣ್ಯವಾಸಿಯೆಂದೆನಲೇ ನೀನು
ನಾರಿಯಳ ಕಳಕೊಂಡನೆಂದು ಸಾರಲ್ಯೋ
ಕೋರಿದವರ ಮನಸಾರ ವರನ ನೀಡ್ವ
ಧೀರ ಶ್ರೀರಾಮನೆಂದ್ಹಾರೈಸಿ ಕರೆಯುವೆ ೫

೨೪೪

ಏನೆಂದೆ ಏನೆಂದೆ ರಂಗಯ್ಯಗೆ ನಾನು
ಏನೆಂದೆ ಏನೆಂದೆ ಪ

ನಾನೇನೆಂದೆನೆ ಗಾನಲೋಲಗವ
ಮಾನದ ಮಾತಿಂಥ ಜೀನನ ಕಾಣೆನೆಂದೆ ಅ.ಪ

ಕಾಲು ಇಲ್ಲದ ಹೆಳವನೆಂದೆ
ತಲೆಯ ಕಾಣದ ಕುರೂಪಿಯೆಂದೆ
ಚೆಲುವಿಕಿಲ್ಲದ ಕಾಡು ಹೀನಮೃಗವೆಂದೆ
ಬಲಿಯ ಬಾಗಿಲ ಕಾಯ್ವ ಕೂಲಿಕಾರನೆಂದೆ ೧

ನಾಲಗೆ ಚಾಚಿ ರಕ್ತ ಕುಡಿದನೆಂದೆ
ತಿಳಿದು ಜನನಿತಲೆ ಕಡಿದವನೆಂದೆ
ಲಲನೆಯೊಡನೆ ವನವಾಸಕೆ ಪೋಗಿ
ಬಳಲಿ ಬಳಲಿ ಬಾಯಾರಿದನೆಂದೆ ೨

ಗೊಲ್ಲರ ಕುಲದಲಿ ಹುಟ್ಟಿದನೆಂದೆ
ಗುಳ್ಳೆ ಗುಳ್ಳೆ ಬೆಣ್ಣೆ ಕದ್ದವನೆಂದೆ
ಗೊಲ್ಲರ ಆಕಳ ಕಾಯುವ ಚರನೆಂದೆ
ಘುಲ್ಲನಲನೆಯರ ವಸ್ತ್ರಗಳ್ಳನೆಂದೆ ೩

ಬತ್ತಲೆ ಕುಣಿಕುಣಿದಾಡಿದನೆಂದೆ
ಸತ್ಯಭ್ರಷ್ಟ ಮಹಕಲಿಯು ಈತನೆಂದೆ
ಮತ್ತೆ ವೈಕುಂಠದಿ ಒದೆಸಿಕೊಂಡು ಇವ
ವಿತ್ತದಾಸೆಗೆ ಮರ್ತ್ಯಲೋಕಕಿಳಿದವನೆಂದೆ ೪

ಕುದುರೆ ನಡೆಸಿ ಒಬ್ಬನುಳಿಸಿದನೆಂದೆ
ಕದನದ್ಹೊಂಚಿಸಿ ಒಬ್ಬನಳಿದವನೆಂದೆ
ಕುದುರೆ ಕಟ್ಟಿದ ವೀರ ತಾಮ್ರಧ್ವಜಗೆ ಸೋತು
ಮುದುಕನಾಗಿ ಭಿಕ್ಷದಶ್ವ ತಂದವನೆಂದೆ ೫

ಸೋದರಮಾವನ ಕೊಂದವನೆಂದೆ
ಸೋದರಳಿಯರ ಜೀವ ಹೊಡೆಸಿದನೆಂದೆ
ಭೇದದಿಂದ ಸಾಧು ಹನುಮನ ಸೋಲಿಸಿ
ಸಾಧಿಸ್ವರೂಪಕ್ಕೆ ಪತಾಕೆನಿಸಿದನೆಂದೆ ೬

ದ್ವಾರಕಾಪುರವರ ಜಾರ ಚೋರನೆಂದೆ
ಮೂರುಪುರದ ಸಿರಿ ಸೂರೆಗೊಂಡವನೆಂದೆ
ಮೀರಿದಂಥ ಮಹಮಾಯದ ಹೆಣ್ಣೆಂದೆ
ಈರೇಳುಲೋಕದ ಕಪಟನಾಟಕನೆಂದೆ ೭

ಮೊಚ್ಚೆಗಾರ ಕೈಯೊಳುಂಡವನೆಂದೆ
ಉಚ್ಚಿಷ್ಟನಾಗಿ ಬಹಿಷ್ಕಾರ್ಹೊಂದಿದನೆಂದೆ
ವೆಚ್ಚಮಾಡಿ ಮತ್ತು ಕುಲದಿ ಬಿದ್ದವನೆಂದೆ
ನಿಶ್ಚಲ ಭಕ್ತರಿಗುಚ್ಚಿಷ್ಟ್ಹಿಡಿಸಿದನೆಂದೆ ೮

ಪುಲ್ಲನಯನ ಸಿರಿರಾಮನ ಮುಂದೆ
ಅಲ್ಲದ ಮಾತುಗಳ್ಯಾನೇನೆಂದೆ
ಬಲ್ಲಿದ ಹದಿನಾಲ್ಕು ಲೋಕ ಪೊತ್ತವನೆಂದೆ
ಉಲ್ಲಾಸದಿ ನಿಮ್ಮ ಬಿರುದು ಸಾರುತ ಬಂದೆ ೯

೨೪೫

ಒಕ್ಕಲ ಮಾಡೆನ್ನ ಮುಕ್ಕುಂದ ತಂದೆ
ಒಕ್ಕಲ ಮಾಡೆನ್ನ ಪ

ಒಕ್ಕಲ ಮಾಡೆನ್ನ ದಕ್ಕಿಸಿ ಭವದೊಳು
ಅಕ್ಕರದಲಿ ನಿಮ್ಮ ಮಿಕ್ಕ ಪ್ರಸಾದ ನೀಡಿ ಅ.ಪ

ಆಸೆ ನೀಗಿಸೆನ್ನಭವದ
ಪಾಶ ತರಿಯೊ ಮುನ್ನ
ಈಶನೆ ತವ ಪಾದ ದಾಸಾನುದಾಸರ
ವಾಸದಿರಿಸಿ ಎನ್ನ ಪೋಷಿಸು ದಯದಿಂ ೧

ಸೊಕ್ಕು ಮುರಿದು ಎನ್ನ ನಿಮ್ಮಯ
ಪಕ್ಕದೆಳಕೊ ಎನ್ನ
ತಿಕ್ಕಿ ಮುಕ್ಕುವ ಘನ ಮಕ್ಕಮಾರಿ ಸತಿಯ
ರಕ್ಕರ್ಹಾರಿಸಿ ನಜರಿಕ್ಕೆ ಸಲಹುಜೀಯ ೨

ಜನನ ಮರಣ ಬಿಡಿಸೊ ಎನ್ನಯ
ಮನವ ನಿನ್ನೊಳಿರಿಸೊ
ವನರುಹ ಬ್ರಹ್ಮಾಂಡ ಜನನಿ ಜನಕನಾದ
ವನಜಾಕ್ಷ ಶ್ರೀರಾಮ ಘನಮುಕ್ತಿ ಪಾಲಿಸಿ ೩

೨೪೬

ಕಮಲನಾಭ ನಿಮ್ಮ ಪಾದಕಮಲ ನಂಬಿ ಭಜಿಪೆ ಶ್ರೀ
ವಿಮಲ ಹೃದಯ ಎನ್ನ ಪಾಪ ಕ್ಷಮಿಸು ಮಾಧವ ಪ

ಪಕ್ಷಿಗಮನ ನಿಮ್ಮ ನಿರ್ಮಲಕ್ಷಯನಾಮ ಎನ್ನ ಜಿಹ್ವೆಗೆ
ಲಕ್ಷ್ಯದಿತ್ತು ಪಿಡಿದು ಬಿಡದೆ ರಕ್ಷಿಸ್ಯಾದವ ೧

ಮಂದಭಾಗ್ಯ ನಾನು ನಿಮ್ಮ ಬಂಧುರಂಘ್ರಿಕುಸುಮ ಮರೆ
ಬಂದು ಬಿದ್ದೆ ದಯದಿ ಕಾಯೋ ಮಂದರೋದ್ಧಾರ ೨

ಅರಿಯದೆ ನಾ ಮಾಡಿದಂಥ ಪರಮದುರಿತ ತರಿದು ತವ
ಚರಣಸೇವೆ ನೀಡಿ ಪೊರೆಯೈ ಉರಗಶಯನ ೩

ನಾನಾ ಬೇನೆಯೊಳಗೆ ಬಿದ್ದು ಹಾನಿಯಾಗಿ ಬಳಲುವಂಥ
ಹೀನ ಬವಣೆ ತಪ್ಪಿಸಿನ್ನು ದಾನವಾಂತಕ ೪

ಕ್ಷಣಕೆಕ್ಷಣಕೆ ಮಾನವರಿಗೆ ಮಣಿದು ಬೇಡಿ ಜೀವಿಸುವ
ಬಿನಗುಕೃತಿ ಗೆಲಿಸು ದಯದಿ ದೀನಮಂದಾರ ೫

ಜನಿಸಿದಂದಿನಿಂದ ನಾನು ಘನ ತಾಪತ್ರಯದಿ ನೊಂದೆ
ಮನಕೆ ತಂದು ರಕ್ಷಿಸಿನ್ನು ಜನಕಜಾವರ ೬

ಬುದ್ಧಿಯಿಲ್ಲದೆ ಕೆಟ್ಟೆನಭವ ಬದ್ಧಜನರ ಸಂಗದಿ ಬಿದ್ದು
ಶುದ್ಧಮತಿಯ ನೀಡಿ ಸಲಹು ಪದ್ಮನಾಭನೆ ೭

ವಿಶ್ವ ವಿಶ್ವಾಕಾರ ನಿಮ್ಮ ವಿಶ್ವಾಸೆನಗೆ ಕೃಪೆಯ ಮಾಡಿ
ನಶ್ವರೆನಿಪ ಮತಿಯ ಬಿಡಿಸು ವಿಶ್ವರಕ್ಷನೆ ೮

ನೀನೆ ಗತಿಯು ಎನಗೆ ದೇವ ನಾನಾದೈವವರಿಯೆ ಸತ್ಯ
ಜ್ಞಾನಪಾಲಿಸೊಳಿಮು ಬೇಗ ಜ್ಞಾನಸಾಗರ ೯

ಕೆಟ್ಟ ಹೊಟ್ಟೆ ಕಷ್ಟಕಡಿದು ದುಷ್ಟ ಭ್ರಷ್ಟ ಸಂಗ ತರಿದು
ಶಿಷ್ಟ ಸಂಗ ದೊರಕಿಸೆನಗೆ ಸೃಷ್ಟಿಕರ್ತನೆ ೧೦

ದೋಷಹರನೆ ಯಮನ ಭೀತಿ ನಾಶಗೈದು ಸುಜನ ಸಹ
ವಾಸದಿರಿಸನುಮೇಷ ಎನ್ನ ವಾಸುದೇವನೆ ೧೧

ಹೀನ ಹೀನ ಜಗ ಅಭಿಮಾನ ತೊಲಗಿಸಧಿಕ ನಿಮ್ಮ
ಧ್ಯಾನಾನಂದ ಕರುಣಿಸಯ್ಯ ಜನಾರ್ದನ ೧೨

ಭಾರವೆನಿಪ ವಿಷಮಸಂಸಾರ ಸುಲಭದಿಂದ ಗೆಲಿಸು
ಘೋರ ಭವದ ತಾಪಹರ ನಾರಾಯಣ ೧೩

ದೇಶದೇಶಂಗಳನು ತಿರುಗಿ ಅಸಂಬದ್ಧನಾದೆ ಸ್ವಾಮಿ
ದೋಷ ಮನ್ನಿಸಯ್ಯ ಎನ್ನ ಈಶಕೇಶವ ೧೪

ಸಂಚಿತಿಂದೀಗಳಿ(ಯಿ)ಸೆನ್ನ ಮುಂಚಿತಾಗಮ ಗೆಲಿಸು ಜೀಯ
ಸಂಚಿತಾಗಮ ರಹಿತ ವಿರಂಚಿತಾತನೆ ೧೫

ಚಾರುವೇದ ಪೊಗಳುವಂಥ ತೋರಿಸಯ್ಯ ನಿನ್ನ ಮೂರ್ತಿ
ಮೂರು ಲೋಕ ಸಾರ್ವಭೌಮ ನಾರಸಿಂಹ ೧೬

ಮದನನಯ್ಯ ಮುದದಿ ಬೇಡ್ವೆ ಸದಮಲ ಸಂಪದವ ನೀಡು
ಸದಮಲಾಂಗ ಸರ್ವಾಧಾರ ಮಧುಸೂದನ ೧೭

ಸಕಲ ವಿಘ್ನದೂರ ಮಾಡಿ ಮುಕುತಿಪಥಕೆ ಹಚ್ಚು ತ್ವರಿತ
ಭಕುತರಿಷ್ಟ ಪೂರ್ಣ ಆದಿಲಕುಮಿನಾಯಕ ೧೮

ದರ್ಜುಮಾಡಿಸೆನ್ನ ನಿಮ್ಮ ಮರ್ಜಿಪಡೆದ ಭಕ್ತರೊಳಗೆ
ದುರ್ಜನಾಗಿ ದಯಾರ್ಣವ ನಿರ್ಜರೇಶನೆ ೧೯

ಪೋಷಿಸೆನ್ನನುಮೇಷ ನಿಮ್ಮ ದಾಸನೆನಿಸಿ ವಸುಧೆಯೊಳು
ಆಸೆಯಿಂದ ಬೇಡಿಕೊಂಬೆ ಕ್ಲೇಶನಾಶನೆ ೨೦

ನಿರುತ ಮನದಿ ಹರಿಯ ನಾಮ ಬರೆದು ಓದಿ ಕೇಳುವರಿಗೆ
ಪರಮ ಮುಕ್ತಿ ಕೊಡುವ ಮಮ ವರದ ಶ್ರೀರಾಮ ೨೧

೨೪೭

ಕರುಣವ ತೋರೋ ಕರುಣಗುಣಾಂಬುಧಿ
ಕರುಣವ ತೋರೋ ರಂಗಯ್ಯ ಪ

ಕರುಣದಿ ಬಾರೋ ಬಾರೋ ಕರುಣ ತೋರಿ ಎನ್ನ
ಕರುಣದಪ್ಪಿ ಪೊರಿ ಕರುಣವ ತೋರೋ ಅ.ಪ

ಪರತರಮಹಿಮ ಹರಸುರಬ್ರಹ್ಮರ
ಮೊರೆಯ ಕೇಳಿದ ಕರುಣವ ತೋರೋ ರಂಗಯ್ಯ
ಧರೆಗೆ ಇಳಿದು ಶೇಷಗಿರಿಯಲಿ ನಿಂತು
ನರಸುರರಿಗೆ ವರವಿತ್ತ ಕರುಣವ ತೋರೋ ರಂಗಯ್ಯ

ಚರಣಭಕ್ತಗೆ ಮೆಚ್ಚಿ ಭರದಿಂ ಪಂಢರ
ಪುರದಿ ಬಂದು ನಿಂತ ಕರುಣವ ತೋರೋ ರಂಗಯ್ಯ
ಕರುಣದಿ ಬಾರೋ ಬಾರೋ ಚರಣವಿಟ್ಟು ನಾರಿಕುಲವನು
ದ್ಧರಿಸಿದಿ ಕರುಣವ ತೋರೋ ೧

ಅಂಬುಜನಯನ ಕಂಬದಿ ಬಂದು ಭಕ್ತ
ಗಿಂಬುಕೊಟ್ಟು ಕಾಯ್ದ ಕರುಣವ ತೋರೋ ರಂಗಯ್ಯ
ನಂಬಿಕೊಟ್ಟ ಕಮಲಾಂಬಕಿಯೆಂಜಲ
ಸಂಭ್ರಮದಿಂ ಮೆದ್ದ ಕರುಣವ ತೋರೋ ರಂಗಯ್ಯ
ನಂಬಿದ ಅಸುರಗೆ ಬೆಂಬಲಗೊಟ್ಟು ಸ್ಥಿರ
ಕುಂಭಿನಿಪಟ್ಟವಿತ್ತ ಕರುಣವ ತೋರೋ ರಂಗಯ್ಯ
ಕರುಣದಿ ಬಾರೋ ಬಾರೋ ಅಂಬರೀಷನ ಮೊರೆ ಕೇಳಿ
ಶೀಘ್ರದಿಂದ ಕರುಣವ ತೋರೋ ೨

ನಿರುತ ನಂಬಿ ನಿನ್ನ ಮರೆಹೊಕ್ಕ ಬಾಲಗೆ
ಸ್ಥಿರಪದವಿಯನಿತ್ತ ಕರುಣವ ತೋರೋ ರಂಗಯ್ಯ
ಗರುಡನೇರಿ ಬಂದು ಕರಿಯ ವಿಪತ್ತನು
ಪರಿಹರಿಸಿದ ಮಹಕರುಣವ ತೋರೋ ರಂಗಯ್ಯ
ಹರಿಹರಿ ಎಂದೊದರಿದ ತರಣಿಭಕ್ತಿಗೆ ಮೆಚ್ಚಿ
ನಿರುತ ಮೈಗಾವಲಾದ ಕರುಣವ ತೋರೋ ರಂಗಯ್ಯ
ಕರುಣದಿ ಬಾರೋ ಬಾರೋ ಪರಮ ನಿರ್ಜರರಿಗೆ
ಅಮೃತವುಣಿಸಿದ ಕರುಣವ ತೋರೋ ೩

ದುರುಳಕೋಟಿಯಾಚರಿಸಿದ ದುರುಳಗೆ
ಪರಮ ಕೈವಲ್ಯವಿತ್ತ ಕರುಣವ ತೋರೋ ರಂಗಯ್ಯ
ಕಿರಿಕುಲದವನ ಕರದಿಂ ಪರಮಾ
ದರದಿ ಉಂಡ ಮಹಕರುಣವ ತೋರೋ ರಂಗಯ್ಯ
ತರಳ ಕರೆಯಲು ತ್ವರಿತದಿ ನೀ ಬಂದು
ನೀರು ಕೊಟ್ಟ ನಿಜಕರುಣವ ತೋರೋ ರಂಗಯ್ಯ

ಕರುಣದಿ ಬಾರೋ ಬಾರೋ ಚರಣದಾಸ
ವರ ಕನಕನಿಗೊಲಿದ ಕರುಣವ ತೋರೋ ೪

ಹಿಡಿ ಅವಲಕ್ಕಿಯ ಕೊಡಲು ಒಪ್ಪಿ ನೀ
ಕಡು ಸಂಪದವಿತ್ತ ಕರುಣವ ತೋರೋ ರಂಗಯ್ಯ
ಮಡಿದ ಬಾಲಕನಂ ಕಡುದಯದೆಬ್ಬಿಸಿ
ಪಿಡಿದು ಕಾಪಾಡಿದ ಕರುಣವ ತೋರೋ ರಂಗಯ್ಯ
ದೃಢಕರ ಬೆಂಬಲ ಬಿಡದೆಯಿರುವ ನಿನ್ನ
ಕಡುದಿವ್ಯ ಮೂರ್ತಿಯ ಕರುಣವ ತೋರೋ ರಂಗಯ್ಯ
ಕರುಣದಿ ಬಾರೋ ರಂಗ ಒಡೆಯ ಶ್ರೀರಾಮ ಎ
ನ್ನೊಡಲಗಲದೆ ನಿಂತು ಕರುಣವ ತೋರೋ ೫

೨೪೮

ಕರುಣಿಸು ಕರುಣಿಸು ಕರುಣಿ ಶ್ರೀ ರಂಗಯ್ಯಾ
ಹರಣ ಪೋದರು ನಿಮ್ಮ ಸ್ಮರಣೆ ಮರೆಯದಂತೆ ಪ

ಪರಿಭವ ತಾಪದಿಂ ಮರವೆ ಮಾಯದಿ ಸಿಲುಕಿ
ಮರುಳ ಮಾನವರಿಗೆ ಶಿರವ ಬಾಗದಂತೆ ೧

ಘನದುಃಖಮಯವಾದ ಜನನಮರಣವೆಂಬ
ಕುಣಿಯೊಳಗೆ ಸಿಕ್ಕಿ ಜನಿಸಿಬಾರದಂತೆ ೨

ದುರಿತ ದಾರಿದ್ರ್ಯದಿಂದ ಪರಿಪಕ್ವನೆನಿಸೆನ್ನ
ವರದ ಶ್ರೀರಾಮ ನಿಮ್ಮ ಚರಣ ಸೇವೆಯ ಘನತೆ ೩

೨೪೯

ಕರುಣಿಸು ಪ್ರಭುತಂದೆ ತರಳಂಗೆ ದಯವ ಪ

ಹರಿ ನೀನೆ ಅವತರಿಸೀಪರಿಭವಶರಧಿಯ
ಪರಿಹಾರಗೊಳಿಸುವ ಪರಮಪಾವನರೂಪ ೧

ಅರಿವಿಟ್ಟು ಭಜಿಸುವೆ ಮರೆಯದೆ ಮಗನ್ವಚನ
ಕರುಣದಿ ಆಲಿಸಿ ವರದಹಸ್ತವ ಶಿರಕೆ ೨

ಹಿಂಸೆಬಿಡಿಸು ಮಹ ಸಂಸಾರದುರಿಯನ್ನು
ಧ್ವಂಸಗೈಯುವ ಶರಣರಾಂಶದ ಪ್ರಸನ್ನತೆ ೩

ದುರಿತ ದೂರೀಕರಿಸಿ ಪರಮಾನಂದದಲಿರುವ
ಪರಿಪಕ್ವಹೃದಯರ ನೆರೆಯವಾಸದಿ ಸಿರಿ ೪

ಮರೆಯ ನಿನ್ನಡಿಯಿನ್ನು ಸರುವೇಶ ಮೊರೆಕೇಳಿ
ಗುರುವಾಗಿ ಶ್ರೀರಾಮ ಸ್ಥಿರಮೋಕ್ಷ ಸಂಪದವ ೫

೨೫೦

ಕರುಣಿಸು ಹರಿಯೆ ಕರುಣನಿಕರ ಎನ್ನ
ಕರುಣದಿ ನೀನೀಗ ತರಳನ್ನ ಮೊರೆಕೇಳಿ ಪ

ಭವತಾಪಶರಧಿಯ ಬವಣೆಯ ತಡೆಯದೆ
ಭವಹರ ನೀನೆಂದು ಬಂದು ಮರೆಯಬಿದ್ದೆ ೧

ಹಿಂದಾರು ಎನಗಿಲ್ಲ ಮುಂದಾರು ಗತಿಯಿಲ್ಲ
ತಂದೆ ನೀ ಬಿಟ್ಟರೆ ಬಂಧ ಕಳೆಯುವರಿಲ್ಲ ೨

ನೀನಿಗತಿ ಎನಗಿನ್ನು ಕಾಣೆ ಮತ್ತಾರನ್ನು
ಮಾಣದೆ ಸಲಹಯ್ಯ ಪ್ರಾಣೇಶ ಶ್ರೀರಾಮ ೩

೨೫೧

ಕಾಯೊ ಸುಖಸಾರ ಮಾಯಾವಿದೂರ
ಭಾವಜನಯ್ಯ ಭಕುತರ ಪ್ರಿಯಕರ ಪ

ಕಾಯಕಾಂತಾರದೊಳು ನೋಯುತ ವಿಧ ವಿಧ
ಬಾಯ ಬಿಡುವೆನಯ್ಯ ತೋಯಜಾಕ್ಷನೆ ನೋಡೊ ೧

ಸಂಸಾರತೆರೆಯೊಳು ಹಿಂಸೆ ಪಡುತ ಮತಿ
ಭ್ರಂಶನಾದೆನುಬಲು ಕಂಸಾರಿ ಕರುಣಿಸೊ ೨

ಜಡಭವತೊಡರನು ಕಡೆಹಾಯ್ಸಿ ಕೊಡುಮುಕ್ತಿ
ಕಡುದಯಾನಿಧೆ ಎನ್ನೊಡೆಯ ಶ್ರೀರಾಮನೆ ೩

೨೫೨

ಕಾಲ ಕಳೆಯಬೇಡ ಮನವೇ
ಮೂಳನಾಗಬೇಡ ಪ

ಕಾಳು ಕತ್ತಲೆಂಬ ಹಾಳು ಸಂಸಾರ ಮಾಯಾ
ಜಾಲ ಮೋಹಿಸಿ ಹೊತ್ತು ಹಾಳುಮಾಡಿಕೊಂಡು ಅ.ಪ

ನಿನ್ನೊಳು ಹುಡುಕಾಡಿ ಹರಿಯ
ಉನ್ನತಕೃಪೆ ಪಡಿ
ಕಣ್ಣುಮುಚ್ಚಿ ಪರರ್ಹೆಣ್ಣಿನ ಹೊಲೆಮ್ಮೈ
ಬಣ್ಣಕೆ ಮನಸೋತು ಠೊಣ್ಯನೆನಿಸಿಕೊಂಡು ೧

ನೋಡಿ ತಿಳಿದು ಭವಮೂಲ ಹುಡುಕಾಡಿ
ಹಿಡಿಯೋ ನಿಜವ
ರೂಢಿಸುಖಕೆ ಮನನೀಡಿ ಸನ್ಮಾರ್ಗದ
ಜಾಡು ತಿಳಿಯದೆಮತಾಡಣೆಗೊಳಪಟ್ಟು ೨

ಅರಿತು ಶ್ರೀರಾಮಚರಣ ನಿರುತದಿ
ಗುರುತು ಹಿಡಿಯೋ ಜಾಣ
ಪರಲೋಕ ಸಾಧನ ಸುರತು ಷರತು ಮಾಡಿಕೊಂಡು
ಪರಕೆ ಪರಮ ಪರತರ ಮುಕ್ತಿ ಸುಖ ಸುರಿ ೩

೨೫೩

ಕಾವದೇವ ನಿನಗೆ ನಾ ಕೈಮುಗಿದು ಬೇಡ್ವೆ
ಕಾಮಜಪಿತ ಎನ್ನ ಕಾಯಮೋಹ ಬಿಡಿಸೈ ಪ

ಮಸಣಬುದ್ಧಿಯ ಮರೆಸು ಮಸಿನುಡಿಯ ಪರಿಹರಿಸು
ವಸನ ಒಡವ್ಯೆಂದೆಂಬ ವ್ಯಸನ ಕಡೆಹಾಯ್ಸು
ದಿಸೆಗೆಡಿಸಿ ಬಳಲಿಸುವ ಹಸಿವು ತೃಷೆಯನಡಗಿಸಿ
ಹಸನಗೆಡಿಸುವ ಮಮ ರಸನೆರುಚಿ ಕೆಡಿಸು ೧

ಅಳದ್ಹೋಗ್ವ ಇಳೆಸುಖದ ಹಲುಬಾಟವನೆ ಬಿಡಿಸು
ಮಲಿನಸಂಸಾರಮಾಯ ಕಳವಳಿಕೆ ತಪ್ಪಿಸು
ಸಲೆ ಸಾಧುಸಂತತಿಯ ಬಳಗದೊಳು ಕೂಡಿಸು
ಹೊಳೆಯಮನಸಿನ ಸಕಲ ಚಲನೆ ದೂರೆನಿಸುತ ೨

ದೋಷರಾಶಿಯ ತೊಡೆದು ಮೋಸಪಾಶವ ಕಡಿದು
ಆಸೆ ನಾಶಗೈದು ನಿರ್ದೋಷನೆನಿಸಿ
ಶ್ರೀಶ ಶ್ರೀರಾಮ ನಿಮ್ಮ ಸಾಸಿರ ನಾಮವೆನ್ನ
ಧ್ಯಾಸದಲಿ ಸ್ಥಿರನಿಲಿಸಿ ಪೋಷಿಸನುದಿನದಿ ೩

೨೫೪

ಕಾವ ದೇವರು ನೀನೆ ಎನ್ನ ಕೈ ಪಿಡಿಯೋ
ದೇವ ಹರಿ ತವಪಾದ ಮರೆಹೊಕ್ಕೆ ಕಾಯೊ ಪ

ತರಳ ಪ್ರಹ್ಲಾದನಂ ಸಂಕಟದಿ ರಕ್ಷಿಸಿದಿ
ಮರೆ ಬಿದ್ದ ಅಸುರನಿಗೆ ಸ್ಥಿರಪಟ್ಟ ಕೊಟ್ಟಿ
ಕರಿಯ ಕಂಟಕ ಭರದಿ ನೆರವಾಗಿ ತರಿದಯ್ಯ
ತರುಣಿಯ ಮೊರೆ ಕೇಳಿ ಅಕ್ಷಯವನಿತ್ತಿ ೧

ಶಿಲೆಯರೂಪದಿ ಬಿದ್ದ ಸತಿಯನುದ್ಧರಿಸಿದಿ
ಕುಲಗೆಟ್ಟ ಅಜಮಿಳನ ಅಂತ್ಯದಲಿ ಕಾಯ್ದಿ
ಒಲಿದು ನಭೋರಾಜನಂ ಶಾಪದಿಂದುಳಿಸಿದಿ
ಅಳಿಯದ ಪದವಿ ನೀಡಿ ಧ್ರುವರಾಜನ್ಪೊರೆದಿ ೨

ಭಕ್ತವತ್ಸಲನೆಂಬ ಬಿರುದಗಳ ಪೊತ್ತಿರುವಿ
ಭಕ್ತನಿಗೆ ಬರುವ ನಿಖಿಲಾಪತ್ತುಗಳನು

ಕತ್ತರಿಸಿ ಹಿತವಾದಭಕ್ತಿಯನು ಕರುಣಿಸಿ
ನಿತ್ಯನಿರ್ಮಲಸುಖವ ನೀಡು ಶ್ರೀರಾಮ ೩

೨೫೫

ಕೇಳು ಮನವೆ ಏನುಕೆಟ್ಟೆಲೋ
ಹಾಳು ಮಾಡಿದಿ ದಿನಗಳ ಪ

ನೀಲಮೇಘಶ್ಯಾಮ ಹರಿಪಾದ
ಶೀಲಭಕ್ತಿಲಿ ಸ್ಮರಿಸದೆ ಅ.ಪ

ಬಾಲತನದ ಸುಶೀಲ ದಿನಗಳ
ಜಾಳುಗೈದೆಲೋ ಆಟದಿ
ನಾಳೆ ಕಾಲನು ಸೀಳಿ ಕೊಲುವಾಗ
ತಾಳಿ ಬಾಳುವುದೆಂತೆಲೊ ೧

ಪ್ರಾಯದಿನಗಳ ಕಾಯಜನ ಮಹ
ಮಾಯದಾಟದಿ ನೀಗಿದ್ಯೊ
ಮಾಯಮೃತಿಯ ಬಾಯೊಳು ಸಿಲ್ಕಿ
ನೋಯುವಾಗ ಕಾಯ್ವರಾರೆಲೊ ೨

ಇಷ್ಟಕ್ಕಾದರೂ ಕೆಟ್ಟಗುಣಗಳ
ಬಿಟ್ಟು ಶ್ರೀರಾಮಪಾದವ
ನಿಷ್ಠೆಯಿಂ ಮನಮುಟ್ಟಿ ಭಜಿಸಲೆ
ದುಷ್ಟಭವದಿಂ ಗೆಲಿಸುವ ೩

೨೫೬

ಕೇಳುಯೋಚನೆ ಬಿಡು ಖೋಡಿಮನವೇ
ಮೇಲುಸಂಪದ ಪಡಿ ಮಾಧವನಿಂ ಬೇಡಿ ಪ

ಹಾಳುಯೋಚನೆ ಮಾಡಿ ಮಾಡಿ ನೀನು
ಬೀಳುಗಳೆಯ ಬೇಡ ತಿಳಿ ಪುಚ್ಚ ಖೋಡಿ

ನಾಳೆ ಬರುತಾದ ಯಮನ ಬೇಡಿ ಅವರು
ತಾಳದೆ ಜಡಿತಾರ ಒದೆದು ಎಳೆದಾಡಿ ೧

ನಾಶನ ಈ ಜಗಸುಖ ಒಂದೇ
ತಾಸಿನ ಮೋಜಿದು ಇರದು ಕಡೆತನಕ
ಮೋಸದಿ ಸಿಲ್ಕಬೇಡಿದಕೆ ಇದ
ರ್‍ವಾಸನಳಿದು ಬೇಗ ಕಡಕೋ ಭವತೊಡಕ ೨

ದಾಸರು ಪೇಳಿದ ಸೊಲ್ಲುಕೇಳಿ
ಧ್ಯಾಸಿಟ್ಟು ದೋಷದಿಂ ಕಡೆಗ್ಹಾರಿ ನಿಲ್ಲು
ದಾಸನಾಗಿ ಭವಗೆಲ್ಲು ತಂದೆ
ಶ್ರೀರಾಮನ ಪಾದಕೆ ಸಲ್ಲು ೩

೨೫೭

ಕುಲವಂತನೇ ನೀನು ಎಲೋ ಪರಮಾನಂದ
ಕುಲಹೀನನೇ ನಾನು ಪೇಳೆಲವೊ ಸ್ವಾಮಿ ಪ

ಹೊಲೆಯ ಪೆದ್ದಯ್ಯಗೆ ಒಲಿದವನ ಆಳಾದಿ
ಕುಲದಿ ಮಾದಿಗರ್ಹರಳಯ್ಯನ ಮನೆಲುಂಡಿ
ಚೆಲುವ ಕೂಸಿನ ಕೊರತೆ ಸಲಿಸಿದಿ ಬಲುಹಿತದಿ
ಮಲಿನಸೀರೆಯ ನಿನ್ನ ತಲೆಗೆ ಸುತ್ತಿಕೊಂಡಿ ೧

ಡೊಂಬಿತಿಯ ಗುಡಿಸಿಲಲಿ ಸಂಭ್ರಮದಿ ಮಲಗಿದಿ
ಶಂಭೋ ಕುಣಿದೆಲೋ ಕುಂಬಾರಗೊಲಿದು
ಬೆಂಬಲಿಸಿ ತಿರುಗಿದಿ ಸಾಂಬ ನೀ ನಡ ಪೊತ್ತು
ಇಂಬು ಸುಡುಗಾಡು ನಿನಗಂಬುಧಿಧರನೆ ೨

ಪುಲಿಚರ್ಮ ಹಾಸಿಕೊಂಡ್ಹೊಲಸು ಚರ್ಮುಟ್ಟಿರುವಿ
ತಲೆ ಬುರುಡೆ ಕೊರಲಿಗೆ ಮಾಲೆ ಧರಿಸಿರುವಿ
ಎಲೊ ದೇವ ಇನಿತಿರ್ದು ಕುಲವನೆಣಿಸುವಿ ನಿನ್ನ
ಒಲವು ಬೇಡುವರಿಗೆ ಶ್ರೀರಾಮಸಖನೆ ೩

೨೫೮

ಕೇಶವ ಪಾಲಿಸ್ಯೆ ವರವ ಪ

ಕೇಶವ ಪಾಲಿಸ್ಯೆ ದಾಸನ ಆಸೆ ನಿ
ರಾಸೆಯ ಮಾಡದೆ ಅ.ಪ

ಈರೇಳು ಲೋಕದಾಧಾರನು ನೀನೆ
ಚಾರು ನಿಗಮ ಸಂಸಾರವು ನೀನೆ ೧

ಸರ್ವಾಂತರಾತ್ಮ ಸರ್ವವ್ಯಾಪಕನೆ
ಸರ್ವಸ್ವತಂತ್ರನೆ ಸರ್ವದೇವ ನೀನೆ ೨

ಆಸೆ ನೀಗಿಸಿ ಎನ್ನ ಘಾಸಿಮಾಡದೆ ಪೊರೆ
ದೋಷನಿವಾರಣ ಶ್ರೀಶ ಶ್ರೀರಾಮನೆ ೩

೨೫೯

ಕೇಳಿದರೆನಗೇನು ಗೊತ್ತಿಲ್ಲ
ಹೇಳುವದ್ಬುಟ್ಟನಾ ಕಲಿತಿಲ್ಲ ಪ

ಹೇಳಿದ್ದೆ ಕೇಳಿ ನಾ ಮೂಲತಿಳಿದು ಭವ
ಮಾಲನ ಭಜಿಸುವೆನಲ್ಲ ಅ.ಪ

ವೇದವೊದಲು ನಾನೋದಿಲ್ಲ
ವೇದಮಂತ್ರ ಗೊತ್ತೆನಗಿಲ್ಲ
ಮೇದಿನಿಯೊಳು ಹರಿಪಾದದಾಸರು ನಿ
ವೇದಿಸಿದ ತೆರ ಸಾಧಿಪೆನಲ್ಲ ೧

ನಿತ್ಯತತ್ತ್ವ ಗೊತ್ತೆನಗಿಲ್ಲ
ಮತ್ತು ಆವಶಾಸ್ತ್ರ ಗತಿಯಿಲ್ಲ
ಸತ್ಯರು ಪೇಳಿದ ನಿತ್ಯವಾಕ್ಯಗಳ
ಚಿತ್ತವಿಟ್ಟರಿಯುತ್ತ ಸತ್ಯ ನಂಬಿಹೆನಲ್ಲ ೨

ಛಂದಸ್ಸು ಲಕ್ಷಣ ನೋಡಿಲ್ಲ
ಒಂದು ಪುರಾಣದರ್ಥ ಮಾಡಿಲ್ಲ
ಬಂಧುಭಜಕರಾನಂದ ಶ್ರೀರಾಮನ
ಬಂಧುರಂಘ್ರಿ ಸ್ಮರಣೊಂದೆ ಬಲ್ಲೆನಲ್ಲ ೩

೨೬೦

ಕೊಡು ಕೊಡು ಕೊಡು ಹರಿಯೆ ಕೆಡದಂಥ ಪದವಿಯ
ಒಡನೆ ನಿಮ್ಮಂಘ್ರಿಯ ಕಡುದೃಢ ಭಕುತಿಯ ಪ

ನಿಜಪದದಾಯಕ ತ್ರಿಜಗ ಪರಿಪಾಲಕ
ಭಜಿಸಿಬೇಡುವೆ ನಿಮ್ಮ ಭಜನೆಸವಿಸುಖಲಾಭ ೧

ಪರಕೆ ಪರತರವೆನಿಪ ಪರಮಪಾವನ ನಿಮ್ಮ
ಚರಿತ ಪೊಗಳಿ ಬಾಳ್ವ ಪರಮಾನಂದದ ಜೋಕು ೨

ಯತಿತತಿಗಳು ಬಿಡದೆ ಅತಿ ಭಕ್ತಿಯಿಂ ಬೇಡ್ವ
ಪತಿತ ತವಸೇವೆಯಭಿರುಚಿ ಎನ್ನೊಡಲಿಗೆ ಸತತ ೩

ಪರಿಭವ ಶರಧಿಯ ಕಿರಿಯಾಗಿ ತೋರಿಪ
ಪರಮಪುರುಷ ನಿಮ್ಮ ಕರುಣ ಚರಣ ಮೊರೆ ೪

ದುಷ್ಟ ಭ್ರಷ್ಟತೆಯಳಿದು ಶಿಷ್ಟರೊಲುಮೆಯಿತ್ತು
ಅಷ್ಟಮೂರುತಿ ನಿಮ್ಮ ಶಿಷ್ಟಪಾದದ ನಿಷ್ಠೆ ೫

ಕನಸು ಮನಸಿನೊಳೆನ್ನ ಕೊನೆಯ ನಾಲಗೆ ಮೇಲೆ
ನೆನಹು ನಿಲ್ಲಿಸಿ ನಿಮ್ಮ ಕರುಣಘನ ಕೃಪೆ ೬

ನಾಶನಸಂಸಾರದಾಸೆಯಳಿದು ನಿಜ
ಧ್ಯಾಸದಿರುವ ಮಹದಾಸಸಂಗದ ಸಿರಿ ೭

ಮೂರ್ಥತ್ತು ಮೂರುಕೋಟಿ ವಾರಿಜಾಸನ ಸುರರು
ಸೇರಿ ಭಜಿಪ ನಿಮ್ಮ ಮೂರುಕಾಲದ ನೆನಪು ೮

ಅಂತರ ಶೋಧಿಸಿ ಅಂತರಾತ್ಮನ ಕಂಡು
ಸಂತಸದ್ಧಿಗ್ಗುವ ಸಂತರ ಮತವರ್ಣ ೯

ಸರ್ವಜ್ಞರೆನಿಸಿದವರ ಶರಣರ ಸಂಗಕರುಣಿಸಿ
ಕರುಣದಿ ಪರಮ ಜ್ಞಾನೆನುವ ಪದವಿ ೧೦

ಮಿಗಿಲಾಗಿ ನಿರ್ಧರಿಸಿ ಸಿರಿವರನಂಘ್ರಿಯೇ
ಜಗಮೂರಧಿಕೆಂಬ ಸುಗುಣಗುಣಾಶ್ರಮ ೧೧

ಧರೆಮೂರು ತಲೆಬಾಗಿ ಪರಮಾದರದಿ ಪಾಡ್ವ
ಹರಿನಾಮ ಕೀರ್ತನೆ ಪರಮಾದರದಿ ಪಾಡ್ವ ೧೨

ಶಮೆಶಾಂತಿದಯೆಭಕ್ತಿ ವಿಮಲಗುಣಭೂಷಣತೆ
ಸುಮನಸಸಮನಿಷ್ಠೆ ಅಮಿತಮತಿವರ ಶ್ರೀ ೧೩

ಮಿಥ್ಯೆವರ್ಜಿತವಖಿಲ ಸತ್ಯತೆ ಸದಮಲ
ನಿತ್ಯ ನಿರ್ಮಲವೆನಿಪ ತತ್ವದರ್ಥದ ವಿವರ ೧೪

ತನುನಿತ್ಯ ಸ್ವಸ್ಥತೆ ಘನಕೆ ಘನತರವಾಗಿಮಿನುಗುವ
ಘನಮುಕ್ತಿ ಮನುಮುನಿಗಳ ಪ್ರೇಮ ಶ್ರೀರಾಮ ೧೫

೨೬೧

ಕೊಡುಜಜಡಜಾಕ್ಷ ನಿಮ್ಮಡಿ ಧ್ಯಾನಮೃತ
ಕಡುದಯದೆನ್ನಯ ಜೆಹ್ವೆಗೆ ಸತತ ಪ

ದುರುಳ ದಾನವರೊದೆದ ಸುರರನುದ್ಧರಿಸಿದ
ಪರಮಪಾವನ ಪಾದಸ್ಮರಣಸಂಜೀವನ ೧

ಅತ್ರಿಮುನಿಯ ಕಾಯ್ದು ಸತ್ರಾಜಿತನ ಪೊರೆದ
ಸತ್ಯವ್ರತೆಗೆ ವರವಿತ್ತ ಅಮಿತಪುರುಷ ೨

ಭಕ್ತರಾಪತ್ತು ಕಳೆದು ಅರ್ಥಿಯಿಂ ಕಾಯ್ವ ಪ
ವಿತ್ರ ಶ್ರೀರಾಮನಾಮ ಮುಕ್ತಿ ಸಂಪದಸಿದ್ಧಿ ೩

೨೬೨

ಕೊಡು ನಿನ್ನ ಧ್ಯಾನ ಒಡೆಯ ಶ್ರೀರಮಣ
ಎಡಬಿಡದಲೆ ತವಅಡಿಭಕ್ತಿಜ್ಞಾನ ಪ

ವನವಸೇರಿರಲಿ ಮತ್ತನುಗಾಲ ಬಡತನ
ವನುಭವಿಸುತಿರಲಿ ಘನಸುಖದಿರಲಿ ೧

ಸತಿಯಳೊಂದಿಗೆ ಬಿಡದೆ ರತಿಕ್ರೀಡೆಲಿರಲಿ
ಸತತದಿ ತವಭಕ್ತಿ ಹಿತಾಹಿತದ ಚಿಂತನೆಯನು ೨

ಚಳಿ ಮಳೆಯೊಳು ಬಿದ್ದು ಕಳವಳಗೊಳ್ಳುತಿರಲಿ
ಹುಲಿಯ ಬಾಯೊಳು ಸಿಲ್ಕಿ ಹಲುಬಿ ಎದೆಯೊಡೆದು ೩

ಕೊಟ್ಟ ಒಡೆಯರು ಬಂದು ಕಟ್ಟಿ ಕಾದಲಿ ಜನ
ಬೆಟ್ಟ ಬೇಸರಮಾಡಿ ಅಟ್ಟಬಡಿಯುತಿರಲಿ ೪

ಬೇನೆಯೊಳ್ ಬಿದ್ದಿರಲಿ ಹಾನಿಯಾಗಲಿ ಮಾನ
ಕಾಣದೆ ಸುಳ್ಳನೆಂದು ಹೀನನುಡಿಯಲಿ ಬಿಡದೆ ೫

ಹಗೆಗಳು ಬಂದೆನ್ನ ಬಗೆ ಬಗೆ ನಿಂದಿಸಿ
ನಗೆಗೇಡು ಮಾಡೆನ್ನ ಜಗದೆಳಡಾಡುತಿರಲಿ ೬

ಅವ ಪರಿಯಲಿರಲಿ ದೇವ ಶ್ರೀರಾಮ ನಿನ್ನ
ಸಾವಿರನಾಮ ಎನ್ನ ಭಾವದಿ ನುಡೀತಿರಲಿ ೭

೨೬೩

ಕೊಡು ಸುಖವ ಜಗಪಾಲಯ
ಒಡೆಯ ವೈಕುಂಠದಾಲಯ ಪ

ಕೊಡು ಸುಖ ನಿಮ್ಮಯ ಅಡಿಯದಾಸರ ಸೇವೆ
ಸಡಗರ ಸಂಪದ ಎಡೆಬಿಡದೆ ಅ.ಪ

ಜಡಮತಿಯನು ಕೆಡಿಸಿ ಜಡದೇಹಮೋಹ ಬಿಡಿಸಿ
ಜಡಭವತೊಡರನು ಕಡೆಹಾಯ್ಸಿ
ಅಡಿಗಡಿಗೆ ನಿನ್ನಡಿದೃಢ ಭಕುತಿ ೧

ಸಾಗರಸಂಸಾರಭೋಗದ ಬಲುಘೋರ
ನೀಗಿಸಿ ನಿಜಜ್ಞಾನ ಪಾಲಿಸಿ
ಬೇಗನೆ ನೀಡು ತವದರುಶನವ ೨

ಮನಸಿನ ಹರಿದಾಟ ಘನಘನ ದುಶ್ಚಟ
ವನು ಪರಿಹರಿಸಿ ದಯಮಾಡು
ಮನಶಾಂತಿ ಸದುಗುಣವ ೩

ತನುತ್ರಯದಲಿ ನಿನ್ನ ನೆನಹನು ನಿಲಿಸೆನ್ನ
ಬಿನುಗು ತ್ರಿದೋಷ ದೂರಮಾಡಿ
ಜನನ ಮರಣಂಗಳ ಗೆಲಿಸಭವ ೪

ಭೂಮಿಯೊಳಧಿಕೆನಿಪ ಸ್ವಾಮಿ ಶ್ರೀರಾಮಭೂಪ
ನೇಮದಿ ಬೇಡುವೆ ವರ ನೀಡು
ಆ ಮಹಕೈವಲ್ಯ ಪದವಿಯ ೫

೨೬೪

ಕಂತುಜನಕನ ನೆನೆಯಲೆ ಬರಿದೆ ಮನ
ಚಿಂತಿಸಿ ಫಲವಿಲ್ಲಲೇ ಪ

ಕುಂತಿಸುತರಪಾಲ ಸಂತಜನರ ಪ್ರೀಯ
ಚಿಂತೆಯಳಿದು ನಿಶ್ಚಿಂತೆ ಪಾಲಿಸುವಂಥ ಅ.ಪ

ಕೀಳುಯೋಚನೆ ಅಳಿಯೆಲೆ ವೈಕುಂಠನ
ಶೀಲತನದಿ ಭಜಿಸೆಲೆ
ಮೂಲಮಂತ್ರವ ಕೇಳೋ ನೀಲವರ್ಣನ ಜಪ
ಕಾಲನ ಬಾಧೆಯ ಗೆಲಿಸಿ ಪಾಲಿಸುವಂಥ ೧

ಕರಿಧ್ರುವರೆಂಬುವರೊ ಹರಿಹರಿಯೆಂದು
ಸ್ಥಿರಮುಕ್ತಿ ಪಡೆದಿಹ್ಯರೊ
ಹರಿಯೆಂದು ಪ್ರಹ್ಲಾದ ಪರಮಕಂಟಕ ಗೆದ್ದ
ಹರಿಯೆಂದು ವಿಭೀಷಣ ಸ್ಥಿರಪಟ್ಟ ಪಡೆದನು ೨

ವಾಸನಾದೇಹವಿದು ಶಾಶ್ವತವಲ್ಲ
ನಾಶನಹೊಂದುವುದು
ಬೇಸರಿಲ್ಲದೆ ಪರಿಸೀಶ ಶ್ರೀರಾಮನ
ಧ್ಯಾಸವ ಮರೆಯದಿರು ಹೇಸಿಭವವ ಗೆಲಿಪ ೩

೨೬೫

ಕಂಸಾರಿನಿಜಪಾದ ಮರೆಯದಿರೆಲೆ ಮನವೆ
ಸಂಸಾರಸುಖ ನೆಚ್ಚಿ ಭ್ರಮೆಯೊಳಗೆ ಬಿದ್ದು ಪ

ಜನನಿಜನಕರುವನಿತೆತನುಜನುಜರಿವರೆಲ್ಲ
ನಿನಗ್ಹಿತದಶತ್ರೆಂದು ನೆನೆಸಿಕೊಳ್ಳದಲೆ
ಅನುದಿನವು ದುಡಿದುಡಿದು ತನುಮನಧನವನಿತು
ಬಿನುಗರಿಗೆ ಸಲಿಸಿ ನರಕಕುಣಿಯೊಳಗೆ ಬಿದ್ದು ೧

ಹೊಲಸುಕಿಲ್ಬಿಷಮಾಂಸ ಮೇಲೆ ಚರ್ಮದ ಹೊದಿಕೆ
ಬಲವಾಗಿ ಬಿಗಿದ ನರ ಎಲುವಿನ್ಹಂದರವು
ತೊಳೆಯದಿರ್ದರೆ ನಿಮಿಷ ಹೊಲಸುನಾರುವ ಮಹ
ಮಲಭಾಂಡಕ್ಕೊಲಿದು ಬಲು ಸಿಲುಕಿ ಬಂಧದೊಳು ೨

ಜಡದಮೇಲಣ ಲಿಪಿಯು ಒಡನೆ ಮಾಯಪ್ಪಂತೆ
ಪೊಡವಿಯ ಸುಖ ನಿಮಿಷದಡಗಿ ಪೋಗುವುದು
ಅಡಿಗಡಿಗೆ ಎಡೆಬಿಡದೆ ಒಡೆಯ ಶ್ರೀರಾಮನಲಿ
ದೃಢವಾಗಿ ನೆರೆನಂಬಿ ಪಡಕೋ ನಿಜಸುಖವ ೩

೨೬೬

ಖಗಗಮನ ಜಗದ ಜೀವನ ರಘುವಂಶೋದ್ಧಾರಣ
ನಗಧರನೆ ನಿಗಮಗೋಚರ ನಾಗಶಯನ ಮುರಮರ್ದನ ಪ

ವನಜಸಂಭವವಿನುತ ಮನುಮುನಿವಂದಿತ
ಜನಕಜೆಯ ಪ್ರಾಣಪ್ರಿಯ ವನಮಾ
ಲನೆ ಭವಮೋಚನ ಜಯವಾಮನ ಸುಖಧಾಮನೆ
ಇನಕೋಟಿಪ್ರಭಾಮಯ ವನಜಾಕ್ಷನೆ ೧

ಸತಿಯ ಪಾಷಾಣಸ್ಥಿತಿವಿಮೋಚನ ಪತಿತಪಾವನ
ಸತ್ಯಭಾಮೆರಮೆಯ ನಾಥ ನುತಕಿಂಕರ
ಹಿತಮಂದಿರ ಜಿತದಶಶಿರ ಹತಮುಪ್ಪುರ
ನತಿಹಿತ ರತಿ ಪತಿಪಿತ ಕ್ಷಿತಿಧವ ೨

ದಾಮೋದರ ಶ್ರೀರಾಮ ಭಕುತಪ್ರೇಮ ನಿಸ್ಸೀಮ
ಸ್ವಾಮಿ ನೀಲಮೇಘಶ್ಯಾಮ
ಭೂಮಿಜ ವರಸ್ಮರಣೀಕರ
ಕಾಮಿತ ವರವೀಯುವ ಸ್ಥಿರವಿಮಲಚರಿತ ಕರುಣಾಕರ ೩

೨೬೭

ಗಟ್ಟಿ ಮನವ ಕೊಡೊ ಹರಿ ಹರಿ
ಗಟ್ಟಿ ಮನವ ಕೊಡೊ ಪ

ಸೃಷ್ಟಿಕರ್ತನೆ ನಿನ್ನ ಶಿಷ್ಟ ಪಾದದೆನಗೆ
ನಿಷ್ಠೆ ಭಕ್ತಿಯ ನೀಡು ಬಿಟ್ಟು ಅಗಲದಂತೆ ಅ.ಪ

ದುರಿತದೋಷಗಳು ಕಡಿದು ಬರುವ ಕಂಟಕವನ್ನು
ಪರಹರಿಸೆನಗೆ ಅರಿವು ನಿಲಿಸಾತ್ಮನ
ಕುರಹು ತಿಳಿಸುಸಿರಿವರನೆ ಕರುಣದಿ ೧

ಚಲನವಲನಗಳನು ಕಳೆದು ನಿಲಿಸು ಜ್ಞಾನವನ್ನು
ಹೊಲೆಯ ದೇಹದ ನೆಲೆಯ ತಿಳಿಸಿ ಎನ
ಗಳುಕಿಸು ಭವದಾಸೆ ಘಳಿಲನೆ ಒಲಿದು ೨

ತಾಪತ್ರಯಗಳನು ಛೇದಿಸಿ ಪಾಪಶೇಷಗಳನ್ನು
ಲೋಪಮಾಡಿ ಇಹದ್ವಾಪರದೊಳಗಿಂದ
ನೀ ಪೊರೆ ಭವನಿರ್ಲೇಪನೆ ದಯದಿ ೩

ಕಟ್ಟಿ ಕಾದುತ್ತಿರುವಸಂಸಾರ ಕೆಟ್ಟಬವಣೆಜನ
ಬಟ್ಟ ಬಯಲು ಮಾಡಿಕೊಟ್ಟು ನಿಜಾನಂದ
ಶಿಷ್ಟರೊಳಾಡಿಸೆನ್ನ ಸೃಷ್ಟೀಶ ದಯದಿಂ ೪

ನೀನೆ ಕರುಣದಿಂದ ಬಿಡಿಸಯ್ಯ ಯೋನಿಮಾರ್ಗ ತಂದೆ
ಧ್ಯಾನದಿರಿಸಿ ನಿನ್ನ ಮಾಣದ ಪದ ನೀಡು
ದೀನದಯಾಳು ಶ್ರೀ ಜಾನಕಿರಾಮ ೫

೨೬೮

ಗತಿನೀನೆ ಭಕುತಜನಕೆ
ಪತಿತಪಾವನಾನಾಥ ಬಂಧು ಪ

ಗತಿಶೂನ್ಯನಾಗಿ ಮನದಿ ಗತಿ ಏನೆಂದಳಲಿದೆನು
ಗತಿನೀನೆ ಎಂಬಜನರ್‍ಯಾವತ್ತು ಭಾರವಹಿಸೀದಭವ ೧

ಸತತ ನೀನೆ ಗತಿಯು ಎಂದು ನುತಿಪಭಕ್ತರ್ಹಿತದಬಂಧು
ಕ್ಷಿತಿಜಾತೆಯೆಂಬುದನು ಮರೆದು ವ್ಯಥೆಯ ಬಟ್ಟೆ ವ್ಯರ್ಥ ದೇವ ೨

ತಂದೆ ನೀನೆಗತಿಯೆನ್ನಲು ಬಂದಿ ಕಂಬ ಒಡೆದು ನೀನು
ಮಂದರೋದ್ಧರ ಕರುಣಾಮಂದಿರನೆಂದು ನಂಬಿದೆ ಶ್ರೀರಾಮ ೩

೨೬೯

ಗರುವವು ನಿನಗ್ಯಾಕೆಲೋ ಎಲೋ
ಜರ ನಾಚಿಕೆ ಬಾರದೇನೆಲೋ ಎಲೋ ಪ

ಮರುಳನೆ ನಿನಗೀಪರಿ ಗರುವ್ಯಾತಕೋ
ಅರಿತು ನೋಡ್ಹಿರಿಯರನೆಲೋ ಎಲೋ ಅ.ಪ

ಘನತೆಲೊಸಿಷ್ಠನೇನೆಲೋ ಎಲೋ
ಜನಕ ಭಾಗ್ಯದೊಳೆಲೋ ಎಲೋ
ಮನುಗಳಲ್ವ್ಯಾಸನೇನೆಲೋ ಎಲೋ ನೀ
ಮುನಿಗಳೋಳ್ಶುಕನೇನೆಲೋ ಎಲೋ
ಮನೆತನದಲಿ ಘನದಶರಥನೆ
ದಿನಮಣಿಯೆ ನೀ ಪ್ರಭೆಯೋಳೆಲೋ ಎಲೋ ೧

ಧುರದಿ ಕಾರ್ತರ್ವ್ಯನೇನೆಲೋ ಎಲೋ ನೀ
ನರಿವಿನೋಳ್ಪ್ರಹ್ಲಾದನೇನೆಲೋ ಎಲೋ
ವಿರಸದಿ ರಾವಣನೇನೆಲೋ ಎಲೋ ನೀ
ಸ್ಥಿರತನದ್ವಿಭೀಷಣನೇನೆಲೋ ಎಲೋ
ಹರಿ ಒಲುಮೆಲಿವರ ಅಗಸ್ತ್ಯನೇನು
ಸುರ ಗುರುವೇ ನೀ ಮತಿಯೋಳೆಲೋ ಎಲೋ ೨

ತ್ರಾಣದಿ ವಾಲಿಯೇನಲೋ ಎಲೋ ನೀ
ಜಾಣರೋಳ್ಹಲಿಯೇನೆಲೋ ಎಲೋ
ಜ್ಞಾನದಿ ವಾಲ್ಮೀಕಿಯೇನೆಲೋ ಎಲೋ ನೀ
ಗಾನದಿ ನಾರದನೇನೆಲೋ ಎಲೋ
ದಾನದೊಳಗೆ ಹರಿಶ್ಚಂದ್ರನೇನೋ ನಿ
ಧಾನದಿ ನಳನೇನೆಲೋ ಎಲೋ ೩

ಪದವಿಯೊಳ್ಧ್ರುವನೇನೆಲೋ ಎಲೋ ನೀ
ನಿಧಿಯೋಳ್ಕುಬೇರನೆಲೋ ಎಲೋ
ಮದನನೆ ಪುರುಷರೋಳೆಲೋ ಎಲೋ ವರ
ಮದದಿ ಕಶ್ಯಪನೇನೆಲೋ ಎಲೋ
ಸದಮಲ ಕುಲದಲಿ ಗೌತಮ ಮುನಿಯೇ ನೀ
ಕದನದಿ ಕುರುಪನೇನಲೋ ಎಲೋ ೪

ನುಡಿವಲಿ ನರನೇನೆಲೋ ಎಲೋ ನೀ
ಕೊಡುವಲಿ ಕರ್ಣನೇನೆಲೋ ಎಲೋ
ಇಡುವಲಿ ಧರ್ಮನೇನಲೋ ಎಲೋ ನೀ
ಕೆಡುಕಲಿ ಶಕುನಿಯೇನೆಲೋ ಎಲೋ
ಕಡುಗಲಿತನದಲಿ ಕಲಿಭೀಮನೇ
ಸಡಗರದಿಂದ್ರನೇನೆಲೋ ಎಲೋ ೫

ಯುಕ್ತಿಲಿ ದ್ರೋಣನೇನೆಲೋ ಎಲೋ ನೀ
ಶಕ್ತಿಲಿ ನಕುಲನೇನೆಲೋ ಎಲೋ
ಭಕ್ತಿಲ್ವಿದುರನೇನೆಲೋ ಎಲೋ ನೀ
ವೃತ್ತಿಲಿ ಸಹದೇವನೇನೆಲೋ ಎಲೋ
ಚಿತ್ತಶುದ್ಧಿಯಲಿ ವೀರ ಸುಧನ್ವನೆ
ತೃಪ್ತಿಲಿ ಭೀಷ್ಮನೇನೆಲೋ ಎಲೋ ೬

ದಿಟ್ಟರೋಳ್ಗರುಡನೇ ನೆಲೋ ಎಲೋ ನೀ
ಶಿಷ್ಟರೋಳ್ಹನುಮನೇನೆಲೋ ಎಲೋ
ಸೃಷ್ಟಿಯೋಳಾರನ್ನೋಲ್ವೆಲೋ ಎಲೋ ನೀ
ಭ್ರಷ್ಟನಾಗುವಿ ಯಾಕೆಲೋ ಎಲೋ
ಬಿಟ್ಟುಗರ್ವಮಂ ಶಿಷ್ಟಶ್ರೀರಾಮನ
ಮುಟ್ಟಿಭಜಿಸಿ ಉಳಿಯೆಲೋ ಎಲೋ ೭

೨೭೦

ಗೆಲವ ನೀಡೆನಗೆ ಇಹ್ಯದ
ಗೆಲವ ನೀಡೆನಗೆ ಪ

ಗೆಲವ ನೀಡಿಯೆನ್ನ ಮಲಿನಬಿಡಿಸಿ ನಿನ್ನ
ವರ ದಿವ್ಯಪಾದನಳಿನದೊಲುಮೆಯಿತ್ತು ಅ.ಪ

ಎಡರು ಆವರಿಸಿದ ಕಾಲದಿ ಧೈರ್ಯವ ದಯಮಾಡೊ
ಸಡಗರಸಿರಿ ಬಂದ ಕಾಲದಿ ಶಾಂತಿ ವಿನಯ ಕೊಡೊ

ಕಡುಜವ್ವನದಲಿ ದುಡುಕನುಕೊಡದಿರು
ಪಿಡಿದು ನೇಮವನು ಬಿಡದ ಛಲವನಿತ್ತು ೧

ಧರಣಿಯ ಸುಖಕಾಗಿ ಎನ್ನಿಂ ಪುಸಿಯ ನುಡಿಸದಿರೋ
ಹರಣಪೋದರು ಪರರಿಗೆ ದೇಹಿಯೆನಿಸದಿರೋ
ಪರಮಹರುಷದಿಂದ ಹರಿಶರಣರು ಮೆಚ್ಚಿ
ಶಿರವದೂಗುವಂಥ ನಿರುತವರ್ತನೆಯಿತ್ತು ೨

ಸತತದಿ ಕರ್ಣಕ್ಕೆ ಹರಿಕಥೆ ಕೀರ್ತನೆ ಕರುಣಿಸೊ
ಪತಿತಪಾವನವೆನಿಪ ಭಜನಾನಂದವ ಪಾಲಿಸೊ
ಕ್ಷಿತಿಯೊಳಧಿಕ ಸದುಗತಿ ಮೋಕ್ಷಾಧಿ
ಪತಿ ಶ್ರೀರಾಮ ನಿಮ್ಮ ಪಾದಭಕ್ತಿಯಿತ್ತು ೩

೨೭೧

ಘನತಾಪ ಘನತಾಪ ಘನತಾಪ ಸಂಸಾರ
ನೆನೆಸಲಳವಲ್ಲದನು ಕನಸಿನೊಳಭವ ಪ

ಕ್ಷಣಹೊತ್ತು ಮನಸನ್ನು ಸನುಮತಯಿರಗೊಡದು
ಗಣನೆಯಿಲ್ಲದ ತಾಪವನೆ ಒದಗಿಪುದಭವ ಅ.ಪ

ವನಿತೆಯರ ತಿನಿಸು ತನುಜ ಅನುಜರ ಮುನಿಸು
ಜನರನೊಲಿಸುವುದಿನಿಸು ಘನತಾಪ ಅಭವ
ತನುರೋಗ ಮನರೋಗ ಧನದ ವಿಯೋಗ
ಇನಿತೆಲ್ಲವೊಂದಾಗಿ ಘನಬಾಧಿಸುವುವಭವ ೧

ಕೊಟ್ಟ ಒಡೆಯರು ಬಂದು ನಿಷ್ಠೂರಾಡುತ ಬಲು
ಕಟ್ಟಿಕಾದುವ ಮಹಕೆಟ್ಟತಾಪಭವ
ಹೊಟ್ಟೆಬಟ್ಟೆಯ ತಾಪ ಕೊಟ್ಟವರ್ಹಂಗಿನ ತಾಪ
ಹುಟ್ಟುಸಾವಿನ ಅತಿ ಕಷ್ಟತಾಪಭವ ೨

ಮನುಜರೂಪದ ಮಹ ಘನತೆಯನು ಕೆಡಿಸಿ
ಕ್ಷಣದಿ ತೋರೆರೆಗುವ ಕನಿಕಷ್ಟ ಅಭವ

ಇನಿತೀ ಸಂಸಾರತಾಪ ಕನಿಕರದಿಂ ಕಡೆಹಾಯ್ಸಿ
ಮನಕೆ ಜಯನೀಡಿ ಕಾಯೋ ಎನ್ನಯ್ಯ ಶ್ರೀರಾಮ ೩

೨೭೨

ಘೋರವಿದು ಮಹ ಘೋರವಿದು ಸಂ
ಸಾರದ ನೆಲೆ ದಾರಿಗರಿತಿಹ್ಯದು ಪ

ತೋರದೆ ಮೂಜಗ ಹಾರ‍್ಯೆಸಿದನು ದುಃಖ
ವಾರಿಧಿಯೊಳು ಘೋರ ಬಡುತಿಹ್ಯದು ಅ.ಪ

ಪರಮೇಷ್ಠಿ ಶಿರವಂದು ತೆಗೆಸಿಹ್ಯದು
ಮುರಹರನನು ಸುಡುಗಾಡು ಹೊಗಿಸಿಹ್ಯದು
ಸಿರಿವರ ಹರಿಯನು ಪರಿಪರಿ ಜನುಮವ
ಧರಿಸುತ ಧರೆಮೇಲೆಳೆಸಿಹ್ಯದು ೧

ಚಂದ್ರಗೆ ಕುಂದುರೋಗ್ಹಚ್ಚಿಹ್ಯದೋ ಬಲು
ಮೇಂದ್ರ ಸೂರ್ಯನ ಪೊಲ್ಲ ಕಳಚಿಹ್ಯದು
ಇಂದ್ರನ ಅಂಗಾಂಗ ಸಂದು ಬಿಡದಲತಿ
ರಂಧ್ರಗೊಳಿಸಿ ಹೇಯ ಸುರಿವುವುದು ೨

ಕಾಲನಿಗೆ ಕಾಲ ತಂದಿಹ್ಯದು ಪಾ
ತಾಳಕೆ ಬಲಿಯನು ಇಳಿಸಿಹ್ಯದು
ವಾಲಿಯ ನಿಗ್ರಹ ಮಾಡಿಸಿ ಲಂಕೆಯ
ಪಾಲದಶಕಂಠನ ವಧಿಸಿಹ್ಯದು ೩

ಪರಮ ಪಾಂಡವರನ್ವನಕೆಳಸಿಹ್ಯದು ಆ
ಕುರುಪನ ಕುಲನಾಶ ಮಾಡಿಹ್ಯದು
ಪರಮ ತ್ರಿಪುರ ಶಿರಸೆರೆ ಸೂರೆಮಾಡಿಸಿ
ಸುರನಿಕರರಿಗ್ಹಂಚಿಕೊಟ್ಟಿಹ್ಯದೊ ೪

ಹಿರಿಯರನೀ ಪಾಡ ಪಡಿಸಿಹ್ಯದು ಈ
ಮರುಳ ನರರ ಪಾಡೇನಿಹ್ಯದು

ಗುರುವರ ಶ್ರೀರಾಮನೋರ್ವನ ಹೊರತಾಗಿ
ಸರುವ ಜಗವ ಗೋಳಾಡಿಸಿಪ್ಪದು ೫

೨೭೩

ಚಿಂತೆ ಪರಿಹರ ಮಾಡೋ ಎನ್ನಯ್ಯ
ಸಜ್ಜನರ ಪ್ರಿಯ ಪ

ಚಿಂತೆ ಪರಿಹರ ಮಾಡೊ ಎನ್ನಯ
ಚಿಂತೆ ಪರಿಹರ ಮಾಡಿ ಎನ್ನ
ಅಂತರಂಗದಿ ನಿಮ್ಮ ನಿರ್ಮ
ಲಂತ:ಕರುಣದ ಚರಣವಿರಿಸಿ
ಸಂತಸದಿ ಪೊರೆ ಸಂತರೊಡೆಯ ಅ.ಪ

ನಿಮ್ಮ ಪಾದವ ನಂಬಿಕೊಂಡಿರುವ ಈ ಬಡವನನ್ನು
ಕಮ್ಮಿ ದೃಷ್ಟಿಯಿಂ ನೋಡದಿರು ದೇವ ನಿನ್ನ ಬಿಟ್ಟೆನ
ಗ್ಹಿಮ್ಮತನ್ಯರದಿಲ್ಲ ಜಗಜೀವ ಭಜಕಜನ ಕಾವ
ನಿಮ್ಮ ಸೂತ್ರದಿ ಕಾಂಬ ನಿಖಿಲ ಬ್ರಹ್ಮಾಂಡ
ಮೂಡಿಮುಳುಗುತಿಪ್ಪದೈ
ಸಮ್ಮತದಿ ಸಲಹೆನ್ನ ದಯಾನಿಧಿ ಬ್ರಹ್ಮಬ್ರಹ್ಮಾದಿಗಳ ವಂದ್ಯನೇ ೧

ಆರುಮೂರರಿಕ್ಕಟ್ಟಿನೊಳು ಗೆಲಿಸೋ ಘನಪಿಂಡಾಕಾರ
ಆರು ಎರಡರ ಸಂಗ ತಪ್ಪಿಸೋ ಮಹಬಂಧ ಬಡಿಪ
ಘೋರ ಸಪ್ತಶರಧಿ ದಾಂಟಿಸೋ ತವದಾಸನೆನಿಸೊ
ಗಾರುಮಾಡಿ ಕೊಲ್ಲುತಿರ್ಪ ದೂರಮಾಡೆನ್ನ ದುರಿತದುರ್ಗುಣ
ಸೇರಿಸು ತ್ವರ ದಾಸಸಂಗದಿ ನಾರಸಿಂಹ ನಾರದವಿನುತ ೨

ಪಾಮರತ್ವ ತಾಮಸವ ಬಿಡಿಸೋ ವಿಷಯಲಂಪಟ
ಪ್ರೇಮ ಮೋಹ ಕಾಮ ಖಂಡ್ರಿಸೋ ಹರಲಿರುಳು ನಿಮ್ಮ
ಭಜನಾನಂದ ಕರುಣಿಸೊ ಸುಚಿಂತದಿರಿಸೊ
ಕಾಮಿತಜನಕಾಮಪೂರಿತ ನಾಮರೂಪರಹಿತಮಹಿಮ
ಸ್ವಾಮಿ ಅಮಿತಲೀಲ ವರ ಶ್ರೀರಾಮ ಪ್ರಭು ತ್ರಿಜಗದ ಮೋಹ ೩

೨೭೪

ಚಿಂತೆಮಾಡಲಿ ಬೇಡೋ ಮನವೇ
ಭ್ರಾಂತಿಪಡಲಿ ಬೇಡೋ ಪ

ಚಿಂತೆಭ್ರಾಂತಿಗಳೆಲ್ಲ ಕಂತುಜನಕಗೆಂದು
ಸಂತಸವಹಿಸು ನಿನಗೆಲ್ಲಿದೆ ಕೇಡೋ ಅ.ಪ

ಮಾನವಮಾನವೆಲ್ಲ ಮನವೆ
ಹೀನಭಾಗ್ಯ ಸಕಲ
ಧ್ಯಾನದಾಯಕ ಶ್ರೀವೇಣುಗೋಪಾಲಗೆಂದು
ಆನಂದ ತಾಳುಮತ್ತ್ಹಾಳು ನಿನಗಿಲ್ಲೋ ೧

ದು:ಖ ಸಂಕಟವೆಲ್ಲ ಮನವೆ
ಮಿಕ್ಕ ಕಂಟಕವೆಲ್ಲ
ಅಖಿಲವ್ಯಾಪಕ ಶ್ರೀಭಕುತಿದಾಯಕಗೆಂದು
ಸುಖವಹೊಂದು ಮತ್ತು ದು:ಖ ನಿನಗಿಲ್ಲೋ ೨

ಕುಂದು ನಿಂದೆಯೆಲ್ಲ ಮನವೆ
ಬಂದ ತಾಪ ನಿಖಿಲ
ಸಿಂಧುನಿಲಯ ನಮ್ಮ ತಂದೆ ಶ್ರೀರಾಮನಿಗೆಂದು
ನಂಬು ಭವಬಂಧ ನಿನಗಿಲ್ಲೋ ೩

೨೭೫

ಚಿಂತೆಯ ನೀಗಿದೆನೊ ಸಂತಸವಹಿಸಿದೆ
ಕಂತುಪಿತ ನಿಮ್ಮ ಮಹಿಮಾಂತರಂಗದಿ ಅರಿತು ಪ

ಭಾರ ನಿನ್ನಂದೆಂಬೊ ತರಳ ಪ್ರಹ್ಲಾದನ
ಘೋರಸಂಕಟ ನಿವಾರಿಸಿದನ ಪಾದ
ವಾರಿಜ ನಂಬಿದೆ ಆರಂಜಿಕೇನೆಂದು ೧

ಕುರುಪನ ಸಭೆಯೊಳು ತರುಣೀಮಣಿಯು ತಾ
ಮೊರೆಯಿಟ್ಟು ಸ್ಮರಿಸಲು ಕರುಣದಿಂಬಂದನ
ಚರಣಭಜಿಸಲಿನ್ನು ದುರಿತವ್ಯಾತದರೆಂದು ೨

ಶಂಖಪಾಣಿಯಪಾದಪಂಕಜ ಧ್ಯಾನ ನಿ:
ಶಂಕೆಯಿಂ ಗೈವರ ಸಂಕಟಹರ ನಿಜ
ವೆಂಕಟ ಶ್ರೀರಾಮ ಕಿಂಕರರೊಡೆಯನೆಂದು ೩

೨೭೬

ಜಗದಾದಿ ನಮಿತ ಆಗಮಾತೀತ
ಖಗವರಗಮಿತ ಭಾಗವತಪ್ರೀತ ಸುಚರಿತ ಪ

ಭವ ಬಾಧ್ಧರಣ ಜನನಮರಣ
ಭಯನಿವಾರಣ ದಯಸುಸದನ
ಭುವಿಜಾರಮಣ ಭಕ್ತೋದ್ಧಾರಣ
ವಿಮಲಜ್ಞಾನ ಕರುಣಿಸು ೧

ಅಮಿತಲೀಲ ಕುಜನಕಾಲ
ರಮೆಯಲೋಲ ಶರಣುಶೀಲ
ಕೌಸ್ತುಭಮಾಲ ಸುಮನಪಾಲ ಎನ್ನ
ಭ್ರಮಜಾಲ ಛೇದಿಸು ೨

ಭೃತ್ಯಲಲಾಮ ಶಕ್ತರಕಾಮ
ಪೂರ್ತಿನಿಸ್ಸೀಮ ಕರ್ತುಶ್ರೀಭೌಮ
ನಿತ್ಯನಿರಾಮ ಜಗದೋದ್ದಾಮ
ಮುಕ್ತಿಪದ ಸೋಮ ಶ್ರೀರಾಮ ೩

೨೭೭

ಜಗದೀಶ ಜಗದೊಡೆಯ ಜಗಮೋಹನ
ಬಗೆ ಕೇಳು ಭಜನ ಭಯದೂರಣ ಪ

ಅಧಮ ಸಂಸಾರದ ನದಿಯದಾಂಟಿಸಿ ಎನಗೆ
ಸದಮಲದ ಪದವಿಯನು ಮುದದೀಯೋದೇವ ೧

ಮರವೆಯಿಂ ಗೈದಂಥ ದುರಿತಪರ್ವತ ತರಿದು
ಪರಮನುಪಮಸುಜ್ಞಾನವನು ಕರುಣಿಸೈ ಹರಿಯೆ ೨

ಭಕ್ತವತ್ಸಲ ನಿನ್ನ ಭಕ್ತಿಯಿಂ ಭಜಿಸುವೆನು
ಮುಕ್ತಿಯನು ಪಾಲಿಸುವ ಕರ್ತು ಶ್ರೀರಾಮ ೩

೨೭೮

ಜಗವ ತುಂಬಿ ಬೆಳಗುತಿರುವಿಯಂತೆ ಎ
ನಗೆ ಕಾಣದ ಬಗೆಯಾಕಂತೆ ಪ

ಜಗವನು ವ್ಯಾಪಿಸಿ ಬಗೆಬಗೆಯಿಂದಲಿ
ಝುಗಿಝುಗಿಕಪೆಂಬಾನಂತ ಸ್ಮೃತಿಗಳಿವೆ ಅ.ಪ

ಸರಸಿಲಿ ಸ್ಮರಿಸಲು ಬಂದಂತೆ
ತರುಣಿಯ ಸಭೆಯೊಳು ಕಾಯ್ದಂತೆ
ಕರೆಯಲು ಕಂಬದಿ ಹೊರಟಂತೆ
ತರಳಗೆ ಅಡವಿಲಿ ಒಲಿದಂತೆ
ಅರಿತು ವಿಚಾರಿಸಿ ನೋಡಲಿವೆಲ್ಲ ನಿನ್ನ
ಚರಣಬಿರುದು ಖರೆ ಪರತರಮಹಿಮ ೧

ಅರಣ್ಯವಾಸಿಗಳ ಪರೀಕ್ಷಂತೆ
ಅರಿತು ಪರುಷ ಕರುಣಿಸಿದಂತೆ
ಚರಣದ್ವೊರೆಯ ತಮ್ಮನಂತೆ
ಸ್ಥಿರಪಟ್ಟವನಿಗೆ ಕಟ್ಟಿದಂತೆ
ವರ ವೇದೋಕ್ತಿಗಳರಿತು ನೋಡಿದರೆ
ಸ್ಮರಿಸುವ ಭಕುತರ ನಿರುತ ಚಿಂತಾಮಣಿ ೨

ಪೊಡವಿಪಾಲನಿಗೆ ಶಾಪಂತೆ
ಬಿಡದೆ ಚಕ್ರದಿಂದ ಕಾಯ್ದಂತೆ

ಕಡಲ ಮಧ್ಯದಲಿ ಮನೆಯಂತೆ
ದೃಢಕರಿಗೆ ಮೈ ನೆರಳಂತೆ
ಕಡುದಯಾನಿಧಿ ಎನ್ನೊಡಲೊಳು
ಬಿಡದಂತಿರಿಸಯ್ಯ ಒಡೆಯ ಶ್ರೀರಾಮ ೩

೨೭೯

ಜನಿಸಿ ನಾ ಬುವಿಯೊಳು ನಿನಗೆ ದುಡಿಯುವುದಾಯ್ತು
ಎನಗೇನುಫಲ ಪೇಳು ಮಾಯವೆ ಎಲೆ ಜೀವವೆ ಪ

ನಿನಗೆ ನೀ ದುಡಿಯುವಿ ಎನಗೆ ದುಡಿಯುವುದೇನು
ದಿನಸರಿಯದೆನುವುದು ನ್ಯಾಯವೆ ಎಲೆ ಕಾಯವೆ ಅ.ಪ

ಘನರೋಗ ತಾಪತ್ರವನುಭವಿಸುವುದೆಲ್ಲ
ನಿನಗಾಗಲ್ಲೇನು ಪೇಳು ಮಾಯವೆ ಎಲೆ ಜೀವವೆ
ನಿನಗೆ ಬಂದ ಕರ್ಮವನುಭವಿಪೆಯಲ್ಲದೆ
ಎನಗಾಗೆನುವುದು ನಿಜನ್ಯಾಯವೆ ಎಲೆ ಕಾಯವೆ ೧

ನಿನ್ನ ಜೋಪಾನಕ್ಕೆ ಬನ್ನ ಬಡುವೆನಲ್ಲ
ದೆನ್ನದೇನು ಕರ್ಮ ಮಾಯವೆ ಎಲೆ ಜೀವವೆ
ಎನ್ನ ಜೋಪಾನವು ನಿನ್ನಿಂದಲೆಂಬುವುದು
ಮಣ್ಣುಗೊಂಬೆ ನಿನಗೆ ನ್ಯಾಯವೆ ಎಲೆ ಕಾಯವೆ ೨

ಚಳಿಮಳೆಬಿಸಿಲಿನ ಬಲುತಾಪದಲಿ ನಿನ್ನ
ಸಲಹುವರಾರ್ಹೇಳು ಮಾಯವೆ ಎಲೆ ಜೀವವೆ
ಚಳಿಮಳೆಬಿಸಿಲಿನ ಬಲುತಾಪ ಎನಗೆಲ್ಲಿ
ಎಲುವಿನ್ಹಂದರ ನಿಂದೀನ್ಯಾಯವೆ ಎಲೆ ಕಾಯವೆ ೩

ನಿನ್ನಾಗಾಲಯವಾಗಿ ಉನ್ನತದಿ ಕಾಯುವಗೆ
ಭಿನ್ನ ಮಾತುಗಳೇನೋ ಮಾಯವೆ ಎಲೆ ಜೀವವೆ
ನಿನ್ನದು ದಾವೂರು ನನ್ನದು ದಾವೂರು
ಎನ್ನ ಸರಿಗಟ್ಟುವುದು ನ್ಯಾಯವೆ ಎಲೆ ಕಾಯವೆ ೪

ನಾನಿಲ್ಲದಿರೆ ನಿನ್ನ ಖೂನವರಿವರಾರು
ನೀನೆ ಪೇಳೆಲೋ ನಿಜ ಮಾಯವೆ ಎಲೆ ಜೀವವೆ
ಹೀನನೆ ನೀನೆನ್ನ ಖೂನವರಿಯದೆ ಬಿನಗು
ಶ್ವಾನನಂತೊದರುವುದು ನ್ಯಾಯವೆ ಎಲೆ ಕಾಯವೆ ೫

ಹೊನ್ನೂ ಹೆಣ್ಣು ಮಣ್ಣು ಎನ್ನಿಂದ ಪಡೆದು ನೀ
ಧನ್ಯನೆನಿಸುವೆಯಲ್ಲ ಮಾಯವೆ ಎಲೆ ಜೀವವೆ
ನಿನ್ನಗದರ ಫಲ ಎನ್ನಗೇನೆಲೆ ಪಾಪಿ
ನಿನ್ನ ಮೋಹಿಸಿ ನಾನು ಕೆಡುವೆ ಎಲೆ ಕಾಯವೆ ೬

ಎನ್ನಿಂದ ಕೆಡುವೆನೆಂಬನ್ಯವಾದವು ಬೇಡ
ನಿನ್ನದೆಲ್ಲವ ಬಲ್ಲೆ ಮಾಯವೆ ಎಲೆ ಜೀವವೆ
ನನ್ನ ನಾನರಿಯದೆ ಬನ್ನ ಬಡುವೆ ಸತತ
ಎನ್ನನರಿವುದು ನಿನ್ನಗಳವೇ ಎಲೆ ಕಾಯವೆ ೭

ಹೇವನಿನಗ್ಯಾಕಿಷ್ಟು ಸಾವುತ್ಹುಟ್ಟುತ ನೀನು
ನೋಯುವುದ ಬಲ್ಲೆ ನಾ ಮಾಯವೆ ಎಲೆ ಜೀವವೆ
ಹೇವದಮಾತಲ್ಲ ಸಾವುಹುಟ್ಟೆನಗಿಲ್ಲ
ಕೇವಲನಾದಿಕಾಲದಿರುವೆ ಎಲೆ ಕಾಯವೆ ೮

ಕೇವಲನಾದಿಯು ಜೀವ ನೀನಾದರೆ
ದೇವರೆ ನೀನಿದ್ದಿ ಮಾಯವೆ ಎಲೆ ಜೀವವೆ
ದೇವರು ನಾನಲ್ಲ ದೇವ ಶ್ರೀರಾಮನ
ಕೇವಲದಾಸ ನಾನಿರುವೆ ಎಲೆ ಕಾಯವೆ ೯

೨೮೦

ಜೋಕೆ ಮಾಡೆನ್ನ ನಮ್ಮಯ್ಯ ರಂಗ
ಜೋಕೆ ಮಾಡೆನ್ನ ಪ

ಲೋಕನಾಥನೆ ಜೋಕೆ ಮಾಡೆನ್ನ ಕಾಕುಬವಣೆಯ
ಸಾಕುಮಾಡಿ ಏಕಚಿತ್ತದಿ ನಿಮ್ಮ ಭಜನೆ
ಜೋಕಿನೊಳು ಇರಿಸು ದೇವ ಅ.ಪ

ನಿಗಮಗೋಚರನೆ ಜಗದಯ್ಯ ವಿಜಯ್ಯ
ಖಗಪತ್ವಾಹನನೆ ಅಗಧರನೆ ಈರೇಳು
ಜಗವ ರಕ್ಷಿಪನೆ ರಘುಕುಲಾರ್ಯನೆ
ಮಗನಬಗೆ ಕೇಳು ಕರುಣದಿಂದಲಿ
ನಿಗಮಾತೀತನೆ ಮುಗಿವೆ ಕರಮಂ
ಹಗಲು ಇರಲು ಸುಗುಣಿ ಸಂತರ
ಸಂಗಸುಖ ಎನಗಗಲಿಸದೆ ಹರಿ ೧

ಮೆರೆವವೇದವ ವರಸ್ಮೃತಿಶಾಸ್ತ್ರವ
ಕರುಣಿಸೈ ದೇವ ಪರಿಹರಿಸು ಎನ್ನ
ಮರವೆ ಮಾಯವ ವರಭಕ್ತ ಜೀವ
ಅರಿಯದ್ಹೋದೆನು ಮರವೆ ಮಾಯದಿ
ಸಿರಿಯವರ ತವಪರಮ ಚರಿತವ
ಅರಿವು ನಿಲ್ಲಿಸಿ ಕರುಣದಿಂ ತವ
ಚರಣಕುರುಹನು ಕರುಣಿಸಭವ ೨

ದೃಢದಿ ಬೇಡುವೆನು ತಡಿಯೆನೀಭವ
ಎಡರುತೊಡರನು ಗಡನೆ ಬಿಡಿಸೆನ್ನ
ಕಡೆಗೆ ಮಾಡೆನ್ನ ನಿಮ್ಮಡಿಗೆ ಬಾಗುವೆನು
ನುಡಿಸು ಎನ್ನ ಮೆಲ್ನುಡಿಯೊಳನುದಿನ
ಬಿಡದೆ ತವ ಕೊಡು ಗೂಢಮಂತ್ರವ
ಬಿಡದೆ ಕೊಡು ನಿನ್ನಡಿಯ ದಾಸರ
ಸಡಗರದ್ಯನ್ನೊಡೆಯ ಶ್ರೀರಾಮ ೩

೨೮೧

ಜಂಜಾಟ ತೊಲಗಿಸೈ ದುಷ್ಟಸಂಸಾರದ ಪ

ಜಂಜಾಟ ತೊಲಗಿಸೈ
ಕಂಜನಾಭನೆ ಕರಿರಾಜವರದ ಹರಿ ಅ.ಪ

ಚಲಿಸುವ ಎನ್ನ ಮನದ್ವಲುಬಾಟ ಕಡೆಹಾಯ್ಸಿ
ನಿಲಿಸು ತವಚರಣದಿ ಚಲಿಸದಂತನುದಿನ ೧

ಐಹಿಕಸುಖ ಮೋಹಿಸಿ ಬಹುಭ್ರಾಂತಿಯಿಂ ಬಳಲು
ತಿಪ್ಪ ಎನ್ನ ಚಿತ್ತಕ್ಕೆ ಸಹನಶೀಲತೆ ನೀಡಿ ೨

ನೀನೆಗತಿ ಎನಗಿನ್ನು ನಾನಾದೈವನರಿಯೆ
ಜ್ಞಾನದಿಂ ಪಾಲಿಸೆನ್ನ ಪ್ರಾಣಪತಿ ಶ್ರೀರಾಮ ೩

೨೮೨

ತಡವ ಮಾಡಲಿ ಬೇಡ ಹಡೆದವ್ವ ಎ
ನ್ನೊಡೆಯನನು ಹುಡುಕಿ ತಾರೆ ಪಿಡಿವೆ ಪಾದವ ಪ

ತಡವ ಮಾಡದೆ ಪೊಡವಿಯೊಳು ಕಡು
ಸಡಗರಾರ್ಯನ ಹುಡುಕಿ ತಂದರೆ
ಹಡೆದು ನಿನ್ನೈಸರಿಸಿವುವೆನೆನ್ನವ್ವ ಸರಿಮಾಡ್ವೆನವ್ವ ಅ.ಪ

ಜೀವದರಸನ ಹಂಬಲೆನಗವ್ವ ಅತ್ಯಧಿಕವಾಗಿ
ಕಾಯಸೊರಗಿ ಕ್ಷೀಣವಾಯ್ತೆವ್ವ
ಪ್ರಾಯಬಂದರೆ ಸುಮ್ಮನೆ ಹೋಗುತಾದವ್ವ
ಪ್ರಾಯಕ್ಕೆ ತಕ್ಕ ಚಾಯಗಾರ ಕಂಡೇನ್ಹೇಗವ್ವ
ಕಾಯರಹಿತ ಕಾರುಣ್ಯನಿಧಿ
ಮಾಯತಿಳಿಯುವರಿಲ್ಲ ಆತನ
ದಿವ್ಯಚರಿತ ನೆನೆದು ನೆನೆದು
ಬಾಯ ಬಿಡುವೆನೆ ಆಯತಾಂಬಕಿ ೧

ವಸ್ತ್ರೊಡೆವೈಷ್ಟಿರಲು ಏನವ್ವ ಅತಿಶೋಭೆಯೆನಿಪ
ಮುತ್ತುಯಿಲ್ಲದ ಮೋರೆಯಾಕವ್ವ
ಹತ್ತಿರಕೆ ಬರಗೊಡರವ್ವಾ ಮುತ್ತೈದೆರೆಲ್ಲರು
ಅತ್ತ ಇತ್ತೆಂದೆಳೆಯುತಿಪ್ಪರವ್ವ
ಮತ್ತೆ ಬೇಡಲು ದೊರೆಯದಂಥ

ಹೊತ್ತು ಸುಮ್ಮನೆ ಹೋಗುತಿದೆ
ಕರ್ತ ತುರ್ತು ದೊರೆಯದನಕ
ಚಿತ್ತ ಸ್ವಸ್ಥವಾಗದವ್ವ ೨

ಭೂಮಿತ್ರಯದೊಳಧಿಕ ಕೇಳವ್ವ ಆತನಹೆಸರು
ಕಾಮಿತವನೀಗರಿತುಕೊಂಡೆನವ್ವ
ನೇಮದಿಂದ ಭಜಿಸುತಿಹೆನವ್ವ ಎನ್ನಕಡೆಗಾತ
ಪ್ರೇಮದಿಂದ ಸುಳಿಯದಿಹ್ಯನವ್ವ
ಭಾಮೆಬಾರೆಂದು ಬದಿಲಿಕರೆದು
ಪ್ರೇಮದಿಂದ ಅಪ್ಪಿ ನಿನ್ನಯ ಸ್ವಾಮಿ ಶ್ರೀ
ರಾಮ ನಾನೆಂದ್ಹೇಳಲು
ಕ್ಷೇಮ ಪಡೆದು ಬಾಳ್ವೆನವ್ವ ೩

೨೮೩

ತಡಿಯೆಲೆ ಮನವೆ ನೀ ಬಡಬಡಿಸುವುದ್ಯಾಕೋ
ಕೆಡಕುಯೋಚನೆಬಿಟ್ಟು ಕಡುಶಾಂತನಾಗೊ ಪ

ಜಡಮತಿತನನೀಗಿ ಬಿಡದೆ ದೃಢದಿ ಜಗ
ದೊಡೆಯನಡಿಯ ಭಜಿಸು ಕೊಡುವನು ನಿಜಸುಖ ಅ.ಪ

ವಂಚಕನಾಗದೆ ವಾಂಛಲ್ಯಳಿದು ಮನ
ಕಿಂಚಿತ್ತಗಲದೆ ನಿರ್ವಂಚಕ ಚಿತ್ತನಾಗೊ
ವಂಚನಿಲ್ಲದೆ ಹರವಿರಂಚಿಗಳ್ನೂತನ ಪ್ರ
ಪಂಚದೊಳಗೆ ನಿನ್ನನಚಲ ಸುಖದಿ ಕಾಯ್ವ ೧

ನಿಷ್ಠುರನುಡಿ ಬಿಡು ದುಷ್ಟತ್ವ ದೂರಮಾಡು
ಬಿಟ್ಟಗಲದೆ ಮಹ ಶಿಷ್ಟರೊಡನಾಡೊ
ಅಷ್ಟಮೂರುತಿಪಾದ ನಿಷ್ಠೆಯ ಭಜಿಸು ನಿ
ನ್ನಿಷ್ಟದಖಿಲವರ ಕೊಟ್ಟು ರಕ್ಷಿಸಸನೆಲೊ ೨

ಹಲವು ಭ್ರಾಂತಿ ಬಿಡು ಮಲಿನಗುಣವ ದೂಡು
ಹೊಲೆಯ ಮನಸಿನ ಮಹ ಕಲ್ಮಷ್ಷಸನಮಾಡು
ಜಲಜಾಕ್ಷನಂಘ್ರಿಯಂ ನಿಲದೆ ಭಜಿಸು ನಿನ
ಗೊಲಿದು ನಿಜಸುಖವಿತ್ತು ಸಲಹುವ ಶ್ರೀರಾಮ ೩

೨೮೪

ತನುಮನಧವನೆಲ್ಲ ನಿನಗರ್ಪಿಸಿದೆನಿನ್ನು
ಎನಗಾವುದಾಧೀನವಿನಿತಿಲ್ಲ ದೇವ ಪ

ಜನಕ ನಾನು ಕ್ಷಣಕೆ ಕ್ಷಣಕೆ
ಉಣವುದೆಲ್ಲವು ನಿನ್ನ ಪ್ರಸಾದ
ಕನಸುಮನಸಿನೊಳಗೆ ನಾನು
ಮಣಿವುದೆಲ್ಲವು ನಿನ್ನ ಚರಣ ಅ.ಪ

ಮಡದಿಯಿಂ ಮಮತದಿ ಸಡಗರದಾಡ್ಯಾಡಿ
ಕಡು ಆನಂದಿಪುದೆಲ್ಲ ಒಡೆಯ ನಿನ್ನಾಟ
ಎಡೆಬಿಡದೆ ಅಡಿಗಡಿಗೆ ಕಡುಸಿರಿವಡೆದು ನಾ
ಪೊಡವಿಯೋಳ್ಜೀವಿಪುದು ಕಡು ನಿಮ್ಮ ಪ್ರೇಮ
ನುಡಿವುದೆಲ್ಲ ನಿನ್ನ ಮಂತ್ರವು
ಕೊಡುವುದೆಲ್ಲವು ನಿನ್ನ ಅಧಿಕಾರ
ನಡೆವುದೆಲ್ಲವು ನಾ ನಿನ್ನ ಯಾತ್ರೆಯು
ಇಡುವತೊಡುವುದು ನಿನ್ನ ಬಿರುದು ೧

ಗಳಿಸುವುದೆಲ್ಲ ನಾ ಚಲಿಸದ ತವಪಾದ
ನಳಿನದಾಸರಸಂಗೀ ಇಳೆಯೊಳು ಪ್ರಭುವೇ
ಬಳಸುವುದೆಲ್ಲ ನಾ ಅಳಕದ ತವಚರಿತ
ಕಲಿಯುವುದೆಲ್ಲ ನಿಮ್ಮ ವಿಲಸಿತನಾಮಧ್ಯಾನ
ಮಲಗುವುದೇ ನಿಮ್ಮ ಧ್ಯಾನ ಆನಂದ
ನಲಿವುದಖಿಲ ನಿಮ್ಮ ಭಜನೆಯು

ಅಳಿವುದೆಲ್ಲನುಭವದ ಗುಣಗಳು
ತಿಳಿವುದೆಲ್ಲವು ನಿಮ್ಮ ಮಹಿಮೆ ೨

ಭ್ರಮಿಸುವುದೆಲ್ಲ ನಾ ಅಮಿತ ತವಪ್ರೇಮವು
ಗಮಿಸುವುದೆಲ್ಲ ನಾ ಸುಮನರ ಸಭೆಯು
ಕ್ರಮದಿ ನಾ ಬೇಡುವುದು ವಿಮಲ ಸುಜ್ಞಾನವು
ದಮೆ ದಯ ಭಕ್ತಿ ತವ ನಿರ್ಮಲಂಘ್ರಿಯ ಅರಿವು
ನೇಮದಿಂ ನಾ ಬರುವುದೆಲ್ಲ
ಸ್ವಾಮಿ ನಿಮ್ಮಯ ಮಹಿಮೆ ಖ್ಯಾತಿಯು
ಕ್ಷೇಮನಿಧಿ ಶ್ರೀರಾಮ ನಿಮ್ಮೊಳು
ಕಾಮಿಸುವುದೇ ನಾ ಮುಕ್ತಿಪದವು ೩

೨೮೫

ತಪ್ಪು ಪೇಳ್ವೆ ನಿನ್ನೊಳೆನ್ನಪ್ಪಿ ಸಲಹಯ್ಯ
ಅಪ್ಪ ಸಿರಿಪತಿಯೆನ್ನ ನೆಪ್ಪಿನೊಳಗಿರ್ದು ಪ

ಅರಿವಿಟ್ಟು ತವಚರಣ ಸ್ಮರಿಸದಿರೆ ಎನ್ನ ತಪ್ಪು
ಮರೆವೆಯನು ಪರಹರಿಸದಿರೆ ನಿನ್ನ ತಪ್ಪು
ಧರೆಯ ಭೋಗವ ಮೀರಿ ನಡೆಯಿದಿರೆ ಎನ್ನ ತಪ್ಪು
ಪರಮವೈರಾಗ್ಯ ಭಕ್ತಿ ಕೊಡದಿರೆ ನಿನ್ನ ತಪ್ಪು ೧

ಅರ್ತಿಯಿಂ ತವಭಜನೆ ಮಾಡಿದಿರೆ ಎನ್ನ ತಪ್ಪು
ಚಿತ್ತ ಚಂಚಲಗೊಳಿಸಿದರೆ ನಿನ್ನ ತಪ್ಪು
ಸತ್ಯಭ್ರಷ್ಟನಾಗಾಚರಿಸಿದರೆ ಎನ್ನ ತಪ್ಪು
ಸತ್ಯಜನಸಂಗ ಕೊಡದಿರೆ ನಿನ್ನ ತಪ್ಪು ೨

ನಾಶವೊಂದೋ ಮಪಹೇಸಿಸಂಸಾರದ
ವಾಸನೆಯ ಬಿಡದಿರೆ ಎನ್ನ ಘನತಪ್ಪು
ಶ್ರೀಶ ಶ್ರೀರಾಮ ತವ ದಾಸತ್ವ ಕೊಡದಿರೆ
ಸಾಸಿರಪಾಲಿಗೆ ನಿನ್ನ ಮಹತಪ್ಪು ೩

೨೮೬

ತಿಳೀವಲ್ಲದಿದು ಎನಗೆ ತಿಳಿಸಯ್ಯ ಹರಿಯೆ
ಬಲುಪಾಪಿಜೀವಿಯ ತಪ್ಪಾರಿಗಿಹ್ಯದೋ ಪ

ಹುಟ್ಟಿಸಿದವನಿಗೋ ಹುಟ್ಟಿ ಬಂದವನಿಗೋ
ಸೃಷ್ಟಿಗೊಳಿಸಿದಂಥ ಸೃಷ್ಟಿ ಕರ್ತನಿಗೋ
ಗಟ್ಯಾಗಿ ನನಗಿದರ ಗುಟ್ಟು ತಿಳಿಸೈ ತಂದೆ
ಮುಟ್ಟಿಭಜಿಸುವೆ ನಿನ್ನ ಶ್ರೀಕೃಷ್ಣರಾಯ ೧

ಗೋಡೆಯ ಡೊಂಕಿರಲು ಗೋಡೆಯ ತಪ್ಪಥವ
ಗೋಡೆಯನು ಕಟ್ಟಿದ ಗೌಂಡಿಯ ತಪ್ಪೋ
ಕೂಡಿಟ್ಟು ಹಣ ವೆಚ್ಚಮಾಡಿ ಕಟ್ಟಿಸಿದಂಥ
ಗೋಡೆಯೊಡೆಯನ ತಪ್ಪೋ ತಿಳಿಹೇಳೆನಗೆ ೨

ಬಂಡಿ ತಗ್ಗಿಗೆ ಬೀಳೆ ಬಂಡಿದೇ ತಪ್ಪಥವ
ಬಂದಡರಿ ಕೂತುಕೊಂಡವರದೆ ತಪ್ಪೋ
ಬಂಡಿಹೊಡೆಯುವಂಥ ದಿಂಡೆಗಾರನ ತಪ್ಪೋ
ಕಂಡು ಇದ್ದಂತ್ಹೇಳೋ ಪಂಢರಿರಾಯ ೩

ಜೀವಾಳ ಅಪಸ್ವರ ನುಡಿಯಲದರದೇ ತಪ್ಪೋ
ಜೀವಾಳ ಬಾರಿಸುವಗೋ ಜೀವಾಳ ಕರ್ತನಿಗೋ
ಆವಂಗೆ ತಪ್ಪು ಜಗಜೀವ ಜೀವೇಶನೆ ನ್ಯಾ
ಯಾವಾಗ್ಹೇಳಯ್ಯ ಭಾವಜಪಿತನೆ ೪

ಪ್ರಾಣೇಶ ಶ್ರೀರಾಮ ನೀನೆ ಬರೆದಿಹ್ಯ ಬರೆಹ
ನೀನೆ ವ್ಯಾಪಕ ಸರ್ವ ನೀನೆ ರಕ್ಷಕನೋ
ನೀನೆ ಸ್ವಾತಂತ್ರ್ಯಾಖಿಲ ಏನಿಲ್ಲ ಮನುಜನಾ
ಧೀನ ತಪ್ಪ್ಯಾಕಿವಗೆ ನೀನೆ ಪೇಳಯ್ಯ ೫

೨೮೭

ತೇಲಿದೆ ಅಯ್ಯಾ ತೇಲಿದೆ ಪ

ತೇಲಿಬಾರದಂಥ ಸುಳಿಯ ಮಡುವುಮುಳುಗಿ
ನೀಲಶಾಮನ ಪಾದಕಮಲಕರುಣದಿಂದ ಅ.ಪ

ಪಾರಾವಾರಿಲ್ಲದ ಮಡುವು ಕಾಲು
ಜಾರಿ ಬಿದ್ದಿದ್ದೆ ತಪ್ಪಿದಡವು ಬಲು
ಮೇರೆದಪ್ಪಿದ ತೆರೆ ಸೆಳವು ಉಲಿ
ದ್ವಾರಿಬರುವ ಜಲಚರವು ಆಹ
ಮೀರಿದಂಧಕಾರ ನೀರಿನ ಸುಳಿಯೊಳು
ಘೋರಬಡುತಲಿರ್ದೆ ಮುಳುಮುಳುಗೇಳುತ ೧

ತಂಡತಂಡದಿ ಒದಗುವ ಬಲು
ಗಂಡಸುಳಿಯು ತಿರುಗುವ ಒಳ
ಗೊಂಡ ಮತ್ಸ್ಯಮಕರಿಭಯವ ಆಹ
ಕಂಡು ಕಾಣದೆ ಬಿದ್ದು ಗುಂಡಿಗೊಡೆದು ನಾನು
ಬೆಂಡಾದೆ ಕಂಗೆಟ್ಟು ಮುಳುಮುಳುಗೇಳುತ ೨

ಹಿಂದಕ್ಕೆ ಏನಾದದ್ದಾಯ್ತು ಶ್ರೀಶ
ಮುಂದೆ ಎನ್ನಗೆ ಇಂಥ ಹೊತ್ತು ಈಶ
ಎಂದೆಂದು ತರದಿರು ಮತ್ತು ಕೇಶ
ಕಂದನ ಸನ್ಮಾರ್ಗಕ್ಕೊತ್ತು ಆಹ
ಸಿಂಧುಶಯನ ಎನ್ನ ತಂದೆ ಶ್ರೀರಾಮ ನಿನ್ನ
ಬಂಧುರಂಘ್ರಿಯ ಕೃಪೆಯಿಂದ ನಾ ಉಳಕೊಂಡೆ ೩

೨೮೮

ತೋರು ನಿಜಜ್ಞಾನ ಸುಖವ
ಮಾರನಯ್ಯ ಮರೆಯ ಬಿದ್ದೆ ಪ

ಪಾರಮಾರ್ಥ ಪರಮ ಸವಿ
ಚಾರಮೆನಿಪ ಪಾವನ ಸುಪಥ ಅ.ಪ

ತೀರದಂಥ ಅಪಾರಭವದ
ವಾರಧಿ ಈಸಿ ಘೋರಬಡುವೆ
ನೀರಜಾಕ್ಷ ನಿಗಮವಿನುತ
ಪಾರುಮಾಡು ಕಾರುಣ್ಯಶರಧಿ ೧

ವಿಷಯಲಂಪಟ ಮುಸುಕು ಮುಸುಕಿ
ವ್ಯಸನಚಿತೆಯೋಳ್ ಬಸವಳಿದೆ
ಅಸಮಹಿಮ ತವಪಾದ
ಕುಸುಮ ಮರೆದು ಕೆಟ್ಟೆನಭವ ೨

ನಾಶಮತಿಯಿಂದಾಸೆಗೈದ
ದೋಷಗಳನ್ನು ಕ್ಷಮಿಸಿ ಬೇಗ
ಪೋಷಿಸಿಭವ ಶ್ರೀಶ ಶ್ರೀರಾಮ
ದಾಸಜನರುಲ್ಲಾಸ ಪ್ರಭು ೩

೨೮೯

ತೋರು ನಿಮ್ಮ ಪಾದಕುಸುಮ
ಮಾರನಯ್ಯಾಪಾರಮಹಿಮ ಪ

ಧರೆಯ ಭೋಗದಾಸೆ ತೊರೆಸಿ
ನಿರುತವಾದ ಮಾರ್ಗ ಹಿಡಿಸಿ
ಕರುಣಿಸು ಎನ್ನ ಹೃದಯಕಮಲಕೆ
ಕರೆ ತತ್ತ್ವಜ್ಞಾನ ಅಮೃತ ೧

ಕವಿದುಕೊಂಡಜ್ಞಾನಕತ್ತಲು
ಜವದಿಹಾರಿಸಿ ಎನ್ನಯ
ಭವದ ಬಂಧನ ದೂರಮಾಡಿ
ಜವನಭಯನಿರ್ಬೈಲು ಎನಿಸು ೨

ಮಯಾಮೋಹದೊಳಗೆ ಮುಳುಗಿ
ಪೋಯಿತೆನ್ನಯ ಅರ್ಧವಯವು
ಕಾಯಜಪಿತ ಸ್ವಾಮಿ ಶ್ರೀರಾಮ
ನೋಯಿಸದೆ ನಿಜಪಥಕೆ ಹಚ್ಚೆನ್ನ ೩

೨೯೦

ದಯಪಾಲಿಸೆಲೊ ರಂಗ
ಭ್ರಮಿಪ ಮನಕೆ ಶಾಂತಿ ಪ

ತನುಮನಧನಮೋಹವನು ಪರಿಹರ ಮಾಡಿ
ಅನುದಿನ ತವಧ್ಯಾನ ಆನಂದ ಕರುಣಿಸೊ ೧

ಸ್ಮರಿಸಬಾರದ ಸ್ಮರಿಸಿ ದುರಿತಕ್ಕೆ ಗುರಿಯಾಗಿ
ಪರಿಪರಿ ಮರುಗುವ ದುರ್ಮನ ದೂರಮಾಡೊ ೨

ನೀನೆ ಎನ್ನಯ ಮಹಪ್ರಾಣೇಶ ಶ್ರೀರಾಮ
ನಾನಾಕಾಮಿತ ಬಿಡಿಸಿ ಜ್ಞಾನಪದವಿ ನೀಡೊ ೩

೨೯೧

ದಯವದೋರೋ ದೇವ ಭಕುತ
ಭಯನಿವಾರ ಅಭವ ಪ

ದಯವದೋರೋ ನಿನ್ನ ಪಾವನಪಾದ ಸು
ಸೇವಕ ಜನಮಹಜೀವ ಜಾನಕೀಧವ ಅ.ಪ

ಪಾಪಗೆಲಿಯ ಬಂದೆ ಸಂಸಾರ
ಕೂಪದೊಳಗೆ ನಿಂದೆ
ಕೋಪಜ್ವಾಲದಿ ಬೆಂದೆ ವಿಷಯ
ತಾಪತ್ರಯದಿನೊಂದೆ
ಆ ಪರಲೋಕದ ವ್ಯಾಪಾರ ಮರೆದಿಹ್ಯ
ವ್ಯಾಪಕನಾಗಿ ಬಲುತಾಪಬಡುವೆ ತಂದೆ ೧

ಅಂಗಮೋಹವ ಬಿಡಿಸೋ ನಿನ್ನವರ
ಸಂಗವ ಕರುಣಿಸೊ
ಭಂಗವ ಪರಹರಿಸೊ ಜಗದವ
ರ್ಥಂಗಹನು ತಪ್ಪಿಸೊ
ಮಂಗಳಾತ್ಮ ನಿನ್ನ ಮಂಗಳಾಮೂರ್ತಿ ಎನ್ನ
ಕಂಗಳೋಳ್ನಿಲ್ಲಿಸಿ ಹಿಂಗದಾನಂದ ನೀಡು ೨

ದೋಷದಾರಿದ್ರ್ಯ ಹರಿಸೊ ಮನದ
ಅಶಾಪಾಶ ಬಿಡಿಸೊ
ಹೇಸಿಪ್ರಪಂಚ ಗೆಲಿಸೊ ಸುಜನರಾ
ವಾಸ ತೀವ್ರ ಪಾಲಿಸೊ
ದೋಷನಾಶ ಜಗದೀಶ ಶ್ರೀರಾಮ ನಿನ್ನ
ದಾಸಾನುದಾಸೆನಿಸಿ ಪೋಷಿಸು ಸತತ ೩

೨೯೨

ದಾತ ಹೈ ತೂಹೀ ಮೇರಾ ಹರಿಯೇ
ಕೃಪಾಕರ ಚರಣ ತುಮ್ಹಾರೇ ಪ

ಕೋಯೀ ನಹೀ ದುನಿಯಾಮೇ ಮೇರೇ ಹಿಮ್ಮತ
ಜಾನಕೀನಾಥ ತುಮ್ಹಾರೇ ಶಿವಾಯ್ ರಹಕೇ
ದೇವತಾ ಕೋಯೀ ನಹೀ ದಿಖತಾ ೧

ಹಿರಸ್ಕೇ ಚಕ್ಕರ್ಮೇ ಗಿರ್ಕರ್ ಬಹುತ್ ಮೈ
ಟಕ್ಕರ್ ಖಾಯಾ ರೇ ಮುರಾರಿ
ಜಗ್ ಲೇನ್ ದೇನ್ ಕಾ ಬಜಾರ ಹೈ ಇಜ್ಜತ್ ಬಚ್ಯಾರೇ ೨

ನ ಕೋಯೀ ಭಾಯೀ ಬಂಧು ಹೈ ನ ಕೋಯೀ
ಪ್ಯಾರೇ ಅಪ್ನಾ ಹೈ ಸಭೀ ಹೈ ಧನ್ಕೇ
ದೌಲತ್ಕೇ ರಿಷ್ತಾದಾರ ಸಂಗತ ಕೋಯೀ ನಹೀರೇ ೩

ಬಚಪನ್ ಖೇಲ್‌ಮೇ ರಖದಿಯಾ ತರುಣಪನ್
ಕಾಮಮೇ ಖೋಲಿಯಾ ಪ್ರಪಂಚ ಮಾಯಮೇ
ಮೇರಾ ಉಮರ್ ಬೇಕಾರ್ ಗಂವಾಯಾ ೪

ಗಫಲತ್ ದುನಿಯಾ ದರಿಯಾಸೇ ತೀರ್ಕರ್
ಪಾರ್ ಹೋನೇಕಾ ಸೂರತ್ ದಿಖಾದೇ ಶ್ರೀರಾಮ
ಜಲ್ದೀಸೇ ಬಚಾಲೇ ಅಫತ್ಸೇ ೫

೨೯೩

ದಾಸಜನಕೆ ಸಹಯನಾಗಬಾರದೆ
ಶ್ರೀಶ ನಿನ್ನಯ ಪಾದ ಪ

ಕಾಸಿನ ಋಣಕಂಜಿ ಆಶಿಸಿ ಪರರಿಂದಾ
ಯಾಸದಿ ಬೇಡುವ ಭೋಗ ತಪ್ಪಿಸಲಿಕ್ಕೆ ೧

ಎಂದಿಗಾದರಿದು ಒಂದಿನ ನಿಜವಾಗಿ
ಕುಂದುವ ಈ ಭವಬಂಧ ತಪ್ಪಿಸಲಿಕ್ಕೆ ೨

ಜ್ಞಾನಿಗಳಾಸ್ಪದ ಜ್ಞಾನಮೂರುತಿ ಮಮ
ಪ್ರಾಣ ಶ್ರೀರಾಮ ನಿನ್ನ ಧ್ಯಾನ ನಿಲ್ಲಿಸಲಿಕ್ಕೆ ೩

೨೯೪

ದಾಸನ ಮೇಲಿಷ್ಟು ಬೇಸರವ್ಯಾಕೋ
ಶೇಷಶಯನನೆ ನಿನ್ನ ಧ್ಯಾಸದೊಳಿರುವ ಪ

ನಶಿಸಿಹೋಗುವ ಕಾಯದ್ವ್ಯಸನವನು ಪರಿಹರಿಸಿ
ಹಸನಾದ ಮತಿಯೆನಗೆ ಒಸೆದು ನೀಡೆಂದು
ನಿಶಿದಿವದಿ ನಿನ್ನಡಿಕುಸುಮಗಳನಂಬಿ ಮಾ
ನಸದಿ ಭಜಿಸಲು ಎನಗೊಶನಾಗದಿರುವಿ ೧

ಜಡತನದ ಸಂಸಾರ ತೊಡರೆಡರು ಕಡಿದು ಗಡ
ಜಡಮತಿಯ ತೊಡೆದೆನಗೆ ದೃಢ ನಿಶ್ಚಯವನು
ಕೊಡುಯೆಂದು ದೃಢದಿ ನಿನ್ನಡಿಗೆರಗಿ ಬೇಡಿದರೆ
ಒಡಲೊಳಗೆ ನಿಂದೆನ್ನ ಜಡತನಳಿವಲ್ಲಿ ೨

ಶ್ರೀಶ ಶ್ರೀರಾಮ ನಿನ್ನ ಧ್ಯಾನಮಾಡಲು ಒಮ್ಮೆ
ಸಾಸಿರಕೋಟಿ ಅಘ ನಾಶನಲ್ಲೇನು
ದಾಸಜನಕರುಣಾಬ್ಧಿ ದಾಸನೊಳ್ದಯವಾಗಿ
ಪೋಷಿಸೈ ತವಪಾದ ನಿಜಧ್ಯಾಸವಿತ್ತು ೩

೨೯೫

ದಾಸನಾದಮೇಲಿ ನಿನಗಾ
ಯಾಸವ್ಯಾಕೊ ಮರುಳೆ ಪ

ಮೋಸಪಾಶಗಳ ನಾಶಮಾಡುವಂಥ
ದಾಸರ ಪ್ರಾಣ ಲಕುಮೀಶನ ಚರಣ ಅ.ಪ

ಚಿಂತೆಗೈವುದ್ಯಾಕೊ ಹಲವು
ಭ್ರಾಂತಿಗಳಿನ್ಯಾಕೊ
ಕಂತುಜನಕ ಅಂತರಂಗ ನಿ
ರಂತರ ಸ್ಮರಿಪರತ್ಯಂತಪ್ರಿಯನ ಪಾದ ೧

ಮಿಡುಕುವುದಿನ್ಯಾಕೊ ನಿನಗೆ
ಬಡತನಗೊಡವ್ಯಾಕೊ
ಬಡವರ ಭಾಗ್ಯನೆಂದು ದೃಢದಿ ಪಾಡ್ವರ ಬೆಂ
ಬಿಡದೆ ಕಾಪಾಡುವ ದೃಢಕರೊಡೆಯನ ಪಾದ ೨

ಹಾರೈಸುವುದ್ಯಾಕೋ ನೀ ಬಲು
ಘೋರಬಡುವುದ್ಯಾಕೊ
ಬಾರಿಬಾರಿಗೆ ಸೇರಿ ಭಜಿಪರ
ಭಾರಹೊತ್ತು ಕಾಯ್ವ ಧೀರ ಶ್ರೀರಾಮಪಾದ ೩

೨೯೬

ದಾಸನಾದವನಿಗೆ ಭವಭೀತಿಯುಂಟೆ
ಆಸೆಬಿಟ್ಟವನಿಗೆ ಘಾಸಿಯಿನ್ನುಂಟೆ ಪ

ವನಿತೆಯರಾಸ್ಥಳಿದವಗೆ ಮನಸಿಜನರ ಭೀತಿಯೆ
ಮಣ್ಣಿನಾಸೆ ಪೋದವಗೆ ಅವನಿಪರ ಭಯವೆ
ಧನದಾಸೆ ಪೋದವಗೆ ಬಿನುಗುಜನರಂಜಿಕೆಯೆ
ತನುಮೋಹ ಬಿಟ್ಟವಗೆ ಮರಣದ ಭಯವೆ ೧

ನಿಂದೆಯನು ಬಿಟ್ಟವಗೆ ಬಂಧಸೋಂಕುವ ಭಯವೆ
ಸಂದೇಹವಳಿದವಗೆ ಕರ್ಮಗಳ ಭಯವೆ
ಮಂದಿಗೋಷ್ಠಿಯಿಲ್ಲದವಗೆ ಅಪವಾದ ಭೀತಿಯೆ
ಸಿಂಧುಶಯನನರ್ಚಕಗೆ ಕಾಲನ ಭಯವೆ ೨

ಪರಮ ಧಾರ್ಮಿಕನಿಗೆ ಬಡತನದ ಭೀತಿಯೆ
ಪರವ ಸಾಧಿಪನಿಗೆ ಕಷ್ಟಗಳ ಭಯವೆ
ಅರಿವಿಟ್ಟು ನಡೆವವಗೆ ದುರಿತದ ಭಯವಿಹುದೆ
ಶರಣರೊಳಾಡುವಗೆ ನರಕಂದಜಿಕೆಯೆ ೩

ತತ್ವದರ್ಥಿಕನಿಗೆ ಮಿಥ್ಯಶಾಸ್ತ್ರದ ಭಯವೆ
ನಿತ್ಯನಿರ್ಮಲನಿಗೆ ಮಡಿ ಮುಟ್ಟು ಭಯವೆ
ಸತ್ಯಸನ್ಮಾರ್ಗಿಕಗೆ ಮರ್ತ್ಯದವರಂಜಿಕೆಯೆ
ಸತ್ಯರೊಳಾಡುವಗೆ ಮೃತ್ಯುವಿನ ಭಯವೆ ೪

ಕೊಟ್ಟು ಹುಟ್ಟಿದವಗೆ ಹೊಟ್ಟೆ ಬಟ್ಟೆಯ ಭಯವೆ
ಇಟ್ಟು ಹಂಗಿಸದವಗೆ ಹೊಟ್ಟೆ ಬೇನೆ ಭಯವೆ
ಸೃಷ್ಟಿಯೊಳಗೆ ನಮ್ಮ ದಿಟ್ಟ ಶ್ರೀರಾಮನಡಿ
ಮುಟ್ಟಿ ಭಜಿಪಗೆ ಮತ್ತೆ ಹುಟ್ಟುವ ಭಯವೆ ೫

೨೯೭

ದಾಸ ನಾನೆಲೊ ಹರಿದಾಸ ನಾನೆಲೊ
ಶ್ರೀಶ ನಿಮ್ಮ ಶ್ರೀಪಾದಕಮಲ ಪ

ಭವಭವದಿ ಜನಿಸಿ ಜನಿಸಿ
ಬವಣೆಸಿದ್ದನುಭವಕ್ಕೆ ತಂದು
ಭವಭೀತನಾಗಿ ನಿಮ್ಮ
ಪಾವನಂಘ್ರಿ ಮರೆಯಹೊಕ್ಕೆ ೧

ಪರಿಭವದ ಶರಧಿ ಈಸಿ
ಪರಲೋಕ ಪಥದಿ ನಿಂತು
ಪರಕೆ ಪರಮಪರತರನ
ಪರಮಬಿರುದುಪೊಗಳುವಂಥ ೨

ಶರಣಾಗತವತ್ಸಲ ನಿನ್ನ
ಚರಣನಂಬಿ ಶರಣು ಮಾಳ್ಪೆ
ತರಳನಾಲಾಪ ಕರುಣದಾಲಿಸಿ
ಚರಣದಾಸನೆನಿಸಿಕೊ ಶ್ರೀರಾಮ ೩

೨೯೮

ದಾಸನೆನಿಸಿಕೊ ಎನ್ನನು ದಾಸನೆನಿಸಿಕೊ ಹರಿ ಪ

ದಾಸನೆನಿಸಿಕೊ ಶ್ರೀಶ ನಿ
ಮ್ಮ ಶ್ರೀಪಾದಕಮಲದಾಸನೆನಿಸಿಕೊ ಅ.ಪ

ದೇಶ ದೇಶ ತಿರುಗಿ ನಾನು
ಆಶಬದ್ಧನಾಗಿ ಇನ್ನು
ಏಸುಕಾಲ ಕಳೆಯಲ್ಹೀಗೆ
ಭಾಸುರಾಂಗ ದಯವನಿತ್ತು ೧

ಏಸು ಜನ್ಮ ಸುಕೃತವಡೆದು
ವಾಸನ್ಬಿಡಿದು ನಿನ್ನ ಪಾದ
ಆಸೆಯಿಂದ ಬೇಡ್ವೆ ನೆನ್ನ
ಧ್ಯಾಸದಲ್ಲಿ ವಾಸಮಾಡಿ ೨

ಭಕ್ತರಿಷ್ಟಪೂರ್ಣನೆಂದು
ನಿತ್ಯ ಬಿಡದೆ ಕೂಗುವಂಥ
ಸತ್ಯವೆನಿಸು ವೇದದೋಕ್ತಿ
ನಿತ್ಯ ನಿರ್ಮಲಾತ್ಮ ರಾಮ ೩

೨೯೯

ದಿಖಾದೇ ಮೂರ್ತಿ ಅಪನೇಕಾ
ಶ್ರೀಹರಿ ಭಕುತಿದಾಯಕ ಪ

ಉಡದೇ ಮಾಯಾ ಮಮತಾಕೋ
ಛುಡಾದೇ ಪ್ರೇಮಪಾಶಾಕೋ
ಮಿಟಾದೇ ನಾಶ ಓರಸಕೋ
ಕಟಾದೇ ವಿಷಯಲಂಪಟಕೋ ೧

ಮೋಕಾ ದೋ ಅಪನೀ ಕೀರ್ತನ ಕೋ
ಮಜಾದೋ ನಾಮಸ್ಮರಣ್ಕೇ
ಕೃಪಾದೋ ಭಜನ ಆನಂದಕೇ
ಬನಾದೋ ದೂತ ವೈಕುಂಠಕೇ ೨

ಕರಾದೋ ಸಂಗ ದಾಸೋಂಕೇ
ಛುಲಾದೋ ಪಾಪ ಕರ್ಮೌಂ ಕೋ
ಪಿಲಾದೋ ಧ್ಯಾನ ಅಮೃತಕಾ
ಶ್ರೀರಾಮ ನಾಮ ತಾರಕಾ ೩

೩೦೦

ದಿನದಿನದೊಳು ಬಿಡದೊನಜಾಕ್ಷ
ಘನಮಹಿಮನ ಪಾದ ಭಜಿಸಿ ನೀ ಸುಖಿಯಾಗೊ ಮನವೆ ಪ

ನಂಬುಗೆ ಕಾರಣ ಅಂಬುಜಾಕ್ಷನ ಶ್ರೀಪಾ
ದಾಂಬುಜ ಒಲಿಸಲು ಕುಂಭಿಣಿಯೊಳಗೆ
ನಂಬಿ ಪ್ರಹ್ಲಾದ ಕರೆಯೆ ಕಂಬದಿಂ ಬಂದವನ
ಬೆಂಬಿಡದಲೆ ಕಾಯ್ದನೆಂಬೋಕ್ತಿ ಕೇಳಿ ತಿಳಿದು ೧

ದುರಿತದ ತವರಿದು ನರಕಕ್ಕೆ ಬೇರೆಲೊ
ಮರವೆಸಂಸಾರ ಮಹಸರಸಿನಸರೋವರ
ಸುರಸಿನೊಳ್ ಸಿಲ್ಕಲು ತಿರುಗರೆಂಬುವ
ಹರಿಶರಣರ್ವಾಕ್ಯಗಳು ಸ್ಥಿರನಂಬೀ ಅರಿತು ೨

ಕಿರಿಕಿರಿ ಸಂಸಾರ ಪರಿಪರಿಬಾಧಿಪ
ಉರಿಕಿನ ತಿಂಡಿಯಿದು ನೆರೆನಂಬಬೇಡ
ಜರಸುಖವಿಲ್ಲದ ಎರವಿನ ಕಾಯಕ್ಕೆ
ಹಿರಿಹಿರಿ ಹಿಗ್ಗಿ ಕೆಡದಿರು ವಿವರಿಸಿನೋಡಿ ೩

ಸತಿಸುತರಿವರೆಲ್ಲ ಅತಿಭಾಗ್ಯ ಇರುವನಕ
ಸತತ ನಿನ್ನಯ ಸೇವೆ ಹಿತದಿಂ ಮಾಳ್ಪರು
ಗತಿಸಿ ಪೋಗಲು ಭಾಗ್ಯ ಸತಿಸುತರೆ ನಿನ
ಗತಿವೈರಿಗಳು ಕಾಣೊ ಮತಿಹೀನ ಮನಸೆ ೪

ಇರುಳು ಹಲವು ಪಕ್ಷಿ ನೆರೆದುಂಡು ವೃಕ್ಷದಿ
ತಿರುಗಿ ಉದಯದೊಳು ಹಾರಿಹೋಗ್ವ ತೆರದಿ
ಸರುವ ಅಸ್ಥಿರವೆಂದು ಅರಿತು ವಿಚಾರಿಸಿ
ಸ್ಥಿರಸುಖವನು ಪಡೆಯೊ ಶ್ರೀರಾಮನಡಿಗ್ಹೊಂದಿ ೫

೩೦೧

ದೀನನಾಥ ನೀನೆ ಪ್ರಭು
ಧ್ಯಾನಮಾಳ್ಪೆ ಕಾಯೊ ಕರುಣಿ ಪ

ಜಾಹ್ನವೀಜನಕ ಜನಾರ್ದನ
ಜಾನಕೀಪ್ರಿಯ ಜಗದೊಡೆಯ
ವೇಣುಗೋಪಾಲ ನಿನ್ನ
ಧ್ಯಾನಾನಂದ ಪಾಲಿಸಭವ ೧

ಕವಿದುಕೊಂಡು ದಹಿಸುತಿರುವ
ಭವದ ತಾಪ ಭಯವ ತರಿದು
ಸುವಿಚಾರ ಸುಜನಸಂಗ
ಜವದಿ ನೀಡಿ ದಯದಿ ಪೊರೆ ೨

ವಿಷಯದ್ವಾಸನೆ ಪರಿಹರಿಸಿ
ಅಸಮಜ್ಞಾನ ಸೌಖ್ಯವಿತ್ತು
ಒಸೆದು ನಿಮ್ಮ ವಿಮಲಚರಣ
ಕುಸುಮದಾಸನೆನಿಸು ಶ್ರೀರಾಮ ೩

೩೦೨

ದೇವ ಏನು ಬೇಡುವುದಿಲ್ಲ ನಾನು ನಿನ್ನ
ಬೇಡುವೆ ಭವಭವದಿದನೆ ಕೊಡು ನೀನು ಪ

ಶಿರ ನಿನ್ನ ಚರಣದಿ ಎರಗಲಿ ಕರ್ಣ
ಹರಿಕಥೆಕೀರ್ತನೆ ಶ್ರವಣ ಮಾಡಲಿ
ಪರಮಾತ್ಮಮೂರ್ತೆನ್ನ ನೇತ್ರ ನೋಡಲಿ
ಶಿರಿವರಮುಡಿದ ಪರಿಮಳ ನಾಸಿಕ ಘ್ರಾಣಿಸಲಿ ೧

ವದನ ನಿನ್ನನು ಸ್ತುತಿಸಲಿ ನಿನ್ನ
ಸದಮಲಮಹಿಮೆಯನು ಜಿಹ್ವೆ ಕೊಂಡಾಡಲಿ
ಹೃದಯವು ತವನಾಮ ತುಂಬಿಕೊಳ್ಳಲಿ
ಮಧುಸೂದನನ ಪ್ರಸನ್ನತೆ ಮನವು ಬಯಸಲಿ ೨

ಕರ ನಿನ್ನ ಚರಣಮಂ ನಿರುತ ಪೂಜಿಸಲಿ ದ್ವಯ
ಚರಣಗಳುನುದಿನ ಯಾತ್ರೆಗೈಯಲಿ
ಪರಿಪರಿ ತವಲೀಲೆಯೊಳು ಬುದ್ಧಿ ನಿಲ್ಲಲಿ ಎನ್ನ
ಶರೀರ ಶ್ರೀರಾಮನ ಚರಣಕೊಪ್ಪಲಿ ೩

೩೦೩

ದೇವ ದೇವ ತೋರು ದಯವ ಪ

ಕಾವದೇವ ನೀನೆ ಎನ್ನ
ಕೈಯಪಿಡಿದು ಕಾಯೊ ಅಭವ ಅ.ಪ

ಧ್ಯಾನಿಪ ಭಕ್ತ ದೀನರಭಿಮಾನಿ
ನೀನೆ ಕರುಣಿಸೊ
ದೀನಸ್ವರದಿ ಬೇಡಿಕೊಂಬೆ
ಮಾನರಕ್ಷಿಸಿ ಪೊರೆಯೊ ಜೀಯ ೧

ನೀಗಿಸಲು ದುರ್ಬವಣೆಯನು
ಬಾಗಿ ನಿಮ್ಮ ಮರೆಯ ಹೊಕ್ಕೆ
ಭೋಗಿಶಯನ ಬಾಲನನ್ನು
ಬಗಲೊಳಿಟ್ಟು ಸಲಹು ಜೀಯ ೨

ಭಾಮೆಮಣಿಯ ಸಮಯಕೊದಗಿ
ಪ್ರೇಮದಿಂದ ಮಾನ ಕಾಯ್ದಿ
ಸ್ವಾಮಿ ನೀನೆ ಗತಿಯು ಎನಗೆ
ಪ್ರೇಮದಿಂದ ಕಾಯೊ ಶ್ರೀರಾಮ ೩

೩೦೪

ದಂಡವ್ಯಾತಕಯ್ಯ ಹರಿ ಹರಿ ದಂಡವ್ಯಾತಕಯ್ಯ ಪ

ದಂಡವ್ಯಾತಕಯ್ಯ ಪಾಂಡುಪಕ್ಷ ಮಹ
ಪುಂಡ ನಿನ್ನ ಪಾದ ಮರೆಯ ಬಿದ್ದವರಿಗೆ ಅ.ಪ

ಭಾರನಿನ್ನದೆಂಬ ಭಕ್ತರ ಭಾರವಹಿಸಿಕೊಂಬ
ಪಾರಕರುಣಾನಿಧಿ ಧೀರ ನಿನ್ನ ಪಾದ
ಸೇರೆ ಭಜಕರಿಗೆ ಧಾರುಣಿ ಜನರ ೧

ಅಜಾಮಿಳನಂತ್ಯದಿ ತವನಾಮ ನಿಜವಾದೊಂದಕ್ಷರದಿ
ಮಜೆದು ಗೆಲಿದು ಕಷ್ಟ ನಿಜಪದ ಪಡೆದದ್ದು
ನಿಜವನರಿತು ನಿಮ್ಮ ಭಜಿಸುವ ಜನರಿಗೆ ೨

ಸಿಂಧುಶಯನನೆನಲು ಅನ್ಯರ ಬಂಧುವೆ ಕರುಣಾಳು
ಮಂದರಪರ್ವತ ಮಂದಿರ ಶ್ರೀರಾಮ
ಬಂಧುರ ನಿಮ್ಮ ಪಾದ ವಂದಿಸಿ ಸುಖಿಪರಿಗೆ ೩

೩೦೫

ಧನವಂತನಾದವನೆ ಘನವಂತ ಜಗದಿ
ಧನವಂತನಾಗದವ ಹೆಣಕೆ ಕಡೆ ಇಹ್ಯದಿ ಪ

ಧನಿಕನ ಮನೆಮುಂದೆ ದಿನಕರನ ಪ್ರಭೆಯಂತೆ
ಜನಸಮೂಹ ನೆರೆಯುತಿಹ್ಯದನುದಿನವು ಬಿಡದೆ
ಮಣಿದು ಅವನಿಗೆ ತಮ್ಮ ಮನೆಯ ಪರಿವ್ಯಿಲ್ಲದೇ
ಮನ್ನಿಪರು ಅವನೊಚನ ಘನಭಕುತಿಲಿಂದ ೧

ಸಿರಿಯಿಲ್ಲದವ ಬಂದು ಶರಣೆಂದು ಕರಮುಗಿಯೆ
ಗರುವದಿಂ ಕೂಡ್ರುವರು ಶಿರವೆತ್ತಿ ನೋಡದೆ
ತಿರುಕುದೆ ಇವನು ಹೆರಕೊಂಡು ತಿನಲಿಕ್ಕೆ
ತಿರುಗುವನು ಎಂದೆನುತ ಶಿರಿಸುವರು ಹೀನ ೨

ಬಂಧುಬಳಗವುಯೆಂದು ಬಂದು ಕರೆಯಲವನ
ಮುಂದೆ ನುಡಿಯುವರು ನಿನ್ನ ಮಂದಿರಕೆ ಬಂದು
ಚಂದದಿಂದುಂಡೇವೇನೆಂದು ಜರೆವರು ಮನಕೆ
ಬಂದ ತೆರದವನ ಮನನೊಂದಳಲುವಂತೆ ೩

ಹತ್ತಿರದವರಾರು ಹತ್ತಿರಕೆ ಬಾರರು
ಸತ್ತ್ಹಣನ ಕಂಡಂತೆ ಮತ್ತಿವನ ಕಂಡು
ಅತ್ತಿತ್ತ ಪೋಗುವರು ಸುತ್ತಿ ಪಥಸೇರುವರು
ಆರ್ಥಿಲ್ಲದವನಿರವು ವ್ಯರ್ಥ ಮರ್ತ್ಯದೊಳು ೪

ಹರಿದ್ದೋಗ ಸಿರಿಯೆಂದು ಅರಿಯದೆ ಗರುವದಿ
ಚರಿಸುವ ಅಧಮಜನರಿರವೇನು ಜಗದಿ
ಗರುವಿಕರ ಸಿರಿಗಿಂತ ಶರಣರ ಬಡತನವೇ
ಪಿರಿದೆಲೋ ಶ್ರೀರಾಮ ಅರಿದು ನಾನು ಬೇಡ್ವೆ ೫

೩೦೬

ನನಗ್ಯಾಕೆ ಬಡತನವು ಸನಕಾದಿನುತ
ನಿನ್ನ ಬೆನ್ನು ಬಲವಿರಲು ಪ

ಪುಂಡಗಂಡನು ಇರಲು ಹೆಂಡತಿಯ ಭೋಗ ಭೂ
ಮಂಡಲದೊಳಗಿನ್ನು *** ತ್ವವ್ಯಾಕೋ
ಭಂಡರಕ್ಕಸಹರ ಪುಂಡಮಂಡಲತ್ರಯದೋ
ರ್ದಂಡನ ಪಾದೆನ್ನ ಮಂಡೆ ಮೇಲಿರಲು ೧

ಜನರಿಗೆ ಕಾಣದ ಧನವ ಕೂಡಿಟ್ಟು
ಅನುದಿನ ಹಿಗ್ಗುವವರಿಗೆ ಬಡತನವುಂಟೇನೊ
ಧಣಿಯಾಗಿ ಮೂಲೋಕವನು ಉದರದಿಟ್ಟಾಳ್ವ
ಘನಮಹಿಮನ ಪಾದ ಮನಮಂದಿರದಿರಲು ೨

ಕಲ್ಪಿತಸಂಸಾರ ಅಲ್ಪೆಂದು ನಿಜವಾಗಿ
ಕಲ್ಪಿಸಿಕೊಂಡವರು ಅಲ್ಪರೇನಯ್ಯ

ಕಲ್ಪತರು ಶ್ರೀರಾಮನ ಕಲ್ಪಾಂತರರಿಬಳಿ
ಕಲ್ಪರಲ್ಲಿಗೆ ಹೋಗಿ ಅಲ್ಪರಿವರೇನೊ ೩

೩೦೭

ನರನಾಗಿ ಜನಿಸಿ ಫಲವೇನು ಜಗದಿ
ಹರಿಪಾದ ಸ್ಮರಣೆಯ ಅರಿಯದ ಮನುಜ ಪ

ಕಮಲಪೀಠಪಿತನ ವಿಮಲಶ್ರೀಪಾದಗಳ
ಅಮಿತ ಮಹಿಮೆ ಪೊಗಳಿ ಯಮಪಾಶ ಗೆಲಿಯುವ ೧

ಭುವನವೀರೇಳಕ್ಕೆ ಜೀವಾಳುಯೆನಿಸಿದ
ಭವದೂರನರ್ಚಿಸಿ ಭವಮಾಲೆ ಗೆಲಿಯದ ೨

ಪಕ್ಷಿಗಮನ ಪರಮಮೋಕ್ಷದಾಯಕ ಭಕ್ತ
ಪಕ್ಷ ಶ್ರೀರಾಮನೊಲಿಸಿ ಮೋಕ್ಷವ ಪಡೆಯದ ೩

೩೦೮

ನರಹರಿ ಶರಣರಸುರತರು ಶ್ರೀಕರ
ಹರಿ ನಿಮ್ಮ ಪಾದಸ್ಮರಣೆ ಮರೆಯಲಾರೆನೆಂದೆಂದು ಪ

ಹರಿ ನೀನೆ ಗತಿಯೆಂದು ಮೊರೆಯಿಟ್ಟು ಸ್ಮರಿಪರ
ಅರಲವ ಬಿಡದವರ ಸ್ಮರಣೆಯೋಳ್ನೆಲೆಗೊಂಡು
ತೆರೆದು ಕರುಣಚಕ್ಷು ಪೊರೆವೆ ಎವೆಯಿಕ್ಕದೆ ೧

ವೇದವೇದಾದಿ ನಮಿತ ಸಾಧುಸಜ್ಜನ ವಿನುತ
ಪಾದದಾಸರ ಭವಬಾಧೆಗೆಲಿಸಿ ಸು
ಹಾದಿ ತೋರಿಸಿ ಬಹು ಮೋದದಿಂ ಸಲಹುವಿ ೨

ನೀ ಮಾಡಿದುಪಕಾರ ನಾ ಮರೆಯಲಾರೆ ದೇವ
ಸ್ವಾಮಿ ಶ್ರೀರಾಮ ನಿನ್ನ ನಾಮ ಕರುಣಿಸಿ ಎನ್ನ
ಈ ಮಹಭವದು:ಖ ಕ್ಷೇಮದಿಂ ಗೆಲಿಸಿದಿ ೩

೩೦೯

ನಾನಾ ಚಿಂತನೆ ಎನಗಿಲ್ಲ ಹರಿ
ನಿನ್ನ ಚಿಂತನೆ ಎನಗನುಗಾಲ ಪ

ಮಾನಾಪಮಾನದ ಭಯವಿಲ್ಲೆನಗೆ ತವ
ಧ್ಯಾನವೊಂದೆ ನೀಡು ಬಹು ಮಿಗಿಲ ಅ.ಪ

ಉಪವಾಸಬಿದ್ದರೆ ಆಡ್ಡಿಯಿಲ್ಲ ಎನ
ಗಪರೂಪ ಊಟಾದರ್ಹಿಗ್ಗಿಲ್ಲ
ಕಪಟದಿ ಬೈದರೆ ಅಹಿತಿಲ್ಲ ಜನ
ನಿಪುಣನೆಂದರೆ ಎನಗ್ಹಿತವಿಲ್ಲ
ಸುಪಥದಿ ನಡೆಸೆನ್ನ ಸಫಲನೆನಿಸಿ ನಿಮ್ಮ
ಗುಪಿತ ಮಂತ್ರ ಮಾಡನುಕೂಲ ೧

ಪರಮ ಬಡತನವಿರೆ ಪರವಿಲ್ಲ ಬಲು
ಸಿರಿ ಸಂಪದವಿರೆ ಹರುಷಿಲ್ಲ
ಮರಣಬಂದರೇನು ಕೆಡುಕಿಲ್ಲ ಮತ್ತು
ಚಿರಕಾಲವಿರಲೇನು ಸುಖವಿಲ್ಲ
ಸಿರಿವರ ನಿಮ್ಮಯ ಚರಣ ಸ್ಮರಣೆವೊಂದೆ
ಸ್ಥಿರಮಾಡು ಮರೀದಂತೆ ಗೋಪಾಲ ೨

ಕಾಮಿನಿಯರ ಪ್ರೇಮ ನಿಜವಿಲ್ಲ ಮತ್ತು
ಹೇಮ ಮುತ್ತು ರತ್ನ ಇರೋದಲ್ಲ
ಭೂಮಿಸೀಮೆಯ ಸುಖವಿಲ್ಲ ಇದು
ನೇಮವಲ್ಲೊಂದಿನ ಬಟ್ಟಬೈಲ
ಕ್ಷೇಮಮಂದಿರ ಭಕ್ತಪ್ರೇಮದಿ ಕೊಡು ಶ್ರೀ
ರಾಮ ನಿಮ್ಮಡಿ ಭಕ್ತಿ ನುತಪಾಲ ೩

೩೧೦

ನಾನಿನ್ನ ಧ್ಯಾಸದೊಳಿರುವೆ ಹರಿ
ನೀನೆನ್ನ ಧ್ಯಾಸದೊಳಿರಬೇಕು ಸತತ ಪ

ಬೆಳಗು ನಿನ್ನೊಳಗಯ್ಯ ಬೆಳಗಿನೊಳಗೆ ನೀನು
ಕಳೆಯೊಳಗೆ ನೀನಯ್ಯ ಕಳೆಯು ನಿನ್ನೊಳಗೆ
ಇಳೆಮೂರು ನಿನ್ನೊಳಗೆ ಇಳೆಯೊಳು ನೀನಯ್ಯ
ಒಲಿದು ನೀ ಎನ್ನನು ಸಲಹಯ್ಯ ಸತತ ೧

ವೇದದೊಳಗೆ ನೀನು ವೇದ ನಿನ್ನೊಳಗಯ್ಯ
ನಾದ ನಿನ್ನೊಳು ದೇವ ನಾದದಿ ನೀನು
ಭೋಧದೊಳಗೆ ನೀನು ಬೋಧ ನಿನ್ನೊಳು ಪ್ರಭು
ಮೋದದಿಂ ರಕ್ಷಿಸು ಮಾಧವ ಸತತ ೨

ನೀನಿಟ್ಟ ಸೂತ್ರದಿಂ ನಾನಾ ಸೃಷ್ಟಿಗಳೆಲ್ಲ
ನಾನುತಾನೆನ್ನುತ ಕುಣೀತಿಹ್ಯವೊ
ನಾನು ನಿನ್ನೊಳು ಜೀಯಾ ನೀನು ನಿನ್ನೊಳು ತಂದೆ
ಧ್ಯಾನದಾಯಕ ಶ್ರೀರಾಮಯ್ಯ ಸತತ ೩

೩೧೧

ನಾನೇನು ಬೇಡಿದೆನೋ ರಂಗಯ್ಯ
ನೀನೆನ್ನ ನೋಡವಲ್ಲ್ಯಾಕೋ ಪ

ಹಾನಿ ಮಾಡೆ ಮಹಹೀನಭವಸಾಗರ
ಮಾನದಿಂ ಗೆಲಿಸೆಂದು ನಾನಿಷ್ಟೇ ಬೇಡುವೆ ಅ.ಪ

ಉಗ್ರರೂಪವ ತಾಳಿ ಶೀಘ್ರದಿಂ ಪಿತನನ್ನು
ನಿಗ್ರಹಿಸಿ ಸ್ಥಿರಪದನುಗ್ರಹಿಸಿ ಪೊರೆಯೆಂದೆನೆ
ಸುಗ್ರೀವನಂತೆನ್ನ ಅಗ್ರಜನ ಕೊಂದು ಕಪಿ
ದುರ್ಗಕ್ಕಧಿಪತಿಯೆನಿಸೆಂದಾಗ್ರಬಟ್ಟೆನೊ ನಿನಗೆ ೧

ಕುಲವ ನಿರ್ಮೂಲ ಮಾಡಿ ಇಳೆ ಪಟ್ಟಕ್ಕೆ ಸ್ಥಿರವಾಗಿ
ನಿಲಿಸು ಎನಗೆಯೆಂದು ಸುಲಭದಿಂ ಬೇಡಿದೆನೆ
ಒಲಿದು ಸಾರಥಿಯಾಗಿ ಕುಲದವರ ಸವರೆಂದು
ನಳಿನಾಕ್ಷ ತವಪಾದದೊಳು ಬೇಡಿದೆನೇನೋ ೨

ಚಿತ್ತಜಪಿತ ನಿನ್ನ ಸತ್ಯ ಬಿರುದುಗಳು
ನಿತ್ಯ ನಿತ್ಯದಿ ಬಿಡದೆ ಶಕ್ತಿಯಿಂ ಪೊಗಳುವೆ
ಭಕ್ತಿದಾಯಕ ನಿನ್ನ ಯುಕ್ತ್ಯಾರುಬಲ್ಲರು
ಮುಕ್ತಿ ದಯಮಾಡೆಂದು ಪ್ರಾರ್ಥಿಪೆ ಶ್ರೀರಾಮ ೩

೩೧೨

ನಾನೊಂದು ಮಾಡಲು ತಾನೊಂದಾದಮೇಲಿನ್ನೇನಿನ್ನೇನು
ಮಾನವನೆಂದೆನಿಸಿ ಮಾನಪೋದಮೇಲಿನ್ನೇನಿನ್ನೇನು ಪ

ದೇವರೆಂದು ನಮಿಸಲು ದೆವ್ವಾಗಿ ಬಡಿದ ಮೇಲಿನ್ನೇನಿನ್ನೇನು
ಜೀವದಾಪ್ತರೆ ತನ್ನ ಕೊಲ್ಲಲೆತ್ನಿಸಿದರಿನ್ನೇನಿನ್ನೇನು ೧

ತಾಯ್ತಂದೆಗಳೆ ಸುತರಿಗ್ವಿಷವನೆರೆದ ಮೇಲಿನ್ನೇನಿನ್ನೇನು
ಕೈಯೊಳು ಪಿಡಿದ ಬೆತ್ತ ಹಾವಾಗಿ ಕಚ್ಚಲು ಇನ್ನೇನಿನ್ನೇನು ೨

ಮಣ್ಣಿನ ಗಣಪತಿ ಮಂಗ್ಯನಾಗೋಡಲು ಇನ್ನೇನಿನ್ನೇನು
ಕಣ್ಣಿಲ್ಲದವನಿಗೆ ಮಾರ್ಗ ತಪ್ಪಿದ ಮೇಲೆನ್ನೇನಿನ್ನೇನು ೩

ಹಾಲೆಂದು ಸವಿದರೆ ಹಲ್ಲು ಮುರಿದಮೇಲಿನ್ನೇನಿನ್ನೇನು
ಮಾಲ್ಯೆಂದು ಧರಿಸಲು ಉರುಲು ಬಿದ್ದ ಮೇಲಿನ್ನೇನಿನ್ನೇನು ೪

ಬೇಲ್ಯೆದ್ದು ಹೊಲದ ಬೆಳೆಯ ತಾ ಮೇಯಲಿನ್ನೇನಿನ್ನೇನು
ಮಾಳಿಗೆ ಮನೆಯೆ ತಾ ಗಾಳಿಗೆ ಸಡಲಿದರರಿನ್ನೇನಿನ್ನೇನು ೫

ಭೂಪತಿಗಳತಿನೀತಿತಪ್ಪಿದ ಮೇಲಿನ್ನೇನಿನ್ನೇನು
ಪಾಪಿಗಳತಿಶಯಯಕೋಪ ತಾಳಿದ ಮೇಲಿನ್ನೇನಿನ್ನೇನು ೬

ನೋಪಿದ ಗೌರಿಯೆ ಶಾಪವಿತ್ತ ಮೇಲಿನ್ನೇನಿನ್ನೇನು
ದೀಪವೆ ಕಾಲಾಗ್ನಿಯಾಗಿ ಉರಿದಮೇಲಿನ್ನೇನಿನ್ನೇನು ೭

ಹೂಳಿಟ್ಟ ಹಣವೆಲ್ಲ ಚೇಳಾಗ್ವರಿದ ಮೇಲಿನ್ನೇನಿನ್ನೇನು
ಅಳಿದ ಗೋವುಗಳು ಹುಲಿಯಾಗ್ವಾರಿದ ಮೇಲಿನ್ನೇನಿನ್ನೇನು ೮

ಆಳುವ ಒಡೆಯರೆ ಅಹಿತರಾದ ಮೇಲಿನ್ನೇನಿನ್ನೇನು
ಬಾಳುವುದೆಂತಯ್ಯ ಶ್ರೀರಾಮ ನೀಮುನಿದರಿನ್ನೇನಿನ್ನೇನು ೯

೩೧೩

ನಾ ಮಾಡಿದತಿಶಯ ಅಪರಾಧ ಅಹಾ
ಸ್ವಾಮಿದ್ರೋಹವೆ ಮಾಡಿದೆ ಪ

ನೇಮವಿಲ್ಲದೆ ಪಾಪ ಕಾಮಿಸಿ ಮಾಡಿ ಹರಿ
ಪ್ರೇಮಕ್ಕೆ ದೂರಾದೆ ಪಾಮರತನದಿ ಅ.ಪ

ಗುರುನಿಂದೆ ಮಾಡಿದೆ ಸ್ಮರಿಸಿದೆನನುದಿನ
ಸ್ಮರಿಸಬಾರದ ಸ್ತ್ರೀಯರ
ಶರಣಜನರು ಕಂಡು ಶಿರವ ಬಾಗದೆ ಮಹ
ಗರುವದಿಂ ಚರಿಸಿದೆ ಪರಿಪರಿ ಜಗದಿ ೧

ಲಕ್ಷಿಸದೆ ಪರರರ್ಥ ಭಕ್ಷಿಸಿ ಇಲ್ಲೆನುತ
ಪಕ್ಷಿಗಮನನ ಸಾಕ್ಷಿಟ್ಟು
ಲಕ್ಷದಶಶತಪಾಪ ಲಕ್ಷ್ಯವಿಲ್ಲದೆ ಗೈದು
ಶಿಕ್ಷೆಗೆ ಗುರಿಯಾದೆ ಮೋಕ್ಷವನರಿಯದೆ ೨

ಪಿತಮಾತೆಯರ ನೂಕಿ ಇತರರ ಜತೆಯೊಳು
ಮತಿಗೆಟ್ಟು ಮಮತಿಟ್ಟಿಹೆ
ಮಿತಿಯಿಲ್ಲದನೃತ ಕ್ಷಿತಿಯೊಳು ಸರಿಧರ್ಮ
ಹಿತಚಿಂತನಿನಿತಿಲ್ಲದತಿಭ್ರಷ್ಟನಾದೆ ೩

ಮಣಿದು ದೈನ್ಯಂಬರಿಗೆ ಘನಹಾಸ್ಯಗೈಯುತ
ಮನವ ನೋಯ್ಸಿದೆ ಬೆನ್ನಟ್ಟಿ
ಕನಿಕರೆಂಬುದು ಎನ್ನ ಕನಸಿನೊಳಿನಿತಿಲ್ಲ
ಮನಸಿನಂತ್ವರ್ತಿಸಿ ಘನಕರ್ಮಿಯಾದೆ ೪

ಇಂತು ಪಾಪಿಗೆ ಸುಖವೆಂತು ತ್ರಿಜಗದೊಳು
ಕಂತುಜನಕ ಶ್ರೀರಾಮ ಭಕ್ತವತ್ಸಲ
ನೆಂಬ ಬಿರುದು ವಹಿಸಿದಿ ಎನ್ನ
ದೆಂಥ ತಪ್ಪಿರೆ ಕ್ಷಮಿಸಿ ಸಂತಸದಿಂ ಪೊರೆ ೫

೩೧೪

ನ್ಯಾಯತಂದಿಹೆನೊ ಹರಿ ನಿನ್ನ ಸಭೆಗೆ ತೀರ್ಪುಮಾಡಿದನು
ನ್ಯಾಯತಂದಿಹೆ ಪ

ನ್ಯಾಯ ತಂದಿಹೆ ನೋಯದೆ ಉ
ಪಾಯದಿಂದ ತೀರ್ಪುಮಾಡುವ
ನ್ಯಾಯಾಧೀಶ ದಯಾಳು ಎನ್ನ
ನ್ಯಾಯ ತೀರಿಸಿ ಕಾಯ್ವನೆಂದು ಅ.ಪ

ಕೊಟ್ಟ ಒಡೆಯರೋ ಬೆನ್ನಟ್ಟಿ ಎನ್ನನು
ಕಟ್ಟಿ ಕಾದ್ವರು ಭ್ರಷ್ಟನೆ ಮುಂದಕೆ
ಕೊಟ್ಟ್ಹೋಗೆನ್ವರು ನಿಷ್ಠುರಾಡ್ವರು
ಕೊಟ್ಟು ಮುಕ್ತನಾಗ್ವೆನೆನ್ನಲು
ಬೊಟ್ಟಿಕಾಸು ಕೈಯೊಳಿಲ್ಲವು
ಎಷ್ಟು ಭವ ಬೆನ್ನಟ್ಟಿ ಬಿಡದ ಕ
ನಿಷ್ಟರಿಣಸೂತಕವ ಕಡಿಯೆಂದು ೧

ಅನ್ನ ಕೊಟ್ಟವಗೆ ಅನ್ಯಾಯ ಯೋಚಿಸಿ
ಬನ್ನ ಬಡಿಸಿದೆನೊ ಇನ್ನುಳಿಯದೆನೆಂದು
ನಿನ್ನ ಸೇರಿದೆನೊ ಪನ್ನಂಗಶಯನ
ಮುನ್ನ ಮಾಡಿದ ಎನ್ನ ಅವಗುಣ

ಭಿನ್ನವಿಲ್ಲದೆ ನಿನ್ನೊಳ್ಪೇಳುವೆ
ಸನ್ನುತಾಂಗನೆ ಮನ್ನಿಸಿ ಇದ
ನಿನ್ನು ಎನ್ನಯ ಬನ್ನಬಿಡಿಸಿದೆಂದು ೨

ಆಸೆಗೊಳಿಸಿದೆನೋ ಪುಸಿಯನ್ಹೇಳಿನಿ
ರಾಸೆಮಾಡಿದೆನೋ ಶಾಶ್ವತದಿ ಕೊಟ್ಟ
ಭಾಷೆ ತಪ್ಪಿದೆನೋ ವಸುಧೆಯೊಳು ನಾನು
ಈಸುದಿನದಿಂ ಮೋಸಕೃತ್ಯದಿ
ಘಾಸಿಯಾದೆನು ಧ್ಯಾಸಮರದು
ಶ್ರೀಶ ಶ್ರೀನಿವಾಸ ಶ್ರೀರಾಮ
ಪೋಷಿಸೆನ್ನ ಸುಶೀಲ ಗುಣವಿತ್ತು ೩

೩೧೫

ನಿಗಮ ಆಗಮಗೋಚರ
ಜಗನ್ಮೋಹ ಜಗದೀಶ ಪಾಲಿಸು ಎನ್ನ ಪ

ಖಗವರಗಮನ ಜಗದ ಜೀವನ
ಪೊಗಳುವೆ ನಗಧರ ಅನಘನೆ ನಿನ್ನ
ನಗೆ ಮೊಗದೋರೆನಗಗಲದೆ ಅನುದಿನ
ನಗಜನಮಿತ ಮಿಗಿಲಗಣಿತ ಮಹಿಮ ಅ.ಪ

ಕದನಕಂಠೀರವ ಉದಧಿಸದನ ಮಹ
ಅಧಮಕುಲದ ಮದಸಂಹರ
ಹದಿನಾರುಸಾವಿರ ಸುದತಿಯರ ಮನ
ವಿಧ ವಿಧ ಸುಲಿದ ಸುಂದರ
ಸದಮಲರಾಧೇಯ ಮದನಕದನದಿಂ
ಕದಲದ ಆನಂದ ಮಂದಿರ
ಕುದುರೆ ತಿರುವಿ ಪಾದಪದುಮದಾಸನ ಘೋರ
ಕದನಗೆಲಿಸಿದ ಗಂಭೀರ
ಯದುಕುಲಪಾವನ ಮದನನಯ್ಯ ರಮಾ

ಪದುಮಾವತಿಯ ಪಂಚಜೀವನಸದನ
ಪದುಮವದನ ಸದಸದುಗುಣಗಳ ಸದ್ಭ್ರದಯ
ಉದಯ ಮುದ ವುದಯಾಗೆನ್ನೊದನದಿ ೧

ನಲಿದು ನಲಿದು ಪೊಂಗೊಳಲುನೂದುವ
ಬಲುಚೆಲುವ ಚಿದ್ರೂಪನಾಟಕ
ಒಲದು ಭಜಕಜನರ್‍ಕೊಲಬು ತಿಳಿವ ಚಿ
ತ್ಕಳಾಭರಿತ ವಿಶ್ವವ್ಯಾಪಕ
ಜಲಜಮಿತ್ರ ಕೋಟಿಕಳೆಕಿರಣಗಳಿಂ
ಪೊಳೆವ ಸುಗುಣ ಶುಭದಾಯಕ
ಖಳಕುಲಭೀತ ಸುಫಲಪ್ರದ ಪರತರ
ಇಳೆಮಂಡಲತ್ರಯ ಪಾಲಕ
ಕಲಿಮಲಹರ ನಿರ್ಮಲನಿಜಚರಿತ
ಮಲಿನ ಕಳೆದು ನಿರ್ಮಲನೆನಿಸೆನ್ನ
ಒಲಿದುಪಾಲಿಸು ಸ್ಥಿರ ಚಲಿಸಿದಚಲಮನ
ಸುಲಭಭಕುತ ಬಲ ವಿಲಿಸಿತಕರುಣಿ ೨

ಸಿಡಿಲುಕೋಟಿಸಮ ಫಡಫಡಸ್ತಂಭವ
ಒಡೆದು ಮೂಡಿದ ತ್ರಿವಿಕ್ರಮ
ಕಡುರೋಷದಿ ಕೆಂಗಿಡಿಗಳನುಗುಳುವ
ಕಡುಗಲಿಗಳಗಲಿ ನಿಸ್ಸೀಮ
ಘುಡುಘುಡಿಸುತ ಆರ್ಭಟಿಸುತ ದುರುಳನ
ಒಡಲಬಗಿದ ಕಡುಪರಾಕ್ರಮ
ಗಡಗಡ ನಡುಗುವ ದೃಢತರ ಬಾಲನ
ಪಿಡಿದು ಪೊರೆದ ಭಕ್ತ ಸುಖಧಾಮ
ಉಡುಮಂಡಲ ವರಗಡರಿದ ಶಾಪವ
ತಡೆಯದೆ ಹಡೆಹಾಯ್ಸಿಡಿದೆಲೋಕವರ
ಜಡಜಭವ ತೊಡರನು ಗಡ ಕಡಿದೆನ್ನಯ
ನುಡಿಯೊಳೊಡೆದು ಮೂಡು ಒಡೆಯ ಶ್ರೀರಾಮ ಪ್ರಭು ೩

೩೧೬

ನಿನ್ನ ಉನ್ನತ ಮಹಿಮೆಯನ್ನು ಬಣ್ಣಿಪ ಶಕ್ತಿ
ಎನಗೆಂತು ಕರುಣಾರ್ಣವ ಪ

ಅನ್ಯಕುಲದಲಿ ಜನಿಸಿ ಅನ್ಯ ಆಹಾರಗಳುಂಡು
ಕುನ್ನಿಯಂತೆ ಕಳೆವೆ ದಿನವ ಅಭವ ಅ.ಪ

ಶೋಧಿಸಿಶಾಸ್ತ್ರಪದ ಭೇದಿಸಿ ಬಣ್ಣಿಸಲೆ
ಓದು ನಾ ಕಲಿತಿಲ್ಲವೋ
ವೇದಪೂರ್ವಕಮಾಗಿ ಸಾಧನದಿ ಬಣ್ಣಿಸಲೆ
ವೇದ ಎನಗೊಳುಪಿಲ್ಲವೋ
ಸಾಧುವರ್ತನದ ಮಹಾದಾದಿಯಿಂ ಬಣ್ಣಿಸಲೆ
ಸಾಧುಪಥ ಗುರ್ತಿಲ್ಲವೋ
ಆದಿಮೂರುತಿ ನಿನ್ನ ಪಾದಪೊಗಳಲು ಒಂದು
ಹಾದಿಗೊತ್ತೆನಗಿಲ್ಲವೋ ೧

ದೃಢಮಾಗಿ ನಿನ್ನ ಸಮದೃಢ ಮಹಿಮೆ ಬಣ್ಣಿಸಲೆ
ದೃಢಭಕ್ತಿಯೆನಗಿಲ್ಲವೋ
ಎಡಬಿಡದೆ ಬಣ್ಣಿಸಲೆ ಪೊಡವಿಯೋಳ್ನಿನ್ನವರ
ಒಡನಾಟ ಎನಗಿಲ್ಲವೋ
ಕಡು ಗೂಢವಾಗಿ ನಿನ್ನಡಿಗಳನು ಬಣ್ಣಿಸಲೆ
ಗೂಢಜ್ಞಾನೆನಗಿಲ್ಲವೋ
ಜಡಮತಿ ನಾ ಬಣ್ಣಿಪೆನೆ ಕಡೆಯಿಲ್ಲದ ತವಮಹಿಮೆ
ಮೃಡ ಅಜರಿಗಸದಳವೋ ತಿಳಿವೋ ೨

ಸುಗುಣಗುಣಾಂತ ನಿನ್ನ ಸುಗುಣಗಳ ಬಣ್ಣಿಸಲು
ಸುಗುಣಗುಣ ಎನಗಿಲ್ಲವೋ
ನಿಗಮಾತೀತನೆ ನಿನ್ನ ಗುಟ್ಟು ಬಣ್ಣಿಸಲೆ
ನಿಗಮವ ನಾನರಿತಿಲ್ಲವೋ
ಅಗಣಿತಮಹಿಮ ನಿನ್ನ ಹಗರಣದ ಮಹಿಮೆಯ

ಬಗೆಬಲ್ಲವ ನಾನಲ್ಲವೋ
ಜಗದೇಕ ಶ್ರೀರಾಮ ಜಗತ್ರಯದಿ ಬಿಡದೆ ನಿನ್ನ
ಪೊಗಳುವೆನು ಮಿಗಿಲೆನ್ನುತ ಸತತ ೩

೩೧೭

ನಿನ್ನನೆ ನಂಬಿದೆ ನೀರಜನಯನ
ನಿನ್ನೊಳ್ಳುರತು ಎನಗನ್ಯ ಗತಿಯಿಲ್ಲ ಹರಿಯೆ ಪ

ನಿನ್ನ ಪಾದವೆ ಎನಗೆ ಮಾತಾಪಿತೃಯೆಂಬೆ
ನಿನ್ನ ಪಾದವೆ ಎನಗೆ ಬಂಧುಬಳಗವೆಂಬೆ
ನಿನ್ನ ಪಾದವೆ ಎನಗೆ ಸಕಲಸಂಪದವೆಂಬೆ
ನಿನ್ನ ಪಾದವೆ ಎನಗೆ ನಿಖಿಲಬಲವೆಂಬೆ ೧

ನಿನ್ನ ಕರುಣವೆ ಎನಗೆ ಭವತರಿವ ಶಸ್ತ್ರೆಂಬೆ
ನಿನ್ನ ಕರುಣವೆ ಎನಗೆ ಸ್ಥಿರಸುಖವುಯೆಂಬೆ
ನಿನ್ನ ಕರುಣವೆ ಎನಗೆ ರಕ್ಷಿಸುವ ದೊರೆಯೆಂಬೆ
ನಿನ್ನ ಕರುಣವೆ ಎನಗೆ ಪರಮ ತೃಪ್ತ್ಯೆಂಬೆ ೨

ನಿನ್ನ ನಾಮವೆ ಎನಗೆ ಅಮೃತವೆಂಬೆ
ನಿನ್ನ ನಾಮವೆ ಎನ್ನ ಭವರೋಗಕ್ಕೌಷಧ್ಯೆಂಬೆ
ನಿನ್ನನಾಮ ಸ್ಥಿರಕೊಟ್ಟು ಪ್ರೇಮದಿಂ ಸಲಹು ಶ್ರೀರಾಮ
ನೀನೆ ಎನಗೆ ಪರದೈವಯೆಂಬೆ ೩

೩೧೮

ನಿನ್ನನ್ನೆ ನಂಬಿದೆನೊ ಪನ್ನಂಗಶಾಯಿ
ಎನ್ನ ನೀ ಕಾಯಬೇಕೊ ಪ

ದೀನದಯಾಳು ದೇವ ನೀನೆ ಕಾಯದೆ ಬಿಟ್ಟ
ರಿನ್ನಾರು ಕಾಯ್ವರು ಎನ್ನನೀ ಜಗದೊಳು ಅ.ಪ

ಉನ್ನತ ಹೃದಯನೆ ಮುನ್ನ ನಾ ಮಾಡಿದ
ಗನ್ನಗತಕತನವನ್ನು ದಯದಿ ಕ್ಷಮಿಸು
ಇನ್ನೀಭವದಿ ಎನಗೆ ನಿನ್ನಯ ಸನ್ಮತಿ
ಯನ್ನು ಪಾಲಿಸಿ ಸತತ ಬನ್ನಬಡಿಸದೆ ಕಾಯೊ ೧

ಶರಣಾಗತರಕ್ಷಣಾನಾಥಜನಬಂಧುವೇ
ಕರುಣದಿ ನಿಮ್ಮಂಥ ದೇವರನುಕಾಣೆ
ದುರಿತದೂರನೆ ಎನ್ನ ದುರಿತದುರ್ಗಣವನ್ನು
ಪರಿಹರಿಸಿ ಸಲಹಯ್ಯ ಶರಣಜನರ ಪ್ರೀಯ ೨

ಕೈಯ ಪಿಡಿದು ಪೊರೆಯೊ ಬಿಡದೆನಮ್ಮಯ್ಯ ಜಗ
ದಯ್ಯ ಶ್ರೀರಾಮ ವಿಜಯವಿಠಲರಾಯ
ಕೈಯ ಮುಗಿದು ಮರೆಹೊಕ್ಕು ಬೇಡುವೆಯ್ಯ
ಜೀಯ ದಯದಿ ಕಾಯೊ ಪಂಢರಿರಾಯ ೩

೩೧೯

ನಿನ್ನಪಾದ ದೊರಕುವುದು ಎಂತೆನಗೆ ರಂಗ
ಗನ್ನಗತಕ ನಾನು ಪುಣ್ಯದ್ದಾದ್ಯರಿಯೆ ಪ

ಕಳ್ಳನಾಗಿ ಜೀವಿಸಿದೆ ಸುಳ್ಳನಾಡಿ ನಾ ದಣಿದೆ
ತಳ್ಳಿಕೋರತನದನ್ಯರ್‍ಬಾಳು ಮಾಡಿದೆನೊ
ಖುಲ್ಲತನದಿಂ ಪರರ ನಲ್ಲೆಯರೋಳ್ಮನಸಿಟ್ಟು
ಕ್ಷುಲ್ಲಕನಾದೆ ನಾನೆಲ್ಲಿ ನೋಡಲವ ೧

ಅನ್ನಕೊಟ್ಟವರಿಗೆ ಅನ್ಯಾಯಯೋಚಿಸಿದೆ
ಬನ್ನ ಬಡಿಸಿದೆನಯ್ಯ ನನ್ನನಂಬಿದವರ
ಎನ್ನ ಪಡೆದವರನ್ನು ಮನ್ನಿಸಿನೋಡಿಲ್ಲ
ನಿನ್ನ ಧ್ಯಾನದ ಖೂನವನ್ನರಿಯೆ ದೇವ ೨

ಗುರುಹಿರಿಯರನು ಜರಿದೆ ಪರಿಪರಿಯಲಿ ನಾನು
ಪರರಿಗೊಂದಿಕ್ಕಿ ನಾನುಂಡಿರುವೆನೊಂದು

ಧರೆಯೊಳೆಣೆಯಿಲ್ಲದ ದುರಿತವನು ಗಳೆಸಿರುವೆ
ಕರುಣಾಳು ಶ್ರೀರಾಮ ನೀನೆ ಪೊರಿಬೇಕೊ ೩

೩೨೦

ನಿನ್ನ ಪಾದ ಬಿಡಲಾರೆ ಎನ್ನೊಡೆಯ ರಂಗ
ಎನ್ನ ಕಾಯುವ ಭಾರ ನಿನ್ನಗೆ ಕೂಡಿತು ಪ

ನೀನೆ ಚಿಂತಾಮಣಿ ನೀನೆ ಪರುಷದ ಖಣಿ
ನೀನೆ ಎನ್ನಗೆ ಧಣಿ ವೇಣುಗೋಪಾಲ ೧

ಪಕ್ಷಿವಾಹನ ಲೋಕರಕ್ಷಿಪನು ನೀನೆಲೊ
ಅಕ್ಷಯದಿ ದ್ರೌಪದಿಯ ರಕ್ಷಿಸಿದವ ನೀನೆ ೨

ಪಾರ ಮಹಿಮನೆ ಸರ್ವಭಾರ ನಿನ್ನದಯ್ಯ
ಸೇರಿದೆನು ನಿಮ್ಮ ಪದಕೆ ಮಾರಪಿತ ಶ್ರೀರಾಮ ೩

೩೨೧

ನಿನ್ನ ಬೆನ್ನು ಬಿದ್ದೆ ಪನ್ನಂಗಶಯನ
ಎನ್ನನ್ನು ನೀನೀಗ ಮನ್ನಿಸಿ ಸಲಹೆಂದು ಪ

ಎನ್ನನೆಲ್ಲಿಗೆ ಒಬ್ಬಿ ನಿನಗೆ ಕೂಡಿತು
ನಿನ್ನ ಬಿಟ್ಟರೆ ಎನಗೆ ಅನ್ಯ ಗತಿಯಲ್ಲ ೧

ವನಜಾಕ್ಷ ನಿಮಪಾದ ನೆನೆವು ನಿಲ್ಲಿಸಿ ಎನ್ನ
ಮನದಾಸೆ ಪೂರೈಸಿ ಕನಿಕರದಿ ಕಾಯೆಂದು ೨

ಶಾಮಸುಂದರ ಶ್ರೀರಾಮ ನಿಮ್ಮಯ ಪಾದ
ಪ್ರೇಮ ಎನ್ನೊಳರಿಸಿ ಕ್ಷೇಮದಿಂ ಪೊರೆಯೆಂದು ೩

೩೨೨

ನಿನ್ನ ಮಹಿಮೆ ತಿಳಿಯುವುದೊಂದಗಾಧ ದೇವ
ಉನ್ನತೋನ್ನತಚರಿತ ನುತಸಹಜಭಾವ ಪ

ಯೋಗಿ ನೀನಾದಯ್ಯ ಜೋಗಿಯೆಂದೆನಿಸಿದಿ
ಆಗಾಧ ದೇಹ ತಾಳ್ದಿ ಬಾಗಿಲವ ಕಾಯ್ದಿ
ಮಗಗೆ ರಕ್ಷಕನಾದಿ ಮಗನ ತಂದೆಯನಳಿದಿ
ಮಿಗಿಲಾದ ರೂಪಾದಿ ಜಗವ ಪಾಲಿಸಿದಿ ೧

ಕರುಣದಿಂದಾಳಿದಿ ವರವಿತ್ತು ಕಳುಹಿದಿ
ಧರೆಗೆ ಭಾರೆನಿಸಿದಿ ತಿರುಗಿ ನೀ ಮುನಿದಿ
ಪಿರಿದಾದ ಘಟ ನೀಡ್ದಿ ಪರಮಭಟನೆನಿಸಿದಿ
ಶರಗಳನು ಪೋಣಿಸಿದಿ ಧುರದೊಳಗೆ ಕೊಂದಿ ೨

ತಮ್ಮನ ಪಕ್ಷಿಡಿದಿ ತಮ್ಮನಣ್ಣನಕೊಂದಿ
ತಮ್ಮಗಧಿಕಾರ ಗೈದಿ ಸಮ್ಮತದಿ ಕಾಯ್ದಿ
ತಮ್ಮನಿಗೆ ಭಾವನಾದಿ ತಮ್ಮನಿಗೆ ಬೋವನಾದಿ
ತಮ್ಮನಿಂ ಕೊಲ್ಲಿಸಿದಿ ಸಮ್ಮತವ ಗೈದಿ ೩

ಮಾವಗಳಿಯನಾದಿ ಮಾವಗೆ ವೈರ್ಯಾದಿ
ಮಾವನ ಕುಲವಳಿದಿ ತಾಯನ್ನ ಕಾಯ್ದಿ
ಗೋವು ಪಾಲಕನಾದಿ ಗೋವಿಗೆ ಮಗನಾದಿ
ಗೋವುಗಳನಾಳಿದಿ ಗೋವುಕುಲ ಪೊರೆದಿ ೪

ಮೀನಾದಿ ಕೂರ್ಮಾದಿ ದಾನ ಬೇಡುವನಾದಿ
ಕಾನನ ಮೃಗನಾಗಿ ಧ್ಯಾನಿಪರಕಾಯ್ದಿ
ದೀನಪಾಲನೆ ನಿನ್ನ ಜಾಣಮಹಿಮಂಗಳನ್ನು
ಹೀನರರಿವರೆ ಮಮಪ್ರಾಣ ಶ್ರೀರಾಮ ೫

೩.೨೩

ನಿನ್ನ ಸಂಭ್ರಮದೊಳಗೆ ನೀನೆ ಇರುತಿರುವಿ
ಎನ್ನಯ್ಯ ಮರೆದೇನು ಮುನ್ನಾದ ಬವಣೆ ಪ

ಅನ್ನವನು ಕಾಣದೆ ಅನ್ನದಿಕ್ಕಿಲ್ಲದೆ
ಬನ್ನಬಡುತಲರಣ್ಯವಸುಳಿದವಗೆ
ಉನ್ನತೋನ್ನತವಾದ ಚಿನ್ನದರಮನೆಯಲ್ಲಿ
ಬಿನ್ನವಿಲ್ಲದೆ ಸಿರಿಯರನ್ನಬಡಿಪ ಮದವೋ ೧

ಮಡದಿಯನು ಕಳಕೊಂಡು ಎಡೆಬಿಡದೆ ಅಡವ್ಯಡವಿ
ಹುಡುಹುಡುಕಿ ಬೇಸತ್ತು ಕಡುಬಾಯ ಬಿಡುವಗೆ
ಮೃಡಮಹಾದೇವತೇರು ಸಡಗರದಿ
ನಿನ್ನಡಿಯ ದೃಢದಿ ಪೂಜಿಪರೆಂಬ ಕಡುಗರವದಿರವೇ ೨

ನೀರೊಳ್ಜೀವಿಸಿ ಬಲು ನಾರುತಲಿರುವವಗೆ
ಹಾರ ಹೀರಾವಳಿ ಗಂಧ ಕಸ್ತುರಿಯ ಮದವೋ
ಸಾರಿ ಮನು ಮುನಿಗಳು ಸೇರಿ ನಿಮ್ಮಯ ಚರಣ
ವಾರಿಜ ಭಜಿಪ ಮದ ಮೀುಪ್ಪುದೋ ನಿನಗೆ ೩

ತಿರುಕನು ತಾನಾಗಿ ಧರೆಯ ದಾನವ ಬೇಡಿ
ಧರೆವರನ ಬಾಗಿಲವ ನಿರುತ ಕಾಯ್ದುವಗೆ
ಸುರರು ಗಂಧರ್ವ ತುಂಬುರರು ಸಂಗೀತದಿಂ
ಹರುಷಗೊಳಿಪುದಕೆ ನೀ ನೇತ್ರ ಮುಚ್ಚಿರುವ್ಯೋ ೪

ಭಾರಬೆನ್ನಲಿ ಪೊತ್ತು ಘೋರ ಬಡುತಿರುವವಗೆ
ಈರೇಳುಲೋಕದ ದೊರೆಯೆಂಬಹಂಕಾರವೋ
ಮಾರಪಿತ ಗತಿಯೆಂದು ಸೇರಿ ಭಜಿಸುವ ದಾಸರರಿಕೆ
ಪೂರೈಸದಿದು ತರವೆ ಶ್ರೀರಾಮ ೫

೩೨೪

ನಿನ್ನೊರತು ನಾನಿನ್ನು ಅನ್ಯದೇವರರಿಯೆ
ಪನ್ನಂಗಶಾಯಿಯೇ ಪರಿಪಾಲಿಸಭವ ಪ

ನಿನ್ನಿಂದಜನಿಸಿ ನಾ ನಿನ್ನಿಂದ ಬೆಳೆದಿರುವೆ
ನಿನ್ನಿಂದ ಮಲಗಿ ನಾ ನಿನ್ನಿಂದ ಏಳ್ವೆ
ನಿನ್ನಿಂದ ನಡೆಯುವೆ ನಿನ್ನಿಂದ ಕೂಡುವೆನು
ನಿನ್ನಿಂದ ಸುಖಬಡುವ ನಿನ್ನಣುಗ ನಾನು ೧

ನಿನ್ನದೇ ಉಣ್ಣುವೆನು ನಿನ್ನದೇ ತಿನ್ನುವೆನು
ನಿನ್ನದೇ ಉಟ್ಟು ನಾ ನಿನ್ನದೇ ತೊಡುವೆ
ನಿನ್ನದೇ ಹಾಸಿ ನಾ ನಿನ್ನದೇ ಹೊದೆಯುವೆ
ನಿನ್ನ ಸೂತ್ರದಿ ಕುಣಿವ ನಿನ್ನ ಶಿಶು ನಾನು ೨

ಎನ್ನ ಮಾತೆಯು ನೀನೆ ಎನ್ನ ತಾತನು ನೀನೆ
ಎನ್ನ ಅರಸನು ನೀನೆ ನಿನ್ನ ಪ್ರಜೆ ನಾನು
ಎನ್ನ ಬಂಧುವು ನೀನೆ ಎನ್ನ ಬಳಗವು ನೀನೆ
ಎನ್ನೊಡೆಯ ಶ್ರೀರಾಮ ನಿನ್ನ ದಾಸ ನಾನು ೩

೩೨೫

ನೀಚಕೃತ್ಯದ ಮನಸೇ ನಿನಗೆ ತುಸು
ನಾಚಿಕಿಲ್ಲಲೆ ಹೊಲಸೆ ಪ

ಪ್ರಾಚೀನಹಿರಿಯರ ಯೋಚಿಸಿನೋಡದೆ
ನೀಚತನದ ಆಲೋಚನೆಯೊಳು ಬಿದ್ದು ಅ.ಪ

ಕುಂತಿಸುತನ ರಥವ ನಡೆಸಿದನು ಅ
ತ್ಯಂತ ಕೃಪೆಯಿಂದ ಹರಿಯು
ಕಂತುಜನಕ ಭಕ್ತ ಚಿಂತಾಯಕನೆಂದು
ಅಂತರಂಗದಿ ಭಜಿಸಿ ಸಂತಸ ಪಡುವಲ್ಲಿ ೧

ಅಂಬರೀಷನೆಂಬುವ ನೃಪಗೆ ಮುನಿ
ಡೊಂಬೆಯಿಂಬ (?) ಶಾಪಿಸಲು
ಅಂಬುಜಾಸನ ಬಂದು ಬೆಂಬಲಿಸಿ ನೃಪನನ್ನು
ಇಂಬಿಟ್ಟು ಪೊರೆದದ್ದು ನಂಬಿ ಭಜಿಸವಲ್ಲಿ ೨

ಭೂಮಿಪ ಬಲಿಚಕ್ರನ ಬಾಗಿಲ ಕಾಯ್ದ
ಪ್ರೇಮದಿಂ ರಮೆಯರಸನು
ಪ್ರೇಮದಿಂ ಭಕುತರ ಕಾಮಿತವೀಯಲು
ಕಾಮಧೇನೀತನೆಂದು ನೇಮದಿಂದರವಲ್ಲಿ ೩

ಗೌತಮ ಮುನಿಸತಿಯು ಪಾಷಾಣವಾಗಿ
ಕ್ಷಿತಿಮೇಲೆ ಎರಗಿರಲು
ಕ್ಷಿತಿಜಾತೆಪತಿ ತಾನು ಅತಿಹಿತದ ಕೃಪೆಯಿಂದ
ಪತಿತಗೈದವನೆಂದು ಸ್ತುತಿಸಿ ಒಲಿಸವಲ್ಲಿ ೪

ಹನುಮಂತನೊಡೆಯನಾದ ಜನಕಜೆಪತಿ
ವನಜಾಕ್ಷ ಶ್ರೀರಾಮನ
ಘನತರಮಹಿಮೆಯ ಅನುದಿನಕೊಂಡಾಡು
ಘನಮುಕ್ತಿ ಸಾಮ್ರಾಜ್ಯ ಕನಿಕರದಿಂ ಕೊಡುವ ೫

೩.೨೬

ನೀಚಮತಿ ಎಲೆ ನೀಚಮತಿ
ಊಚನೆನಿಸಿಕೊಂಬ ಯೋಚನೆ ಬಿಡುಕಂಡ್ಯ ಪ

ತರಿಯದೆ ಕುಟಿಲತ್ವ ಮರೆಯದೆ ದುಶ್ಚಟ
ಧರೆಯ ಭೋಗವ ನೆಚ್ಚಿ ಶರಣರ್ದ್ವೇಷವ ತಾಳಿ
ಮರವೆ ಮಾಯದಿ ಬಿದ್ದು ಒರಲುವ ನರರಿಗೆ
ಬರಿದೆ ಬೋಧಿಪೆನೆಂಬ ಭ್ರಮೆಯಿಂದ ಫಲವೆ ೧

ಮಾಯಮೋಹಿಗಳ ಉಪಾಯದಿ ಕೂಡಿಸಿ
ಸೇವಿಸದಾಹಾರ ಸೇವಿಸುತನುದಿನ

ಕಾಯಬಲಿಸಿ ಕುಣಿವ ಮಾಯಮೋಹಿಯ ಬರಿ
ಬಾಯ ಬ್ರಹ್ಮತ್ವಬಂಧ ಬಯಲಪ್ಪುದೇನೆಲೆ ೨

ಧರಿಸಿದ ಲಾಂಛನ ಅರಿಯದೆ ಮೇಲೆ ನೀ
ಬರಿದೆ ಕಾವಿಯನ್ಹೊದ್ದು ಕರದಿ ಕಮಂಡಲ
ಧರಿಸಿ ಮರುಳರಿಗೆಲ್ಲ ಪರತತ್ತ್ವವರಿಯಲು
ಜರೆಮರಣದು:ಖವು ಪರಹಾರಮೆಂತಲೆ ೩

ಭವಭವದಲಿ ಬಟ್ಟಬವಣೆಯ ಸ್ಮರಿಸಿದೆ
ಭವಗೆಲಿಸುವ ಅನುಭವ ತಿಳಿಯದೆ ಸ
ದ್ಭವಿಗಳ ನೆರೆಯಿಸಿ ಕವಿತೆ ಬಿಡಿಸಿ ಬಹು
ಸವಿಮಾತ್ಹೇಳಲು ಮೂಲಭವಬೀಜಳಿಯುವುದೆ ೪

ತನ್ನ ತನ್ನದುಯೆಂಬ ಭಿನ್ನವಿಲ್ಲದೆಸದಾ
ತನ್ನ ಸ್ವರೂಪ ಪರರನ್ನು ಬಗೆದು ನಿತ್ಯ
ಸನ್ನುತ ಶ್ರೀರಾಮನುನ್ನತಂಘ್ರಿಗೆ ಪೊಂದಿ
ಧನ್ಯರಾಗದೆ ನರಕುನ್ನಿಯೆನಿಸುವರೇನೋ ೫

೩೨೭

ನೀಚಮನಸೆ ನೀ ಯೋಚಿಸಿ ಕೆಡಬೇಡ ಬರಿದೆ ಪ

ಸಾರವಿಲ್ಲದ ನಿಸ್ಸಾರ ಸಂಸಾರವೆಂಬುದು ಮಾಯಾಬಜಾರ
ತೋರಿ ಅಡಗುತಿಪ್ಪದು ನಿಮಿಷ
ನೀರಮೇಲಿನ ಗುರುಳೆತೆರದಿ
ತೋರುವುದೆಲ್ಲ ಕನಸಿನ ಪರಿ ಸ್ಥಿರವಲ್ಲದನರಿದು ನೋಡೋ ೧

ಕಾರಣಲ್ಲದ ಕಾಯವಿದು ಮೂರುದಿನದಸುಖವ ಬಯಸಿ
ಮೀರಿಸಿ ಗುರುಹಿರಿಯರ್ವಚನ
ಪಾರಮಾರ್ಥವಿಚಾರ ಮರೆಸಿ
ಸೂರೆಗೈದು ಸ್ವರ್ಗಭೋಗ ಘೋರನರಕಕೆಳಸುತಿಪ್ಪದು ೨

ಆಶಾಬದ್ಧನಾಗಿ ಭವಪಾಶದೊಳಗೆ ಸಿಲುಕಬೇಡೆಲೊ
ವಾಸನಳಿದು ಐಹಿಕಸುಖದ
ಕ್ಲೇಶನೀಗಿ ಸುಶೀಲನಾಗಿ
ಬೇಸರಿಲ್ಲದೆ ಶ್ರೀಶಜಗದೀಶ ಶ್ರೀರಾಮನಂಘ್ರಿ ಭಜಿಸು ೩

೩.೨೮

ನೀನಿಲ್ಲದ ಜಗವಿನಿತಿಲ್ಲ ನೀನಲ್ಲದೆ ಎನಗಾರಿಲ್ಲ ಪ

ನೀನೆ ನೀನೆಯಾಗಿ ಕಾಣಿಸಿ ಜಗ
ಮಾಯಮಾಣಿಸುವಿ ನಿಜ ಸುಳ್ಳಲ್ಲ ಅ.ಪ

ಹೊತ್ತುಗೊತ್ತು ಎಲ್ಲ ನಿನ್ನಿಂದೇ
ನಿತ್ಯ ಅನಿತ್ಯವೆಲ್ಲ ನಿನ್ನಿಂದೇ
ಸತುಚಿತುಚಿದ್ವಸ್ತು
ತತ್ವಸರ್ವತ್ರಸೂತ್ರವೆಲ್ಲ ನಿನ್ನಿಂದೇ ೧

ಸೃಷ್ಟಿ ಕ್ಷೇತ್ರ ತೀರ್ಥ ನಿನ್ನಿಂದೇ
ಅಷ್ಟಸ ಭುವಗಳ್ನಿನ್ನಿಂದೇ
ಹುಟ್ಟುಸಾವು ಎಲ್ಲ ಸ್ಪಷ್ಟದಿ ನೋಡಲು
ಸೃಷ್ಟಿ ಪ್ರಳಯವಷ್ಟು ನಿನ್ನಿಂದೇ ೨

ನಿಖಿಲ ವೇದ ನಿನ್ನಿಂದೇ
ಅಖಿಲದೇವರೆಲ್ಲ ನಿನ್ನಿಂದೇ
ಸಕಲಮಂತ್ರಮೂಲ ಭಕುತಾಭಿ ಶ್ರೀರಾಮ
ಮುಕುತಿಸಂಪದ ಸಿದ್ಧಿ ನಿನ್ನಿಂದೇ ೩

೩.೨೯

ನೀನೆ ಕರುಣಿ ದೀನಪಾಲ
ದಾನವಾಂತಕನಾಥಬಂಧು ಪ

ಕಾಸಾರಕಿಳಿದು ಕರಿಯ ಕಾಯ್ದಿ
ಹೇಸದೆ ತರುಣಿ ಮೊರೆಯ ಕೇಳ್ದಿ
ಬೇಸರಿಲ್ಲದೆ ದಾಸಜನರ
ಆಸೆ ಪೂರೈಸಿ ಪೊರೆದಿ ಪ್ರಭು ೧

ಬಾಲಗೈದ ತಪಕೆ ಒಲಿದಿ
ಮೇಲುಪದವಿ ಕರುಣಿಸಿದಿ
ಕಾಲಗೆ ಕಾಲನಾಗಿ ಮೆರೆವ
ಖೂಳರಕ್ಕಸನುದರ ಸೀಳ್ದಿ ೨

ನೀರ ಮುಳುಗಿ ನಿಗಮ ತಂದಿ
ಭಾರಬೆನ್ನಲಿ ಪೊತ್ತು ನಿಂದಿ
ಹಾರೈಸಿ ಕರೆವ ಭಕುತ ಜನಕಾ
ಧಾರ ಮಮಪ್ರಾಣೇಶ ಶ್ರೀರಾಮ ೩

೩೩೦

ನೀನೆ ಗತಿ ಎನಗಿನ್ನು ಕರುಣಿಸು ಮಾಧವ
ದೀನನ ಮರೆಯದಿರು ಸಿರಿಯರ ಜೀವ ಪ

ನೀನೆ ಕರುಣಾಳು ಭಕ್ತಜನರಭಿಮಾನಿ
ನೀನೆನ್ನ ಬಿಟ್ಟ ಬಳಿಕ ಕಾಮಿತವ ಪೂರೈಸಿ
ಕಾಯ್ವರಕಾಣೆನಾರನು ಕಮಲನಾಭ ಅ.ಪ

ಎಡಬಿಡದೆನ್ನನು ಕಾಡುತಿರುವ ಅತಿ
ಜಡಭವ ಕಡುದುಃಖ ತಡಿಲಾರೆನಭವ
ಅಡರಿಕೊಂಡೆನ್ನ ಸುಡುತಲಿರುವ
ಒಡಲತಾಪ ಗಡನೆ ಬಿಡಿಸಿ
ಬಿಡದೆ ಎನ್ನನು ಪಿಡಿದು ರಕ್ಷಿಸು
ಮಡದಿಗಕ್ಷಯದುಡುಪು ಇತ್ತನೆ ೧

ಶರಧಿಸಂಸಾರದ ಉರುತರ ಪರಿಬಾಧೆ
ಕಿರಿಕಿರಿ ಪರಿಹರಿಸಿ ಪೊರೆಯಯ್ಯ ಜವದಿ
ಶರಣುಮಾಡುವೆ ಶರಣಜನರ
ಕರುಣಮಂದಿರ ಮರೆಯದಿರೆಲೊ
ತರಳ ನಿರುತದಿ ಚರಣಸ್ಮರಿಸಿ
ಕರೆಯೆ ಕಂಬದಿ ಭರದಿ ಬಂದನೆ ೨

ಮುಂದೆನಗೆ ಭವಬಂಧ ಎಂ
ದೆಂದಿಗಿಲ್ಲದಂತೆ ತಂದೆ ಕರುಣಿಸು ದಯಾ
ಸಿಂಧು ಶ್ರೀರಾಮ ವಂದಿ ಭಜಿಸುವೆ
ಮಂದರಾದ್ರಿ ಮಂದಿರನೆ ತ್ವರ
ಬಂದು ಕಾಯೊ ಬಂಧನದಿ ಜಗ
ತಂದೆ ನಿಮ್ಮ ಪಾದಕೆಂದು ಪೂವಗೆ (?) ಬಂದು ಪೊರೆದನೆ ೩

೩೩೧

ನೀನೆ ಗತಿ ಭಕುತಜನಕೆ
ಧೀನದಯಾಸಿಂಧು ಹರಿಯೆ ಪ

ವನದಿಯಿರಲು ಗುಹೆಯಪೊಗಲು
ಮನೆಯೊಳಿರಲು ಗಿರಿಯನೇರಲು
ದಣವಿನಿಂ ಬಳಲುತಿರಲು
ಪರದೇಶ ದೇಶ ತಿರುಗಲು ೧

ಒಡಲಿಗಿಲ್ಲದೆ ತೊಳಲುತಿರಲು
ಬಡತನದಿಂ ಬೇಡುತಿರಲು
ಕಡಲಧುಮುಕಿ ಘೋರಬಡಲು
ಪೊಡವಿಪರ ಕೈಯೊಳ್ಸಿಗಲು ೨

ಕಾಮಿಜನರ ಕಾಮಿತಂಗಳ
ಪ್ರೇಮದಿತ್ತು ಕಾಯ್ವ ಮಮ

ಸ್ವಾಮಿ ಶ್ರೀರಾಮ ನಂಬಿದವರ
ಕಾಮಧೇನು ಪರಮಪುರಷ ೩

೩೩೨

ನೀನೆ ಗತಿಯು ಎನಗೆ ಎನ್ನಯ್ಯ ಶ್ರೀ
ಪನ್ನಂಗಶಯನ ಕಾಯೋ ಪ

ಹೀನ ಸಂಸಾರದೊಳು ಇನ್ನೆಲ್ಲಿತನಕ ನಾ
ಬನ್ನಬಡಬೇಕಯ್ಯ ಜಾಹ್ನವೀಜನಕ ಅ.ಪ

ಸನುಮತಿವಿನಿತಿಲ್ಲದೆ ಮನಸಿನೊಳು
ಘನತರ ಭ್ರಮಿಪೆ ಬರಿದೇ
ಶುನಕನ ಕನಸಿದು ಅನಿತ್ಯ ಜಗತ್ಸುಖ
ಎನಗ್ಯಾಕೆ ಒಣಭ್ರಾಂತಿಯನು ತೋರ್ವೆ ಶ್ರೀಕಾಂತ ೧

ಘಳಿಗೆಸಂತಸವಿಲ್ಲದೆ ಬಳಲುವೆ ಬಲು
ಇಳೆ ಸುಖದಿ ಮನ ನಿಲ್ಲಿಸಿ
ಘಳಿಗೆ ಮೊಕ್ಕಾಮಿಗಾಗಿ ಕಳವಳಸೀಪರಿ
ಬಳಲುವೆನ್ಯಾಕೊ ತಿಳಿಯದಿದು ನಳಿನಾಕ್ಷ ೨

ಎತ್ತ ನೋಡಲು ನೀನಿರ್ದು ಮಿಥ್ಯಜಗತ್ತಿನೋಳ್
ವ್ಯರ್ಥ ಬಳಲಿಪರೆ ಎನ್ನ
ಭಕ್ತವತ್ಸಲನೆಂಬ ಹೊತ್ತಿರುವಿ ಬಿರುದುಗಳ್
ಚಿತ್ತಕ್ಕೆ ಸತ್ಸುಖವಿತ್ತು ಪೊರೆ ಶ್ರೀರಾಮ ೩

೩೩೩

ನೀನೆ ದಯಮಾಡಲು ನಾನುದ್ಧಾರಾಗುವೆನು
ಏನೇನು ಪರಲೋಕ ನಾನರಿಯೆ ಶ್ರೀಹರಿಯೆ ಪ

ಹೀನಸಂಸಾರದೊಳಗೆ ಮುಳುಗಿ
ಜ್ಞಾನನಂದದಿ ಕರಗಿ ಕೊರಗಿ

ಜ್ಞಾನಶೂನ್ಯನಾಗಿ ಬಳಲುವೆ
ಜ್ಞಾನಮೂರುತಿ ಅಭಯ ಪಾಲಿಸು ಅ.ಪ

ಉದಯದಲ್ಲೇಳುತ ಸದಮಲ ತವಪಾದ
ಮುದದಿಂದ ನೆನೆಯದೆ ಅಧಮತನದಿ ವಿಧವಿಧದಿ
ಅಧಮಜನರ ಸುದ್ದಿ ವದನದಿಂದಾಡುತ
ಮುದಿಕೋಣನಂದದಿ ಮದಮುಚ್ಚಿ ನಡೆದೆ ಎಡಬಿಡದೆ
ಕುದಿದೆನನುದಿನ ಪರರ ಮನೆ ಸಂ
ಪದವ ನೋಡಿ ಸಹಿಸದವರ
ಸದನ ಮುರಿಯುವ ಬುದ್ಧಿ ಹುಡುಕಿದೆ
ಪದುಮನಾಭಪರಾಧ ಕ್ಷಮಿಸಿ ೧

ಒಂದು ನಾನರಿಯದೆ ಮುಂದೆ ಭಲಾಯೆಂದು
ಹಿಂದೆ ನಿಂದಿಸಿ ನಕ್ಕೆ ದ್ವಂದ್ವಕರ ಬಡಿದು ಬಲು ಜರಿದು
ಹಂದ್ಯಮೇದ್ಯಕಂಡಾನಂದಿಪತೆರದನ್ಯ
ಸುಂದರಿಯರ ನಯನದಿಂದ ನೋಡಿದೆ ಎವೆಯಿಕ್ಕದೆ
ಇಂದಿರೇಶನೆ ನಿಮ್ಮ ಪಾದವ
ಒಂದೆ ಮನದಿಂ ಭಜಿಸದೆ ಭವ
ದಂದುಗದಲಿ ಬಿದ್ದು ನೊಂದವ
ಕಂದನೊಳು ಕೃಪಾದೃಷ್ಟಿಯಿತ್ತು ೨

ದಾಸಜನರ ಆವಾಸ ನಾ ಬಯಸದೆ
ಈಷಣ ಪ್ರಪಂಚದ್ವಾಸನದಲ್ಲಿ ಬಹು ತೊಳಲಿ
ಆಸೆಯೆಂಬುವ ಮಹಪಾಶದಬಲೆಯೊಳು
ಘಾಸಿಯಾಗುವೆ ಸಿಲ್ಕಿ ಸೋಸಿ ನೋಡದಲೆ ಮರೆ ಮೋಸದಲಿ
ದಾಸ ಬುದ್ಧಿಯಿಂದ ಮಾಡಿದ ಬಲು
ದೋಷರಾಶಿಗಳೆಲ್ಲ ನಾಶಿಸಿ
ಶ್ರೀಶ ಶ್ರೀರಾಮ ನಿಮ್ಮ ಪಾದ
ದಾಸನಿಗೆ ನಿಜಧ್ಯಾಸ ನಿಲ್ಲಿಸು ೩

೩೩೪

ನೀನೆ ದಯಾಸಿಂಧು ದೀನಜನರ ಬಂಧು
ಧ್ಯಾನಿಪ ಭಕುತರ ಪ್ರಾಣಪದಕನೆ ರಂಗ ಪ

ನಾನಾಪರಿ ಸಂಸಾರ ಎಂಬುವ ಕಾನನದೊಳು
ತೊಳಲಿಬಳಲುವ
ದೀನನು ಕಾಯೆಂದು ಮರೆಹೊಕ್ಕೆ
ಮಾನರಕ್ಷಿಸು ಜಾನಕೀಶ ಅ.ಪ

ಎಷ್ಟುಪರಿ ಅನೃತವನಾಡಿದೆ ಈ ಹೊಟ್ಟೆಗಾಗಿ
ಕೆಟ್ಟ ಕೃತ್ಯಮಾಡಿ ನಾ ದಣಿದೆ ಇ
ನ್ನೆಷ್ಟುದಿನ ಈ ದುಷ್ಟ ಬವಣೆ ಎನಗೆ ಸ್ಥಿರವಿದೇ
ಭ್ರಷ್ಟನಾಗುಳಿದೆ ಕೊಟ್ಟ ಒಡೆಯರು ಬಿಡದೆ
ಕಟ್ಟಿಕಾಡ್ವರು ನಿಲ್ಲಗೊಡದೆ
ಇಷ್ಟ ಸತಿಸುತರ್‍ಹೊಟ್ಟೆಗಿಲ್ಲೆಂದಟ್ಟಿ ಬಡಿವರು
ಬಿಟ್ಟುಬಿಡದೆ ಬಿಟ್ಟಿದುಡಿದೆಷ್ಟು ಬಳಲಲಿ
ಸೃಷ್ಟಿಗೀಶ ದಯಾದೃಷ್ಟಿಯಿಂ ನೋಡೋ ಕೃಷ್ಣ ೧

ಮೋಸಹೋದೆ ಬಲು ಭ್ರಮಿಸದ್ದನು ಭ್ರಮಿಸಿ
ತುಸು ಕರುಣವಿಲ್ಲದೆ ಘಾಸಿಯಾದೆ ಮಾತೆಪಿತರ ಮನ
ನೋಯ್ಸಿ ವ್ಯಸನಕೂಪದಿ ವಾಸಮಾಡಿದೆ
ಕಾಸುಹಣಬಯಸಿ ಅಧಮಸುಖನೆನೆಸಿ
ಆಸೆಯೆಂಬುವ ಪಾಶ ಎನ್ನನು ನಾಶಮಾಡಿತು
ಮುಸುರೆಯನು ಕಟ್ಟಿ ಭಾಷೆ ಕೆಡಿಸಿ ದೋಷಕೆಳಸಿತು
ಈಶ ನಿಮ್ಮ ಧ್ಯಾಸಮರೆಸಿ ದಾಸಮಾಡಿದ
ದೋಷ ಗಣಿಸದೆ ಶ್ರೀನಿವಾಸ ಜಗದೀಶ ಕೇಶ ೨

ಪಾಪಲೋಪನೆ ಶ್ರೀಶ ಶ್ರೀರಾಮ ಕೃಪೆಯಿಂದ ನೋಡೊ
ಪಾಪಿಯಿವನೆಂದು ಮರೆಯದಿರು ಪ್ರೇಮ
ಹೇ ಪರಮನೆನ್ನಯ ಪಾಪರಾಶಿಯ ಕಳೆದುಕೊಡಲಿ ಕ್ಷೇಮ

ಹೇ ಪರಬ್ರಹ್ಮ ಸ್ಥಾಪಿಸೆನ್ನಯ ಉದರಕಮಲದಿ
ಶ್ರೀಪತಿಯೆ ನಿಮ್ಮ ನಾಮ ಅಮೃತ
ತಾಪಬಿಡಿಸದೆ ಗಜವ ಸಲಹಿದೆ
ಶಾಪದಿಂ ಪೊರೆದಂಬರೀಷನ ದ್ರುಪದನುಜಳ
ಮಾನಕಾಯ್ದಾಪತ್ತು ಬಾಂಧವ ಭಕ್ತವತ್ಸಲ ದೇವ ೩

೩೩೫

ನೀನೆ ದಾತ ದೀನನಾಥ ಧ್ಯಾನದಾಯಕ ಜಾನಕೀ ಪ್ರೀತ ಪ

ಬಹುಕುಂದುನಿಂದೆ ಸರ್ವ ಅಹುದು ಅಲ್ಲ ನಿನ್ನದಭವ
ಅಹಿತಸುಖದ ಪ್ರೇಮಬಿಡಿಸಿ ದಹಿಪ ಭವದ ಬಾಧೆ ಗೆಲಿಸು ೧

ಬಂದ ಬಂಧ ಬಯಲುಮಾಡಿ ಕಂದನೆಂದು ಕರಪಿಡಿದು
ತಂದೆ ನಿನ್ನ ಪರಮಧ್ಯಾನಾನಂದ ಪಾಲಿಸಿ ಪೋಷಿಸೆನ್ನ ೨

ಕಾವದೇವ ನೀನೆ ಪತಿತಪಾವನ ತ್ರಿಜಗಸೂತ್ರಧಾರಿ
ಭಾವಜಪಿತ ಶ್ರೀರಾಮ ನಿಮ್ಮ ಸೇವಕನೆನಿಸಿ ಸಲಹು ಸತತ ೩

೩೩೬

ನೀನೆ ನಿರ್ದಯನಾಗಲಿನ್ನೇನು ಗತಿಯೋ
ದೀನಜನಮಂದಾರ ಜಾನಕೀ ಮನೋಹರ ಪ

ಪಿತ ಮಾತೆಯರ ಸುತರ ಹಿತದಿಂದ ನೋಡದಿರೆ
ಕ್ಷಿತಿಯೊಳಗಿತರರು ಹಿತದಿಂ ನೋಡುವರೊ
ಪಿತ ನೀನೆ ಮೂಜಗಕೆ ನುತಿಸುವ ಭಕ್ತರ
ಸ್ಥಿತಿ ವಿಚಾರಿಸದಿರೆ ಗತಿಯೇನು ಮುಂದೆ ೧

ಲೋಕ ಎರಡೇಳು ನೀ ಕರುಣದೊಡಲೊಳಿಟ್ಟು
ಜೋಕೆ ಮಾಡುವಿ ನಿನ್ನೊಳ್ಯಾಕೆ ದಯವಿಲ್ಲ
ಬೇಕೆಂದು ನಿನ್ನಪಾದ ಏಕಭಕ್ತಿಲಿ ನುತಿಪೆ
ಮೂಕನಾಗಲು ಬೇಡ ಶ್ರೀಕರನೆ ದಯಮಾಡೊ ೨

ನರಜನ್ಮವಿತ್ತೆನಗೀಪರಿ ಬವಣೆ ಬರಲಿಕ್ಕೆ
ಕರುಣವನಿತು ನಿನಗೆ ಬರಲಿಲ್ಲವೇನೋ
ಹರಿಯೆನ್ನ ಬರೆಹ ಹೀಗೆ ಬರೆದದ್ದೇ ತಪ್ಪು ನೀ
ಮರೆಯಾದರೆ ಬಿಡದಯ್ಯಾ ತ್ವರೆಬಾರೋ ಶ್ರೀರಾಮ ೩

೩೩೭

ನೀನೆ ನುಡಿಸಿದಂತೆ ನುಡಿಯುವೆನು ಮಿಕ್ಕ
ಜ್ಞಾನವಿಲ್ಲ ಎನಗೇನೇನು ಪ

ನೀನೆ ಜಗತ್ರಾಣ ಶ್ರೀಹರಿಯೆಂಬುದೊಂದೆ
ಖೂನಮಾಡಿ ಕೊಂಡಾಡುವೆನು ಅ.ಪ

ನೀ ನಡೆಸಲು ನಾ ನಡೆಯುವೆನು ಹರಿ
ನೀನಾಡಿಸಲು ನಾನಾಡುವೆನು
ನೀನೀಡದಿರೆ ಬಲು ಮಿಡುಕುತ ಬಳಲುವೆ
ನೀ ನುಣಿಸಲು ಉಂಡು ನಲಿವೆ ಪುಂಡನಾಗಿ ೧

ಕಡುಪ್ರೇಮದಿ ಚರಾಚರಗಳನು ಕಾಯ್ವಿ
ಪೊಡವಿ ಈರೇಳುವ್ಯಾಪಕ ನೀನು
ಕೊಡುವ ಕರ್ತ ನೀನೆ ಮೂಲೋಕಕೆಂಬ ನುಡಿ
ದೃಢದಿ ನಂಬಿ ಗಟ್ಟಿಮಾಡಿಹೆನು ೨

ಹೋಮ ಯಜ್ಞ ಯಾಗ ತಿಳಿಯೆ ನಾನು ಮತ್ತು
ನೇಮನಿತ್ಯದ ಗುರುತರಿಯೆನು
ಭೂಮಿಗಧಿಕ ಮಮಸ್ವಾಮಿ ಶ್ರೀ
ರಾಮನ ಪೂರ್ಣನಂಬಿಕೊಂಡಿಹೆನು ೩

೩೩೮

ನೀ ಬಿಟ್ಟ ಬಳಿಕೆನ್ನ ಸಾಧ್ಯವೇನಿಹ್ಯದು
ನೀ ಕರುಣಗೈದರೆ ಸಕಲ ಸಾಧ್ಯರಿಯೆ ಪ

ಯಂತ್ರವಾಹನ ಯಂತ್ರ ನಡೆಸದೆಯಿರಲು
ಯಂತ್ರ ನಡೆಯುವುದೆಂತು ಸ್ವಂತ ತಾನೇ
ಮಂತ್ರಗಾರಿಲ್ಲದೆ ತಂತ್ರ ತೋರ‍್ವುದೆ ಸ್ವ
ತಂತ್ರ ನೀನಲ್ಲದೆ ಅತಂತ್ರನಿಂದೇನಹುದು ೧

ಪಡೆದ ಮಾತೆಯು ಕೂಸಿನೊಡಲು ತಾ ನೋಡದಿರೆ
ಪಡುವುದೆಲ್ಲಿಂದ ಬೇರೆ ಕಡುತೃಪ್ತಿಯನ್ನು
ಒಡಲೊಳಿಟ್ಟ ದಿನಾಲ್ಕುಪೊಡವಿಗಳನಾಳುವ
ಒಡೆಯ ಕೊಡದಿರೆ ಕೀರ್ತಿ ಪಡೆಯುವುದೆ ಜೀವಿ ೨

ನಿನ್ನಿಂದೆ ಬೆಳಗುವುದು ನಿನ್ನಿಂದೆ ಮುಳುಗುವುದು
ನಿನ್ನಿಂದಳಿಯುವುದು ನಿನ್ನಿಂದಲುಳಿಯುವುದು
ನಿನ್ನಬಿಟ್ಟಿನ್ನಿಲ್ಲ ಎನ್ನಯ್ಯ ಶ್ರೀರಾಮ
ಮನ್ನಿಸಿ ಕೃಪೆಮಾಡು ಎನ್ನ ನೀ ಬಿಡದೆ ೩

೩೩೯

ನೀ ಮಾಡಿದ ಮಾಯವು ನಾನೇನು ಬಲ್ಲೆ ಸ್ವಾಮಿ
ನೀ ಮಾಡಿದ ಮಾಯವು ಪ

ಕಣ್ಣು ಕಿವಿ ಕೈಕಾಲು ಮುನ್ನ ನಾಲಗೆ ಬಾಯಿ
ನಿನ್ನ ಸೂತ್ರದಲಾಡ್ವವೆನ್ನದೇನಪರಾಧ ೧

ಈ ಕಾಯ ಎಂಬ ಗೊಂಬೆಯಾಕಾರ ನಿರ್ಮಿಸಿ
ಬೇಕಾದಂತಾಡಿಸುವಿ ಶ್ರೀಕರ ಒಳಗಿರ್ದು ೨

ಭೂಮಿತ್ರಯವ ಸೃಷ್ಟಿ ನೀ ಮಾಡಿ ತೋರಿದಿ
ಕ್ಷೇಮದಿಂ ಸಲಹೆನ್ನ ಸ್ವಾಮಿ ಶ್ರೀರಾಮ ತಂದೆ ೩

೩೪೦

ನೆನೆನೆನೆ ಮನವೆ ನೀ
ಘನಸುಖವನೆ ಪಡೆವೆ ಪ

ಭಾರ ನಿನ್ನದೆಂಬ ಪೋರ ಪ್ರಹ್ಲಾದನ
ಘೋರಬಂಧವ ನಿವಾರಿಸಿ ಪೊರೆದವನ ೧

ಕರಿಮಕರಿಗೆ ಸಿಲ್ಕಿ ಹರಿಯೆಂದು ಕೂಗಲು
ಭರದಿ ಒದಗಿ ಮಹಕರುಣದಿ ಸಲಹಿದವನ ೨

ದುರುಳನ ಸಭೆಯೊಳು ತರುಣಿಯು ಮೊರೆಯಿಡಲು
ವರಹ ಶ್ರೀರಾಮ ನಾರಿಮರಿಯಾದೆ ಕಾಯ್ದವನ ೩

೩೪೧

ನೆನೆಯಲಳವಲ್ಲಗಣಿತ ಜನುಮ (ಪ)
ಕುಣಿಕೆಯೊಳಗೆ ಪೋಣಿಸಿ
ಗಣನೆಯಿಲ್ಲದೆ ಯೋನಿದ್ವಾರಕೆ ಕನಿಕರಿಲ್ಲದೆ ನೂಕಿ
ನೋಯಿಸುತ
ಬಿನಗು ಜನುಮವ ನೀನೆ ಕರುಣಿಸಿ ಕುಣಿಸಿ
ಕುಣಿಸಿ ಕೊಲ್ಲುದುಚಿತವೇ
ಮಣಿವೆ ಮಾಧವೀಬವಣೆ ತಪ್ಪಿಸಿ ನೆನಹು ನಿಲಿಸೆನ್ನ
ಪೊರೆಯೊ ಸತತದಲಿ ೧

ಆನೆಮೊದಲಾಗಿ ಹೀನ ಕಡೆ ಈ ಶ್ವಾನ
ಸೂಕರ ಕ್ರಿಮಿಯ ಕೀಟಕ
ನಾನಾಪರಿ ಎಂಬತ್ತು ನಾಲ್ಕುಲಕ್ಷಯೋನಿದ್ವಾರದಿ
ತೊಳಲಿ ಬಳಲುತ ನಾ
ಜ್ಞಾನಶೂನ್ಯನಾಗಿ ನಿಮ್ಮಯ ಧ್ಯಾನವಿಲ್ಲದೆ
ಹಾನಿಬಟ್ಟೆನ್ನದೇನು ತಪ್ಪಿರೆ
ಜಾನಕೀಶನೆ ನೀನೆ ಕ್ಷಮೆಮಾಡಿ ಪೊರೆಯೊ ಸತತದಲಿ ೨

ನಿನ್ನ ಮಾಯೆಯಿಂ ತುಂಬಿ ಈ ಜಗ ನಿನ್ನ
ಮಾಯೆಯಿಂ ನಂದಿಪೋಗ್ವುದು
ನಿನ್ನ ಮಾಯಾಮಹಿಮೆದೆಲ್ಲವು ನಿನ್ನ ಹೊರತಿನ್ನನ್ಯವೊಂದಿಲ್ಲ

ಎನ್ನನ್ಯಾತಕೆ ಬನ್ನಬಡಿಸುವಿ ಭಿನ್ನವಿಲ್ಲದೆ ನಿನ್ನ ನಂಬಿದೆ
ಉನ್ನತೋನ್ನತ ಮಹಿಮ ಶ್ರೀರಾಮ ಎನ್ನ
ರಕ್ಷಿಸು ಪಿಡಿದು ಸತತದಲಿ ೩

೩೪೨

ನೆನೆಯುತ್ತ ತಿರಗುವೆನಯ್ಯ ಜೀಯ
ನಿನಗ್ಯಾಕೆ ದಯಬಾರದಯ್ಯ ಪ

ಮನುಮುನಿನುತ ನಿಮ್ಮ ವನರುಹಂಘ್ರಿಯಧ್ಯಾನ
ತನುಮನದಿಂ ಗೆಯ್ವೆ ಅನುದಿನ ಬಿಡದೆ ಅ.ಪ

ಪೋಷಿಸಲೊಲ್ಲ್ಯಾಕೋ ನೀನು ನಿಮ್ಮಯ
ದಾಸನು ನಾನಲ್ಲವೇನು
ದೇಶದೇಶಂಗಳನ್ನು ನಾನು ಬಿಡದೆ
ಘಾಸ್ಯಾದೆ ತಿರುತಿರುಗಿನ್ನು
ಈಸು ದಿವಸ ವ್ಯರ್ಥ ಮೋಸವಾದೆನು ನಿಮ್ಮ
ಧ್ಯಾಸ ಮರೆದು ಭವಪಾಶವಿದೂರನೆ ೧

ಪರುಷವ ಶಿರದೊಳು ಪೊತ್ತು ಎ
ನ್ನಿರವ್ವಸಿದು ಬಳಲುವಂತಿತ್ತು
ಕರದಲ್ಲೆ ಮುಕುರುವಿತ್ತು ಅರಿಯದೆ
ಹಂಚಿನೊಳ್ಹಲ್ಕಿಸಿದಂತಿತ್ತು
ಪರಮಪುರುಷ ನಿಮ್ಮ ನೆರೆನಂಬಿ ಬದುಕದೆ
ದುರಿತದಿಂ ಬಳಲಿದೆ ಪರಿಪರಿ ಹರಿಹರಿ ೨

ವರಭಕ್ತರಭಿಮಾನ ನಿನಗೆ ಇಲ್ಲೇನು
ಸ್ಥಿರ ಮುಕ್ತಿ ಪದದಾಯಕನೆ
ಸ್ಥಿರವಾಗಿ ಅರಿದು ನಾ ನಿಮಗೆ ಮರೆಹೋದೆ
ಕರುಣದಿ ಕೊಡು ವರಸುತಗೆ
ಅರಘಳಿಗ್ಯಗಲದೆ ಸ್ಮರಿಪೆ ನಿಮ್ಮಯ ಪಾದ
ಶರಣಾಗತರ ಪಾಲ ಸಿರಿವಂತ ಶ್ರೀರಾಮ ೩

೩೪೩

ನೆನೆಯೋ ನೆನೆಯೋ ನೆನೆಯೋ ಮನವೆ
ಘನಕರ್ಮಗಳನು ಕಳೆದು ಕಾಯುವ ಪ

ನೆನೆವ ಜನರ ಕನಕಾಭರಣನ ಅ.ಪ

ಹೊತ್ತು ಯಾಕೋ ಗೊತ್ತು ಯಾಕೋ
ನಿತ್ಯ ನೇಮವೆಂದು ಹೊತ್ತು ಗಳೆಯದೆ
ನಿತ್ಯ ನಿರ್ಮಲಚಿತ್ತದ ಹರಿಪಾದ ೧

ಧೂಪವ್ಯಾಕೋ ದೀಪವ್ಯಾಕೋ
ಪಾಪಿನಾನೆಂದಾಲಿಸದೆ ತ್ವರ
ಪಾಪಲೋಪ ಸಿರಿಭೂಪ ಹರಿಯ ಪಾದ ೨

ಯಾಗ ಯಾಕೋ ಯಜ್ಞ ಯಾಕೋ
ನೀಗಿ ಮನದಲಿ ಭೋಗದಾಸೆಯ
ಭೋಗಿಶಾಯಿ ಶ್ರೀರಾಮ ಪಾದವ ೩

೩೪೪

ನೆರೆನಂಬಿ ಬೇಡುವೆನೊ ಶ್ರೀಹರಿಯೆ ನಿನ್ನ
ಪರಮ ಪರತರ ತವಬಿರುದುಗಳರಿದು ಪ

ಪುರನಾಶಗೈದು ನೀ ಪುರಸತಿಯರ್ವ್ರತ ಕೆಡಿಸಿ
ಪುರದೊಳಗೆ ತೋರಿದೆಲೋ ಪರಿಪರಿಯ ಲೀಲೆ
ದುರುಳ ರಕ್ಕಸರೊದೆದು ಹರಸುರಮುನಿಗಳಿಗೆ
ಕರುಣಿಸದ್ಯಸಮಸುಖ ಪರಮ ದಯಾನಿಧಿಯೆ ೧

ಸತಿ ಅಹಲ್ಯಾದೇವಿಗೆ ಪತಿಯಿತ್ತ ಶಾಪವನು
ಅತಿಹಿತದಿ ಪರಿಹರಿಸಿ ಗತಿಯಿತ್ತಿ ದೇವ
ಕ್ಷಿತಿಜಾತೆಪತಿ ನಿನ್ನ ಪತಿತಪಾವನಪಾದ
ನುತಿಪ ಭಕ್ತರಿಗೆ ಜವಮೃತ್ಯುಭಯತರಿವಿ ೨

ಮೃಡಸಖ ಶ್ರೀರಾಮ ದೃಢದಿ ಭಜಿಪರ ಬೆಂ
ಬಿಡದಿರ್ದು ಕಾಯ್ವಂಥ ಕಡುದಯದ ದೇವ
ದೃಢದಿಂದ, ನಂಬಿದೆ ಒಡಲಾಸೆ ಪೂರೈಸು
ಜಡಜಾಕ್ಷ ಕಡುದಯದಿ ಪಿಡಿಯೆನ್ನ ಕೈಯ ೩

೩೪೫

ನೋಡು ಎನ್ನೊಳು ಮಾಡು ದಯವನು
ಬೇಡಿಕೊಂಬುವೆ ಮುರಹರ ಪ

ರೂಢಿಯೊಳು ಎನ್ನ ಖೋಡಿಮಾಡದೆ ಕಾ
ಪಾಡು ಬೇಗ ಭಕ್ತಹಿತಕರ ಅ.ಪ

ಪಂಕಜಾಕ್ಷನೆ ಕಿಂಕರನ ಈ
ಮಂಕುಗುಣಗಳ ಬಿಡಿಸಯ್ಯ
ಶಂಖಸುರಹರ ಶಂಕೆಯಾತಕೆ
ಕಿಂಕರನು ನಾಂ ಪಿಡಿ ಕೈಯ ೧

ಹಿಂದು ಇಲ್ಲೆನ್ನ ಮುಂದು ಇಲ್ಲಯ್ಯ
ತಂದೆ ನಿನ್ನೊರತ್ಯಾರ್‍ಯಾರು
ಮಂದಮತಿಯನು ಛಿಂದಿಸಿ ಬೇಗ
ಕಂದನನು ಪೊರೆ ದಯಾಕರ ೨

ತಂದೆ ನೀನೆ ತಾಯಿ ನೀನೆ
ಬಂಧು ನೀನೆ ಶ್ರೀಕರ
ಬಂದ ದುರಿತದಿಂದ ಕಾಯೊ
ಸಿಂಧು ನೀನೆ ದೇವರೊ ೩

ಉರಗನ ಬಾಯಲಿರುವ ಮಂಡೂಕ
ಸ್ಮರಿಸಿ ನೋಣಕ್ಕವಣಿಸುವ ತೆರದಿ
ಶರಧಿಸಂಸಾರ ಸ್ಥಿರವೆಂದರಿಯದೆ
ಮರವಿನಿಂ ಬಿದ್ದೆ ದುರಿತದಿ ೪

ಕಾಯಜನೆಂಬುವ ಮಾಯಕೋರನು
ಪಾಯಕೆ ಒಳಪಟ್ಟೆನು
ತೋಯಜಾಕ್ಷೇರ ಮಾಯಮೋಹದಿ
ಕಾಯದಂದಿಸಿ ಕೆಟ್ಟೆನು ೫

ಕುಂಭಿನಿಯೊಳೆನಗಿಂಬುಗೊಟ್ಟು ಬಲು
ನಂಬಿದವರಾಸ್ತ್ಯಳಿದೆನೊ
ಜಂಬಬಡಿಯುತ ಷಂಭಗುಣಗಳಿ
ಗಿಂಬುಗೊಟ್ಟು ದಿನಗಳೆದೆನೊ ೬

ಪ್ರಾಣತಗ್ಗಿಸಿ ದೀನತನದಲಿ
ದೈನ್ಯಬಡುವರಿಗ್ಹಾನಿಮಾಡಿದೆ
ದಾನಕೊಡುವರ ದಾನಕಡ್ಡಾಗಿ
ನಾನಾ ದುರ್ಬೋಧವುಸುರಿದೆ ೭

ಜಾನಕೀಶನ ಧ್ಯಾನಯುತರಿಗೆ
ಹೀನ ಹಾಸ್ಯವ ಗೈದೆನೊ
ಏನು ತಿಳಿಯದೆ ಗಾಣಕೆ ಬಿದ್ದ
ಮೀನಿನಂತೆ ನಾನಾದೆನೊ ೮

ಶ್ವಾನನಂದದಿ ಋಣವಿಲ್ಲದೆ
ನಾನಾಪಾಪವ ಗೈದೆನೊ
ಮಾನವಜನುಮೇನು ಶ್ರೇಷ್ಠಿದ
ಜ್ಞಾನದೋಳ್ದೊತ್ತುಗಳೆದೆನೊ ೯

ಮಂಗನಂದದಿ ಹಂಗದೊರೆದು
ಅಂಗಲಾಚಿ ಪರರನ್ನು ಬೇಡಿದೆ
ಅಂಗಜಪಿತ ಮಂಗಳಾಂಗ ಶ್ರೀ
ರಂಗ ನಿಮ್ಮ ಮಹಿಮ್ಯರಿಯದೆ ೧೦

ದಾಸ ಮಾಡಿದ ದೋಷ ಮನ್ನಿಸಿ
ಪೋಷಿಸು ಶ್ರೀರಾಮನೆ

ಶ್ರೀಶ ಶ್ರೀನಿವಾಸ ಎನ್ನಂತ
ರಾಸೆ ಪೂರೈಸು ಬೇಗನೆ ೧೧

೩೪೬

ನೋಡು ನೋಡು ನೋಡಯ್ಯ ರಂಗ
ಮಾಡು ದಯ ಕರುಣಾಂತರಂಗ ಪ

ಖೋಡಿಸಂಸಾರದ ಪೀಡೆಯ ಕಡೆಹಾ
ಯ್ದಿಡಿ ಕರ ಭವಭಂಗ ಅ.ಪ

ಮಡದಿಮಕ್ಕಳುಯೆಂಬ ಕಡುತೊಡರಿನ ಬಳ್ಳಿ
ತೊಡರಿಕೊಂಡೆನ್ನನು
ಕಡುವಿಧ ನೋಯಿಸುವುದೊಡೆಯನೆ ಕಡಿ ಗಡ ೧

ಸಜ್ಜಾಗಿಲ್ಲೊಲ್ಲೆ ನಾನು ಪ್ರಪಂಚವಿದು
ಹೆಜ್ಜೆ ಹೆಜ್ಜೆಗೆ ಕಷ್ಟ
ಗರ್ಜಲ್ಲೊರ್ಜಿಸು ಸುಜನರಜ್ಜನೆ ೨

ಪ್ರೇಮದಿಂ ಕಂದನ ಪಾಮರಮನಸಿನ
ಕಾಮಿತವಳುಕಿಸಿ
ಕ್ಷೇಮವ ಪಾಲಿಸು ಸ್ವಾಮಿ ಶ್ರೀ ರಾಮನೆ ೩

೩೪೭

ನೋಡು ಮಾಧವ ಬೇಡಿಕೊಂಬೆ ಪ

ನೋಡಿ ನೀ ದಯಮಾಡಿ ಎನ್ನಯ
ಪೀಡೆ ದೂರಮಾಡು ಬೇಗದಿ ಅ.ಪ

ಅದ್ರಿಧರನೆ ಪರಮದಯಾಸ
ಮುದ್ರ ಎನ್ನನು ಕೊಲ್ಲುವ ಕಡುದಾ

ರಿದ್ರ್ಯಕಳೆದು ಬಯಲುಮಾಡಿ
ಭದ್ರವಾಗಿ ಕಾಯೊ ಹರಿಯೆ ೧

ಕ್ಷುದ್ರದನುಜರ ಸದೆದು ಭರದಿ
ಅದ್ರಿಯೆತ್ತಿ ಭಕ್ತಜನರ ಸುಖ ಸ
ಮುದ್ರದಿರಿಸಿ ಪೊರೆದೆಯೊ ಭುಜ
ಗಾದ್ರಿಶಾಯಿ ಸುದೃಷ್ಟಿಲೆನ್ನ ೨

ಎನ್ನ ಮನಸಿನ ಡೊಂಕ ತಿದ್ದಿ
ನಿನ್ನ ಚರಣದಾಸನೆನಿಸಿ
ಬನ್ನಬಡಿಸದೆ ಇನ್ನು ಜಗದಿ
ಮನ್ನಿಸಿ ಪೊರೆ ವರದ ಶ್ರೀರಾಮ ೩

೩೪೮

ನೋಡೆಲೊ ಎನ್ನ ಕರುಣದಿ ಹರಿ
ಮಾಡೊ ಉದ್ಧಾರ ಬೇಗದಿ ಪ

ರೂಢಿಯೊಳು ಮುಖ ಮಾಡಿ ಪರರನು
ಬೇಡದಂತೆನ್ನ ಮಾಡು ಮಾಧವ ಅ.ಪ

ಸೃಷ್ಟಿಯೊಳೆನ್ನ ನೂಕಿ ಯಾತಕೆ
ಬಿಟ್ಟೆ ಬೇಸರ ಮಾಡುವಿ
ಕೆಟ್ಟಹೊಟ್ಟೆಯ ಕೊಟ್ಟು ವಿಧವಿಧ
ಭ್ರಷ್ಟನೆನಿಸುವುದೇನಿದಭವ ೧

ಜ್ಞಾನಶೂನ್ಯನ ಮಾಡೀಭವಕೆ
ನೀನೆನೂಕಿದೆ ಮತ್ತಾರೆಲೊ
ಏನುಕಾರಣ ಪಾಪಿಯೆಂದೆನ್ನ
ಹೀನದೃಷ್ಟಿಲಿ ನೋಡ್ವೆ ದೇವ ೨

ಏನು ಸ್ವಾಧೀನ ಕೊಟ್ಟದ್ದೆನ್ನಗೆ
ನೀನೆ ನ್ಯಾಯವು ಪೇಳಯ್ಯ
ನೀನೆ ಸಕಲ ಸ್ವತಂತ್ರ ಎನಗೆ
ಜ್ಞಾನ ಪಾಲಿಸಿ ಪೊರೆ ಶ್ರೀರಾಮ ೩

೩೪೯

ನಂದು ನಂದೆಂದೇಕೆ ಬಂಧ ಪಡೆಯುವಿಯೋ ಮಂದಮನ
ತಂದೆ ಗೋವಿಂದ ತೋರುವ ಜಗಕೆ ಪ

ಚಳಿಗಾಳಿ ನಿನ್ನದೆ ಮಳೆಬೆಳೆ ನಿನ್ನದೆ
ಎಲೆಮನಸೆ ನೋಡು ನೀನೊಳಿತಾಗಿ ತಿಳಿದು ೧

ನಿಶೆದಿನ ನಿನ್ನದೆ ವಸುಧೆಸ್ಥಿತಿ ನಿನ್ನದೆ
ಪಶುವಿನಂದದಿ ಮನಸೆ ವ್ಯಸನದಲಿ ಬಿದ್ದು ೨

ಆರುಮಾಡಿದ ಸೃಷ್ಟಿಗ್ಹಾರೈಸಿ ಕೆಡುವಿಯೋ
ಮಾರಪಿತ ಶ್ರೀರಾಮ ಪಾದವಾರಿಜನಂಬದೆ ೩

೩೫೦

ನಂಬಿದೆನು ನಿನ್ನ ಅಂಬುಜನಯನ
ಬೆಂಬಿಡದೆ ಕಾಯೆನ್ನ ಶಂಬರಾರಿಪಿತನೆ ಪ

ಕಂದನ ವಚನವನು ಇಂದು ನೀ ಗೆಲಿಸಯ್ಯ
ಮಂದರಧರಗೋವಿಂದ ಎರಗುವೆ ಪದಕೆ ೧

ಜಡಜಾಕ್ಷ ನಿಮ್ಮಡಿಗೆ ದೃಢದಿಂದ ಬೇಡುವೆನು
ತಡೆಯೆನ್ನನು ಕಡೆಹಾಯ್ಸು ದುರಿತದಿಂ ೨

ಜಗದೊಳಗೆ ಎನ್ನನು ನಗೆಗೇಡು ಮಾಡದೆ
ಮಗನನ್ನ ಸಲಹಯ್ಯ ಖಗಗಮನ ಶ್ರೀರಾಮ ೩

೩೫೧

ನಂಬು ನಂಬೆಲೆ ಮನ ಗಿರಿಧರನ ನಿನ
ಗಿಂಬುಗೊಡುವ ಭಕ್ತ ಸಂಜೀವನ ಪ

ಕತ್ತೆಯಂತೆ ಕೂಗಿ ಕೆಡಬೇಡ ಪರ
ಮಾರ್ಥತತ್ತ್ವದ ಹಾದಿ ತಿಳಿ ಮೂಢ
ಸತ್ಯರ ಪಾದದಿ ಮನನೀಡೋ ನಿತ್ಯ
ಉತ್ತಮರೊಳಗಾಡಿ ನಿಜ ನೋಡೋ ೧

ಕೋತಿಯಂತೆ ಕುಣಿಯಲುಬೇಡೋ ಮಹ
ನೀತಿವಚನ ಮೀರಿ ನಡಿಬೇಡೋ
ಮಾತುಮಾತಿನ ಸಂಶಯಬೇಡೋ ಮುಂದೆ
ಪಾತಕದೊಳು ಬಿದ್ದು ಕೆಡಬೇಡೋ ೨

ಸಾರಸಂಸಾರ ಮಿಥ್ಯವೆಂದು ತಿಳಕೋ ನೀನು
ಪಾರುಗಾಣವ ಮಾರ್ಗ ಹುಡುಕಾಡಿಕೋ
ಧೀರ ಶ್ರೀರಾಮನ ಅಡಿಗ್ಹೊಂದಿಕೋ ಗಂ
ಭೀರ ಮೋಕ್ಷಪದವನೆ ಪಡಕೋ ೩

೩೫೨

ನಿಂದೆಯಾಡಬೇಡೋ ಪರ
ನಿಂದೆ ಮಾಡಬೇಡೋ ಪ

ಇಂದಿರೇಶನಪಾದಗ್ಹೊಂದಿ ಭಜಿಪರಿ
ಗೊಂದನೆ ಮಾಡೋ ಅ.ಪ

ಕುಂದುವರಿಯಬೇಡೋ ಮನಸೇ
ಮಂದನಾಗಬೇಡೋ
ಎಂದಿಗಾದರು ಒಂದಿನ ಈ ಜಗ
ಕುಂದಿಪೋಗುವ ಭವಬಂಧಕ್ಕೀಡಾಗಬೇಡೋ ೧

ಕೋಪಗೊಳ್ಳಬೇಡೋ ಮನಸೇ
ಪಾಪಕ್ಹೋಗಬೇಡೋ
ಗೌಪ್ಯವಳಿಯಬೇಡೋ ಶಾಪಕೊಳ್ಳಬೇಡೋ
ಆ ಪರಬ್ರಹ್ಮನ ಶ್ರೀಪಾದಪಾಡೋ ೨

ಸೊಕ್ಕು ಮಾಡಬೇಡೋ ಯಮನ
ಲೋಕಕ್ಹೋಗಬೇಡೋ
ಏಕಚಿತ್ತದಿ ಲೋಕೈಕ ಶ್ರೀರಾಮನ
ಭಕುತಿಂ ಭಜಿಸಿ ಮುಕುತಿಯ ಕೂಡೋ ೩

೩೫೩

ಪದವ ಕಲಿಸೆನಗೆ ಶ್ರೀಹರಿ
ಪದವ ಕಲಿಸೆನಗೆ ಪ

ಪದವ ಕಲಿಸಯ್ಯ ಪದುಮನಾಭ
ಪದದ ಮಹಿಮೆಯೆಂಬ ಸುಧೆಯು ಭರಿತವಾದ ಅ.ಪ

ನಾಗಶಾಯಿಯ ವಿಮಲನಾಮವೆಂಬ
ರಾಗಕಲಿಸು ಮಿಗಿಲು
ಭೋಗ ಭಾಗ್ಯದಾಸೆ ನೀಗಿಸಿ ಈ ಭವ
ರೋಗ ಗೆಲಿದು ತಲೆದೂಗಿ ನಲಿಯುವಂಥ ೧

ದೋಷದೂರನ ಚರಿತರಸದಿಂ
ಸೂಸಿ ಹರಿವ ಕವಿತ
ಶ್ಲೇಷ ನೀಗಿಸಿ ಪ್ರಪಂಚ್ವಾಸನದುಳಕಿಸಿ
ಸಾಸಿರನಾಮ ಹುಸಿ ತಾಳದಿ ಪಾಡುವಂಥ ೨

ಯತಿತತಿಗಳು ಪೊಗಳ್ವ ಬಿಡದತಿ
ಮತಿಮಾನ್ಯರು ಪಾಡ್ವ
ರತಿಪತಿಪಿತ ಶ್ರೀರಾಮ ನಿನ್ನಡಿಭ
ಕ್ತ್ಯತಿಗಣಕೂಡಿದ ಅತಿಶಯಾನಂದಕರ ೩

೩೫೪

ಪನ್ನಂಗಶಯನ ನಿನ್ನ ನಾ ಬಿಡೆನಯ್ಯ ಪ

ನಿನ್ನ ಬಿಡುವೆನೆಂತು ಎನ್ನ ಮನಸಿನ ಡೊಂಕನ್ನು
ಚೆನ್ನಾಗಿ ತಿದ್ದಿ ಮನ್ನಿಸಿ ಸಲಹುವನಕ ಅ.ಪ

ಕಾಲಿಲ್ಲದವನಾಗಿ ತಲೆಯುದರದಡಗಿಸಿ
ಜಲದಿ ಮುಳುಗಲು ನಿನ್ನ ಬಲವ ಪಡೆಯದೆ ಬಿಡೆ ೧

ನೆಲವನಗೆದು ಬೇರು ಮೆಲುತ ಚರಿಸಲು ಮತ್ತೆ
ಹಲ್ಲುಕಿಸಿದು ಗರ್ಜಿಸಲು ಬಿಡೆನೊಲಿಸದೆ ೨

ತಿರುಕನೀನಾದರು ಕರದಿ ಕೊಡಲಿಪಿಡಿದು
ಶಿರ ತರಿವೆನೆನೆ ನಿನ್ನ ಚರಣಕಾಣದೆ ಬಿಡೆನು ೩

ವನವಾಸಿಯಾದರು ಘನಚೋರನಾದರು
ವನತೇರೊಳ್ಹತ್ತಲೆ ಕುಣಿದರು ಬಿಡೆ ನಿನ್ನ ೪

ಭವಭಯನಾಶನ ದಯಾಕರ ಶ್ರೀರಾಮ
ಹಯವೇರೋಡಲು ನಿನ್ನ ಸಹಾಯ ಪಡೆಯದೆ ಬಿಡೆ ೫

೩೫೫

ಪರಮಾನಂದ ಕರುಣಾಸಿಂಧು
ವರವ ನೀಡಲು ಭಕುತಬಂಧು ಪ

ಪರಮಚರಿತ ದುರಿತರಹಿತ
ಪೊರೆಯೊ ಪ್ರಥಮಜನರ ಪ್ರೀತ
ಸ್ಮರಿಪೆ ನಿರುತ ಸುರಗಣನುತ
ಮೊರೆಯೊ ಕೇಳೆಲೊ ವರಪ್ರದಾತ ೧

ಉರಗಭೂಷ ಭಜಕಪೋಷ
ದುರಿತನಾಶ ಸುಜನವಾಸ

ವರಮಹೇಶ ಶ್ರಿ ಜಗದೀಶ
ಪೊರೆ ಪ್ರಕಾಶ ತ್ರಿಪುರನಾಶ ೨

ನಿಗಮವಿನುತ ಭಗವದ್ಭಕ್ತ
ಸುಗುಣವಿಖ್ಯಾತ ಜಗನ್ನಾಥ
ಜಗಜೀವಿತ ಶ್ರೀರಾಮ ಪ್ರೀತ
ಈಗೆನ್ನಂತರಂಗ ಪಾಲಿಸೊ ೩

೩೫೬

ಪರಿಪರಿ ಕೊಂಡಾಡೋ ಹರಿಯನ್ನು
ಮರೆದು ನೀ ಕೆಡಬೇಡೋ ಮನವೆ ಪ

ಮರವೆ ಮಾಯ ನೀಗಿ ಧರೆಭೋಗ ಮೆಚ್ಚದೆ
ನಿರುತ ಭಜಿಪರ ಬಿಟ್ಟು ಅರಲವಗಲ ಹರಿ ಅ.ಪ

ಕರುಣಸಾಗರನು ನರಹರಿ ಚರಣದಾಸರನ್ನು ತನ್ನಯ
ಹರಣಸಮಾನ ಮಾಡಿ ಕರುಣದಿಂದವರ
ಇರವ ಪೂರೈಸುತ ಪೊರೆವ ಪ್ರೇಮದಿಂದ ೧

ಚಿಂತೆ ಭ್ರಾಂತಿಗಳನು ಬಿಡಿಸಿ ಸಂತಸ ಕರುಣಿಸಿ ಅವರ
ಅಂತರಂಗದಿರ್ದು ಅಂತರ ತಿಳಿಯಿತು
ಚಿಂತಿಸಿದ್ದನ್ನಿತ್ತು ಸಂತಸದಿಂ ಕಾಯ್ವ ೨

ಸಾರಿಸಾರಿಗೆ ತನ್ನ ಚರಣಸೇರಿ ಭಜಿಪರನ್ನು ಬಿಡದೆ
ಆರಭಾರ ಪೊತ್ತು ಸೇರಿ ಅವರ ಬಳಿಯ
ಪಾರಸಂಭ್ರಮದಿಂ ಧೀರ ನಲೀತಿಪ್ಪ ೩

ಅಮಲರೂಪ ತನ್ನ ನಿರುತ ವಿಮಲಚರಣವನ್ನು ನಂಬಿದ
ಸುಮನಸರಹೃದಯಕಮಲದಿ ವಾಸಿಸಿ
ನಿಮಿಷಬಿಟ್ಟಗಲದೆ ಕ್ರಮದಿ ಪಾಲಿಸುವ ೪

ಗೂಢದಿಂದ ಸ್ಮರಿಪ ಭಕುತರ ಗಾಢಮಹಿಮೆ ಕೃಪಾದೃಷ್ಟಿಯಿಂ
ಬೇಡಿದ ವರಗಳ ಕಾಡದೆ ನೀಡುತ
ರೂಢಿಯೊಳ್ ಬಿಡದೆ ಕಾಪಾಡುವ ಶ್ರೀರಾಮ ೫

೩೫೭

ಪಾಲಯ ಕೃಪ ಆಲಯ ಬಾಲಗೋ
ಪಾಲ ಬೇಗ ಪಾಲಿಸು ಪಿಡಿದೆನ್ನ ಪ

ನಿತ್ಯನಿರ್ಮಲ ಸತ್ಯಚರಿತ ದೇವ
ಸತ್ಯಭಾಮೆಯ ಪ್ರಿಯನಾಥ ಸ್ವಾಮಿ
ನಿತ್ಯನಿಗಮ ವೇದವಿನುತ ಜಗ
ಕರ್ತು ಕಾರುಣ್ಯರಸಭರಿತ ಆಹ
ಭಕ್ತಾಂತರ್ಗತ ಕಾಲಮೃತ್ಯುಸಂಹರ ಸ
ಚ್ಚಿತ್ತಾನಂದ ಹರಿ ಸತ್ಯ ಸರ್ವೋತ್ತಮ ೧

ದಿನಮಣಿಕೋಟಿಪ್ರಭಾಕರನುತ
ವನಜಸಂಭವ ಸುರನಿಕರ ದಿವ್ಯಗುಣ
ಘನನಿಧಿಗಂಭೀರ ಜೀಯ
ಅನುಪಮ ಭೂಗಿರಿವರ ಆಹ
ಮನಸಿಜಪಿತ ಮನುಮುನಿಮನಮಂದಿರ
ತನುತ್ರಯದಲಿ ನಿನ್ನ ನೆನಹನು ಪಾಲಿಸು ೨

ಶ್ಯಾಮಸುಂದರ ಕೋಮಲಾಂಗ ಭಕ್ತ
ಕಾಮಿತಫಲಪ್ರದಪುಂಗ ದುಷ್ಟ
ಸೋಮಕಸುರಮದಭಂಗ ಪುಣ್ಯ
ನಾಮಕ ಸುಜನತರಂಗ ಆಹ
ತಾಮಸ ಪರಿಹರ ಭೂಮಿಜನಕ ಜಯ
ಕ್ಷೇಮ ಕರುಣಿಸು ಮಮಸ್ವಾಮಿ ಶ್ರೀರಾಮಯ್ಯ ೩

೩೫೮

ಪಾಲಿಸಯ್ಯ ಪದುಮವದನ
ಪಾಲಸಾಗರಶಾಯಿ ನಂಬಿದೆ ಪ

ಪಾಲ ಸುಜನಶೀಲ ಸುಗುಣ
ಕಾಲಕಾಲದಿ ತವ ಭಜನ ಅ.ಪ

ನಾದಬ್ರಹ್ಮನಾದಿಕಾಲದ
ಆದಿವಸ್ತು ಭಜಿಪೆ ಸದಾ
ಮೋದದೀಯೋ ಎನಗೆ ಮುದ
ಭೇದವಾದ ಗೆಲಿದ ವಿಮಲ
ಸಾಧುಸುಜನರಮಿತವರ್ತನ
ವೇದವೇದಾಂತದೊಳು ಗೌಪ್ಯ
ವಾದ ನಿಜ ಬೀಜಮಂತ್ರ ೧

ಮಾಲತುಲಸಿ ಕೌಸ್ತುಭಾಂಬರ
ಮೇಲುನಿಲಯ ಕುಜನಕುಠಾರ
ಶೀಲ ಸುಗುಣ ಕರುಣಾಮಂದಿರ
ಕೀಳುತನದಿ ಮಾಡಿದ ಎನ್ನ
ಹಾಳು ಪಾಪಗಳನು ಸುಟ್ಟು
ಬಾಲನೆಂದು ಕರುಣವಿಟ್ಟು
ಮೂಲತತ್ತ್ವಕಿಳಿಸು ದಯದಿ ೨

ಭಾಸುರಕೋಟಿವರಪ್ರಕಾಶ
ಸಾಸಿರನಾಮ ಜಗಜೀವೇಶ
ದೋಷಹರಣ ಭವವಿನಾಶ
ದಾಸಜನರ ಪ್ರಾಣಪ್ರಿಯ
ಪೋಷಿಸೆನ್ನನುಮೇಷ ನಿಮ್ಮ
ದಾಸರ ದಾಸನೆನಿಸಿ
ಶೇಷಶಯನ ಶ್ರೀಶ ಶ್ರೀರಾಮ ೩

೩೫೯

ಪಾಲಿಸಯ್ಯ ವರವ ಹರಿಹರಿ
ಪಾಲಿಸಯ್ಯ ವರವ ಪ

ಪಾಲಿಸಯ್ಯ ವರ ಬಾಲಗೆ ಬೇಗನೆ
ಕಾಲಕಾಲದಿ ನಿನ್ನ ಲೀಲಾನಂದವ ಅ.ಪ

ಸತತದಿ ತವಭಜನೆ ಅಗಲಿಸ
ದತಿ ಗುಪ್ತ ತತ್ವವನು
ಯತಿತತಿ ಪೊಗಳುವ ಸ್ಮೃತಿಶಾಸ್ತ್ರಾರ್ಥವನಿತ್ತು
ಸುತಗೆ ಮಹಗತಿಯ ಪಥಕೆ ಹಚ್ಚು ೧

ಮತಿ ಮಾನ್ಯರು ಸದಾ ಪೊಗಳುವ-
ಪತಿತ ನಿಮ್ಮ ಪಾದ ಸತತ
ನುತಿಪ ಅತಿಹಿತ ಮತಿಯಿತ್ತು
ಪತಿತ ಪಾವನ ಮಾಡು ರತಿಪತಿಪಿತನೆ ೨

ಜಡ ಬಡತನ ಕಡಿದು ಗಡನೆ
ನ್ನೊಡಲಾಶೆಯ ತೊಡೆದು
ನುಡಿನುಡಿಗಡಿಗಡಿಗೆಡಬಡದಲೆ ನಿ
ನ್ನಡಿಧ್ಯಾನ ಕೊಡು ಎನ್ನೊಡೆಯ ಶ್ರೀರಾಮ ೩

೩೬೦

ಪಾಲಿಸು ದಯಾಕರನೆ ನೀಲಮೇಘಶ್ಯಾಮ
ಪಾಲಿಸು ದಯಾಕರನೆ ಪ

ಪಾಲಿಸು ಎನ್ನ ಕರುಣಾಳು ವ್ಯಾಲಮಾಲ
ಬಾಲನ ದಯದಿಂ ಮಾಲತುಲಸೀವನ ಅ.ಪ

ಬಂದುಬಿದ್ದೆನಯ್ಯ ಸಂಸಾರ ದಂದುಗ
ವೆಂಬ ಮಾಯಬಲೆಯೊಳು ನೊಂದು

ಬೆಂದಿತು ಕಾಯ ಬಂಧನಿವಾರಿಸಯ್ಯ
ಮಂದಮತಿ ಯತನದಿಂದ ಪರರ ಬಲು
ನೊಂದಿಸಿ ಅರ್ಥವ ತಂದು ಸತಿಯು ಸುತ
ರೆಂದು ಸಲಹಿ ಯಮ ಬಂಧಕೀಡಾದೆನು
ಮುಂದೆ ಇಂಥ ಬವಣೆಂದೆ ತಾರದೆನ್ನ ೧

ರಿಣವೆಂಬ ಸೂತಕಿದು ಎನ್ನಗೆ
ಘನವಾಗಿ ಕಾಡುವುದು ಇನ್ನಿದು ಜನು
ಜನುಮದಿ ಬಿಡದು ಬೆನ್ನತ್ತಿ ಬರ್ಪುದು
ಗನ್ನಗತಕನಾಗಿನ್ನು ಭವಭವಂಗ
ಳನ್ನು ಕಾಣುತಲಿ ಬನ್ನ ಬಡಲಿಬೇಕೊ
ಮನ್ನಿಸಿ ದಯದಿಂ ನಿನ್ನ ಕೃಪೋದಕ
ವನ್ನು ತಳೆದು ಬೇಗೆನ್ನ ಶುದ್ಧಮಾಡು ೨

ಆಗಿಹೋದದ್ದೋಯ್ತು ಮುಂದಿಷ್ಟ
ಭೋಗ ಬೇಡ ಜಗತ್ತು ಪಾಲನೆ
ಬಾಗುವೆ ಮನವರಿತು ಚರಣಕೆ ಶಿರವಿತ್ತು
ಭೋಗಭಾಗ್ಯದಾಸೆ ನೀಗಿಸಿ ಈ ಭವ
ಸಾಗರ ದಾಂಟಿಸು ಯೋಗಿಗಳರಸನೆ
ನಾಗಶಯನ ದಯಮಾಡಿ ದಾಸನ ದು
ರ್ಭೋಗ ದೂರಮಾಡು ಜಗಮೋಹ ಶ್ರೀರಾಮ ೩

೩೬೧

ಪಾಲಿಸು ಮರೆಯದೆನ್ನ ಪಾಲ ತ್ರಿಜಗಮೋಹ
ಮಾಲಕೌಸ್ತುಭ ಸತ್ಯಭಾಮಾ
ಲೋಲ ಭಕ್ತಜನರ ಪ್ರೇಮ
ಕಾಲಕಾಲದಿ ನಿಮ್ಮ ಭಜನಲೋಲಜನರೊಳಿರಿಸಿ ಎನ್ನ
ಬಾಲನೆಂದು ಕರುಣದಾಳು ಕಾಳರಕ್ಕಸಕುಲಸಂಹಾರ ಪ

ವಾರಿಧಿಯೊಳು ಮುಳುಗಿದ ವೇದಗಳ ತಂದು
ವಾರಿಜಾಸನಗೊಪ್ಪಿಸಿದಿ ಸಾಧುಗಳ ಬಂಧು

ವಾರಿಧಿಯೊಳು ವಾರಿಧಿಯ ಕಡೆದಿ
ವಾರಿಧಿಯೊಳು ವಾಸನಾದಿ ವಾರಿಧಿಸುತೆಪತಿ ನೀನಾದಿ
ವಾರಿಧಿಯನು ಬಂಧಿಸಿ ಮತ್ತೆ
ವಾರಿಧಿಯ ಮಧ್ಯದ ಪುರವ ಸೂರೆಗೈದಾಪಾರಮಹಿಮ
ಘೋರತಾಪದಿ ಬಿಡದೆ ದೇವ ೧

ಮಾಯಾಜಗವ ತುಂಬಿದಿ ಮಹರಮಣ ಹರಿಯೆ
ಮಾಯದ ಮರುಣಾಣಿಸಿದಿ ವೈಕುಂಠಪತಿಯೆ
ಮಾಯೆಗೆ ಮಾಯೆಯೆನಿಸಿದಿ ಮಾಯೆಹರನಾದಿ
ಮಾಯದಿಂ ಬಲಿಯನ್ನು ತುಳಿದಿ ಕಶ್ಯಪನ ಅಳಿದಿ
ಮಾಯದ್ಧಿರಣ್ಯಕನ ಸೀಳಿದಿ
ಮಾಯದಿಂ ಮಾಯೆಮೂಗು ಕುಯ್ಸಿದಿ ಮಾಯಮೃಗವನು
ಮಾಯದಿಂ ಕೊಂದಿ ಮಾಯದೆನ್ನ ನೂಕದೆ ದೇವ ೨

ಕಪಟಕೋಟಿಗಳನ್ನಳಿದಿ ಚಪಲಸುರಪನ
ಕಪಟಗರುವವ ಮುರಿದಿ ಲಕುಮಿರಮಣ
ಕಪಟನಾಟಕ ನೆನಿಸಿದಿ ಕಪಟಹರನಾದಿ
ಕಪಟಶಕಟನ ಒದೆದು ಕೆಡುಹಿದಿ ಕಪಟ ಪೂತನಿ
ಅಸುವ ಸೆಳೆದಿ
ಕಪಟ ಕಂಸನ ಶಿರವಮೆಟ್ಟಿದಿ
ಕಪಟಿಗಳ ಮಹ ಕಪಟದಿಂ ಕೊಂದಿ
ಕಪಟ ತಿಳಿಯುವರಾರು ನಿಮ್ಮಯ ಕಪಟತನಕೆಳಸದೆ
ಶ್ರೀರಾಮ ೩

೩೬೨

ಪಾಲಿಸೈ ರಮಾರಮಣನೆ ಎನ್ನ
ನೀಲಮೇಘ ಶ್ಯಾಮನೆ ಪ

ಪಾಲಿಸಿ ಜಗಲೀಲೆ ತೋರಿದಿ
ಪಾಲಭಕ್ತ ಭವಮೂಲಪರಿಹರ ಅ.ಪ

ಜಾಳು ಸಂಸಾರೆಂಬೊಸಂಕೋಲೆ
ಕಾಲಿಗೆ ತೊಡರಿ ಎನ್ನನು
ಕೀಳನೆನಿಸಿತ್ತು ಶೀಲ ಕೆಡಿಸಿ
ಬಾಳಿ ಫಲವಿಲ್ಲ ತಾಳೆನಭವ ೧

ನಾಶವಾಗುವ ದೇಹಧರಿಸಿ
ನಾಶನಾಲೋಚನೆಯ ಸ್ಮರಿಸಿ
ಏಸು ರೀತಿಲಿ ಘಾಸಿಯಾದೆ ಭವ
ಪಾಶದ ಬಾಧೆ ಸಹಿಸೆನಭವ ೨

ತಂದೆ ಶ್ರೀರಾಮ ಮಂದಮತಿತನ
ದಿಂದ ಕಂದನುಮಾಡಿದ
ಒಂದು ದೋಷಗಣಿಸದಲೆ ದಯದಿಂ
ಬಂಧದಿಂದ ಮುಕ್ತಿ ಹೊಂದಿಸಭವ ೩

೩೬೩

ಪಾಲಿಸೋ ಹರಿ ಪಾಲಿಸೋ
ಫಾಲನಯನಸಖ ಭಕ್ತಾಂತರಾತ್ಮಕ ಪ

ಪಾಲಿಸು ಫಲ ಸುಪ್ರದಾತ ಮೊರೆ
ಪಾಲಿಸು ಸುಜನನ್ನುತ ಖರೆ
ಪಾಲಿಸು ಸತತ ವಿಖ್ಯಾತ ದೊರೆ
ಪಾಲಿಸು ನುತರ ಸಂಪ್ರೀತ ಆಹ
ಪಾಲ ಪಾವನಗಾತ್ರ ಪಾಲತ್ರಿಜಗಸ್ತೋತ್ರ
ಪಾಲಿಸು ಕೃಪಾನೇತ್ರ ಪಾಲಪಾವನಯಾತ್ರ ೧

ಕೊರಳ ಕೌಸ್ತುಭಮಣಿಮಾಲ ಬಹು
ದುರಳದನುಜಕುಲ ಕಾಲ ಮಹ
ಕರುಣದೊರದಿ ಸುರಜಾಲ ಬಹು
ಪ್ರಳಯ ಗೆಲಿದಿ ತೋರಿ ಲೀಲಾ ಆಹ

ಹರಣಜನರಮರಣ ಕರುಣ ಭರಣಪೂರ್ಣ
ಶರಣಜನರ ಪ್ರಾಣ ಮರಣ ಗೆಲಿಸುವ ತ್ರಾಣ 2

ನಿತ್ಯ ನಿಮ್ಮಯ ನಿಜಭಕ್ತಿ ನೀಡು
ನಿತ್ಯ ನಿಮ್ಮಯ ನಿಜಸ್ತುತಿ ನೀಡು
ನಿತ್ಯ ನಿಮ್ಮಯ ನಿಜಮತಿ ನೀಡು
ನಿತ್ಯ ನಿರ್ಮಲ ನಿಜಮುಕ್ತಿ ಆಹ
ನಿತ್ಯನಿರ್ಮಲ ರಾಮ ನಿತ್ಯನಿರ್ಮಲ ನಿಮ್ಮ
ನಿತ್ಯನಿರ್ಮಲ ಪ್ರೇಮ ನಿತ್ಯನಿರ್ಮಲ ನಾಮ 3

೩೬೪

ಪಿಡಿದೆಲೆ ಬಿಡಬೇಡ್ಡುಡುಗಹುದು ಇದು
ಕೆಡದ ವಸ್ತು ನಿಜ ಪಿಡಿ ಬಿಗಿದು ಪ

ಎಡರುತೊಡರಿಗೆದೆಒಡೆಯದೆ ದೃಢವಿಡಿ
ಜಡಭವ ತೊಡರನು ಕಡಿಯುವುದು ಅ.ಪ

ಭಕ್ತಿಯಿಂದೆಂಬುವ ಗೂಟ ಜಡಿದು ಮಹ
ಸತ್ಯವೆಂದೆಂಬ ಹಗ್ಗ ಸುತ್ತ ಬಿಗಿದು
ಚಿತ್ತೆಂಬ ಗಂಟ್ಹಾಕು ಎತ್ತವದಲದಂತೆ
ನಿತ್ಯ ಮುಕ್ತಿಸುಖ ಕೊಡುತಿಹ್ಯನು 1

ಸುಜನ ಸಂಗವೆಂಬ ಮಂದಿರದಿ ಮಹ
ಭಜನವೆಂದೆಂಬುವ ಗೋದಿಲದಿ
ನಿಜಧ್ಯಾನ ಮೇವು ಹಾಕಿ ಭುಜಶಾಯಿಪಾದ
ನಿಜಧೇನುವನು ಕಟ್ಟಿ ಮಜದಲಿ ನಲಿಯೊ 2

ಆರಿಗೆ ಸಿಗದಂಥ ಒಡವೆಯಿದು ಸರ
ದಾರನೆ ನಿನಗೆ ಸಿಕ್ಕಿಹ್ಯದು
ಸಾರಸೌಖ್ಯಕ್ಕೆ ಮೂಲಧಾರನಾಗಿಹ್ಯ
ಧೀರಶ್ರೀರಾಮಪಾದ ಶೂರನೆ ಬಿಡದಿರು 3

೩೬೫

ಪೊರೆಯೊ ಪ್ರಭು ಪರಮಾತ್ಮ
ಕರುಣಾಕರನೆ ಎನ್ನೊಳ್ ಕರುಣದೃಷ್ಟಿಯನಿಟ್ಟು ಪ

ದಾರಿದ್ರ್ಯದೋಷಂಗಳ್ ಛಿದ್ರಛಿದ್ರ ಮಾಡಯ್ಯ
ಅದ್ರಿಧರನೆ ಕೃಪಾಸಮುದ್ರ ದೊರೆಯೆ ೧

ಬರುವ ಕಂಟಕದೆನ್ನ ಸೆರೆಯಬಿಡಿಸಿ ನಿನ್ನ
ಚರಣಕರುಣಾರ್ಣವದಿರಿಸೊ ಮುರಾರಿ ಹರಿ ೨

ಆವ ಭಯವು ಎನಗೀಯದೆ ತ್ರಿಜಗ
ಜೀವ ಜನಕಜೆಪತಿ ಕಾಯೊ ಶ್ರೀರಾಮ ೩

೩೬೬

ಪೋಗವಲ್ಲದು ಇಹ್ಯಭೋಗದಾಸೆಯು ಇನ್ನು
ನಾಗಶಯನ ನೀನೆ ನೀಗಿಸು ಇದನು ಪ

ಏಸು ಸಾರ್ಹುಟ್ಟುಟ್ಟಿ ಆಶಪಾಶದಿ ಬಿದ್ದು
ನಾಶ ಪೊಂದುತ ಬಲು ಬೇಸತ್ತೆ ಹರಿಯೆ ೧

ಹೇಯಭರಿತವಾದ ಕಾಯಸುಖಕ್ಕೆ ಮೆಚ್ಚಿ
ಪಾವನಪಥ ಮರೆದು ಬವಣೆಬಟ್ಟೆಭವ ೨

ಅರಿದು ತವಪದಕ್ಕೆ ಎರಗಿ ಬೇಡುವೆ ಸ್ಥಿರ
ವರಮುಕ್ತಿಸುಖ ನೀಡಿ ಪೊರೆಯೊ ಶ್ರೀರಾಮ ೩

೩೬೭

ಪ್ರಭು ನಿಮ್ಮ ಮರೆಹೊಕ್ಕೆ
ಅಭಿಮಾನ ಬಿಡಿಸೊ ಶುಭಕಾಯ ಸುಖಕರ ಪ

ವಿಲಸಿತವಮಹಿಮೆ ತಿಳಿದು ಉಳಿಯದೆ ನಾನು
ಕುಲಕುಲೆಂದ್ಹೋರಾಡ್ವ ಕುಲಾಭಿಮಾನ ಬಿಡಿಸೈ ೧

ಈಶ ನಿಮ್ಮಯ ಪಾದಧ್ಯಾಸ ಮರೆಸಿ ಕಡೆಗೆ
ನಾಶವೊಂದುವ ದೇಶಾಭಿಮಾನ ಬಿಡಿಸೈ ೨

ಮಹಾಮಾಯವೆನಿಪ ಧರೆಮೋಹದಿ ಮುಳುಗಿಸದೆ
ಮಹ ಶ್ರೀರಾಮ ದೇಹದಭಿಮಾನ ಬಿಡಿಸೈ ೩

೩೬೮

ಪ್ರಭುವರ ಮರೆದ್ಯಾ ನಟರಾಜವರದ ಪ

ಪ್ರಭುವರ ಮರೆದ್ಯಾ
ಸೊಬಗಿನ ಹರಿ ಭಕುತರಭಿಮಾನ ತೊರೆದ್ಯಾ ಅ.ಪ

ನೋಯಲಾರದೆ ಭವ ಮಾಯಾಜಾಲದಿ ನಾನು
ತೋಯಜಾಕ್ಷನೆ ನಿನ್ನ ಭಾವಿಸಿ ಮೊರೆಯಿಟ್ಟು ೧

ಘೋರಸಂಸಾರದೊಳು ಘೋಳಬಡದೆಯಿನ್ನು
ಪಾರಮಹಿಮನೆ ನಿನ್ನ ಸಾರುತ ಮರೆಹೊಕ್ಕೆ ೨

ದಾಸರೋಳ್ನಿರ್ದಯ ಭೂಷಣವೆ ನಿನಗಿದು
ಪೋಷಿಸು ದಯದಿಂದ ಶ್ರೀಶ ಶ್ರೀರಾಮನೆ ೩

೩೬೯

ಪ್ರೇಮಸಾಗರ ಸ್ವಾಮಿ ಶ್ರೀಹರಿ ಬಾರೊ ಪ

ವಿಷಮಸಂಸಾರದ ವ್ಯಸನವಳುಕಿಸಿ
ಅಸಮ ನಿಮ್ಮಯ ನಿಜಧ್ಯಾಸವ ಕರುಣಿಸೊ ೧

ಮನಸಿನ ಹರಿದಾಟವನು ನಿಲಿಸಿ
ಎನಗನುದಿನ ಸುಸಂಗನೆ ದಯಪಾಲಿಸೊ ೨

ಸುಷ್ಮಮಲದಾಯಕ ಮಮ ಕೃಪಾಕರ ಶ್ರೀ
ರಾಮ ಅಪರೋಕ್ಷಜ್ಞಾನವ ಕೃಪೆಮಾಡು ಬೇಗನೆ ೩

೩೭೦

ಫುಲ್ಲನಾಭ ನಿಜತತ್ವ ತಿಳಿಸು ನುತಪ್ರೇಮಿ
ಅಲ್ಲದ್ದು ಅಹುದೆನಿಸಿ ಕೊಲ್ಲದಿರು ಸ್ವಾಮಿ ಪ

ವಿಪಿನವನು ಸೇರಿ ಬಲು
ಗುಪಿತದಿಂ ಕುಳಿತು ಮಹ
ತಪವನಾಚರಿಸಲು
ಸುಪಥ ದೊರಕುವುದೆ
ಕಪಿವರದ ನಿನ್ನಡಿಯ
ಕೃಪೆಯಿಲ್ಲದಿರೆ ಇನಿತು
ಜಪತಪವ್ರತನೇಮ
ಸುಫಲ ನೀಡುವುದೆ ೧

ಯಾಗ ಯಜ್ಞವ ಮಾಡಿ
ತ್ಯಾಗಿಯೆಂದೆನಿಸಿ ಬಲು
ಭೋಗ ನೀಗುವುದೆ
ಭಾಗವತ ಜನಪ್ರಿಯ
ನಾಗಶಾಯಿ ತವ ದಯ
ವಾಗದಲೆ ನರನ ಭವ
ರೋಗ ತೊಲಗುವುದೆ ೨

ಇಲ್ಲದದು ಇಲ್ಲೆನಿಸು
ಅಲ್ಲದ್ದು ಅಲ್ಲೆನಿಸು
ಸಲಿಸೆನ್ನನು ತವ
ಬಲ್ಲಿದ ಶರಣರೊಳು
ಎಲ್ಲದೇವರೆಲ್ಲ ಲೋಕ
ಎಲ್ಲನಿನ್ನೊಳಗಭವ
ಇಲ್ಲ ನಿನ್ನ್ಹೊರತು ಅನ್ಯ ಸಿರಿ
ನಲ್ಲ ಶ್ರೀರಾಮ ೩

೩೭೧

ಬರಿದೆ ಬಯಸಲು ಬರುವುದೇನೆಲೆ
ಮರುಳು ಯೋಚನೆ ಬಿಡೆಲೆ ಮನಸೆ ಪ

ಹರಿಯ ಬಳಿಯಲಿ ಪಡೆದಷ್ಟಲ್ಲದೆ
ದೊರಕದೆಂದಿಗೆ ಬೇರೆ ತಾನು ಅ.ಪ

ಶಾಂತಿತಾಳತಿಭ್ರಾಂತಿ ನೀಗಿ
ಸಂತಜನ ಕೃಪಾಪಾತ್ರನಾಗಿ ಕರು
ಣಾಂತರಂಗ ಸಿರಿಕಾಂತನಂಘ್ರಿಯ
ಅಂತರಂಗದಿ ಭಜಿಸದೆ ೧

ಶಮೆಯಗೂಡಿಹ್ಯ ಭ್ರಮೆಯನಳಿದು
ಸುಮನದೋಳಿರ್ದು ಕ್ರಮದಿ ಅನುದಿನ
ವಿಮಲ ಹರಿಕಥೆ ಶ್ರವಣದಿಂ
ರಮಾರಮಣನಂಘ್ರಿಗೆ ನಮಿಸದೆ ೨

ದಮೆಯ ಪಡೆದು ದಾಸನಾಗಿ
ವಿಮಲನಾಮದ ಬಲವಗಳಿಸಿ
ಅಮಿತಮಹಿಮ ಶ್ರೀರಾಮನಂಘ್ರಿ
ಕಮಲವೊಲಿಸಿ ಭವತುಳಿಯದೆ ೩

೩೭೨

ಬರುತಾದೋ ಪದ ಬರುತಾದೋ ಪ

ಪದುಮನಾಭನ ದಿವ್ಯಸದಮಲಪಾದದ
ವಿಧವಿಧ ಮಹಿಮೆಯಯ ಪೊಗಳಿ ಬಾಳುವ ಪದ ಅ.ಪ

ಛಂದಸ್ಸು ಮೀಮಾಂಸೆ ಅಂದದ ಯತಿಗಣ
ಒಂದು ನಾನರಿಯದೆ ಸಂದೇಹಮಿಲ್ಲದೆ

ಮಂದರಧರನಡಿ ಒಂದೇ ತ್ರಿಭುವಿಗೆ ಮಿಗಿ
ಲೆಂದು ಪಾಡುತಲಾನಂದ ಪಡೆಯುವ ಪದ ೧

ಸಕಲರು ತೆಗೆದಿಟ್ಟ ಅಕತಪಚಟಯೆಂಬ
ವಖಿಲಮಂ ಗಣಸದೆ ಪ್ರಕಟಮಿನಿತಿಲ್ಲದೆ
ಅಕಟಕಟೆನ್ನುತ ನಿಖಿಲವ್ಯಾಪಕನಂಘ್ರಿ
ಭಕುತಿಯಿಂ ಭಜಿಸುತ ಮುಕುತಿ ಪಡೆಯುವ ಪದ ೨

ಅಳುಕದೆ ಲೌಕಿಕ ತಿಳೆಸುಖಕೆಳಸದೆ
ಮಲಿನದಿ ಸಿಲ್ಕದೆ ಚಲನವಲನಿಲ್ಲದೆ
ಜಲಜಾಕ್ಷ ಭಕ್ತರ ಸುಲಭ ಶ್ರೀರಾಮನಂ
ಒಲಿಸಿ ಪ್ರಾರಬ್ಧವ ಗೆಲಿದು ನಲಿಯುವ ಪದ ೩

೩೭೩

ಬರುವುದೆಲ್ಲವು ಬಂದು ತೀರಿ ಹೋಗಲಿ
ಹರಿ ನಿನ್ನ ಸ್ಮರಣೆಯೆ ಸ್ಥಿರವಾಗಿರಲಿ ಪ

ಕಳ್ಳನೆಂದು ಎನ್ನ ಮರಕೆ ಬಿಗಿಯಲಿ
ಸುಳ್ಳನೆಂದು ಮೋರೆ ಮೇಲೆ ಉಗುಳಲಿ
ತಳ್ಳಿಕೋರನೆಂದು ಎಳದಾಡಿ ಒದಿಲಿ
ಎಲ್ಲಿನೋಡಿದಲ್ಲಿ ಹಾಸ್ಯಮಾಡಲಿ ೧

ಡಂಭಕನಿವನೆಂದು ಬಿಡದೆ ನಿಂದಿಸಲಿ
ನಂಬದೆ ಜನರೆನಗೆ ಇಂಬುಗೊಡದಿರಲಿ
ಕುಂಭಿನಿಪರು ಎನ್ನ ಮುನಿದು ನೋಡಲಿ
ಇಂಬು ಸಿಗದೆ ನಾನು ತೊಳಲಿ ಬಳಲಲಿ ೨

ಸತಿಸುತರೆನ್ನನು ಬಿಟ್ಟು ಹೋಗಲಿ
ಕ್ಷಿತಿಯೊಳೆನ್ನನು ಯಾರು ಸೇರದಂತಿರಲಿ
ಪತಿತಪಾವನ ಸಿರಿಪತಿ ಶ್ರೀರಾಮನ ಪೂರ್ಣ
ಹಿತವೊಂದೆ ಎನ್ನ ಮೇಲೆ ಬಿಡದಂತಿರಲಿ ೨

೩೭೪

ಬಲ್ಲಿದನಲ್ಲೇನು ಶ್ರೀಹರಿ ಬಲ್ಲಿದನಲ್ಲೇನು ಪ

ಬಲ್ಲಿದನಲ್ಲೇನು ಖುಲ್ಲಮನವೆ ತಿಳಿ
ಎಲ್ಲ ಲೋಕಗಳ ನಲ್ಲನಾಗಿಹ್ಯನೀತ ಅ.ಪ

ಕಡುದಯದಿಂದಿನ್ನು ಪಿಡಿದು ಬಿಡದೆ ಪಾಂಡವರನ್ನು
ಪೊಡವಿನೆಲ್ಲ ಒಂದೆ ಕೊಡೆಯಿಂದಾಳಿಸಿದ
ಎಡರು ತಾರದಂತೆ ಒಡೆಯ ಮುಕ್ಕುಂದನೀತ ೧

ಧೂರ್ತ ಹಿರಣ್ಯಕನ ಕರದಿಂ ಭಕ್ತ ಪ್ರಹ್ಲಾದನ್ನ
ಸ್ವಸ್ಥದಿಂದ ದಯವಿತ್ತು ಕಾಯ್ದನಿಗೆ
ಮತ್ತು ದಾರು ಸರಿ ಅರ್ತುನೋಡಲೀತ ೨

ಉರಿಪಸ್ತ ಪಡೆದವನ ಕ್ಷಣದಿಂ ಉರುವಿದ ಮಾರಮಣ
ಭರದಿಂ ತ್ರಿಪುರರ ಹರಿದಿಯರ್ವ್ರತ ಕೆಡಿಸ್ಥರನ
ಮೊರೆಯ ಕೇಳಿ ಸುರರ ಸಲಹಿದೀತ ೩

ಮೀರಿದ ಅಸುರರನು ತರಿದು ಸಾರುವ ಬಿರುದನ್ನು ಅ
ಪಾರ ಶೂರ ದನುಜಾರಿ ಭಕ್ತ ಸಹಕಾರಿ
ಶೌರಿ ನಿಜ ಮೂರು ಜಗದಿ ಈತ ೪

ಜಡಮತಿ ಮಾನವರ ನುಡಿಗಳು ದೃಢಲ್ಲೆಲೊ ಪೂರ
ಪೊಡವಿಗಧೀಶ ನಮ್ಮ ಒಡೆಯ ಶ್ರೀರಾಮನಡಿ
ದೃಢದಿ ನಂಬು ಭವತೊಡರ ಕಡಿವನೀತ ೫

೩೭೫

ಬಲು ಚೋದ್ಯ ಬಲು ಚೋದ್ಯ ಹರಿ ನಿನ್ನ ಆಟ
ಸುಲಭವಲ್ಲಾರಿಗೆ ತಿಳಿಯದೀ ಮಾಟ ಪ

ಉಣಿಸುವವರೊಳು ನೀನೆ ಉಣುತಿರುವವರಲಿ ನೀನೆ
ಉಣಿಸುಣಿಸಿ ಅಣಕಿಸುವ ಬಿನುಗರಲಿ ನೀನೆ
ಮಣಿಯುವವರೊಳು ನೀನೆ ಮಣಿಸಿಕೊಂಬರಲಿ ನೀನೆ
ಕ್ಷಣಕ್ಷಣಕೆ ಬದಲ್ವಾಗ ಬಣ್ಣಕಗರಲಿ ನೀನೆ ೧

ಹೊಡೆಯುವವರಲಿ ನೀನೆ ಹೊಡೆಸುವವರಲ್ಲಿ ನೀನೆ
ಹೊಡೆಸಿಕೊಳ್ವರಲಿ ನೀನೆ ಬಿಡಿಸುವವರಲಿ ನೀನೆ
ದುಡಿಯುವವರಲಿ ನೀನೆ ದುಡಿಸಿ ಕೊಂಬರಲಿ ನೀನೆ
ಬಡವರಲಿ ನೀನೆ ಬಲ್ಲಿದರೊಳ್ನೀನೆ ೨

ಕೊಟ್ಟೊಡೆಯರಲಿ ನೀನೆ ಬಿಟ್ಟೋಡ್ವರಲಿ ನೀನೆ
ಕೊಟ್ಟೊವಚನತಪ್ಪುವ ಭ್ರಷ್ಟರಲಿ ನೀನೆ
ಶಿಷ್ಟನಿಷ್ಟರಲಿ ನೀನೆ ಬಿಟ್ಟಾಡ್ವರಲಿ ನೀನೆ
ಇಟ್ಟಿಟ್ಟು ಹಂಗಿಸುವ ದುಷ್ಟರಲಿ ನೀನೆ ೩

ಪಾಪಿಷ್ಟರಲಿ ನೀನೆ ಕೋಪಿಷ್ಟರಲಿ ನೀನೆ
ಶಾಪಿಸುವರಲಿ ನೀನೆ ಶಾಪಕೊಂಬರಲಿ ನೀನೆ
ತಾಪತ್ರದಲಿ ನೀನೆ ಭೂಪತಿಗಳೊಳು ನೀನೆ
ಅಪಾರ ಸೃಷ್ಟಿ ಸರ್ವವ್ಯಾಪಕನು ನೀನೆ ೪

ಇನ್ನರಿದು ನೋಡಲು ಅನ್ಯವೊಂದಿಲ್ಲವು
ನಿನ್ನಪ್ರಭೆಯೆ ಸಕಲ ಜಗವನ್ನು ಬೆಳಗುವುದು
ನಿನ್ನ ರೂಪವೆ ಜಗ ಎನ್ನಯ್ಯ ಶ್ರೀರಾಮ
ಭಿನ್ನಬೇದ ಬಿಡಿಸೆನ್ನ ಧನ್ಯನೆನಿಸಯ್ಯ ೫

೩೭೬

ಬಲು ತಿಗಡೋ ಇದು ಬಲು ತಿಗಡೋ
ಗಲಿಬಿಲಿ ಸಂಸಾರ ತಾರತಿಗಡೋ ಪ

ತಿಳಿಯದರು ಎಲ್ಲ ಅಳಿದರೊಳಗೆ ಬಿದ್ದು
ತಿಳಿದವರು ಗೆಲಿದರೀಮೊಲೆಮುಡಿಯೊ ಅ.ಪ

ಅಲಕುಮಲಕು ಇದು ಬಲುತಂಟೋ ಜರ
ಸಿಲುಕಲು ಬೀಳ್ವುದು ಕಗ್ಗಂಟೋ
ಸೆಳೆದು ಮಾಯದಿಂ ಒಳಗೆ ಹಾಕಿಕೊಂಡ
ಬಳಿಕ ಬಿಚ್ಚದಿದು ಬ್ರಹ್ಮಗಂಟೋ ೧

ಎಣಿಕೆಗೆ ಮೀರಿದ ಹಳೆ ಗುದ್ದೋ ಇದು
ಘನ ಘನ ಜನರನು ನುಂಗಿದ್ದೋ
ಗುಣಿಸಿ ನೋಡದೆ ಮರ್ತು ಹಣಿಕಿಹಾಕಲಿದು
ಕುಣಿ ಕುಣಿಸಿ ಕೊಲ್ಲುವ ಮೆಚ್ಚು ಮದ್ದೋ ೨

ಆರಿಗೆ ತಿಳಿಯದು ಇದರ್ಹೊಲಬೋ ಜಗ
ದ್ಧಾರಿಬಿದ್ದರಪ್ಪ ಸುತ್ತಿ ಮೆಚ್ಚೋ
ಧೀರ ಶ್ರೀರಾಮನ ಚಾರುಚರಣಕ್ಕೆ
ಸೇರಿದವರಿಗೊಂದೆ ಬಲು ಸುಲಭೋ ೩

೩೭೭

ಬಾಗೋ ಬಾಗೋ ಜೀವನೇ ಸಾಗರನಿಲಯಗೆ ಪ

ಬಾಗೋ ಮನಸಿನ ನೀಗಿ ಕಲ್ಮಷ
ಬೇಗ ತಿಳಿದು ನೀಜೋಗಿವಂದ್ಯಗೆ ಅ.ಪ

ಕನಸಿದು ಜಗಮೋಹ ಕಾಣು ಕಾಣೋ
ನಿನಗೆ ವೈಕುಂಠ ಒಂದೇ ಗೇಣೋ
ಚಿನುಮಾಯಾತ್ಮನ ತ್ವರ ಕಾಣು ಕಾಣೋ
ತನುಮನವರ್ಪಿಸಿ ನೆನವು ನಿಲ್ಲಿಸಿ ನಿಜ
ಘನಮಹಾತ್ಮನ ಹಿಡಿ ಖೂನ ಖೂನೋ ೧

ಸ್ಥಿರವೇನೋ ಮಣ್ಣಿನ ಕಾಯ ಕಾಯ
ಗುರುತಿಟ್ಟರಿಯಿದರ ನೆಲೆಯ ನೆಲೆಯ
ಮರುಳನೆ ನರಕದ ಕುಣಿಯು ಕುಣಿಯೋ

ನೆರೆದು ತೋರಿ ಸಂತೆ ಹರಿದು ಹೋಗುವಂತೆ
ಧರೆ ನಿನಗೊಂದಿನ ಮಾಯ ಮಾಯ ೨

ಬಂದದ್ದು ವಿಚಾರ ಮಾಡೋ ಮಾಡೋ
ಇಂದಿನ ಸಮಯ ಕಳಿಬೇಡೋ ಬೇಡೋ
ಬಂಧುರಸುಖಕೆ ಮನ ನೀಡೋ ನೀಡೋ
ಇಂದು ನಾಳೆನ್ನದೆ ತಂದೆ ಶ್ರೀರಾಮನ
ಬಂಧುರಚರಣವ ಪಾಡೋ ಪಾಡೋ ೩

೩೭೮

ಬಾರದೇನೆಲೋ ಕರುಣಿ ನಿನಗೆ ಅ
ಪಾರಮಹಿಮ ಸಾರಸಾಕ್ಷ ಪ

ದುರಿತನಾಶ ಬಾ ಸರ್ವೇಶ
ಸ್ಮರಿಪಜನವಿಲಾಸ ಈಶ
ಕರುಣವಿಟ್ಟು ಪೊರೆ ಪ್ರಕಾಶ ೧

ಜಯವ ನೀಡೋ ಜವದಿ ಮನಕೆ
ಭಯನಿವಾರಣ ಕರುಣಾಭರಣ
ದಯದಿ ನೋವ ಗೈ ನಿವಾರಣ ೨

ಬೇಗೀ ಬಂಧನ ನೀಗಿಸಭವ
ನಾಗಶಯನ ಶ್ರೀರಾಮ ಸ್ವಾಮಿ
ಬಾಗಿದೆನು ನಿನ್ನಡಿಯ ನಂಬಿ ೩

೩೭೯

ಬಾರಯ್ಯ ದಯೆದೋರಯ್ಯ
ನೀರಜನಾಭನೆ ಕರುಣಿಸು ಮಹರಾಯ ಪ

ಸಂಸಾರಸರಕಿನೊಳು ಸಿಲುಕಿ ನಾ ಬಳಲುವೆ
ಶಿಶುವಿನೊಳು ದಯವಿಟ್ಟು ಸೆರೆ ಬಿಡಿಸೆನ್ನಯ್ಯ ೧

ಪುಸಿನುಡಿ ನುಡಿದು ನಾ ದೆಸೆ ಬಾಯ ಬಿಡುವೆನು
ಕುಸುಮಾಕ್ಷ ಪಿಡಿದೆನ್ನ ಹಸನ ಮಾಡೆನ್ನಯ್ಯ ೨

ಜಡಭವತೊಡರನು ಗಡನೆ ಕಡೆಹಾಯ್ಸಿ ನಿ
ನ್ನಡಿಭಕ್ತಿ ಕೊಡು ಬೇಗೆನ್ನೊಡೆಯ ಶ್ರೀರಾಮಯ್ಯ ೩

೩೮೦

ಬಾರಯ್ಯ ಸ್ವಾಮಿ ಬಾರಯ್ಯ ಪ

ಬಾರಯ್ಯ ಮುಖವನ್ನು ತೋರಯ್ಯ ತವಪಾದ
ವಾರಿಜನಂಬಿದೆ ಮಾರಜನಕ ಬೇಗ ಅ.ಪ

ಎಷ್ಟಂತ ಬಳಲಲಿ ನಾನು ಸಂಸಾರ
ಕಷ್ಟದ ಕಾಡಿನೊಳಿನ್ನು ಧ್ವಂಸಾಗಿ
ಭ್ರಷ್ಟತನದಿ ಬಾಳುವೆನು ಕಂಸಾರಿ
ಇಷ್ಟುದಯವು ಬರದೇನು ಆಹ
ಶಿಷ್ಟಜನುಮವೆಂದು ಅಟ್ಟಿ ಎನ್ನನು ಇಂಥ
ಕೆಟ್ಟ ಬವಣೆಗೆ ಬಲಿಗೊಟ್ಟು ಬಿಡುವರೆ ಈಶ ೧

ಜನನಿಜಠರದಲಿ ಎನ್ನ ಏನೆಂ
ದೆನುತ ನೂಕಿದಿ ಪೇಳು ಮುನ್ನ
ಸಾನಂದನುಪಮನು ತವಚರಣ
ಆನಂದನುಕೂಲವಾದದಂದಿಲ್ಲೇನ ಆಹ
ಅನುಚಿತ್ತವೇನಯ್ಯ ದಿನವು ಪೋಯಿತು ಅರ್ಧ
ಮನಕೆತರದಲಿಹಿ ಜನಕನೆ ಕರುಣದಿ ೨

ಭಕ್ತವತ್ಸಲನೆಂಬ ಬಿರುದು ಮಾಜ
ದ್ದೊತ್ತು ನಿಖಿಲ ನೀನೆ ಬೆರೆದು ತ್ರಿಜ
ಗೆತ್ತಿ ಆಳುವಿ ಮನವರಿದು ನೈಜ
ದಿತ್ತು ಪೊರೆವಿ ಭಯತರಿದು ಆಹ

ಕರ್ತನೆ ತವಪಾದ ಮರ್ತಿರಲಾರಿನ್ನು
ತುರ್ತು ದಯವಾಗೆನ್ನೊಳರ್ತಿಯಿಂ ಶ್ರೀರಾಮ ೩

೩೮೧

ಬಾರೋ ಸುಖಸಾರ ತೋರು ಕೃಪೆ ಮುರಹರ
ಮೀರಿದ ಸಂಸಾರವಾರಿಧಿ ಮಾಡು ಪಾರ ಪ

ಎಂಬತ್ತು ನಾಲ್ಕುಲಕ್ಷಯೋನಿಯೊಳ್ ಬಳಲುತ
ಕುಂಭಿನಿಯೊಳು ಬಂದು ನಂಬಿಗಿಲ್ಲದೆ ಕೆಟ್ಟೆ ೧

ದಯದಿ ಎನ್ನಯ ದುರ್ಬವಣೆಯ ನೀಗಿ
ದಯಮಾಡು ಸುಖಸಂತಸವನೆನ್ನೊಡಲಿಗೆ ೨

ಮಸಣಿಸದಸಮ ಸಂಪದವನೆ ಕರುಣಿಸಿ
ಶಿಶುವನು ಪೋಷಿಸು ಶ್ರೀಶ ಶ್ರೀರಾಮನೆ ೩

೩೮೨

ಬಿಡಬೇಡೆಲೆ ಮನಸೆ ಶ್ರೀಹರಿಪಾದ
ಹಿಡಿ ಬಿಗಿಯಲೆ ಮನಸೇ ಪ

ಹಿಡಕೋ ಕಡಕಿಂ ಕಡಲಕಡಿದಮರರ
ಪಿಡಿದು ಕಾಪಾಡಿದ್ಹಾಲ್ಗಡಲ ಒಡೆಯನ ಪಾದ ಅ.ಪ

ಗರುಡನ್ನೇರಿದಪಾದ ಅನುದಿನ ಸಿರಿಯರೊತ್ತುವ ಪಾದ
ಪರತರ ಭಕುತಿಯಿಂ ಸುರರುಪೂಜಿಪ ಪಾದ
ನೆರೆದು ಋಷಿಸ್ತೋಮರರಸಿನಲಿಯುವ ಪಾದ
ಪರಮನಾರದ ತುಂಬುರರು ಪಾಡುವ ಪಾದ
ಶರಣ ಸಂತಜನ ನಿರುತ ನಮಿಪ ಪಾದ ೧

ನೀಲಬಣ್ಣದಪಾದ ಪಿಡಿದೆತ್ತಿ ಮೂಲೋಕಾಳುವ ಪಾದ
ತಾಳಿ ವಿಲಸಿತರೂಪ ಖೂಳನ ಎದೆಮೆಟ್ಟಿ

ಸೀಳಿ ಉದರಮಂ ಬಾಲನ್ನಪ್ಪಿಕೊಂಡು
ಪಾಲಿಸಿದಂಥ ಮಹ ಮೇಲಾದಮಿತಪಾದ
ಶೀಲ ಸುಜನ ತಲೆಮೇಲೆ ಹೊತ್ತಪಾದ ೨

ಬಲಿಯತುಳಿದಪಾದ ಮುನಿಯಾಗ ಒಲಿದು ಕಾಯ್ದಪಾದ
ಶಿಲೆಯನೊದೆದಪಾದ ವನಕೆ ಪೋದಪಾದ
ಖಳರಥಳಿಸಿ ಮುನಿಕುಲವ ಸಲಹಿದಪಾದ
ಜಲಧಿದಾಂಟಿ ಸ್ಥಿರಪಟ್ಟ ಭಕ್ತನಿಗೆ
ಸುಲಭದೊದಗಿಕೊಟ್ಟ ಚೆಲುವ ಸುದಯಪಾದ ೩

ದುರಿತಸಂಹಾರ ಪಾದ ಬಹು ಜರಮರಣ ನಿವಾರ ಪಾದ
ತರಳಗೆ ಸ್ಥಿರವರ ಕರುಣದಿತ್ತ ಪಾದ
ಭರದಿಗರಡನೇರಿ ಸರಸಿಗಿಳಿದ ಪಾದ
ತರುಣಿಮಣಿಯರವ್ರತ ಹರಣಗೈದ ಪಾದ
ಪುರತ್ರಯ ಸಿರಿ ಸೆರೆ ಸೂರೆಗೊಂಡ ಪಾದ ೪

ಕರುಣಮುಳ್ಳ ಪಾದ ಭಕುತರ ಮೊರೆಯ ಕೇಳ್ವ ಪಾದ
ದುರುಳ ಕುರುಪನ ಗರುವಕಂಡ ಬುವಿ
ಬೆರಳಲೊತ್ತಿ ಮದಮುರಿದ ವಿಶ್ವ ಪಾದ
ಪರಮ ತುರಗವೇರಿ ಮೆರೆವ ವಿಮಲ ಪಾದ
ವರದ ಶ್ರೀರಾಮನ ನಿರ್ಮಲಾನಂದ ಪಾದ ೫

೩೮೩

ಬಿಡಿಸೊ ಕಡು ದಯಾನಿಧಿಯೆ
ಕಡುಕಷ್ಟದುರುಲನ್ನು ಗಡನೆ ಎನ್ನಯ್ಯ ಪ

ಕಡಿವಲ್ಲದೆನಗಿನ್ನು ಕಡುದುಃಖ ಜಡಮಯ
ತೊಡರು ಸಂಸಾರಬಾಧೆ ತಡಿಲಾರೆನಭವ ೧

ತನುಬಾಧೆ ರಿಣಬಾಧೆ ವನಿತೆ ಮಕ್ಕಳ ಬಾಧೆ
ಜನನಮರಣದ ಹೇಯ ಘನಬಾಧೆಯಕಟ ೨

ಸೀಮೆಯಿಲ್ಲದೆ ಕಾಡ್ವ ಈ ಮಹಾಭವ ಕಳೆದು
ಕ್ಷೇಮದಿಂ ಪೊರೆಯೈ ಶ್ರೀರಾಮ ಪ್ರಭು ತಂದೆ ೩

೩೮೪

ಬಿನ್ನಪ ಕೇಳಯ್ಯಾ ಬಡವನ
ಮನ್ನಿಸು ಮಹರಾಯ ಪ

ಎನ್ನ ಭವಗುಣಗಳನ್ನು ಕಳೆದು ಪೊರೆ
ಸನ್ನುತಾಂಗ ಹರಿ ಉನ್ನತ ಮಹಿಮ ಅ.ಪ

ತೊಳಲಿಬಳಲಿ ಬಂದೆ ಸಂಸಾರದ್ಹೊಲಸಿ
ನೊಳಗೆ ನಿಂದೆ
ಅಳಿಯುವ ದೇಹಕೆ ಕಳವಳಿಸುವ ಮನ
ಮಲಿನತೊಳೆದು ನಿರ್ಮಲ ಮಾಡು ತಂದೆ ೧

ಹುಟ್ಟಿ ನೀ ಸಾಯ್ವುದಕೆ ಬಂದಿಲ್ಲ
ಗಟ್ಟ್ಯಾಗಿರಲಿಕ್ಕೆ
ಸಠೆ ಈ ಲೋಕವು ದಿಟವಲ್ಲೆನಗೆ
ಹುಟ್ಟಿಹುಟ್ಟಿಬಹ ಬಟ್ಟೆ ತಪ್ಪಿಸು ತಂದೆ ೨

ಇಷ್ಟುದಿನವು ಕಳೆದು ತಿಳಿಯದೆ
ಭ್ರಷ್ಟತನದಿ ಬಾಳ್ವೆ
ಇಷ್ಟು ದಿನ ದಿನಗಳ್ವ್ಯರ್ಥ ಕೆಟ್ಟಿದ್ದೆ ಸಾಕಯ್ಯ
ಶಿಷ್ಟಗುಣವಕೊಟ್ಟು ಸಲಹೊ ಶ್ರೀರಾಮ ೩

೩೮೫

ಬೆಸನೆ ನಿವೃತ್ತಿ ಮಾಡು ಪ

ಪರಮಪಾವನ ಸಂಸಾರದ ಘನ ಅ.ಪ

ಕರಿಯಪಾಲನ ಕರುಣ ಕಡುಕಮಲನಯನ
ಖರೆಯ ಸುಖಕೆ ತೊರಪಿಟ್ಟೆನ್ನ
ಕೊರಗಿಪ್ಪ ಕಿರಿಕಿರಿಯ ತರಿದು ೧

ಜನಕಜಾವರ ಜನಕ ಜಗದ ಜಯ ಸುಖಕರ
ಜನುಜನಮದಿ ಜನಿಸಿ ಬರುವ
ಜಡರನಳಿದು ಜಯವ ನೀಡಿ ೨

ಸುಜನ ಜೀವನ ಸುಖಶರಧಿ ಸುಮನರೊಂದನ
ಶುಭಕೆ ಶುಭವೆನಿಸುವ ಸುಮುಕ್ತಿ
ಸುದಯದಿತ್ತು ಸಲಹು ಶ್ರೀರಾಮ ೩

೩೮೬

ಬೇಗ ನೀಗಿಸು ದುರ್ಭೋಗದ ಸೆರೆಯ
ನಾಗಶಯನ ಬಾಗಿ ಬೇಡುವೆ ಪ

ನೀತಿಗೆಡಿಸಿ ಮಂಗನೆನಿಸಿ
ಮಾತುಮಾತಿಗೆ ಭಂಗಬಡಿಸಿ
ಪಾತಕನೆನಿಸಿ ದಂಗು ಹಿಡಿಸಿ
ಘಾತಮಾಳ್ಪ ಹೊನ್ನಿನಾಸೆ ೧

ಕುನ್ನಿಯಂದದಿ ಕುಣಿಸಿ ಕುಣಿಸಿ
ಬನ್ನ ಬಡಿಸಿ ಬನ್ನಂಗನೆನಿಸಿ
ಉನ್ನತ ಸುಖಗೆಲಿಪ ಹೇಸಿ
ಗನ್ನಗತಕ ಹೆಣ್ಣಿನಾಸಿ ೨

ಮೋಸಪಾಶದೊಳಗೆ ಮುಳುಗಿಸಿ
ದೋಷದೆಳಸಿ ಮುತಿಯಕೆಡಸಿ
ನಾಶ ಯಮನ ಕೊಲೆಗೀಡೆನಿಸಿ
ಘಾಸಿ ಮಾಳ್ಪ ಹೆಣ್ಣಿನಾಸಿ ೩

ಇಷ್ಟೆ ಜಗದ ಸುಖವಿದನು
ಎಷ್ಟುನಂಬಿ ಫಲವೇನು
ಅಷ್ಟು ಮಾಯವೆನಿಸಿ ಎನ್ನನು
ನಷ್ಟಗೊಳಿಪ ಕೆಟ್ಟಾಸಿಯನು ೪

ಮೀರಿ ಮಹ ಘೋರಬಡಿಸಿ
ಸಾರಸುಖದ ಮಾರ್ಗ ಕೆಡಸಿ
ಧೀರ ಶ್ರೀರಾಮ ನಿನ್ನ ಮರೆಸಿ
ಗಾರುಮಾಳ್ಪ ಪಾಪರಾಸಿ ೫

೩೮೭

ಬೇಗನೆ ದಯಮಾಡೊ ಸಾಗರ ನಿಲಯ
ನಾಗಶಯನ ನೀನು ಹ್ಯಾಗೆ ಮಹ ಕರುಣಾಳು ಪ

ಭಕ್ತರ ದುರ್ಭವ ಕತ್ತರಿಸದೆ ಇಡೀ
ಭಕ್ತರ ಬೆಂಬಲೆಂಬೋಕ್ತಿ ಸತ್ಯವೇನು ೧

ಸತತ ನಿನ್ನಯ ಪಾದ ನುತಿಸಲು ಕಾಯದಾದಿ
ನುತ ಪೋಷನೆಂಬ ಮಹ ಸ್ತುತಿವಾಕ್ಯ ಸರಿಯೇನೋ ೨

ಶ್ರೀಶ ಶ್ರೀರಾಮ ನಿನ್ನದಾಸರ ನೊರೆದಿಹ
ದಾಸರ ಪ್ರಾಣನೆಂಬುವಾಚ ಲೇಸೇನೆಲೋ ೩

೩೮೮

ಬೇಡಿಕೊಂಬೆಗೋಪಾಲ ಬೇಡುವೆನ್ನ ದಯ ಪ

ಮಾಡಿ ಎನ್ನೊಳು ಬೇಗ ಗಾಢ ಮಹಿಮ ವರ
ನೀಡೋ ಕೃಪಾಂಬುಧೇ ಅ.ಪ

ಮರುಳನಾಗಿ ನಾನು ತಿರುಗುವೆ ಧರೆಯೊಳು
ಸಿರಿವರ ನಿಮ್ಮಯ ಚರಣವ ಸ್ಮರಿಸದೆ

ಪರಿ ಪರಿ ನರಕಕ್ಕೆ ಗುರಿಯಾದೆ
ಮುರಹರ ಕರುಣದಿಂ ಮನ್ನಿಸಿ ಪೊರೆ ಸುರವರ ೧

ದೀನದಯಾಪರ ಜಾನಕೀ ಮನೋಹರ
ನೀನೆ ಗತಿಯೆಂದು ಧ್ಯಾನಿಸಿ ಬೇಡುವೆ
ಹೀನನ ಮಾಡದೆ ಧ್ಯಾನಿಪ ಭಕ್ತನಂ
ಮಾನದಿಂ ರಕ್ಷಿಸು ವೇಣುಧರಹರಿ ೨

ಸುರುಪರೀಶ ಹರಿ ಚರಣದಾಸರ ಮೊರೆ
ಕರುಣದಿ ಆಲಿಸಿ ಕರಪಿಡಿದು ಪೊರೆ
ನೆರೆನಂಬಿದೆ ನಿಮ್ಮ ಚರಣವ ಪರಿಪರಿ
ಪರಮಪಾವನ ಮಾಡು ಸಿರಿವರ ಶ್ರೀರಾಮ ೩

೩೮೯

ಬೇಡಿಕೊಂಬೆನೊ ಶ್ರೀಹರಿಯೆ ನಿಮ್ಮ
ಅಡಿಯ ಮರೆಯೆನೊ ಪ

ಬೇಡಿಕೊಂಬೆನಯ್ಯ ನಿಮ್ಮ ಅಡಿಯಪಿಡಿದು ಬಿಡದೆ ನಾನು
ಗಡನೆ ಎನ್ನ ಕಡುದಾರಿದ್ರ್ಯ ಕಡಿದು ಬಯಲು ಮಾಡಿ ಹರಿಯೇ ಅ.ಪ

ದೈತ್ಯಶಿಕ್ಷಕ ಚಿತ್ತಜತಾತ ಭಕ್ತರಕ್ಷಕ ಅ
ನಾಥ ಪ್ರೀತ ಮುಕ್ತಿದಾಯಕ
ಸತ್ಯಸಂಧನನ್ನು ಮಾಡಿ ಮರ್ತ್ಯಭೋಗದಾಸೆಬಿಡಿಸಿ
ನಿತ್ಯನಿರ್ಮಲಾತ್ಮ ನಿಮ್ಮ ಭಕ್ತಿಯಿತ್ತು ಸಲಹೊ ಹರಿಯೆ ೧

ಶ್ಯಾಮಸುಂದರ ಸ್ವಾಮಿ ಭಕ್ತಪ್ರೇಮ ಮಂದಿರ
ರಮಾ ಸತ್ಯಭಾಮಾ ಮನೋಹರ
ಪಾಮರತ್ವ ತಾಮಸ ದುಷ್ಕಾಮಿತಂಗಳ್ಹರಿಸಿ ನಿಮ್ಮ
ನಾಮಜಪವು ತಪದೊಳಿರಿಸಿ ಪ್ರೇಮದಿಂದ ಸಲಹೊ ಹರಿಯೆ ೨

ಪದುಮನಾಭನೆ ಸದಮಲಾಂಗ ಒದಗುಬೇಗನೆ ಈ
ವಿಧದಿ ಬೇಡ್ವೆ ಸುದಯವಂತನೆ

ಪದದ ಮಹಿಮೆಯಿಂದ ಕಲ್ಲನೊದೆದು ಸುದತಿ ಮಾಡಿದಂಥ
ಪದದ ಕೃಪೆಯನಿತ್ತು ಎನ್ನ ಮುದದಿ ಸಲಹು ಸಿರಿಯರಾಮ ೩

೩೯೦

ಬೇಡುವುದು ಕೊಡಬೇಡ ಒಡೆಯ ಶ್ರೀರಮಣ
ಕೊಡುವುದನೆ ಕೊಡುಮತ್ತೆ ಎಷ್ಟಾದರಭವ ಪ

ಅಶನವಸನಿಲ್ಲದೆ ವ್ಯಸನದಿಂ ಬಸವಳಿದು
ವಶದಪ್ಪಿ ಬಳಲಿದರೀ ವಸುಧೆಯ ಜನಕೆ
ಅಸುವನೀಗಲು ನಾನ್ವಸಗೆಟ್ಟು ಬೇಡದ
ಅಸಮಶುಚಿಮನ ನೀಡೊ ಕುಸುಮಾಕ್ಷ ಹರಿಯೆ ೧

ಅತಿಶಯದ ಬಡತನವು ಸತತ ಪೀಡಿಸಲೆನಗೆ
ಗತಿಯಿಲ್ಲದವವೆನುತ ಸತಿಸುತರು ಜರಿಲಿ
ಧೃತಿಗುಂದಿ ಮತಿಗೆಟ್ಟು ವ್ಯಥೆಬಡುವ ಸ್ಥಿತಿಯನ್ನು
ಹಿತದಿಂದ ತೊಲಗಿಸ್ಯೆ ರತಿಪತಿಪಿತನೆ ೨

ಬಿರುಕಿನೊಳು ಬಂದು ಈ ಮುರುಕು ಕಾಯದ ಇರುವು
ಹರಕೊಂಡು ಹೋಗಲಿ ಹರಿ ಕರುಣದೋರೊ
ನರಕಿಯೆನಿಸುವ ಮಹ ತಿರಕಿ ಸಂಸಾರದ
ಮರುಕವನು ಪರಿಹರಿಸೊ ಪರಕೆ ಪರತರನೆ ೩

ಊರು ನಾ ಸೇರಿರಲಿ ಅರಣ್ಯದೊಳಗಿರಲಿ
ಮೀರಿದ ರೋಗದಿಂ ಘೋರ ಬಡುತಿರಲಿ
ಆರೈಸದಾರನ್ನು ಸಾರಸಾಕ್ಷನೆ ನಿನ್ನ
ಪಾರನಾಮದ ಸವಿ ಸುಸಾರ ಎನಗಿರಲಿ ೪

ಕೊಡೋಧರ್ಮ ನಿನ್ನದಿದೆ ಬೇಡುವುದು ನನ್ನ ಧರ್ಮ
ಕೊಡುವುದಾದರೆ ನೀನೆ ಕೊಡು ಎನಗೆ ಇದನು
ಪೊಡವಿಯವರಿಗೆ ಬಾಗಿ ಬೇಡದ ಪದವಿಯನು
ಪಿಡಿವೆ ತವಪಾದ ಎನ್ನೊಡೆಯ ಶ್ರೀರಾಮ ೫

೩೯೧

ಬೇಡುವುದಿಲ್ಲನ್ಯ ನಾನೇನು ನಿನ್ನ
ನೋಡಿ ಕರುಣದಿ ಬಾರೋ ಭಜಕನ ತ್ರಾಣ ಪ

ಬೇಡುತಕ್ಕುದನೆ ನಾ ಬೇಡುವೆನೆಲೆ ಸ್ವಾಮಿ
ನೀಡುತಕ್ಕುದನೆ ನೀ ನೀಡಿ ಕಾಪಾಡಯ್ಯ
ಮೃಡಮಿತ್ರ ಜಡಜಾಕ್ಷ ಒಡೆಯ ವೈಕುಂಠ ಅ.ಪ

ಎನ್ನಮನೆ ಬಾಗಿಲವ ಕಾಯೆನ್ನದಿಲ್ಲ
ಎನ್ನುಳಿಸು ತಂದೆಯನು ತರಿದೆನ್ನದಿಲ್ಲ
ಅಣ್ಣನ್ನ ಕೊಲ್ಲಿರಾಜ್ಯಕೊಡು ಎನ್ನದಿಲ್ಲ
ಎನ್ನ ಮನೆಯಾಳಾಗಿ ದುಡಿಯೆನ್ನದಿಲ್ಲ
ನಿನ್ನ ದಾಸರ ಸಂಗವನ್ನು ಕರುಣಿಸಿ
ಎನ್ನನನ್ಯರಿಗೆ ಬಾಗಿಸೆ ಮನ್ನಿಸಿ ಸಲಹೆಂಬೆ
ಭಿನ್ನವೇನಿದರೊಳು ಉನ್ನತಮಹಿಮ ೧

ಲಲನೆಯಳ ಕೊಡಿಸಣ್ಣನ್ನೊಡಿದೆನ್ನದಿಲ್ಲ
ಬಲವಾಗೆನ್ನಯ್ಯ ಬಂಧುಗಳ ನಾಶಕೆನ್ನೊದಿಲ್ಲ
ಬಲಿದೆನ್ನಿಂ ತವ ಭಕ್ತ ನೋಡಿಸೆನ್ನದಿಲ್ಲ
ಸುಲಭದೆನ್ನಿಂದ್ದೆಡಮುರಿ ಕಟ್ಟಿಸಿಕ್ಕೆನ್ನದಿಲ್ಲ
ಎಲೆದೇವ ತವಪಾದನಳಿನ ನಿರ್ಮಲಧ್ಯಾನ
ನಿಲಿಸು ಸ್ಥಿರವಾಗೆನ್ನ ನಾಲಗೆಯೊಳನುದಿನ
ಇಳೆಭೋಗದಳಸದೆ ಸಲೆ ಸುಖದಿ ಸಲಹೆಂಬೆ ೨

ಭಿನ್ನವಿಲ್ಲದೆ ಬಾ ನೀ ಕರೆದಲ್ಲಿಗೆನೆನು
ಎನ್ನ ಹೊಡೆತದ ಪೆಟ್ಟು ಸೈರಿಸೆಂದೆನೆನು
ಉನ್ನತ ಕುಲಗೆಡು ಎನ್ನೊಳುಂಡೆನೆನು
ಅನ್ಯಮಾತೊಂದು ನಿನ್ನ ಬಯಸಿ ಬೇಡೆನು ನಾನು
ಅನ್ಯರನು ಬೇಡದಂತುನ್ನತ ಪದ ನೀಡಿ
ನಿನ್ನ ಮೂರುತಿಯೆನ್ನ ಕಣ್ಣೊಳು ನಿಲ್ಲಿಸಿ
ಬನ್ನಬಡಿಸದೆ ಕಾಯೊ ಎನ್ನಯ ಶ್ರೀರಾಮ ೩

೩೯೨

ಬೇಡುವೆನು ಉಡಿಯೊಡ್ಡಿ ನಾ ನಿನ್ನ ಭಜಿಸಿ
ಮಾಡುದಯ ನಿನ್ನವರ ಒಡನಾಡ ಹರಿಯೆ ಪ

ಇಡುವ್ಯೋ ಸಂಸಾರದಿ ಕೊಡು ಬಿಡದೆ ನಿರ್ಮೋಹ
ನಡೆಸುವೆಯೊ ಹಿರೇತನದಿ ನುಡಿಸದಿರು ಪಕ್ಷ
ಬಡತನದಿ ಇಡುವೆಯೋ ಕಡುಧೈರ್ಯ ಕೃಪೆಮಾಡು
ಸಡಗರದ ಸಿರಿಕೊಡುವ್ಯೋ ಕಡುಶಾಂತಿ ನೀಡು ೧

ಬೇನೆಯೊಳು ನೂಕುವೆಯೋ ತ್ರಾಣಕೊಡು ತಡೆವ ಬಹು
ಮಾನ ಕೊಡುವೆಯೋ ಮೊದಲು ನಾನೆಂಬುದ್ಧರಿಸು
ಕಾನನದಿ ತಿರುಗಿಸುವಿಯೋ ಜ್ಞಾನಪಾಲಿಸು ಅಪ
ಮಾನವಿತ್ತರೆ ನಿನ್ನ ಧ್ಯಾನದೊಳಗಿರಿಸು ೨

ತಿರಿದುಣಿಸಿ ಬದುಕಿಸುವ್ಯೋ ತೋರಿಸು ಜಗದಭಿಮಾನ
ಪರಿಪಕ್ವಾನ್ನುಣಿಸುವೆಯೋ ಪರಪಂಕ್ತಿ ಬಿಡಿಸು
ದೊರೆತನವ ಕರುಣಿಸುವ್ಯೋ ಕರುಣಗುಣ ವರ ನೀಡು
ನರರೊಳಗೆ ಆಡಿಸುವ್ಯೋ ಮರೆಸು ಅನ್ಯತವ ೩

ಶರಣರ್ವರ್ತನದೆನ್ನ ನಿರಿಸುವೆಯೊ ಅನುಗಾಲ
ನಿರುತು ಧರ್ಮಗಲದ ಸ್ಥಿರಬುದ್ಧಿ ನೀಡು
ಮರೆವೆ ಮಾಯವ ತರಿದು ಅರಿವಿನೊಳಿರಿಸುವೆಯೊ
ಹರಿಶರಣರಹುದೆನುವ ವರ್ತನವ ನೀಡು ೪

ಹರಣಪೋದರು ನಿಮ್ಮ ಚರಣಕ್ಕೆರಗಿದ ಶಿರವ
ಪರರಿಗೆರಗಿಸದಿರು ಶರಣಾಗತಪ್ರೇಮಿ
ಜರಾಮರಣ ಪರಿಹರಿಸಿ ವರಮುಕ್ತಿ ಪಾಲಿಸಿ
ವರದ ಶ್ರೀರಾಮ ನಿಮ್ಮ ಚರಣದಾಸೆನಿಸು ೫

೩೯೩

ಬಂದದ್ದನುಭವ ಮಾಡ್ವೆ ಕಂದನಾಗಿರುವೆ
ತಂದೆ ನಿನ್ನಯ ದಯವೊಂದಿರಲಿ ಹರಿಯೆ ಪ

ಮಂದಿ ಮಕ್ಕಳು ಎನ್ನ ಕುಂದಿಟ್ಟು ಜರೆಯಲಿ
ಬಂಧು ಬಾಂಧವರೆಲ್ಲ ನಿಂದಿಸಿ ನುಡಿಲಿ
ಬಂಧನವು ಬಿಡರಿರಲಿ ಎಂದೆಂದು ಮರೆಯದಂತೆ
ಇಂದಿರೇಶ ನಿಮ್ಮ ಧ್ಯಾನವೊಂದೇ ಎನಗಿರಲಿ ೧

ಭೂಪತಿಗಳೆನ್ನೊಳ್ಕೋಪಮಂ ತಾಳಲಿ
ತಾಪಬಡಿಸಲಿ ಮಹಪಾಪಿವನೆನುತ
ತಾಪತ್ರಯ ಬಿಡದಿರಲಿ ಪಾಪಲೋಪನೆ ಜಗ
ದ್ವ್ಯಾಪಕನೆ ನಿನ್ನ ಧ್ಯಾಸಪರೂಪ ಎನಗಿರಲಿ ೨

ಕಂಡಕಂಡಂತೆ ಜನರು ಭಂಡನೆಂದೆನ್ನಲಿ
ತಂಡತಂಡದಿ ಕಷ್ಟ ಅಂಡಲೆದು ಬರಲಿ
ಹೆಂಡರು ಸೇರದೆ ಗಂಡನೆಲ್ಲೆಂದೆನಲಿ
ಪಂಢರೀಶ ನಿನ್ನ ಪದೆನ್ನ ಮಂಡೆಮೇಲಿರಲಿ ೩

ಎತ್ತ ಪೋದರು ಜನರು ಹತ್ರ ಬಡಿಯಲಿ ಎನಗೆ
ವಿತ್ತಕೊಟ್ಟೊಡೆಯರು ನಿತ್ತರಿಸದೊದಿಲಿ
ಮುತ್ತಿಕೊಂಡ್ವೈರಿಗಳು ಕುತ್ತಿಗೆ ಕೊಯ್ಯಲಿ
ಚಿತ್ತಜಪಿತನಿನ್ನ ಭಕ್ತ್ಯೊಂದೆನಗಿರಲಿ ೪

ಪೀಡಿಸಲಿ ಬಡತನವು ಕಾಡಿಸಲಿ ದಾರಿದ್ರ್ಯ
ಓಡಿಸಲಿ ಪೊಡವಿಪರು ನಾಡ ಬಿಟ್ಟೆನ್ನ
ನೋಡಲಿ ಮುನಿದೆನ್ನ ನಾಡದೈವಗಳೆಲ್ಲ
ಬೇಡೆನೆ ಶ್ರೀರಾಮ ನಿನ್ನಡಿ ಬಲೊಂದೆನಗಿರಲಿ ೫

೩೯೪

ಬಂದೆನೊ ರಂಗ ಬಂದೆನೊ
ಹಿಂದಿನ ಸುಕೃತದಿ ತಂದೆ ನಿನ್ನ್ನ್ಹುಡುಕುತ ಪ

ಹಲವು ಜನುಮಜನುಮಗಳಲಿ ತಿರುತಿರುಗಿ ತೊ
ಳಲಿತೊಳಲಿ ಬಂದು ಬಳಲಿ ಮರುಗಿ
ಹೊಲಸಿನ ಮಲಮೂತ್ರ ಕುಣಿಲಿ ಕೊರಗಿ
ಎಲುವೊಂದು ಗಿರಿಯೋಪಾದಿಯಲಿ ಆಹ
ಇಳೆಯೊಳು ಬಿದ್ದಿಷ್ಟವು ಬಲು ಬಲು ಹೊಲೆಬವಣೆ
ಯಲಿ ನೋಯಲಾರದೆ ಕಳವಳಗೊಳುತ ೧

ಜಡಸದೃಸ ಶರೀರಗಳ್ಹೊತ್ತು ಬಿಡದೆ
ಎಡರು ತೊಡರಿನೊಳಗೆ ಬೆರೆತು
ಕೆಡುವ ಪೊಡವಿಸುಖಕೆ ಮನವಿತ್ತು
ದೃಢವನ್ಹಿಡಿಯದೆ ಮರೆವಿನಿಂ ಸಂಪತ್ತು ಆಹ
ಒಡನೊಡನ್ಹುಟ್ಟುಟ್ಟಿ ಕಡುಕಷ್ಟಬಡುವಂಥ
ಸುಡಗಿಯ ತಡಿಯದೆ ಗಡಗಡ ನಡುಗತ್ತ ೨

ನೋಡೆಲೊ ಕರುಣಾಂತರಂಗ ದಯವ
ಮಾಡೆಲೊ ಸುಗುಣ ಶುಭಾಂಗ ಅಭಯ
ನೀಡೆಲೊ ನಿರುತ ನೀಲಾಂಗ ದುರ್ಭವ
ಕಡಿಯೆಲೊ ಭವಭಯಭಂಗ ಆಹ
ರೂಢಿ ತೊಡರು ಕಡೆಮಾಡಿ ಎನಗೆ ಮುಕ್ತಿ
ನೀಡಿ ಸಲಹು ಎಂದು ಬೇಡುತ ಶ್ರೀರಾಮ ೩

೩೯೫

ಭಕ್ತರ ಸುರಧೇನು ಶಕ್ತರ ಬಂಧು ನೀ ಪ

ಭಕ್ತರ ಮೊರೆ ಕೇಳೋ ಲಕ್ಷ್ಮೀಪ್ರಿಯ ರಮಣ ಅ.ಪ

ಪ್ರಾಚೀನ ಹಿರಿಯರ ಯೋಚಿಸಿ ನೋಡಲು
ಪಾಂಚಾಲ್ಯ ಕಂಟಕ ವಿಮೋಚಿಸಿ ಕಾಯ್ದಯ್ಯ ೧

ಕರಿರಾಜ ಧ್ರುವಮುನಿ ವರ ವಿಭೀಷಣರನ್ನು
ಪರಮಪದವನಿತ್ತು ಕರುಣದಿ ಪೊರೆದಯ್ಯಾ ೨

ದೀನನೋಳ್ದಯವಾಗಿ ಹೀನಸ್ಥಿತಿ ಪರಿಹರಿಸೊ
ಧ್ಯಾನಿಸುವರಿಗತಿ ಸುಲಭನೆ ಶ್ರೀರಾಮ ೩

೩೯೬

ಭಜಿಪ ಭಕ್ತರ ಭಾವ ಪರಿಪೂರ್ಣ ಬಾಗಿ
ಭಜಿಸುವೆ ಬಾರೊ ದಯಾಸದನ ಪ

ಪಾದಸೇವೆಯ ಕರುಣಿಸಿ ಪರ
ಸಾಧನದ ಮಹದ್ಹಾದಿ ತೋರಿಸಿ
ಬಾಧಿಸುವ ಭವಬಾಧೆ ತೊಲಗಿಸಿ
ವೇದವಿದ್ಯವ ಬೋಧಿಸಭವ ೧

ಮರ್ತ್ಯಗುಣಗಳ ಮರೆಸಿ ಎನ್ನ
ಮಿಥ್ಯನೆನಿಸದೆ ನಿತ್ಯ ನಿಮ್ಮ
ಗುರ್ತುತೋರಿಪ ತತ್ವದರ್ಥವ
ತುರ್ತುಪಾಲಿಸು ಕರ್ತುವೇದ ೨

ಭಕ್ತವತ್ಸಲನೆಂಬ ಬಿರುದು
ಸತ್ಯವಾಗಿ ಹೊತ್ತುಕೊಂಡಿಹಿ
ಭಕ್ತನಿಷ್ಟವ ಚಿತ್ತೈಸೊಡನೆ
ಮುಕ್ತಿಪದ ನೀಡಾತ್ಮರಾಮ ೩

೩೯೭

ಭಯ ನಿವಾರಿಸೋ ಜಯ ಶ್ರೀ ಹರಿಯೆ
ಭಯ ನಿವಾರಿಸಯ್ಯ ದಯದಿ ಭಯ ನಿವಾರನೆನ್ನ ಪ

ಮರವೆಯೆಂಬುವ ಇರುಳಿನಲ್ಲಿ ದುರಿತಯೆಂಬುವ ಗಿರಿಯಲ್ಲಿ
ಪರನಿಂದೆಂಬುವ ಶರಧಿಯಲ್ಲಿ
ಕರುಣವಿಲ್ಲದ ಕಾಯದುರ್ಗದರಣ್ಯಕಂಜಿ ಕೊರುಗುತಿರುವೆ
ಹರಿಯೆ ನಿಮ್ಮ ಸ್ಮರಣವೆಂಬ ನಿರುತ ಧೈರ್ಯ ಕರುಣಿಸಭವ ೧

ವ್ಯಸನವೆಂಬ ಮುಸುಕಿನಿಂದ ಪಿಸುಣತೆಂಬುವ ದಸಕಿನಿಂದ
ಪುಸಿಯುಯೆಂಬುವ ಮಿಸುನಿಯಿಂದ
ವಿಷಯದಾಸೆ ತಸ್ಕರಗಂಜಿ ದೆಸೆಗೆ ಬಾಯ ಬಿಡುವೆನಯ್ಯ
ಅಸಮಮಹಿಮನ್ವ ಚಶ್ರವಣೆಂಬೆಸೆವ ಧೈರ್ಯ ಕರುಣಿಸಭವ ೨

ಆರು ಹುಲಿಗಳ ಘೋರಿಸುವ ಮೂರು ಮರಿಗಳ ಹಾರುತಿರುವ
ಮೂರೇಳು ನಾಯ್ಗಳ ಘೋರತಾಪ ಸೈರಿಸದೆ
ಸಾರಸಾಕ್ಷ ಮರೆಯ ಹೊಕ್ಕೆ ಶ್ರೀರಾಮ ನಿಮ್ಮ ಚರಣ ಭಕ್ತೆಂ
ಬ್ವೀರತನವ ಕರುಣಿಸಭವ ೩

೩೯೮

ಭವದ ಬಂಧವಿನ್ನೆನಗೆ ಯಾಕೆ
ಭವಹರಣ ನಾಮ ಎನ್ನ ಜಿಹ್ವೆಯೊಳಗೆ ಇರುತಿರಲು ಪ

ಎನಗೆ ದುರಿತ ಭೀತಿ ಯಾಕೆ
ಎನಗೆ ಕರ್ಮದ ಲೇಪವ್ಯಾಕೆ
ಎನಗೆ ಕುಲ ಚಲಗಳ್ಯಾಕೆ
ಎನಗೆ ಮಡಿಯು ಮೈಲಿಗ್ಯಾಕೆ
ಅನುದಿನದಿ ಪಾವನಾತ್ಮಕನ ನೆನವು
ಎನ್ನ ಮನದೊಳಿರಲು ೧

ನಷ್ಟ ಪ್ರಪಂಚಂಟಿನ್ಯಾತಹೆ
ಬಿಟ್ಟ ಬಡತನ ತಂತಿನಗ್ಯಾಕೆ
ಹುಟ್ಟು ಸಾವು ಕಷ್ಟ ಮತ್ಯಾಕೆ
ಕೆಟ್ಟ ಯಮನ ಅಂಜಿಕಿನ್ಯಾಕೆ

ಸೃಷ್ಟಿ ಕರ್ತನ ಶಿಷ್ಟಪಾದ
ನಿಷ್ಠೆಯೆನ್ನೊಳು ಗಟ್ಟಿಯಿರಲು ೨

ನಿತ್ಯ ನೇಮ ಪೂಜೆ ಯಾಕೊ
ಮತ್ತೆ ಜಪ ತಪವು ಯಾಕೊ
ನಿತ್ಯ ನಿರ್ಮಲಾನಂದ ರೂಪಿ
ಸತ್ತು ಚಿತ್ತನಂದದಾತ
ಮುಕ್ತಿದಾಯಕ ಶ್ರೀರಾಮ ಪಾದ
ಭಕ್ತನಾಗಿ ನಾ ಮೆರೆಯುತಿರಲು ೩

೩೯೯

ಭವಬಾಧೆ ಕಳೆಯೊ ಭವಹರ ರಂಗ
ದಿವನಿಶಿ ತವಪಾದ ದಿವ್ಯಧ್ಯಾನವನಿತ್ತು ಪ

ವಿಷಯಲಂಟಪನಾಗಿ ವ್ಯಸನ ಕೂಪದಿ ಬಿದ್ದು
ಮಸಣ ಬುದ್ಧಿಯಿಂ ಕೆಡುವ ಶಿಶುವನುಲಕ್ಷಿಸಿ ೧

ಪುಸಿಯ ಸಂಸಾರವ ವಿಷಮವೆಂದರಿಯದೆ
ದೆಸೆಗೆಟ್ಟು ಬಳಲುವ ದಾಸನೋಳ್ದಯವಿಟ್ಟು ೨

ಸುಜನರೊಲುಮೆಯಿತ್ತು ಗಜಿಬಿಜಿ ತೊಲಗಿಸಿ
ನಿಜಜ್ಞಾನ ದಯಮಾಡು ಸುಜನಾರ್ಯ ಶ್ರೀರಾಮ ೩

೪೦೦

ಭಾರ ನಿನ್ನದೊ ಮಾರಜನಕ ಭಾರ ನಿನ್ನದೊ ಪ

ಭಾರ ನಿನ್ನದಯ್ಯ ಹರಿಯೆ ಘೋರ ಈ ಸಂ
ಸಾರದೊಳಗೆ ಪಾರುಮಾಡಿ ಪೊರೆವುದೆನ್ನ ಅ.ಪ

ಕರುಣಾ ನಿಲಯನೆಂದು ನಿನ್ನ
ಮೊರೆಯ ಹೊಕ್ಕು ಬೇಡಿಕೊಂಬೆ

ನರನ ಭವದಗುಣಗಳಳಿದು ಹರಿಯೆ ನಿಮ್ಮ
ಚರಣಸ್ಮರಣೆ ಕರುಣದಿಂದ ನೀಡಿ
ಪೊರೆಯೊ ಶರಣಜನರ ಅಸಹಾಯಕರ ೧

ಶ್ರೀಶ ಶ್ರೀನಿವಾಸ ನೀನೆ
ದಾಸನ ಮನದಾಸೆಯ ಪೂರೈಸುವ
ದಾತನೆಂದು ನಿನ್ನ ದಾಸತ್ವ ಬೇಡ್ವೆ ದೋಷದೂರ
ಘಾಸಿಮಾಡದೆ ಹೇಸಿ ಭವದಿ
ಪೋಷಿಸಯ್ಯ ಬೇಗ ಈಶ ೨

ಚಿಂತೆ ಭ್ರಾಂತಿ ದೂರಮಾಡಿ
ಸಂತಸ ಸುಖವನ್ನು ನೀಡಿ
ಕಂತುಜನಕ ನಿಮ್ಮ ಭಕ್ತಿ ಅಂತ್ಯದಲ್ಲಿ ನಿಲ್ಲಿಸಿ ಎ
ನ್ನಂತರಂಗದೊಳಗೆ ತೋರೊ
ಸಂತರೊಡೆಯ ಸೀತಾರಾಮ ೩

೪೦೧

ಭಿಕ್ಷೆ ನೀಡೆನಗೆ ಪಕ್ಷಿಗಮನ ನಿಮ್ಮ ನಾಮ
ಭಿಕ್ಷೆನೀಡಿ ರಕ್ಷಿಸೆನ್ನ ಮೋಕ್ಷಪದಕಧ್ಯಕ್ಷ ನಾಮ ಪ

ಅಂಬರೀಷನ ಕಾಯ್ದ ನಾಮ
ಇಂಬು ಇವಗಿತ್ತ ನಾಮ
ಶಂಭು ಕುಣಿದು ಕುಣಿದು ಪೊಗಳ್ವ
ಕುಂಭಿನಿಯೊಳು ಮೆರೆವ ನಾಮ ೧

ಕರಿಯ ಕಷ್ಟಕ್ಕಾದ ನಾಮ
ತರಳನ್ನೆತ್ತಿ ಪೊರೆದ ನಾಮ
ಪರಮಪಾವನೆ ಪರಮೇಶ್ವರಿ
ಅರಸಿ ಶಿರವದೂಗ್ವ ನಾಮ ೨

ಯಮನ ಬಾಧೆ ಗೆಲಿಪ ನಾಮ
ಸುಮನಸರೊಳಾಡಿಸುವ ನಾಮ
ವಿಮಲರೂಪ ಅಮಿತ ಶ್ರೀರಾಮ
ನಿಮ್ಮಾನಂದ ನಾಮ ೩

೪೦೨

ಭೋ ಶುಭಕಾಯ ಕೇಶವರಾಯ
ದಾಸರ ಪ್ರಿಯ ಶೇಷಶಯ್ಯ ಪ

ಹೇಸಿಕೆ ಮಾಯ ಮೋಸದ ಬಲೆಯ
ನಾಶನಗೊಳಿಸಿ ಪೋಷಿಸೆನ್ನಯ್ಯ ಅ.ಪ

ನಲಿಪ ಸಂಸಾರ ವಿಷಯದ ಘೋರ
ಪುಸಿಯೆಂದೆನಿಸಿ ನಿಜಧ್ಯಾಸವ ಕರುಣಿಸೊ ೧

ಅಜ್ಞಾನವಳಿಕಿಸಿ ಸೂಜ್ಞರಸಂಗದಿ
ಮಗ್ನನೆನಿಸಿ ನಿರ್ವಿಘ್ನದಿ ರಕ್ಷಿಸೊ ೨

ಸಾವ ಹುಟ್ಟುವ ಮಹನೋವ ಗೆಲಿಸಿ ಜಗ
ಜೀವ ಶ್ರೀರಾಮ ತವಸೇವಕನೆನಿಸೊ ೩

೪೦೩

ಭಂಡನಾದೆ ಸಂಸಾರಕೊಂಡದೊಳಗೆ ಬಿದ್ದು
ಕಂಡುಕಾಣದಂತಿರುವರೇ ಪುಂಡರೀಕನಯನ ಪ

ಅಶನ ವಸನಕ್ಕಾಗಿ ದೆಸೆಗೆಟ್ಟು ಬಾಯ್ಬಿಡುತ
ಅಸುವ ಕರದೊಳ್ಹಿಡಿದು ವಸುಧೆಯ ಜನರ
ಬಸವಳಿದು ಬೇಡಲು ಕಣ್ಣೆಸಿದು ಬೈಯಲು ತಲೆಬಾ
ಗಿಸಿಕೊಂಡು ನಿಂದೆ ಹರಿ ಉಸುರಲಳವಲ್ಲ ೧

ರೊಕ್ಕದ ಆಸೆಗಾಗಿಕ್ಕೆಲದ ಜನರನ್ನು
ತರ್ಕಿಸದೆ ದೈನ್ಯದಿಂ ಚಿಕ್ಕಮಗ ನಾ ಎನುತ
ಫಕ್ಕನೆ ಕೈತಾಳನಿಕ್ಕುವರು ನಗಲು ಮಹ
ದುಃಖದಿಂ ತಿರುಗಿದೆನು ಬಿಕ್ಕಿಬಿಕ್ಕಳುತ ೨

* * * ಯರ ಮೋಹಿಸಿ ದಂಡಿಸಿದೆ ಮನೆಸತಿಯ
ಕಂಡವರು ತಿದ್ದಿದರು ಚಂಡಿತನವಿಡದೆ
ಕಂಡವರ ಅರ್ಥವನು ಮನೆಸೇರಿಸಿ
ಬಂಡೆದ್ದು ಜನರೊಳಗೆ ಮಂಡೆಯೆತ್ತದೆಹೋದೆ ೩

ತಪದಿಂದ ಹರಿಪಾದ ಜಪಿಸುವುದ ಮರೆದು ನಾ
ಕೃಪಣತ್ವಜನಸೇವೆ ಅಪರೂಪಗೈದೆ
ಚಪಲತ್ವತನದಿಂದ ಅಪಹರಿಸಿ ಪರರರ್ಥ
ಸುಪಥಕ್ಕೆ ದೂರಾಗಿ ಅಪರಾಧಿಯಾದೆ ೪

ಕದ್ದು ತಿಂದೆ ನೆರಹೊರೆಯ ಬಿದ್ದೆ ದುರ್ಬವಣೆಯೊಳು
ಬದ್ಧನಾಗಿ ಧರೆಮೇಲೆ ಹದ್ದಿನಂತೆ ಬಾಳ್ದೆ
ತಿದ್ದಿ ನೀ ಎನ್ನ ತಪ್ಪುಬುದ್ಧಿಯನು ಕಲಿಸೆನ್ನೊ
ಳಿದ್ದು ಪೊರೆ ದಯದಿಂದ ಮುದ್ದು ಶ್ರೀರಾಮ ೫

೪೦೪

ಭ್ರಮೆ ಬೇಡಲೆ ಮನ ತಿಳಿ ಜವದಿ ಹರಿ
ವಿಮಲಚರಣಕಮಲ್ಪಿಡಿ ದೃಢದಿ ಪ

ಸುಮನಸರಗೂಡಿ ನೀ ಸುಮಶರ ಪಿತನಂ
ಸಮಯ ತಿಳಿದು ಭಜಿಸನುದಿನದಿ ಅ.ಪ

ಸಾರವಿಲ್ಲದ ಸಂಸಾರ ಇದು
ಮೇರೆನಿಲ್ಲದ ಸಾಗರ
ಆರಿಗೆ ನಿಲುಕದೆ ಮೂರುಲೋಕವದ್ದಿ
ಮೀರಿಬಡಿಸುವುದು ಬಲುಘೋರ ೧

ಹೆಂಡರು ಮಕ್ಕಳೆಂದು ನಂಬಿದಿ ನಿನ್ನ
ಹಿಂಡಿನುಂಗುವುದು ಅರಿಯದ್ಹೋದಿ
ಕಂಡಕಂಡವರಿಗೆ ಮಂಡೆಬಾಗಿಸಿ ನಿನ್ನ
ದಂಡನೆಗೆಳಪುದು ಅಂತ್ಯದಿ ೨

ಕಾಕುಜನರ ಸಂಗ್ಹಿಡಿದಿದ್ದಿ ನೀ
ಲೋಕನೆಚ್ಚಿ ನೂಕುನುಗ್ಗಾದಿ
ಲೋಕಗೆಲಿದು ಭವನೂಕಿ ನಲಿಯುವರ
ಸಾಕಾರಗಳಿಸದೆ ಕೆಟ್ಹೋದಿ ೩

ಧರೆಯ ಭೋಗವನು ಸ್ಥಿರ ತಿಳಿದಿ ನೀ
ಹರಿದು ಹೋಗುವದಕೊಲಿತಿದ್ದಿ
ಮರೆಮೋಸದಿ ಬಿದ್ದರು ಮೈಯಮರೆದು
ಸ್ಥಿರಸುಖ ಪಡೆಯದೆ ದಿನಗಳೆದಿ ೪

ಭೂಮಿಸುಖಾರಿಗೆ ನಿಜವಲ್ಲ ಇದು
ಕಾಮಿಸಬೇಡೆಲೊ ಶೂಲ
ಕಾಮಿತಗಳನಿತ್ತು ಕ್ಷೇಮದಿ ಸಲಹುವ
ಸ್ವಾಮಿ ಶ್ರೀರಾಮನ ತಿಳಿಮಿಗಿಲ ೫

೪೦೫

ಮಟಮಾಯ ಮಟಮಾಯ
ದಿಟ್ಟಿಸಿ ನೋಡೆಲೊ ಪ

ದುಷ್ಟ ಸಂಸಾರವ ಕುಟ್ಟಿಕುಟ್ಟಿಕೊಂ
ದೆಷ್ಟು ಮಾಡಿದರು ಕಟ್ಟಕಡೆಗೆಯಿದು ಅ.ಪ

ಕೋಟಿಧನವ ನೀಟಾಗಿ ಗಳಿಸಲೇನು
ಸಾಟಿಯಿಲ್ಲದ ಸಂಪತ್ತು ಇರ್ದರೇನು
ಕಾಟುಮಾಡಿ ಯಮಗೂಟ ಒದಗಲಾಗ
ದಾಟಿ ಹೋಗಬೇಕು ಅಷ್ಟು ಸಂಪದ ಬಿಟ್ಟು ೧

ಆನೆಕುದುರೆ ಒಂಟೆ ವಾಹನವಿರಲು ಏನು
ನಾನಾಸಿರಿಯು ಮಾನ್ಯ ಮಿರಾಸಿಗಿರಲೇನು
ತ್ರಾಣಗುಂಡಿಸಿ ಯಮ ಪ್ರಾಣ ಸೆಳೆಯುವಾಗ
ನಾನಾಭಾಗ್ಯ ಬಿಟ್ಟು ತಾನೆ ಹೋಗಬೇಕು ೨

ಮಾನಪಾನದಿ ತಾನೆ ಹಿರಿಯನೆನಿಸಲೇನು
ನಾನಾಪೊಡವಿಗೋರ್ವ ದಣಿಯಾಗಾಳಿದರೇನು
ಪ್ರಾಣೇಶ ಶ್ರೀರಾಮಧ್ಯಾನವೊಂದಿಲ್ಲದಿರೆ
ಏನು ಗಳಿಸಿದ್ದೆಲ್ಲ ಹಾನಿಯೆನಿಪುದೆಲೋ ೩

೪೦೬

ಮತಿಗೆಟ್ಟೆ ಭವತಾಪವ್ಯಥೆಯಿಂದ ನಾನು
ಸುತನರಿಕೆ ಹಿತದಿಂದ ಕೇಳು ಮಮಪಿತನೆ ಪ

ವಿಧಿವಶದಿ ಸಿಲ್ಕಿ ನಾ ಉದಿಸಿ ಈ ಬುವಿಯೊಳಗೆ
ಸದಮಲನೆ ತವಸ್ಮರಣವಿಧಿಯ ತಿಳಿಯದಲೆ
ಉದಯದೇಳುತ ನಾನು ಅಧಮ ಉದರಕ್ಕಾಗಿ
ವದನತೆರೆದನ್ಯರನು ಹುದುಗಿ ಬೇಡುತಲಿ ೧

ಹಸಿತೃಷೆಯ ತಡೆಯದೆ ಪುಸಿಯಾಡಿ ದಿನಗಳೆದೆ
ನಿಶೆಯೆಲ್ಲ ಸಂಸಾರವ್ಯಸನದೊಳು ಕಳೆದೆ
ವಸನ ಒಡವೆಗೆ ಮೆಚ್ಚಿ ವಸುಧೆಯೊಳ್ತಿರುತಿರುಗಿ
ಪುಸಿಯ ಮಾನವರನ್ನು ರಸನೆಯಿಂದ್ಹೊಗಳಿ ೨

ವಾನರಗೆ ವಶನಾದಿ ದಾನವನ ರಕ್ಷಿಸಿದಿ
ಮಾನವಗೆ ಆಳಾದಿ ದೀನದಯಾಸಿಂಧು
ನೀನೆ ಗತಿಯೆನಗಿನ್ನು ಜ್ಞಾನಬೋಧಿಸಿ ಕಾಯೊ
ಹೀನಭವ ಗೆಲಿಸಿ ಮಮಪ್ರಾಣ ಶ್ರೀರಾಮ ೩

೪೦೭

ಮತ್ತೆ ಈ ಭವ ಎತ್ತಲಾರೆ ಚಿತ್ತಜಪಿತನೆ
ನಿತ್ಯ ಮುಕ್ತಿಸುಖವ ನೀಡೊ ಪ

ಮರ್ತು ಇಂದಿನತನಕ ನಿಮ್ಮ
ನಿತ್ಯನಿರ್ಮಲಪಾದ ಎಂ
ಬತ್ತುನಾಲ್ಕುಲಕ್ಷ ಜನುಮ
ಗುರ್ತಿಲ್ಲದೆ ತಾಳಿದ್ದೆ ಸಾಕೊ ೧

ಉತ್ತಮಸಂಗ ಮರೆದು ಮದೋ
ನ್ಮತ್ತನಾಗಿ ಚರಿಸಿ ಮತ್ತೆ
ಕತ್ತೆಯಂತೆ ಇಹ್ಯಕೆ ಪರಕೆ
ಸುತ್ತಿ ಸುತ್ತಿ ಬೇಸತ್ತದ್ದೆ ಸಾಕೊ ೨

ಚಿತ್ತಭ್ರಾಂತನಾಗಿ ಸತತ
ಸತ್ಯಮಾರ್ಗದಪ್ಪಿ ಕೆಡುವ
ಭಕ್ತನ ತಪ್ಪುಕ್ಷಮಿಸಿ ಕರುಣ
ದೆತ್ತಿ ಸಲಹೊ ಸಿರಿಯರಾಮ ೩

೪೦೮

ಮನಕೆ ಬೇಸರ ಬೇಡ ಮಣಿವೆ ಮಾಧವನೆ
ಕ್ಷಣಕೊಂದು ಬೇಡುವ ಈ ಪಾಮರನೆಂದೆನುತ ಪ

ತಂದೆಯನು ಕೊಲ್ಲೆನಲು ತಕ್ಕ ಶಿಕ್ಷೆಯ ಮಾಡು
ಕೊಂದು ಅಣ್ಣನ ರಾಜ್ಯ ಕೊಡು ಎನಗೆ ಎನಲು
ಕುಂದಿಟ್ಟು ಮನ್ನಿಸದಿರಲ್ಲದೆ ಎನ್ನ
ಬಂಧನದ ಬಲೆಯನ್ನು ಬಯಲೆನಿಸು ಎಂಬೆ ೧

ಹೆಣ್ಣಾಗಿ ಬಾರೆನಲು ಕಣ್ಣೆತ್ತಿ ನೋಡದಿರು
ಎನ್ನ ಮನೆಯ ಕುದುರೆಯನು ಕಾಯಲು

ಗನ್ನಗತಕನೆಂದು ಮನ್ನಿಸಿ ಸಲಹದಿರಲು
ಅನ್ಯ ಬೇಡಿದೆನೇನು ಸಂತಸ ನೀಡೆಂಬೆ ೨

ನಾಯಾಗಿ ಬಂದು ನಿನ್ನ ಲತ್ತೆತಿನುಯೆಂದೆನಲು
ಕಾಯದಿರು ಕರುಣದಿ ದೇವದೇವೇಶ
ಆವಾವ ಕಾಲದಿ ಬಾಯಬಿಡಿಸದಿರಲ್ಲ
ಮಾಯ ಮೋಹಿಗಳ ಬಳಿಯೆಂದು ಬೇಡುವೆನು ೩

ನೀರುಕೊಟ್ಟೆನ್ನ ಕರದಿಂದ್ದೊಡಿಸಿಕೊಯೆನಲು
ಚೋರನು ಇವನೆಂದು ಬಾರದೆ ಇರಲೋ
ಘೋರಸಂಸಾರ ತಾಪವಾರಿಧಿಯ ಕಷ್ಟದಿಂ
ಪಾರುಮಾಡೆಂದೆನುತ ಸಾರಿ ಬೇಡುವೆನು ೪

ಸಲಿಸೆನ್ನ ನೈವೇದ್ಯ ಕುಲಗೇಡು ಎಂದೆನುತ
ಛಲದಿ ಬೇಡಲು ಎನಗೊಲಿಯದಿರು ಸ್ವಾಮಿ
ಬಲು ಹೊಲೆಯ ಪ್ರಪಂಚದ್ದಲುಬಾಟ ಬಿಡಿಸೆನ್ನ
ಮಲಿನತ್ವಳಿಕಿಸಿ ಚೆಲುವ ಸಲಹೆಂಬೆ ೫

ತಿಳಿಯದೆ ನಿನ್ನನ್ನು ಕುಲಗೇಡಿಯೆಂದೆನುತ
ಕುಲದಿಂದ ಹೊರಹಾಕಲೊಳಿತಾಗಿ ತಳ್ಳೋ
ಮಳ್ಳತನ ಬಿಡಿಸೆನ್ನ ಮನಸಿನ ಕಿಲ್ಬಿಷವ
ತೊಳದೆ ನಿಜಜ್ಞಾನದ ಪಾಲಿಸು ಎಂಬೆ ೬

ನರನ ಭವಗುಣಗಳ ಪರಿಹರಿಸಿ ಬೇಗನೆ
ಕರುಣಿಸು ಎನಗೆ ಪರರ ಬೇಡದ್ದನು
ಕರುಣಾಳು ಶ್ರೀರಾಮ ಗುರುವೆ ನೀನಾಗೆನ್ನ
ಪರಿಭವದ ದು:ಖವನು ತ್ವರಿತದ್ದರಿ ತಂದೆ ೭

೪೦೯

ಮನವೆ ಎಲೆ ಮನವೆ ನೀನು
ಯೋಚಿಸಿ ಕೆಡುವುದು ಅನುಚಿತವಲ್ಲೆ ಪ

ನೀ ಮನನಮಾಡಿದ ಸಂಸಾರಿರದು
ಕಾನನದ ಬೆಳದಿಂಗಳು ಇದು
ಶ್ವಾನನ ಕನಸಿನ ಪರಿ ತಿಳಿದು
ಹೀನಯೋಚನೆ ಬಿಟ್ಟು ಧ್ಯಾನಕವಚ ತೊಟ್ಟು
ಜ್ಞಾನವೆಂಬಾಯುಧಪಾಣಿಯಾಗೆಲೊ ಬೇಗ ೧

ಈ ದೇಹವೆಂಬುವ ಕಾಂತಾರ್ವೊಕ್ಕು ಉಪಾ
ಯುದ್ಧುಲಿಗಳ ತರಿದ್ದಾಕು
ಮಹಮಾಯ ಕೋಣಗಳೆಂಟು ನೂಕು
ದಾಯಾದ್ಯೈವರ ಕೊಂದು ಜೀವಘಾತಕರಾದ
ಮೂವರಂ ಭಂಜಿಸಿ ದ್ವಯಮಾರ್ಗ ಗೆಲಿಯೆಲೊ ೨

ಮಹಮೂರು ಕಂಟಕ ಬದಿಗಿಟ್ಟು
ಬಹ ಆರೊಂದು ನದಿಗಳ ದಾಂಟು
ಭೋರ್ಗರೆವ ಸರ್ಪನ ಹೆಡೆ ಮೆಟ್ಟು
ಮಾರಾರಿ ವಿನಮಿತ ಧೀರ ಶ್ರೀರಾಮಪಾದ
ವಾರಿಜಕ್ಕೆರಗಿ ಗಂಭೀರ ಸುಖದಿ ಮೆರಿ ೩

೪೧೦

ಮನ್ನಿಸಿ ಸಲಹಯ್ಯ ಎನ್ನ ತಪ್ಪು ಒಪ್ಪಿಕೊ ಮಹರಾಯ ಪ

ಮನ್ನಿಸಿ ಸಲಹಯ್ಯ ಪನ್ನಂಗಶಯನನೆ
ನಿನ್ನ ಧ್ಯಾನಾಮೃತವನ್ನು ಕರುಣದಿತ್ತು ಅ.ಪ

ನಾನಾಜನುಮ ಸುತ್ತಿ ಮತ್ತೆ ಹೀನ ಜನುಮವೆತ್ತಿ
ಜ್ಞಾನವಿನಿತಿಲ್ಲದೆ ನಾನಾಪಾಪಗೈದೆ
ದೀನಜನರ ಬಂಧು ನೀನೆ ಕ್ಷಮಿಸು ತಂದೆ ೧

ಮರವೆ ದೇಹವೊದ್ದು ಸಂಸಾರ ಮರವೆಯೊಳಗೆ ಬಿದ್ದು
ಶರಣ ಸತ್ಪುರುಷರ ನೆರವಿನಿತರಿಯದೆ
ಮರುಳನಾದೆ ಹರಿ ಮುರಹರ ಕ್ಷಮಿಸಯ್ಯ ೨

ಬರಬಾರದು ಬಂದೆ ಬಲು ವಿಧ ದುರಿತದೊಳು ಬೆಂದೆ
ಅರಿಯದೆ ಮಾಡಿದ ಪರಮದುರಿತಗಳ
ಕರುಣದಿ ಕ್ಷಮೆಮಾಡಿ ಪೊರೆಯೊ ಶ್ರೀರಾಮನೆ ೩

೪೧೧

ಮರುಳೆ ಸುಖ ನೀನೆನು ಪಡೆದಿ
ನರಜನುಮ ತಾಳಿ ಇಹ್ಯದಿ ಪ

ಪರಿಪರಿ ಜನುಮ ತಾಳಿ
ಪರಮ ಬಂಧದೊಳೊರಲ
ಉರುಳಿ ವರಮುಕ್ತಿ ದೊರೆವ ಕೀಲಿ
ಸ್ಮರಿಸಿ ಬಂದಿ ಹರಿಯ ಬಳಲಿ ೧

ಅರಿಯದೆ ಮತ್ತು ಭವಮಾಲೆ
ಕೊರಳಿಗ್ಹಾಕಿಕೊಂಡಿ ದುರುಳ
ಮರೆಯಮೋಸ ಕಾಂಬೋದೆಲ್ಲ
ಹರಿದು ಪೋಗ್ವುದು ಸ್ಥಿರವಲ್ಲ ೨

ಸಮಯ ಮಿಂಚಿಪೋದ ಬಳಿಕ
ಕ್ರಮದಿ ಮತ್ತೆ ಸಿಗುವುದೆ ಮೂರ್ಖ
ವಿಮಲ ಶ್ರೀರಾಮ ಪಾದಕಮಲ
ನಮಿಸಿ ಪಡಕೊ ಮುಕ್ತಿಮಾಲಾ ೩

೪೧೨

ಮಾಧವ ಮಧುಸೂದನ ತೇರಾ
ಚರಣ ಭಜಿಪೆ ಪಾಲೋ ಮೇರಾ ಪ

ಹರಿಯೆ ತುಮ್ಹಾರೇ ಚರಣಭಜನ
ಕರುಣಾಕರ ಮುಝೋ ಸಿರಿಯರಮಣ
ದುರಿತ ಮೇರೇ ಪರಿಹಾರ ಕರ್‌ಕರ್ ಪಾರಕರ್
ಪರಿಭವಸೇ ದೇವ ೧

ರಕ್ಷ ಮೇರೇ ಕೋಯೀ ನಹೀ ಹೈ
ಪಕ್ಷಿಗಮನ ತೇರೇ ಶಿವಾಯ
ಲಕ್ಷಿಸಿ ಮೊಕ್ಕೆಮೇಸೇ ಪಾರಕರ್
ರಕ್ಷ ತೇರಾ ಗೋಷ್ಮೇ ಲೇಕರ್ ೨

ಸೀತಾಪತೇ ಶ್ರೀರಾಮ ತೂಹೀ
ಪಾತಕ ವಿಮೋಚನ ಹೈ
ಪ್ರೇಮಸೇ ದೇಖಕೇ ಮುಝುಕೋ
ಪಾಪಕೂಪಸೇ ಉಠಾ ಲೀಜೀಯೇ ೩

೪೧೩

ಮಾನವಜನುಮ ಖೂನವರಿಯದೇನು
ಏನುಕೆಡುವಿಯೋ ಏನುಕೆಡುವಿಯೋ ಜ್ಞಾನವಿಲ್ಲದೆ ಪ

ನಾನಾವಿಧದಿ ಅನ್ಯರನ್ನು ಏನುಕಾರಣ ಜರೆದು ಸುಳ್ಳೆ
ಹಾನಿಯಾಗಿ ಪೋಗುವಿಯೋ ಅ.ಪ

ಅವನ ಸಂಪದ ನಿನಗೇನು ನಿನ್ನಪದವಿ ಅವನಿಗೇನೋ
ಅವನ ಇವನ ಭವನ ಸುದ್ದಿ ನೆವನಗೈದು ದಿವನಿಶಿಯು
ಸವೆಯದಾಡಿ ಭುವನಸುಖವ ಸವಿಯದೆ
ಜವನ ಭವನ ಕಾಣುವಿ ೧

ಶೀಲಜನರ ಸಂಗಡಾಡೋ ಮೂಲತತ್ವವಿಚಾರಮಾಡೋ
ಕೀಳನಾಗಿ ಹಾಳು ಭ್ರಮೆಯೊಳು ಬಿದ್ದು
ಮೂಳನಾಗಿ ಕಾಲನಾಳಿನ ದಾಳಿಗೆ ಸಿಲ್ಕಿ
ಗೋಳಿನೊಳು ಬೀಳುವಿಯೊ ೨

ಪಾಮರನಾಗಬೇಡಲವೋ ಪಾಮರ ಮನದ ಮಲವತೊಳೆಯೋ
ಪ್ರೇಮ ಮೋಹಗಳನು ತುಳಿದು ಕಾಮಜನಕ
ಸ್ವಾಮಿಶ್ರೀರಾಮಮಂತ್ರ ಪಠಣಮಾಡಿ
ಆ ಮಹಾ ಮುಕ್ತಿ ಪಡೆದು ಬಾಳೊ ೩

೪೧೪

ಮಾಯದೂರನೆ ಎನ್ನ ಮಾಯ ಬಿಡಿಸಯ್ಯ
ಮಾಯದಲಿ ಸಿಲ್ಕಿ ಬಲು ಬಳಲುವೆನಭವ ಪ

ಮಾಯದಿಂ ಜನಿಸಿ ನಾ ಮಾಯದಿಂ ಬೆಳೆದಿರುವೆ
ಮಾಯವನೆ ಉಟ್ಟು ನಾ ಮಾಯ ತೊಟ್ಟಿರುವೆ
ಮಾಯವನೆ ಹಾಸಿ ನಾ ಮಾಯವನೆ ಹೊದ್ದಿರುವೆ
ಮಾಯದಲಿ ಬಿದ್ದು ಬಲು ಒದ್ದಾಡುತಿರುವೆ ೧

ಮಾಯಕ್ಕೆ ಸತಿಯೆಂದು ಮಾಯಕ್ಕೆ ಸುತರೆಂದು
ಮಾಯಕ್ಕೆ ಬಂಧೆಂದು ಮಾಯದ್ಧಿಗ್ಗಿದೆನೋ
ಮಾಯಸಂಸಾರದ ಮಾಯನರಿಯದೆ ನಾನು
ಮಾಯ ಮೋಹಿತನಾಗಿ ಬಾಯ್ಬಿಡುವೆ ಸತತ ೨

ಮಾಯವನು ಕಲ್ಪಿಸಿ ಮಾಯವನೆ ಕುಣಿಸಾಡಿ
ಮಾಯದಾಟಾಡುವಿಯೊ ಮಾಯವನು ತುಂಬಿ
ಮಾಯಮಹಿಮನೆ ನಿನ್ನ ಮಾಯ ಬಲ್ಲವರಾರು
ಮಾಯದಿಂದುಳಿಸೆನ್ನ ಕಾಯೊ ಶ್ರೀರಾಮ ೩

೪೧೫

ಮಾರಜನಕ ನಂಬಿದೆ ನಿನ್ನ
ಪಾರುಮಾಡೆನ್ನ ಪರಮಪಾವನ್ನ ಪ

ಮೀರಿತು ಭವಬಾಧೆ ಸೈರಿಸೆನಿನ್ನು
ಸಾರಸಾಕ್ಷನೆ ಪರಿಹರಿಸು ಮೋಹನ್ನ ಅ.ಪ

ದುಷ್ಟಸಂಸಾರಸಾಗರದೊಳು
ಕೆಟ್ಟ ನಿಂದೆಗಳೆಂಬ ಘನತೆರೆಗಳು
ಹುಟ್ಟಿ ಏಳುತಲಿಹವು ಸಾಲಿಗೆ ಸಾಲು
ಬೆಟ್ಟದಂತೆ ಮಹ ಭೀಕರದೊಳು

ಎಷ್ಟಂತ ಈಸಬೇಕಿನ್ನಿದರೊಳು
ಸೃಷ್ಟಿಕರ್ತ ನೀನೆ ಮೊರೆ ದಯದೊಳು ೧

ವಾಸನ್ಹಿಡಿದು ಸೆಳೆದುನುಂಗ್ವವೈದಾರು
ಮೋಸ ಜಲಚರಗಳ ಮೀರಿದ ತೊಡರು
ಆಸೆಯೆಂಬ ಮಹ ಸೆಳವಿನ ಜೋರು
ದೋಷಯೆಂಬುವ ಸುಳಿ ಮಡುವು ಸಾವಿರಾರು
ಈಸುವುದು ಮುಂದಕ್ಕೆ ಅಗದು ಮಾರು
ಶ್ರೀಶನೆ ಪಿಡಿದೆತ್ತಿ ಕರುಣವ ತೋರು ೨

ಇಂತು ಭವದ ಸಾಗರವನ್ನು
ಎಂತು ದಾಟಿ ನಾ ಪಾರಾಗುವೆನು
ನಿಂತುನೋಡಲು ಅಂಜಿ ಮನಸಿಗೆ ಇನ್ನು
ಭ್ರಾಂತಿಬಡುತ ನಿನ್ನ ಮರೆಯ ಹೊಕ್ಕೆನು
ಚಿಂತಾಯಕ ಭಕ್ತ ತೀವ್ರಬಂದಿನ್ನು
ಸಂತಸದಿಂ ಪೊರೆಯೊ ಶ್ರೀರಾಮ ಎನ್ನನು ೩

೪೧೬

ಮೂಕನಾಗೋ ಮನವೆ ನಿನಗೆ
ಯಾಕೀ ಲೋಕ ಗೊಡವೆ ಪ

ಮೂಕನಾಗಿ ಬಹುಜೋಕೆಯಿಂದ ನಡಿ
ಏಕಾಂತ ಗುಟ್ಟೀ ಲೋಕರಿಗರುಹುದೆ ಅ.ಪ

ಹೇಳಿದರೇನಾದೋ ನೀ ಬಲು
ಕೇಳಿದರೇನಾದೊ
ಹೇಳಿಕೆ ಕೇಳಿಕೆ ಗಾಳಿಯ ಮೊಟ್ಟ್ಯೊಂದು
ನೀಲಶಾಮನ ಮನದಾಲಯದೊಳಗಿಟ್ಟು ೧

ಅವನಿ ಗೊಡವೆ ಯಾಕೋ ಹರಿಯೆಂದು
ಭವಭಯವನು ಕಳಕೋ
ದಿವನಿಶಿ ನಿಜದನುಭವದೊಳಗಾಡುತ
ಭವಗೆಲುವಿನ ಸುದ್ದಿ ಭವಿಗಳಿಗುಸುರದೆ ೨

ಶಿಷ್ಟರ ಪಾದ ಪಿಡಿಯೋ ಮುಂದಿನ್ನು
ಹುಟ್ಟು ಸಾವು ಗೆಲಿಯೊ
ದುಷ್ಟಮತಿಗಳ ಗೋಷ್ಠಿಗೆ ಹೋಗದೆ
ಬಿಟ್ಟಗಲದೆ ನಿಜಪಿಡಿದು ನೀತಿ ೩

ಮರ್ತ್ಯಜನರ ಇದಿರು ನೀ ಬಲು
ಗುಪ್ತದಿಂದಿರು ಚದುರ
ಸತ್ಯತಿಳಿದು ಹರಿ ಸರ್ವೋತ್ತಮನಂಘ್ರಿ
ಚಿತ್ತದಿ ನಿಲ್ಲಿಸಿ ಅತ್ಯಾನಂದಗೂಡಿ ೪

ನಂಬಿಗಿಲ್ಲದಲ್ಲಿ ಸುಬೋಧ
ಡಂಬವೆನಿಪುದಲ್ಲಿ
ಜಂಬವಡಿಯದೆ ಕುಂಭಿನಿಯೊಳು ನೀ
ನಂಬಿ ಶ್ರೀರಾಮನ ಗುಂಭದಿಂ ಭಜಿಸುತ ೫

೪೧೭

ಮೆಚ್ಚಿದೇನೆಂದೀಕಾಯ ಮನವೇ
ಹೆಚ್ಚಿನ ಮಲ ದುರ್ಗಂಧಮಯ ಪ

ಮುಚ್ಚಿ ಚರ್ಮದಿಂ ಸ್ವಚ್ಛತೋರುತಿದೆ
ಹುಚ್ಚು ಹುಳುಕಿನ ದೇಹ ನೀಚೋ ನೀಚೋ ೧

ಸುತ್ತಿನರಗಳಿಂದ ಒತ್ತಿಬಿಗಿದು ಹೇಯ
ರಕ್ತಕೀವುಯುಕ್ತ ಹೊಲಸು ಹೊಲಸು ೨

ನಾಶನಸಂಗ ಜರ ಘಾಸಿಯಾಗಲದು ದು
ರ್ವಾಸನೆ ಕೊಲಕಿನ ಭಾಂಡ ಭಾಂಡ ೩

ತೊಳೆಯುತಲಿರ್ದರೆ ಒಳಿತು ಇದರ ಸ್ಥಿತಿ
ತೊಳೆಯದಿರೆ ನರಕದ ಕೊಂಡ ಕೊಂಡ ೪

ಕೆಡುವಶರೀರಮೋಹ ಕಡಿದು ದೃಢದಿ ಮಮ
ಒಡೆಯ ಶ್ರೀರಾಮನ ಪಾಡೋ ಪಾಡೋ ೫

೪೧೮

ಮೊರೆ ಕೇಳು ನೀನೆನ್ನ ಕರುಣದಿ ತವಪಾದ
ಪರಮಭಕ್ತಗಗೊಲಿಸದಿರು ದೇವ
ಚರಣದಾಸರ ಕಾವ ಸಿರಿಯ ಸಖಜೀವ ಪ

ಕ್ಷಿತಿಯೊಳು ಸತಿಸುತರತಿ ಮೋಹರತಿಯೊಳು
ಮತಿಶೂನ್ಯನೆನಿಸಧೋಗತಿಗೆಳೆಸದೆ
ಪತಿತಪಾವನ ನಿಮ್ಮ ಶ್ರುತಿಭೋದ್ವಾಕ್ಯದಭಿ
ರತಿಯನೆನ್ನೊಡಲೊಳು ನೆಲೆಸೀಶಾ
ಹತಕಂಸ ಸುರತೋಷಾದ್ವಿತಿ ಪಂಚಶಿರ ನಾಶ ೧

ವಿಷಯ ವಾಸನದೇಳಸ್ವಿಷಮ ಸಂಸಾರವೆಂಬ
ಮುಸುಕಿದ ಮಡುವಿನೊಳ್ಮುಳುಗಿಸಿದೆ
ವಸುಧೆಯೊಳಸೆವ ಆ ಅಸಮಹಿಮನ ಪಾದ
ದಾಸರ ಸಂಗ ನೀಡ್ವಿಮಲಾಂಗ
ಅಸುರಕುಲ ಭಂಗ ಕುಸುಮಾಕ್ಷ ಕೃಪಾಂಗ ೨

ಮದನಕದನದಿ ಮುದಸುಖವಿಧಿಸಗ
ಲ್ಡೋದ ಸುದತಿಯಳ ನೆನೆವಂತೆ
ಪದುಮನಾಭನ ಪಾದ ಸದುಭಕ್ತಿ ಹಂಬಲ ಅಗ
ಲದಿರಿಸು ರಘುಕುಲಸೋಮ
ಸದುಭಕ್ತರ ಪ್ರೇಮ ಸುದಯನೆ ಶ್ರೀರಾಮ ೩

೪೧೯

ಮೊರೆ ಕೇಳು ಭಕುತಬಂಧು
ಮರೀಬೇಡ ಕರುಣಾಸಿಂಧು ಪ

ಮರೆಯಬಿದ್ದು ಸೆರಗನೊಡ್ಡಿ
ನಿರುತ ನಿಮ್ಮ ಚರಣ ಭಜಿಪೆ
ಶರಣಾಗತರ ವರಪ್ರದಾತ
ನಿರುತ ಪರಿಪಾಲಿಸಭವ ೧

ಶುದ್ಧ ನಿಮ್ಮ ಭಕ್ತನೆನಿಸೊ
ಬದ್ಧನೆನಿಸಿಬೇಡ ದೇವ
ಬಿದ್ದು ಬೇಡ್ವೆ ನಿಮ್ಮ ಪದಕೆ
ತಿದ್ದಿಕಾಯೋ ಎನ್ನ ತಪ್ಪ ೨

ತರಳನ್ಹೊರೆದಿ ಭರದಿ ಬಂದು
ನರನ ಕಾಯ್ದಿ ಧುರದಿ ನಿಂದು
ಪರಮಸಿದ್ಧಿ ನೀಡು ಈಗ
ಚರಣದಾಸಗೆ ವರ ಶ್ರೀರಾಮ ೩

೪೨೦

ಯಾಕೆ ಕೆಡುವೆ ಖೋಡಿ ಮನವೆ ಪ

ಲೋಕದಿರವ ನೋಡಿ ನೂಕುನುಗ್ಗಾಗಿ
ಕಾಕುಗುಣದಿ ಯಮಲೋಕ ಪಡೆವುದವಲೋಕನ ಮಾಡಿ ಅ.ಪ

ಭ್ರಮಿಸಬಾರದ ಭ್ರಮಿಸಿ ಮನಸೆ
ಕ್ರಮಗೆಟ್ಟಾಚರಿಸಿ
ಶಮೆದಮೆ ಅರಿಯದೆ ಸುಮನರ ನೋಡದೆ
ಸುಮ್ಮನಳಿವೆ ಈ ಸಮಯ ಸಿಗುವುದೇ ೧

ತಂತು ತಿಳಿಯದ್ಹೋದಿ ಜಗತ್ತಿನ
ಚಿಂತನೆಗೊಳಗಾದಿ
ಸಂತಸ ವಹಿಸದೆ ಸಂತರ ತಿಳಿಯದೆ
ಅಂತರವರಿಯದೆ ಅಂತ್ಯಕೀಡಾದಿ ೨

ಪಾಮರ ನೀನಾದಿ ನಾಶನ
ತಾಮಸ ಅಳಿದ್ಹೋದಿ
ಸ್ವಾಮಿಯೊಳಾಡದೆ ಕ್ಷೇಮವ ಪಡೆಯದೆ
ನಾಮಭಜಿಸಿ ಶ್ರೀರಾಮನ ಕೂಡದೆ ೩

೪೨೧

ಯಾಕೆ ಜೀವನೆ ಒಣ ಉಸಾಬರಿ ನಿನ
ಗ್ಯಾಕೆ ಲೋಕದ ಸುಳ್ಳೆ ಕಿರಿ ಕಿರಿ ಪ

ಲೋಕನಾಥನ ಪಾದ ಬಿದ್ದು ಮೊರೆ ಪರ
ಲೋಕ ಪದವಿ ಸಂಪಾದಿಸಿ ಮೆರಿ ಅ.ಪ

ಇಷ್ಟಬಂಧು ಸತಿಸುತರೆಲ್ಲ ನೀನು
ಬಿಟ್ಟು ಹೋಗ್ವಾಗ್ಯಾರು ದಿಕ್ಕಿಲ್ಲ
ಎಷ್ಟು ಸಂಪಾದಿಸಿದ ಗಳಿಕೆಲ್ಲ ನೀನು
ಕಟ್ಟಿಕೊಂಡು ಸಂಗಡೊಯ್ಯೋಣಿಲ್ಲ
ಕುಟ್ಟಿ ಯಮದೂತರು ಕಟ್ಟಿ ಎಳೆಯುವಾಗ ನೀ
ಗಟ್ಟಿ ಮಾಡಿದ್ದು ಎಲ್ಲ ಬಟ್ಟಬೈಲೆ ೧

ಯಾರು ಮೆಚ್ಚಿದರು ಫಲವಿಲ್ಲ ನಿನ
ಗ್ಯಾರು ಮುನಿದರೇನು ಕೆಡುಕಿಲ್ಲ
ನೀರಮೇಲಿನ ಲಿಪಿಯಂತೆಲ್ಲಜಗ
ಸಾರ ಸುಳ್ಳು ಖರೆವೊಂದಿಲ್ಲ
ತೋರುವ ಬಿಸಿಲಿನ ವಾರಿಯಂತೆ ಮಾಯಾ
ಕಾರ ತಿಳಕೋ ತೋರುವುದೆಲ್ಲ ೨

ಬಂದಿ ಇಲ್ಲಿಗೆ ಬಹಳ ಲಗುಮಾಡಿ ಮತ್ತೆ
ಮುಂದೆ ಹೋಗುವುದೆಲ್ಲಿ ತಿಳಿ
ಮಂದನಾಗದೆ ಚಾಚಿ ಜ್ಞಾನಕುಡಿ ಅಲ್ಲಿ
ನಿಂದು ನೋಡು ನಿಜ ಹುಡುಕಾಡಿ
ಇಂದಿನ ಸಮಯವು ಮುಂದೆ ಸಿಗುವುದೇನೋ
ತಂದೆ ಶ್ರೀರಾಮಪಾದಕ್ಹೊಂದಿ ಮುಕ್ತಿಯ ಪಡಿ ೩

೪೨೨

ಯಾಕೆ ನಿನ್ನವರೊಳು ದೂರದೃಷ್ಟಿ ಪ್ರಭುವೆ
ಲೋಕಬಂಧು ದಯಾಸಿಂಧು ದಾಸಜನರರಸ ಪ

ಭ್ರಷ್ಟನಿವ ನಿತ್ಯದಲಿ ಮುಟ್ಟಿ ಸ್ನಾನಗೈಯನೆಂದು
ಬಿಟ್ಟಿ ಬೇಸರ ಮಾಡಿ ಸಿಟ್ಟಗೆದ್ದಿರುವ್ಯೋ
ಪುಟ್ಟಿ ಜತೆಗೂಡಿಲ್ಲೆ ಬಿಟ್ಟು ಅಗಲುವ ದೇಹ
ಎಷ್ಟು ತೊಳೆದರೇನೆಂದು ಗಟ್ಟಿಮಾಡಿಬಿಟ್ಟೆ ೧

ಕಡುಹೀನ ಕುಲಯೋಗ್ಯ ಮಡಿ ಅರಿಯ ಇವನೆಂದು
ಕಡುಗೋಪದಿಂದೆನ್ನ ನುಡಿಕೇಳದಿರುವ್ಯೋ
ಮುಡಿಚಟ್ಟಿನಲಿ ಬಂದು ಕಡುಹೊಲಸು ತುಂಬಿರ್ದ
ಜಡದೇಹಕ್ಯಾತರ ಮಡಿಯೆಂದು ಬಿಟ್ಟೆ ೨

ನಿತ್ಯನೇಮವರಿಯದ ಅತ್ಯನಾಚಾರಿಯೆಂದು
ನಿತ್ತರಿಸದೆನ್ನ ಮುಖವೆತ್ತಿ ನೋಡದಿರುವ್ಯೋ
ಪಿತ್ತ ರಕ್ತ ಮಜ್ಜ ಮಾಂಸ ಮತ್ತೆ ಮಲ ಮೂತ್ರ ಕ್ರಿಮಿ
ಹೊತ್ತ ಭಾಂಡಿದೆಂದರಿತು ನಿತ್ಯನೇಮ ಬಿಟ್ಟೆ ೩

ಸತ್ಯಕರ್ಮದ ಮಹಿಮೆ ಗೊತ್ತಿಲ್ಲದಧಮ ಮಹ
ಧೂರ್ತ ಪಾತಕಿಯೆಂದು ಮರ್ತೆನ್ನಬಿಟ್ಟ್ಯೋ
ಎತ್ತನೋಡಲು ನೀನೆ ಸುತ್ತಿ ವ್ಯಾಪಿಸಿ ಜಗವ
ಹೊತ್ತು ಆಳುವುದರಿತು ಸತ್ಕರ್ಮ ಬಿಟ್ಟೆ ೪

ನೀನೆ ನಿರ್ಮಿಸಿದಭವ ನಾನಾಲೋಕ ವೇದಶರ್ಮ
ನೀನೆ ವಿಶ್ವಾತ್ಮಕನ್ಯೆ ನೀನೆ ಸೂತ್ರಧಾರಿ
ಧ್ಯಾನದಾಯಕ ಮಮಪ್ರಾಣ ಶ್ರೀರಾಮ ನಿನ್ನ
ಧ್ಯಾನವೊಂದೆ ಅಧಿಕೆಂದು ನಾನಾಕರ್ಮ ಮರೆದೆ ೫

೪೨೩

ಯಾವ ಸುಖ ಇದು ದಾವ ಸುಖ ಮನುಜ ಶರೀರದ್ದು ಪ

ದಾವ ಸುಖ ಜಾವ ಜಾವಕೆ ಮಹರೋಗದೊಳಗೆ ಬಿದ್ದು
ನೋಯುತಲಿರುವುದು ಅ.ಪ

ಕೀವುರಕ್ತ ಕೊಂಡ ದಾವ ಸುಖ ಇದು
ಹೇಯವಾಲದ ಭಾಂಡದ್ದಾವ ಸುಖ
ಕಾಯವೆನಿಸಿಕೊಂಡು ಸಾವುಕುಣಿಗೆ ಬಿದ್ದು
ಮಾಯವಾಗುತಲಿಹ್ಯದಾವ ಸುಖ ೧

ಜಡಮತಿಶರೀರದ್ದು ದಾವ ಸುಖ ಇದು
ಕೆಡುವ ತನುವು ನಿಜ ದಾವ ಸುಖ
ಬುಡವು ಮೇಲಾಗಾಡಿ ಕಡೆಗೆ ಒಂದುದಿನ
ಮಡಿದು ಹೋಗುವುದುದಾವ ಸುಖ ೨

ಪಾಮರ ರೂಪಿಂದ್ಯಾವ ಸುಖ ಇದು
ನೇಮವಲ್ಲೊಂದಿನ ದಾವ ಸುಖ
ಕಾಮಿತವನು ನೀಗಿ ಸ್ವಾಮಿ ಶ್ರೀರಾಮನ
ಪ್ರೇಮ ಸಂಪಾದಿಸಲಾಗ ಸುಖ ೩

೪೨೪

ರಕ್ಷಿಸು ಎನ್ನನು ಪಕ್ಷಿವಾಹನ ಪಾಂಡು
ಪಕ್ಷನೆ ತವ ಭಕ್ತಿಯಗಲಿಸದೆ
ಲಕ್ಷಿಸಿ ಧ್ರುವನೊರೆದೆ ಲಕ್ಷ್ಮೀಶ ಮರೆಹೋದೆ ಪ

ಕ್ಷಿತಿಯೊಳು ನಾಂ ಬಲು ಚತುರನೆನಿಪದು
ಮಿತಿಯಿಂದ ಕಷ್ಟಕ್ಕೆ ಗುರಿಯಾದೆ
ರತಿಪತಿಪಿತ ಎನ್ನ ಅತಿತಪ್ಪು ಮನ್ನಿಸಿ
ಗತಿಗಾಣಿಸಿತ್ವಾಕ್ಯ ಅಖಿಲೇಶ
ಯತಿನುತ ಸುರಪೋಷ ಹತಭವ ಗುಣಕೋಶ ೧

ಮಂದಮತಿಯತನದಿಂದ ನಾ ಮಾಡಿದ
ಹಿಂದಿನ ಅವಗುಣವೆಣಿಸದೆ
ಮುಂದೆ ನಿಮ್ಮಯ ಪಾದ ಎಂದೆಂದು ಮರೆಯದೆ
ಬಂಧುರಭಕ್ತಿಯ ವರ ನೀಡೊ
ಕಂದನೊಳ್ದಯಮಾಡೊ ತಂದೆ ನೀ ಕಾಪಾಡೊ ೨

ದುರುಳನೆನಿಸಿ ಬಲು ಧರಣಿಯೊಳ್ತಿರುಗುವ
ಮರುಳುಗುಣವನೆನ್ನದೀಡ್ಯಾಡೊ
ಹರಿಯ ದಾಸರ ಸಂಗ ಕರುಣದಿ ದೊರಕಿಸಿ
ಪರಿಶುದ್ಧ ಮಾಡೆನ್ನ ಹೇಯ ಜನುಮ
ಶರಣಜನರ ಪ್ರೇಮ ಕರುಣಿಯೆ ಶ್ರೀರಾಮ ೩

೪೨೫

ರಂಗಯ್ಯ ನಿನಗಿದು ಸರಿಯೇನು ಹರಿಯೆ ಪ

ಮಂಗಳಮಹಿಮ ಕೃಪಾಂಗ ತವ ಪಾದಾಂತ
ರಂಗದಿ ಭಜಿಪರ್ಗೆ ಭಂಗವೆ ಜಗದೊಳು ಅ.ಪ

ಪರಿಪರಿ ಮೊರೆಯಿಟ್ಟು ಸೆರಗೊಡ್ಡಿ ಚರಣದಿ
ನಿರುತದಿಂ ಬೇಡಲಮರೆ ಕಾಯದಿರುವರೆ ೧

ದೀನದಯಾಳುವೆ ನೀನೆ ಗತಿಯೆನ್ನುತ
ಧ್ಯಾನಿಪ ಬಡವರ ಮಾನ ಕಾಯದಿಪ್ಪರೆ ೨

ನಿನ್ನ ಬಿಟ್ಟರೆ ಅನ್ಯಯಿನ್ನಿಲ್ಲ ಜಗದಿ
ಎನ್ನ ಪೋಷಿಪ ಭಾರ ನಿನ್ನದೇ ಶ್ರೀರಾಮ ೩

೪೨೬

ಲಕ್ಷ್ಮೀರಮಣ ಮರೆಯ ಹೊಕ್ಕೆ
ರಕ್ಷಿಸೈ ಪಾಂಡುಪಕ್ಷನೆ ಪ.

ಪಕ್ಷಿವಾಹನ ದುಷ್ಟಶಿಕ್ಷ
ಮೋಕ್ಷದಾಯಕ ಶಿಷ್ಟರಕ್ಷ ಅ.ಪ

ತರಳ ಧ್ರುವನ ಪೊರೆದೆಯೆಲೊ
ಕರಿಮೊರೆಯ ಕಾಯ್ದಯ್ಯ ಕರುಣದಿ
ಕುರುಪ ಸಭೆಯಲಿ ದ್ರೌಪದಿ
ಮೊರೆಯನಿಡಲಾಕೆಮಾನವ ಕಾಯ್ದಿ ೧

ನರಗೆ ಸಹಯನಾಗಿ ಸಾರ
ಧರೆಯ ಗೆಲಿಸಿದಿ ನಿರುತದಿ
ಚರಣದಾಸರ ಕರವ ಪಿಡಿದಿ
ಪರಮ ಪ್ರೇಮದಿ ಒರೆದೆಲೊ ೨

ಇಂದು ಎನಗೆ ಸಂಧಿಸಿದ ಮಹ
ಬಂಧನವ ನಿವಾರಿಸೈ
ತಂದೆ ನಿಮ್ಮಯ ಪಾದ ನಂಬಿದೆ
ಕಂದನನು ಪೊರೆ ಶ್ರೀರಾಮ ೩

೪೨೭

ಲೀಲೆಯೊಳಾಡಿಸೊ ಹರಿ ನಿನ್ನ
ಲೀಲೆಯೊಳಾಡಿಸೊ ಪ

ಲೀಲೆಯೊಳಾಡಿಸೊ ಕಾಲಕಾಲದಿ ನಿನ್ನ
ಶೀಲನಾಮವೆನ್ನ ನಾಲಗ್ಗೆ ಕರುಣಿಸು ಅ.ಪ

ಮಂದಮತಿಯ ಹರಿಸೋ ಮನ ಗೋ
ವಿಂದನೊಳೊಡಗೂಡಿಸೊ
ಎಂದೆಂದಿಗು ಆ ನಂದನ ಕಂದನ
ಸುಂದರ ಪಾದ ಮನಮಂದಿರದಿರಿಸೊ ೧

ಶೀಲಗುಣವ ಕಲಿಸೊ ಭವಗುಣ
ಜಾಲವ ಪರಹರಿಸೊ
ಪಾಲಿಸಿ ನಿಮ್ಮ ಧ್ಯಾನಲೋಲನೆನಿಸಿ ಯಮ
ದಾಳಿ ನೀಗಿಸಿ ಭವಮಾಲೆಯ ಗೆಲಿಸೊ ೨

ಮೋಸ ಮಾಯ ಹರಿಸೊ ವಿಷಯ
ದಾಸೆಯ ಪರಿಹರಿಸೊ
ಭಾಸುರಕೋಟಿಪ್ರಭೆ ಸಾಸಿರನಾಮದ
ಶ್ರೀಶ ಶ್ರೀರಾಮ ನಿಮ್ಮದಾಸೆನಿಸೊ ೩

೪೨೮

ಲೋಕದವರ ತಳ್ಳಿ ಕಾಲಿಗೆಸುತ್ತಿದ ಬಳ್ಳಿ
ಶೋಕಮಯಸಂಕೋಲೆ ಸಾಕು ಹರಿ ಕಡಿ ಕೀಲಿ ಪ

ದಮ್ಮನಿದ್ದರೆ ಠೊಣ್ಯನೆಂಬುವರು
ತೆಳ್ಳಗಿದ್ದರೆ ಬಡಕನೆಂಬುವರು
ರಮ್ಯನುಡಿಯೆ ಬಾಯ್ಬಡಕನೆಂಬುವರು
ಸುಮ್ಮನಿದ್ದರೆ ಗುಸುಕನೆಂಬುವರು ೧

ಜಮ್ಮಾಸಿ ಉಂಡರೆ ಜೋಗಿಯೆಂಬುವರು
ಕಮ್ಮಿ ಉಂಡರೆ ರೋಗಿಯೆಂಬುವರು
ದಿಮ್ಮಾಕೆಂಬುವರು ಜಳಜಳವಿದ್ದರೆ
ಸಮ್ಮತಬಡರು ಹೊಲಸುಕಂಡರೆ ೨

ಮಾಡಿ ಉಂಡರೆ ನೋಡಿ ಸಹಿಸರು
ಬೇಡಿ ಉಂಡರೆ ಹೇಡಿಯೆಂಬುವರು

ಗಾಢಮುಕ್ತಿಪದ ಕೊಡುವ ಶ್ರೀರಾಮನ
ಹಾಡಿ ಪಾಡಿದರೆ ನಿಂದೆ ಮಾಡುವರು ೩

೪೨೯

ಲೋಕೈಕ ಬಂಧು ಹೇ ದಯಾಸಿಂಧು
ಜೋಕೆಮಾಡಭವ ನೀನೆನ್ನೊಳು ನಿಂದು ಪ

ಹೇಯಪ್ರಪಂಚದ ಮಾಯಾಮೋಹದಿ ಎನ್ನ
ನಾವಕಾರಣ ನೂಕಿ ನೋಯಿಸುವಿಯೋ
ದೇವ ನೀ ಮಾಡಿದ ಮಾಯ ಗೆಲಿವರಾರು
ಕಾವದೇವರು ನೀನೆ ಕೈಯ ಪಿಡಿದು ಸಲಹೊ ೧

ದಿವನಿಶಿ ಬಿಡದೊಂದೇಸಮನೆ ಬೆನ್ನ್ಹತ್ತಿ ಮಾಯ
ಕವಿದು ವಿಧವಿಧದೆನ್ನ ಸುವಿಚಾರ ಮರೆಸಿ
ಭವಭವದೊಳಗೆಳಸಿ ಭವಿಯೆಂದೆನಿಸಿ ಕೆಟ್ಟ
ಜವನಿಗೀಡೆನಿಸುವ ಭವಮಾಲೆ ಗೆಲಿಸು ೨

ಘನದು:ಖಮಯವಾದ ಜನನಮರಣಬಾಧೆ
ರಿಣಭಾದೆ ತನುಭಾದೆಯನು ಪರಿಹರಿಸಿ
ತನುತ್ರಯದಲಿ ನಿನ್ನ ನೆನೆವೆನಗೆ ಪಾಲಿಸು
ಕನಿಕರದಿಂ ಕಾಯೊ ಜನಕ ಶ್ರೀರಾಮ ಪ್ರಭು ೩

೪೩೦

ವನಜನಾಭ ನೀನೆ ದಯಾನಿಧಿ ಮೂರು ಜಗದೊಳಗೆ
ಮಣಿದುಬೇಡ್ವೆ ಕನಿಕರದೆನ್ನ ರಿಣಮುಕ್ತನೆನಿಸು ಬೇಗ ಪ

ಭಾವಿಗಳ ಭಾವಪೂರ್ಣ ದೇವ
ದೇವ ವಿಮಲಮಹಿಮ
ಸಾವು ಹುಟ್ಟುಯಿಲ್ಲದ ಘನ
ಸ್ವಾಮಿಯೆನ್ನ ಮಾಡೋ ಪಾವನ ೧

ವೇದವೇದ್ಯನೀತ ಅ
ನಾದಿಕಾಲದ್ವಸ್ತುವೇ ನೀ
ಸಾಧುಸುಜನೈಕ್ಯನೆನ್ನ
ಮೋದದಿಂದ ಸಲಹೋ ಮುದ ೨

ಭೂಮಿಗಧಿಕ ನಿಸ್ಸೀಮ ಸುಖಧಾಮ
ಭೀಮ ಗಂಭೀರ ಎನ್ನ
ಕಾಮಿತಾರ್ಥ ಕರುಣೆಗೈದು
ಪ್ರೇಮದಾಳೆನ್ನೊಡೆಯ ಶ್ರೀರಾಮ ೩

೪೩೧

ವನಜಾಕ್ಷ ನೀನೀಗ ಘನ ಕನಿಕರದಿ ಕಾಯಭವ
ಘನತರದ ಗುಣ ಎನ್ನೊಳಿನಿತಿಲ್ಲ ದೇವ ಪ

ಮನ ತುಸು ಗಟ್ಟಿಲ್ಲ ತನುಮೋಹ ಸುಟ್ಟಿಲ್ಲ
ಧನದಾಸೆ ಬಿಟ್ಟಿಲ್ಲ ಬಿನುಗುಗುಣಟ್ಟಿಲ್ಲ ೧

ಪರಮಮದ ಮುರಿದಿಲ್ಲ ಪರನಿಂದೆ ತೊರೆದಿಲ್ಲ
ಶರಣರಿಗೆ ಎರಗಿಲ್ಲ ಹರಿಪಾದವದರಿವಿಲ್ಲ ೨

ಏನು ಅಪರಾಧವಿರೆ ನೀನೆ ಕ್ಷಮಿಸೆನಗೆ
ಜ್ಞಾನದಿಂ ಸಲಹಯ್ಯ ಪ್ರಾಣೇಶ ಶ್ರೀರಾಮ ೩

೪೩೨

ವಶವಲ್ಲದೀ ಮನದ ದೆಸೆಯಿಂದೆ ನಾ ಬಲು
ದೆಸೆಗೆಟ್ಟು ಬಳಲುವೆ ಕುಸುಮಾಕ್ಷ ಕಣ್ದೆರೆಯೊ ಪ

ನಶಿಪ ಪ್ರಪಂಚ ಭ್ರಮಿಸಿ ಹಸಗೆಡಿಸಿ ನಿಜಧ್ಯಾನ
ಪಶುವಿನಂತೆನ್ನನು ದಿಸೆದಿಸೆಗೆಳಿಪುದು ಅ.ಪ

ಭುವಿಪರನೊಲಿಸರೆಲವದಿ ಭೂಮಿಯ ಪಡೆದೆ
ಸವ ಜೋಡಿ ನೂಕಿತ್ತು ಜವದಿ ಕಟ್ಟುವುದು
ಬುವಿಯೊಳು ಮಿಗಿಲೆನಿಸುವ ತೆರೆ ಮೇಲ್ಮಾಡಿ
ಭವನ ರಚಿಸಿ ಕೋಟಿದ್ರವ್ಯಗಳಿಗಳುವುದು ೧

ಮದುವ್ಯಾಗಿ ಪದ್ಮಿನಿಯ ವದನದೊಳ್ವದನಿಕ್ಕಿ
ಮದನಕದನದಿ ಸುಖಿಸುವುದೊಂದು ಫಳಿಗಿ
ವಿಧವಿಧದಿಂ ಪರರ ಸದನ ಮುರಿದು ಸಂ
ಪದವೆಲ್ಲ ತನ್ನಗೆ ಒದಗಿಬರಲೆನ್ನುವುದು ೨

ತಡೆಯದೆ ವೈರಿಗಳ ಕಡುಕೋಪದಿಂ ತಂದು
ಪಿಡಿದು ಕಂಬಕೆ ಕಟ್ಟಿ ಸುಡಿಸುವುದೊಡನೆ
ಕಡುಗಲಿತನದಿಂದ ಪೊಡವಿಪರ ಸದೆಬಡಿದು
ಪೊಡವಿ ಗೆಲಿದು ಒಂದೇ ಕೊಡೆಯಿಂದಾಳುವುದು ೩

ಯಾತ್ರೆ ಮಾಡುವುದೊಮ್ಮೆ ಕ್ಷೇತ್ರದೊಳಗೆ ಕೂತು
ನೇತ್ರಮಂ ಬಂಧಿಸಿ ಸ್ತೋತ್ರ ಮಾಡುವುದು
ಮೂತ್ರದ್ವಾರದೆ ಬಂದ ಸೂತ್ರದ ಕಾಯಕ್ಕೆ
ಧಾತ್ರಿ ಸೊನ್ನೆಂದೊಮ್ಮೆ ಖಾತ್ರಿ ಮಾಡುವುದು ೪

ಯಾತರ್ಥಲವು ಪರಿಮಿತಿಯಿಲ್ಲದ್ಯೋಚಿಸಿ
ಗತಿಗೆಡಿಪ ಮನಸಿನ ಖತಿ ತಾಳಲಾರೆ
ಅತಿಭ್ರಷ್ಟಮನದ ದುರ್ಮತಿ ನಿವಾರಿಸು
ಗತಿ ನೀಡೆನಗೆ ಕೃಪೆಯಿಂ ಹಿತಭಕ್ತ ಶ್ರೀರಾಮ ೫

೪೩೩

ವಿಮಲಮಹಿಮನೆ ದಾಸನಾಸೆಪೂರೈಸೊ
ಅಮಿತ ನಿಮ್ಮಯ ಬಿರುದು ಸತ್ಯವೆಂದೆನಿಸೊ ಪ

ಕಷ್ಟಹರ ನೀನಹುದೆ ದಿಟ್ಟತನ ಕೊಡುಯೆನಗೆ
ಶಿಷ್ಟರಕ್ಷ ನೀನಹುದೆ ದುಷ್ಟಗುಣ ಬಿಡಿಸೊ

ಶಿಷ್ಟರೊಡೆಯ ನೀನಹುದೆ ಗಟ್ಟಿಮನವ ಪಾಲಿಸು
ಇಷ್ಟಪೂರ್ಣ ನೀನಹುದೇ ಕೊಟ್ಟು ರಕ್ಷಿಸೆನ್ನ ೧

ದೀನರಾಸ್ಪದನಹುದೇ ಧ್ಯಾನ ದಯೆ ಪಾಲಿಸೈ
ಗಾನಲೋಲಹುದೆ ನೀ ಜ್ಞಾನವನು ನೀಡೊ
ಮಾನರಕ್ಷ ನೀನಹುದೇ ಅಭಿಮಾನಯೆನದಿರೆನ್ನ
ಧ್ಯಾನಿಕಧೇನಹುದೇ ಆನಂದ ನೀಡೊ ೨

ನ್ಯಾಯವಂತ ನೀನಹುದೇ ಮಾಯೆಮೋಹವನು ಬಿಡಿಸು
ಪಾವನಾತ್ಮ ನೀನಹುದೇ ಸಾವು ಹುಟ್ಟು ಗೆಲಿಸು
ಜಯವಂತ ನೀನಹುದೇ ದೇಹಿಯೆನಿಸದಿರಲ್ಲರಿಗೆ
ಕಾವದೇವ ನೀನಹುದೇ ಭಾವದ್ಭಾಸಿಸೆನ್ನ ೩

ಪೃಥ್ವಿ ವ್ಯಾಪಕನಹುದೇ ಚಿತ್ತಶುದ್ಧಮಾಡೆನ್ನ ಸತ್
ಚಿತ್ತ ನೀನಹುದೇ ಸತ್ಸಂಗ ನೀಡೊ
ಭಕ್ತವತ್ಸಲನಹುದೇ ಅನಿತ್ಯಗುಣ ಬಿಡಿಸೆನ್ನ
ಕರ್ತನು ನೀನಹದೇ ಸತ್ಪಥದೆನ್ನಿರಿಸೊ ೪

ಅಸಮಕರುಣಹುದೇ ನೀ ಮುಸಿಗೊಲಿಸಿದಿರು ಎನ್ನ
ದೋಷಹರ ನೀನಹುದೇ ಹಸನೆನಿಸು ಎನ್ನ
ದಾಸರಭಿಮಾನ್ಯಹುದೇ ಪೋಷಿಸೆಲೊ ತವಪಾದ
ಧ್ಯಾನದಿರಿಸೆನ್ನ ಶ್ರೀಶ ಶ್ರೀರಾಮ ೫

೪೩೪

ಶಾಂತನಾಗು ಮನಸೆ ನೀ ಶಾಂತನಾಗು
ಕಂತುಪಿತನ ಅಂತರಂಗದಿ ಧ್ಯಾನಿಸುತ್ತ ಪ

ಪೊಡವಿಜನರ ನಡೆಯ ಕಂಡು
ಮಿಡುಕು ಗುಣವ ಕಲಿಯು [illegible]
ಕೊಡುವ ಸ್ವಾಮಿ ಬಡವನಿಹನೆ
ದೃಢವಿಟ್ಟು ಅರಿದು ನೋಡು ೧

ಭೂಮಿಯವರು ಕೈಯ ಬಿಡಲು
ಸ್ವಾಮಿಕಾರ್ಯ ನಿಲ್ಲುತಿಪ್ಪದೆ
ಪಾಮರಾಗದೆ ಸ್ವಾಮಿಸೇವೆ
ನೇಮವಹಿಸಿ ಮಾಡು ಬಿಡದೆ ೨

ಪಾಪಿನರರ ಮಾತಿಗಾಗಿ
ಕೋಪಗೊಳ್ಳದೆ ಸತ್ಯನಾಗು
ಗೋಪಾಳ ಸಣ್ಣದಲ್ಲ ನಂಬು
ಭೂಪ ಶ್ರೀರಾಮನೊಲಿದು ಕೊಡುವ ೩

೪೩೫

ಶಾಂತಿಯ ಕರುಣಿಸೊ ಈ ಮನಸಿಗೆ
ಶಾಂತಿಯ ಕರುಣಿಸೊ ಪ

ಶಾಂತಿಕರುಣಿಸಿ ನಿನ್ನಂತರಂಗದಿ ನಿಮ್ಮ
ಚಿಂತೆ ಇರಿಸು ಕರುಣಾಂತರಂಗ ಹರಿ ಅ.ಪ

ವಿಲಸಿತಮತಿ ಕೊಡೊ ಮನವು
ಚಲಿಸದಪದ ನೀಡೋ
ಸುಲಭದಿ ತವಪಾದ ಒಲಿಸಿ
ನಲಿಯುವ ದಾಸರೊಳಗೆ ಕೂಡಿಸಿ ಎನ್ನ
ನೊಲಿದು ರಕ್ಷಣೆಮಾಡೊ ೧

ಹಲುಬಾಟ ದೂರಮಾಡೊ ಎನ್ನಯ
ಪ್ರಳಯ ಗುಣೀಡ್ಯಾಡೊ
ಗಲಿಬಿಲಿ ಸಂಸಾರದೊಲಿಮಿಲಿ ಬಳಲುವ
ಹೊಲೆಮತಿ ಕಳೆದೆನ್ನ ಸಲಹೆಲೊ ಜ್ಞಾನದಿ ೨

ಮರೆಯ ಬೇಡ ಎನ್ನ ಕರುಣಾ
ಭರಣ ಭಕ್ತಪ್ರಾಣ

ಹರಿವ ಜಗದಿ ಎನ್ನ ಪರಿಪರಿ ನೋಯ್ಸದೆ
ಪರಮಮುಕ್ತಿಯನಿತ್ತು ಪೊರೆಯೊ ಶ್ರೀರಾಮ ೩

೪೩೬

ಶ್ರೀಕೃಷ್ಣ ಪ್ರಭೂಜೀ ತೇರಾ
ಆ ಗೋಷ್‌ಮೇ ಲೇ ಮುಝ್‌ಕೋ ಪ

ಅಜ್ಞಾನ ಅಂಧಕಾರ್‌ಪರದೇ ಉಡಾದೇ
ಮೇರಾ ನ್ಹಾಶನ್ಕೇ ಸಂಸಾರ ಪ್ಯಾರಾ ಜಲ್ದೀಸೇ ಕರದೇ ದೂರ ೧

ರಹಮತ್ಕೇ ದರವಾಜ ಖುಲ್ಲಾ ಕರದೇ ದೀನದಯಾಲ
ತೂಹೀ ಜಗತ್‌ಪಾಲಾ ದಾಸೌಂಕೇ ಪ್ರೇಮಮಾಲಾ ೨

ಸಂತಾಂಕೇ ಸಂಗತ ದಿಲಾ ಧ್ಯಾನಕೇ ಅಮೃತ ಪಿಲಾ
ಶ್ರೀರಾಮಚರಣಕಮಲ ಭಜನ್ಮೇ ಮುಝ್‌ಕು ಮಿಲಾ ೩

೪೩೭

ಶ್ರೀಶ ತೇರೇ ಪಾದಕುಸುಮ
ದಾಸ ಕಹಿಲಾ ಮುಝೇ ಪ್ರೇಮ ಸೇ ಪ

ಜಗ ಮಾಯ ಮೋಹ ಮಿಟಾ
ಜಲ್ದೀಸೇ ಭವಮೂಲ ಕಟಾ
ಜರ ಮರಣ ಸಂಕಟ ಛುಟಾ
ದುರಿತಕೂಪಸೇ ಕರುಣದುರಾ ೧

ನೀ ಸ್ತ್ರೀತನ್ಕೇ ಪೇಮಪಾಶ
ನಾಶಕರ್ಕೇ ಮೇರಾ ಮಾನಸ
ಕಿಲ್ಮಿಷುಡಾದೇ ನತ ಪೋಷ
ನುತಿಪೆ ಸತತ ಪೊರೆ ಪ್ರಕಾಶ ೨

ತೂಹೀ ಪ್ರಭು ಭಕುತಾಧಾರ
ನಹೀ ಶಿವಾ ತೇರ
ಪಾಲ ತ್ರಿಜಗ ಸೂತ್ರಧಾರ
ಶ್ರೀರಾಮ ಪಂಚಪ್ರಾಣ ಮೇರಾ ೩

೪೩೮

ಶ್ರೀಶನು ತನ್ನಯ ದಾಸತ್ವ ಕೊಟ್ಟೆನ್ನ
ಧ್ಯಾಸದಿ ಬಂದು ಸ್ಥಿರಮಾದ ಪ

ಧ್ಯಾಸದೊಳಗೆ ಬಂದು ಸ್ಥಿರವಾಗಿ ನಿಂತಿನ್ನು
ನಾಶನ ಜಗದಾಸೆ ಎನಗೇನೆ ಅ.ಪ

ಸುಂದರಮಾದ ಸುಸಂಧಿಯೆನಗೆ ಫಲಿಸಿತು
ಹಿಂದಿನ ಸುಕೃತ ಫಲದಿಂದೆ
ಹಿಂದಿನ ಸುಕೃತ ಫಲದಿಂದ ಎನ್ನಗೆ
ತಂದೆ ಗೋವಿಂದ ತಾನೆ ಗೋವಿಂದ ೧

ಕೆಟ್ಟ ಬವಣೆಯಿಂದ ಕೆಟ್ಟು ಹೋಗುತಲಿರ್ದೆ
ಸೃಷ್ಟೀಶ ದಯದಿ ನೋಡಿದ
ಸೃಷ್ಟೀಶ ದಯದಿಂದ ನೋಡಿ ಮುಂದಕೆ ಕರೆದು
ನೆಟ್ಟನ ಮಾರ್ಗಕೆ ಹಚ್ಚಿದ ೨

ಸಾಧ್ಯವಲ್ಲಾರಿಗೀತಸಾಧ್ಯಮಾಗಿ ತಾನೆ
ಸಾಧ್ಯವಿಲ್ಲದ ಸುದ್ದಿ ತಿಳಿಸಿದ
ಸಾಧ್ಯವಿಲ್ಲದ ನಿಜ ಸುದ್ದಿ ತಿಳಿಸಿ ಪರಿ
ಶುದ್ಧನ್ನ ಮಾಡಿ ನಿಲಿಸಿದ ೩

ಮೂಲೆಗೆ ಬಿದ್ದೊಸ್ತು ಮೇಲಕ್ಕೆ ಎತ್ತಿ ತವ
ಲೀಲೆ ನಾಲಗೆಮೇಲೆ ಬರೆದನೆ
ಲೀಲೆ ನಾಲಗೆಮೇಲೆ ಬರೆದೆನ್ನಜ್ಞಾನ
ಕಾಳೆಂಬ ಕತ್ತಲ ಕಳೆದನೆ ೪

ಮಂತ್ರಮೂಲನು ಸರ್ವಾಂತರ್ಯಾಮಿಯು ಸ್ವ
ತಂತ್ರ ತಾನೆಂಬ ನಿಜ ತಿಳಿಸಿದ ಸ್ವ
ತಂತ್ರ ತಾನೆಂಬ ನಿಜ ತಿಳಿಸಿ ಎನಗನ್ಯ
ಚಿಂತೆ ಭ್ರಾಂತಿಗಳೆಲ್ಲ ಬಿಡಿಸಿದ ೫

ಮರವೆಯ ಹಾರಿಸಿ ಕರುಣಿಸಿ ಸ್ಥಿರಜ್ಞಾನ
ಪರಿಭವ ದು:ಖ ಪರಿಹರಿಸಿದ
ಪರಿಭವ ದು:ಖ ಪರಿಹರಿಸೆನಗೆ
ಸ್ಥಿರವಾದ ಪರಲೋಕದರಿವು ನಿಲಿಸಿದ ೬

ಆಶದಿ ಬಿದ್ದು ನಾ ದೇಶದೇಶವ ತಿರುಗಿ
ಬೇಸತ್ತು ಬಾಯ ಬಿಡುತಿರ್ದೆ
ಬೇಸತ್ತು ಬಾಯ ಬಿಡುತಿರ್ದೆ ಕಂಡೆನ್ನಯ್ಯ
ಲೇಸಾದ ಪದವಿ ತೋರಿಸಿದ ೭

ಜಗಸುಖಕೊಲತಿದ್ದೆ ಜಗದಾತ್ಮನು ಈಗ
ಜಗದ್ಘಗರಣ ತೋರಿಸ ನಗಿಸಿದ
ಹಗರಣ ತೋರಿಸಿ ನಗಿಸಿದಚಲಸೌಖ್ಯ
ಬಗೆ ತೋರಿ ಜಗಸುಖ ಮರೆಸಿದ ೮

ಏನೆಂದು ಪೇಳಲಿ ಸಾನಂದನುತ ಮಹ
ದಾನಂದದಾಲಯ ಪೊಗಿಸಿದ
ಆನಂದದಾಲಯ ಪೊಗಿಸೆನ್ನ ವದನದಿ
ತಾ ನಿಂದು ನಿಖಿಲ ನುಡಿಸಿದ ೯

ಭವಭಯಹರಿಸುವ ಸವಿನುಡಿಗಲಿಸಿದ
ಭವರೋಗದ್ವೈದ್ಯ ಮಮಪಿತ
ಭವರೋಗದ್ವೈದ್ಯ ಮಮಪಿತ ಮುಂದಿನ್ನು
ಸಾವ್ಹುಟ್ಟೋಭೀತಿ ಎನಗಿಲ್ಲ ೧೦

ಕರ್ತು ಸರ್ವೋತ್ತಮ ನಿತ್ಯನಿರ್ಮಲ ಎನ್ನ
ಮರ್ತ್ಯದ ಗುಣವ ತೊಡೆದೆನ

ಮರ್ತ್ಯದ ಗುಣ ತೊಡೆದು ಸತ್ಯ ಶ್ರೀರಾಮ ಎನ್ನ
ಮುಕ್ತಿ ಸಾಮ್ರಾಜ್ಯ ತಖ್ತೆ ಏರಿಸಿದ ೧೧

೪೩೯

ಶ್ರೀಶ ಸಿರಿ ಇಂದಿರೇಶ ದಾಸಜನಪೋಷ
ದಾಸನಾಶೋತ್ತರಕೆ ಬೇಸರಿಯಬೇಡ ಪ

ಭೇದಭಾವನೆ ಬಿಡಿಸು ವಾದಮತಿ ಪರಿಹರಿಸು
ಸಾಧುಸಜ್ಜನರ ಸುಬೋಧನುಡಿಗಲಿಸು
ಕ್ರೋಧ ತಾಮಸ ಕಡಿಸು ವೇದವಾಕ್ಯವ ತಿಳಿಸು
ಸಾಧನದಿ ಪರಲೋಕ ಹಾದಿಯೊಳು ನಡೆಸು ೧

ಶಾಂತಿ ಸದ್ಗುಣ ಕಲಿಸು ಶಾಂತಿನುಡಿಗಳು ನುಡಿಸು
ಶಾಂತಿ ಮಂತ್ರವ ಬೋಧಿಸು ಶಾಂತಿಸ್ಥಿರಗೊಳಿಸು
ಶಾಂತರೊಡನಾಟವಿರಿಸು ಶಾಂತಿಸುಖ ಕರುಣಿಸು
ಶಾಂತಜನಪ್ರಭುವೆ ವೇದಾಂತ ಎನಗೊಲಿಸು ೨

ಕಾಸಿನಾಸೆಯು ಬಿಡಿಸು ಹೇಸಿ ಬವಣೆಯ ಗೆಲಿಸು
ಮೋಸಮಯಪಹರಿಸು ದೋಷದೂರೆನಿಸು
ದೋಷನಾಶನ ಜಗದೀಶ ಶ್ರೀರಾಮ ನಿನ್ನ
ಸಾಸಿರ ನಾಮ ಎನ್ನ ಧ್ಯಾಸದೊಳು ನಿಲಿಸು ೩

೪೪೦

ಸಕಲಲೋಕಪಾಲಕ ರಕ್ಷಿಸೈ ನಿಖಿಲವ್ಯಾಪಕ ಪ

ಚರಣದಾಸನ ಮೊರೆಯ ಪಾಲಿಸಿ ಕರುಣವಂ ಬೆರೆಸಿ
ಪೊರೆಯೊ ಶರಣಜನ ಪ್ರಿಯಕರನೆ ಮರೆಯ ಹೊಕ್ಕೆನು ೧

ಇಂದೊದಗಿಬಂದ ದುರಿತವನು ತಂದೆ ನೀಬಂದು ಪರಿಹರಿಸೊ
ಮುಂದಿನ್ನು ಬಂಧನದ ಬಲೆಯಚಿಂದಿಸಿ ಚಂದದಿಂ ಕಾಯೊ ೨

ಕಾಯಜಪಿತನೆ ನಿನ್ಹೊರತು ಕಾಯುವ ಹಿತರು ಇಲ್ಲಯ್ಯ
ದೂರದ ಸುತನ ಮೊರೆ ಕೇಳೊ ಕ್ಷಿತಿಜಪತಿಯೆ ಶ್ರೀರಾಮ ೩

೪೪೧

ಸಾಕುಮಾಡಿಸಭವ ಕಾಕುಜನರ ಸಂಗವ
ಬೇಕು ನಿಮ್ಮ ಚರಣಧ್ಯಾನ ಲೋಕದವರ ಗೊಡವಿನ್ನೊಲ್ಲೆ ಪ

ಖ್ಯಾತಿವಂತರೆಂದು ಬರಿದೆ ಮಾತಿನಿಂದ ಪೇಳುತಿನಿತು
ನೀತಿಮಾರ್ಗವರಿಯಧಮ ಜಾತೀಹೀನರ ಜತೆ ಜನ್ಮಕೆ ೧

ಕೆಟ್ಟಗುಣದ ರಾಶಿ ಮೊಟ್ಟೆ ಹೊಟ್ಟೆಯೊಳಗೆ ಇಟ್ಟುಕೊಂಡು
ಶ್ರೇಷ್ಠರಂತೆ ನಟಿಸಿ ಪರರಿಗರಿಷ್ಟವರಿಪದುಷ್ಟರ ಗೋಷ್ಠಿ ೨

ನಿತ್ಯನಿರ್ಮಲ ನಿಮ್ಮ ಚರಣಭಕ್ತಜನರಸಂಗಸುಖವ
ನಿತ್ತು ಕಾಯೋ ಕರುಣದೆನ್ನ ಮುಕ್ತಿದಾತೆನ್ನಯ್ಯ ರಾಮ ೩

೪೪೨

ಸಾಕು ವಿಷಯ ಸುಖ ಲೋಕೇಶ ಜಗ
ದೇಕನಾಥ ಕೊಡು ತವಧ್ಯಾಸ ಪ

ಬೇಕು ನಿನ್ನಪಾದ ಭಯನಾಶ ಭವ
ವಾಕರಿಸಿತು ಕಡಿ ನತ ಪೋಷ ಅ.ಪ

ಮಸಣ ಬುದ್ಧಿ ಬೇಗ ಪರಿಹರಿಸು ಜವ
ನಶಿಸಿ ಪೋಗುವ ಮಾಯ ಮೋಹ ಬಿಡಿಸು
ಅಸಮ ಸತ್ಯಪಥದೆನ್ನ ನಡೆಸು ಎನ್ನ
ರಸನೆಯಿಂದ ನಿನ್ನ ನಾಮ ನುಡಿಸು
ಒಸೆದು ನಿನ್ನವರೊಳಗೆನ್ನಾಡಿಸು ನಿನ್ನ
ವಶಿಕಪತ್ರ ಬೇಗ ದಯಪಾಲಿಸು ೧

ಚಿತ್ತವಗಲದಂತೆ ಸ್ಥಿರಮಾಡು ನಿಜ
ಭಕ್ತಿ ಕದಲದಂಥ ದೃಢ ನೀಡು
ಸತ್ಯಸಮಾಗಮ ಸತತ ಕೊಡು ದೇವ
ನಿತ್ಯ ನಿರ್ಮಲಮನ ದಯಮಾಡು
ಹತ್ತಿದ ಪಾಪರಾಶಿ ಕಡೆಮಾಡು ನಿನ್ನ
ಭೃತ್ಯನೆಂದೆನ್ನನು ಕಾಪಾಡು ೨

ನಿನ್ನ ಮರೆಯ ಬಿದ್ದು ಭಜಿಸುವೆನು ನಾ
ನನ್ಯ ದೇವರ ಗುರುತರಿಯೆನು
ನಿನ್ನವನೆಂದೆನಿಸೆನ್ನನು ಕಳಿ
ಬೆನ್ನತ್ತಿ ಕಾಡ್ವ ಭವ ರೋಗವನು
ಎನ್ನಯ್ಯ ಶ್ರೀರಾಮ ನಿನ್ನ ನಂಬಿದೆನು ನೀಡು
ಉನ್ನತ ಮುಕ್ತಿ ಸಾಮ್ರಾಜ್ಯವನು ೩

೪೪೩

ಸಾಕು ಸಾಕು ವಿಮಲಾಂಗ ಕಾಕುಮನುಜರ ಸಂಗ ಪ

ಬೇಕು ನಿಮ್ಮಯ ಚರಣದಾಸಜನರ ಸಂಗ
ಲೋಕೇಶ ಕರುಣಿಸಿ ನೂಕು ಕುಜನಸಂಗ ೧

ವಾಕರಿಸುತ್ತಮನ ಲೋಕರ ಗೆಳೆತನ
ಶೋಕಾಬ್ಧಿ ಕಡೆತನ ಲೌಕಿಕ ಬಲು ಹೀನ ೨

ತಡೆಯದೆ ಈ ಕೇಡು ದೃಢದಿ ಬೇಡುವೆ ನಾ
ಜಡಜಾಕ್ಷ ಶ್ರೀರಾಮ ಬಿಡಿಸು ಜನನ ಮರಣ ೩

೪೪೪

ಸಾಕು ಸ್ವಾಮಿ ಲೋಕವಾಸವು ಪ

ಬೇಕು ನಿಮ್ಮ ಚರಣಸೇವೆ
ಲೋಕದಿಂದ ಪಾರು ಮಾಡೆನ್ನ ಅ.ಪ

ಕಷ್ಟದಿಂದಿನ್ನು ಜೀವಿಸಲು ನಾ
ನೆಷ್ಟು ಪಾಪವ ಮಾಡುವೆನೊ
ಇಷ್ಟೆ ಸಾಕಯ್ಯ ಕಷ್ಟನಿವಾರ
ಸೃಷ್ಟಿಯಿಂದೆನ್ನ ಪಾರುಮಾಡೊ ೧

ಹಲವು ಭ್ರಾಂತಿಗಳಲಿ ನಾನು
ತೊಳಲಿಬಳಲಿ ಚಲನೆಗೆಡುತ
ಗಳಿಸಲಾರೆನು ದುರಿತ ಸಾಕೈ
ಇಳೆಯಿಂದೆನ್ನನು ಗೆಲಿಸು ದೇವ ೨

ಸಕಲವಿಧದಿ ದು:ಖರೂಪ
ಕಾಕುಸಂಸಾರ ಬಲು ತಾಪ
ಭಕುತಜನಪ್ರಿಯ ಮುಕ್ತಿಸೋಮ
ಮುಕುತಿ ಕರುಣಿಸು ನಿರುತ ಶ್ರೀರಾಮ ೩

೪೪೫

ಸಾಕು ಸಂಸಾರದ ವ್ಯಾಕುಲ ತೀರಿಸಿ
ಲೋಕೇಶ ಸುಖ ಕರುಣಿಸೊ ಪ

ಸಾಕು ಸಜ್ಜಾಗಿಲ್ಲ ಸಂಸಾರ
ಶೋಕದಬ್ಧಿಲಿ ಬಿದ್ದು ಬಲುಬಲು
ನೂಕುನುಗ್ಗಾಗಿ ಖೋಡಿಯೆನಿಪ
ಲೌಕಿಕದ ಘನತಾಪದಿರುವ ಅ.ಪ

ಮೂಢಮತಿಯಿಂದತಿ ರೂಢಿಸಂಪದ ನೆಚ್ಚಿ
ನೋಡಿನೋಡಸೂಯೆ ಪಡುತ
ಆಡಬಾರದ ನಾಡಮಾತುಗ
ಳಾಡಿ ಮುಖವನು ಬಾಡಿ ಪರರನು
ಹೇಡಿತನದಿಂ ಮಾಡಿಸ್ತೋತ್ರವ
ಬೇಡಿಬದುಕುವ ಖೋಡಿದುರ್ಭವ ೧

ಏನು ಎನ್ನುವರೆಂದು ಗೋಣುಮೇಲೆತ್ತದೆ
ಪ್ರಾಣ ಕರದಲ್ಲಿ ಪಿಡಿದು
ಹೀನ ಸ್ಥಿತಿಯಿಂ ನೀನೆ ಗತಿ ಎನ್ನ
ಮಾನವುಳಿಸೆಂದು ನಾನಾ ಪರಿಯಲಿ
ದೀನಸ್ವರದಿಂ ತ್ರಾಣಗುಂದಿ
ದೈನ್ಯಬಡುವಂಥ ಹೀನಬವಣೆ ೨

ಕಾನನಸಂಸಾರದ್ಹಾನಿಮಾಡದೆ ಎನ್ನ
ಜ್ಞಾನಬೆಳಗಿನನೊಳಾಡಿಸೊ
ಜ್ಞಾನಮೂರುತಿ ದೀನದಯಾಳು
ಭಾನುಕೋಟಿಪ್ರಭೆ ಜಾನಕೀಶ
ನಾನಾಲೋಕವ ನೀನೆ ಒಳಗೊಂಡು
ಮ್ಹಾಣದಿಹಿ ಮಮಪ್ರಾಣ ಶ್ರೀರಾಮ ೩

೪೪೬

ಸಾಗಿಬಾರಯ್ಯ ನಾಗಶಯನ ಪ

ಭೋಗದಾಸೆ ನೀಗಿಸೆನ್ನು
ಬೇಗ ರಕ್ಷಿಸು ಬಾಗಿ ಬೇಡ್ವೆ ಅ.ಪ

ದುಷ್ಟಭವದರಿಷ್ಟದಲಿ ಇ
ನ್ನೆಷ್ಟುದಿನ ನಾ ಕಷ್ಟಬಡಲಿ
ದೃಷ್ಟಭ್ರಷ್ಟತೆ ನಷ್ಟಗೊಳಿಸಿ
ಶಿಷ್ಟಸಂಗದೊಳಿಟ್ಟು ಸಲಹೊ ೧

ಜನನ ಮರಣವ ನೆನೆಸಿಕೊಳ್ಳದೆ
ಬಿನಗುತನದಲಿ ದಿನವಗಳೆದೆ
ಅಣುಗನ ಘನತಪ್ಪು ಗಣಿಸದೆ
ಘನ ಘನ ನಿಮ್ಮ ನೆನಹ ಪಾಲಿಸು ೨

ಸ್ವಾಮಿಯೆನ್ನಯ ನೇಮವಿಲ್ಲದ
ಕಾಮಿತಂಗಳ ದೂರಮಾಡಿ
ಪ್ರೇಮದೆನ್ನಗೆ ಕ್ಷೇಮಕೊಡು ಶ್ರೀ
ರಾಮ ಮೂಜಗ ಸಾರ್ವಭೌಮ ೩

೪೪೭

ಸಾಧಿಸು ಪರಲೋಕ ಮನವೆ ನೀ
ಸಾಧಿಸು ಪರಲೋಕ ಪ

ಮಾಧವನ ಮಹ ಪಾದದಾಸರಿಂದ
ಶೋಧಿಸಿ ನಯದಿ ಸಂಪಾದಿಸಿ ಜ್ಞಾನವ ಅ.ಪ

ಭೇದಬುದ್ಧಿ ಬಿಡೋ ಸುಜನರಿಂ
ವಾದಿಸಿ ಕೆಡಬೇಡೋ
ಆದರದಿಂದಲಿ ಸಾಧು ಸಂತರ ಸು
ಬೋಧ ವಾಕ್ಯಗಳ ಮೋದದಿಂ ಕೇಳುತ ೧

ರಾಗರಹಿತನಾಗೋ ಸಂಸಾರ
ಭೋಗದಾಸೆ ನೀಗೋ
ಯೋಗಿಗಳಿಗೆ ತಲೆವಾಗಿ ದಿಟದಿ ನೀ
ಹೋಗಲಾಡಿಸಿ ಭವಬೇಗ ಸುಪಥಕ್ಹತ್ತಿ ೨

ಕಾಮಿತಂಗಳ ಅಳಿಯೋ ತನುಧನ
ಪ್ರೇಮಮೋಹ ಕಳೆಯೋ
ಕಾಮಜನಕ ನಮ್ಮ ಭೂಮಿಜೆಪತಿ ಶ್ರೀ
ರಾಮನಾಮಬೆಂಬ ವಿಮಾನವೇರಿ ೩

೪೪೮

ಸಾರಸಾಕ್ಷ ಘೋರದುರಿತ ದೂರಮಾಡ್ಯೆ ಪ

ಮಾರಜನಕಪಾರ ಮಹಿಮ
ದೂರ ನೋಡದೆ ಬಾರೊ ಬೇಗ
ಬಾರಿಬಾರಿಗೆ ನಿನ್ನ ನಂಬಿ
ಸಾರಿಕೂಗಿ ಬೇಡುವೆನು ೧

ಮೂಢತನದಿ ನಾಡ ತಿರುಗಿ
ಖೋಡಿಯಾದೆ ಗಾಢಭಕುತಿಲಿ
ಗಾಢ ನಿಮ್ಮ ಪಾವನ ಚರಿತ
ರೂಢಿಯೊಳು ಧನ್ಯವಾಗದೆ ೨

ಸಿರಿಯರಮಣ ಚರಣನಳಿನ
ಮರೆಯಹೊಕ್ಕೆ ಕರುಣದೆನ್ನ
ಮೊರೆಯ ಕೇಳಿ ದುರಿತದಿಂದ
ಸೆರೆಯ ಬಿಡಿಸೆನ್ನ ಸಿರಿಯರಾಮ ೩

೪೪೯

ಸಾಸಿರ ಮಾತುಗಳ್ಯಾಕೊ ಎಲೆಮನ
ಕೇವಲ ಹರಿನಾಮವೊಂದೆ ಸಾಕೊ ಪ

ಸ್ನಾನವುಯಾಕೊ ಮೌನವುಯಾಕೊ
ದಾನವಾರಿಯಧ್ಯಾನವೊಂದೆ ಸಾಕೊ ೧

ಮಂತ್ರವುಯಾಕೊ ತಂತ್ರವುಯಾಕೊ
ಮಂತ್ರಮೂರ್ತಿ ಚಿಂತೆಯೊಂದೆ ಸಾಕೊ ೨

ಹೋಮವುಯಾಕೊ ನೇಮವುಯಾಕೊ
ಸ್ವಾಮಿ ಶ್ರೀರಾಮನ ಭಕ್ತಿಯೊಂದೆ ಸಾಕೊ ೩

೪೫೦

ಸಿಕ್ಕ ಸಮಯ ನಿಜ ತಿಳಿಯದಲೆ ಬರಿ
ಕಕ್ಕುಲಾತಿ ನಿನಗ್ಯಾಕಲೆ ಮರುಳೆ ಪ

ಬೊಕ್ಕಸ ಭಂಡಾರವೆಲ್ಲ ಸುಳ್ಳೆ ಸುಳ್ಳೆ ನಿನ್ನ
ನಿಕ್ಕುವ ಮನೆ ಊರ್ಹೊರಗಿದೆಲೆ ಅ.ಪ

ಮೇಲುಮಾಳಿಗೆಮನೆ ಸ್ಥಿರವಲ್ಲ ಬಹು
ಬಾಳುವೆ ಧನಸಿರಿ ನಿನಗಿಲ್ಲ
ನಾಳೆ ಬಂದೊದಗಲು ಯಮಶೂಲ ಹಿಂ
ಬಾಲಿಸಿ ನಿನಗೊಂದು ಬರೋದಿಲ್ಲ ೧

ಬಂಧುರ ಬುವಿಯಧಿಕಾರ ನಿಖಿಲ ಮಹ
ಅಂದಣೈಶ್ವರ್ಯ ಛತ್ರ ನಂಬಿಗಿಲ್ಲ
ತಂದೆ ತಾಯಿ ಬಂಧು ಬಳಗೆಲ್ಲ ನಿನ
ಗೊಂದುಕೊಂದು ಸಂಬಂಧ ೨

ಅತಿರಥರೆಲ್ಲರೀ ಭೂಮಿ ಸುಖ ನೆಚ್ಚಿ
ಮತಿಗೆಟ್ಟು ಪೊಂದದಿರತಿ ದುಃಖ
ಜತೆಯಲಾರ್ಹೊಯ್ಯಲಿಲ್ಲಂತೆಕ್ಕ ಸುಳ್ಳೆ
ವ್ಯಥೆ ಬಟ್ಟರು ತಿಳಿಯದಿದರ ಲೆಕ್ಕ ೩

ಕ್ಷೋಣಿ ಪಾರುಪತ್ಯತನವೆಲ್ಲ ತಿಳಿ
ಆನೆ ಕುದುರೆ ಒಂಟೆ ನಿನ್ನದಲ್ಲ
ಕಾಣುವುದೆಲ್ಲ ಮಾಯಭವಜಾಲ ಮತ್ತು
ಮನುಷ್ಯಜನುಮ ಸೀಗೋದಲ್ಲ ೪

ನಾನು ನೀನೆಂಬುವ ದುಷ್ಟಮದ ಸುಟ್ಟು
ಜ್ಞಾನದೊಡನೆ ಗೆಲಿ ಭವಬಾಧೆ
ಧ್ಯಾನದಾಯಕ ಶ್ರೀರಾಮಪಾದ ನಿಜ
ಧ್ಯಾನವಿಡಿದು ಪಿಡಿ ಮುಕ್ತಿಪದ ೫

೪೫೧

ಸಿಟ್ಟು ತ್ಯಜಿಸಲೆ ಖೊಟ್ಟಿ ಮನವೆ ಎಷ್ಟು ಪೇಳಲಿ ನಿನಗೆ
ಸಿಟ್ಟಿನಿಂದಲಿ ಎಷ್ಟೋ ಜನರು ಕೆಟ್ಟು ಪೋದದ್ದರಿಯಲೊ ಪ

ಸಿಟ್ಟಿನಿಂದ ಹಿರಣ್ಯಕನ ಎಷ್ಟು ವರಬಲ ಕೆಟ್ಟಿತ್ತೊ
ಸಿಟ್ಟಿನಿಂದಲೆ ರಾಣವನ ಆರುಕೋಟಿ ಆಯುಷ್ಯ ಅಳಿಯಿತೊ ೧

ಸಿಟ್ಟಿನಿಂದಲೆ ಮುಪ್ಪುರಂಗಳ ಅಷ್ಟಭೋಗವು ತೀರಿತೋ
ಸಿಟ್ಟಿನಿಂದಲೆ ಕುರುಪನ ಕುಲ ನಷ್ಟವಾಗಿಪೋಯಿತೊ ೨

ದುಷ್ಟ ಕಂಸನು ಸಿಟ್ಟಿನಿಂದ ನಷ್ಟ ಪೊಂದಿದ್ದರಿಯೆಲೊ
ಸಿಟ್ಟಿನಿಂದಲೆ ಸೇರಿದರು ಯಮ ಪಟ್ಟಣವ ದಿಟ್ಟರೆಂಬರೆಲ್ಲರು ೩

ಸಿಟ್ಟಿಗೆದ್ದ ವಿಶ್ವಾಮಿತ್ರನ ಎಷ್ಟು ತಪವೇನಾಯಿತು
ಸಿಟ್ಟಿಗೆ ಮನಗೊಟ್ಟ ಬಳಿಕ ನಷ್ಟ ತಪ್ಪದು ಕಾಣೆಲೊ ೪

ಅಷ್ಟು ಯಾತಕೆ ನೀನೆ ಯೋಚಿಸು ಸಿಟ್ಟಿನಿಂದ ನೀನೇನಾದಿ
ಶಿಷ್ಟ ಶ್ರೀರಾಮನಡಿಗೆ ಪೊಂದಿ ಸಿಟ್ಟನಳಿದು ಬದುಕೆಲೊ ೫

೪೫೨

ಸಿರಿವರನ ಕರುಣಕ್ಕೆ ಪಾತ್ರ ನಾನಾದೆ
ಪರಮ ಹರಿಭಕ್ತನಾಗಿ ಬಾಗಿ ಶರಣೆಂದು ಪ

ಪರಿಪರಿಯಿಂದೊರೆದ ಕುಲಗುರುವಿನ ವಾಕ್ಯಗಳ
ತರದೆ ತುಸು ಗಣಿತಕ್ಕೆ ಮರಣಭೀತಿಲ್ಲದೆ
ಹರಿಸರ್ವೋತ್ತಮನೆಂಬ ವರಮಂತ್ರ ಪಠಿಸಿದ
ಪರಮಪ್ರಹ್ಲಾದರಿಗೆ ನಿರುತ ಶರಣೆಂದು ೧

ಪನ್ನಂಗಶಯನ ಉನ್ನತ ಮಹಿಮೆಗಳ
ತನ್ನೊಳಗೆ ತಾ ತಿಳಿದು ಭಿನ್ನ ಭೇದವಿಲ್ಲದೆ
ಗನ್ನಗತಕನಾದ ಅಣ್ಣನಿಗೆ ಮಹ ನೀತಿ
ಯನ್ನು ಪೇಳಿದ ವಿಭೀಷಣಗಿನ್ನು ಶರಣೆಂದು ೨

ವನಧಿಯನ್ನು ಲಂಘಿಸಿ ದನುಜಕುಲ ಸಂಹರಿಸಿ
ವನಜನಾಭನ ಸೇವೆ ಮನುಮುಟ್ಟಿ ಗೈದು

ಜನನಮರಣವ ಗೆಲಿದು ಘನಪದವಿ ಗಳಿಸಿದ
ಹನುಮರಾಯರ ಪದಕೆ ಮಣಿದು ಶರಣೆಂದು ೩

ತರಳತನದಲಿ ನಿಖಿಲ ಧರೆಭೋಗಗಳ ತೊರೆದು
ಹರಿಮಂತ್ರ ಜಪಮಾಡಿ ಸ್ಥಿರಪದವ ಪಡೆದ
ವರಧ್ರುವ ಕರಿಕುಸುಮ ಹರಿಗೆ ಅರ್ಪಿಸಿ ಬಂದ
ಪರಮಕಂಟಕ ಗೆಲಿದವರಿಗರಿತು ಶರಣೆಂದು ೪

ನಿತ್ಯನಿರ್ಮಲ ನಿಖಿಲಕರ್ತ ಶ್ರೀರಾಮನಡಿ
ಭಕ್ತರೆನಿಸಿದ ಮಹ ನಿತ್ಯಾತ್ಮರ
ಸತ್ಯಪಾದಗಳೆನ್ನ ನೆತ್ತಿಯೊಳ್ಪೊತ್ತು ನಿಜ
ಚಿತ್ತದಿಂ ನೆನೆನೆನೆದು ನಿತ್ಯಶರಣೆಂದು ೫

೪೫೩

ಸಿರಿವರನೆ ಮರೆಬಿದ್ದೆ ಶರಣಾಗತಪ್ರೇಮಿ
ಪರಿಭವದ ಕಿರಿಕಿರಿಯ ಪರಿಹರಿಸು ಸ್ವಾಮಿ ಪ

ಅಡಿಗಡಿಗೆ ರಿಣಕೊಟ್ಟ ಒಡೆಯರತಿಕಿರಿಕಿರಿಯು
ಇಡತೊಡಲಿಕ್ಕಿಲ್ಲೆಂಬ ಮಡದಿಕಿರಿಕಿರಿಯು
ಎಡಬಿಡದೆ ಹಸೆತೃಷೆಯ ಕಡುತರದಕಿರಿಕಿರಿಯು
ಕಡೆಹಾಯ್ಸು ಕಡುಬೇಗ ತಡೀಲಾರೆನಭವ ೧

ಮಾಡುಣಲು ಕಿರಿಕಿರಿಯು ಬೇಡುಣಲು ಕಿರಿಕಿರಿಯು
ನಾಡ ನಾಡ ತಿರುಗಲು ಕಡುಕಿರಿಕಿರಿಯು
ಗೂಢದೊತ್ತಟ್ಟಿರಲು ಬಡತನದ ಕಿರಿಕಿರಿಯು
ಝೋಡಿ ಕಿರಿಕಿರಿ ಬೇಡ ದೂರಮಾಡಭವ ೨

ಕಿರಿಕಿರಿಲ್ಲದ ನಿನ್ನ ಚರಣದಾಸರ ನೆರೆಯು
ಕರುಣಿಸಿ ನಿರುತದಿಂ ಪರಿಪಾಲಿಸಭವ
ಶಿರಬಾಗ್ವೆ ಚರಣಕ್ಕೆ ನೀನೆ ಪರದೈವೆನಗೆ
ತರಳನರಕೆಯ ಕೇಳು ವರದ ಶ್ರೀರಾಮ ೩

೪೫೪

ಸ್ಥಿರ ನೀಡೆನ್ನ್ವದನಾಬ್ಜದಿ ಪರಮ
ಪುರುಷ ನಿನ್ನ ಸ್ಮರಣೆ ಪ

ಸೌಖ್ಯ ಸುಭೋಗದಿರಲಿ
ಬೇನಿಯಿಂದ ಒರಲುತಿರಲಿ
ತ್ರಾಣಗುಂದಿ ತೊಳಲುತಿರಲಿ
ದಾನವಾಂತಕ ನಿನ್ನ ಧ್ಯಾನ ೧

ಭೂಮಿಪರು ಸನ್ಮಾನ ಕೊಡಲಿ
ಪಾಮರೆಂದು ಒದೆದು ನೂಕಲಿ
ಭೂಮಿಜನರಪಹಾಸ್ಯ ಗೈಯಲಿ
ಸ್ವಾಮಿ ನಿಮ್ಮ ಭಜನಾನಂದ ೨

ಚಿಂತೆಯಿರಲಿ ಶ್ರೀಮಂತಿಕಿರಲಿ
ಸಂತಸೆಂಬುದು ಸಿಗದ್ಹೋಗಲಿ
ಅಂತಕಾರಿ ಶ್ರೀರಾಮ ನಿನ್ನ
ಚಿಂತನೆ ಎನ್ನ ಅಂತ್ಯಕಾಲದಿ ೩

೪೫೫

ಸುಬೋಧ ಬೋಧಿಸೆದುನಾಥ
ಸುದಾತ ಸಜನಸಂಪ್ರೀತ ಪ

ಮೋಹಗಳ ಬಿಡಿಸಿ ತ್ರಿವಿಧ ಉಪಟಳವ ಕೆಡಿಸಿ
ತ್ರಿವಿಧ ಭಕ್ತಿ ಕರುಣಿಸಿ ತ್ರಿಕಾಲಜ್ಞಾನ ನಿಲ್ಲಿಸಿ ೧

ವಿಷಮಪಂಚಕ್ಲೇಶಕಳಿಸೆ ವ್ಯಸನಸಪ್ತನಿಧಿ ಗೆಲಿಸಿ
ಒಸೆದು ದಾಸರೊಲಿಮಿರಿಸಿ ಅಸಮಧ್ಯಾನ ಸ್ಥಿರಪಡಿಸಿ ೨

ದುಷ್ಕಾಮಗಳನು ಪರಿಹರಿಸಿ ಸುನಾಮ ಜಿಹ್ವೆಯೊಳಿರಿಸಿ
ನಿಸ್ಸೀಮದಾಸನುಹುದೆನಿಸಿ ಶ್ರೀರಾಮಗುರುವೆ ಕರುಣಿಸಿ ೩

೪೫೬

ಸುಮ್ಮನ್ಯಾತಕೆ ಕಾಲಕಳೆಯುವಿಯೋ ಹೇ
ಚುಮ್ಮಮನಸೇ
ಸುಮ್ಮನ್ಯಾತಕೆ ಕಾಲಕಳಯುವಿ ಪ

ಬ್ರಹ್ಮನಯ್ಯನ ವಿಮಲ ಚರಣ
ಒಮ್ಮನದಿಂ ಪೊಗಳುತನುದಿನ
ನಿರ್ಮಲಪದವಿ ಸಂಪಾದಿಸದೆ ನೀ ಅ.ಪ

ಮತ್ತು ನಿನ್ನಗೆ ಹತ್ತಿ ಬರುವುದೆ
ನಿತ್ಯ ವೆನಿಪತ್ಯಧಿಕ ಸಮಯವು
ಸತ್ಯ ಸರ್ವೋತ್ತಮನ ಪಾದವ
ನಿತ್ಯ ಪಾಡುತ ಸಾರ್ಥಕ್ವೊಂದದೆ ೧

ಮೃತ್ಯುಬಾಧೆಯ ಗೆಲಿಸಿ ನಿನ್ನ ಪ
ವಿತ್ರನೆನಿಪ ಮಹ ಮೃತ್ಯುಲೋಕದಿ
ಉತ್ಪತ್ತಿಯಾಗಿ ರಿಕ್ತಹಸ್ತದ್ವೋಗ್ವತಿ
ಚಿತ್ತಜಪಿತನ್ನರ್ತು ಭಜಿಸದೆ ೨

ಭಕ್ತಜನರು ಕೈಯೆತ್ತಿ ಪೇಳಿದ
ಸತ್ಯದೋಕ್ತಗಳ್ನಿತ್ಯವೆಂದು
ಭಕ್ತವತ್ಸಲ ಸಿರಿಯರಾಮನ
ಚಿತ್ತದರಿತು ಮುಕ್ತಿ ಪಡೆಯದೆ ೩

೪೫೭

ಸುಳ್ಳೆಭ್ರಮಿಸಿ ಕೆಡಬೇಡವೋ ಹೇ ಮುಳ್ಳುಮನುಜ
ಎಲ್ಲ ಮಿಥ್ಯೆಜಗದ ಬಾಳವ್ವೋ ಪ

ನಿಲ್ಲದಳಿಕೆ ಪೋಗ್ವುದಿದು ಜಲದಮೇಲಿನ ಲಿಖಿತತೆರದಿ
ಪುಲ್ಲನಾಭನ ಪಾದ ನಂಬಿ ಗೆಲ್ಲು ಈ
ದುರ್ಭವದ ಭಂಗವೋ ಅ.ಪ

ಬಂಧುಬಳಗರೆಂಬರೆಲ್ಲರು ನಿನ್ನೊಳಿರುವತನಕ
ತಿಂದು ಉಂಡು ಸೇವೆ ಮಾಳ್ಪರು ನೀನುಹೋಗುವಕಾಲ
ಸಂದಿಸಲಾಗ ಆರುಬಾರರು ಹಿಂದೆ ಉಳಿವರು
ಮಂದಗಮನೆ ಸತಿಯು ತನ್ನ ಮುಂದಿನ ಗತಿಗೆ ಅತ್ತುಕರೆದು
ಮಿಂದು ಮುಟ್ಟುಚಟ್ಟು ತೊಳೆದು
ಚಂದದ್ಹೋಳಿಗೆ ತುಪ್ಪ ಉಂಬಳು ೧

ಜನರಗೋಣು ಮುರಿದು ಹಲವು ಹಂಚಿಕ್ಹಾಕಿ ಬಿಡದೆ
ಬಿನುಗುಯೋಚನದನುದಿನವು ಶೋಧಮಾಡಿ
ನಾನಾರೀತಿಯಲಿ ಗಳಿಸಿದ ಧನವು ನಿನಗೆ ಎರವು
ಕನಿಕರಿಲ್ಲದೆ ಜವನದೂತರು ಹಣಿದು ಎಳೆದಾಡೊದೆಯುವಾಗ
ಮನೆಯೊಳ್ಹೊಳಿದಳದೆ ಧನವು ಬಂದು
ನಿನಗೆ ಸಹಾಯ ಮಾಳ್ಪುದೇನೋ ೨

ಭೂಮಿಸೀಮೆ ತನ್ನದೆನುತ ಶಾಸನವ ಬರೆಸಿ
ನೇಮವಿಲ್ಲದೆ ಕಷ್ಟಬಡುತ ನಿಜಸುಖವ ಮರೆದು
ತಾಮಸದೊಳಗೆ ಮುಳುಗಿ ಕೆಡುತ ಪ್ರೇಮದೊರಲುತ
ಭೂಮಿಗಧಿಕ ಭಕ್ತಜನರ ಪ್ರೇಮಮಂದಿರ
ಸ್ವಾಮಿ ಶ್ರೀರಾಮ ಮುನಿದು ನೋಡಲಾಗ
ಭೂಮಿ ಸೀಮೆ ಕಾಯ್ವುದೇನೋ ೩

೪೫೮

ಸೃಷ್ಟೀಶ ನಿನಗಿಷ್ಟು ದಯಬಾರದ್ಯಕೊ
ಎಷ್ಟು ಬೇಡಲು ಎನ್ನ ಮೊರೆ ಕೇಳದಿರುವಿ ಪ

ಕರಿರಾಜನ ಪೊರೆದೆಲೋ ನರಗೆ ಸಾರಥಿಯಾದಿ
ತರುಣಿಯನುದ್ಧರಿಸಿ ಪರಿಶುದ್ಧಗ್ಯೆದಿ
ಪರಮಕುರುಣಿಯು ನೀನು ದುರಿತಕಾರ್ಯದಿಂ ನಾನು
ನರಕಿಯಾಗ್ವುದನರಿತು ಅರಿಯದಂತಿರುವಿ ೧

ಖುಲ್ಲದಾನವರೊದೆದು ಎಲ್ಲ ದೇವತೇರಿಗೆ ನೀ
ನುಲ್ಲಾಸವನು ಕೊಟ್ಟು ಪುಲ್ಲನಾಭ ಹರಿಯೆ
ಕ್ಷುಲ್ಲಕರ ಸಂಗದಿಂ ನಾ ಸಲ್ಲದಂತಾಗುವೆ ಕ
ಣ್ಣಲ್ಲಿ ಕಂಡು ನೀ ಕಂಡಿಲ್ಲದಂತಿರುವಿ ೨

ಮುನಿಶಾಪದಿಂ ನೃಪನ ಕನಿಕರದಿ ಕಾಯ್ದಿ ನಿಂ
ತನುದಿನದಿ ಬಾಗಿಲವ ಘನವಾಗಿ ಕಾಯ್ದಿ
ಶುನಕನಂದದಿ ನಾನು ದಿನದಿನಕೆ ಮತ್ತಿಷ್ಟು
ಘನಪಾಪಿಯಾಗ್ವುದನು ಮನಕೆ ತರದಿರುವಿ ೩

ವನವಾಸಗೈದಯ್ಯಾ ವಾನರನ ಸಲಹಿದಿ
ದನುಜನನು ಸಂಹರಿಸಿ ದನುಜನನುಜಂಗೆ
ಮಾಣದ ಪಟ್ಟವನು ಮೆಚ್ಚಿ ನೀ ಕೊಟ್ಟೆಯ್ಯಾ
ಎನಗ್ಯಾಕೀದುರ್ಬವಣೆ ದೂರಮಾಡದಿರುವಿ ೪

ಇನಿತೆಲ್ಲ ಯೋಚಿಸಲು ಘನ ಕರುಣಾನಿಧಿ ನೀನು
ನಿನಗವರೆ ದಾಸರೆ ನಾನಲ್ಲವೇನು
ಮನಸಿಜಪಿತ ನಿನ್ನ ವನರುಹಂಘ್ರಿಯ ನಂಬಿ
ಮಣಿದು ಬೇಡುವೆ ಕಾಯೊ ತಂದೆ ಶ್ರೀರಾಮ ೫

೪೫೯

ಸೃಷ್ಟೀಶ ದಯಮಾಡೊ ಕಷ್ಟನಿವಾರ
ಇಷ್ಟದಾಯಕ ನಿನ್ನ ನಿಷ್ಠೆಯಿಂ ಬೇಡ್ವೆ ಪ

ಇಷ್ಟಭಕ್ತರು ಬೇಡಿದಿಷ್ಟಾರ್ಥಗಳ ಬೇಗ
ಕೊಟ್ಟು ಸಲಹುವ ದೊರೆಯೆ ಬಿಟ್ಟಗಲದೆನ್ನ
ಇಷ್ಟವನು ಪೂರೈಸಿ ಸೃಷ್ಟಿವ್ಯಾಪಾರದಿಂ
ದಟ್ಟಹಾಸದಿ ಗೆಲಿಸು ಶಿಷ್ಟಜನಪಾಲ ೧

ರೂಢಿಯೊಳು ಬಲು ಬೇಡಿದಣಿದೆನಯ್ಯ
ನಾಡದೈವಂಗಳನು ಕಾಡಿ ಕಾಡಿ ಪಾಡಿ

ಬೇಡುವೆ ನಿನ್ನ ಗಾಢ ಮಹಿಮೆಗಳರಿತು
ಕಾಡದೀ ದಾಸಗೆ ನೀಡು ಜಯ ವರವ ೨

ಇನ್ನು ಈ ಜಗದೊಳಗೆ ಅನ್ಯರಾಸೆನಗಿಲ್ಲ
ನಿನ್ನನ್ನೆ ಕಾಡುವೆನು ನಿನ್ನನ್ನೆ ಬೇಡ್ವೆ
ಅನ್ಯರಿಗೆ ಬಾಗಿಸದೆ ಮನ್ನಿಸಿ ಸಲಹಯ್ಯ
ನಿನ್ನ ಕೃಪೆಯ ಗೈದು ಎನ್ನಯ್ಯ ರಾಮ ೩

೪೬೦

ಸೇವಕಗೆ ದಯಮಾಡಲೊ ಹರಿ ದೇವ ನಿಮ್ಮ
ಪಾವನಪಾದ ಭಾವದಿಂ ನಮಿಸಿ ಪಾವನನಾಗ್ವೆ ಪ

ಕಲ್ಲನು ನಲ್ಲೆಯ ಮಾಡಿದ ಪಾದ
ಕಳ್ಳನ ರಿಸಿಯೆಂದೆನಿಸಿದ ಪಾದ
ನಲ್ಲೆಯ ಬೆಂಬಲ ನಿಂತಿರ್ದ ಪಾದ
ಖುಲ್ಲ ಪೂತನಿಯ ಮೆಟ್ಟಿದ ಪಾದ ೧

ಮಂಕು ಕಾಳಿಂಗನ ತುಳಿದ ಪಾದ
ಶಂಖಾಸುರನ ಒದೆದ ಪಾದ
ಜಿಂಕೆಯನು ಹಿಂಬಾಲಿಸಿದ ಪಾದ
ಪಂಕಜಾಸನ ಪೊಗಳುವ ಪಾದ ೨

ಭೂಮಿ ಓರಡಿ ಮಾಡಿದ ಪಾದ
ಭಾಮೆ ದೃಢದಿ ಪೂಜಿಸಿದ ಪಾದ
ಪ್ರೇಮದಿಂ ಭಕುತರನುದ್ಧರಿಪ ಪಾದ
ಸ್ವಾಮಿ ಶ್ರೀರಾಮ ತವ ಕೋಮಲಪಾದ ೩

೪೬೧

ಸಂಗತ ತುಝೀ ಕೋಯೀ ನಹೀ ಸಬ್ಬೀ ಮಾಯ ಹೈ ಪ

ಆತಾ ಅಕೇಲ ಜಾತಾ ಅಕೇಲ
ಮಾತಾಪಿತ ಭಾರ್ಯ ಬಂಧು
ಜಾತೇ ಕೋಯೀ ಆತೇ ನಹೀ ಸಬ್ಬೀ ಮಾಯ ಹೈ ೧

ಪಾಯಾಹುವೇ ಸುಂದರ ಜನುಮ
ಖೋಯೇ ಜಾಯೇ ಮಿಲ್ತಾನಹೀ
ಜೀವ ದುನಿಯ್ಯ ಧನದೌಲತ್ತ ಸಬ್ಬೀ ಮಾಯ್ಯ ಹೈ ೨

ಮಾನೋ ಮನ ತೇ ಜ್ಞಾನ ಬಚನ್
ಹಾನಿ ನ ಪಾವ ದೀನಜನಾಭಿ
ಮಾನಿ ಶ್ರೀರಾಮಧ್ಯಾನ ಕಮಾವ ಸಬ್ಬೀ ಝೂಟ ಹೈ ೩

೪೬೨

ಸಂತಸ ಕೊಡು ದೇವ ಈ ಮನಕೆ
ಕಂತುಪಿತ ನಿಮ್ಮ ಧ್ಯಾನೆನ್ನಂತರಂಗಕ್ಕೆ ಇತ್ತು ಪ

ಪರಮಪುರುಷ ತವ ಚರಣಸೇವೆಯ ನೀಡಿ
ಪರಿಭವ ದು:ಖವ ಪರಿಹರಿಸಭವ ೧

ಶರಧಿಸಂಸಾರ ಸ್ಥಿರಮಾಯಕಾರ
ತ್ವರಿದದಿಂದೆನ್ನೊಳು ಕರುಣವ ತೋರೊ ೨

ದೋಷದೂರನೆ ಎನ್ನ ದೋಷ ವಿನಾಶಿನಿ
ಶ್ರೀಶ ಶ್ರೀರಾಮ ನಿನ್ನ ದಾಸನೆನಿಸೊ ಎನ್ನ ೩

೪೬೩

ಸಿಂಧುಶಯನನೆ ಸರ್ವಬಂಧುಬಳಗ ನೀನೆ
ತಂದೆ ನೀ ಬಿಟ್ಟರೆ ಬಂಧುಗಳ್ಯಾರಿಲ್ಲ ಪ

ಒಂದು ವೃಕ್ಷದಿ ಬಂದು ಪಕ್ಷಿಗ
ಳ್ವಂದ ಗೂಡಗಲ್ಹೋಗುವಂದದಿ

ಒಂದಕೊಂದು ಸಂಬಂಧವಿಲ್ಲದ
ಬಂಧುವೆಂಬುವರೆಲ್ಲ ಪುಸಿಯು ಅ.ಪ

ಕೊಳದಿ ಮಕರಿಗೆ ಸಿಲ್ಕಿ ಬಳಲುತಿರುವ ಕರಿಯ
ಬಲವಾಗುಳಿಸಿದರಾರು ಬಳಗ ಹಿಂಡುಗಳಿರ್ದು
ನಳಿನಲೋಚನ ನೀನೆ ಗತಿಯೆನೆ
ಒಲದು ಆ ಕ್ಷಣ ಕರಿಯನುಳುಹಿದಿ
ತಿಳಿದು ಭಜಿಸುವ ದಾಸಜನಕತಿ
ಸುಲಭನೆಲೊ ನೀ ಜಲಜನಾಭ ೧

ಕುರುಪತಿಸಭೆಯೊಳು ಇರುತಿರ್ಲೈವರು ಪರಿ
ವರಸತಿ ಮಾನವನು ದುರುಳ ಕೊಳ್ಳುತಲಿರೆ
ನೆರೆದ ಪತಿಗಳು ಸುಮ್ಮನಿರುತಿರೆ
ಹರಿಯೆ ಗತಿಯೆಂದು ತರುಣಿ ಮೊರೆಯಿಡೆ
ಕರುಣದಿಂ ಬಂದು ಮಾನವ ಕಾಯ್ದಿ
ಚರಣಭಕ್ತರ ನಿರುತರಸುರಧೇನು ೨

ದೃಢದಿ ಶ್ರೀಹರಿಯೆಂದು ನುಡಿಯುವ ಬಾಲಗೆ
ಪಡೆದಪಿತ ಹಿರಣ್ಯ ಕಡುವೈರಿಯಾಗಿ
ಗಡನೆ ತೋರ್ಧರಿ ಮೂಢ ಎಲ್ಲೆನೆ
ಒಡನೆ ಕಂಬದಿ ಮೂಡಿ ದುರುಳನ
ಒಡಲ ಬಗಿದು ಪಿಡಿದು ಭಕ್ತನ
ಬಿಡದೆ ಸಲಹಿದಿ ಕಡುದಯಾನಿಧೆ ೩

ಇಳೆಪತಿ ಪಿತನಿದಿರೊಳ್ ಮಲತಾಯಿಕೃತಿಯಿಂದ
ಬಲುನೊಂದು ಧ್ರುವರಾಜ ಕಳವಳಗೊಂಡು
ಜಲಜನಾಭನ ಮೊರೆಯನಿಟ್ಟು
ಚಲಿಸದೆ ಮನಮುಟ್ಟಿ ತಪಿಸಲು
ಒಲಿದು ಧ್ರುವಪದವಿತ್ತಿ ಭಕ್ತರ
ಕಲ್ಪಿತವನೀವ ಕಲ್ಪತರು ನೀನು ೪

ಪ್ರಾಣೇಶ ಶ್ರೀರಾಮ ಧ್ಯಾನಿಪರಿಗೆ ಸತ್ಯ
ನಾನಾದೈವದ ಬಲವು ನೀನೆಯಾಗಿರುವಿ
ಕಾನನದಿ ಕಲ್ಲನ್ನು ತುಳಿದು
ದಾನ ಕೊಟ್ಟೆಯ ಜೀವ ಸುದತಿಗೆ
ಜ್ಞಾನವಿಲ್ಲದಧಮ ಎನಗೇನು ಶಕ್ಯ
ನಿನ್ನ ಮಹಿಮೆ ಪೊಗಳಲು ೫

೪೬೪

ಸ್ಮರಿಸುವ ದಾಸರ ಮೊರೆ ಕೇಳದಿರೆ ಹರಿ
ಕರುಣಾಳು ನೀನೆಂಬ ಭರವಸಿನ್ಯಾಗೆ ಪ

ಕರಿಧ್ರುವ ಬಲಿ ಪಾಂಚಾಲಿಯ ಪೊರೆದಂತೆ
ಸ್ಮರಿಪರ ಬಿಟ್ಟರೆಘಳಿಗಿರಲಾರಂತೆ
ಅರಿತು ವಿಚಾರಿಸು ನೋಡಿದವರಿಗಿದು
ಸರಿಬರುವುದೆ ನರಹರಿಯೆ ನೀನರಿಯೆ ೧

ಕರುಣಾಕರನು ನೀ ನಿಜವಾಗಿರ್ದರೆ
ತ್ವರಿತದಿ ಬಂದೆನ್ನ ಮೊರೆ ಪಾಲಿಸೆಲೊ
ದುರಿತಭಯನಿವಾರ ನೀನಾದರೆ
ದುರಿತರಾಶಿ ಗಡ ಪರಿಹರಿಸಭವ ೨

ಧರೆವರ ಧರ್ಮಗರಣ್ಯದಿ ಮುಗಿದ
ಪರುಷದನ್ನವನಿತ್ತು ನೀ ರಕ್ಷಿಸಿದೆ
ವರ ಬಿರುದು ನಿನಗಿರಬೇಕಾದರೆ
ತ್ವರಿತದಿ ಸಲಹೊ ಶ್ರೀಗುರು ರಾಮ ೩

೪೬೫

ಹರಿ ದಯಮಾಡೊ ಕರುಣದಿ ನೋಡೊ
ತರಳನ್ನ ಮನ್ನಿಸಿ ಅಭಯವ ನೀಡೊ ಪ

ನೆರೆನಂಬಿ ನಿನ್ನ ಮರೆಹೊಕ್ಕೆ ಕರುಣಾ
ಭರಣನೆ ನಿಮ್ಮಯ ತೆರೆ ಕೃಪಾನಯನ ೧

ಹೆಜ್ಜೆ ಹೆಜ್ಜೆಗೆ ಘೋರ ಸಜ್ಜಿಲ್ಲ ಸಂಸಾರ
ಸಜ್ಜನಸಂಪದನೆ ನಿರ್ಜರೇಶನೆ ಬಾರೊ ೨

ದೇವ ತವಚರಣಸೇವಕನೆನಿಸೆನ್ನ
ಮಾಯಾಮೋಹವ ಬಿಡಿಸಿ ಕಾಯೊ ಶ್ರೀರಾಮ ೩

೪೬೬

ಹರಿದಾಟ ನಿಲಿಸು ಮನದಘದೂರ ಸುಖಸಾರ
ಎರಗುವೆನು ತವಪದಕೆ ಸ್ಮರಿಸಿ ನಿಮ್ಮುಪಕಾರ ಪ

ಸಂತಸವ ಕೊಡು ಎನ್ನ ಅಂತರಂಗದಿ ನಿಂತು
ಕಂತುಪಿತ ಚಿಂತಿಪರ ಚಿಂತಾಮಣಿ ಪ್ರಭುವೆ ೧

ಅಲ್ಪಮನಸಿನ ಕುಕಲ್ಪನೆಯ ಪರಿಹರಿಸು
ಅಲ್ಪರಿವ ದೀನರಿಗೆ ಕಲ್ಪತರು ನೀನು ೨

ನಾಮಾಡಿದಪರಾಧ ಪ್ರೇಮದಿಂ ಕ್ಷಮಿಸು ಶ್ರೀ
ರಾಮ ಮಮಪ್ರಾಣೇಶ ಪ್ರೇಮಾಬ್ಧಿನಿಲಯ ೩

೪೬೭

ಹರಿದಾಸರಿಗೆ ಕಿಂಚಿತ್ತಳಿವಿಲ್ಲ ಮನವೆ
ಹರಿಯನ್ನು ನೆರೆನಂಬು ಸರಿಯಾರು ನಿನಗೆ ಪ

ದುರಿತ ಕೋಟ್ಯಾಚರಿಸಿ ನರಕಿಯಾದಜಮಿಳಗೆ
ಮರಣಕಾಲದಿ ಸಂಸ್ಮರಣ ಮಾತ್ರದಿ
ನರಕದ ಭಯತಪ್ಪಿ ಸ್ಥಿರಮುಕ್ತಿಪದವಾಯ್ತು
ಅರಿದು ನೀ ಗಟ್ಯಾಗಿ ಸ್ಮರಿಸು ಮಾಧವನ ೧

ಹರಿಸರ್ವೋತ್ತಮನೆಂಬ ತರಳನಿಗೆ ಹಿರಣ್ಯ
ಹರಿಯೆಲ್ಲಿ ತೋರದಿರೆ ಶಿರಹಾರಿಸಿಕಪನೆನಲು
ನರಹರಿಯ ರೂಪದಿಂ ಭರದಿ ಕಂಬದಿ ಬಂದು
ಹಿರಣ್ಯಕನ ಶಿರತರಿದು ಪೊರೆದ ಪ್ರಹ್ಲಾದನ ೨

ಲಲನೆ ದ್ರೌಪದಿ ಲಕ್ಷ್ಮೀನಿಲಯನ ದಯದಿಂದ
ಉಳಿದಳು ಮಾನದಿಂ ಖುಲ್ಲನ ಸಭೆಯಲಿ
ಎಲೆಮರುಳೆ ಅನುದಿನ ಚಲಿಸದೆ ಮನವಂ
ತಿಳಿದು ನೀ ಭಜಿಸೆಲೊ ಸುಲಭ ಶ್ರೀರಾಮ ೩

೪೬೮

ಹರಿಪಾದಕಮಲಕ್ಕೆ ಮರೆಹೊಕ್ಕ ಬಳಿಕ
ಮರಮರ ಮರುಗುವ ಪರಿಯು ಇನ್ಯಾಕೋ ಪ

ಪರಮಪಾವನ ತನ್ನ ಚರಣದಾಸರ ಸ್ಥಿತಿ
ಅರಿಯನೆನೆನ್ನುತ ಸ್ಥಿರವಾಗಿ ನಂಬಿ ಅ.ಪ

ಕಂತುಪಿತನಧ್ಯಾನ ಚಿಂತಾಮಣಿಯೆಂದು
ಚಿಂತಾದೂರನ ನಿಜಸ್ಮರಣೆಯೇ ಪರಷೆಂದು
ಸಂತರೊಡೆಯ ಶ್ರೀಕಾಂತನ ಭಜನೆಯೇ
ಭ್ರಾಂತಿನೀಗಿಸುವಂಥ ಕಲ್ಪತರುವಿದೆಂದು ೧

ಸೃಷ್ಟಿಕರ್ತನ ಕಥನ ಕಷ್ಟನಿವಾರಣ
ಅಷ್ಟಮೂರುತಿ ಕೀರ್ತನಷ್ಟಸಂಪದ ಪೂರ್ಣ
ಎಷ್ಟು ಮಾತ್ರಕೆ ತನ್ನ ಇಷ್ಟ ಭಕ್ತರಿಗಿಷ್ಟ
ಕಷ್ಟ ನಿವಾರಿಸಿದೆ ಬಿಡನೆಂದು ಗಟ್ಯಾಗಿ ೨

ಧ್ಯಾನಮೂರುತಿ ಎನ್ನ ಮಾನಾಪಮಾನವು
ನಿನ್ನಗೆ ಕೂಡಿತು ಎನಗಿನ್ನೇನೆಂದು

ಅನ್ಯಾಯವನು ತ್ಯಜಿಸಿ ಧ್ಯಾನವ ಬಲಿಸಿ
ಜಾನಕೀಶನೆ ಭಕ್ತಧೇನು ಶ್ರೀರಾಮೆಂದು ೩

೪೬೯

ಹರಿಯ ದಾಸರ ಪಾದ ಪರಮಭಕ್ತಿಲಿ ಎನ್ನ
ಶಿರದ ಮೇಲ್ಹೊತ್ತು ಬಿಡದಿರುವೆನನವರತ ಪ

ತಾಳಿ ವಿಮಲಭಕ್ತಿ ತಾಳದಂಡಿಗೆ ಸ
ಮ್ಮೇಳದೊಡನೆ ತ್ರಿಕಾಲವು ಬಿಡದೆ
ನೀಲವರ್ಣನ ಭಜನೆ ಮೇಲಾಗಿ ಮಾಡುವ
ರಾಲಯದಿ ನಲಿದಾಲಿಸಾನದಿಂದಪ ೧

ನಿಲಯದಂಗಳದೊಳು ತುಲಸಿವನವ ರಚಿಸ
ಚಲಭಕ್ತಿಯಲಿ ನಿತ್ಯ ಜಲಜನಾಭಂಗೆ
ಮಲತ್ರಯಂಗಳ ನೀಗಿ ಮಲಿನಗುಣವ ಕಳೆದು
ಸಲಿಸಿ ಶ್ರೀಪಾದಮಂ ಒಲಿಸಿ ಸುಖಿಸುತಿರ್ಪ ೨

ತಿಳಕೊಂಡು ಸಂಸಾರ ಕಳವಿನಿಂದುಳಕೊಂಡು
ಹೊಳೆವ ಜ್ಞಾನಜ್ಯೋತಿ ಬೆಳಗಿನೋಳ್ನಲಿಯುತ
ನಿಲಿಸಿ ಹರಿಪಾದದಿ ಚಲಿಸದೆ ಮನ ಹಂ
ಬಲಿಸಿ ತಪವ ಶೇಷಾಚಲಯಾತ್ರೆ ಮಾಳ್ಪಂಥ ೩

ಮರೆವು ಮಾಯವ ನೀಗಿ ಅರಿವಿನಾಲಯದೊಳು
ಸಿರಿಯರರಸನ ನಿಜ ಚರಿತಂಗಳರಸುತ
ಪರಮಸಾಲಿಗ್ರಾಮದ್ವರಮಹಿಮೆಯನರಿತು
ನಿರುತದಿಂ ಪೂಜಿಸಿ ಪರಮಪಾವನರೆನಿಪ ೪

ಕಾಮಿತಂಗಳ ನೀಗಿ ಕೋಮಲ್ಹೃದಯರಾಗಿ
ಪ್ರೇಮಪಿಡಿದು ಸರ್ವಭೂಮಿ ಜೀವಂಗಳೊಳ್
ನೇಮನಿತ್ಯದಿ ನಿಸ್ಸೀಮರಾಗಿ ಸತತ
ಸ್ವಾಮಿ ಶ್ರೀರಾಮನಾಮಾಮೃತ ಸುರಿಯುವ ೫

೪೭೦

ಹರಿಯ ನೆನೆವಲ್ಲಿ ಮನವೆ ನೀ ಪ
ಅರಿವು ತಿಳಿವಲ್ಲಿ ಹರಿದುಹೋಗುವ
ದುರುಳ ಸಂಸಾರಕೆ ಮರುಳನಾಗಿ ನೀ
ನರಕಕ್ಹೋಗುವಿಯಲ್ಲೋ ಅ.ಪ

ಖೊಟ್ಟಿಗುಣಳಿವಲ್ಲಿ ಮನಸಿನ
ಭ್ರಷ್ಟತ್ವ ಕಳಿವಲ್ಲಿ
ಶಿಷ್ಟರಲ್ಲಿ ಮನವಿಟ್ಟು ಉಳಿಯದೆ ನೀ
ಕಷ್ಟದೊಳಗೆ ಬಿದ್ದು ಕೆಟ್ಟು ಹೋಗುವಿಯಲ್ಲೋ ೧

ಮರವೆ ಮಾಯವನ್ನು ಮರುಳೆ ನೀ
ತರಿಯವಲ್ಲಿ ಇನ್ನು
ನಿರುತ ಮಾರ್ಗದ ಪರಿ ವಿಚಾರಿಸದೆ
ದುರಿತದೊಳಗೆ ಬಿದ್ದು ಮರುಗುವಿಯಲ್ಲೋ ೨

ಅಸೆ ನೀಗುವಲ್ಲಿ ಸಂಸಾರ
ದ್ವಾಸನೆ ಕಡಿವಲ್ಲಿ
ದಾಸರ ನಡೆನುಡಿ ಸೋಸಿಲಿಂ ತಿಳಿಯದೆ
ನಾಶನಾಗುವಿ ಯಮಪಾಶದೊಳಗೆ ಬಿದ್ದು ೩

ಸತಿಸುತರ ಮಾಯಮೋಹದಿ
ಗತಿಸಿ ಪೋಗ್ವುದು ವಯ
ಕೃತ್ರಿಮನೆ ಅತಿ ಮಂದಮತಿಯೊಳು ಬಿದ್ದು ಘನ
ವ್ಯಥೆಯ ಬಡುವಿ ಮಹಗತಿಮೋಕ್ಷ ಪಡೆಯದೆ ೪

ಮಂದಿ ಮಕ್ಕಳ್ಯಾರು ನಿನಗೀ
ಬಂಧು ಬಳಗ ಯಾರು
ಕುಂದುವ ಜಗಮಾಯದಂದ ತಿಳಿದು ಮಮ
ತಂದೆ ಶ್ರೀರಾಮನ ಹೊಂದಿಕೊಳ್ಳವಲ್ಲಿ ೫

೪೭೧

ಹರಿಯೆ ನಿಮ್ಮಯ ಚರಣಕಮಲದಿ
ನಿರುತಭಕುತಲಿ ಬೇಡುವೆ ಪ

ಪರಮ ಕರುಣಾಕರನೆ ತರಳಗೀ
ವರವ ಕರುಣಿಸು ಬೇಗನೆ ಅ.ಪ

ಪರರ ಅಂಗನೆಯರನು ನೋಡಲಿಕ್ಕೆ
ನ್ನೆರಡು ಕಣ್ಣು ಕುರುಡಾಗಲಿ
ಪರದ್ರವ್ಯ ಮುಟ್ಟಲಿಕ್ಕೆನ್ನ
ಎರಡುಕರ ಮುರಿದ್ಹೋಗಲಿ ೧

ಚಾಡಿಪೇಳುವ ಖೋಡಿ ಜಿಹ್ವೆಯು
ಒಡನೆ ಬಿದ್ದು ಹೋಗಲಿ
ಕೇಡು ಪರರಿಗೆ ಬಗೆವ ಮನ ಎ
ನ್ನೊಡಲೊಳಿಲ್ಲದ್ಹಾಂಗಾಗಲಿ ೨

ಮಂಗಳಾಂಗ ನಿಮ್ಮ ಚರಣ ಕಾಣಲೆನ್ನ
ಕಂಗಳೆರಡು ದೃಷ್ಟಿಬಲಿಸಲಿ
ರಂಗ ಶ್ರೀರಾಮನಂಘ್ರಿಕಮಲದ
ಧ್ಯಾನದಲಿ ಮನ ಒಲಿಯಲಿ ೩

೪೭೨

ಹರಿಯೆ ಪೊರೆಯೊ ಪರತರ
ಮರೆಯ ಹೊಕ್ಕೆ ಕರುಣಾಕರ ಶ್ರೀಕರ ಪ

ಸರುವತಾಪದಿಂದ ಗೆಲಿಸಿ
ಸರುವವಿಷಯದಿದ ಉಳಿಸಿ
ಪರಮ ನಿಮ್ಮ ಕರುಣ ಬರೆಸಿ
ಪೊರೆಯೊ ಸತತ ತರಳನೆಂದು ಕರವ ಪಿಡಿದು ೧

ಘೋರ ಭವಕಡಲವ
ಘೋರ ಬಟ್ಟು ಈಸಿಸಭವ
ಸ್ಥೈರಿಸದೆ ನಿಮ್ಮ ಪಾದವ ಸೇರಿದೆ ಸಲಹು
ಪರಮಕರುಣ ಸಿರಿಯರಮಣ ೨

ಮಾಯಮೋಹಗಳ ಬಿಡಿಸಿ
ಕಾಯಕರ್ಮಗಳನು ಕೆಡಿಸಿ
ತೋಯಜಾಕ್ಷನ್ನಯ್ಯ ರಾಮ
ಕಾಯೊ ದಯದಿ ಭಕುತಬಂಧು ಕರುಣಾ ಸಿಂಧು ೩

೪೭೩

ಹರಿ ಹರಿ ತವಕೃಪೆ ಕರುಣಿಸು ದೀನನೋಳ್
ಚರಣದಾಸನ ಮೊರೆ ಆಲಿಸು ದಯದಿಂದ ಪ

ಸಂಸಾರ ನಿಧಿ ಭಯ ಧ್ವಂಸಗಾರನು ನೀ
ಕಂಸಾರಿ ಭಕುತರ ಹಿಂಸಿಸದೆ ಕಾಯ್ವ ೧

ಆಧಾರ ನೀನೆ ಭವಭಾದೆ ನಿವಾರಕ
ಪಾದದಾಸರ ಅಭಿಮಾನದ ದೇವ ನೀ ೨

ಪಾಮರನಾದೆ ಶ್ರೀರಾಮ ಮರೆದು ನಿನ್ನ
ಪ್ರೇಮದಿಂ ಸಲಹೆನ್ನ ಕ್ಷೇಮವ ಪಾಲಿಸಿ ೩

೪೭೪

ಹುಚ್ಚುಮನವೆ ನಿನ್ನ ಹುಚ್ಚಾಟವನೆ ಕಂಡು
ರೊಚ್ಚುಬರುತಿದೆ ಎನಗೆ ಎಚ್ಚರಿರೆಲೆಲೇ ಪ

ಉಚ್ಚೆಕುಣಿಯಲಿ ಬಂದು ಭವದ
ಕಿಚ್ಚಿನಲಿ ಬೆಂದು ಮಾಯಾ ಜಗವ

ನೆಚ್ಚಿ ಸಕಲ ಮರೆದು ಮುಂದಿನ
ಎಚ್ಚರವೆ ಮರೆತೆಲ್ಲೋ ಪಾಪಿ ಅ.ಪ

ಒಳಗೊಂದು ಹೊರಗೊಂದು ತಿಳಿಯುತಲಳಿಯುವಿ
ಅಳಿದುಹೋಗುವ ಇಳೆಯ ಸಲೆ ಸುಖಕೊಲಿದು
ಮಲದ ಭಾಂಡದಿ ಸಿಲುಕಿ ಅನುದಿನ
ಮಲಿನಗುಣದಿಂ ತೊಳಲಿಬಳಲುತ
ಗಳಿಸಿಕೊಂಡು ಬಂದ ಸಮಯ
ಕಳೆದುಕೊಳ್ಳುವಿಯಲ್ಲೋ ಪಾಪಿ ೧

ಹಿಂದೊಂದು ಮುಂದೊಂದು ವಂದಿಸಿ ನುಡಿಯುತ
ಬಂಧಕ್ಕೀಡಾಗುವಿ ಮಂದ ನೀನಾಗಿ
ಹಂದಿಯು ಮಲ ಮೆದ್ದತೆರದಿ
ಕುಂದಿಪೋಗುವ ಬಂಧುಬಳಗಕೆ
ನಂದುನಂದೆಂಬ ವಿಷಯಲಂಪಟ
ರಂಧ್ರೆಯಲ್ಲಿ ಬಿದ್ದು ಕೆಡುವಿ ಪಾಪಿ ೨

ನುಡಿಯೊಂದು ನಡೆಯೊಂದು ಕಡುದೃಢ ನುಡಿಯಾಡಿ
ಒಡಲಕಿಚ್ಚಿಗೆ ಬಲು ಮಿಡುಕುತಲಿ
ಕೆಡುವ ತನುವಿನ ಮೋಹ ಬಿಡದೆ
ಪೊಡವಿಗಧಿಕ ನಮ್ಮೊಡೆಯ ಶ್ರೀರಾಮ
ನಡಿಯ ನಂಬದೆ ಮಡಿದುಪೋಗುವಿ
ಕಡೆಗೆ ಹೆಡತಲೆಮೃತ್ಯುಗೆದೆಯಾಗಿ ೩

೪೭೫

ಹೆದರಿಕೆ ಬರುತದೆಲೋ ಪದುಮಾಕ್ಷ
ನಿನ್ನ ಮುಂದೆ ಹೇಳಿಕೊಳ್ಳಲು ಎನಗೆ ಪ

ಹೆದರಿಕೆ ಬರುತಿದೆ ಜಗದ ಜನರು ನಿನಗೆ
ವಿಧವಿಧದಾಡುವ ಸುದ್ದಿಯ ಪೇಳಲು ಅ.ಪ

ಹಳಿವರು ಹೆಳವನೆಂದು ಅಂಜದೆ ನಿನಗೆ
ತಲೆಯಿಲ್ಲದವನೆನುವರು
ಇಲ್ಲದೆ ಹೊಟ್ಟೆಗೆ ಹುಲ್ಲುಮೆದ್ದವನೆಂದು
ಹಲವು ಬಗೆಯಲಿ ಹೀಯಾಳಿಪುದ್ದೇಳಲು ೧

ದೃಢದಿ ಭಕುತಜನರು ಬೇಡಿದ ವರವು
ಕೊಡಬೇಕಾಗುವುದೆನುತ
ಓಡಿ ಹಾವಿನಮೇಲೆ ಪವಡಿಸಿದ ಮಹ
ಕಡುಲೋಭಿಯೆಂದೆಂಬ ನುಡಿನಿನ್ನೊಳ್ಪೇಳಲು ೨

ಒದೆಸಿಕೊಂಡ್ವೊಯ್ಯುಂಠದಿ ಶೇಷಾಚಲದಿ
ಸದನಗೈದನುಯೆಂಬರು
ಇದು ಅಲ್ಲದತಿ ವಿಧವಿಧ ಲೋಕ ಸುಲಿದರ್ಥ
ನಿಧಿಗಳಿಸಿದ ಚಿನಿವಾರೆಂಬದ್ದೇಳಲು ೩

ಕುದುರೆಮಾವುತನೆಂಬರು ಎಲವೋ ರಂಗ
ಕದನಗಡಕನೆನುವರು
ಹದಿನಾರು ಸಾವಿರ ಸುದತಿಯರೊಶನಾದ
ಸುಧೆಗಳಜಾರನೆಂಬ ವಿಧಿಯನ್ನು ಪೇಳಲು ೪

ವಿಪಿನವಾಸಿಕನೆನುವರು ನಿಷ್ಕರುಣದಿ ನೀ
ಕಪಿವರನ ತರಿದೆನುವರು
ಕಪಟನಾಟಕ ನಿನ್ನ ಕಪಟ ತಿಳಿಯುವರಾರು
ಅಪರೂಪಮಹಿಮನೆ ಕೃಪಾನಿಧಿ ಶ್ರೀರಾಮ ೫

೪೭೬

ಹೆದರಿಕೆ ಯಾತರದೋ ತ್ರಿಜಗದಿ
ಪದುಮನಾಭನ ಪಾದ ಸದಮಲದಾಸರಿಗೆ ಪ

ಗರುಡನ ಮಂತ್ರಕೆ ಉರಗನ ಭಯವುಂಟೆ
ದುರಿತದಂಜಿಕೆಯುಂಟೆ ನರಹರಿಸ್ಮರಣೆಗೆ ೧

ಬಿರುಗಾಳಿ ಬೀಸಲು ಗಿರಿ ನಡುಗುವುದುಂಟೆ
ಪರಿಭವ ಬಂಧಮುಂಟೆ ಸಿರಿವರನರ್ಚಕರಿಗೆ ೨

ಶ್ರೀರಾಮನಡಿವಾರಿಜಭಜಕರ್ಗೆ
ಸಾರಮೋಕ್ಷಂಗಳು ದೂರವಿನ್ನುಂಟೆ ೩

೪೭೭

ಹೇಗೆ ಕಳಕೋಬೇಕೋ ಹರಿಹರಿ
ನೀನೆ ಕಳೆಯಬೇಕೊ ಪ

ಹ್ಯಾಗೆ ತೊಳಕೋ ಬೇಕು ತಿಳಿಯದು ಎನಗಿದು
ನೀಗದಂಥ ಈ ಅಗಾಧ ರಿಣಮುಟ್ಟು ಅ.ಪ

ಹೆತ್ತಮುಟ್ಟು ಅಲ್ಲ ತೊಳಕೊಳ್ಳ
ಲ್ಸತ್ತ ಸೂತಕಲ್ಲ
ಮತ್ತೆ ಮತ್ತೆ ಭವ ಸುತ್ತಿಸುತ್ತಿ ಬೆ
ನ್ನ್ಹತ್ತಿ ಬಿಡದೆ ಕಾಡುತ್ತ ನೋಯಿಪ ರಿಣ ೧

ನಿಚ್ಚಲಯಿರಗೊಡದು ಜಗದೊಳು
ತುಚ್ಛನ ಮಾಡುವುದು
ಮುಚ್ಚು ಮರಿಯಾದೆಯ ಬಿಚ್ಚಿಟ್ಟು ಬಯಲಿಗೆ
ಹಚ್ಚಿ ಮಾರುವಂಥ ಉಚ್ಚಿಷ್ಠ ರಿಣಮುಟ್ಟು ೨

ಭಕ್ತವತ್ಸಲರಾಮ ನೀನೆ
ಮುಕ್ತಿಪಥಕೆ ಸೋಮ
ನಿತ್ಯ ನಿರ್ಮಲಮನ ಭಕ್ತನಿಗಿತ್ತು ರಿಣ
ಮುಕ್ತನ ಮಾಡಿ ಬೇಗಂತಃಕರಣ ನೀಡೊ ೩

೪೭೮

ಹೇಗೆ ಕಳೆಯಬೇಕೋ ಹೊತ್ತು ಹೇಗೆ ಕಳೆಯಬೇಕೋ ಪ

ಹೇಗೆ ಕಳಿಲಿ ಭವಸಾಗರದಲಿ ಮನ
ನೀಗದು ಚಂಚಲ ಸಾಗರನಿಲಯ ಅ.ಪ

ಹುಟ್ಟಬಾರದಿತ್ತು ಇಹ್ಯದಿ ಹುಟ್ಟಿದ್ದೇ ತಪ್ಪಾಯಿತು
ನಿಷ್ಠೆಲಿರಗೊಡದೆನ್ನ ದುಷ್ಟಮನಸು ಘಳಿ
ಗಿಷ್ಟೆಲ್ಲ ಎಲ್ಲಿತ್ತು ಹುಟ್ಟದಿದ್ದರೆ ನಾನು ೧

ಕ್ಷಣಕ್ಷಣಕೊಂದು ರೀತಿ ಮನಸಿನ ಗಣನೆಯಿಲ್ಲದ ಭ್ರಾಂತಿ
ಜನಿಸಿದಂದಿನಿಂದ ಘನತರ ಕುಣಿಸ್ಯಾಡಿ
ಜನರ ಸೇವೆಯೊಳು ದಣಿಸಿತು ಪಾಪಿ ೨

ಅನುಗಾಲವು ಚಿಂತೆ ಜೀವಕೆ ಇನಿತು ಇಲ್ಲ ಸ್ವಸ್ಥ
ತನುಮನಧನ ನಿನಗರ್ಪಿಸಿ ಬೇಡುವೆ
ಘನ ಬೇಸತ್ತೆ ಪೊರೆ ಚಿನುಮಯ ಶ್ರೀರಾಮ ೩

೪೭೯

ಹೇಗೆಮಾಡಲು ಖರೆ ತವಧ್ಯಾನ ಹರಿ
ಬೇಗ ಮಾಡೆನ್ನಗೆ ನಿಜಮನನ ಪ

ಬಾಗಿವಂದಿಪೆ ನಾ ನಿಮ್ಮ ಚರಣ ಭವ
ರೋಗ ದಯದಿ ಮಾಡು ನಿವಾರಣ ಅ.ಪ

ಜಾಗರಮಾಡಿದರಹುದೇನು ನಿತ್ಯ
ಭಾಗವತನೋದಿದರಹುದೇನು
ಯಾಗಮಾಡಿದರಹುದೇನು ಮಹ
ಯೋಗ ಬಲಿಸಿದರಹುದೇನು
ಸೋಗು ಹಾಕಿ ಬೈರಾಗಿ ಆಗಿ ಇಳೆಯ
ಭೋಗವ ತ್ಯಜಿಸಿದರಹುದೇನು ೧

ಸ್ನಾನಮಾಡಿದರಹುದೇನು ಬಹು
ದಾನಮಾಡಿದರಹುದೇನು

ಮೌನಮಾಡಿದರಹುದೇನು ಕೌ
ಪೀಣ ಧರಿಸಿದರಹುದೇನು
ಜ್ಞಾನ ಬೋಧಿಸುತ ನಾನಾದೇಶಗಳ
ಮಾಣದೆ ತಿರಿಗಿದರಹುದೇನು ೨

ಜಪವಮಾಡಿದರಹುದೇನು ಬಲು
ಗುಪಿತ ತೋರಿದರಹುದೇನು
ತಪವ ಗೈದರಹುದೇನು ಮಹ
ವಿಪಿನ ಸೇರಿದರೆ ಅಹುದೇನು
ಚಪಲತನದಿ ಸದಾ ಅಪರೋಕ್ಷನುಡಿದು
ನಿಪುಣನೆನಿಸಿದರೆ ಅಹುದೇನು ೩

ಸಾಧುವೆನಿಸಿದರೆ ಅಹುದೇನು ಚತು
ಸ್ಸಾಧನಮಾಡಿದರಹುದೇನು
ವೇದ ಪಠಿಸಿದರೆ ಅಹುದೇನು ಅಣಿ
ಮಾದಿ ಅಷ್ಟಸಿದ್ಧಿ ಅಹುದೇನು
ಓದಿತತ್ತ್ವಪದ ಛೇದಿಸಿ ಬಿಡದೆ
ಬೋಧಕನೆನಿಸಿದರೆ ಅಹುದೇನು ೪

ಕೋಶನೋಡಿದರೆ ಅಹುದೇನು ಬಹು
ದೇಶ ನೋಡಿದರೆ ಅಹುದೇನು
ಆಸನಹಾಕಿದರಹುದೇನು ಮಂತ್ರ ಅ
ಭ್ಯಾಸ ಮಾಡಿದರೆ ಅಹುದೇನು
ದಾಸಪ್ರಿಯ ಭಯನಾಶ ಶ್ರೀರಾಮ ನಿಮ್ಮ
ಧ್ಯಾಸವೊಂದಿರೆ ಮುಕ್ತಿ ಸಿಗದೇನು ೫

೪೮೦

ಹೇ ಪಾಪಿ ಮನಸೇ ನೀ ನಾರಾಯಣೆನೆಲೋ
ಅಪಾರ ಮಹಿಮನ ಮಹಿಮೆ ತಿಳಿದು ನೋಡೋ ಪ

'ನಾ' ಎಂಬೋ ಮಹದಾದಿಬೀಜದಕ್ಷರ ತುದಿ
ನಾಲಿಗೆಯಿಂದ್ಹೊರಡುವನಿತರೊ
ಳ್ಹಿಂದಿನ ನಾನಾಜನುಮದ ಪಾಪ ಪರ್ವತವೆಲ್ಲವು
ನಿವೃತ್ತಿಯಾಗಿ ಮಹ ಪಾವನನೆನಿಪುದು ೧

'ರಾ' ಎಂದು ಮುಖದಿಂದ ಹೊರಟ ಕೂಡಲೆ
ಸರ್ವ ರವರವನರಕದ ಯಾತನಳಿದು ಭವ
ರೋಗವೆಲ್ಲನು ನೀಗಿ ಕಾಯಕರ್ಮವ ಕಡಿದು
ರಾಜಿಪ ಪರಲೋಕ ಸದರವೆನಿಸುವುದೆಲೊ ೨

'ಯ' ಎಂದು ನುಡಿಯುತಲೆ ಜನುಮ ಸಫಲವಾಗಿ
ಎಷ್ಟೋ ಕೋಟ್ಯಜ್ಞದ ಪುಣ್ಯ ಫಲವು ದೊರಕಿ
ಯಮನ ಭೀತಿಯ ಗೆಲಿಸಿ ದಾಸರೊಲುಮೆ ಲಭಿಸಿ
ಎಸೆವ ತ್ರಿಕಾಲಜ್ಞಾನ ಸ್ಥಿರವಾಹುದೆಲೊ ೩

'ಣ' ಎಂದು ಸಂಪೂರ್ಣ ಉಚ್ಚರಿಸಿದ ಮಾತ್ರವೆ
ನಿಖಿಲ ಸಂಪದ ಸಿದ್ಧಿ ಕರತಲ ಮಾಗಿ
ನಿತ್ಯ ನಿರ್ಗುಣನಂಘ್ರಿ ಕಂಗಳೊಳ್ಹೊಳೆಯುತ
ನಿತ್ಯಾನಂದದ ಪದವಿ ಕೈವಶವಹದೆಲೊ ೪

ನಿರಾಮಯ ಶ್ರೀರಾಮ ನಿಗಮಗೋಚರ ನಿರಂಜನ
ನಿಜಗುಣನನುಪಮಮಹಿಮೆ
ನಿಜಮತಿಯಿಂದರಿತು ನಿರ್ಮಲ ಮನಸಿನಿಂ
ನೆನೆಯಲು ಘನಮುಕ್ತಿ ಸಾಮ್ರಾಜ್ಯ ಪಡೆಯುವಿ ೫

೪೮೧

ಹೊಟ್ಟೆ ಎಲೆ ಹೊಟ್ಟೆ
ಭ್ರಷ್ಟ ನಿನಗಾಗಿ ಜಗದೊಳು ನಾ ಕೆಟ್ಟೆ ಪ

ಜನರ ಗೋಣು ಮುರಿದೆ ನಿನಗಾಗಿ
ಪರರಿಗ್ಹಾನಿ ಬಯಸಿದೆ ನಿನಗಾಗಿ

ಮಾನಹೀನಾದೆನು ನಿನಗಾಗಿ
ಮಾಣದ ಅಪವಾದ ಕ್ಷೋಣಿಯೊಳ್ಹೊತ್ತು ನಾ
ಕ್ಷೀಣಿಸುತಿರುವೆನು ಗೇಣ್ಹೊಟ್ಟೆ ನಿನಗಾಗಿ ೧

ಬಹು ಸುಳ್ಳನಾಡಿದೆ ನಿನಗಾಗಿ
ಮಹ ಕಳ್ಳನೆನಿಸಿದೆ ನಿನಗಾಗಿ
ತೊರೆದೊಳ್ಳೆಗುಣವ ನಿನಗಾಗಿ
ಗುರು ತಳ್ಳಿಬಿಟ್ಟೆನು ನಿನಗಾಗಿ
ತಿಳಿಯದೆ ಕೆಟ್ಟೆನು ಇಳೆಯೊಳು ತಿರುಗುತ
ಕಳವಳಿಸುತಲತಿಲೊಳ್ಹೊಟ್ಟಿ ನಿನಗಾಗಿ ೨

ನಿನ್ನ ನಂಬಿ ಮರೆದೆ ರಾಮನಾಮ
ನಿನ್ನ ನಂಬಿ ತೊರೆದೆ ನಿತ್ಯನೇಮ
ನಿನ್ನ ನಂಬಿ ಪಡೆಯದ್ಹೋದೆ ಕ್ಷೇಮ
ನಿನ್ನ ನಂಬಿ ಬಿಟ್ಟೆನು ಅತಿಶ್ರಮ
ನಿನ್ನಿಂದ ಮತಿಗೆಟ್ಟೆ ನಿನ್ನಿಂದ ವ್ಯಥೆಪಟ್ಟೆ
ನಿನ್ನಿಂದ ಗತಿಗೆಟ್ಟೆ ಸತತ ಭುವನದೊಳು ೩

೪೮೨

ಹಿಂದಿಲ್ಲ ಸ್ವಾಮಿ ಮುಂದಿಲ್ಲ
ತಂದೆ ನೀನಲ್ಲದೆ ಕಾಯುವರೆನಗಾರು ಪ

ಚರಣದಾಸರಿಗೆ ಆವರಿಸಿದ ಸಂಕಟ
ಪರಿಹರಿಸಿ ಕಾಯಲು ಹರಿಯೆ ನೀನಲ್ಲದೆ ೧

ಭಕ್ತವತ್ಸಲ ನೀನು ಮುಕ್ತಿ ದಾಯಕನಯ್ಯ
ಭಕ್ತರ ವಿಪತ್ತು ಕಳೆಯುವರಾರು ನಿನ್ಹೊರತು ೨

ಶ್ರೀಶ ಶ್ರೀರಾಮ ಜಗದೀಶ ಈ ದಾಸನ
ಆಸೆಯ ಪೂರೈಸಿ ಪೋಷಿಸು ಬೇಗನೆ ೩

೪೮೩

ಹ್ಯಾಗೆ ಒಲಿಯುವನೊ ಎನ್ನೊಡೆಯ ರಂಗ
ಹ್ಯಾಗೆ ಒಲಿಯುವನೊ ಪ

ಹ್ಯಾಗೆ ಒಲಿಯುವ ಜಾಣೆ ಪೇಳಮ್ಮ
ನಾಗಶಾಯಿ ನಿಗಮಾಗಮೊಂದಿತ
ರಾಘವೇಶನು ಬೇಗ ಒಲಿಯದಿರೆ
ನೀಗುವೆನು ಪ್ರಾಣ ಕೇಳೆ ಸಖಿಯೆ ಅ.ಪ

ಧಣಿಯು ಇಲ್ಲದ ದುರ್ದೈವ ಬಾಳು
ಹೆಣನ ಸಮವಿದು ಮನ್ನಿಸೆ ಕೆಳದಿ
ಗಣನೆಯಿಲ್ಲದ ಜನಮವ್ಯಾಕಿದು
ಸನಕಸನಂದರೆಣಿಕೆಯಿಲ್ಲದೆ
ಮಣಿದು ಆತಗೆ ಧನ್ಯರಾದದ್ದು
ನೆನೆಸಿ ಮನದೊಂದು ದಿನಸುವಾಗುವುದು
ಚಿನಮಯಾತ್ಮನ ಕಾಣದಿರಲಾರೆ ೧

ನೀರೆ ಬೇಗಿನ್ನು ಕರೆತಂದು ತೋರೆ
ಸಾರಸಾಕ್ಷನ್ನ ಅಗಲಿರಲಾರೆ
ವಾರಿಧಿಶಾಯಿನ್ನ ಹರಣದೊಡೆಯನ್ನ
ಮಾರ ಸುಂದರಪಾರ ಮಹಿಮನ
ಬಾರಿಬಾರಿಗೆ ಸ್ಮರಿಸಿ ಮನ ಬಲು
ಘೋರ ಬಡುತದೆ ವಾರಿಜಾಕ್ಷಿ ಕರೆ
ತಾರೆ ಶೀಘ್ರದಿ ನಾರಸಿಂಹನ ೨

ಕಡಲೊಳಿರುವನೋ ದೃಢದಿ ಕರೆಯಲು
ಒಡನೆ ಬರುವನೋ ಜಡಜಾಕ್ಷಿ ಕೇಳೆ
ಜಡಜನಾಭನೋ ದೃಢಕರೊಡೆಯನೋ
ಬಿಡದೆ ಆತಗೆ ಮಿಡುಕಿ ಮಿಡುಕಿ
ಹಿಡಿಕಿಯಾಯಿತು ದೇಹ ಸೊರಗಿ

ಒಡೆಯ ಶ್ರೀರಾಮನಡಿಗೆ ಹೊಂದಿ ನಾ
ತೊಡರಿನೊಳಗಿಂದ ಕಡೆಗೆ ನಿಲ್ಲುವೆ ೩

೪೮೪

ಹ್ಯಾಗೆತೀರಸಲಿ ವಚನ ಸಾಗದುಯತನ ಪ

ಆಗದ ಕಾರ್ಯದಿ ಎನ್ನ ಹೀಗೆ ನೂಕಿ ನೋಡ್ವರೇನೋ
ನಾಗಶಾಯಿ ಭಕ್ತರಭಿಮಾನ ಹ್ಯಾಗೆ ನಿನಗಿಲ್ಲ ಕರುಣಾಭರಣ ೧

ಹಿಂದೆ ಕಾಣದೆ ಬಿದ್ದ ಕುಣಿಯು ಮುಂದೆ
ಕಂಡು ಬೀಳ್ವ ಭೋಗವು
ಕಂದಗೆ ಬರದಿದ್ಯಾವ ನ್ಯಾಯವು ತಂದೆ
ಮುಂದಿದಕೇನುಪಾಯವು ೨

ಭಾರವಹಿಸಿದ ಭಕ್ತಜನರ ದೂರ ನೋಡಲೀಗೆಂತು ಕೇಳ್ವರು
ಭಾರನಿನ್ನದು ಕರುಣಮಂದಿರ ಪಾರುಮಾಡೆನ್ನ
ಶ್ರೀರಾಮ ಪ್ರಭುವರ ೩

೪೮೫

ಹ್ಯಾಗೆ ದೊರಕೀತು ನಿನ್ನ ಚರಣವು
ನಾಗಶಯನನೆನ್ನಂಥ ಪಾಪಿಗೆ ಪ

ನೀಗಿ ಹೋಯಿತು ಅರ್ಧವಯವು ಆಗಯೀಗಯಾ
ವಾಗಲೋ ಹೋಗುವುದು ದೇಹ
ಭೋಗದಾಸೆಯು ನೀಗವಲ್ಲದು ಎನಗೆ ಇನ್ನು ಅ.ಪ

ಮನದಕ್ಲೇಶವು ಕಡಿಯವಲ್ಲದು ನೀಚತನದ
ನೆನವು ಎನ್ನೊಳಳಿಯವಲ್ಲದು ಸಾಚನಾಗಿ
ನಿನ್ನ ಧ್ಯಾನದಿ ಮನವುಯೆಂಬುದು ಕ್ಷಣವು ನಿಲ್ಲದು
ಕ್ಷಣವು ಬಿಡದೆ ಅನ್ಯರೊಡವೆಯ

ಮನದೊಳನುದಿನ ನೆನೆದು ನೆನೆದು
ಘನ ಪಾಪಾತ್ಮನಾಗಿ ಚರಿಸುವೆ
ಜ್ಞಾನ ಬಾರದು ಎನಗೆ ಇನ್ನು ೧

ಒಡವೆವಸ್ತ್ರದ ಆಸೆ ಬಿಡವಲ್ಲದು ಪಾಪಿಮನವು
ಮಡದಿ ಮಕ್ಕಳ ಮಮತೆ ತೊರೀವಲ್ಲದು ಒಡನೆ ತಿಳಿದು
ಕೆಡುವ ಕಾಯದ ಮೋಹ ಮರೀವಲ್ಲದು ಜಡಮತಿಯು ಬಿಡದು
ಎಡರು ಪ್ರಪಂಚ ತೊಡರಿನೊಳು ಮನ
ವಡರಿ ಬಿಡದಲೆ ಮಿಡುಕಿ ಮಿಡುಕಿ
ಕಡೆಯುಗಾಣದೆ ಕಷ್ಟಬಡುತಿಹೆ
ಬಿಡದು ವಿಷಯದಾಸೆ ಎನಗೆ ೨

ದಾಸಜನ ವ್ಯಾಸಂಗ ಮೊದಲಿಲ್ಲ ಪಾಪಿಜನುಮ
ದೋಷಗುಣಗಳು ಒಂದುಬಿಟ್ಟಿಲ್ಲ ಒಡನೆನುಡಿದ
ಭಾಷೆಗಳನು ತಿಳಿದು ನಡೆಸಿಲ್ಲ ಆಸೆ ಹರಿದಿಲ್ಲ
ಕಾಸು ಹಣಕಾಗೇಸು ಜನರನು
ನಾಶಮಾಡಿತು ಹೇಸದಲೆ ಇನ್ನು
ಮೋಸಗಾರನ ಪೋಷಿಸುವುದು
ಶ್ರೀಶ ಶ್ರೀರಾಮ ನಿನಗೆ ಕೂಡಿತು ೩

VI. ಲೋಕ ನೀತಿ

೪೮೬

ಅಮೃತ ಸುರಿದಂತೆ ಸಜ್ಜನರ ಸಂಗ
ಅಮೃತ ಸುರಿದಂತೆ ಪ

ಅಮೃತುಂಡಿತಿಹ್ಯ ಸಾಮ್ರಾಜ್ಯದಲಿ ಬಂದು
ನಮ್ರತೆಯಿಂದಪಮೃತ್ಯು ಗೆಲಿಸುವಂಥ ಅ.ಪ

ಮಾಯ ಮುಸುಕು ತೆಗೆಸಿ ನಿರುತ
ಕಾಯಕರ್ಮ ಕೆಡಿಸಿ

ಭಾವಶುದ್ಧಮಾಡಿ ಸಾವಧಾನವಿತ್ತು
ಸಾವು ಹುಟ್ಟಳುಕಿಸಿ ಪಾವನವೆನಿಸುವ ದಿವ್ಯ ೧

ಆಶಪಾಶಕಡಿದು ವಿಷಯ
ದ್ವಾಸನೆಯನು ತ್ತೊಡೆದು
ದೋಷರಾಶಿಗಳ ನಾಶಮಾಡಿ ಭವ
ಘಾಸಿ ತಪ್ಪಿಸಿ ಮಹ ಶಾಶ್ವತಪದವೀವ ೨

ಅಡರಿಕೊಂಡು ಬರುವ ಸಂಸಾರ
ದೆಡರು ತೊಡರು ಕಡಿವ
ಪೊಡವಿತ್ರಯಂಗಳ ಒಡೆಯ ಶ್ರೀರಾಮನ
ಅಡಿದೃಢವಿತ್ತು ಮುಕ್ತಿಗೊಡೆಯನೆನಿಸುವಂಥ ೩

೪೮೭

ಆಡಣ್ಣ ನೀನಾಡಣ್ಣ ಅನುಭವದಾಟ ಆಡಣ್ಣ ಪ

ರೂಢಿಯೋಳ್ಹರಿಯ ಗಾಢಮಹಿಮೆ
ಕೊಂಡಾಡುವರೊಡನಾಟ ಅ.ಪ

ಅಳುವರ ಕಂಡರೆ ಅತ್ತಂತೆ ಕಾಣೋ
ನಗುವರ ಕಂಡರೆ ನಕ್ಕಂತೆ ಕಾಣೋ
ಅಳುವ ನಗುವರಲಿ ಸಿಲುಕಿ ಸಿಲುಕದೆ ನಿ
ನ್ನೊಳಗೆ ಮಾಧವನ ತಿಳಿದು ಆನಂದದಿ ೧

ಅವರನು ಕಂಡರೆ ಅವರಂತೆ
ಇವರನು ಕಂಡರೆ ಇವರಂತೆ
ಅವರಿವರಿಗೊಂದೆಸವನೆತೋರಿ ಸಿರಿ
ಧವನ ಪಾದ ಮನಭವನದಿಟ್ಟುಗ್ಗುತ ೨

ವಾಸನೆ ಪ್ರಥಮ ನಾಶನ ಮಾಡೊ
ದಾಸರ ಕಂಡರೆ ಸೇವೆಯ ಮಾಡೋ

ಆಶಪಾಶ ನೀಗಿ ಶ್ರೀಶ ಶ್ರೀರಾಮನ
ದಾಸನಾಗಿ ನಿಜ ಮುಕ್ತಿಯ ಕೂಡೊ ೩

೪೮೮

ಆನಂದಮೆಂದಿದಕೆ ಹೆಸರಿಟ್ಟೀ ಪಾಪಿ ಪ

ಮನಬಂದತೆರ ಸೇಂದಿ ಸೆರೆಕುಡಿದು ಉಬ್ಬಿ ಅ.ಪ

ಕೊಡ ಪಡಗ ಹೆಂಡವನು ಕುಡಿದು ಎಚ್ಚರದಪ್ಪಿ
ತಡೆಯದಲೆ ಮಲಮೂತ್ರ ಬಿಡುತದರೋಳುರುಳಿ
ಬಡಿಸಿಕೊಂಡಟ್ಟೆಯಿಂ ಒಡನೆ ಎಚ್ಚರವೊಂದಿ
ಕೆಡಿಸಿದಾನಂದಮ್ಬಿಡಿ ಕೊಡುವೆ ಶಾಪೆನುವಿ ೧

ಅವಸರದಿಂ ಜಿಹ್ವೆಯ ಸವಿರುಚಿ ಲವಲವಿಕೆಯಿಂ
ಭವಿಜನುಮಿಗಳು ಎಲ್ಲ ಕವಿದುಬಂದಿಳಿದು
ಸವಿಯಬಾರದ್ದು ಸವಿದು ಶಿವನೆನಾವೆಂದೆನುವ
ಭವಿಗಳೆಲ್ಲರು ಜಗದಿ ಶಿವನ ಪೋಲುವರೆ ೨

ಕದ್ದು ಮುಚ್ಚಿಲ್ಲದಲೆ ಮುದ್ದೆ ಮುದ್ದೆ ಗಾಂಜವನು
ಸಿದ್ಧಪತ್ರೆಂದೆನುತ ಶುದ್ಧಮತಿಗೆಟ್ಟು
ಬದ್ಧರೆಲ್ಲ ಸೇದಿ ನಿಜ ಪದ್ಧಿತಿಯನ್ನದಗೆಡಿಸಿ
ಶುದ್ಧಾತ್ಮರೆನಲು ಪರಿಶುದ್ಧರಾಗುವರೆ ೩

ನಾನುನೀನೆಂದೆಂಬ ಖೂನಡಗಿ ಎತ್ತ ತಾನೆ
ತಾನೆಂದು ಹೊಳೆವ ಬ್ರಹ್ಮ ಆನಂದ ಸೊಬಗು
ಏನೊಂದು ತಿಳಿಯದೆ ಆನಂದವೆಂದೆನುತ
ಶ್ವಾನನಂದದಿ ಕೂಗ್ವಿ ಜ್ಞಾನಾಂಧ ಅಧಮ ೪

ಹುಚ್ಚುಮನುಜನೆ ನಿನಗೆ ಹೆಚ್ಚಿನ ಗೋಜ್ಯಾಕೆ
ನಿಶ್ಚಲಭಕುತಿಂ ಬಚ್ಚಿಟ್ಟು ಮನದಿ

ಅಚ್ಯುತ ಶ್ರೀರಾಮನ ಹೆಚ್ಚೆಂದು ದೃಢವಹಿಸಿ
ಎಚ್ಚರದಿ ಭಜಿಸಿ ಭವಕಿಚ್ಚಿನಿಂದುಳಿಯೊ ೫

೪೮೯

ಆವಭೇಧವಿಲ್ಲದವನೆ ನಿಜಜ್ಞಾನಿಯು ತನು
ಭಾವವರಿತು ನಡೆಯುವನೆ ನಿಜ ಭಾಗವತನು ಪ

ಮಾನ ಅಪಮಾನ ಸಮಕಾಣುವನೆ ಸಜ್ಜನನು
ತಾನು ತನ್ನದೆಂಬ ಮಾಯವಳಿದವನೆ ಸಾಧು
ಏನು ಕೊಟ್ಟರು ಒಲ್ಲೆನೆಂಬುವನೆ ಸನ್ಯಾಸಿ
ದೀನರನು ಕಂಡು ಮನಮರುಗುವನೆ ಭಕ್ತ ೧

ನಿಜಧರ್ಮವರಿಯದ ಪಾಮರನೆ ಶೂದ್ರನು
ನಿಜವಾಕ್ಯಗಳ ಕೇಳಿ ಅಳಿವವನೆ ಭವಿಯು
ಸುಜನರಿಗೆ ತಲೆಬಾಗಿ ನಡೆವವನೆ ಸಿದ್ಧಾಂತಿ
ಕುಜನರ ಮಾತಿಗೊಳಪಡುವವನೆ ನರಕಿ ೨

ಪಿಡಿದ ವ್ರತನೇಮಗಳ ಬಿಡದವನೆ ಕಡುಗಲಿ
ಜಡದೇಹ್ಯಮೋಹವನು ತೊಡೆದವನೆ ಸತ್ಯ
ಬಡತನಕೆ ಮಿಡುಕದವ ಕಡು ಬಂಟ ಜಗದೊಳಗೆ
ಒಡೆಯ ಶ್ರೀರಾಮನಡಿ ದೃಢಯುತನೆ ಮುಕ್ತ ೩

೪೯೦

ಆವಳಿಗೆ ಪೆಣ್ಣೆಂದು ನುಡಿಯುವರೊ ನರರು
ಅವಳೆ ಮುರಿದುತಿನ್ವ ರಕ್ಕಸ್ಯೆಂದೆನ್ನಿರೊ ಪ

ಮುದ್ದು ಮುಖವನೆ ತೋರಿ ಬುದ್ಧಿನಾಶನ ಗೈದು
ಶುದ್ಧಪದ್ಧತಿ ಕೆಡಿಸಿ ಇದ್ದಾಸ್ತಿಯಳಿದು

ಬದ್ಧನೆನಿಸಿ ಮುಂದೆ ಬೇಡಿದ್ದು ಕೊಡದಿರೆ ಬಿಡದೆ
ಒದ್ದು ನೂಕ್ವದರಿಯದೆ ಶುದ್ಧ ಮೂರ್ಖರಾಗಿ ೧

ತಂದೆ ತಾಯಿನಗಲಿಸಿ ಬಂಧುಬಳಗ ದೂರೆನಿಸಿ
ಮಂದಿ ಮಕ್ಕಳೊಂದುಗಳಿಗೆ ಹೊಂದಿಇರಗೊಡದೆ
ತಂದದ್ದೆಲ್ಲ ತಿಂದು ನಿಂದೆಯಾಡುತ ಯಮನ
ಬಂಧಕ್ಕಟ್ಟುವುದರಿಯದೆ ಮಂದಮತಿಗಳಾಗಿ ೨

ತನುಮನಧನ ಸೆಳೆದು ಘನತೆನಾಶಿಸಿ ಮುಂದೆ
ಬಿನುಗರಲಿ ಬಿನುಗೆನಿಸಿ ತಿನುವುದೊಂದಿನದಿ
ಮನದರಿತು ನೋಡದಿರು ಘನಮುಕ್ತಿಯನ್ನು ಕೊಡುವ
ವನಜಾಕ್ಷ ಶ್ರೀರಾಮನಂ ಘನನೆಂದರಿಯದಲೆ ೩

೪೯೧

ಆವುದು ಖರೆಯೆಲೊ ಜೀವನೆ ಆವುದು ನಿಜವೆಲೊ ಪ

ಆವುದು ಖರೆಯಲೋ ಜೀವ ಜಗದ ಸುಖ
ಮಾಯದೆಲ್ಲನು ಭಾವಿಸಿ ನೋಡೋ ಅ.ಪ

ಬಡತನ ನಿಜವೇನೋ ನಿನಗೀ ಕಡುಸಿರಿ ಸ್ಥಿರವೇನು
ಮಡದಿ ಮಕ್ಕಳು ನಿನ್ನ ಸಂಗಡ ಕಡೆತನಕಿಪ್ಪರೇನೊ
ಹೆಡತಲೆ ಮೃತ್ಯು ಬಂದು ಪಿಡಿದು ಎಳೆಯುವಾಗ
ಅಡರಿಕೊಂಡು ನಿನ್ನ ಬಿಡಿಸಿಕೊಂಬುರೇನು ೧

ರಾಜ್ಯ ಭಂಡಾರವೆಲ್ಲ ನಿನಗೆ ಸಹಜವಾದದ್ದಲ್ಲ
ಗೋಜುಪ್ರಪಂಚ ನಿಖಿಲವಂ ದಿನಮಾಜಿಹೋಗುವುದೆಲೊ
ಸೋಜಿಗವಾಗಿ ಮಿಂಚು ತೇಜದಡಗುವಂತೆ
ಈ ಜಗ ಸಮಾಜ ನಿಜವಿನಿತಿಲ್ಲೆಲೊ ೨

ಕತ್ತೆಯಂತೆ ಕೂಗಿ ಜನ್ಮವ್ಯರ್ಥ ಕಳೆಯಬೇಡೊ
ಉತ್ತಮರಿಗೆ ಬಾಗಿ ಸತ್ಯಪಥಕೆ ಹೊಂದು ಪಾಡೊ

ನಿತ್ಯ ನಿರ್ಮಲ ಸರ್ವೋತ್ತಮ ಶ್ರೀರಾಮಪಾದ
ಭಕ್ತಿಯಿಂ ಪಾಡಿ ಮುಕ್ತಿಯ ಪಡೆಯೊ ೩

೪೯೨

ಇದಕು ಸಮ್ಮತನಾಗೆಲೋ ನೀ
ನದಕುನು ಸಮ್ಮತನಾಗೆಲೊ ಪ

ಇದು ಅದು ಎಂಬುದರ್ವಿಧವ ತಿಳಿದು ನೀ
ನೆದಕುನು ಸಮ್ಮತನಾಗೆಲೊ ಅ.ಪ

ಕಡುಸಿರಿಯೆಂಬುದು ಮರವೆಕುಣಿ
ಬಡತನವೆಂಬುದು ಅರಿವಿನಮನೆ
ಒಡೆತನವೆಂಬುದು ಪಾಪದ ಗೋಣು
ದುಡಿತವೆಂಬುವುದು ಜ್ಞಾನದ ಖನಿ
ದೃಢದಿಂದರಿದು ಹುಡುಕಾಡಿದರೋ
ಳ್ಪಿಡಕೋ ನಿನಗೆ ಹಿತವಾವುದು ನೋಡಿ ೧

ಕೆಟ್ಟ ಸಂಸಾರ ಹೇಯಮೂತ್ರ ಕುಣಿ
ನಿಷ್ಠೆ ಭಕ್ತಿ ಆನಂದಾಮೃತ ಖಣಿ
ದುಷ್ಟಜನರ ಸಂಗ ನರಕಕುಣಿ
ಶಿಷ್ಟ ಸಜ್ಜನಸಂಗ ಮುಕ್ತಿಮನೆ
ನಿಷ್ಠೆಯಿಂದರಿತು ಇಷ್ಟರೊಳಗೆ ನೀ
ಇಷ್ಟಕೆ ಬಂದದ್ದು ಹಿಡಕೋ ನೋಡಿ ೨

ನರರ ಸೇವೆ ಮಹ ದುರಿತಬೇರು
ಶರಣರ ಸೇವೆ ಸ್ಥಿರಸುಖದ ತವರು
ಬರಿದೆ ಕೆಡದೆ ಹರಿಚರಣ ಕೋರು
ಮರುಳು ಗುಣಗಳೆಲ್ಲ ತರಿದು ತೂರು
ಧೀರ ಶ್ರೀರಾಮನ ಚಾರುಚರಣ ಸೇರಿ
ಪರಮಪದವಿಯೊಳು ಲೋಲ್ಯಾಡು ೩

೪೯೩

ಇದುಸ್ನಾನ ಇದುಸ್ನಾನ ಇದುಸ್ನಾನವಯ್ಯ
ಸದಮಲಜ್ಞಾನಿಗಳು ಮನವೊಪ್ಪಿ ಮಾಡ್ವ ಪ

ಇಟ್ಟು ಹಂಗಿಸದ್ದೆ ಸ್ನಾನ ಕೊಟ್ಟು ಕುದಿಯದ್ದೆ ಸ್ನಾನ
ಕೊಟ್ಟದ್ದು ಕೊಡುವುದೇ ಶಿಷ್ಟ ತುಂಗಾಸ್ನಾನ
ನಿಷ್ಠರಾಡದ್ದೆ ಸ್ನಾನ ದುಷ್ಟಸಂಗಳಿವುದೇ ಸ್ನಾನ
ಶಿಷ್ಟಜನಸಂಗವೇ ನಿಜ ಕೃಷ್ಣಾಸ್ನಾನ ೧

ಭೋಗದಾಸ್ಯಳಿವುದೆ ಸ್ನಾನ ನೀಗಲು ಭವ ಅದು ಸ್ನಾನ
ಭಗವದ್ಭಜನೆ ಕ್ಷೀರಸಾಗರ ಸ್ನಾನ
ರಾಗನೀಗ್ವುದೆ ಸ್ನಾನ ಜಾಗರಣ ಸದಾಸ್ನಾನ
ಭಾಗವತರೊಲುಮೆ ನಿಜ ಭಾಗೀರಥೀಸ್ನಾನ ೨

ಮರೆವ ತರಿವುದೆ ಸ್ನಾನ ಅರಿವು ತಿಳಿವುದೆ ಸ್ನಾನ
ಪರಮಜ್ಞಾನ ನಿಜ ಸುರಗಂಗಾಸ್ನಾನ
ಕರುಣ ಪಡೆವುದೆ ಸ್ನಾನ ಮರಣಗೆಲಿವುದೆ ಸ್ನಾನ
ಹರಿದಾಸರೊಡನಾಟ ಸರಸ್ವತೀ ಸ್ನಾನ ೩

ವಾದನೀಗ್ವುದೆ ಸ್ನಾನ ಭೇದ ಅಳಿವುದೆ ಸ್ನಾನ
ಮಾಧವನ ಕಥಾಶ್ರವಣ ಸದಾ ಯಮುನಾ ಸ್ನಾನ
ವೇದವನರಿವುದೆ ಸ್ನಾನ ಬೋಧಪಡೆವುದೆ ಸ್ನಾನ
ಸಾಧುಸಜ್ಜನಸೇವೆ ಗೋದಾವರೀಸ್ನಾನ ೪

ನೇಮನಿತ್ಯವೆ ಸ್ನಾನ ತಾಮಸ್ಹರಣವೆ ಸ್ನಾನ
ಕಾಮತೊಳೆವುದೆ ನಿಜ ಭೀಮಾನದೀಸ್ನಾನ
ಕ್ಷೇಮಸಾಗರ ತ್ರಿಭೂಮಿಯೊಳಧಿಕ ಶ್ರೀ
ರಾಮನಡಿಭಕುತಿಮುಕ್ತಿ ಹೇಮಾನದೀಸ್ನಾನ ೫

೪೯೪

ಇದೇ ಹೌದು ಭವತರಿಯುವ ಶಸ್ತ್ರ
ಪದೇ ಪದೇ ಸಿರಿವರನ ಸ್ತೋತ್ರ ಪ

ಅಧಮಮತಿಯ ಬಿಟ್ಟು ಸದಮಲ ಮನದಿಂ
ವಿಧವಿಧ ಹರಿಯೆಂದೊದುರುತ ಕಾಣುವುದೆ ಅ.ಪ

ದಾನಧರ್ಮಯಜ್ಞ ಇವು ಯಾಕೊ
ಸ್ನಾನ ಮೌನ ಜಪ ಮತ್ತ್ಯಾಕೊ
ನಾನಾ ಮಂತ್ರ ತಂತ್ರ ಗೋಜ್ಯಾಕೆಬೇಕೊ
ಕ್ಷೋಣಿ ತಿರುಗಿ ಬಹು ದಣಿಲ್ಯಾಕೊ
ನಾನಾಪರಿಯಲಿಂದ ದೀನದಯಾಪರ
ಗಾನಲೋಲನ ಭಜನಾನಂದ ಪಡೆವುದೆ ೧

ವೇದಪುರಾಣ ಪುಣ್ಯ ಶಾಸ್ತ್ರಗಳ್ಯಾತಕೊ
ಸಾಧನಸಿದ್ಧಿಗಳ ಬಲವ್ಯಾಕೋ
ಭೇಧಯೋಗದ ಬಹು ಬೋಧಗಳ್ಯಾತಕೊ
ಓದಿಓದಿ ದಿನಗಳಿಲ್ಯಾಕೊ
ವೇದಗಮ್ಯದಾದಿ ಮೂರುತಿ ಶ್ರೀ
ಪಾದವರಿತು ಆರಾಧಿಸುತಿರುವುದೆ ೨

ಕಾಶಿ ಕಂಚಿ ಕಾಳಹಸ್ತಿ ತಿರುಗಲ್ಯಾಕೊ
ಸಾಸಿರದೈವಕೆ ಬಾಗುವುದ್ಯಾಕೊ
ಮಾಸಪಕ್ಷ ವ್ರತ ನೇಮಗಳ್ಯಾತಕೊ
ಘಾಸಿಯಾಗಿ ದೇಹ ದಂಡಿಸಲ್ಯಾಕೊ
ಶೇಷಶಯನ ನಮ್ಮ ಶ್ರೀಶ ಶ್ರೀರಾಮನ
ಲೇಸಾದ ನಾಮವೊಂದೆ ಧ್ಯಾಸದಿಟ್ಟು ನುಡಿ ೩

೪೯೫

ಇನ್ನೆಲ್ಲಿ ಪರಮುಕ್ತಿ ಸಾಧನವು ನಿಮಗೆ
ಭಿನ್ನ ಭೇದವಳಿಯದ ಕುನ್ನಿಮನುಜರಿಗೆ ಪ

ಆಸೆಮೊದಲಳಿದಿಲ್ಲ ಮೋಸಕೃತಿನೀಗಿಲ್ಲ
ಹೇಸಿ ಸಂಸಾರದ ವಾಸನ್ಹಿಂಗಿಲ್ಲ
ದೋಷಕೊಂಡದಿ ನೂಕ್ವ ಕಾಸಿನಾಸ್ಹೋಗಿಲ್ಲ
ದಾಸಜನ ವ್ಯಾಸಂಗ ಕನಸಿನೊಳಗಿಲ್ಲ ೧

ಸತಿಮೋಹ ಕಡಿದಿಲ್ಲ ಸುತರಾಸೆ ಬಿಟ್ಟಿಲ್ಲ
ಅತಿಭ್ರಮೆ ಸುಟ್ಟಿಲ್ಲ ಹಿತಚಿಂತನಿಲ್ಲ
ಸ್ಮೃತಿವಾಕ್ಯ ಅರಿತಿಲ್ಲ ಅತ್ಹಿತಪಥಗೊತ್ತಿಲ್ಲ
ಗತಿಮೋಕ್ಷ ಕೊಡುವಂಥ ಪವಿತ್ರರೊಲಿಮಿಲ್ಲ ೨

ಹಮ್ಮು ದೂರಾಗಿಲ್ಲ ಹೆಮ್ಮೆಯನು ತುಳಿದಿಲ್ಲ
ಬ್ರಹ್ಮತ್ವ ತಿಳಿದಿಲ್ಲ ಚುಮ್ಮನದಳಿಕಿಲ್ಲ
ಕರ್ಮ ತುಸು ತೊಳೆದಿಲ್ಲ ಧರ್ಮಗುಣ ಹೊಳಪಿಲ್ಲ
ನಿರ್ಮಲಾನಂದ ಪದವಿ ಮರ್ಮ ಗುರುತಿಲ್ಲ ೩

ಸತ್ಯಸನ್ಮಾರ್ಗವಿಲ್ಲ ಭೃತ್ಯನಾಗಿ ನಡೆದಿಲ್ಲ
ತತ್ವರ್ಥಮಾಡಿಲ್ಲ ಚಿತ್ತಶುದ್ಧಿಯಿಲ್ಲ
ಉತ್ತಮರೊಳಾಡಿಲ್ಲ ಮರ್ತ್ಯಗುಣ ತೊಡೆದಿಲ್ಲ
ನಿತ್ಯಸುಖ ದೊರೆವಂಥ ಸತ್ಸೇವೆಯಿಲ್ಲ ೪

ಮೂರಾರು ಕೆಡಿಸಿಲ್ಲ ಈರೈದು ತರಿಸಿಲ್ಲ
ಆರೆರಡು ಮುರಿದಿಲ್ಲ ತಾರತಮ್ಯವಿಲ್ಲ
ಸಾರಮೋಕ್ಷದೀಪ ಧೀರ ಶ್ರೀರಾಮನಡಿ ಗಂ
ಭೀರ ದಾಸತ್ವ ಸವಿಸಾರ ಕಂಡಿಲ್ಲ ೫

೪೯೬

ಇನ್ನೆಷ್ಟು ಹರಿಮಹಿಮೆ ಬಣ್ಣಿಸ್ಲೇಳಲಿ ನಿನಗೆ
ನಿನ್ನೊಳು ನೀ ತಿಳಿದು ಧನ್ಯಾನಾಗೆಲೊ ಮನಸೆ ಪ

ತನ್ನನ್ನು ಭಜಿಪರ ತನ್ನಂತೆ ನೋಡುವ
ಉನ್ನತ ಕರುಣ್ಯೆಂದು ಚೆನ್ನಾಗಿ ನೆರೆನಂಬಿ ೧

ಮೊರೆಯಿಟ್ಟು ಬೇಡುವ ಚರಣದಾಸರನಗಲಿ
ಅರೆಗಳಿಗೆಯಿರ ಹರಿ ಚರಣಕ್ಕೆ ಮರೆಬೀಳು ೨

ನಂಬಿದ ಭಕುತರ ಚರಣದಾಸರನಗಲಿ
ನಂಬಿ ನೀ ನಗಲದೆ ಗುಂಭದಿಂ ಸ್ಮರಿಸೆಲೊ ೩

ಮಾನವು ಪೋದರೇನು ಹಾನಿಯೊದಗಿದರೇನು
ಪ್ರಾಣಪೋದರು ಹರಿಧ್ಯಾನ ಮರೆಯದಿರು ೪

ನಾಶವಿಲ್ಲದೆ ತನ್ನ ದಾಸರ ಕಾಯ್ವನನು
ಮೇಷ ಶ್ರೀರಾಮಪಾದ ಧ್ಯಾಸದೊಳಿಡು ಗಟ್ಟಿ ೫

೪೯೭

ಇಲ್ಲೆಂದೆ ಇಲ್ಲೆಂದೆ ಭಕ್ತಜನಕೆ ಭಯ
ಇಲ್ಲೆಂದೆ ಇಲ್ಲೆಂದೆ ಪ

ಪುಲ್ಲನಾಭನ ಪಾದ ಎಲ್ಲ ಸಂಪದವೆಂದು
ಬಲ್ಲಂಥ ಭಕ್ತರಿಗೆಲ್ಲರೀತಿಲಿ ಭಯ ಅ.ಪ

ವಂದಿಸಿ ನುಡಿದರೆ ಬಂತೇನೆಂದೆ
ನಿಂದಿಸಿ ನುಡಿಯಲು ಕುಂದೇನೆಂದೆ
ಸಿಂಧುಶಯನನ ತಂದು ಮಾನಸವೆಂಬ
ಮಂದಿರದಿಟ್ಟವರಿಗೆಂದೆಂದಿರದು ಭಯ ೧

ಬಡತನ ಬಂದರೆ ಮಿಡುಕೇನೆಂದೆ
ಕಡುಸಿರಿಯಿರ್ದರೆ ನಿಜವೇನೆಂದೆ
ಜಡಭವ ಕನಸೆಂದು ದೃಢವಹಿಸೊಡಲೊಳು
ಮೃಡಜಧರನೆ ನಿಮ್ಮ ಆಡುವರಿಗೆ ಭಯ ೨

ಪೊಡವಿಪ ಮೆಚ್ಚಲು ಕೊಡುವುದೇನೆಂದೆ
ಕಡುಕೋಪಗೊಂಡರೆ ಕೆಡುವುದೇನೆಂದೆ
ಪೊಡವೀರೇಳನು ಒಡಲೊಳಗಿಟ್ಟವನಡಿ
ಬಿಡುದಿರುವರಿಗಿಡಿ ಭುವನದ ಭಯ ೩

ಸತಿಸುತರಿದ್ದರೆ ಹಿತವೇನೆಂದೆ
ಸತಿಸುತರಿಲ್ಲದಿರೆ ಅಹಿತವೇನೆಂದೆ
ರತಿಪತಿಪಿತನಡಿ ಸತತದಿ ಗೂಡಿಟ್ಟು
ನುತಿಪ ಭಕ್ತರಿಗೆ ಕ್ಷಿತಿಮೇಲೇತರ ಭಯ ೪

ಭೂಷಣ ಮಾಡಲದೊಂದೇ ಅಂದೆ
ದೂಷಣ ಮಾಡಲದೊಂದೇ ಅಂದೆ
ಶ್ರೀಶ ಶ್ರೀರಾಮನ ಸಾಸಿರ ನಾಮದ
ಧ್ಯಾಸದಿಟ್ಟವರಿಗೇಸು ಕಾಲದಿ ಭಯ ೫

೪೯೮

ಎಚ್ಚರಿಕ್ಹೇಳುತಾನೋ ಅಚ್ಯುತ ಅಡಿಗಡಿ
ಗೆಚ್ಚರಿಕ್ಹೇಳುತಾನೋ ಪ

ಮೆಚ್ಚಿ ಬಿಡದೆ ಎನಗೆಚ್ಚರಿಕ್ಹೇಳುತಾನೋ
ಹುಚ್ಚರಾಗಿ ಇಹ್ಯಮೆಚ್ಚಲು ಮುಂದೆಮು
ಕಿಚ್ಚುಕಾಣೆನುತಾನೋ ಅ.ಪ

ನಿಂದೆ ಬಿಡೆನ್ನುತಾನೋ ಜಗವಿದು
ಕುಂದುವುದೆನುತಾನೋ ನಿನಗಿದು
ಒಂದು ಇಲ್ಲೆನುತಾನೋ ಬಂದದ್ದು ತಿಳೀದಿರೆ
ಮುಂದೆ ನಿನಗೆ ಭವಬಂಧ ಬಿಡದೆನುತಾನೋ ೧

ನಿಶ್ಚಲಾಗೆನ್ನುತಾನೋ ಮನ ಬಹು
ಸ್ವಚ್ಛಮಾಡೆನ್ನುತಾನೋ ತನು
ಮುಚ್ಚಿ ಭಜಿಸೆನ್ನುತಾನೋ ಬಚ್ಚಿಟ್ಟು ಭಜಿಸಲು
ಇಚ್ಛೆಯಂತಿರ್ದು ನಿನ್ನ ಮೆಚ್ಚಿಕೊಂಬೆನ್ನುತಾನೋ ೨

ಮರೆವು ತಾರೆನುತಾನೊ ನಿಜ್ಜವಾ
ದರಿವು ತಿಳಿಯೆನುತಾನೋ
ಅರಿವಿನ ಕುರಹು ಕಾಣೆನುತಾನೋ ಪರಮ ಶ್ರೀರಾಮನ
ಮೆರೆವ ತರಣಿ ಕಂಡು ಹರಷದ್ಹಾಡೆನುತಾನೋ ೩

೪೯೯

ಎನ್ನಯ್ಯ ಎಲ್ಲ ನಿನ್ನದಯ್ಯ ಹರಿ
ನಿನ್ನ ಮಾಯ ಜಗ ವಿಷ್ಣುಮಯ ಪ

ಎತ್ತನೋಡಿದರು ನಿನ್ನ ಕ್ಷೇತ್ರ ಹರಿ
ಸುತ್ತ ತಿರುಗೋದೆಲ್ಲ ನಿನ್ನ ಸೂತ್ರ
ನಿತ್ಯ ನಡೆವುದೆಲ್ಲ ನಿನ್ನ ಯಾತ್ರ ಹರಿ
ಸತ್ತು ಹುಟ್ಟುವ ಭವ ನಿನ್ನ ಚಿತ್ರ ೧

ವೇದ ನಾದವೆಲ್ಲ ನಿನ್ನ ಮಂತ್ರ ಹರಿ
ಓದು ವಾದ ಎಲ್ಲ ನಿನ್ನ ತಂತ್ರ
ಬಾಧೆ ವಿನೋದ ಎಲ್ಲ ನಿನ್ನ ಯಂತ್ರ ಹರಿ
ಆದಿ ಅನಾದಿ ಸರ್ವ ನಿನ್ನ ಸ್ವತಂತ್ರ ೨

ರೋಗ ರಾಗ ಎಲ್ಲ ನಿನ್ನ ಶೂಲ ಹರಿ
ಭೋಗ ಭಾಗ್ಯವೆಲ್ಲ ನಿನ್ನ ಜಾಲ
ಯೋಗ ಜಾಗರ ಸದಾ ನಿನ್ನ ಶೀಲ ಹರಿ
ಬೈಗುಬೆಳಗುಯೆಲ್ಲ ನಿನ್ನ ಲೀಲಾ ೩

ಆಟ ನೋಟವೆಲ್ಲ ನಿನ್ನ ಮತಿ ಹರಿ
ಝಾಟ ಮಾಟ ಎಲ್ಲ ನಿನ್ನ ಕೃತಿ

ಊಟ ಕೂಟವೆಲ್ಲ ನಿನ್ನ ರತಿ ಹರಿ
ಕೋಟಿ ಕೋಟಿ ಕಲ್ಪ ನಿನ್ನ ಸ್ಮತಿ ೪

ಕುಂದು ನಿಂದೆಯಲ್ಲ ನಿನ್ನ ಜಪವು ಹರಿ
ಬಂದ ಬಂಧವೆಲ್ಲ ನಿನ್ನ ತಪವು
ಅಂದಿಗಿಂದಿಗು ನಿನ್ನ ನಾಮ ನೆನವು ಸ್ಥಿರ
ವೊಂದೆ ಕೊಟ್ಟು ಶ್ರೀರಾಮ ಸಲಹು ೫

೫೦೦

ಎಲ್ಲಿ ನೋಡಲು ನೀನಂತೆ ನೀ
ನಿಲ್ಲದಿಪ್ಪ ಜಗವಿಲ್ಲಂತೆ ಪ

ಅಲ್ಲಿ ನೋಡಲು ನೀನಂತೆ
ಇಲ್ಲಿ ನೋಡಲು ನೀನಂತೆ
ಅಲ್ಲಿ ಇಲ್ಲಿ ಎಲ್ಲ ತುಂಬಿ ಬೆಳಗುವ
ಬಲ್ಲಿದ ಹರಿ ಸರ್ವೋತ್ತಮನಂತೆ ೧

ಕ್ಷೇತ್ರ ತೀರ್ಥವೆಲ್ಲ ನೀನಂತೆ ಮಹಾ
ಯಾತ್ರೆ ಫಲಂಗಳು ನೀನಂತೆ
ಧಾತ್ರಿ ಈರೇಳಕ್ಕೆ ಸೂತ್ರಧಾರಕನಾದ
ಸ್ತೋತ್ರಕ್ಕೆ ಸಿಲುಕದ ಮಹಿಮನಂತೆ ೨

ಕಲ್ಲು ಮುಳ್ಳು ಎಲ್ಲ ಬಿಡದಂತೆ ದೇವ
ಎಲ್ಲದರೊಳು ಬೆರೆತಿರುವ್ಯಂತೆ
ಅಲ್ಲಿ ಮಲ್ಲ ಬೀರ ನೀನಂತೆ ಜಗ
ವೆಲ್ಲವು ಶ್ರೀರಾಮಮಯವಂತೆ ೩

೫೦೧

ಎಲ್ಲಿಂದ ಬಂದಿದ್ದೆಲೆ ಖೋಡಿ ನೀ
ನೆಲ್ಲಿಗೆ ಹೋಗ್ತಿದ್ದಿ ತ್ವರೆಮಾಡಿ ಪ

ಕಲ್ಲುಮುಳ್ಳೆನ್ನದೆ ಮುಂದೆ ನೋಡಿ ಜರ
ನಿಲ್ಲದೆ ಹೋಗ್ತಿದ್ದಿ ಓಡೋಡಿ ಅ.ಪ

ಏಳುಗೇಣಿನ ಕುದುರೇರಿದ್ದಿ ಭವ
ಮಾಲೆ ಕೊರಳಿಗೆ ಹಾಕಿದ್ದಿ
ಮೂಲ ಲಗಾಮವೆ ತೆಗೆದಿದ್ದೀ ನೀ
ಬೀಳುವ ಎಚ್ಚರ ಮರೆತಿದ್ದಿ ೧

ಶೀಲ ಸನ್ಮಾರ್ಗವ ಬಿಟ್ಟಿದ್ದಿ ಮಹ
ಕಾಳು ಕತ್ತಲೆಹಾದ್ಹಿಡಿದಿದ್ದಿ
ಕಾಲನಾಳಿನ ಕೈಗೆ ಸಿಗುತಿದ್ದಿ ಬಹು
ಗೋಳಿನೊಳಗೆ ಹೋಗಿ ಬೀಳುತಿದ್ದಿ ೨

ಅಸ್ಥಿರ ಕುದುರೆ ಹತ್ತಿದ್ದಿ ಬಲು
ಮಸ್ತಿಲಿಂದ ಕಣ್ಣು ಮುಚ್ಚಿದ್ದಿ
ಪುಸ್ತಿಯಿಲ್ಲದ ದಾರ್ಹಿಡಿದಿದ್ದಿ ಮುಂದೆ
ಸ್ವಸ್ಥತೆ ನೀ ಹ್ಯಾಂಗೆ ಪಡೀತಿದ್ದಿ ೩

ಯಾರನ್ನ ಬೇಡಿ ಬಂದಿದ್ದಿ ನೀ
ನಾರಸೇವೆ ಕೈಕೊಂಡಿದ್ದಿ
ದಾರಿ ತಪ್ಪಿದಾರ್ಹಿಡಿದಿದ್ದಿ ಸುವಿ
ಚಾರ ಪಥವ ಧಾರೆರೆದಿದ್ದಿ ೪

ಬಂದಕಾರ್ಯವನು ತೊರೆದಿದ್ದಿ ಮನ
ಬಂದಂತೆ ಕುಣಿಕುಣಿದಾಡುತಿದ್ದಿ
ತಂದೆ ಶ್ರೀರಾಮನ ಮರೆತಿದ್ದಿ ಈ
ಬಂಧುರಸಮಯ ವ್ಯರ್ಥ ಕಳೀತಿದ್ದಿ ೫

೫೦೨

ಎಲೆ ಎಲೆ ಎಲೆ ಥೂ ಪರದೇಸಿ ನೀ
ಸುಳ್ಳೆ ಸುಳ್ಳೆ ಮಾಡಬೇಡ ಚೌಕಾಸಿ ಪ

ತಿಳಕೊಂಡು ನೋಡು ನೀನು ಸುಧಾರಿಸಿ
ಬಲವಾಗಿ ಬರದೇನು ಹಿಂಬಾಲಿಸಿ ಅ.ಪ

ಎಷ್ಟು ದುಡಿದಿ ಸತಿಸುತರಿಗಾಗಿ ಗಂಟು
ಕಟ್ಟಿಕಟ್ಟೊಳಿಟ್ಟಿ ಇವರಿಗಾಗಿ
ಅಷ್ಟು ಬಿಟ್ಟು ನಡೀತಿದ್ದಿ ಹಾಳಾಗಿ ನಿನ್ನ
ಇಟ್ಟು ಬಂದು ಉಣುತಾರೋ ಹೋಳಿಗಿ ೧

ಕಣ್ಣು ಮುಚ್ಚ್ಯಾಟವನಾಡುತಿದ್ದಿ ನೀ
ಬಣ್ಣಗೆಟ್ಟು ಖರೆಯೆನುತಿದ್ದಿ
ಸುಣ್ಣದ್ದರಳ್ಹೊತ್ತ ಕೋಣ ಹೋಗಿ ಭರದಿ ಕಂಡು
ತಣ್ಣೀರಿನೊಳು ಬಿದ್ದು ಸತ್ತ ಗಾದಿ ೨

ವಿಷಯ ಸಂಸಾರೆಂಬುದ್ವಿಷದ ಘಟ ಇದು
ಪುಸಿಯು ಬರಿದೆ ಗಾಳಿಯ ಮಟ್ಟ
ವಸುಧೀಯೊಳಧಿಕೆಂದು ತೊಡು ನಿಷ್ಠೆ ನಮ್ಮ
ಅಸಮ ಶ್ರೀರಾಮನ ಪಾದ್ಹಿಡಿ ಗಟ್ಟಿ ೩

೫೦೩

ಎಲೆ ಎಲೆ ಎಲೆ ಮುದಿಮೂಳಿ ನಿನ್ನ
ಕಲ್ಮಷ ಇನ್ನು ತೊಳಿವಲ್ಲಿ ಪ

ತಿಳಿಯದೆ ಸುಮ್ಮನೆ ಕಳಕೊಂಡಿ ವಯವೆಲ್ಲ
ಸುಳ್ಳೆ ಸುಳ್ಳಿಗಾಗಿ ಹೋಗಿ ಮೃತ್ಯುಕೈಲಿ ಅ.ಪ

ಹಿಡಿದಿದ್ದಿ ಸುಡುಗಾಡ ಪಥವ ಇನ್ನು
ಬಿಡವಲ್ಲಿ ಮಾಯಮತವ
ಹೆಡತಲೆಮೃತ್ಯು ನಾಳೆ ಅಡರಿ ಪಿಡಿದು ನಿನ್ನ
ಕೆಡ ಕೆಡವಿ ಒದೆವಾಗ ಬಿಡಿಸೊರಾರವ್ವ ೧

ಇನಿತು ನಾಚಿಕಿಲ್ಲ ರೋಗಿ ನೀನು
ತಿಣಿತಿಣಿಕಾದಿ ಮುದಿಗೂಗಿ
ಕನಿಕರಿಲ್ಲದೆ ಯಮನ ತೊಣಪರ್ಹಿಡಿದು
ನಿನ್ನ ಹೊಗೆರ್ಹೊಣಿಕಿಲ್ಹೇರುವಾಗ ನಿನಗ್ಯಾರೆ ಕಾಗಿ ೨

ಹಣವೆಷ್ಟಿರಲು ನಿನ್ನದಲ್ಲ ನಾಳೆ
ಮನೆಮಾರು ಬರದು ಹಿಂಬಲ
ಮಣಿಕಟ್ಟೆಲವು ಮುರಿದ್ಹಣಿಯುವಾಗ
ನಿನ್ನ ತನುಜನುಜರು ಯಾರು ಹಣಿಕ್ಹಾಕುವರಿಲ್ಲ ೩

ಎಷ್ಟು ನಿನ್ನಗೆ ಬಡೆದಿದಮ್ಮಾ ನಿನ್ನ
ಖೊಟ್ಟಿ ಕಡೆಯಿಲ್ಲಮ್ಮ
ಉಟ್ಟ ಸೀರೆಯ ಬಿಡಿಸಿ ಕೊಂಡೊಯ್ದು ನಿನ್ನ
ಸುಟ್ಟು ಸುರೆಹೊಯ್ವಾಗ ಆಟ ನೋಡಮ್ಮ ೪

ಭಿನ್ನ ಭೇದಗಳನ್ನು ಕಡಿ
ನಿನ್ನ ಒಡಲೊಳು ತಿಳಕೊಂಡುನೋಡಿ
ಧನ್ಯ ಶ್ರೀರಾಮನ ಉನ್ನತ ಚರಣ
ಇನ್ನಾದರು ಮನಮುಟ್ಟಿ ನೆನೆಕಂಡ್ಯ ಖೋಡಿ ೫

೫೦೪

ಎಷ್ಟು ದಿನದ ಪೂಜೆ ಹಿಡಿದೆಣ್ಣಾ ಸತಿಯೆಂಬ ಮಾರಿದಿ-
ನ್ನೆಷ್ಟು ದಿನ ಪೂಜೆ ಮಾಡಬೇಕಣ್ಣಾ ಪ

ಎಷ್ಟು ದಿನದ ಪೂಜೆ ಹಿಡಿದಿ
ನ್ನೆಷ್ಟುದಿನ ಮುಂದೆ ಬಾಕಿ ಉಳಿದಿದೆ
ಕಷ್ಟಕಂಜದೆ ಬಿಡದೆ ಅನುದಿನ
ನಿಷ್ಠೆಯಿಂದ ಪೂಜೆ ಮಾಡುವಿ ಅ.ಪ

ಒಬ್ಬರ ಮನೆ ಮುರಿದು ತರುವಿ ಅವಳಿಗೇನೆ
ಹಬ್ಬಮಾಡಿ ಉಣಿಸುತಿರುವಿ ಮತ್ತು ಇನ್ನು

ಒಬ್ಬರ್ಯೆತರ ಬೊಬ್ಬೆ ಹೊಡೆಯುವಿ ದಬ್ಬಿ ಓಡಿಸುವಿ
ಹಬ್ಬ ಹುಣ್ಣಿಮೆ ಬರಲು ವೈಭವದುಬ್ಬಿಉಬ್ಬಿವಸ್ತ್ರ ಒಡವೆ
ಅಬ್ಬರದಿಂದುಡಿಸಿ ತೊಡಿಸಿ ಮಬ್ಬಿನಿಂದ ಹಿಗ್ಗುತಿರುವಿ ೧

ಧನವ ತಂದು ಅವಳಿಗರ್ಪಿಸಿ ಮತ್ತು ನಿನ್ನಯ
ಮನವ ಅವಳ ವಶಕೆ ಸಲ್ಲಿಸಿ ಎಂಟುಗೇಣಿನ
ತನುವು ಅವಳಾಧೀನದಲ್ಲಿರಿಸಿ ಕುಣಿವಿ ಪಶುವೆನಿಸಿ
ಕ್ಷಣವು ಬಿಡದೆ ಅವಳ ಆಜ್ಞೆಯ ಮಣಿದು
ಪಾಲಿಸಿ ದಿನಗಳೆಯುವಿ
ಶುನಗಂದದಿ ನಿನ್ನ ಸುಖದು:ಖವನ್ನು ವಿವರಿಸಿ
ನೋಡಿಕೊಳ್ಳದೆ ೨

ಬಂದಕಾರ್ಯ ಮರೆದುಬಿಟ್ಟ್ಯಲ್ಲ ಹೆಡತಲೆಮೃತ್ಯು
ಹಿಂದೆ ನಿಂತು ನಲಿಯುತಾಳಲ್ಲ ಹೇ ಪಾಪಿ ನೀನು
ಒಂದೂ ವಿಚಾರ ಮಾಡಿ ಅರೀಲಿಲ್ಲ ಮಂದನಾದೆಲ್ಲ
ತಂದೆ ಶ್ರೀರಾಮನ್ನಂತಂಘ್ರಿಗೊಂದಿ ಭಜಿಸಿ ದಾಸನಾಗಿ
ಅಂದಮಾದ ನಿತ್ಯಮುಕ್ತಿ ಪಡೆವ ಸುಸಂಧಿ
ನಡುವೆ ಹೋಗುತಾದಲ್ಲ ೩

೫೦೫

ಏತಕೆ ಒಣಭ್ರಾಂತಿ ತಿಳಿಯದು ಮೂರುದಿನದ ಸಂತಿ
ನೀತಿಗೆಟ್ಟು ಸತಿಮೋಹದಿ ಕುಳಿತೆಮದೂತರೆಳೆಯುವಾಗೇನಂತಿ ಪ

ಬರುವಾಗೊರ್ವಬಂದಿ ಬರುತಲೆ ಮಂದಿ ಮಕ್ಕಳೆಂದಿ
ಇರು ಇರುತೆಲ್ಲ ನನ್ನದೆಂದಿ
ಮರೆವಿನ ಆಲಯದೊಳು ನಿಂದಿ
ಕರುಣವಿಲ್ಲದೆತುಸು ಹೆಡತಲೆಮೃತ್ಯು
ಮುರಿದು ತಿನ್ನುವಾಗ್ಯಾರಿಲ್ಲ ಹಿಂದೆ ೧

ತನುಜನರು ಇವರು ಧನಕನಕಿರುವತನಕ ಹಿತರು
ಜನಕಜನನಿಯರು

ಕೊನೆಗೆ ಸಂಗಡ ಬರರ್‍ಯಾರು
ಕನಿಕರವಿಲ್ಲದೆ ಕಾಲದೂತರು
ಘನಬಾಧೆಪಡಿಸಲು ಬಿಡಿಸರೋರ್ವರು ೨

ಭೂಮಿ ಸೀಮೆಯೆಲ್ಲ ಈ ಮಹರಾಜ್ಯ ಭಂಡಾರ ಸುಳ್ಳು
ಪಾಮರ ಸಂಸಾರ
ಕಾಮಿಸಿ ಕೆಡಬೇಡೇಲೆ ಮಳ್ಳ
ಕಾಮಜನಕ ನಮ್ಮ ಸ್ವಾಮಿ ಶ್ರೀರಾಮನ
ನಾಮಭಜಿಸಿ ಭವಗೆಲಿದು ನೀ ಬಾಳೋ ೩

೫೦೬

ಏನಂತ ನರನೆನ್ನಬೇಕೋ
ಜಾನಕೀಶನ ಧ್ಯಾನ ಮನದೊಳಿಲ್ಲದವಗೆ ಪ

ಅನಂತ ಜನ್ಮದ ಸುಕೃತ ಒಡಗೂಡಿ
ಮಾನವನಾದದ್ದು ಖೂನವಿನತಿಲ್ಲದೆ
ಜ್ಞಾನಶೂನ್ಯನಾಗಿ ಶ್ವಾನನಂದದಿ ಕೂಗಿ
ಹೀನಭವಕೆ ಬಿದ್ದು ನರಕಕ್ಕೋಗುವನಿಗೆ ೧

ತಾನಾರೆಂಬ ವಿಚಾರವು ಇಲ್ಲದೆ
ಏನೇನು ಸುಖವಿಲ್ಲದ್ಹೇಯಸಂಸಾರದ
ಕಾನನದೊಳು ಬಿದ್ದು ಕುನ್ನಿಯಂದದಿ ಮಹ
ಜಾಣರ ಜರೆಯುತ ಜವಗೀಡಾಗುವನಿಗೆ ೨

ಹೇಸಿಪ್ರಪಂಚದ ವಾಸನ್ಹಿಡಿದು ಹಿಂದ
ಕ್ಕೇಸೇಸು ಜನಮದಿ
ಘಾಸಿಯಾದಂಥಾದ್ದು ಸೋಸಿಲಿಂ ತಿಳಕೊಂಡು
ದಾಸಾನುದಾಸರ ದಾಸನಾಗದೆ ಕಾಲಪಾಶಕ್ಕೋಗುವನಿಗೆ ೩

ಮಿಥ್ಯೆ ಕಾಣುವುದೆಲ್ಲ ನಿತ್ಯವಲ್ಲೆನ್ನುತ
ಸತ್ಯವೃತ್ತಿ ತನ್ನ ಚಿತ್ತದೊಳ್ಹಲಿಸಲು

ನಿತ್ಯ ಸುಖವನೀವ ಉತ್ತಮವಾದಂಥ
ಹೊತ್ತನು ಕಳಕೊಂಡು ಮೃತ್ಯುವಶನಾಗುವಗೆ ೪

ಸುಮನಸಕಲ್ಪದ್ರುಮ ತಂದೆ ಶ್ರೀರಾಮ
ನಮಿತ ಚರಣ ಕಂಡು ನಮಿಸಿ ಪ್ರಾರಬ್ಧವ
ಕ್ರಮದಿ ಗೆಲಿದು ನಿಜ ವಿಮಲಪದ ಪಡೆವ
ಸಮಯವನರಿಯದೆ ಯಮಲೋಕ ಸೇರುವಗೆ ೫

೫೦೭

ಏನಾಗುವುದು ತಾನಾಗಿದೆ ಜಗ
ನೀನ್ಯಾಕದರೊಳ್ಹಾಲಿಡುವ್ಯೋ ಪ

ಕಾಣುಕಾಣುತಲಿ ಶೂನ್ಯವೆನಿಪುದೆಲ್ಲ
ಜಾಣನಾಗಿ ಭವಗೆಲಿಯೆಲವೋ ಅ.ಪ

ಸತತದಿ ಸತಿಸುತರ್ಹಿತಕಾಗಿ ಬಲು
ಮತಿಗೆಟ್ಟತಿಯಾಗ್ವ್ಯಥೆಬಡುವ್ಯೋ
ಪೃಥಿವಿ ಮೇಲೆ ನಿನ್ನ ಮತಿಯಲಿಂದ ಮಣ್ಣು
ಪ್ರತಿಮೆಮಾಡಿ ಸೃಷ್ಟಿಗೊಳಿಸಿದೆಯೋ ೧

ಹಲವುವಿಧದಿ ನಾನೆ ದುಡಿದು ಧಾನ್ಯಧನ
ಗಳಿಸಿದೆನೆಂದು ಬಲು ಭ್ರಮಿಸುವೆಯೋ
ತಿಳಿದುನೋಡೆಲೆ ಬೀಜದೊಳಗೆ ಮೊಳಕೆ ತಿದ್ದಿ
ಬೆಳೆಯ ಬೆಳೆಸಿ ಸ್ಥಿತಿಮಾಡಿದೆಯೋ ೨

ಎಷ್ಟುದಿನಿರ್ದರು ಬಿಟ್ಟು ಹೋಗುವುದನು
ಗಟ್ಟಿಮಾಡ್ಯಾಕೆ ಭ್ರಷ್ಟನಾಗುವೆಯೋ
ಸೃಷ್ಟಿಸ್ಥಿತಿಲಯಕರ್ತ ಶ್ರೀರಾಮನ
ನಿಷ್ಠೆಯಿಂ ಪಾಡಿ ಮುಕ್ತಿಸುಖ ಪಡೆಯೋ ೩

೫೦೮

ಏನಿಹ್ಯದೇನಿಹ್ಯದೇನಿಹ್ಯದೋ ಸುಳ್ಳೆ
ಉದಕ ಕಡೆದರೆ ಬೆಣ್ಣಿಲ್ಲಿಹ್ಯದೋ ಪ

ಜೀವನ ಬಳಿಗ್ಹೋಗಿ ದೈನ್ಯಬಡುತ ಬಲು
ಮಣಿದು ಬೇಡಲಲ್ಲೇನಿಹ್ಯದೋ ಅ.ಪ

ಕಾಣದೆ ಬೊಗಳಿದರೇನಾದೋ ಒಣ
ಗಾಣಾತರುವವಲಲ್ಲೇನಾದೋ
ಕೋಣನ ಬಳಿಗ್ಹೋಗಿ ಸಾನುರಾಗದಿ ಒಳ್ಳೆ
ವೀಣೆ ನುಡಿಸಲಲ್ಲೇನಾದೋ ೧

ದೀನನ ಕಾಡಲು ಏನಾದೋ ಮಹ
ಹೀನನ ಸೇರಿದರೇನಾದೋ
ಜ್ಞಾನಬೋಧಾಮೃತ ಜಾಣತನದಿ ಅ
ಜ್ಞಾನಿಗೆ ತೋರಿದರೇನಾದೋ ೨

ಭಂಡರ ದಂಡಿಸಲೇನಾದೋ ಮಿಂಡೆ
ಷಂಡನ ಕೂಡಿದರೇನಾದೋ
ಮಂಡೆಬೋಳಿ ಮುಂದೆ ಗೊಂಡೆಮುತ್ತಿನ ಮಹ
ದಂಡೆಯ ತಂದಿಡಲೇನಾದೋ ೩

ಕುರುಡಗೆ ಪಥ ಕೇಳೆಲೇನಾದೋ ಬಲು
ದುರುಳ ಧರೆಯಾಳಿದರೇನಾದೋ
ಕರುಣವಿಲ್ಲದ ಪರಮ ಪಾಪಿಗಳಿ
ಗೆರಗಿ ಬೇಡಲಲ್ಲೇನಾದೋ ೪

ಮಾನವ ಇಹ್ಯಮೆಚ್ಚಲಲ್ಲೇನಾದೋ ಮತಿ
ಹೀನರ ಜಾಣತ್ವದೇನಾದೋ
ಪ್ರಾಣೇಶ ರಾಮನ ಖೂನ ತಿಳಿಯದ
ಮಾನವನಾದಲ್ಲೇನಾದೋ ೫

೫೦೯

ಏನೆಂದು ಬಣ್ಣಿಸಲಿ ಎಲೆ ಧನವೆ ನಿನ್ನ
ಮಾಣುವ ವಿಷಯಸುಖ ಅಹುದೆನಿಪ ಪರಿಯ ಪ

ಏರಿಸುವಿ ಹಿರಿಕುದುರೆ ತೋರಿಸುವಿ ದುರ್ಮದವ
ಹಾರಿಸುವಿ ಸುವಿಚಾರ ಮೀರಿಸುವಿ ಸುಪಥ
ದೂರಿಸುವಿ ಮಹನೀತಿ ಘೋರಿಸುವಿ ಬಡವರನು
ಕಾರಿಸುವಿ ತಿಂದನ್ನ ಧಾರುಣಿಯೊಳು ೧

ಮೆರೆಸುವಿ ಅಂದಣದಿ ಸುರಿಸುವಿ ದುರ್ವಚನ
ನರಸುವಿ ಎಡಬಲದಿ ಪರಿಪರಿಯ ಜನರ
ತರಿಸುವಿ ಸತಿಸುತರ ಇರಿಸುವಿ ಅರಮನೆಯೊಳ್
ಮರೆಸುವಿ ಮಹಿಮರ ಸಂದರುಶನದ ಸುಖವ ೨

ವೇದಶಾಸ್ತ್ರಕಿಳಿಸುವಿ ವಾದನುಡಿ ಕಲಿಸುವಿ ನೀ
ಸಾಧುಸಜ್ಜನರ ನಿಜಬೋಧ ತೋರಿಸುವಿಯೋ
ಭೇದನಿಕ್ಕುತ ವೈರ ಸಾಧಿಸುತ ಪರಲೋಕ
ಸಾಧನೆಯ ಕೆಡಿಸ್ಯಮಬಾಧೆಗಾನಿಸುವಿ ೩

ತೊಡಿಸುವಿ ವಿಧವಿಧದ ಒಡವೆವಸ್ತ್ರಂಗಳನು
ನುಡಿಸುವಿ ಕಡೆತನಕ ಕಡುದುಗುಡ
ಬಡಿಸುವಿ ಬಲುಜಂಬ ನಡೆಸುವಿ ದುಷ್ಪಥದಿ
ಕೆಡಿಸುವಿಯೋ ಸಲೆ ಪುಣ್ಯಪಡೆದ ನರಜನುಮ ೪

ಇನ್ನೆಷ್ಟು ಬಣ್ಣಿಸಲಿ ನಿನ್ನ ಕರುಣದ ಗುಣವ
ನಿನ್ನ ನಂಬಲು ಬಿಡದೆ ಕುನ್ನಿಯೆಂದೆನಿಸಿ
ಪನ್ನಂಗಶಯನ ಮಮ ಸನ್ನುತಾಂಗ ಶ್ರೀರಾಮ
ನುನ್ನತಂಘ್ರಿಯ ಧ್ಯಾನವನ್ನು ಅಗಲಿಸುವಿ ೫

೫೧೦

ಏಸು ರೂಪಾಯ್ಗೆ ಕೊಂಡು ಕೊಂಡೆವ್ವಾ
ಒಸರುವ ಗಡಿಗೆ ಪ
ಏಸುರೂಪಾಯ್ಗೆ ಕೊಂಡುಕೊಂಡೆವ್ವಾ
ಏಸುರಾಪಾಯ್ಗೆ ಕೊಂಡುಕೊಂಡಿ
ಹೇಸಿಕೊಳ್ಳದೆ ಇದನು ನೀನು
ಬೇಸರಿಲ್ಲದೆ ತೊಳೆಯುತಿದ್ದಿ
ವಾಸನಿಕ್ಕಿ ನಾರುತಿದೆ ಅ.ಪ

ಎಂಥ ಕುಂಬಾರಿದನು ಮಾಡಿದ ಎಷ್ಟುಕಾಲದಿ
ಕುಂತು ಇದಕೆ ಶೋಧ ಹುಡುಕಿದ ಅವನು ದಾವ
ಸಂತೆಯೊಳಗೆ ಕುಂತು ಮಾರಿದ ಕೊಂಡೇನುತಿಳಿದ
ತಂತು ತಿಳಿಯದೆ ಹೊತ್ತುಕೊಂಡು
ನಿಂತಿಯಿದರ ಖ್ಯಾಲಿನೊಳಗೆ
ಸಂತೆ ತೀರಿಹೋಗಲಾಗೇನಂತ ಹೇಳುವಿ ಕೇಳುವವರಿಗೆ ೧

ಕಷ್ಟದ್ಹೊತ್ತು ಕುದಿಯುತಿದ್ದ್ಯಲ್ಲ ಹುಚ್ಚು
ಎಷ್ಟುದುಡಿದು ತುಂಬುತಿದ್ದ್ಯಲ್ಲ ನಿಲ್ಲದಿನಿತು
ಅಷ್ಟು ಒಸರಿ ಬಸಿಯುತಾದಲ್ಲ ಖೂನ ನಿನಗಿಲ್ಲ
ನಟ್ಟನಡುವೆ ಗಂಟುಬಿದ್ದು
ಕೊಟ್ಟು ನಿನಗೆ ಕಷ್ಟ ವಿಧ ವಿಧ
ಕಟ್ಟ ಕಡೆಗೆ ಕೈಯ ಬಿಟ್ಟು ಕೆಟ್ಟು ಮಣ್ಣು ಕೂಡುತಾದೆ ೨

ಮಸಣಿಬುದ್ಧಿ ನೀಗಿ ಕೇಳಮ್ಮ ನಿಜವನಿರುತ
ಕುಶಲರ್ಹೇಳುವ ಮಾತು ತಿಳಿಯಮ್ಮ ಮುಂದ ಮಹಕಾಲ
ನಿಶೆಯು ಒದಗುತದೆ ತಂಗೆಮ್ಮ ಹುಸಿಯಲ್ಲವಮ್ಮ
ಮಸಿಯ ಗಡಿಗ್ಹಿಡಿದು ಹಸನಮಾಡಿ
ವಸುಧೆಗಧಿಕ ಶ್ರೀರಾಮಪಾದ
ಕುಸುಮಕರ್ಪಿಸಿ ಧನ್ಯಳಾಗಿ ಅಸಮಮೋಕ್ಷಪದವಿ ಪಡೆಯೆ ೩

೫೧೧

ಒಬ್ಬರ ಮಾತ್ಯಾಕೆ ನಾಲಗೆ ನೀನು
ಉಬ್ಬದೆ ಸುಮ್ಮನಿರು ನಾಲಗೆ ಪ

ಮಬ್ಬಿನಿಂದ ನೀ ಒಬ್ಬರ ಮಾತಾಡಿ
ಕೊಬ್ಬಿನಿಂ ಕೆಡಬೇಡ ನಾಲಗೆ ಅ.ಪ

ಮಂದಿ ಮಾತಾಡಲು ನಾಲಗೆ ನಿನಗೆ
ಬಂದ ಭಾಗ್ಯವೇನು ನಾಲಗೆ
ಒಂದು ಅರಿಯದೆ ಮನಬಂದಂತೆ ಮಾತಾಡಿ
ಅಂದಗೆಡಲಿ ಬ್ಯಾಡ ನಾಲಗೆ ೧

ನಿಂದೆಯಾಡಬೇಡ ನಾಲಗೆ ನೀನು
ಕುಂದುವಡೆಯ ಬೇಡ ನಾಲಗೆ
ಒಂದಿನ್ಹೋಗ್ವುದು ನಿನಗೆಂದಿಗೆ ತಪ್ಪದು
ಮುಂದಿನ ಸುಖ ನೋಡು ನಾಲಗೆ ೨

ಸತ್ಯ ತಪ್ಪಬೇಡ ನಾಲಗೆ ನೀನ
ಸತ್ಯ ನುಡಿಯ ಬೇಡ ನಾಲಗೆ
ಇತ್ತ ವಚನ ತಪ್ಪಿ ವ್ಯರ್ಥವಾಗಿ ನಾಳೆ
ಮೃತ್ಯುಗೀಡಾಗ ಬ್ಯಾಡ ನಾಲಗೆ ೩

ಸುಳ್ಳನಾಡಬೇಡ ನಾಲಗೆ ಸದಾ
ಒಳ್ಳೆ ಮಾತಾಡು ಕಂಡ್ಯ ನಾಲಗೆ
ಸುಳ್ಳು ಈ ಜಗಕೆ ಮಳ್ಳನಾಗಿ ಯಮ
ಕೊಳ್ಳಕೆ ಬೀಳ ಬ್ಯಾಡ ನಾಲಗೆ ೪

ಹಾಳುಗೋಜ್ಯಾಕೆ ಕಂಡ್ಯ ನಾಲಗೆ ಕಾಲ
ಹೇಳಿ ಬರದು ನಿನಗೆ ನಾಲಗೆ
ಶೀಲಮನಸಿನಿಂದ ಪಾಲ ಶ್ರೀರಾಮಪಾದ
ಕಾಲತ್ರಯದಿ ನೆನೆ ನಾಲಗೆ ೫

೫೧೨

ಓಡುತ ಹೋಗುತಾದೋ ಹೊತ್ತು ನೀನು
ನೋಡೇನೆಂದರೆ ಆಗದು ಮತ್ತು ಪ

ಬೇಡಲು ಬಿಡದೆಲೊ ಹೆಡತಲೆಮೃತ್ಯು
ಹುಡುಕಾಡಿ ಪಡಕೋ ನೀ ಕೆಡದ ಸಂಪತ್ತು ಅ.ಪ

ಗಜಿಬಿಜಿಸಂಸಾರ ಸೂಡಿಗೆ ನೀನು
ಗಿಜಿಗಿಜ್ಯಾಗದೆ ನಿಲ್ಲು ಕಡೆಗೆ
ಸುಜನರಿಗೊಂದಿಸಿ ಭುಜಗಾದ್ರಿಶಯನನ
ನಿಜಪದ ಮಜದಿಂದ ಭಜಿಸಿಕೋ ತುರ್ತು ೧

ಕಾಳನಾಳಿನ ದಾಳಿಗೆಲಿದು ಸ್ಥಿರ
ಬಾಳುವ ನಿಜಪದವರಿದು
ನೀಲಶಾಮನ ಲೀಲೆ ಮೇಲೆಂದ್ಹಿಗ್ಗುವ ದಾಸ
ರ್ಹೇಳಿಕೆ ಕೇಳಿ ನೀ ಪಾಲಿಸು ತುರ್ತು ೨

ನಡೆನುಡಿ ಎರಡೊಂದೆ ಮಾಡೊ ಇನ್ನು
ಜಡಮತಿ ಗಡನೆ ಈಡ್ಯಾಡೋ
ಪೊಡವಿಗಧಿಕ ನಮ್ಮ ಒಡೆಯ ಶ್ರೀರಾಮನೆಂ
ದ್ಹೊಡಿ ಹೊಡಿ ಡಂಗುರ ದೃಢವಾಗಿ ಅರ್ತು ೩

೫೧೩

ಕಾಣದೆ ಸುಳ್ಳೆ ಬಡಿದಾಡ್ತಿರ್ರ್ಯಾಕಣ್ಣ
ನಾನ್ಹೋಗತನ ನಿಮಗೆ ಮುಕ್ತಿಯಿಲ್ಲಣ್ಣ ಪ

ಪ್ರಾಚೀನ ಹಿರಿಯರ ಸಾಕ್ಷಿಕೊಡುವೆ ನಿಮಗೆ
ಜ್ಞಾನದಿಂ ಕೇಳಿ ತಿಳೀಬಹುದಣ್ಣ ಅ.ಪ

ಘನವಂತ ಸತ್ಯವ್ರತ ಭೃಗು ಗಾರ್ಗೆಯರು
ಇನಿಸುತಿಳಿಯದೆ ವಿಶ್ವಾಮಿತ್ರನು

ಘನಶ್ರಮಬಟ್ಟರು ಮುನಿ ವರದನಾರದರು
ದಿನದಿನ ತ್ರಿಣಿಯರು ದರ್ಶನಿದ್ದವರು
ಜನಕ ರಾಜರ್ಷಿಯು ಮುನಿ ಅತ್ರಿಮಹಿಮರು
ನಾನ್ಹೋಗತನ ಮುಕ್ತಿ ಸಿಗದೆ ಬಳಲಿದರು ೧

ಸನಕಾದಿ ಸಾನಂದ ಮಹರ್ಷಿಗಳು
ಮುನಿಶ್ರೇಷ್ಠ ಬಲ್ಲಿದ ವಾಲ್ಮೀಕಾದಿಗಳು
ಶೌನಕಶುಕಭರದ್ವಾಜಮುನಿಗಳು
ಗಣನೆಯಿಲ್ಲದ ಮಿಕ್ಕ ಪತಿತಮೋಕ್ಷಿಗಳು
ಕನಕ ಪುರಂದರ ಜ್ಞಾನಿಗಳಿವರ್ಗೆಲ್ಲ
ನಾನ್ಹೋಗತನ ಮುಕ್ತಿ ಆಗಿಲ್ಲ ಕೇಳೋ ೨

ನಾನ್ಹೋಗದದಕಜ ಕಳಕೊಂಡ ಶಿರವ
ನಾನು ಹೋಗಿದ್ದರೆ ಅಳಿತಿದ್ದಿಲ್ಲೆಲವೋ
ಖೂನವಿಲ್ಲದೆ ಕೂಗಿ ಕೆಡಬೇಡಿ ನೀವು
ಜ್ಞಾನವಿಡಿದು ಭವ ಹೊಂದಿರಿ ಗೆಲವು
ನಾನ್ಹೋದಮೇಲೆ ಜಾನಕಿ ಶ್ರೀರಾಮ
ಮಾಣದೆ ಕೊಡುವನು ಮುಕ್ತಿ ಸಂಪದವ ೩

೫೧೪

ಕಾರು ಯಾರಮನೆಗುಂಟು ಖೋಡಿ
ಚೋರತ್ವದಪಹಾರ ಮಾಡಿ ತಿಂದದ್ದೆಲ್ಲ ಪ

ಕಾಯಜನಯ್ಯನ ದಿವ್ಯ ಚರಿತಗಳನ್ನು
ಬಾಯಿಂದ ಪೊಗಳುತ ಕೈಯಿಂದ ಬರೆದು
ಮಾಯಾಮೋಹವ ಬಿಡದೆ ನ್ಯಾಯಮಾರ್ಗವತಪ್ಪ
ನ್ಯಾಯದಿಂ ಪರರೊಡವೆ ಬಾಯ್ಬಡಿದು ತಿಂದದ್ದು ೧

ನಳಿನನಾಭನ ವಿಮಲ ಸುಲಲಿತ ಮಹಿಮೆಗಳ
ತಿಳಿದು ಆನಂದದಿಂ ನಲಿನಲಿದು ಹಿಗ್ಗದೆ

ಇಳೆಯ ವಾಸನೆಯಿಂದ ಅಳಿವ ಸುಖದಾಸೆಗೆ
ಇಳೆಜನರ ಗಳಿಕೆಯನು ಕಳವಿನಿಂ ತಿಂದದ್ದು ೨

ಭೂಮಿಯೊಳಧಿಕ ಶ್ರೀರಾಮನ ದಾತೃತ್ವ
ಹೇ ಮನವೆ ನೀ ತಿಳಿದು ಪಾಮರತ್ವ ಬಿಡದೆ
ಕಾಮಿತದೊಳು ಬಿದ್ದು ಭೂಮಿ ಜನರೆದುರಿಗೆ
ಸ್ವಾಮಿಭಕ್ತಿಯ ತೋರಿ ಕಾಮಿಸಿ ತಿಂದದ್ದು ೩

೫೧೫

ಕೇಳಬಾರದೋ ಕರ್ಣದಿಂ ಕೇಳಬಾರದೋ ಪ

ಕೇಳಬಾರದು ಕೀಳರಾಡುವ
ಕೀಳುವಚನ ಕಾಲತ್ರಯದಿ ಅ.ಪ

ಪರರ ಗುಣವ ಜರೆದು ತಮ್ಮ
ಮರುಳಗುಣವ ಪಿರಿದೆನಿಪ
ದುರುಳರೊಚನ ಕೇಳುತ್ತೊಡನೆ
ಹರಿದು ಪೋಗ್ವುದು ಪೂರ್ವಪುಣ್ಯ ೧

ಮರವೆ ಮಾಯ ದುರ್ವರ್ತನ ಸತತ
ದುರಾಚಾರದಿ ಹೊರಳುವಂಥ
ಪರಮನೀಚರ ಮಾತಿಗ್ಹೋಗಲು
ನರಕ ತಪ್ಪದು ಕಡೆಯತನಕ ೨

ಗುರುಹಿರಿಯರನು ನಿಂದಿಪ
ನರಕಿಗಳ ಆವಾಸದಿರಲು
ಶರಣರಸ ಕರುಣಾಭರಣ
ಸಿರಿಯರಾಮ ಮರೆಯಾಗ್ವ ೩

೫೧೬

ಕೇಳವ್ವ ತಂಗಿ ಕೇಳವ್ವ
ಕೇಳಿ ತಿಳಿದು ನೀ ಬಾಳವ್ವ ಪ

ನೀಲವರ್ಣನ ಕೃಪೆಯ ಪಡೆಯಲಿಕ್ಕೆ
ನಾಳೆಂದರೆ ಮನೆಹಾಳವ್ವ ಅ.ಪ

ಅಂಬುಜಾಕ್ಷನ ಪಾದಪಕಮಲವ್ವ ನೀ
ನಂಬಿದ್ದಿ ಬಿಡಬೇಡ ಸಂಗವ್ವ
ನಂಬಿದ ಭಕ್ತರ ಬೆಂಬಲಿಸಾತನು
ಇಂಬುಗೊಟ್ಟು ಕಾಯ್ವ ಸಂಭ್ರಮ ಕೀರ್ತೆವ್ವ ೧

ಒಂದೆ ಮನಸಿನ ಬಾಗವ್ವ ಗೋ
ವಿಂದನ ವರಪಡಿ ಚೆಂದವ್ವ
ಮಂದರಧರನ ಹೊಂದಿಕೊಳ್ಳಲಿಕ್ಕೆ
ಹಿಂದು ಮುಂದು ನೋಡಬೇಡ ಮುಕ್ತ್ಯವ್ವ ೨

ಒಂದಿನ ಹೋಗ್ವುದು ಸತ್ಯವ್ವ ತಂಗಿ
ಸಂದೇಹ್ಯ ಪಡಬೇಡ ಹುಚ್ಚವ್ವ
ತಂದೆ ಶ್ರೀರಾಮ ಗತಿಯೆಂದು ನಂಬಲು ನಿನಗೆ
ಬಂಧನವೆಲ್ಲ ಬೈಲವ್ವ ೩

೫೧೭

ಕುಂಟೆ ಹೊಡೆಯೊ ಜಾಣ ಅದನೋಡಿ
ಕುಂಟೆ ಹರಗೋ ಜಾಣ ಪ

ಕುಂಟೆ ಹೊಡ್ಯೋನಾಗಿ ಕಂಟಿಕಡಿದು ನೀ
ಎಂಟೆತ್ತುಗಳ ಹೂಡಿ ಮಂಟಪದ್ಹೊಲವನ್ನು ಅ.ಪ

ಅರಿವೆಮಡಿಕೆಹೊಡೆಯೊ ಮರವ್ಯೆಂಬ
ಕರಿಕಿದಡ್ಡನಳಿಯೊ

ಶರಣೆಂಬಗುದ್ದಲ್ಹಿಡಿಯೊ ಗರುವೆಂಬ
ದುರಿತಕರುಣಗಳಗಿಯೊ
ತೆರಪಿಲ್ಲದ್ಹೇಳುತ ಜರಾಮರಣೆಂಬ ಕಸ
ಕರುಣೆಂಬ ಮಾಗಿ ಮಡಿ ಮಾಡಿ ಭರದಿ ಹಸನಮಾಡು ೧

ಧ್ಯಾನ ದಾಸರಸೇವೆಯೆಂದೆಂಬುವ
ಖೂನ ಮಾಡೆಲೊ ಬದುವ
ದಾನಧರ್ಮಯೆಂಬುವ ಸತತದಿ
ಹನಿಸು ಗೊಬ್ಬರವ
ಜ್ಞಾನಿಸಂಗವೆಂಬ ಜಾಣಬೆದೆಗಾಲದಿ
ಜ್ಞಾನಕೂರಿಗೆಯಿಂದ ಧ್ಯಾನಬೀಜವ ಬಿತ್ತು ೨

ಮನನೆಂಬಬೆಳೆ ಕಾಯೋ ನಿಜವಾದ
ನೆನೆವೆಂಬರ ಕವಣ್ಹಿಡಿಯೊ
ಮನಚಂಚಲ್ಹಕ್ಕ್ಹೊಡೆಯೊ
ಶಾಂತಿಸದ್ಗುಣವೆಂಬ ಫಲ ಪಡೆಯೊ
ಘನತರ ದೃಢವೆಂಬ ಧಾನ್ಯರಾಸಿಮಾಡಿ
ವನಜಾಕ್ಷ ಶ್ರೀರಾಮನೊನರುಹಕರ್ಪಿಸು ೩

೫೧೮

ಗಾಳಿಗಿಟ್ಟ ದೀಪಕಾಣಿರೋ ಈ ಸಂಸಾರ
ಗಾಳಿಗಿಟ್ಟ ದೀಪಕಾಣಿರೋ ಪ

ಗಾಳಿಗಿಟ್ಟ ದೀಪಕಾಣಿರೋ ಬೀಳು ಜಗದ ಬಾಳು ಎಲ್ಲ
ನೀಲಶಾಮನ ಪಾದನಂಬಿ ಕಾಲನಾಳಿನ ದಾಳಿ ಗೆಲಿಯಿರೋ ಅ.ಪ

ಸೂತ್ರಬೊಂಬೆಯಂತೆ ಕುಣಿಯುವ ಈ ದೇಹವೆಂಬ
ಪಾತ್ರೆಯೊಳಗೆ ತುಂಬಿ ತುಳುಕುವ ಆ ಗಾಳಿ ನಿಮಗೆ
ಖಾತ್ರಿಯೇನೋ ಮೂಢ ಪೇ ಜೀವ ತಿಳಕೋ ಸತ್ಯವ

ಕ್ಷೇತ್ರ ಕ್ಷೇತ್ರಿಯೆನಿಸಿ ತನ್ನ ಸೂತ್ರದಿಂದ ನಡೆಸುವಂಥ
ಸೂತ್ರಧಾರಿಯ ಭಜಿಸಿ ಭವದ ಯಾತ್ರೆ ಜಯವ ಪೊಂದಿರಯ್ಯ ೧

ಮಾಯೆಯಿಂದ ಕಲ್ಪಿಸಿರುವ ಈ ಮಾಯಕಲ್ಪ
ಮಾಯೆಯೊಳಗೆ ಲಯಿಸುತಿರುವ ಆ ಮಾಯಗಾರ
ಮಾಯದಾಟ ಆಡುತಿರುವ ತಿಳಿರೋ ನಿಜವ
ಮಾಯತುಂಬಿ ಮಾಯಬೆಳಗಿ ಮಾಯಜಗವೆನಿಸಿ ತೋರ್ಪ
ಮಾಯಮಹಿಮನ ಮರೆಯಬಿದ್ದು ಮಾಯಮೃತ್ಯು ಗೆಲ್ಲಿರಯ್ಯ ೨

ವಿಷಮಕನಸಿನಂತೆ ತೋರುವ ಈ ಇಂದ್ರಜಾಲ
ಹಸನಗೆಡಿಸಿ ನಿಮಿಷದಡಗುವ ಈ ಹೇಯ ಮಲ
ಅಸಮಸುಖಕೆ ಬೆಂಕಿಹಚ್ಚುವ ಪಾಪಕೊಂಡವ
ಅಸಮಜ್ಞಾನದಿಂದ ದಾಂಟಿ ವಸುಧೆಗಧಿಕ ಶ್ರೀರಾಮಪಾದ
ಕುಸುಮಕ್ಹೊಂದಿ ನಿರ್ಮಲೆನಿಸಿ ಎಸೆವಮೋಕ್ಷ ಪಡೆಯಿರಯ್ಯ ೩

೫೧೯

ಗೂಳ್ಯಾಗಿ ಮೆರೆಯಣ್ಣ ಶ್ರೀಹರಿ
ಗೂಳ್ಯಾಗಿ ಮೆರೆಯಣ್ಣ ಪ

ಗೂಳ್ಯಾಗಿ ಮೆರೆಯೆಲೊ ಮೂಳಮಾನವರ
ಆಳಾಗಿ ಕೆಡದ್ಯಮದಾಳಿಯ ಗೆಲಿದು ಅ.ಪ

ಅದ್ರಿಧರನಡಿಯ ಪ್ರೇಮವೆಂಬ
ಮುದ್ರೆಯನ್ನು ಪಡೆಯೋ
ಕ್ಷುದ್ರದಾನವ ಹರರುದ್ರಾದಿನುತ ಸ
ಮುದ್ರಶಾಯಿಧ್ಯಾನ ಭದ್ರಮಾಡಿಟ್ಟುಕೊಂಡು ೧

ಕುಜನರ ಸಂಗ ತಳ್ಳೋ ಸುಸಂಗ
ಭುಜವ ಬೆಳೆಸಿಕೊಳ್ಳೋ
ಭುಜಗಶಯನನ ನಿಜಚರಣದ ಮಹ
ಭಜನೆವೆಂದೆಂಬುವ ಝೂಲ ಧರಿಸಿಕೊಂಡು ೨

ತಾಮಸವನ್ನು ನೀಗಿ ಸುಜನರ
ಪ್ರೇಮಪಾತ್ರನಾಗಿ
ಶಾಮಸುಂದರ ಶ್ರೀರಾಮನಾಮ ತ್ರಿ
ಭೂಮಿಗಧಿಕೆಂದು ನಿಸ್ಸೀಮ ಡುರುಕಿ ಹೊಡಿ ೩

೫೨೦

ಚಂದಮ್ಮ ಬಲು ಚೆಂದಮ್ಮ ಗೋ
ವಿಂದನ ದಾಸರ ಸಂಗಮ್ಮ ಪ

ಇಂದಿರೇಶನ ಪಾದ ಪದ್ಮಮ್ಮ ನೀ
ನ್ನೊಂದಿ ಭಜಿಸು ಸದಾನಂದಮ್ಮ ಅ.ಪ

ಸಂದೇಹ ಕಡಿಯಂತರಂಗಮ್ಮ ಮು
ಕ್ಕುಂದನತಿಳಿ ನಿಜಲಿಂಗಮ್ಮ
ನಿಂದೆ ಬಳಸದಿರು ತುಂಗಮ್ಮ ಭವ
ಬಂಧವು ನಿನಗಿಲ್ಲ ಗಂಗಮ್ಮ ೧

ಸಾಧಿಸು ನಿಜದೃಢ ತುಳಸಮ್ಮ ಸಂ
ಪಾದಿಸು ನಿಜಜ್ಞಾನ ಶರಣಮ್ಮ
ಸಾಧುಜನಕೆ ಬಾಗು ಸುಶೀಲಮ್ಮ ಪರ
ಸಾಧನೆ ನಿನ್ನಗೆ ಸರಸಮ್ಮ ೨

ಕಾಮಿತಕಳಿ ಭಾಗ್ಯಲಕ್ಷಮ್ಮ ನೀ
ತಾಮಸತೊಳಿ ಮನ ಸೀತಮ್ಮ
ಸ್ವಾಮಿಧ್ಯಾನಪಿಡಿ ಸತ್ಯಮ್ಮ ಶ್ರೀ
ರಾಮನ ನಂಬುನೀ ಮುಕ್ತ್ಯಮ್ಮ ೩

೫೨೧

ಜಗದೊಳು ಬಂದೀ ಜಗವೇನು ಕಂಡೀ
ಜಗದ ಮಾಯೆಗೆ ಸಿಲ್ಕಿ ಬಗೆ ತಿಳಿಯದ್ಹೋದಿ ಪ

ಉನ್ನತ ಜನುಮ ಅನ್ಯಥಾ ಕಳೆದಿ
ಉಣ್ಣೆ ಕೆಚ್ಚಲೊಳೀದ್ರ್ಹಾಲುಣ್ಣದಂತಾದಿ ೧

ವಿಮಲ ಸುಖದೆಬಂದಿ ಶ್ರಮಗೆಟ್ಟು ನಡೆದಿ
ಕಮಲದಡಿಯ ಕಪ್ಪೆ ಬಂಡು ಕುಡೀದ್ಹಾಗಾದಿ ೨

ಎಂಥ ಸಮಯ ಇದರಂತರರಿಯದ್ಹೋದಿ
ಅಂತರಾತ್ಮನ ಕಾಣದಂತಕಗೀಡಾದಿ ೩

ನಿಜವಬಯಸಿಬಂದಿ ನಿಜತಿಳಿಯದ್ಹೋದಿ
ಮಾಜುವುದುದಕೆ ಬರಿದೆ ಗಿಜಿಗಿಜಿಯಾದಿ ೪

ಕಲ್ಪದ್ರುವದಿ ನಿಂದಿ ಅಲ್ಪರಿಗಾಲ್ಪರಿದಿ
ಕಲ್ಪಿತವನು ಪೂರಮಾಳ್ಪ ರಾಮನ ಮರೆದಿ ೫

೫೨೨

ಜಡಮತಿಗಡ ಕಡಿದೀಡ್ಯಾಡಿ
ಪಡಿರೋ ಸನ್ಮಾರ್ಗವ ಹುಡುಕ್ಯಾಡಿ ಪ

ಗಡಗಡಸದೃಢದಯಿಡುತೋಡೋಡಿ
ಪಡಿರೋ ಕಡು ಅನಂದ್ವೊಯ್ಕುಂಠ ನೋಡಿ ಅ.ಪ

ಚಿಂತೆ ಭ್ರಾಂತಿಗಳ ದೂರಮಾಡಿ ನಿ
ಶ್ಚಿಂತರಾಗಿರೋ ಮನ ಮಡಿಮಾಡಿ
ಶಾಂತಿತೈಲ್ವೊಯ್ದು ಜ್ಞಾನಜ್ಯೋತಿಕುಡಿ ಚಾಚಿ
ನಿಂತು ನೋಡಿರೋ ಹರಿಪುರದಕಡೆ
ಅಂತ್ಯ ಪಾರಿಲ್ಲದಾತ್ಯಂತ ಪ್ರಕಾಶದಿಂ
ನಿಂತು ಬೆಳಗುತಾರೋ ಅನಂತಸೂರ್ಯರು ಕೂಡಿ ೧

ಬೋಧಾದಿಮಯ ಮಹದ್ವಾರಗಳು ಮತ್ತು
ವೇದ ನಿರ್ಣಯ ಪುರಬೀದಿಗಳು
ಆದಿಅಂತಿಲ್ಲದಷ್ಟ ಭೋಗಗಳು ವಿ

ನೋದ ಮುಕ್ತಿ ಕಾಂತೇರಾಟಗಳು
ವೇದವೇದಾಂತ ಅಹ್ಲಾದದಿಂ ಪೊಗಳುವ
ಸಾಧು ಸುಜನ ಮಹದಾದಿಪದವಿಗಳು ೨

ಕೇವಲ ಯತಿಋಷಿಸ್ತೋಮಗಳ ಬಲು
ಸೇವಿಪ ಸುರಮುನಿಗಣಗಳು
ಕೋವಿದ ನಾರದಾದಿ ಗಾನಗಳು ರಂಭೆ
ನಾಯಕಿಯರ ಮಹನರ್ತನಗಳು
ಸಾವಿರಮುಖಪೀಠದ್ದೊಳೆವ ಶ್ರೀರಾಮನ
ಪಾವನಪಾದಕಂಡು ಸಾವ್ಪುಟ್ಟು ಗೆಲಿರೆಲೋ ೩

೫೨೩

ಜಡಮತಿ ಮನುಜ ಡಂಭವ ತ್ಯಜಿಸೊ
ದೃಢದಿಂದ್ಹರಿಪಾದ ಸತತದಿ ಭಜಿಸೋ ಪ

ಒಡಲೊಳ್ವಂಚಕನಾಗಿ ಹೊರಗೆ ಬಹುಮಾನವ
ಪಡೆದರೆ ಹರಿ ನಿನ್ನ ಮೆಚ್ಚುವ ನೇನೋ ಅ.ಪ

ನಿರುತ ಮಾನಸದೊಳ್ ಮನೆಮಾಡಿಹ್ಯ ಪ್ರಭು
ಮರೆವೆ ಪರದೆ ತೆಗೆದಿರವಿಟ್ಟು ನೋಡೋ
ಅರಿಯದ ನರರು ನಿನ್ಹರಿಯನೆನಲು
ಕರಿವರದ ಕಮಲನಾಭನರಿಯನೆ ಮರುಳೆ ೧

ಮರುಳನೆ ದುರಿತವ ಸ್ಮರಿಸವನಿತರಲಿ
ಅರಿಯುವ ಹರಿ ನಿನ್ನಂತರದಲಿ ನಿಂದು
ಮರುಳುಮತಿಯ ನೀಗಿ ಹೊರಒಳಗೊಂದಾಗಿ
ಅರೆಲವನಿಲ್ಲದೆ ಪರಮನಂ ಧ್ಯಾನಿಸೋ ೨

ಧರೆಮೆಚ್ಚಿ ನಡೆದರೆ ಬರುವುದೇನೆಲೊ ನಿನ
ಗ್ಹರಿಮೆಚ್ಚಿ ನಡೆವುದೆ ಪರಮಸೌಭಾಗ್ಯ

ಹರಿಗಂಜಿ ನಡೆಯದೆ ಧರೆಗಂಜಿ ನಡೆದರೆ
ಧರೆಯಾಣ್ಮ ಶ್ರೀರಾಮ ಮರೆಯಾಗುವನೇಲೋ ೩

೫೨೪

ಜಾತಿಭ್ರಷ್ಟ ಹೊಲೆಮಾದಿಗರಿವರಲ್ಲವೇನೋ
ನೀತಿಬಾಹಿರರಾಗಿ ಆಚರಿಸುವವರು ಪ

ಪನ್ನಂಗಶಯನ ಉನ್ನತ ಕತೆ ಕೀರ್ತ
ನ್ಯನ್ನು ಕೇಳೆನೆ ಮುಖವನ್ನು ಹಿಂತಿರುವಿ
ಭಿನ್ನ ಬೇಸರಿಲ್ಲದೆ ಅನ್ಯಜನ ಸುದ್ದಿಯೊಳು
ಕುನ್ನಿಯಂದದಿ ದಿನಗಳನ್ನು ಕಳೆವವರು ೧

ಆಲಯದ ಸತಿಯಳ ತಾಳದೆ ತುಸುತಪ್ಪು
ತಾಳಿಯನ್ಹರಕೊಂಡು ದಾಳೀಯ ಹೊಡೆದು
ಮೇಲುಜಾತಿಲಿ ಹುಟ್ಟಿ ಕೀಳು ಸೂಳೇರಿಗೊಲಿದು
ಹೇಳಿದತೆರ ಕುಣಿದು ಬೀಳುಗಳೆವವರು ೨

ಸದ್ಧರ್ಮಕಾರ್ಯಕ್ಕೆ ಇದ್ದುದ ಸಲ್ಲಿಸೆನಲು
ಕದ್ದು ತಂದುಕೊಡುವೆವೆಂದಬದ್ಧ ನುಡಿಯುವವರು
ಬದ್ಧ........ಬಂದು ಒದ್ದು ಕೂಡ್ರಿಸಲಾಗ
ಸದ್ದಿಲ್ಲದೆ ತಂದು ಬೇಡಿದ್ದು ಕೊಡುವವರು ೩

ಜ್ಞಾನಿಗಳು ಬಂದರೆ ಗೋಣೆತ್ತಿನೋಡದೆ
ಹೀನಜನರಿಗೆ ಬಹುಮಾನ ಕೊಡುವವರು
ಧ್ಯಾನ ದಾಸರ ತರದಿ ಜ್ಞಾನದ ಮಾತ್ಹೇಳಿ
ಗೇಣ್ಹೊಟ್ಟಿಗೆ ಪರರ ಗೋಣು ಮುರಿವವರು ೪

ತಾಸಿನ ಮೋಜೆಂಬ ನಾಶನ ಜಗಮಾಯ
ಮೋಸನರಿಯದೆ ಯಮಪಾಶದೊಳು ಬಿದ್ದು
ದಾಸಜನಪ್ರಿಯ ಜಗದೀಶ ಶ್ರೀರಾಮನ
ಧ್ಯಾಸಮುರಿದು ದುಃಸ್ಸಹವಾಸದಿರುವವರು ೫

೫೨೫

ಟೊಳ್ಳು ಮಾನವ ನೀನು ತಿಳಿ ಮಮಕುಲವ
ಪೇಳುವೆನು ತಿಳಿದು ಭವದ ನೆಲೆ ಪ

ಒಳಹೊರಗೊಂದಾಗಿ ನಳಿನಿನಾಭನ ಪ್ರೇಮ
ಗಳಿಸುವ ಕುಲ ನಂದು ಅ.ಪ

ಅಲ್ಲಯೆಂಬುವಂಥ ಅಲ್ಲೆಂಬ ಸೊಲ್ಲು ತಿಳಿಯುವಂಥ
ಅಲ್ಲ ಅಲ್ಲಯೆಂಬ ಖುಲ್ಲ ಜನರ ಬಳಿ
ನಿಲ್ಲದಂಥ ಬಲ್ಲಿದ ಕುಲ ನಂದು ೧

ಹರಿಯ ಜರೆಯುವಂಥ ಪರಮ ದುರುಳರನೊದೆವಂಥ
ಹರಿಹರಿಯೆಂದೆಂಬ ವರಸುಧೆಯಮೃತಭರಿತ
ಪರಲೋಕದ ಅರಿವಿನ ಕುಲನಂದು ೨

ತಾಮಸವನು ತ್ಯಜಿಸಿ ದಾಸರ ಪ್ರೇಮವನು ಬಯಸಿ
ಭೂಮಿಯೊಳು ಶ್ರೀರಾಮರಹೀಮೆಂದು
ನೇಮಿಸಿಕೊಂಡ ನಿಸ್ಸೀಮಕುಲವು ನಂದು ೩

೫೨೬

ಡೌಲಿನ ಡೌಲ್ಯಾಕೆ ಮಾಡ್ತೀ
ಕಾಲತೀರದ ಮೇಲೇನೆಂದು ಹೇಳ್ತೀ ಪ

ಹೊಯ್ಮಾಲಿತನದ್ಹೊಲೆಕೆಲಸ ಮಾಡಿಕೂತಿ
ಸೈಮಾಡಿ ಬರಕೊಟ್ಟದೆಲ್ಲ ಮರೆತಿ ಅ.ಪ

ಕಾಯವೆಂಬ ಹೊಲ ಕೌಲಿಗೆ ಹಿಡಿದಿ
ಮಾಯ ಮರವೆಯೆಂಬ ಮುಳ್ಳು ಬೆಳೆಸಿದಿ
ಹೇಯವಿಷಯವೆಂಬ ಸೆದೆಯ ಕೆಡವಿದಿ
ಸಾವು ಹುಟ್ಟುಯೆಂಬ ಕೊರಡಗಿದ್ಹೋದಿ

ಕಾವಲಾದೆಲೆ ಮೂಳಿ ನಿನ್ನ ಎಡಬಲದಿ
ವಾಯಿದೆ ಸಮೀಪಬಂತು ಮುಂದೇನು ಹಾದಿ ೧

ಕ್ರೋಧ ಎಂದೆಂಬ ಅಲಬು ಕಿತ್ತದೆ
ಭೇದ ಎಂದೆಂಬುವ ಜೇಕು ತೋಡದೆ
ವಾದವೆಂಬ ಬೋರೆ ಜಡ್ಡು ಕಡಿಯದೆ
ಖೇದಯೆಂದೆಂಬ ಕರಿಕೆದಡ್ಡ ನಳಿಯದೆ
ಶೋಧವಿನಿತಿಲ್ಲದೆ ಮುಸುಕಿಟ್ಟು ಮಲಗಿದಿ
ಕಾದುವ ಒಡೆಯನಿಗೀಡೇನು ಮಾಡ್ದೀ ೨

ಚಿತ್ತಶುದ್ಧಿಯೆಂಬ ಬದುವು ಕೆಡಿಸಿದಿ
ನಿತ್ಯ ನಿರ್ಮಲತೆಯೆಂಬ ಬಾಂದು ಒಡೆಸಿದಿ
ಸತ್ಯ ಸನ್ಮಾರ್ಗೆಂಬ ಸೀಮೆಯ ಮುರಿದಿ
ತತ್ವ ವಿಚಾರವೆಂಬ ಒಡ್ಡುರೆಗಡಿದೀದಿ
ನಿತ್ಯನಿರ್ಮಲ ನಮ್ಮ ಕರ್ತು ಶ್ರೀರಾಮನ
ಅರ್ತು ಭಜಿಸಿದೆ ಯಮಗ್ವ್ಯರ್ಥ ತುತ್ತಾದಿ ೩

೫೨೭

ಡಂಕವ ಸಾರಿದನೋ ಯಮ ತನ್ನ ನಗರದಿ
ಘಂಟೆಯ ನುಡಿಸಿದನು ಪ

ಡಂಕಸಾರಿದ ತನ್ನ ತುಂಟದೂತರಿಗ್ವೊ
ಯ್ಕುಂಠನ ದಾಸರ ತಂಟೆಯು ಬೇಡೆಂದು ಅ.ಪ

ಕಾಲಕಾಲದಿ ಹರಿಯಕಥೆ ಕೀರ್ತ
ನಾಲಿಸುವರ ನೆರೆಯು
ತಾಳದಮ್ಮಡಿ ಸಮ್ಮೇಳದೊಡನೆ ಆ
ನೀಲಶ್ಯಾಮನ ಭಜಿಪರಾಳಿನಾಳನುಕಂಡು
ಕಾಲನಾಲುಗಳೆಂದ್ಹೇಳದೆ ಬನ್ನಿರೆಂದು ೧

ಮಂದಿರಂಗಳದಿ ವೃಂದಾವನ
ದಂದ ಕಂಡಾಕ್ಷಣದಿ
ಸಿಂಧುಶಯನ ಬಂಧುಭಕ್ತರ
ಮಂದಿರವಿದೆಂದು ಹಿಂದಕ್ಕೆ ನೋಡದೆ
ಸಂಧ್ಹಿಡಿದೋಡಿ ಪುರ ಬಂದು ಸೇರಿರೆಂದು ೨

ಪರರಂಗನೆಯರ ಸ್ಮರಿಸುವ
ಪರಮ ನೀಚರನ್ನು
ನರಹರಿ ಸ್ಮರಣೆಯ ಅರಿಯದ ಅಧಮರ
ಕರುಣಿಸದೆ ತುಸುಮುರಿದು ಮುಸುಕಿಕಟ್ಟಿ
ದರದರನೆಳೆತಂದು ಉರಿಯೊಳ್ತೊಯಿರೆಂದು ೩

ಪರದ್ರವ್ಯವಪಹರಿಸಿ ಲಂಚದಿಂದ
ಸರುವ ತನ್ನದೆನಿಸಿ
ನಿರುತ ಮಡದಿಮಕ್ಕಳೊರೆವ ದುರಾತ್ಮನರ
ಗುರುತಳನೆಳತಂದು ಕರಿಗಿದಸೀಸಬಾಯೊಳ್
ವೆರಸಿ ಜನಕಕೊಂಡದುರುಳಿಸಿಬಿಡಿರೆಂದು ೪

ವೇಣು ಕರದಿ ಪಿಡಿದು ಬಾಣಾರಿ
ಧ್ಯಾನದೊಳಗೆ ಬರೆದು
ಜಾನಕೀಶನ ಲೀಲೆ ಗಾನದಿಂ ಪಾಡುತ
ಆನಂದಿಪ ಮಹಜ್ಞಾನಿಗಳನು ಕಂಡು
ಕಾಣದಂತೆ ಸಿಕ್ಕ ಜಾಣ್ಣುಡಿದೋಡಿರೆಂದು ೫

ಇಂದಿರೇಶನದಿನದಿ ಅನ್ನವನು
ತಿಂದ ಮೂಢರ ಭರದಿ
ತಂದು ಒದೆದು ಮಹಗಂಧಮದು
ಗಂಧನಾರುವ ಮಲತಿಂದು ಬದುಕಿರೆಲೊ
ಎಂದು ಮನೆಹೊರಗಿನ ಮಂದಿರದಿಡಿರೆಂದು ೬

ವಿಮಲ ತುಳಸೀಮಣಿಯ ಧರಿಸಿ
ಅಮಿತ ಮಹಿಮನ ಚರಿಯ

ವಿಮಲಮನಸರಾಗಿ ಕ್ರಮದಿ ಬರುವ ಶ್ರೀ
ರಾಮದಾಸರ ಪಾದಕಮಲಗಳನು ಕಂಡು
ಯಮದೂತರೆನ್ನದೆ ನಮಿಸಿ ಬನ್ನಿರೆಂದು ೭

೫೨೮

ತಾನೆ ದೊರೆವುದೇನೋ ಸುಖ
ನಾನಾಜನ್ಮದ ಪುಣ್ಯವಿಲ್ಲದೆ ಪ

ಮೃಷ್ಟಾನ್ನವುಂಡು ಮೆರೆವುದೀಗ
ಕೊಟ್ಟು ಅನ್ನ ಹುಟ್ಟಿದವಗಿಲ್ಲದೆ
ಇಟ್ಟುತೊಟ್ಟು ಶೃಂಗಾರದಿಂದ
ಸೃಷ್ಟಿಯಿಂದ್ವಸ್ತ್ರ ವಡವೆಗಳು
ಕೊಟ್ಟು ಹುಟ್ಟಿದ ಪುಣ್ಯರಿಗಲ್ಲದೆ ೧

ಕೋಮಲಯುವತಿ ದೊರೆವುದೀಗ
ಭೂಮಿಯೊಳ್ಕನ್ಯಾದಾನಿಗಲ್ಲದೆ
ಭೂಮಿಸೀಮೆಗಳಿಸಿ ಬಲು
ಕ್ಷೇಮದಿಂದ ಬಾಳ್ವುದೀಗ
ಭೂಮಿಸೀಮೆ ದಾನಗೈದ
ಆ ಮಹಾಪುಣ್ಯವಂತರಿಗಲ್ಲದೆ ೨

ನಿಖಿಲಸುಖದಿ ಮೆರೆವುದೀಗ
ಭಕುತಜನರಪ್ಪ ತೃಪ್ತರಿಗಲ್ಲದೆ
ಅಖಿಲಪದಕೆ ಅಧಿಕವೆನಿಪ
ಮುಕುತಿಪದವಿ ಪಡೆವುದಮಿತ
ಮುಕುತಿದಾಯಕ ಶ್ರೀರಾಮಪಾದ
ಭಕುತಾನುಭಕುತರಿಗಲ್ಲದೆ ೩

೫೨೯

ತಿಳಿಯದೆ ಬೊಗಳುವದೆಲ್ಲಲ್ಲ ನಿಜ
ತಿಳಿದರೆ ವಲಿತಾ ಬ್ಯಾರಿಲ್ಲ ಪ

ಮುಲ್ಲ ಶಾಸ್ತ್ರದ ಮೂಲವ ತಿಳಿಯದೆ
ಜೊಳ್ಳುಕೂಗಿಗೆ ಮುಕ್ತಿಲ್ಲಿಲ್ಲ ಅ.ಪ

ಭ್ರಷ್ಟತ್ವವಳಿಯುದೆ ಅಲ್ಲಲ್ಲ ಮುಂದೆ
ನಿಷ್ಠನಾಗಲು ಕಷ್ಟ ಇಲ್ಲಲ್ಲ
ದುಷ್ಟತನಳಿದುಳಿ ಬಿಸ್ಮಿಲ್ಲ ಸತ್ಯ
ಶಿಷ್ಟರೊಳಾಡ್ವುದೆ ಸೊಲ್ಲಲ್ಲ ೧

ಕಾಲನ ಗೆಲುವದೆ ನಿಜಮೌಲ ವನ
ಮಾಲನ ಭಜನದೆ ತಿಳಿ ಲಾಯಿಲಾ
ನೀಲಶಾಮನ ಮಹದಾಲಯದಿಟ್ಟು ಸು
ಶೀಲನಾದವನೆ ಮಹದ್ದೌಲ ೨

ಮಹಮ್ಮದನಾಗ್ವದೆ ಸೊಲ್ಲಲ್ಲ ತನ್ನ
ಅಹಮ್ಮದನಾಗ್ವದೇಕರ್ಬಲ
ಅಹಂ ವಹಂ ನೀಗಿ ರಾಮರಹೀಂ ನೆಲೆ ತಿಳಿ
ಭವಜನುಮ ಮುಂದಿಲ್ಲಲ್ಲ ೩

೫೩೦

ತುಪಾಕಿ ಬಾರೊ ಮಾಡೊ ಮನುಜ
ತುಪಾಕಿ ಬಾರೊ ಮಾಡೊ ಪ

ತುಪಾಕಿ ಬಾರೊ ಮಾಡೊ ಸೊಬಗಿನಿಂದ
ನೀ ಭುಜಗಶಯನ ಶ್ರೀಹರಿಯ ಧ್ಯಾನವೆಂಬ ಅ.ಪ

ಚಿತ್ತಶುದ್ಧಿಯೆಂಬ ಮದ್ದು ತುಂಬಿ
ಭರ್ತಿಮಾಡಿಕೊಳವೆಯ

ಸತ್ಯಗುಣವೆಂಬ ಭಡಿ ಪಿಡಿ
ದೊತ್ತಿ ಜಡಿಯೊ ಭಕ್ತಿ ಬಾಹ್ವಿನಿಂದ
ಎತ್ತಿ ಸಾಮರ್ಥ್ಯದಿ
ಮಿಥ್ಯದೇಹವನು
ಹತ್ತಿ ಬೇಂಟೆನಾಡೊ ೧

ತಂಟಿಕೊಂಡು ಬರುವ ಬೇಗ ತಿಳಿ
ಎಂಟು ಕೋಣನ ಸುಳಿವ
ಗಂಟಲಕ್ಕೆ ಹಾರುತಿರುವ ಆರುಹುಲಿ
ಬಂಟನಾಗಿ ತರಿಯೆಲವೊ ವೈ
ಕುಂಠನ ಕೃಪೆಯೆಂಬ
ಬಂಟಬಲವು ಕೂಡಿ
ಬೇಂಟೆನಾಡೆಲೊ ೨

ಮೂರುಮಂದಿರವ ಕಟ್ಟಿಕೊಂಡು
ಧೀರನಾಗಿ ನಲಿಯೊ
ಸಾರಿಬರುವ ಏಳು ಕೊಳ್ಳಗಳ
ಹಾರಿ ಮುಂದಕೆ ನಡೆಯೊ
ಘೋರ ದುರ್ಗುಣ ಮೃಗ
ಸೂರೆಮಾಡಿ ಮಹಧೀರ
ಶ್ರೀರಾಮನ ಚಾರುಚರಣ ಸೇರು ೩

೫೩೧

ಥೂ ನಿನ್ನ ಮೋರೆಗೆ ಬೆಂಕ್ಯೂಚ್ಚ ಮನವೆ
ಇನ್ನಾದರೂ ಇಂಥ ಕುಯುಕ್ತಿ ಬಿಡು ಮನವೆ ಪ

ಮುನ್ನ ನೀ ಪಡೆದದ್ದು ನಿನ್ನಗಿರಲಿಕ್ಕಾಗಿ
ಅನ್ಯರೊಡವೆಯ ಬಯಸಿ ಕಣ್ಣಿಕ್ಕಿ ಕುದಿವಿ
ಕುನ್ನಿಮನಸೆ ನಾಳೆ ಕಣ್ಣಿನೊಳುರಿಗೆಂಡ
ವನ್ನು ತುಂಬಿಸುವೆ ಮನಚೆನ್ನಾಗಿ ನೋಡೊ ೧

ಎತ್ತೆತ್ತಲೋ ಬೇಡಿ ಮಿಥ್ಯ ಸತಿಸುತರಿಗೆ
ತೊತ್ತಾಗಿ ದುಡಿದು ಮುದಿಕತ್ತೆ ನೀನಾದಿ
ಮೃತ್ಯುಗೆ ತುತ್ತಾಗಿ ಅತ್ತತ್ತು ಬಾಯಿಬಿಡುವ
ಹೊತ್ತಿಗಿರರಾರಾರು ಅರ್ತು ನೀ ನೋಡೊ ೨

ಚಿತ್ತಜಪಿತನಂಘ್ರಿ ಸತ್ಯಭಜನಕೆ ಕರೆಯೆ
ಸುತ್ತಿ ಮಲುಗುವಿ ಸತಿಸತ್ತಳುವನಂತೆ
ಮತ್ತೆ ಎತ್ತಕೆ ಕರೆಯೆ ವತ್ತರಿಲ್ಲ ಓಡ್ವಿ
ಮುಕ್ತಿಕೊಂಡೆಯ್ವೆ ಮನ ತೊತ್ತಾಗಬೇಡೊ ೩

ದಾಸಾನುದಾಸರ ದೂಷಣೆಯ ಮಾಡಿ ಮಹ
ಹಾಸ್ಯದಿಂ ನಗುವಿ ಭವಪಾಶದೊಳ್ಸಿಲ್ಕಿ
ನಾಶಬುದ್ಧಿಯ ಬಿಡು ಹೇಸಿಮನುಜನೆ ಯಮ
ಪಾಶ ಬರುವುದು ಮುಂದೆ ಸೋಸಿ ನೀನೋಡೊ ೪

ನೆರೆದು ತೋರುವ ಸಂತೆಪರಿಯಂತೆ ಸಂಸಾರ
ಮರೆಮೋಸದ ಉರುಲು ದುರಿತದ ತವರು
ಮರುಳತನವನು ನೀಗಿ ಪರಮ ಶ್ರೀರಾಮನ
ಚರಣಸ್ಮರಣೆಯೊಳಿರ್ದು ವರಮುಕ್ತಿ ಪಡೆಯೊ ೫

೫೩೨

ದಾವಲ್ಲಿ ಕೂತಿದ್ದೀಯೊ ರೋಗಿಷ್ಠ
ನೀ ಕಾಯ ಎನ್ನನು ಕಾಯ್ಕೊಂಡು ಪ

ಜೀವಕಂಟಕನಾಗಿ ಹೇಯದಿಂದೊಡಗೂಡಿ
ಆವಕಾಲದಿ ರೋಗದ್ವೊರಳುತ ಎಲೆ ಖೋಡಿ ಅ.ಪ

ಏನು ಕರ್ಮವ ಮಾಡಿದ್ದೋ ಪಾಪಾತ್ಮ ನೀ
ಹೀನಸ್ಥಿತಿಯ ಪೊಂದಿದಿ
ನಾನಾವಿಧದಿ ಮಹಬೇನೆಯಿಂ ನರಳುತ
ನೀನೆನ್ನ ಜತೆಗೂಡಿ ಬನ್ನಬಡಿಸುವಿ ಪಾಪಿ ೧

ಹೊಲಸಿನ ದ್ವಾರದಿಂದ ಇಹ್ಯಕೆ ಬಂದಿ
ಮಲಮೂತ್ರ ತುಂಬಿಕೊಂಡು
ತೊಳೆಯದಿರಲು ನಿಮಿಷ ಹೊಲಸಿಕ್ಕಿನಾರುವಿ
ತಿಳಿದುನೋಡಲು ನಿನ್ನ ಸಲಿಗೆಯಿಂ ನಾ ಕೆಡುವೆ ೨

ಎನ್ನ ಜೊತೆಯ ಪೊಂದಿರ್ದ ಕಾರಣದಿಂ ನಾ
ನಿನ್ನ ಕ್ಷೇಮವ ಬಯಸುವೆ
ಎನ್ನಯ್ಯ ಶ್ರೀರಾಮನುನ್ನತಡಿಗಳ ನಂಬಿ
ಸನ್ನುತಿಯಿಂ ಕ್ಷಮೆಬೇಡಿ ಧನ್ಯನಾಗೆಲೋದೇಹ್ಯ ೩

೫೩೩

ದಾಸನಾಗೋ ಪ್ರಾಣಿ ಬರಿದೆ
ಈಶನ ನೀ ಕಾಣಿ ಪ

ದಾಸನಾಗು ರಮೇಶನ ಪಾದ
ಹೇಸಿಮನಸಿನ ಕ್ಲೇಶವ ನೀಗಿ ಅ.ಪ

ಹಮ್ಮು ಬಿಟ್ಟುಬಿಡೋ ಈಶತ್ವ
ಸುಮ್ಮನಲ್ಲ ನೋಡೋ
ಸಮ್ಮತ್ತೇಳಬೇಡೋ ಮಹವಾಕ್ಯ
ಮರ್ಮಶೋಧ ಮಾಡೋ
ಹಮ್ಮು ಅಹಂಕಾರ ದೂಡಿ ನಿರ್ಮಲಮತಿಗೂಡಿ
ಒಮ್ಮನದಿಂ ಪರಬ್ರಹ್ಮನ ಪಾಡಿ ೧

ಶಂಕೆಯನೀಡ್ಯಾಡೋ ಚಿತ್ತದ ಕ
ಲಂಕ ದೂರ ಮಾಡೋ
ಓಂಕಾರರ್ಥ ಮಾಡೋ ಬ್ರಹ್ಮದ
ಅಂಕಿತಿಟ್ಟು ಪಾಡೋ
ಕಿಂಕರನಾಗದೆ ಶಂಕರ ನಿನಗೆಲ್ಲಿ
ಮಂಕುತವನವ ಬಿಟ್ಟು ಸಂಕರುಷಣನ ೨

ಹಾಳು ವಾಸನೆ ತೂರಿ ನಿಜವಾದ
ಶೀಲಜನರ ಸೇರಿ
ಮೂಲತತ್ತ್ವದಾರಿ ಅನುಭವ
ಕೀಲಿ ತಿಳಿದು ಭೇರಿ
ತಾಳನಿಕ್ಕುತ ಮಮಶೀಲ ಶ್ರೀರಾಮನ
ಮೇಲೆಂದು ನಂಬಿ ಭವಮಾಲೆ ಗೆಲಿದು ನಿಜ ೩

೫೩೪

ದಿಮ್ಮಾಕ ನಿನಗ್ಯಾಕೆ ಎಲೆ ಎಲೆ
ಜಮ್ಮಾಸಿ ಜರ ತಿಳಿಕೊ ಪ

ದಿಮ್ಮಾಕ ನಿನಗ್ಯಾಕೆ ಛೀಮಾರಿ ನಿನ್ನ
ದಿಮ್ಮಾಕ ಮುರಿಲಿಕ್ಕೆ ಗುಮ್ಮವ್ವ ನಿಂತಾಳೆ ಅ.ಪ

ಸೊಕ್ಕಿನಿಂದ ನಡೆವಿ ಮುಂದಿಂದು
ಲೆಕ್ಕಕ್ಕೆ ತರದಿರುವಿ
ಫಕ್ಕನೊಯ್ದೆಮನವರು ಉಕ್ಕಿನ ಪ್ರತಿಮೆಯ
ತೆಕ್ಕೆಯೊಳಾನಿಸಿ ನಿನ್ನ ಒಕ್ಕಲಿಕ್ಕುವರವ್ವ ೧

ತಾರತಿಗಡಿ ತುಸು ವಿ
ಚಾರಮಾಡಿನೋಡು
ಘೋರ ಯಮದೂತರು ಹಾರೆ ಕಾಸಿ ಯೋನಿ
ದ್ವಾರದಿ ಸೇರಿಸಿ ಘೋರ ಬಡಿವರವ್ವ ೨

ಪಾಮರಳಾದಲ್ಲೆ ಮುಂದಿನ
ಕ್ಷೇಮವ ಮರೆತಲ್ಲೇ
ಭೂಮಿಸುಖಕೆ ಮೆಚ್ಚಿ ತಾಮಸದಲಿ ಬಿದ್ದು
ಸ್ವಾಮಿ ಶ್ರೀರಾಮನ ಪ್ರೇಮಕ್ಕೆ ದೂರಾದಿ ೩

೫೩೫

ದು:ಖರೂಪಿನ ರೊಕ್ಕ ದಕ್ಕಗೊಡದಖಿಲರನು
ತಿಕ್ಕಾಡುತಿಪ್ಪದಕಟ ಒಕ್ಕಲಿಕ್ಕಿ ಬಿಡದೆ ಪ

ಇದ್ದರುಣಗೊಡದಿಲ್ಲದಿದ್ದರು ಸುಖಕೊಡದು
ಶುದ್ಧಪದ್ಧತಿಯವರರ ಬದ್ಧರೆನಿಸುವುದು ೧

ಮರಿಯಾದೆ ತಗಿತಿಪ್ಪದು ಮರಿಯಾದೆಲಿರಗೊಡದು
ಜರಜರಕೆ ನರರಿಗೆ ಶಿರವ ಬಾಗಿಸುವುದು ೨

ಸತಿಸುತರ ತರಿಸುವುದು ಹಿತದಿಂದ ಇರಗೊಡದು
ಮತಿಗೆಡಿಸಿ ಸತತ ದುರ್ಗತಿಗೆ ಎಳಸುವುದು ೩

ವಂದನೆಯ ಕೊಡಿಸುವುದು ಕುಂದು ನಿಂದ್ಹೊರಿಸುವುದು
ಒಂದುಸ್ಥಿರಮಿಲ್ಲದರ ಅಂದಮೇನಿಪ್ಪದು ೪

ಕಲ್ಪಿಸಿದರಾರಿದನು ಅಲ್ಪಮತಿಯಿಂ ಬಯಸಿ
ಕಲ್ಪತರುಶ್ರೀರಾಮನಾಲ್ಪರಿದು ಒಲಿಸಿ ೫

೫೩೬

ದೂರಮಾಡು ದೂರಮಾಡು ದುರ್ಜನ ನೆರೆಯ
ಸಾರಸಾಕ್ಷನೆ ಬೇಗ ದುಷ್ಟಸಂಗತಿಯ ಪ

ಸೇಂದಿ ಸೆರೆ ಕುಡಿದು ಮನಬಂದಂತೆ ಕುಣದಾಡಿ
ನಿಂದಿಸಿ ಕಂಡವರಿಂ ತಿಂದು ಲತ್ತೆಯನು
ಮಂದಿಯೊಳ್ಮುಖದೋರ್ವ ಹಂದಿಮನುಜರ ದರ್ಶ
ನೆಂದೆಂದು ಬೇಡೆನಗೆ ಮಂದರಾದ್ರಿನಿಲಯ ೧

ನೂತನದ ಮಾತಾಡಿ ಖ್ಯಾತಿಯಿಂ ತೋರ್ಪಡಿಸಿ
ಮಾತುಮಾತಿಗೆ ವಂಚಿಸಾತುರಕೆ ಪರರ
ಘಾತಗೈಯುವ ಮಹಪಾತಕರ ಸಂಗ ಮಮ
ಜಾತಿ ಜನುಮಕೆ ಬೇಡ ದಾತ ಜಗನ್ನಾಥ ೨

ಧ್ಯಾನದಾಸರ ಕಂಡು ಜ್ಞಾನವಿಲ್ಲದೆ ತುಸು
ಹೀನಮಾತುಗಳಾಡಿ ಏನುಕಾಣದಲೆ
ಶ್ವಾನನಂದದಿ ಚರಿಪ ಮಾನಹೀನರ ನೆರಳು
ಏನಿರಲುಬೇಡ ಮಮಪ್ರಾಣ ಶ್ರೀರಾಮ ೩

೫೩೭

ದೇವರಾಗಬಾರದೇನೆಲೇ ದೆವ್ವಿನಂಥ.......
ದೇವರಾಗಬಾರದೇನೆಲೇ ಪ

ದೇವರಾಗಬಾರದೇಕೋದೇವನ ಪಾದವನಂಬಿ
ಕಾವುಮೀರಿ ಹೋದಮೇಲೆ ಬಾಯಬಿಟ್ಟರೆ ಬರುವುದೇನೆಲೆ ಅ.ಪ

ತಂದ ಬುತ್ತಿ ಚೆನ್ನಾಗುಣ್ಣಲೆ ನೀನದನು ಒಲ್ಲೆ
ನೆಂದರೆ ಬಿಟ್ಹೋಗ್ತುವದೇನೆಲೆ ಹೇ ಪಾಪಿ ನೀನು
ಬಂದಹಾದಿ ನೋಡಿಕೊಳ್ಳೆಲೆ ಮುಂದಿದರಿಯೆಲೆ
ಬಿಂದುಮಾತ್ರಸುಖಕೆ ಮೋಹಿಸಿ ಪರ್ವತಾಕಾರ ಪಾಪಹೊತ್ತು
ಮಂದಮತಿಯೋಳ್ಬಿದ್ದು ಯಮನ
ಬಂಧಕ್ಕೀಡಾಗುವುದಿದೇನೆಲೆ ೧

ನಾಶನಾಗಿ ಹೋಗುತಾದೆಲೇ ಈ ಜಗವು ಒಂದಿನ
ಆಸೆಯೆಂಬ ಕುಳಿ ಧುಮುಕ ಬೇಡೆಲೆ ಮಹನೀತಿವಿಡಿದು
ನಾಶವಾಗದಪದವಿ ಗಳಿಸೆಲೇ ಸೋಸಿನೋಡೆಲೆ
ಮೋಸಮರವೆಯಿಂ ನಾಶವಾಗದೆ ಹೇಸಿಸಂಸಾರ
ದ್ವಾಸನಳಿದು ದಾಸಜನರಾವಾಸದಿರ್ದು ದೋಷದೂರನ
ನಾಮ ಭಜಿಸಿ ೨

ಉಟ್ಟ ಸೀರೆಬಿಟ್ಟು ಹೋಗಿದ್ದ್ಯಂತೆ ಹೇ ಹುಚ್ಚು.......
ಎಷ್ಟೋಸಾರಿ ಹುಟ್ಟುಟ್ಟಿದರಂತೆ ಈ ಕಾಯಧರಿಸಿ
ಬಿಟ್ಟುಹೋಗೇದಸ್ತಿ ಪರ್ವತ್ಹೋಲ್ವಂತೆ ಕೆಟ್ಟು ಬಿದ್ದ್ಯೆತೆ
ದುಷ್ಟಭ್ರಷ್ಟತೆಗಳನ್ನು ಬಿಟ್ಟು ಶಿಷ್ಟಸಂಗಕೆ ಮನವಗೊಟ್ಟು
ಸೃಷ್ಟಿ ಗೀರೇಳು ಸೂತ್ರನಾದ ದಿಟ್ಟ ಶ್ರೀರಾಮನಡಿಗೆ ಪೊಂದಿ ೩

೫೩೮

ನಗಾರಿ ಗಡಗಡ ಹೊಡಿಯೋ
ಧ್ಯಾನದ ತುತೂರಿ ಹಿಡಿಯೊ
ಸಾಗರ ಶಾಯಿಯೆ ಮೂಜಗ ಧಣಿಯೆಂದು
ಜಾಗಟೆ ಡಣ್ ಡಣ್ ಬಡಿಯೊ ಪ

ಅನುದಿನ ಮನಮುಟ್ಟು ನೆನೆಯುವ ಭಕ್ತರ
ಮನದೇಣಿಕೆಯನು ನೀಡುವ
ಕನಿಕರದಿಂ ಕಾಪಾಡುವ
ಜನಕಜೆವಲ್ಲಭ ತನ್ನವರನು ಬಿಟ್ಟು
ಕ್ಷಣ ಅಗಲಿರೆನಾ ವನಜನಾಭನೆಂದು ೧

ಎಡೆಬಿಡದೊಡತೊಳ ಧೃಢದಿಂ ಭಜಿಪರ
ಕಡುದಯಾದೃಷ್ಟಿಯಿಂ ನೋಡುವ
ಸಡಗರದವರೋಳಾಡುವ
ಮೃಡವಂದಿತ ತನ್ನಡಿಯ ದಾಸರ ಕರಪಿಡಿದು
ಬಿಡದೆ ಕಾಯ್ವ ಸಡಗರದೊಡನೆಂದು ೨

ನರಹರಿ ಚರಣವ ಪರಿಪರಿ ಸ್ಮರಿಪರ
ದುರಿತರಾಸಿ ದೂರ ಮಾಡುವ
ಬರುವ ಸಂಕಟ ನಿವಾರಿಸುವ
ಜರಾಮರಣ ದೂರಮಾಡಿ ಪರಮ ಪರತರ
ಸಿರಿಸೌಭಾಗ್ಯ ಕರುಣಿಪ ಸ್ಥಿರವೆಂದು ೩

ಚಿತ್ತಜತಾಪನ ಸಚ್ಚರಿತವನು
ನಿತ್ಯ ಬಿಡದೆ ಕೊಂಡಾಡುವರ
ಭಕ್ತ ಜನರ ನೋಡಿ ಬಾಗುವರ
ಮೃತ್ಯುಬಾಧೆ ಗೆಲಿ ಸತ್ಯಾನಂದವ
ನಿತ್ತು ಪೊರೆವ ಹರಿ ಸತ್ಯ ಸತ್ಯವೆಂದು ೪

ದೀನರಾಪ್ತನಾದ ಧ್ಯಾನಮೂರುತಿ ತನ್ನ
ಧ್ಯಾನಿಸುವರ ಬೆಂಬಲಿಸುವ
ಮಾನದಿಂದ ಭವಗೆಲಿಸುವ
ಏನು ಬೇಡಲಾನಂದ ದೀಯ್ವನು
ಪ್ರಾಣೇಶ ಶ್ರೀರಾಮ ದೇವ ದೇವನೆಂದು ೫

೫೩೯

ನಗೆಗೇಡವ್ವಾ ತಂಗಿ ನಗೆಗೇಡು
ಹಗರಣ ಸಂಸಾರ ತಿಗಡಿ ಬುಗಡಿ ಬಲು ಪ

ಕಾಲನಾಗಿ ದ್ರವ್ಯಕೂಡಿಸಿದ ಮಹ
ಮೇಲು ಮಾಳಿಗೆ ಮನೆ ಕಟ್ಟಿಸಿದ
ಕೀಳುಸತಿಸುತರೆಂದು ನಂಬಿದ ಮತ್ತು
ಮಾಲಿನೊಳಗೆ ಇಟ್ಟು ಆಳಿದ
ಕಾಲವೊದಗಿ ಬಂದು ದಾಳಿಟ್ಟೊಯ್ಯಲು ತನ್ನ
ಆಳಿಗಿಟ್ಟುಣುತಾರ ಹೋಳಿಗೆ ೧

ಕುಂದಿಪೋಗುವಕಾಯ ಖರೆಯೆಂದ ಇದ
ರಂದ ತಿಳಿಯದೆ ಬಲುಮೋಹಿಸಿದ
ಬಂದಕಾರ್ಯದ ಬಗೆ ಮರೆದ ಸುಳ್ಳೆ
ದಂದುಗದೊಳು ಬಿದ್ದು ನಿಗರ್ಯಾಡಿದ
ಮಂದನಾಗಿ ಎಲ್ಲ ನಂದು ನಂದುಯೆಂದು
ಒಂದೂಕಾಣದೆ ಬಂದದಾರಿಹಿಡಿದ ೨

ಪರಮ ಸನ್ಮಾರ್ಗವನು ತೊರೆದ ಬರಿ
ಬರಿದೆ ದು:ಖದೊಳಗುರುಳಿದ
ಹರಿಯ ಶರಣರನು ನಿಂದಿಸಿದ ಸದಾ
ದುರುಳರಾವಾಸದೊಳಗಾಡಿದ
ಪರಮ ಕರುಣಾಕರ ವರದ ಶ್ರೀರಾಮನ
ಚರಣ ಪಿಡಿಯದೆ ಘೋರನರಕಕ್ಕೀಡಾದ ೩

೫೪೦

ನರನಾಗುಟ್ಟಿದ್ದೀ ಮರುಳೆ
ಅರಿವು ಎಲ್ಲಿಟ್ಟಿದ್ದೀ ಪ

ವರವೇದಸ್ಮೃತಿಶಾಸ್ತ್ರರಿದುನೋಡದೆ
ವರವರ ಒದರುವಿ ಮರೆವಿನೊಳಗೆ ಬಿದ್ದು ಅ.ಪ

ಮನಗಳು ಸ್ಥಿರಮಾಡಿ ಬರಿದ್ವಾಕ್ಕೆಣಿಸುವಿ ಸಟ್ಟೆಮಾಡಿ
ಮನಕೆ ಬಂದಂತಾಡಿ ನರಕದ ಕುಣಿಗೆ ಬೀಳುವಿ ಖೋಡಿ
ಜನನಮರಣವೆಂಬ ಕುಣಿಕೆಯೊಳಗೆ ಸಿಕ್ಕು
ಘನತರ ನೋಯ್ವುವ ನೆನೆಸಿಕೊಳ್ಳದೆ ೧

ಕುಜನ ಸಂಗೀಡ್ಯಾಡೊ ಸುಮನದಿ ಸುಜನರೊಡಗೂಡೊ
ನಿಜಮತಿಯೊಳು ಕೂಡೊ ನಿಶ್ಚಲದಿ ನಿಜವನ್ನು ಹುಡಿಕ್ಯಾಡೊ
ಗಜಿಬಿಜಿಯೊಳು ಬಿದ್ದು ಗಿಜಿಗಿಜಿಯಾಗದೆ
ತ್ಯಜಿಸೆಲೋ ಸಂಶಯ ನಿಜವು ತಿಳಿಯುತಿದೆ ೨

ಪಕ್ಷಪಾತವನ್ನು ನೀಗಿ ಜ್ಞಾನಚಕ್ಷು ತೆರೆದು ಇನ್ನು
ಸಾಕ್ಷಿಯಾಗಿ ನೀನು ಮಹದಪರೋಕ್ಷವನ್ನು ಕಾಣು
ಶಿಕ್ಷೆ ಪಡೆಯದೆ ಮಹಮೋಕ್ಷ ಪಡೆಯೊ ಜಗ
ದ್ರಕ್ಷ ಶ್ರೀರಾಮನ ಸೂಕ್ಷ್ಮದಿ ತಿಳಿದು ೩

೫೪೧

ನಾ ನೋಡಿ ಬಂದೆ ಕೇಳಮ್ಮ ಗೆಳತಿ ಪ

ನಾನಿಲ್ಲ ನೀನಿಲ್ಲ ಏನಂದರೇನಿಲ್ಲ
ಕಾಣುವ ಮಾತಲ್ಲ ಜಾಣೆ ಸುಳ್ಳಲ್ಲ ಅ.ಪ

ಹಸುರಿಲ್ಲ ಕೆಂಪಿಲ್ಲ ಪಶುವಿಲ್ಲ ಪಕ್ಷಿಲ್ಲ
ವಸುಧಿಲ್ಲ ಉದಧಿಲ್ಲ ವ್ಯಸನಿಲ್ಲ ಬಂಧವಿಲ್ಲ

ಹಸಿವಿಲ್ಲ ತೃಷೆಯಿಲ್ಲ ದೆಸೆಯಿಲ್ಲ ದಿಕ್ಕಿಲ್ಲ
ನಿಶೆಯಿಲ್ಲ ದಿವಯಿಲ್ಲ ಕುಸುಮಾಕ್ಷಿ ಸುಳ್ಳಲ್ಲ ೧

ಜಲವಿಲ್ಲ ಗಗನಿಲ್ಲ ನೆಲವಿಲ್ಲ ಗಿರಿಯಿಲ್ಲ
ಕುಲವಿಲ್ಲ ಚಲವಿಲ್ಲ ಮಲಿನಿಲ್ಲ ಶೀಲಿಲ್ಲ
ಜಳಕಿಲ್ಲ ಊಟಿಲ್ಲ ಬೆಳಕಿಲ್ಲ ಕಾಳಿಲ್ಲ
ತಳಿಯಿಲ್ಲ ತಮಯಿಲ್ಲ ಲಲನೆ ಸುಳ್ಳಲ್ಲ ೨

ಕೃಪೆಯಿಲ್ಲ ಕಪಟಿಲ್ಲ ಜಪವಿಲ್ಲ ತಪವಿಲ್ಲ
ಗುಪಿತಿಲ್ಲ ಬೈಲಿಲ್ಲ ನೆಪ್ಪಿಲ್ಲ ಮರೆವಿಲ್ಲ
ವಿಪಿನಿಲ್ಲ ಸದನಿಲ್ಲ ರಿಪುವಿಲ್ಲ ಸ್ನೇಹವಿಲ್ಲ
ಅಪ್ಪಯಿಲ್ಲ ಅವ್ವಯಿಲ್ಲ ನಿಪುಣೆ ಸುಳ್ಳಲ್ಲ ೩

ರಾಗಿಲ್ಲ ರಚನಿಲ್ಲ ಯಾಗಿಲ್ಲ ಯಜ್ಞಿಲ್ಲ
ತ್ಯಾಗಿಲ್ಲ ತ್ಯಜನಿಲ್ಲ ಭೋಗಿಲ್ಲ ಭಾಗ್ಯಿಲ್ಲ
ರೋಗಿಲ್ಲ ಶ್ರಮವಿಲ್ಲ ಬೈಗಿಲ್ಲ ಬೆಳಗಿಲ್ಲ
ಯಾಗಿಲ್ಲ ಪಾಪವಿಲ್ಲ ಭಗಿನಿ ಸುಳ್ಳಲ್ಲ ೪

ಹೋಮವಿಲ್ಲ ವಿಪ್ರಿಲ್ಲ ಧೂಮವಿಲ್ಲ ಧೂಳಿಲ್ಲ
ಭೂಮಿಲ್ಲ ಜನನಿಲ್ಲ ಕಾಮಿಲ್ಲ ಮರಣಿಲ್ಲ
ನೇಮಿಲ್ಲ ಕ್ರಿಯವಿಲ್ಲ ನಾಮಿಲ್ಲ ರೂಪಿಲ್ಲ
ಸ್ವಾಮಿ ಶ್ರೀರಾಮ ಬಲ್ಲ ಭಾಮೆ ಸುಳ್ಳಲ್ಲ ೫

೫೪೨

ನಾಯಿ ಕಚ್ಚೀತೆಚ್ಚರಿಕೆ ಎಲೋ
ಡಾವಿಟ್ಟು ಬರುತಾದೆಚ್ಚರಿಕೆ ಪ

ನೋವು ತೀರದೀ ನಾಯಿ ಕಚ್ಚಲು
ಕೇವಲ ವಿಷವುಳ್ಳ ಹೇಯನಾಯಿ ಅ.ಪ

ಮೆಚ್ಚು ಮದ್ದಿಕ್ಕುವುದು ಅಚ್ಚರೋಗದ ನಾಯಿ
ಮುಚ್ಚುಮನೆ ಮುರಿವುದು ಲುಚ್ಚನಾಯಿ
ಸಾಚ್ಯನೆಂದು ನಂಬಿ ನೆಚ್ಚಿದವರ ಮೇಲೆ
ಕಚ್ಚಿ ಬಿಚ್ಚುವುದೊಂದ್ಹುಚ್ಚು ನಾಯಿ ೧

ಸೂಳೆನ್ನ ಹೋಗುವುದು ಮೂಳನಾಯಿ
ಶೀಲ ತೊರೆವುದೊಂದು ಜೂಲುನಾಯಿ
ಕೀಳರಿಂ ತಲೆಗೂಡಿ ಹಾಳ್ಹರಟ್ಹೊಡೆವುದು
ಕೂಳ ಕಾಣದಂಥ ಹಾಳೂರನಾಯಿ ೨

ಉಂಡುಂಡು ಮಲಗ್ವುದು ಸುಂಡಿನಾಯಿ
ಕಂಡಂತೆ ತಿರಗುವ ದಂಡನಾಯಿ
ಹೆಂಡ್ತಿನ್ನ ಬಿಟ್ಟು ಪರರ್ಹೆಂಡರಿಗೊಲಿವುದು
ಉಂಡೊಗೆದೆಂಜಲ ನೆಕ್ಕುವ ನಾಯಿ ೩

ಬಡವರ ಬಡಿವುದು ಬಡಕನಾಯಿ
ಕಡುಗರ್ವದಿರುವುದು ತುಡುಗ ನಾಯಿ
ದೃಢಯುತರನು ಕಂಡು ಬಿಡುನುಡಿಯಾಡ್ವುದು
ಸುಡುಗಾಡೊಳ್ಬಿದ್ದಸ್ತಿ ಕಡಿಯುವ ನಾಯಿ ೪

ವಿಚಾರನರಿಯದ್ದು ಬೇಬಿಟ್ಟಿನಾಯಿ
ಅಚಾರಮನವಿಲ್ಲದ್ಹರಕುನಾಯಿ
ಊಚಸ್ಥಾನದಿ ಕೂತು ನಾಚದೆ ಮೋರಿಚ್ಚೆ
ವಾಚ ಪೇಳ್ವುದೊಂದು ನೀಚನಾಯಿ ೫

ಆಸೆ ಪೇಳುವುದೊಂದು ಮೋಸದ ನಾಯಿ
ಶಾಶ್ವತ ತಿಳಿಯದ್ದು ಪಾಶದ ನಾಯಿ
ಈಶನ ದಾಸರ ದೂಷಿಪುದು ಹೊಲೆ
ದಾಸರಮನೆಮುಂದಿನ್ಹೇಸಿನಾಯಿ ೬

ಕೋಪವ ತೊರೆಯದ್ದು ತಿರುಕನಾಯಿ
ಪಾಪಕ್ಕೆ ಅಂಜದ್ದೀ ನರಕಿನಾಯಿ

ಭೂಪ ಶ್ರೀರಾಮನ ಜ್ಞಾಪಕಕೆ ತರುವೆನು
ಕೂಪದಿ ಉರುಳುವ ಪಾಪಿನಾಯಿ ೭

೫೪೩

ನಾರ್‍ಯೆಂಬ ಮಾರಿಯನು ಆರು ನಿರ್ಮಿಸಿದರೋ
ಸೂರೆಗೊಂಡು ಮೂಲೋಕ ಘೋರಿಸುವುದುದಕಟ ಪ

ಹರಿಯ ಧರೆಗಿಳಿಸಿತು ಹರನಕಾಡಿಗೆಳೆಸಿತು
ಶಿರವೊಂದನೆಗರಿತುವರಬ್ರಹ್ಮನಕಟ ೧

ರಂಧ್ರಗೊಳಿಸಿತು ದೇವೇಂದ್ರನಂಗಾಂಗವನು
ಚಂದ್ರನ ಮುಖಪ್ರಭೆಗೆ ಕುಂದಿಟ್ಟಿತಕಟ ೨

ಅಸಮ ವಾಲಿಯ ಬಲಕೆ ಮಸಿ ಮಣ್ಣು ಹಾಕಿಸಿತು
ದಶಶಿರನ ವರವಖಿಲ ಪುಸಿಯೆನಿಸಿತಕಟ ೩

ಹಾರಿಸಿತು ಕೀಚಕನ ಕೌರವನ ಮನೆಮುರಿಯಿತು
ಧೀರಪಾಂಡವರನು ತಿರಿದುಣಿಸಿತಕಟ ೪

ನರಕಕ್ಕೆ ತವರಿದನು ಸ್ಮರಿಸಲಳವಲ್ಲೆನಗೆ
ಹರಿದರಭಯ ತ್ವರಿತ ವರದ ಶ್ರೀರಾಮ ೫

೫೪೪

ಪಡಕೋ ನೀನ್ಬಿಡಕೋ ರಂಗ ಶಾಯಿನಾಮವ
ಕಡಕೋ ನೀ ದುಡಕೋ ನಿಖಿಲೇಶನ ಪ್ರೇಮ ಪ

ಜನಮೆಚ್ಚಿ ವಂದಿಸಲು ನಿನಗೆ ಬಂದದ್ದೇನೋ
ಜನದೂಷಿಸಳಿದರೆ ನಿನಗೆ ಕುಂದೇನೋ
ಮನಮೆಚ್ಚಿ ನಡೆದು ಬಿಡದನುದಿನದಿ ಗಳಿಸುವಿ ನೀ
ಚಿನುಮಯ ಮನುಮುನಿವಿನಮಿತರ ಧ್ಯಾನ ೧

ಅಹುದೆಂದು ಇಹ್ಯದವರು ಭವಬಂಧ ತೊಲಗಿಪರೆ
ಸಹಿಸದೆ ಅಲ್ಲೆಂದು ಭವಕೆ ನೂಕುವರೆ
ಕುಹಕಿಗಳ ಎದೆಮೆಟ್ಟೆ ಸಹಿಸಿಬಂದ ನಿಂದೆಗಳ
ಸಹಕಾರ ಪಡಿ ದೃಢದಿ ಅಹಿಶಾಯೆ ಅಡಿಭಕ್ತಿ ೨

ದೂಷಣ ಭೂಷಣನುಮೇಷ ಸಮಭಾವಿಸಿ
ನಾಶನೆನಿಸುವ ಜಗದ ವಾಸನೆಯ ಕಡಿದು
ದಾಸಜನರೊಡೆಯ ಮಮಶ್ರೀಶ ಶ್ರೀರಾಮನಡಿ
ಧ್ಯಾಸದೊಳಗಿಟ್ಟುಪಡಿ ಲೇಸೆನಿಪ ಮುಕ್ತಿ ೩

೫೪೫

ಪಾತಕಗೆ ಪರತರದ ಗುರುಬೋಧವ್ಯಾಕೆ
ಸೂತಕವ ಬಿಡದವಗೆ ಪರತತ್ವವ್ಯಾಕೆ ಪ

ಮಾತುತಪ್ಪಿ ನಡೆಯುವಗೆ ನೀತಿ ವಚನಗಳ್ಯಾಕೆ
ಜಾತಿಲ್ಲದವನಿಗೆ ಜ್ಯೋತಿಷ್ಯವ್ಯಾಕೆ
ಭೂತಬಡಿದವನಿಗೆ ಭೀತಿಯು ಯಾತಕ್ಕೆ
ಆತುರಗೆ ಯಾತಕ್ಕೆ ಕೀರ್ತಿ ಅಪಕೀರ್ತಿ ೧

ಮಂಗನಿಗೆ ಮಾಲ್ಯಾಕೆ ಅಂಗನೆಗಧಿಕವ್ಯಾಕೆ
ಮುಂಗಾಲಿಲ್ಲದವಳಿಗೆ ಶೃಂಗಾರವ್ಯಾಕೆ
ಬಂಗಾರದೊಡವ್ಯಾಕೆ ಕಾಡಡವಿನಿವಾಸಗೆ
ಕಂಗಳಿಲ್ಲದವನಿಗೆ ಕರಕನ್ನಡ್ಯಾಕೆ ೨

ಪತಿಗಂಜದವಳಿಗೆ ವ್ರತನೇಮಗಳು ಯಾಕೆ
ಸತಿಗಂಜಿ ನಡೆಯುವಗೆ ಶಸ್ತ್ರಾಯುಧ್ಯಾಕೆ
ಸುತರಿಲ್ಲದವನಿಗೆ ಅತಿಭಾಗ್ಯ ಯಾತಕ್ಕೆ
ಮತಿಯಿಲ್ಲದವಗ್ಹರಿಕಥೆಕೀರ್ತನ್ಯಾಕೆ ೩

ಮಾನಹೀನನಿಗೆ ಬೇರೆ ಮರಣಬರಲೇಕೆ ಅ
ಜ್ಞಾನಿಗ್ಯಾತಕ್ಕೆ ಜಾಣಜನಸಂಗ

ಗೋಣೆಹೊರುವವಗ್ಯಾಕೆ ವಾಹನದ ಗೋಷ್ಠಿಯು
ಬಾಣ ಬತ್ತಳಿಕ್ಯಾಕೆ ಕರವಿಲ್ಲದವಗೆ ೪

ಪರನಿಂದೆ ಮಾಳ್ಪನಿಗೆ ಶರಣತ್ವ ಯಾತಕ್ಕೆ
ಕರುಣವಿಲ್ಲದವನಿಗೆ ಗುರುಸೇವೆ ಯಾಕೆ
ಧರೆಗಧಿಕ ಶ್ರೀರಾಮಚರಣಸ್ಮರಣೆಲ್ಲದ
ಪರಮಪಾಪಿಗೆ ಶಿಷ್ಟನರಜನ್ಮವ್ಯಾಕೆ ೫

೫೪೬

ಪಾತಕಮನುಜ ಯಾತಕೆ ಗರುವ
ನೀ ತಿಳಿದುಳಿ ಜಗನ್ನಾಥನನನು ಪ

ನಿಲುಕದ ಮಾತಿಗೆ ಬಲುಬಿಂಕ ಯಾತಕೊ
ಬಲು ಬಲು ಮಹಿಮರು ತಿಳಿಯದೆ ಭವ
ಬಲೆಯೊಳಗ್ಹೊಳುವರರಿದು ನಿಜ ತಿಳಕೊ ೧

ಸ್ವಾಭಿಮಾನ್ಯಾಕೋ ದೇಶಾಭಿಮಾನವ್ಯಾಕೋ
ನಭರಾಜಪಾಲ ಮಹಪ್ರಭುವಿನ ಶ್ರೀಪಾದ
ಸೊಬಗಿನಿಂ ಭಜಿಸುವ ಭವಕಡಕೊ ೨

ಕೋಪವು ಯಾಕೋ ತಾಪವು ಯಾಕೋ
ಆ ಪರಬ್ರಹ್ಮ ಜಗದ್ವ್ಯಾಪಕ ಶ್ರೀರಾಮನಪ
ರೂಪನಂಬಿ ಮುಕ್ತಿಸುಖ ಪಡಕೊ ೩

೫೪೭

ಪುಣ್ಯೋದವೇ ಈ ಪುಣ್ಯಭೂಮಿಯೊಳು
ಪನ್ನಂಗಶಯನ ಸನ್ನುತಿಪ ದಾಸರಿಗೆ ಪ

ಕಡುಸಿರಿವಂತರಾದೊಡೆ ಬಡವರ ಬಾಯ್ಬಡಿಯದೆ
ಕೊಡುವಿಡುವ ಕೆಡದತಿ ಪುಣ್ಯ

ಬಡತನವಿರ್ದಡೆ ಎಡೆಬಿಡದೆ ಒಡಲೊಳು
ಜಡಜಾಕ್ಷನಡಿಧ್ಯಾನ ಹಿಡಿದ ಮಹಪುಣ್ಯ ೧

ಮಡದಿಯರೊಂದಿಗೆ ಬಿಡದೆ ಸಂಸಾರಗೈಯೆ
ದೃಢಯುತರು ಮನೆಯೊಳಗಡಿಯಿಡುವ ಪುಣ್ಯ
ಸಡಗರದಿ ಮಕ್ಕಳನ್ನಡೆದು ಮೋಹದಿ ಜಗ
ದೊಡೆಯನ್ಹೆಸರಿಟ್ಟು ನುಡಿಯುವ ಪುಣ್ಯ ೨

ತಿರುಕರಾಗಿರ್ದಡೆ ತಿರಿದು ತಂದನ್ನವನು
ಹರಿಯಪ್ರಸಾದವೆಂದು ತಿರಿದುಣುವ ಪುಣ್ಯ
ಗಿರಿಗುಹ್ಯ ವಾಸಿಸಲು ಧುರಿತಮಂ ಸ್ಮರಿಸದೆ
ಪರಮಪುರುಷನ ಚರಣ ನಿರುತ ಸ್ಮರಿಪ ಪುಣ್ಯ ೩

ಹಿಂದೆ ಮುಂದೆ ತಮಗೆ ನಿಂದೆಯಾಡಲು ಆ
ನಂದದಿ ಹಿಗ್ಗದ ಕುಂದದ ಪುಣ್ಯ
ಮಂದಿಮಕ್ಕಳು ಬಿಡದ್ಹೊಂದಿಸಲದು ಹರಿ
ಗೆಂದು ಅರ್ಪಿಸಿ ಮನಸೊಂದೆಮಾಡಿದ ಪುಣ್ಯ ೪

ನೀರಿನೊಳಿರಲೇನರಣ್ಯದೊಳರಿಲೇನು
ಘೋರತಾಪದಿರಲೇನಪಾರಜ್ಞಾನಿಗಳು
ಪಾರಮೋಕ್ಷಕ್ಕಧಿಪ ಧೀರ ಶ್ರೀರಾಮಪಾದ
ವಾರಿಜದೊಳು ಮನ ಸೇರಿಸಿದ ಪುಣ್ಯರಿಗೆ ೫

೫೪೮

ಪೆಣ್ಣೆಂದರಿದು ಮೆಚ್ಚಿ ಕೆಡಬೇಡ ನಿನ್ನ
ತಿನ್ನುವ ಮರಿಗಿದು ತಿಳಿ ಮೂಢ ಪ

ತಾಯಾಗಿ ಮೊದಲು ನಿನ್ನ್ಹಡೆದಿಪ್ಪದು ಪುನಃ
ಮಾಯಾಗಿ ಬೆನ್ಹತ್ತಿ ಸುಡುತಿಪ್ಪದು
ಬಾಯೊಳು ಮೊಲೆಯಿಟ್ಟು ಬೆಳೆಸಿಪ್ಪದು ಮತ್ತು
ಕೈಯೊಳು ಮೊಲೆಯಿಟ್ಟು ಕೊಲುತಿಪ್ಪದು ೧

ಸುತನೆಂದು ಮುದ್ದಿಟ್ಟು ಒಲುತಿಹ್ಯದು ಮತ್ತು
ಪತಿಯೆಂದು ನಿಜಮತಿ ಸುಲಿತಿಹ್ಯದು
ರತಿಗೊಟ್ಟು ಅತಿಮೋಹದಾಡುವುದು ನಿನ್ನ
ಗತಿಗೆಡಿಸಿ ಜವಗೀಡು ಮಾಡುವುದು ೨

ಕಣ್ಣುಸನ್ನೆಯ ಮಾಡಿ ಕರಿತಿಹ್ಯದು ಬಹು
ಬಣ್ಣ ಮಾತಾಡಿ ಸೋಲಿಪುದು
ಕುನ್ನಿಯಂತೆ ನಿನ್ನ ಮಾಡುವುದು ಬಲು
ಬನ್ನಬಡಿಸಿ ಬಾಯಿ ಬಿಡಿಸುವುದು ೩

ನಾನಾ ಬಳಗ ಬಂಧು ಮರೆಸುವುದು ನಿನ್ನ
ಶ್ವಾನನಂದದಿ ಕೂಗಲ್ಹಚ್ಚುವುದು
ಮಾನಾಭಿಮಾನ ತೊರೆಸುವುದು ನಿಜ
ಜ್ಞಾನಕೆಡಿಸಿ ಪಾಪದ್ಹಾಕುವುದು ೪

ತಂದ ಪುಣ್ಯವನೆಲ್ಲ ಸೆಳೆತಿಹ್ಯದು ಬಲು
ಮಂದನೆನಿಸಿ ಕುಣಿಸ್ಯಾಡುವುದು
ತಂದೆ ಶ್ರೀರಾಮಪ್ರೇಮ ಕೆಡಿಸುವುದು ನಿಜಾ
ನಂದ ಮುಕ್ತಿಗೆ ಕಿಡಿ ಹಾಕುವುದು ೫

೫೪೯

ಪಂಥವ್ಯಾಕೋ ಪ್ರತಿಜ್ಞೆಯಾಕೋ ಪ

ಸಂತಸದಿ ನಿನ್ನಂತರಂಗದಿ
ಕಂತುಪಿತ ನೀನೆನಲು ಸಾಕೊ ಅ.ಪ

ಕೋಪವ್ಯಾಕೊ ತಾಪವ್ಯಾಕೋ
ತಾಪತ್ರಯಗಳ ಲೋಪ ಸಿರಿವರ
ಕಾಪಾಡೆನಲದೊಂದೆ ಸಾಕೊ ೧

ಕುಂದು ಯಾಕೋ ನಿಂದೆ ಯಾಕೋ
ಸಿಂಧುಶಯನಗೋವಿಂದಗರ್ಪಿ
ತೆಂದು ನೋಡ್ದೆಟ್ಟಿಂದ್ಯಾಕೆ ಬೇಕೊ ೨

ಕ್ಷೇತ್ರ ಯಾಕೋ ಯಾತ್ರವ್ಯಾಕೋ
ಖಾತ್ರಿಯಿಂದ ಜಗತ್ರಯಕೆ ಸು
ಸೂತ್ರಾಧಾರಿಯೆಂದ ಮಾತ್ರ ಸಾಕೊ ೩

ಸ್ನಾನವ್ಯಾಕೋ ಸಂಧ್ಯಾನವ್ಯಾಕೋ
ಜ್ಞಾನವಿಡಿದು ಭಕ್ತಪ್ರಾಣನಾಥನ
ಧ್ಯಾನಗೈಯಲದೊಂದೆ ಸಾಕೊ ೪

ಜಪವು ಯಾಕೋ ತಪವು ಯಾಕೋ
ಕಪಟನೀಗಪರಿಮಿತ ಹರಿಯ
ಗುಪಿತದಿಂದರ್ಚಿಸಲು ಸಾಕೊ ೫

ಮಂತ್ರವ್ಯಾಕೋ ತಂತ್ರವ್ಯಾಕೋ
ಮಂತ್ರಮೂರ್ತಿ ಸರ್ವಾಂತರ್ಯಾಮಿಯ
ಅಂತರಂಗ ತಿಳಿಯೆ ಸಾಕೊ ೬

ನೇಮವ್ಯಾಕೋ ನಿತ್ಯವ್ಯಾಕೋ
ಸ್ವಾಮಿಯೆನುತ ಪ್ರೇಮಿಯ ಶ್ರೀ
ರಾಮನ ನಂಬಿಕೊಳ್ಳಲು ಸಾಕೊ ೭

೫೫೦

ಪಿಂಗಟ ಬೇಡವ್ವಾ ಪಿಂಗಟ
ಸಂಗಟ ಬರುತಾದೆ ತಡಕೊಳ್ಳೆ ಪ

ಕಂಗೆಡಿಸಿ ಬಲುಜವನ ದೂತರು
ಭಂಗಬಡಿಪುದನು ನೀ ತಾಳೆ ಅ.ಪ

ಸುಜನರ ಕಾಲ್ಕಸ ಮಾಡಿದಿ
ಕುಜನರ ಮಾತಿಗೆ ಮರುಳಾದಿ
ನಿಜವರಿದ್ಹೇಳಲು ಮೋರೆ ಮುರುಕಿಸಿದಿ
ಅಜಾಂತಪರಿ ನೀ ಬಳಲುವಿ ನರಕದಿ ೧

ನಾಶನ ಕಾಯಕ್ಕೆ ಮೋಹಿಸಿದಿ
ಹೇಸದೆ ಪಾಪಕ್ಕೆ ಗುರಿಯಾದಿ
ಈಶನ ದಾಸರನು ದೂಷಣ ಗೈದಿ
ಸೀಸ ಕಾಸುವ ಯಮ ಯೋನಿದ್ವಾರದಿ ೨

ಉನ್ನತಧಮ ತಿಳೀಲಿಲ್ಲ
ಗನ್ನಗತಕವಯ ಕಳಕೊಂಡಿ
ಇನ್ನೆಲ್ಲಿ ಕ್ಷೇಮ ನಿನಗ್ಹುಚ್ಚು
ಇನ್ನರ ಶ್ರೀರಾಮ ಎನ್ನೊ ೩

೫೫೧

ಬರಿದಿದೇಕೆಲೋ ನಿನ್ನಂತರಿರವು
ಸಿರಿಯರರಸ ಅರಿಯನೇನೆಲೋ ಪ

ಮರೆಯ ಮೋಸದಿ ಕುಕ್ಕಲು ಮೀನ
ಹರಿವ ಉದಕದಿ ಬಕನು ಮೌನ
ಧರಿಸಿದಂದದಿ
ಪರಮಮೌನ ಧರಿಸಿ ಕುಳಿತು
ಮರುಳುಗೊಳಿಸಿ ಪರರ ಕೊರಳ ಮುರಿವ
ದುರುಳತನದ ಕೃತಿಗೆ
ಹರಿಯು ಒಲಿಯುವನೇನು ಮರುಳೆ ೧

ಕಪಟ ನೀಗದೆ ಹುಚ್ಚು ಬಿಡದೆ
ಗುಪಿತ ತಿಳಿಸದೆ ಮುಚ್ಚಿ ಕಣ್ಣು
ತಪಸಿಯಂದದಿ

ಕುಪಿತ ಮಾನಿಸನಾಗಿ ಕುಳಿತು
ತಪಸಿಯಂತೆ ತೋರಿ ಜನರ
ಅಪಾಯಮಾಳ್ಪ ಕಪಟವೇಷಕೆ
ಸುಫಲ ದೊರೆಯುವುದೇನು ಮರುಳೆ ೨

ಉದಯದೇಳುತ ಓಡಿ ಹೋಗಿ
ನದಿಯ ಮುಳುಗುತ ತೀಡಿಗಂಧ
ಹದದಿ ಬರೆಯುತ
ವಿಧವಿಧಮಂತ್ರೊದರಿ ಇತರರ
ಸದನ ಮುರಿದು ಸತಿಯ ಸುತರ
ಮುದದಿ ಪೊರೆವ ಅಧಮ ವ್ರತಕೆ
ಸದಮಲಾಂಗೊಲಿವನೆ ಮರುಳೆ ೩

ಕುಟಿಲಮನಸಿನ ಕಪಟ ನೀಗದೆ
ಜಟೆಯ ಬೆಳಸಿನ್ನು ಚಪಲತನದಿಂ
ದುಟ್ಟು ಕೌಪೀನ
ನಿಟಿಲದಲ್ಲಿ ಭಸ್ಮಧರಿಸಿ ನಟಿಸಿ ಸಾಧುವರ್ತನದಿಂ
ದ್ಹೊಟ್ಟೆ ಹೊರೆವ ಭ್ರಷ್ಟತನಕೆ
ಕೆಟ್ಟಿ ಬವಣಳಿಯುವುದೆ ಮರುಳೆ ೪

ತತ್ವದರ್ಥವ ಬೋಧಿಸುತ್ತ
ಭೃತ್ಯ ಸಮೂಹವ ಸಂಪಾದಿಸುತ್ತ
ನಿತ್ಯಸತ್ಯವ
ವಿತ್ತದಾಸೆಗುತ್ತರಿಸುವಸತ್ಯಭ್ರಷ್ಟ ವರ್ತನಕೆ
ಮುಕ್ತಿದಾಯಕ ಸಿರಿಯರಾಮ
ಮುಕ್ತಿಸುಖ ನೀಡುವನೆ ಮರುಳೆ ೫

೫೫೨

ಬರಿದೆ ಹಾಳು ಶರೀರ ಬಾಳು
ಅರಿದಡಿದು ಮಹ ಟೊಳ್ಳು ಟೊಳ್ಳು ಪ

ನಾರಿಪುರುಷರು ಮಾರಕದನದಿಂ
ಸೇರಿ ಸುಖಿಸಲು ಜಾರಿದಿಂದ್ರಿಯ
ಕಾರಣಾಗಿ ಮೂರುದಿನದಿ
ತೋರಿ ಪೋಗ್ವಸಾರಮಯ ೧

ಮಿಡುಮಿಡುಕಿ ಒಡಲಿಗಾಗಿ
ದುಡಿದು ಮೂಢರಡಿಯ ಪಿಡಿದು
ಬಿಡದೆ ರೋಗದೊಡನೆ ನರಳಿ
ಪಡುತಕಷ್ಟ ಕಡೆಗೆ ಸಾಯ್ವ ೨

ಪರರಸೇವೆ ನಿರುತಗೈದು
ಪರಕೆ ಇಹ್ಯಕೆ ತಿರುಗಿ ತಿರುಗಿ
ಗರುವದಿಂದ ಚರಿಸಿ ನಮ್ಮ
ಸಿರಿಯರಾಮನ ಚರಣಕ್ಹೊಂದದ ೩

೫೫೩

ಬಿಚ್ಚದಿರು.ಬಿಚ್ಚದಿರು ಮುಚ್ಚು ಈ ಬಾಯಿ
ಬಿಚ್ಚಿದ ಬಳಿಕದಕೆ ಎಚ್ಚರವೆ ಇಲ್ಲ ಪ

ಅಲ್ಲ ಅಹುದೆಂಬುವುದು ಎಳ್ಳಷ್ಟು ಇದಕಿಲ್ಲ
ಸುಳ್ಳುಹೇಳುವುದೆಲೊ ಅಳತೆಯೆ ಇಲ್ಲ
ಜೊಳ್ಳು ಮಾತುಗಳ್ಹೇಳಿ ಮಳ್ಳು ಮಾಡಿ ಜನರಲ್ಲಿ
ಬಲ್ಲವೆನಿಸಿಕೊಂಬ ಸೊಲ್ಲೆ ಹುಡುಕುವುದು ೧

ಸಲ್ಲದೀ ಆತ್ಮದ ಇಲ್ಲದ ಸುದ್ದಿಯನು
ಎಲ್ಲಿತನಕಲು ಬೇಸರಿಲ್ಲದ್ಹೇಳುವುದು
ಅಲ್ಲ ಅಹುದೆಂಬುದನು ಎಲ್ಲಬಲ್ಲಂಥ ಸಿರಿ
ನಲ್ಲನ ಪಾದಕ್ಕೆ ಅಲ್ಲೆನಿಸುತಿಹ್ಯದು ೨

ಮುಚ್ಚುಮರೆಯಿದಕಿಲ್ಲ ಎಚ್ಚರವೊದಲಿಲ್ಲ
ಕಿಚ್ಚಿನೊಳ್ಬಿದ್ಹೋಗ್ವ ನೆಚ್ಚಿಕಿಲ್ಲ ಕಾಯ

ನೆಚ್ಚಿಕೆಡದಲೆಮಮ ಅಚ್ಯುತ ಶ್ರೀರಾಮನಂ
ಮುಚ್ಚಿಭಜಿಸಿ ಭವದುರುಲು ಬಿಚ್ಚಿಸಿಕೊಳ್ಳೊ ೩

೫೫೪

ಬೂಟಾಟಿಗನು ನಾನು ಸತ್ಯಮಾಯ ಝಾಟ
ನಾಟಕವಾಡಿ ದಾಟಿ ಬೈಲಿಗೆ ನಿಂತ ಪ

ಮಿಥ್ಯ ಪ್ರಪಂಚ ಮರೆದು ಅರ್ತು
ನಿತ್ಯಸುಖದಿ ಮನ ಬೆರೆದು
ಅರ್ತುಅರಿಯದೆ ಮರ್ತ್ಯದೊರ್ತನದೊಳಗಿರ್ದು
ಗುರ್ತಿಟ್ಟು ಪರಲೋಕ ಸುರ್ತುಮಾಡಿಕೊಂಡ ೧

ಸಾಧುವರ್ತನದ್ವಾದಿ ತಿಳಿದು ನಿಜ
ಶೋಧಿಸಿ ಕಾಲನ ಬಾಧೆ ಗೆಲಿದು
ವಾದಿಮೂರ್ಖರ ಕೂಡಿ ವಾದಿಸದನುದಿನ
ಸಾಧಿಸಿ ಪರಸುಖಸ್ವಾದ ಸವಿಯುವಂಥ ೨

ಕಾಮಕ್ರೋಧಾದಿಗಳಳಿದು ಮಹ
ಪ್ರೇಮ ಮೋಹಂಗಳ ತುಳಿದು
ಸ್ವಾಮಿ ಶ್ರೀರಾಮನ ಪ್ರೇಮ ಪಡೆದು ಮುಕ್ತಿ
ಸಾಮ್ರಾಜ್ಯಸುಖ ಸಂಪಾದಿಸಿಕೊಂಡಂಥ ೩

೫೫೫

ಬಂತವ್ವಾ ತಂಗಿ ಬಂತವ್ವಾ ಈ
ಗೊಂದು ಮಾತು ನೆನಪು ಬಂತವ್ವಾ ಪ

ಅಂತರಂಗದೊಳು ಕಂತುಜನಕ ತನ್ನ
ಚಿಂತಿಪರ್ಗಂತೆಲಿ ನಿಂತಿಹ್ಯನಂತೆ ಅ.ಪ

ಮರುಳು ಬುದ್ಧಿಯನು ನೀಗವ್ವ
ಬರೆ ತಿರುತಿರುಗಿ ಮರುಗಬೇಡವ್ವ

ಕರಿರಾಜ ದ್ವರದನು ತರುಣಿಯ ಪೊರೆದನು
ಸರಸದಿ ಪಾಂಡವರ ನೆರಳಾಗಿ ನಿಂತನು ೧

ಹಂಚಿಕೆ ಪೇಳುವೆ ನಿನಗವ್ವ ನಿನ್ನ
ಚಾಂಚಲ್ಯ ಗುಣವೊಂದು ಕಳೆಯವ್ವ
ಕಿಂಚಿತ್ತು ಮನದೊಳು ವಂಚನಿಲ್ಲದೆ ವಿ
ರಂಚಿಪಿತನ ನಂಬಿ ಭಜಿಸವ್ವ ೨

ಸುಳ್ಳೆ ಕಳವಳಿಸುವುದ್ಯಾಕವ್ವ ತಿಳಿ
ನಳಿನಾಕ್ಷನ ಘನ ಮಹಿಮ್ಯವ್ವ
ಹೊಲಸು ದೇಹದಾಸೆ ನೀಗಿದ ಭಕ್ತಗೆ
ಸುಲಭನು ಶ್ರೀರಾಮ ಕೇಳವ್ವ ೩

೫೫೬

ಬಂತೆಂದ್ಹಿಗ್ಗ ಬೇಡೆಲೊ ಖೋಡಿ ಹೋ
ಯ್ತೆಂದಳಬೇಡೆಲೆ ಖೋಡಿ ಪ

ಬಂತುಹೋಯ್ತೆಂಬುದರಂತರ ತಿಳಕೊಂ
ಡಂದಕನನುವಿಗೆ ತ್ವರೆ ಮಾಡಿ ಅ.ಪ

ಬಂದು ನಿನಗಾಗುವುದೇನೋ ಮತ್ತು ಹೋದರೆ
ನಿಂತ್ಹೋಗುವುದೇನೋ
ಮಂದನಾಗದೆ ನೀ ಬಂದ ಖೂನ ತಿಳಿ
ದೊಂದಿ ಭಜಿಸಿ ಹರಿದಯ ಪಡಿ ೧

ಎಂಥಸಮಯವನು ನೀ ಪಡೆದು ಭವ
ಸಂತೆಯೊಳಗೆ ನಿಂತಿ ಮೈಮರೆದು
ಸಂತೆಯ ತಂತ್ರಕೆ ಸೋಲದೆ
ಕಂತು ಪಿತನನೆನಿ ಲಗುಮಾಡಿ ೨

ಕ್ಷಿತಿಯ ಸುಖವು ನಿನಗೊಂದಿಲ್ಲ ನಿಜ
ಮರೆಬಿಂದರಿದು ಗೆಲಿ ಭವ ಮೂಳ

ಸತತದಿ ಭಕುತಹಿತ ಶ್ರೀರಾಮನನ್ನು
ನುತಿಸಿ ಮುಕ್ತಿ ಸುಖ ಪಡಿಬೇಡಿ ೩

೫೫೭

ಭಜಿಸಿ ಬದುಕೆಲೊ ಮಾನವ ಅಜಹರವಿನುತ
ನಿಜಪಾದ ಅನುದಿನವು ಭಜಸಿಬದುಕೆಲೊ ಪ

ತ್ಯಜಿಸಿ ಅವಗುಣ ಸುಜನರೊಡಗೂಡಿ ನಿಜಾನಂದದಿ
ಕುಜನಕುಠಾರ ಸುಜನ ಪರಿಪಾಲ ತ್ರಿಜಗರಕ್ಷಕ
ಭಜಗಶಯನನ ಅ.ಪ

ಹಲವು ಭ್ರಾಂತಿಗಳ್ಯಾಕೆಲೊ ಸುಳ್ಳೆ ಸುಳ್ಳೆ ಸಂಸಾರ
ಕೊಳಪಟ್ಟು ಕೆಡದಿರೆಲೊ
ಮಲಿನಮನಸಿನ ಸರ್ವ ಹೊಲೆಯ ಯೋಚನೆ ಬಿಟ್ಟು
ತಿಳಕೊಂಡು ನಿಜಸುಖ ಪದವಿಗೆ ನದರಿಟ್ಟು
ಉಳಕೋ ಸಿಕ್ಕೊತ್ತುಗಳೆಯದಲೆ ಶುನಕೆಲುವು ಕಡಿದಂತೆ
ಅಳಿವ ಸುಖದಾಸೆಗೆಳಸಿ ಕೆಡಬೇಡ
ಜಲಜನಾಭನ ಒಲಿಸಿ ನಲಿಯೊ ೧

ಬರುವಾಗ್ಗೆ ಬೆನ್ನಿನ್ಹಿಂದೆ ಹೆಡತಲೆ ಮೃತ್ಯುವಿನ
ಕರಕೊಂಡು ಧರೆಗೆ ಬಂದಿ
ಅರಲವದ ಸುಖಕಾಗಿ ಮರೆದು ಎಲ್ಲವ ನೀನು
ಮರುಳನಾದದ್ದು ಕಂಡು ನಗುತಿಪ್ಪ ಮೃತ್ಯವ
ಹೊರಳಿನೋಡದೆ ದುರುಳತನದ ಸ್ಥಿರದ ಪ್ರಪಂಚ
ಖರೆಯೆಂದೆನ್ನುವದು ಸರಿಯಲ್ಲೆಲೊ ಇದು
ನಿರುತದ್ಹರಿಪಾದ ಸ್ಮರಣಾನಂದದಿ ಮರೆಯೊ ಬಿಡದೆ ೨

ಫಣೆಯ ಬಾಯೊಳಗಿರುವಂಥ ಕಪ್ಪೆಯು ಮುಂದಾಡ್ವ
ನೊಣಕ್ಹವಣಿಸುತಿರುವಂತೆ
ಒಣಭ್ರಾಂತಿ ಪಡದಿರು ಮನಸಿಗೆ ಬಂದಂತೆ
ಕ್ಷಣತೋರಿ ಅಡಗುವ ಕನಸು ಜಗಸುಖ ಜನನ ಮ
ರಣೆಂಬ ದಣಿವು ಕಳೆವಂಥ ಜನಕಜಾತೆಯ

ಧಣಿಯ ಶ್ರೀರಾಮನೊನರುಹಂಘ್ರಿಯ ಘನವ ಪೊಗಳುತ
ಕುಣಿ ಕುಣಿದು ಧನ್ಯವಾಗೆಲೊ ௩

೫೫೮

ಭಯವಿಲ್ಲೋ ಭಯವಿಲ್ಲೋ
ಭಯಹರ ನರಸಿಂಗನಡಿಯ ದಾಸರಿಗೆ ಪ

ವೃಶ್ಚಿಕ ಮುಟ್ಟಲು ಬಾಧೆಯೆ ಇಲ್ಲ ತಕ್ಷ
ಕಚ್ಚಲು ವಿಷವಂಟೋಣಿಲ್ಲ
ಅಚ್ಯುತಾನಂತನ ಹೆಚ್ಚಿನಡಿದಾವರೆ
ಮುಚ್ಚಿಭಜಿಪ ಮಹ ನಿಶ್ಚಲಚಿತ್ತರಿಗೆ ೧

ಕಳ್ಳರು ಮುತ್ತಲು ಸುಲಕೊಂಬೋಣಿಲ್ಲ
ದಳ್ಳುರಿ ಹತ್ತಲು ಸುಡುವ ಶಕ್ತಿಲ್ಲ
ಪುಲ್ಲನಾಭನ ಪಾದ ಉಲ್ಲಾಸ ಮನದಿಂದ
ನಿಲ್ಲದೆ ಭಜಿಪರ್ಗೆ ಎಳ್ಳಷ್ಟಾದರು ೨

ಹುಲಿ ಕರಡಿ ಬದು ನುಂಗುವ ತ್ರಾಣಿಲ್ಲ
ಬಲು ಭೂತ ಬೇತಾಳ ಎದುರೆ ಇಲ್ಲ
ಮಲಿನಹರಣ ಕೃಪಾನಿಲಯ ಭಕ್ತಜನ
ಸುಲಭನೆಂದೊದರುತ ನಲಿವ ನಿರ್ಮಲರಿಗೆ ೩

ಭೂಪತಿಗಳ ಭಯ ರೋಮಕೆ ಇಲ್ಲ
ಪಾಪತಾಪಗಳ ಲೇಪವೆ ಇಲ್ಲ
ಆ ಪರಬ್ರಹ್ಮ ಜಗದ್ವ್ಯಾಪಕನನುದಿನ
ಗೌಪ್ಯದಾರಾಧಿಸುವ ಪಾಪಲೋಪರಿಗೆ ೪

ಏಸು ಕಷ್ಟಬಂದರಾಯಾಸವಿಲ್ಲ
ನಾಶ ಮೃತ್ಯು ಗಾಳಿಸೊಂಕೋಣಿಲ್ಲ
ಹೇಸಿ ದುರ್ಭವದ ವಾಸನಳಿದ ಮಹ
ಶ್ರೀಶ ಶ್ರೀರಾಮನ ದಾಸದಾಸರಿಗೆ ೫

೫೪೯

ಬಾರಿಯ ಜಿಡ್ಡಂತೆ ದುರ್ಜನ ಸಂಗ
ಬಾರಿಯ ಜಿಡ್ಡಂತೆ ಪ

ತೂರಿ ಪೋಗದಂತೆ ದಾರಿಕಟ್ಟು ಮಾಡಿ
ಊರು ಸುತ್ತುಚ್ಚಿದ ಅ.ಪ

ತಲೆಬಾಗಿ ನೆಲವನ್ನು ನೋಡದೆ
ತಿಳಿಯದಲೆ ಇದನು ತುಳಿಯಲು ಅಂಗಾಲಿ
ನೊಳಗೆ ಮುರಿದು ಖಂಡ
ಕೊಳೆಸಿ ಕೀವುಮಾಡಿ ಅಳಿಸಿ ಬಳಲಿಸುವ ೧

ಉಡಿಗೆ ತೊಡಿಗೆಗಳನ್ನು ಅಂಟಲು
ಬಿಡಿಸಲು ಬಿಡದಿನ್ನು ಅಡರಿಕೊಂಡು ಇದು
ತೊಡರಿ ತೊಡರಿ ಬಲು
ಮಿಡುಕಿಸುವ ಕಡು ತೊಡರಿನ ಅಂಟು ೨

ನಿಷ್ಠೆಯಿಂದ ಜವದಿ ಶ್ರೀರಾಮ
ಪಟ್ಟಣ ಮಾರ್ಗದಿ ನೆಟ್ಟಗೆ ಪೋಗುವ
ಶಿಷ್ಟರ ಕಾಲೊಳು ನೆಟ್ಟು
ಕಷ್ಟ ಕೊಟ್ಟು ಬಿಟ್ಟು ಕಟ್ಟು ಮಾಡ್ವ ೩

೫೬೦

ಭೂಷಣ ಮಾಡಲು ಹಿಗ್ಗೇನೋ ಜನ
ದೂಷಣಮಾಡಲು ದು:ಖೇನೋ ಪ

ದೋಷನಾಶ ಜಗದೀಶ ಕೇಶ ತನ್ನ
ದಾಸರಭಿಮಾನ್ಯೆಂದು ಶಾಶ್ವತರಿತವರಿಗೆ ಅ.ಪ

ವಂದನೆಮಾಡಿ ಕೊಡುತಿಪ್ಪರೇನೋ ಮತ್ತು
ನಿಂದೆಯನಾಡಿ ಕಸುಕೊಳ್ಳುವರೇನೋ

ನಿಂದೆವಂದನಗಳೊಂದೇಯೆಂದು ಆ
ನಂದನಕಂದನ್ನಾನಂದದಿ ಭಜಿಪರ್ಗೆ ೧

ಸತಿಸುತರೊಲಿದರೆ ಬಂತೇನೋ ಮತ್ತು
ಹಿತದಪ್ಪಿ ನಡೆದರೆ ಹೋಯ್ತೇನೋ
ಗತಿಪ ಕ್ಷತಿಯ ಹಿತಾಹಿತಸ್ಥಿತಿ ಸಮವೆಂದು
ಪತಿತಪಾವನ ಸತತದಿ ನುತಿಪರ್ಗೆ ೨

ನೀತಿವಂತನೆನೆ ಬಂದ ಭಾಗ್ಯೇನೋ ಜಗ
ಪಾತಕನೆನೆ ಬಂದ ಕುಂದೇನೋ
ಪಾತಕಹರ ಭವಭೀತಿವಿನಾಶ ಜಗ
ನ್ನಾಥ ಶ್ರೀರಾಮನ ಪ್ರೀತಿ ಪಡೆದವರಿಗೆ ೩

೫೬೧

ಮಡಿಮಡಿಯೆಂದು ಹಾರ್‍ಯಾಡಿ ಸುಳ್ಳೆ
ಮಡಿಯಬೇಡಿರೋ ಭವದುರಳ್ಯಾಡಿ ಪ

ಜಡಮತಿ ಕಡಿದು ಬಿಡಲಾಸೆ ತೊಡೆದು
ನಡಿರೋ ಸನ್ಮಾರ್ಗದದು ನಿಜಮಡಿ ಅ.ಪ

ಒದ್ದೆಬಟ್ಟ್ಯುಟ್ಟದ್ದು ದಾವಮಡಿ ನಿಮ್ಮ
ಬದ್ಧಗುಣದೊಳಿರೆ ಅದು ಶುದ್ಧಮಡಿ
ಕದ್ದು ತಿನ್ನುವ ಕ್ಷುದ್ರಬುದ್ಧಿ ನೀಗಿ ಪರಿ
ಶುದ್ಧರಾಗಲದು ನಿರ್ಧಾರ ಮಾಡಿ ೧

ಕ್ಲೇಶಕಳೆವುದದು ಲೇಸುಮಾಡಿ ದು
ರ್ವಾಸನಳಿಯೆ ಅದು ಮೀಸಲು ಮಡಿ
ಮೋಸಮರವೆ ನೀಗಿ ಈಶನ ನಾಮವ
ಧ್ಯಾಸದಿರಲು ಅನುಮೇಷ ಮಡಿ ೨

ಬಿಟ್ಟದ್ದು ಉಟ್ಟರದು ಯಾವ ಮಡಿ
ಉಟ್ಟು ಮುಟ್ಟೆಂಬುದಿದಾವಮಡಿ

ಕೆಟ್ಟ ಪದ್ಧತಿಗಳ ಬಿಟ್ಟು ಸದಾಚಾರ
ನಿಷ್ಠಪರರಾಗಲದು ಶಿಷ್ಟಮಡಿ ೩

ಅರಿವುಗೂಡುವುದೆ ಸ್ಥಿರಮಡಿ ಬಹ
ಜರ ಮರಣಳಿವುದೆ ಪರಮಮಡಿ
ದುರಿತ ಗೆಲಿದು ಹರಿಶರಣರೊಳಾಡ್ವುದು
ತಿರುಗಿ ಮುಟ್ಟಿಲ್ಲದ ಪರಮಮಡಿ ೪

ಮಡಿಯಾದಮೇಲೆ ಮೈಲಿಗೆಲ್ಲಿ ಖೋಡಿ ಜ್ಞಾನ
ವಿಡಿದುನೋಡು ನಿಜ ಹುಡುಕ್ಯಾಡಿ
ಮಡಿಮುಟ್ಟಿಲ್ಲದ ನಮ್ಮೊಡೆಯ ಶ್ರೀರಾಮ
ನಡಿ ದೃಢದಿ ನಂಬಲಿದೇ ಮೂಲಮಡಿ ೫

೫೬೨

ಮರಗವ್ವ ತಂಗಿ ಮರಗವ್ವ
ದುರುಳ ಗುಣದ ಸವಿ ಸುರಿಯವ್ವ ಪ

ಪರಿಪರಿಯಿಂದಲಿ ಹರಿಹರಿಯೆನ್ನದೆ
ದುರಿತದುರುಲಿನೊಳು ಬಿದ್ದೆವ್ವ ಅ.ಪ

ಗುರುಹಿರಿಯರನು ಜರೆದೆವ್ವ
ಪರಿಪರಿ ಪಾಪ ಕಟ್ಟಿಕೊಂಡೆವ್ವ
ಹರಿಶರಣರ ಸೇವೆ ಅರಿಯವ್ವ
ಹರಿಹ್ಯಾಂಗೊಲಿತಾನು ನಿನಗವ್ವ ೧

ಹಿಂದಿನ ಕರ್ಮದು ನೋಡವ್ವ
ಮುಂದೆ ಚಂದಾಗಿ ತಿಳಕೊಂಡುಳಿಯವ್ವ
ಮಂದರಧರ ಗೋವಿಂದನ ಮಾನಸ
ಮಂದಿರದೊಳಗಿಟ್ಟು ಭಜಿಸವ್ವ ೨

ಗುರುವರ ಶ್ರೀರಾಮ ಚರಣವ್ವ ತಂಗಿ
ಮರೆಯದೆ ಅನುದಿನ ಸ್ಮರಿಸವ್ವ
ಶರಣ ಜನರ ಪ್ರಿಯ ಕರುಣಾಕರನು ನಿನ್ನ
ಪೊರೆಯದೆ ಎಂದಿಗೆ ಇರನವ್ವ ೩

೫೬೩

ಮರೀಬೇಡ ಮಾಧವನ ಅರಿವಿಟ್ಟು ಭಜಿಸೋ
ಸ್ಥಿರವಲ್ಲ ಧರೆಭೋಗ ಮೆಚ್ಚಿ ಕೇಡಬೇಡ ಪ

ಕೂಡು ನಿಸ್ಸಂಗದೊಳು ಆಡು ಸುಸಂಗದೊಳು
ಮಾಡು ನಿಜವರ್ತನಗಳು ಬೇಡು ಬಡತನದೊಳು
ದೂಡು ದುರ್ವ್ಯಸನಗಳು ತೋಡು ದುರ್ಗುಣಗಳು
ನೋಡು ನಿಜಭಕ್ತರೊಳು ನೀಡು ಮನ ಹರಿಯೊಳು ೧

ಹೀರು ಮಹಗುರುವವ ತೂರು ಮದ ಮತ್ಸರವ
ತೂರು ದುಷ್ಕೃತ್ಯವ ಕಾರು ಬಲುವಿಕಾರವ
ಮೀರು ಧರೆಭೋಗವ ತೋರು ನಿಜಧ್ಯಾನವ
ಏರು ಸನ್ಮಾರ್ಗವ ಸೇರು ಹರಿಪದವ ೨

ಕುಂದುಗಳನೊರೆಯದಿರು ನಿಂದೆಗಳನಾಡದಿರು
ಬಂಧನಕ್ಕೆ ಬೀಳದಿರು ಮಂದತ್ವದೂರು
ತಂದೆ ಶ್ರೀರಾಮನಡಿಗೊಂದಿ ವೈಕುಂಠಪದ
ಚಂದದಿಂ ಪಡಕೊಂಡಾನಂದದಲಿ ಸೇರು ೩

೫೬೪

ಮರೀಬೇಡೋ ಮರೀಬೇಡೋ
ಸಿರಿಯರಸನ ಪಾದ ಮರೀಬೇಡೋ ಮರೀಬೇಡೋ ಪ

ಮರೀಬೇಡೆಲೆ ಮನ ಜರಾಮರಣೆಂದೆಂಬ
ತಿರುಗದ ಗಣೆ ಮಡುವಿನೊಳ್ಜಾರಿಬಿದ್ದು ಅ.ಪ

ಒಂದೆ ನಿಮಿಷ ಇಹ್ಯ ಚಂದಕಂಡು ಬಲು
ಅಂದಗೆಡುವ ಸುಖ ಮಂದನಾಗಿ ಮೆಚ್ಚಿ ೧

ನಿಜವನು ತಿಳಿಸದೆ ಮಜತೋರಿಸಿ ಬಲು
ಗಿಜಿಗಿಜಿಮಾಡುವ ಕುಜಮತಿಯೊಳು ಬಿದ್ದು ೨

ಅಸಮಸಂಪದಕೆ ಮಸಿಹಚ್ಚಿ ಒಂದುದಿನ
ನಶಿಸಿಪೋಗುವ ಮಾಯ ಮುಸುಕಿನೊಳಗೆ ಸಿಕ್ಕು ೩

ಸವಿಯದಾನಂದವನು ಭವಕೆ ಕಿಡಿಯನಿಟ್ಟು
ಜವನಿಗೀಡೆನಿಸುವ ಭೂಸುಖಕ್ಕೊಳಪಟ್ಟು ೪

ಪೊಡವಿಯೊಳಗೆ ತನ್ನ ದೃಢದಿ ಸ್ಮರಿಪರ
ಬೇಡಿದ ಮನದಿಷ್ಟ ಕೊಡುವ ಶ್ರೀರಾಮನ ೫

೫೬೫

ಮರೆವಿನೊಳಗೆ ಮನೆಮಾಡಿದ್ದಿ ಮನ
ಅರಿವಿನ ಆಲಯ ಬಿಟ್ಟಿದ್ದಿ ಪ

ಹರಿದುಹೋಗುವಂಥ ಸಿರಿಗೆ ಒಲಿದು ನೀ
ಪರಮ ಹರಿಯ ಪಾದಕ್ದೂರತಿದ್ದಿ ಅ.ಪ

ಮಂದಿಮಕ್ಕಳೆಂದು ನೆಚ್ಚಿದ್ದಿ ನಿನ್ನ
ಹಿಂದೆ ಬರುವರೇನು ಅಂತಿದ್ದಿ
ಕುಂದುವ ಜಗ ಮಾಯದಂದಗೆಟ್ಟು ಒಬ್ಬ
ನೊಂದಿನ ಹೋಗ್ವುದು ಮರೆತಿದ್ದಿ ೧

ಸಿರಿಸಂಪತ್ತಿಗೆ ಹಿಗ್ಗಿದಿ ಇದು
ಸ್ಥಿರವಲ್ಲೆಂಬುದು ಅರಿಯದ್ಹೋದಿ
ಎರೆದೆಣ್ಣೆರುವನಕುರಿವ ದೀವಿಗೆಯೋಲ್
ವರ ಪುಣ್ಯೆರುವನಕಿರುತದೆ ಸಿರಿಯದು ೨

ಹೇಳಿದಮಾತನು ಕೇಳದ್ಹೋಗಿ ಮನ
ಮೂಳನಾಗಬೇಡೆಲೆ ಗೂಗಿ
ಹಾಳುಯೋಚನೆ ಬಿಟ್ಟು ಮೇಲುಪದವಿ ಪಡಿ
ಶೀಲ ಶ್ರೀರಾಮಗೆ ತಲೆಬಾಗಿ ೩

೫೬೬

ಮಾಡಿದಫಲವನುಭವಿಸಣ್ಣ ನೀ ಒಲ್ಲೆಂದರೆ ಬೆನ್ನ ಬಿಡದಣ್ಣ
ನೀಡಿ ಪಡೆಯದ ಸುಖವಣ್ಣ ಸುಳ್ಳೆ ಬೇಡಲು
ದೊರಕುವುದ್ಯಾಗಣ್ಣ ಪ

ಜತೆಯಿಲ್ಲದೆ ನೀ ಮೊದಲ್ಹುಟ್ಟಿ ಮತ್ತು
ಜತೆಯಿಲ್ಲದ್ಹೋಗ್ವುದು ಮರೆತುಬಿಟ್ಟಿ
ಸತಿಸುತರ್ಹಿತರೆಂದು ಮತಿಗೆಟ್ಟ ಮಂದ
ಮತಿಯಾಗಿ ಸಂಸಾರ ತಿಳಿದಿ ಗಟ್ಟಿ
ಗತಿಸುವ ದೇಹದ ಸ್ಥಿತಿ ವಿಚಾರಿಸದೆ
ಸತತ ಒದ್ದಾಡಿದಸತ್ಯದೊಳಗೆ ಭ್ರಷ್ಟ ೧

ಗಳಿಸಲು ತುಸು ಬೇಸರಲ್ಲದ್ಹೋಗಿ
ಕೇಳಿದಳುಕಿ ಅಳುಕಿ ಜನರಿಗೆ ಬಾಗಿ
ಅಳಿದುಪೋಗುವ ಕಾಸು ಹಣಕಾಗಿ ಕೆಟ್ಟು
ಬಳಲಿಬಳಲಿ ದುಡಿದೆಲೆ ಗೂಗಿ
ನಳಿನಾಕ್ಷನ ಪೂಜೆ ಒಮ್ಮೆ ಮಾಡೆನ್ನಲು
ಅಳುಮೋರೆ ಮಾಡಿದಿ ತಲೆಬಾಗಿ ೨

ಕೆಟ್ಟ ಕೃತ್ಯದಿ ನಿನ್ನ ವಯ ಕಳೆದಿ ಮನೆ
ಗಿಷ್ಟಮಿತ್ರರು ಬರಲತಿ ನೊಂದಿ
ಕೊಟ್ಟದ್ದು ಕೊಡಲಿಕ್ಕೆ ಸಿಟ್ಟಿಗೆದ್ದಿ ನೀ
ಶಿಷ್ಟರ ಸಂಗಕೆ ದೂರಾದಿ
ಇಷ್ಟದಾಯಕ ನಮ್ಮ ಶಿಷ್ಟ ಶ್ರೀರಾಮನಡಿ
ಗಟ್ಯಾಗಿ ಭಜಿಸದೆ ಕೆಟ್ಹೋದಿ ೩

೫೬೭

ಮಾತಿನೋಳ್ಮಾತಿಲ್ಲದ ಪಾತಕಜನಜತೆ
ಜನ್ಮಕೆ ಮಾಡಬೇಡಿರಪ್ಪ ಪ

ನೀತಿಗಡಕ ಮಹಕೋಟಿ ಕುಹಕರ ಸಂಗ
ಪಾತಕದ ಕೊಂಡ ಕಾಣಿರಪ್ಪ ಅ.ಪ

ಕ್ಷಣಕ್ಷಣಕೆ ಬದಲಾಗ್ವ ಬಣಗು ಬಿನುಗರ ತಳ್ಳಿ
ಫಣಿಪನ ಸಹವಾಸ ಕೇಳಿರಪ್ಪ
ಅಣಕವಾಡುತ ಅನ್ಯಜನಸುದ್ದ್ಯೋಳ್ದಿನಗಳೆವ
ಶುನಕ ಜನಮಿಗಳನೊದೆಯಿರಪ್ಪ ೧

ಚಲನಚಿತ್ತದ ಬಲುಹೊಲೆಮತಿಗಳ
ಸಲಿಗೇಳೇಳು ಜನ್ಮಕೆ ಬೇಡಿರಪ್ಪ
ವಿಲಸಿತ ನಡೆನುಡಿ ತಿಳಿಯದದುರುಳರ
ಗೆಳೆತನ ಕಡೆತನಕ ಬಿಡಿರಪ್ಪ ೨

ಧರ್ಮಗೆಟ್ಟು ದುಷ್ಕರ್ಮದುರುಳವ
ದುರ್ಮದ ಬಿಟ್ಟು ದೂರಾಗಿರಪ್ಪ
ನಿರ್ಮಲಸುಖ ನಿಜ ಮರ್ಮನವರಿಯದ
ಧರ್ಮಿಗಳೆದೆಯನು ತುಳಿಯಿರಪ್ಪ ೩

ಸತ್ಯಸನ್ಮಾರ್ಗವ ಮರ್ತ ಅಸತ್ಯರ
ನೆತ್ತಿಮೇಲೆ ಹೆಜ್ಜಿಡಿರಪ್ಪ
ನಿತ್ಯಮುಕ್ತಿ ಸುಖ ಗುರ್ತರಿಯದೆ ಯಮ
ಮೃತ್ಯುವಶವ ಗೋಷ್ಠಿ ಬಿಡಿರೆಪ್ಪ ೪

ಅರಿವನರಿಯದ ಮರವೆ ಮಾಯಿಗಳ
ಚರಣದಿ ಮುಟ್ಟಿದಿರಪ್ಪ
ಪರಮ ಶ್ರೀರಾಮಪಾದ ಮರೆದ ದುರಾತ್ಮರ
ದರುಶನ ಕನಸಿನೋಳ್ಬೇಡಿರಪ್ಪ ೫

೫೬೮

ಮಾತ್ರೆ ತಾಳ ಇವು ಯಾತಕ್ಕೋ ಹರಿ
ಖಾತ್ರಿ ತಾಳ ಶುದ್ಧಿರಬೇಕೊ ಪ

ಧಾತ್ರಿ ಈರೇಳಕ್ಕೆ ಸೂತ್ರಧಾರ ಕೃಪಾ
ಪಾತ್ರನಾಗ್ವ ತಾಳ ತಿಳೀಬೇಕೊ ಅ.ಪ

ವರ್ಣ ಕೃತಿ ಇವುಯಾತಕ್ಕೋ ಹರಿ
ಪೂರ್ಣಮಹಿಮಸ್ಮೃತಿ ಅರೀಬೇಕೊ
ವರ್ಣಾಶ್ರಮ ಧರ್ಮ ಬಣ್ಣಿಪಗೂಢಾರ್ಥ
ಕರ್ಣಕ್ಕೆ ಬಲು ತಾಳಿರಬೇಕೊ ೧

ರಾಗಭೇದಗಳ ಬಲವ್ಯಾಕೋ ಹರಿ
ಜಾಗರಣದ ಫಲ ಬಲಬೇಕೊ
ಭೋಗಭಾಗ್ಯದಾಸೆ ನೀಗಿ ಸುಮನರನು
ಬಾಗಿ ಒಲಿಸುವ ತಾಳಿರಬೇಕೊ ೨

ಸಾಸಿರವಿದ್ಯದ ತಾಳ್ಯಕೋ ಹರಿ
ಧ್ಯಾಸದ ಮಹ ತಾಳಿರಬೇಕೊ
ಶ್ರೀಶ ಶ್ರೀರಾಮನದಾಸರ ಪ್ರೇಮನು
ಮೇಷ ತನಗೆ ತಾಳಿದ್ದರೆ ಸಾಕೊ ೩

೫೬೯

ಮಾನವನ್ಯಾಕದ್ಯೋ ಎಲೊ ಎಲೋ
ಮಾನವನ್ಯಾಕದ್ಯೋ ಪ

ಮಾನವನ್ಯಾಕದ್ಯೋ ಹೀನನೆ ಥೂಥೂ
ಮಾನವಜನುಮದ ಖೂನವ ತಿಳಿಯದೆ ಅ.ಪ

ನರನಾಗವತರಿಸಿಬಂದಿಹ್ಯ ಪರಿಯನು ಶೋಧಿಸಿ
ಅರುಹುಗೂಡಿ ಸಿರಿವರನ ಕಥಾಮೃತ
ಪರಮಭಕ್ತಿಯಿಂದ ಶ್ರವಣಮಾಡದ ೧

ತನುನಿಜವಲ್ಲೆನಿಸಿ ಸತತದಿ ತನುಧನರ್ಪಿಸಿ
ಘನತರಭಕುತಿಲಿ ವನಜನಾಭನ
ಘನಸತ್ವಚರಿತವನು ಮನನ ಮಾಡದ ೨

ಮಂದಮತಿಯ ಹರಿದು ಜಗಕೆ ಬಂದ ಕುರುಹು ತಿಳಿದು
ಸಿಂಧುಶಯನ ಮಮತಂದೆ ಶ್ರೀರಾಮನ
ಬಂಧುರಂಘ್ರಿ ನಿಜಧ್ಯಾಸವ ರುಚಿಸದ ೩

೫೭೦

ಮಾಯ ಮೋಹಿಗಳಿಗೆಲ್ಲ ಭವಬಂಧಳಿಯುವುದೇ
ಕಾಯ ಶುದ್ಧಲ್ಲದವಗೆ ಕರ್ಮಬಂಧ್ಹರಿಯುವುದೇ ಪ

ಮುಣುಗು ಕಲಿತಿರುವನು ದಣಿವಿನಿಂ ಮುಕ್ತಹನೆ
ಕುಣಿತಕಲಿತಿರುವವ ಮನದಿ ನಾಚುವನೆ
ಒನಪು ಕಲಿತಿರುವಗೆ ಮನಸಿಜ ದೂರನೆ
ಮನೆಮನೆ ತಿರುಗುವನು ಘನತೆಗೆ ಬಹನೆ ೧

ಚಾಡಿಕೋರನಿಗೆ ಪಾದ ತಾಡಣೆಯು ತಪ್ಪುವುದೆ
ಕೇಡುಗಾರಿಗೆ ಸುಖದ ಜಾಡು ತಿಳಿಯುವುದೆ
ಕಾಡಡವಿಲಿರುವವಗೆ ರೂಢಿಯ ಸುದ್ದಿಹುದೆ
ನಾಡ ಮಾತಾಡುವಗೆ ಕೇಡು ತಪ್ಪುವುದೆ ೨

ನಿಂದಕಗೆ ಮುಂದಿನ್ನು ಹಂದಿಜನ್ಮ ತಪ್ಪುವುದೆ
ಛಂದಸ್ಸರಿಯದವಗೆ ಕವಿತದಂದ ತಿಳಿಯುವುದೆ
ಮಂದಿಗೋಷ್ಠಿಗ್ಹೋಗುವಗೆ ಕುಂದೊದಗದಿರುತಿಹ್ಯದೆ
ತಂದೆತಾಯನ್ನಳಿಯುವಗೆ ಬಂಧ ತಪ್ಪುವುದೆ ೩

ಮೋಸಕಾರಿಗೆಮಹಾಪವು ತಪ್ಪುವುದೆ
ಆಶಕಾರಿಗೆ ಮಹನಾಶ ಬಿಡುತಿಹ್ಯದೆ
ದೇಶದೇಶ ತಿರುಗುವಗೆ ಘಾಸಿಯು ತಪ್ಪುವುದೆ
ದಾಸಜನ ದೂಷಕಗೆ ಈಶನೊಲಿಮಿಹ್ಯದೆ ೪

ಸುಗುಡಿಗೆ ಪತಿಸರಸ ಸೊಗಸಾಗಿ ಕಾಣುವುದೆ
ಜಗಳಗಂಟಿಗೆ ವ್ರತದ ಬಗೆಯುಶೋಭಿಪುದೆ
ಸುಗುಣೆಯರೊಡನಾಟ ಷಂಡನಿಗೆ ಸಲ್ಲುವುದೆ
ಸುಗುಣ ಸಂಗಿಲ್ಲದೆ ನರಕ ಭುಗಿಲು ತಪ್ಪುವುದೆ ೫

ಕಪಟತ್ವ ನೀಗದೆ ತಪವೃದ್ಧಿಯಾಗುವುದೆ
ಕೃಪಣತ್ವ ಬಿಡದವಗೆ ತಾಪತ್ರಳಿಯುವುದೆ
ಜಪವಿಲ್ಲದೆ ವಿನಾ ಸುಫಲದೊರಕುವುದೆ
ಗುಪಿತವನು ತಿಳಿಯದವಗಪರೋಕ್ಷವಿಹ್ಯದೆ ೬

ಮಾನವನ ಗುಣರಿಯದೆ ಜ್ಞಾನ ಸ್ಥಿರವಾಹುದೆ
ಜ್ಞಾನವಿಲ್ಲದೆ ಬೇರೆ ಧ್ಯಾನ ಸಿದ್ಧಿಪುದೆ
ದೀನನಾಥ ಮಮ ಪ್ರಾಣೇಶ ಶ್ರೀರಾಮನಡಿ
ಖೂನವರಿಯದೆ ಮುಕ್ತಿ ಜಾಣೆ ಸುಖಬಹುದೆ ೭

೫೭೧

ಮಾರಿ ಬೇರೆಂದೇಕೆ ಹಲುಬುವರು ಜಗದಿ
ನಾರಿಯೇ ಮಕ್ಕಮಾರ್‍ಯೆಂದೆನ್ನಬಾರದೆ ಪ

ಹಿತದೋರಿ ಮನಸೆಳೆದು ಮತಿಗೆಡಿಸಿ ವಿಧವಿಧ ದು
ಷ್ಕೃತ ಪೇಳಿ ಬಂಧುಗಳ ಹಿತವನೆ ಮರೆಸಿ
ಸತತ ಬೆನ್ಹತ್ತಿ ಬಿಡದೆ ಕ್ಷಿತಿಮೇಲೆ ಅತಿಯಾಗಿ
ವ್ಯಥೆಬಡಿಪ ಮಾರಿ ನಿಜಸ್ಥಿತಿ ವಿಚಾರಿಸದೆ ೧

ಮನೆ ಧನ ಗುಣ ಸುಲಿದು ಘನತೆಯನು ಕೆಡಿಸಿ ಮ
ತ್ತನುಕೂಲವನು ಇತ್ತು ತನುಶಕ್ತಿ ಹೀರಿ

ಕುಣಿಕುಣಿಸಿ ಜಗದೊಳಗೆ ಬಿನಗುರಲಿ ಬಿನುಗೆನಿಸಿ
ಘನ ಬಾಧಿಸುವ ಮಾರಿದಿನಿಸು ಕಾಣದಲೆ ೨

ಸ್ವಾಮಿ ಶ್ರೀರಾಮನ ಪ್ರೇಮಕ್ಕೆ ದೂರೆನಿಸಿ
ಭುವಿಯೊಳು ಮುಕ್ತಿಕಾಮಿನಿಯ ತೊರೆಸಿ
ನೇಮವಿಲ್ಲದ ಕಷ್ಟ ನೇಮಿಯೊಳಳಿಸಲಿಕೆ
ಯಮನೊಶಕೆ ಕೊಡುವಂಥ ಈ ಮಾರಿನೊದೆಯದೆ ೩

೫೭೨

ಮೂರ್ಖ ಬಲ್ಲನೆ ಸತ್ಯಸುಜ್ಞಾನಿ ನಡೆಯ
ತಾರ್ಕಿ ಬಲ್ಲನೆ ಪರಸಾಧನದ ಬಗೆಯ ಪ

ಕತ್ತೆ ಬಲ್ಲುದೆ ಹೊತ್ತ ಮುತ್ತುರತ್ನದ ಬೆಲೆಯ
ತೊತ್ತು ಬಲ್ಲುದೆ ಮಹ ಉತ್ತಮರ ನಡೆಯ
ಮಿಥ್ಯ ಬಲ್ಲನೆ ಶರಣಸತ್ಸುಜನರ ನೆಲೆಯ
ಮೃತ್ಯು ಬಲ್ಲುದೆ ಹೊತ್ತು ಗೊತ್ತಿನ ಪರಿಯ ೧

ಸೂಳೆಬಲ್ಲಳೆ ಸತಿಯ ಶೀಲವ್ರತನೇಮಗಳ
ಕೋಳಿ ಬಲ್ಲುದೆ ಮರಿಗೆ ಮೊಲೆಹಾಲುಣಿಸಿ ಸಲಹೋದ
ಕೇಳಬಲ್ಲನೆ ಕಿವುಡ ಆಲಿಸಿ ಏಕಾಂತವನು
ಹೇಳಬಲ್ಲನೆ ಮೂಕ ಕೇಳಿ ಹರಿಚರಿತ ೨

ಭ್ರಷ್ಟಬಲ್ಲನೆ ಸುಗುಣ ಶಿಷ್ಟ ಸಂತರ ಸಂಗ
ದುಷ್ಟಬಲ್ಲನೆ ಪರರ ಕಷ್ಟನಷ್ಟಗಳ
ಹುಟ್ಟುಗುರುಡ ಬಲ್ಲನೆ ಮುಂದಿಟ್ಟ ಗಂಟಿನ ವಿವರ
ಕೆಟ್ಟಭವಿಬಲ್ಲನೆ ತತ್ತ್ವಕಟ್ಟಳೆಯ ಗುಟ್ಟು ೩

ಕುರಿಯು ಬಲ್ಲುದೆ ತನ್ನ ಕೊರಲು ಕೊಯ್ಯುವರೆಂದು
ಮರುಳ ಬಲ್ಲನೆ ದೊರೆತ ನರಜನುಮ ಸಮಯ
ನರಕದ ಹುಳ ಬಲ್ಲುದೆ ಕಾಳೋರಗನ ಹರಿದಾಟ
ತಿರುಕ ಬಲ್ಲನೆ ಅರಸರ ಮನೆಯ ಸುದ್ದಿ ೪

ಕಾಮಿಗಳು ಬಲ್ಲರೆ ನೇಮನಿತ್ಯದ ನಿಜವ
ತಾಮಸರು ಬಲ್ಲರೆ ಸಾಮ ದಾನ ಗುಣವ
ಪಾಮರರು ಬಲ್ಲರೆ ಭೂಮಿಯೊಳಧಿಕ ಮಮ
ಸ್ವಾಮಿ ಶ್ರೀರಾಮನ ನಾಮಮಹಾತ್ಮೆಯನು ೫

೫೭೩

ಮೂಳಾ ಹರಿದ್ಯಾಕೆಲೋ ಮಾಯದ ಜಾಲ
ಹಾಳುಜಗದ ಮಾತಿಗ್ವ್ಯಾಕುಲವ್ಯಾಕೆಲೋ ಪ

ಅನ್ಯಗುಣಗಳನು ಅನ್ನಗೇಡಾಗಿ ಬಲು
ಭಿನ್ನ ಭೇದದಧೋಪಾತದುರುಳತಿರು
ಕುನ್ನಿಮಾನವರ ಭಿನ್ನಭೇದಕಂಡು
ನಿನ್ನ ಗುಣವ ಬಿಟ್ಟು ಬನ್ನಬಡಲಿಬೇಡ ೧

ಕರ್ಮಿಲೋಭಿಗಳ ಮೋಹದಿಂದ ದು
ಷ್ಕರ್ಮದಿ ಬಿದ್ದು ಕುಂಭೀಪಾಕಕ್ಕಿಳಿದರೇನು
ಧರ್ಮಕರ್ಮಗಳ ಮರ್ಮ ತಿಳಿದು ಸ
ದ್ಧರ್ಮದೊಳಾಡುತ ನಿರ್ಮಲನಾಗಿ ಬಾಳು ೨

ಶಿಷ್ಟಪದ್ಧತಿಗಳ ಬಿಟ್ಟುಕೊಟ್ಟು ಮಂದಿ
ಕೆಟ್ಟಪದ್ಧತಿ ಸುದ್ದಿಯಾಡುವುದ್ಯಾಕೆಲೋ
ಸೃಷ್ಟಿಯೊಳಗೆ ನಮ್ಮ ಶಿಷ್ಟ ಶ್ರೀರಾಮನ
ಮುಟ್ಟಿಪೂಜಿಸಿ ಮುಕ್ತಿಪಟ್ಟಕ್ಕೆ ಕೂಡ್ರೆಲೋ ೩

೫೭೪

ಮೋಹಪರವಶನಾಗಿ ಬಳಲುವುದ್ಯಾತಕೊ
ಮಹದಗ್ನಿಯೊಳು ಬಿದ್ದು ದಹಿಸುವ ದೇಹಕ್ಕೆ ಪ

ರಕ್ತ ಮಜ್ಜ ಮಾಂಸ ಪಿತ್ತ ವಾತ ಶ್ಲೇಷ್ಮ
ಅಸ್ಥಿ ಚರ್ಮ ಸ್ನಾಯುವಿನಿಂದ ಯುಕ್ತಮಾದ ದೇಹಕ್ಕೆ ೧

ಮಲಮೂತ್ರ ಸೂಸಿಹರಿದ ಹೊಲಸಿನ ನವದ್ವಾರ
ಬಲು ಹೇಯ ದುರ್ಗಂಧ ಮಲಿನದ ದೇಹಕ್ಕೆ ೨

ಧಾತ್ರಿ ಈರೇಳಕ್ಕೆ ಸೂತ್ರ ಶ್ರೀರಾಮನ
ಖಾತ್ರಿಯಿಲ್ಲದ ಅಪಾತ್ರ ಈ ದೇಹಕ್ಕೆ ೩

೫೭೫

ಯಾಕೆ ನಿನಗೆ ಲೋಕದುಸಾಬರಿ ಜಗ
ದೇಕನಾಥನಿಗೆ ಬೀಳು ಮೊರೆ ಪ

ಸಾಕುಯೆಂದು ಲೋಕೈಕನ ಬೇಡಿ ನಡಿ
ಏಕಚಿತ್ತದಿ ವೈಕುಂಠದಾರಿ ಅ.ಪ

ಸತ್ಯಸಂಗವೆಂಬ ಛತ್ತರ್‍ಹಿಡಿ ಪಥ
ಚಿತ್ತ ಶುದ್ಧಿಯಿಂದ ಗುರ್ತುಮಾಡಿ
ಭಕ್ತವತ್ಸಲನ ಸತ್ಯ ಬಿರುದುಗಳ
ಭಕ್ತಿಯಿಂ ಕೂಗುತ್ತ ನಿರ್ತ ತುರ್ತುನಡಿ ೧

ವನಜನಾಭನ ಕಥೆ ಶ್ರವಣಮಾಡಿ ಬಿಡ
ದನುಭವದೊಳು ನಿಜಮರ್ಮ ಹುಡುಕಾಡಿ
ಮನಸಿಜ ಜನಕನ ಚರಣದಾಸರ ಕೂಡಿ
ಘನತರ ಪರಲೋಕ ಪದವಿ ಪಡಿ ೨

ಮಾನ ಅಭಿಮಾನವೆಲ್ಲ ಸಮ ನೋಡಿ ನಿನ್ನ
ನಾನಾ ಕಲ್ಪನೆಗಳ ಕಡೆಮಾಡಿ
ಜ್ಞಾನಜ್ಯೋತಿ ಹಚ್ಚಿ ಧ್ಯಾನದೃಷ್ಟಿ ಚಾಚಿ
ಜಾಣ ಶ್ರೀರಾಮನ ಖೂನ ಹಿಡಿ ೩

೫೭೬

ಯಾಕೆ ಸುಮ್ಮನೆ ಫೇರಿ ಹೊಡೆಯುವಿ
ಕಾಕು ದುರ್ಭವ ಚಕ್ರದಿ ಪ

ಲೋಕದಿರುವು ನಿನಗೇನು ಸ್ಥಿರವೆಲೋ
ಕಾಕುಜೀವ ವಿಚಾರ ಮಾಡದೆ ಅ.ಪ

ಕಾಕುಸಿರಿಗೆ ಕೈಹಾಕಿ ಬಲು ಬಲು
ಶೋಕದಬ್ಧಿಲಿ ಮುಳುಗಿದ್ಯೊ
ನೂಕಿ ಯಮನರೊದೆದು ಎಳೆವಾಗ
ಲೋಕಸಂಪದ ನಿನ್ನಿಂದೆ ಬರುವುದೆ ೧

ನಾನು ಯಾರೆಂದೆಂಬ ಖೂನ ಸು
ಜ್ಞಾನ ವಿಡಿದು ತಿಳಿಯದೆ
ಶ್ವಾನಸೂಕನಂದದಿ ಮಹ
ಹೀನ ಬವಣೆಯೊಳ್ಬೀಳುತ ೨

ಗೋತಗೋಜಲಕುಣಿ ಈ ಸಂಸಾರ
ರೋತಿ ಹೊಲಸಿಕ್ಕಿ ನಾರುವ
ನೀತಿಗೆಟ್ಟದರೊಳಗೆ ಬಿದ್ದೆಮ
ಭೀತಿಯಿಂ ಬಳಲುವುದೇನೆಲೊ ೩

ಪೂರ್ವಪುಣ್ಯದಿಂ ಸಿಕ್ಕ ಈ ಮಹ
ಪರ್ವಕಾಲ ಸಮಯರಿಯದೆ
ದುರ್ವಿಕಾರದಿಂ ಸರ್ವ ಕಳೆಯಲು
ದೊರೆವುದೇ ಪುನ: ಬಯಸಲು ೪

ತೋರಿ ಇಂದ್ರಜಾಲದಂದದಿ
ಹಾರಿಹೋಗುವ ಮಾಯ ನೆಚ್ಚಿ
ಸಾರತರ ಮೋಕ್ಷವನು ಕರುಣಿಪ
ಶ್ರೀರಾಮನ ನಂಬದೆ ೫

೫೭೭

ಯಾತರಸುಖ ಸುನೀತಿಯಿಲ್ಲದ ಮಹ
ಪಾತಕ ಹೊಲೆಯರಿಗೆ ಪ

ಭೂತಳದಲಿ ಬಂದ ರೀತಿಯನರಿಯದೆ
ಆತುರದಲಿ ಬಿದ್ದ ನೀತಿಗಡುಕರಿಗೆ ಅ.ಪ

ಉತ್ತಮರ್ವಚನದ ಅರ್ಥವನರಿಯದೆ
ಕತ್ತೆಯಂತೆ ಕೂಗಿ ಚಿತ್ತಕ್ಕೆ ಬಂದಂತೆ
ವರ್ತಿಸಿ ಭವದಿ ಅನರ್ಥಕ್ಕೆ ಗುರಿಯಾಗಿ
ಸತ್ಯಜನಕೆ ಕುಂದುತ್ತರಗಳನ್ನಿತ್ತು
ಮೃತ್ಯು ಬಲೆಗೆ ಬೀಳ್ವ ಕತ್ತೆ ಮನುಜರಿಗೆ ೧

ನಶಿಸಿ ಪೋಗೋ ಮಾಯ ವಿಷಯಲಂಪಟವೆಂಬ
ಮುಸುಕಿನೊಳಗೆ ಸೊರಗಿ ನಿಶಿದಿವಯೆನ್ನದೆ
ಪುಸಿಯ ಸಂಸಾರವೆಂಬ ವ್ಯಸನದೊಳಗೆ ಕೊರಗಿ
ವಸುಧೆಸುಖಕೆ ಮೆಚ್ಚಿ ಮಸಣ ಬುದ್ಧಿಯಿಂದ
ಪುಸಿಯ ಬಳಸಿ ಕಾಲನೊಶವಾಗುವವರಿಗೆ ೨

ಶೋಧಿಸಿ ನಿಜಪದ ಸಾಧನೆಯೊಳಗಿರ್ದು
ವಾದವಾಂಛಲ್ಯ ನೀಗಿ ಸಾಧು ಸುಜನ ಸು
ಬೋಧ ಪಡೆದು ಭವಬಾಧೆ ರಹಿತರಾಗಿ
ಭೇದರಹಿತ ಮಹದಾದಿ ಶ್ರೀರಾಮನ
ಪಾದ ನಂಬಿ ಮುಕ್ತಿ ಸಂಪಾದಿಸದವರಿಗೆ ೩

೫೭೮

ಯೋಗಿಯಾಗೆಲೆ ಇಲ್ಲ ತ್ಯಾಗಿಯಾಗೆಲೆ ಪ

ಹಾಗೂ ಹೀಗೂ ಆಗದೆ ಭವ
ರೋಗಿಯೆನಿಸದರೆಲೆ ಗೂಗಿ ಅ.ಪ

ಮಾತುಮಾತಿಗೆ ನೀತಿವಚನ
ಆತುರಕ್ಕಾಗಿ ಕೂಗಿ ಕೂಗಿ
ಪಾತಕದೊಳಗೆ ಬಿದ್ದು ಯಮನ
ಯಾತನಕಿಳಿಯಬೇಡ ಭವಿ ೧

ಕಾವಿಕಪನಿಲಾಂಛನನ್ಹೊದ್ದು
ಸೇವೆಗೊಂಡು ಭಾವಗೆಟ್ಟು
ಸಾವುಹುಟ್ಟು ಬಲೆಗೆ ಬಿದ್ದು
ನೋಯಬೇಡೆಲೆ ನೀಚಮತಿ ೨

ನಿತ್ಯ ನಿತ್ಯವೆನಿಪ ಪರ
ಮಾರ್ಥತತ್ತ್ವಗುರ್ತುಯಿಲ್ಲದೆ
ಕತ್ತೆಯಂತೆ ಒದರಿ ವ್ಯರ್ಥ
ಮೃತ್ಯುಹೊಂದ ಬೇಡ ಮೂರ್ಖ ೩

ಸೋಗುಹಾಕಿ ಸಾಧುಯೆನಿಸಿ
ಕಾಗೆಯಂದದಿ ತೀರ್ಥಮುಳುಗಿ
ಗೂಗೆಯಂತೆ ಜಾಗರ ಮಾಡಿ
ಪೋಗದಿರಲೆ ನರಕಕಧಮ ೪

ಭೂಮಿ ಪ್ರೇಮ ತಾಮಸ ನೀಗಿ
ಕಾಮ ಕ್ರೋಧ ಲೋಭ ಜೈಸಿ
ಭೂಮಿತ್ರಯಂಗಳೊಡೆಯ ಶ್ರೀ
ರಾಮನಾಮ ಭಜಿಸಿ ಮುಕ್ತನಾಗೆಲೊ ೫

೫೭೯

ವಾಸನ್ಬಿಂಗದವನ ಬಲುಮಡಿ ಮೀಸಲ್ಯಾಕೆ
ಆಸೆಬಿಡದವನ ಹರಿದಾಸತ್ವವ್ಯಾಕೆ ಪ

ಚಿತ್ತಶುದ್ಧಯಿಲ್ಲದವನ ತತ್ವ ಉಪದೇಶವ್ಯಾಕೆ
ಕುತ್ತಿಗೆಯ ಕೊಯ್ವವನ ಭಕ್ತಿಭಾವ್ಯಾಕೆ
ಹೆತ್ತವರ ಬಯ್ವವನ ಸತ್ಯರೊಡನಾಟವ್ಯಾಕೆ
ಉತ್ತಮರ ಹಳಿವವನ ನಿತ್ಯನೇಮವ್ಯಾಕೆ ೧

ಭೇದಕಡಿಯದವನ ಪರಸಾಧನೆಯು ಯಾತಕ್ಕೆ
ವಾದಬಿಡದವನ ಸುವೇದ ಓದ್ಯಾಕೆ

ಕ್ರೋಧದೊಳುರುಳುವನ ಸಾಧುತ್ವ ಯಾತಕ್ಕೆ
ಜಾದುಗಾರನ ಸುಬೋಧವದು ಯಾಕೆ ೨

ನಾನೆಂಬುದಳಿಯವ ಜ್ಞಾನಭೋದ್ಯಾಮೃತವ್ಯಾಕೆ
ಹೀನಗುಣ ಬಿಡದವನ ಮೌನತ್ವವ್ಯಾಕೆ
ದೀನರನು ಬಾಧಿಪರ ದಾನಧರ್ಮವು ಯಾಕೆ
ನಾನಾ ಬಯಕ್ಯುಳ್ಳವನ ಧ್ಯಾನವು ಯಾಕೆ • ೩

ಕುಟಿಲತ್ವ ಸುಡದವನ ಜಟೆ ಕೌಪೀನ್ಯಾತಕೆ
ಸಟೆಬೊಗಳಿ ಬದುಕುವನ ಪಟ್ಟೆನಾಮವ್ಯಾಕೆ
ದಿಟವರಿಯದಧಮನ ನಿಟಿಲದಲಿ ಭಸಿತ್ಯಾಕೆ
ದಿಟ್ಟೆಯರಿಗೆ ಸೋಲುವನ ಹಠಯೋಗವ್ಯಾಕೆ ೪

ಯತಿಗಳನು ನಿಂದಿಪನ ಸ್ಮೃತಿಶಾಸ್ತ್ರ ಯಾತಕ್ಕೆ
ಸತಿಗಳುಕಿ.ನಡೆಯುವನ ಅತಿಜಾಣ್ಮೆ ಯಾಕೆ
ಸತತ ಖಲು ಕುಹಕನಲಿ ಅತಿಸ್ನೇಹ ಯಾತಕೆ
ಕ್ಷಿತಿಯೊಳ್ ಶ್ರೀರಾಮನ ನುತಿಸದವನ್ಯಾಕೆ ೫

೫೮೦

ವೃಥಾಕಳೆದೆಯಲ್ಲ ಕಾಲ ಮೃತ್ಯು ಗೆಲಿಯಲಿಲ್ಲ
ವೃಥಾ ಕಳೆದೆ ಕಾಲ ಪ

ಪೃಥ್ವಿಯಮೇಲೆ ಕೃತಕೃತ್ಯನಾಗಲು ಬಂದ
ವೃತ್ತಾಂತ ತಿಳಿಯಲಿಲ್ಲ ಅ.ಪ

ನಂಬಿಕೊಂಡೆಯಲ್ಲ ಈ ಜಗ ಬೆಂಬಲ ಬರೋದಲ್ಲ
ಜಂಬಬಡುವಿ ಸುಳ್ಳೆ ಮನದ ಡಂಬವ ಬಿಡಲಿಲ್ಲ
ಕುಂಭಿನಿಸುಖದ ಹಂಬಲದಲಿ ದಿನ
ಶುಂಭತನದಿಗಳೆದಿಂಬಿಲ್ಲದ್ಹೋಗುವಿ · ೧

ಕುಮತಿಯ ಬಿಡಲಿಲ್ಲ ಮಾಯಮಮತ ಕಡಿಯಲಿಲ್ಲ
ನಮಿಸಿ ಬಿಡದೆ ಸದಾ ಸುಮನಸರೊಳಗಾಡಿ
ಭ್ರಮೆಯನಳಯವಿಲ್ಲ ಬಂದ ಸಮಯ ತಿಳಿಯಲಿಲ್ಲ
ವಿಮಲಸುಖದನಿಜ ಕ್ರಮವ ತಿಳಿಯಲಿಲ್ಲ ೨

ಆಸೆ ನೀಗಲಿಲ್ಲ ವಿಷಯದ್ವಾಸನ್ಹಿಂಗಲಿಲ್ಲ
ಕ್ಲೇಶ ತೊಡೆಯಲಿಲ್ಲ ಲಂಪಟ ಮೋಸದಿಂದುಳಿಲಿಲ್ಲ
ಶೇಷಶಯನ ಮಮ ಶ್ರೀಶ ಶ್ರೀರಾಮನ
ದಾಸನಾಗಿ ಭವಪಾಶ ಗೆಲಿಯಲಿಲ್ಲ ೩

೫೮೧

ಶೋಧಿಸದೆ ನಿಜ ಬೋಧಿಪೆನೆಂಬ ಈ
ಹಾದಿಯೆಲ್ಲಿ ಕಲಿತಿರೆಲೊ ಎಲೋ
ಆಧರವರಿಯದ ವಾದಿಮೂರ್ಖರಿಗೆ
ಬೋಧ ಸಿದ್ಧಿಪುದೇನೆಲೋ ಎಲೋ ಪ

ಋತುಯಿಲ್ಲದವಳಲ್ಲಿ ರತಿಕಲಹ ಬೆಳೆಸಲು
ಸುತರ ಪಡೆವಳೇನೆಲೋ ಎಲೋ
ಅತಿಮಂದಮತಿಗಳಿಗಹಿತವ ಬೋಧಿಸೆ ಸು
ಗತಿಗೆ ಬಾಹರೇನೆಲೋ ಎಲೋ
ಕತ್ತೆಗೆ ಮುತ್ತಿನ ಕಂಟಲಿ ಹೇರಲು
ಅರ್ತೀತೆ ಬೆಲೆಯನು ಎಲೋ ಎಲೋ
ಕೃತ್ರಿಮರಿಗಾತ್ಮದ ಸ್ಮೃತಿಯ ಬೋಧಿಸೆ ದು
ರ್ಗತಿಯು ತಪ್ಪೀತೇನೆಲೋ ಎಲೋ ೧

ಕೋಣನ ಮುಂದೆ ವೇಣುಬಾರಿಸಲು
ಅನಂದತಾಳೀತೇನೆಲೋ ಎಲೋ
ಶ್ವಾನನ ಮುಂದೆ ಸುಗಾನ ಮಾಡಲದು
ಧ್ಯಾನಕ್ಕೆ ತಂದೀತೇನೆಲೋ ಎಲೋ
ಹೀನಸಂಸಾರಿಗೆ ದಾನಿಗಾಂಭೀರ್ಯದ

ಖೂನ ತಿಳಿದೀತೇನೆಲೋ ಎಲೋ
ಜ್ಞಾನಬೋಧಾಮೃತ ಅಜ್ಞಾನಿಗೆ ಉಸುರಲು
ಹೀನಭವ ಬಿಟ್ಟೇತೇನೆಲೋ ಎಲೋ ೨

ಆಸೆಗಾರಗೆ ಮಹ ಶಾಶ್ವತ ಪೇಳಲು
ಲೇಸಾಗಿ ತೋರೀತೇನಲೋ ಎಲೋ
ದಾಸರ ದೂಷಿಪ ನಾಶಮತಿಗೆ ಯಮ
ಪಾಶವು ತೊಲಗೀತೇನೆಲೋ ಎಲೋ
ಈಶನೊಲಿಮಿಲ್ಲದೆ ನಿಜಬೋಧಲಂಬಿಸಿ ಮುಕ್ತಿ
ಅಸನ ಸಿಕ್ಕೀತೇನೆಲೋ ಎಲೋ
ಹೇಸಿಜನರಿಗೆಲ್ಲ ಶ್ರೀಶ ಶ್ರೀರಾಮನ
ದಾಸತ್ವ ದೊರಕಿತೇನೆಲೋ ಎಲೋ ೩

೫೮೨

ಸದಮಲಾನಂದ ಪಡಿರೋ ನಮ್ಮವರೇ
ಮಾಹಾನುಭಾವರೇ ಪ

ಸದಮಲಾನಂದ ಪಡಿರೋ ನಮ್ಮವರೇ
ಮೊದಲು ವಂದನೆ ಹರಿಗೆ ಅರ್ಪಿಸಿ ಅ.ಪ

ಪದುಮನಾಭನ ಸದಮಲಂಘ್ರಿಯ
ಅಧಿಕ ನಿಖಿಳದೇವರೊಳಗೆಂದು
ಕದಲಗೊಡದಂತೆ ಮನವ ನಿಲ್ಲಿಸಿ
ವದನದಿಂ ವಿಧವಿಧದಿ ಪೊಗಳುತ ೧

ಆದಿ ಅಂತ್ಯಿಲ್ಲದಾದಿವಸ್ತು
ಸಾಧುಸಜ್ಜನಪ್ರೇಮಪೂರ್ಣೆಂದು
ವೇದ ವೇದಾಗಮ್ಯ ಮಹ
ದಾದಿ ಮಹಿಮನ ಪಾದ ಮೇಲೆಂದು ೨

ನಿಗಮ ಆಗಮಗಳಿಗೆ ನಿಲುಕದ
ಸುಗುಣಸಂತರ ಕರುಣಮಂದಿರ
ಬಗೆದು ಭಕುತರ ಭಾವ ನೀಡಲು
ರಘು ಶ್ರೀರಾಮಗೆ ಸಾಟಿಯಿಲ್ಲೆಂದು ೩

೫೮೩

ಸಾಧಿಸಿ ಪಡೆದಿದ್ದೀ ನರಜನುಮ ಸಂ
ಪಾದಿಸಿ ಕೊಳ್ಳೆಲೆ ಹರಿನಾಮ ಪ

ಪೋದಬಳಿಕ ಇಂಥ ಮಹಜನುಮ ಮತ್ತೆ
ಸಾಧನ ಸಾಧ್ಯವಲ್ಲೆಲೊ ತಮ್ಮ ಅ.ಪ

ಮಡದಿಮಕ್ಕಳೆಂಬ ಒಣಭ್ರಾಂತಿ ನಿನ
ಗ್ಹಿಡಿದಿದೆ ಮಾಯದ ಘನಚಿಂತಿ
ಒಡೆದು ತೋರುವ ಜಗಕ್ಷಣ ಸಂತಿ ಇದು
ಕಡೆಗೆ ಒಂದು ಇಲ್ಲ ನಿನ್ನ ಸಂಗತಿ ೧

ಅರ್ಥಇಲ್ಲದೆ ನಾನಾ ಯೋನಿಯಲ್ಲಿ ನೀ
ಸತ್ತುಹುಟ್ಟುತ ಬಹು ಬಳಲುವ್ಯಲೇ
ಸತ್ಯ ನಿತ್ಯಸುಖ ತಿಳಿಮರುಳೇ ಕಾಂಬ
ಮರ್ತ್ಯಭೋಗವೆಲ್ಲ ಸುಳ್ಳುಸುಳ್ಳೆ ೨

ತೊಳಲುತ ಎಂಭತ್ತು ನಾಲ್ಕುಲಕ್ಷ ಜನ್ಮ
ತಾಳುತ ಪಡೆದಿದ್ದಿ ಬಲುಶಿಕ್ಷೆ
ಚೆಲುವ ಶ್ರೀರಾಮನೊಳು ಇಡು ಲಕ್ಷ್ಯ
ನಿನಗೊಲಿದು ಕೊಡುವ ಸ್ವಾಮಿ ನಿಜಮೋಕ್ಷ ೩

೫೮೪

ಸಾರಿ ಧ್ಯಾನ ಒಂದಿದ್ದರೆ ಸಾಕೆಲೊ ಸಂ
ಸಾರ ತ್ಯಜಿಸುವುದ್ಯಾಕೊ ಪ

ಹಿಂಸೆಗುಣಗಳನ್ನು ತ್ಯಜಿಸಿ ಸತತ ಅ
ಹಿಂಸೆಯೆಂಬ ಧರ್ಮ ಗಳಿಸಿದರಾಯ್ತೆಲೊ ಅ.ಪ

ಜಡಭವತೊಡರನು ಕಡಿದುರುಳಿಸುತ
ದೃಢದೆ ಬಿಡದೆ ಕಡುಸತ್ಯ ನುಡಿಯುತ
ಅಡಿಗಡಿಗೊಡಲೊಳು ಜಡಜನಾಭ ಜಗ
ದೊಡೆಯನಡಿಯ ಧ್ಯಾನಿವಿದ್ದರದೊಂದೆ ಸಾಕೊ ೧

ಮೋಸ ಠಕ್ಕು ಕ್ಲೇಶಗುಣ ಕಳೆದು ಭವ
ಮೋಸದ ಫಾಸಿಯ ಮೂಲವ ತುಳಿದು
ಆಸೆನೀಗಿ ಮನ ಬೆರಿಯದೆ ಜಗ
ದೀಶನ ಸಾಸಿರನಾಮ ಧ್ಯಾಸದಿರೆ ೨

ಶುನಕನ ಕನಸಿನ ಪರಿಭವನೆನುತ
ತನುಮನಧನವೀಡ್ಯಾಡುತ ಅನುದಿನ
ಮನಸಿಜನ ಶ್ರೀರಾಮನ ಚರಣವ
ಘನತರಭಕುತಿಲಿ ನೆನೆಯುತ ಕುಣಿಯಲು ೩

೫೮೫

ಸಾಲವನು ಕೊಳುವಾಗ ಸಡಗರದ ಸಿರಿಯೋ
ಸಾಲಿಗನು ಬಂದು ಕೆಳಲಾಗಡರಿತುರಿಯೋ ಪ

ಡಬ್ಬುಗೈದಿದ್ದವನೊಳ್ ಎಬ್ಬಿಸಿ ಹಣತಂದು
ಉಬ್ಬುಬ್ಬಿ ಸತಿಮುಂದೆ ಹೆಬ್ಬುಲಿಯ ತೆರದಿ
ಒಬ್ಬರೀಡಿಲ್ಲೆನಗೆಂದಬ್ಬರಿಸುತ್ತೇಳುವನು
ತಬ್ಬಲು ಧಣಿಬಂದು ಮಬ್ಬಿನೊಳೆದ್ದೋಡ್ವ ೧

ಹಣತಂದ ದಿನ ಅವನ ಮನೆಯೊಳಗೆ ಹಬ್ಬೂಟ
ವನಿತೆಯೊಳೆನುತಿಹ್ಯನು ನನಗಾರು ಸರಿಯೆ
ಹಣಕೊಟ್ಟ ಧಣಿಬಂದು ಮನೆಮುಂದೆ ಕುಳ್ಳಿರಲು
ಹೆಣಇರುವ ಮನೆಗಿಂತ ಘನದು:ಖಕೇಳೊ ೨

ಕಡುಹಿಗ್ಗಿನಿಂದೊಸನ ಒಡವೆ ಉದ್ಧರಿತಂದು
ತೊಡುವಾಗ ನೋಡವನ ಬಡಿವಾರ ಬಿಂಕ
ಕೊಡುವ ವಾಯಿದೆ ಕಳೆದು ಬಡಿಗೆಯು ಬರಲಾಗ
ಮಡದಿ ಸತ್ತವನಂತೆ ಇಡುವ ತಲಿ ಬುವಿಗೆ ೩

ಅಕ್ಕಿಬೇಳೆ ಬೆಲ್ಲತಂದು ಅಕ್ಕರದಿಂ ಸತಿಸುತರಿ
ಗಿಕ್ಕುವಾಗ ನೋಡವನವಕ್ಕರಂಗಳನು
ಮಕ್ಕಮಾರಿಯಂದದಿ ತಿಕ್ಕುವಾಗಕೊಟ್ಟವರು
ಸಿಕ್ಕದೆ ತಿರುಗುವನು ಬಿಕ್ಕೆ ಬೇಡುಣುತ ೪

ಮನೆಮುರಿದು ಹೋಗಲಿ ವನಿತೆಯರು ಜರಿಯಲಿ
ಎನಗೆಡರು ಬಂದೊದಗಿ ಅನ್ನ ಸಿಗದಿರಲಿ
ಘನಮಹಿಮ ಶ್ರೀರಾಮ ಮಣಿದುಬೇಡುವೆ ನಿನಗೆ
ಋಣದ ಬಾಳುವೆ ಬೇಡ ಜನಮಜನುಮಗಳಲಿ ೫

೫೮೬

ಸಿಕ್ಕೀ ಸಮಯದಿ ಧರ್ಮಗಳಿಸಿರೋ ಮತ್ತೀ ಸಮಯ
ಬಿಕ್ಕಿ ಅತ್ತರೆ ಸಿಗದು ಕಾಣಿರೊ ಪ

ಭಿನ್ನವಿಲ್ಲದೆ ಅನ್ನದಾನ ಕನ್ಯಾದಾನ ಗೋವುದಾನವನ್ನು ಮಾಡಿ
ಪನ್ನಂಗಶಾಯಿ ನಿನ್ನದೆಂದು ಸಂಪದವಿ ಪಡೆಯಿರೊ ೧

ಭೂಮೀಸೀಮೋಸ್ತ್ರೋದಕನಕದಾನವು ಹೇಮಾಭರಣ
ಧನ ಧಾನ್ಯ ದಾನವು
ನೇಮದರಿತು ದಾನಮಾಡಿ ಸ್ವಾಮಿಗರ್ಪಿಸಿ ಕ್ಷೇಮ
ಪಡೆಯಿರೊ ೨

ಹರಿಯು ಕೊಟ್ಟರೆ ದಾನಮಾಡಿರೊ ಹರಿಯು
ಕೊಡದಿರೆ ಧ್ಯಾನಮಾಡಿರೊ
ಪರೋಪಕಾರದ ಶರೀರವಿದು ಸಿರಿರಾಮಗರ್ಪಿಸಿ
ಮುಕ್ತಿ ಪಡೆಯಿರೊ ೩

೫೮೭

ಸಿದ್ಧಮಾಡಿಕೊ ಹರಿನಾಮ ಬದ್ಧನಾಗದಲೆ
ಶುದ್ಧಬುದ್ಧಿಯು ನಿನ್ನೊಳಿದ್ದ ಸಮಯದಲ್ಲೇ ಪ

ಕಿತ್ತಿ ಅರ್ಭಟಿಸುತ ಸುತ್ತಿದ ಮಹ ಧನುರ್ವಾಯ
ಪಿತ್ತ ಕಫ ಮೇಲಕ್ಕೆ ಒತ್ತಿಕೊಂಡೊಯ್ದು
ಕುತ್ತಿಗೆ ಅಡರಿಕೊಂಡೆತ್ತೆತ್ತ ಬೊಗಳಿಸುವ
ಹೊತ್ತಿಗ್ಗೆ ಹರಿನಾಮ ಮತ್ತಾಗಿ ಬರದು ೧

ನಾಲಗೆ ಸೆಳೆಯುವುದು ಆಲಿಗಳು ತಿರುಗುವುವು
ಮೇಲಕ್ಕುರಿವುವು ನಯನ ನೀಲಗೊಂಬೆಗಳು
ಕಾಲಚಕ್ರನಿಗಂಜಿ ಮಲ ಒಸರುತಿರುವಾಗ
ನೀಲಶ್ಯಾಮನ ನಾಮ ನಾಲಗ್ಗೆ ಬರದು ೨

ಎಂಟೆರಡು ವಾಯುಗಳ ಕಂಠನಾಳಕೆ ಸೇರಿ
ಸುಂಟರಗಾಳ್ಯಂತೆ ಅಂಟಿ ಸುಳಿಸುತ್ತೆ
ಮೀಂಟಿ ಕರ್ಣದಿ ಒದರಿ ಹೊಂಟೋಗ್ವ ಸಮಯ ದ್ವೈ
ಕುಂಠ ನಾಮವು ತಂಟೆಗೆ ಬರದು ೩

ಅಡವು ಬಂದು ಅವಯವ ಕೂಡಿಕೊಳ್ಳಲು ಸೊನ್ನೆ
ಬಾಡಿಬೀಳ್ವುದು ಕಾಯ ನಾಡಿಗಳು ಕುಂದಿ
ನೋಡಿ ಸತಿಸುತರಂ ಮಾತಾಡೇನೆಂದೆನಲಾಗ
ರೂಢಿಗೀಶನ ಧ್ಯಾನ ಕೂಡಿ ಬರದಯ್ಯ ೪

ಮೂಳನಾಗಿ ಸಮಯ ಹಾಳುಮಾಡಿಕೊಳ್ಳದೆ
ಕಾಲನಾಳಿನ ಮಹ ಧಾಳಿಯನು ಗೆಲಿಯೊ
ಕಾಲಿಮರ್ದನ ಜಗತ್ಪಾಲ ಶ್ರೀರಾಮನಡಿ
ಕಾಲತ್ರದಲಿ ದೃಢದಿ ಮೇಲಾಗಿ ಭಜಿಸಿ ೫

೫೮೮

ಸಿದ್ಧವಾಗಿದೆ ನರಕ ಪಾಪಿಗಳ ದೆಸೆಗೆ ಬೃ
ಹದ್ದೇಹಿ ಭಟರಿಂದ ಯಮನಾಜ್ಞೆಯಂತೆ ಪ

ಶರಣಜನನಿಂದಕಗೆ ಪರಮಕುಂಭೀಪಾಕ
ಪರಮಭೀಕರಜ್ವಾಲೆ ಕರುಣಶೂನ್ಯರಿಗೆ
ಪರನಾರಿಗಳುಕುವಗೆ ಮೂತ್ರ ರಕ್ತಾಮೇಧ್ಯ
ಉರುಬಾಧೆ ಕರ್ಮದುರ್ಗಾ ಪರಮ ನೀಚರಿಗೆ ೧

ಮಾತಾಪಿತದೂಷಕಗೆ ಪ್ರೇತಕ್ರಿಮಿಕುಂತ ಭಯ
ಪಾತಕಗೆ ರಾಕ್ಷಸರ ಭೂತಕ್ರಮಿದೀರ್ಘ
ಘಾತಕಗೆ ಉಗ್ರತರ ವ್ಯಾಘ್ರಮುಖ ಭಟ ಶಿಕ್ಷೆ
ರೋತು ಮಲತ ಮಜ್ಜ ನೀತಿಬಾಹಿರಗೆ ೨

ವಂಚಕಗೆ ಗರಗಸದಂತ ಕುಂಟಣಿಗೆ ಚಕ್ರದಂಷ್ಟ್ರ
ಕಂಚಿನ್ವಾಯಸ ನರಕ ಕೇಳಾ ಕಪಟರಿಗೆ
ಪಂಚಮಹಾಪಾತಕರಿಗುಳಿವಿನ ಉರುನರಕ
ಲಂಚಗಾರಗೆ ಮೂತ್ರಮಲನಾರ್ದ್ವ ಕೂಪ ೩

ಕಾದ ಉಕ್ಕಿನ ಪ್ರತಿಮೆ ಕಾಮಾಂಧ ಮೂಢರಿಗೆ
ಕಾದು ಉರಿವರಗಿನೂಟ ಕಡುಲೋಭಿಗಳಿಗೆ
ಕಾದ ಸೀಸದ ಮಡುವು ಮನೆಮುರುಕ ತುಂಟರಿಗೆ
ಕಾದೆಣ್ಣೆಕೊಪ್ಪರಿಗೆ ಕುಟಿಲ ಕುಹಕರಿಗೆ ೪

ಪರದ್ರವ್ಯಪಹಾರಿಗೆ ಭೇದಿ ಭೈರವಕೂಪ
ನೆರೆನಂಬಿ ಕೊಲ್ಲವಗೆ ಮಸೆದಲಗುಕೊಡಲಿ
ಪರರೊಗತನರಿದಗೆ ನರಕ ಚಂದ್ರಾರ್ಕಪರಿ
ಗುರು ಹಿರಿಯರ್ಧಳಿದರಿಗೆ ಉರಿಸರಳ ಮಂಚ ೫

ಕಾಲಯಮಪಾಶವು ತುಳಸಿದಳ ತುಳಿದವರಿಗೆ
ಕಾಲಭೈರವ ಮೃತ್ಯು ಮಾಯಮೋಹಿಗಳಿಗೆ

ಕಾಲಕರ ಶೂಲ ಕೊಂಡಿ ಚಾಂಡಾಲಗೆ
ಸೂಳೆಯರ ಸೇವಕಗೆ ಕಾಲಯಮದಂಡ ೬

ಸಂತ ಸಜ್ಜದಾನಸಂಗರಿಯದಧಮರಿಗೆ
ಇಂತು ಎಂಬತ್ತು ಕೋಟಿ ನರಕಯಾತನವು
ಅಂತಕಾರಿ ನಿನ್ನಾಜ್ಞೆಯಂತೆ ನಡೆಯುತಿವೆ ಎನ್ನ
ಅಂತರದಿ ನಿಂತಿದನು ಗೆಲಿಸು ಶ್ರೀರಾಮ ೭

೫೮೯

ಸುಮ್ಮನೆ ತೊಲಗು ಕಂಡೆಲೆ ಮಾಯಿ ನೀನು
ನಮ್ಮಯ್ಯ ಬಂದರೆ ಉಳಿಲಾರಿ ಇನ್ನು ಪ

ಉರಗ ತಾ ಬೆನ್ನತ್ತಿ ಗರುವದಿಂ ಬಂದು ಮಹ
ಗರುಡನಂ ಕಂಡಕ್ಷಣದ್ಧರಣ ತೊರೆವಂತೆ
ಹರಿದಾಸರೆನ್ನದೆ ಪರಿಪರಿ ಕಾಡಿ ನೀ
ಶರಣಜನಪ್ರಿಯನ ಕಂಡುರಿದ್ಹೋಗಬೇಡ ೧

ಲಕ್ಷಿಸೆ ಮಂಡೂಕ ಮಕ್ಷಕನ ಬೆನ್ನತ್ತಿ
ತಕ್ಷಕಗೆ ಸಿಕ್ಕು ತಾ ಭಕ್ಷವಾದಂತೆ
ಲಕ್ಷ್ಮೀಪತಿದಾಸರ ಲಕ್ಷಿಸದೆ ಕಾಡಿ ಭಕ್ತ
ಪಕ್ಷಕನ ಕರಕೆ ಸಿಕ್ಕು ಶಿಕ್ಷೆಪಡಬೇಡ ೨

ರಾಮದಾಸರ ನೆರೆಗೆ ತಾಮಸದಿಂದ್ಹೋಗದೆ
ಕ್ಷೇಮದಿಂ ದೂರಿರೋ ಹೇ ಮಾಯಿ ನೀನು
ಸ್ವಾಮಿ ತನ್ನಯ ಭಕ್ತರೊಳು ಕಂಡರೆ ನಿನ್ನ
ನಾಮವೇ ಉಳಿಸನೀ ಭೂಮಿಯ ಮೇಲೆ ೩

೫೯೦

ಸುಮ್ಮನೆ ಹೋಗುತಾದಲ್ಲೋ ಇಷ್ಟಾರ್ಥಪಡಿದೇ
ಸುಮ್ಮನೆ ಹೋಗುತಾದಲ್ಲೋ ಪ

ಸುಮ್ಮನೆ ಹೋಗುತಾದೆ ಹೆಮ್ಮಾರಿಗೀಡಾಗಿ
ಮರ್ಮವರಿತು ಪರಬ್ರಹ್ಮನ ಕೂಡದೆ ಅ.ಪ

ಎಷ್ಟೋ ಸುಕೃತವಡೆದು ಈ ನರಜನ್ಮ
ತೊಟ್ಟು ಸೃಷ್ಟಿಗೆ ಇಳಿದು
ಹುಟ್ಟಿ ಬಂದಂಥ ಕಾರ್ಯ ಬಿಟ್ಟು ಮರವೆಗೂಡಿ
ಕೆಟ್ಟು ಹೋಗ್ಯಾದೋ ವಯ ಕೃಷ್ಣಾರ್ಪಣೆನದೆ ಸುಟ್ಟು ೧

ವಯವೆಂಬ ಧನ ಪಡೆದು ಈ ಮಹದನು
ಭವದ ಸಂತೆಗೆ ಇಳಿದು ಭವದ
ಜಯೆಂಬ ಅನುಭವದ ವ್ಯಾಪಾರ ಮಾಡಿ
ಭವಹರನ ಕಾಣದೆ ಜವನಗೀಡಾಗಿ ತಾನು ೨

ಅರಿವಿನಾಲಯ ಪೊಕ್ಕು ಸಂಸಾರವೆಂಬ
ಮರೆವಿನ ಬಲೆಯೊಳ್ ಸಿಕ್ಕು
ಪರಮಪುರುಷ ಸಿರಿಯರಸ ಶ್ರೀರಾಮನ
ಚರಣಕಮಲಕ್ಕೆ ಸಲ್ವ ವರಮೋಕ್ಷ ಪಡೆಯದೆ ೩

೫೯೧

ಸುಳ್ಳಿನೊಳಗೆ ನಾ ಬಲು ಸುಳ್ಳ ನನ್ನ
ಸುಳ್ಳೆ ನನಗೊಳುಪಿಲ್ಲ ಪ

ಸುಳ್ಳು ಹೇಳುವೆನು ಅಳತಿಲ್ಲ ಇದು
ಎಳ್ಳಷ್ಟಾದರು ಸುಳ್ಳಲ್ಲ ಅ.ಪ

ಸೂಜಿಗಡತರ್ಹೊಗೆಯೇಳ್ವುದ ಕಂಡೆ ಅಗ್ನಿ
ಮೂಜಗಡರಿ ಸುಡುವುದು ಕಂಡೆ
ಸೋಜಿಗ ಕಂಡೆನು ಉರಿಯೊಳು ಮತ್ತೊಂದು
ಬೀಜ ಮೊಳೆತು ತೆನೆಯಾದದ್ದ ಕಂಡೆ ೧

ಸಾಸಿವೆಕಾಳಷ್ಟು ಬಟ್ಟಲ ಕಂಡೆ ಇಡೀ
ದೇಶ ಅದರೊಳಗಿಟ್ಟಿದ್ದು ಕಂಡೆ

ಹಾಸ್ಯದ ಮಾತಲ್ಲ ತಿರುಗಿ ನೋಡಿ ನಾ
ದೇಶದೊಳಗೆ ಆ ಬಟ್ಟಲ ಕಂಡೆ ೨

ಮೈಯೆಲ್ಲ ತೂತಿನ ತಿದಿಯ ಕಂಡೆ ಅದು
ಬಾಯುತುಂಬಿ ಬಾತದ್ದು ಕಂಡೆ
ದೀವಿಗೆಯಿಲ್ಲದೆ ಬೆಳಗದುಕಂಡೆ ಮತ್ತು
ಕಿವುಡ ಮೂಕರ ಏಕಾಂತ ಕಂಡೆ ೩

ಉರಿವುದ ಕಂಡೆನು ಬೆಂಕಿಲ್ಲದೆ ಅದು
ಆರಿದ್ದಕಂಡೆನು ನೀರಿಲ್ಲದೆ
ಹೊರುವುದ ಕಂಡೆನು ಕೂಲಿಲ್ಲದೆ ಮತ್ತು
ಇರಿದುಕೊಲ್ವುದು ಕಂಡೆ ಕತ್ತಿಲ್ಲದೆ ೪

ಮೇಲಕೆ ಬೇರಿಳಿದ್ವೃಕ್ಷ ಕಂಡೆನಲ್ಲಿ ಟೊಂಗೆ
ನೆಲಕೆ ಬೆಳೆದದ್ದು ಕಂಡೆ ಕಣ್ಣಿಲಿ
ಚಲಿಪದು ಕಂಡೆನು ಎಲ್ಲಿಗೆ ಬೇಕಲ್ಲಿ ಇದರ
ಕೀಲಿಕಂಡೆ ಶ್ರೀರಾಮನ ಬಲ್ಲಿ ೫

೫೯೨

ಸುಳ್ಳು ಸುಳ್ಳು ಸುಳ್ಳು
ಪೊಳ್ಳು ಜಗ ತಿಳಿಯಲೆ ಮಳ್ಳು ಮರುಳು ಪ

ಸುಳ್ಳು ಬಂಗಾಲಿ ಕಂಡು
ಮಳ್ಳಾಗ ಬೇಡೆಲೆ ಲೊಳ್ಳಟ್ಟಿಯಿದೆಲ್ಲ ಅ.ಪ

ಕಾಜಿನ ಬುರುಡೆಯೊಳ್ ತೇಜಿಪದೀಪಕ್ಕೆ
ಸೋಜಿಗಗಂಡು ಮತಿಮಾಜುವುದರಲವ
ಮೋಜಿನ ಆಟಕ್ಕೆ ೧
ನಾಶವಾಗುವುದೊಂದೇ ತಾಸು ತೋರೆಲ್ಲನು
ಈಷಣ ಸಂಸಾರದಾಸೆಗೆ ಸಿಗದಿರು
ಮೋಸವಿದೆಲ್ಲವು ೨

ಮೋಹದಾಕಾರಕ್ಕೆ ಮೋಹಿಸಿ ಕೆಡದೆ ನೀ
ಮೋಹಿಸಿ ಸ್ಥಿರಸುಖದೇಹವ ನೀಡೆಲೊ
ಮಹ ಶ್ರೀರಾಮನೆ ೩

೫೯೩

ಸೂಳಿನ್ನ ಪೊಗುವವ ಏನಾದೆಂತಾ
ಹಾಳಾದಬಳಿಕ ಪುಣ್ಯ ಮೂಳನಾಯಾದ ಪ

ಮೂತ್ರದ್ವಾರಕೆ ಮೆಚ್ಚಿ ಮಾತಾಪಿತರ್ವೈರ್‍ಯಾಗಿ
ಪಾತ್ರಾಪಾತ್ರೆನದೆ ಕುಲಗೋತ್ರ ಧರ್ಮಳಿದ
ಮಾತೃ ಭೂಮಾತೆಯ ಯಾತ್ರ ಸುದ್ದರಿಯದೆ
ಧಾತ್ರಿಯೊಳ್ ಕೈಸೂತ್ರಗೊಂಬ್ಯಾದ ೧

ಸುಲಭದಿಂ ತನ್ನಯ ಕುಲನಾಶಗೆ ಅನ್ಯ
ಕುಲಕೆ ಹವಣಿಪ ಮಾರಿಬಲೆಗೆ ಒಳಪಟ್ಟು
ಕುಲ ವಿಧವಿಧ ಭಕ್ತಿಗಳನಗಲಿ
ಬಲುಪಾಪಕೊಳಗಾಗಂಕತನ ಮಹ ಕೊಲೆಗೆ ಈಡಾದ ೨

ಉತ್ತಮರ ಲಕ್ಷಿಸದೆ ಸತ್ಯಕ್ಕೆ ಮನಗೊಡದೆ
ಮೃತ್ಯುರೂಪಿಣಿಮಾತೇ ಅತ್ಯಧಿಕವೆನುತ
ಮರ್ತು ತನ್ನಯ ಸುಖವ ತೊತ್ತಾಗಿ ಪಾತಕಿಗೆ
ನಿತ್ಯ ಮೈಲಿಗೆಹೊರುವ ಕತ್ತೆಯಂತಾದ ೩

ಸಾರುತಿಪ್ಪವೇದ ಸುವಿಚಾರವಾದಗಳೆಲ್ಲ
ತೂರಿ ಅಡಿವಿಗೆ ಅಟ್ಟಿ ಮೀರಿ ಮಹವಾಕ್ಯ
ಘೋರನರಕಕೊಯ್ದು ಸೇರಿಸುವವತಾರಿ ಮಕ್ಕ
ಮಾರಿ ಜಾರೆಗೆ ಬಿಡದೆ ಸೆರೆಯಾಳು ಆದ ೪

ಮನ ಅವಳಿಗರ್ಪಿಸಿ ತನು ಅವಳಿಗೊಪ್ಪಿಸಿ
ಧನವನಿತು ಅವಳ ಅಧೀನದಲ್ಲಿರಿಸಿ

ಬಿನುಗರೊಳುಬಿನುಗೆನಿಸಿ ಕುಣಿಕುಣಿದು ಕಡೆಗೆ ಮಮ
ಜನಕ ಶ್ರೀರಾಮನಡಿ ಕನಿಕರಕ್ಕೊರತಾದ ೫

೫೯೪

ಸೋತುಹೋಗಣ್ಣ ಮಾತುಬಂದಲ್ಲಿ ಜಾಣನಾಗಿ
ಸೋತುಹೋಗಣ್ಣ ಮಾತುಬಂದಲ್ಲಿ ಪ

ಸೋತುಹೋಗದೆ ಮಾತುಮಾತಿಗೆ ವಾದಿಸಲ್ಕೆ
ಘಾತಕತನದ್ವಿಧಿಯು ಬಂದು
ಆತುಕೊಂಡು ಕೂತುಕೊಳ್ವುದು ಅ.ಪ

ಸೋತೆನೆನ್ನಲು ನಾಚಬೇಡಣ್ಣ ದೇವರು ಕೊಟ್ಟಿಹ್ಯ
ಖ್ಯಾತಿಯೇನು ಹೋಗೋದಿಲ್ಲಣ್ಣ ಸುಳ್ಳಲ್ಲವಣ್ಣ
ಸೋತೆನೆಂಬುದು ಜಯದ ಮಾತಣ್ಣ ಸತ್ಯ ತಿಳಿಯಣ್ಣ
ನೀತಿಗಡಕರ ಮಾತಿನ ತಳ್ಳಿಗೋತ ಕುಣಿಯೊಳೆಳೆವ ಬಳ್ಳ್ಯೆಂದು
ಮಾತನಾಡದೆ ಸುಮ್ಮನ್ಹೋಗಲು ನೀತಿವಂತರು ಮೆಚ್ಚುತಾರ ೧

ಕೆಡುಕುಜನಜತೆ ತೊಡಕು ಬೇಡಣ್ಣ ಮಂದಮತಿಗಳ
ದುಡುಕುಮಾತಿಗೆ ಮಿಡುಕಬೇಡಣ್ಣ ಸತ್ಯದ್ಹೇಳುವ
ದೃಢತರ್ವಚನದ ಅಡಕು ತಿಳಿಯಣ್ಣ ಪಡಕೊ ಸುಖವಣ್ಣ
ಜಡಕೆ ಜಡವಾದ ಜಡರು ತಾರೆ ತೊಡಕಿನೊಳು
ನೀ ತೊಡರಿಕೊಂಡರೆ
ಬಿಡಿಕಿ ಯಮನ ದೂತರು ಮಹಕೆಡಕು
ತಪ್ಪದು ಕಡೆಯತನಕ ೨

ಸೋತೆನೆನದ್ದತ್ತುವದನಂದೇನಾಯ್ತು ಸೋತು ಓಡಿದ
ನೀತಿವಂತ ವಿಭೀಷಣಂದೇನಾಯ್ತು ಮತ್ತು ನಳರಾಜ
ಸೋತ ರಾಜ್ಯ ಭಂಡಾರೆಲ್ಲ ಮುಳುಗಿತು ತಿಳಿ ನೀತಿ ಅರಿತು

ಮಾತುಮಾತಿಗ್ವಾದಿಸಿ ಕುಲಘಾತಕ್ಕಾದನು ಕೌರವೇಂದ್ರನು
ಸೋತೆನೆಂಬುದು ಮೂಲಮಂತ್ರವು
ಸೋತಜನರಭಿಮಾನಿ ಶ್ರೀರಾಮ ೩

೫೯೫

ಸ್ವಾಮಿಯ ನೆನೆಯೋ ಪಾಮರ ಮನಸೆ ನೀ
ತಾಮಸವನು ನೀಗಿ ಪ

ಕಾಮಾದಿಗಳ ಜೈಸಾಮಹಿಮ ಸತ್ಯ
ಭಾಮೇಶಗತಿಯೆಂದು
ನೇಮವಹಿಸಿ ಬಿಡದೆ ನಾಮ ಪೊಗಳುವರ
ಕಾಮಿತಗಳನಿತ್ತು ಪ್ರೇಮದಿಂ ಕಾಯ್ವಂಥ ೧

ಗೋಪ ಗೋಪತಿ ನಮಿತ ಗೋಪಿಯ ಪ್ರಿಯಬಾಲ
ಪಾಪನಿವಾರಣ
ಆ ಪರಬ್ರಹ್ಮನ ಶ್ರೀಪಾದ ಪೊಗಳಲು
ತಾಪತ್ರಯಂಗಳ ಲೋಪಮಾಡುವಂಥ ೨

ಪರಮ ಶ್ರೀಗುರು ಎಂದು ಪರಮಾತ್ಮ ಶ್ರೀರಾಮ
ಚರಣಸಾನ್ನಿಧ್ಯಕ್ಹೊಂದು
ನರಕಯಾತನೆ ಗೆಲಿಸಿ ಬರುತಿರ್ಪ ಕಷ್ಟಗಳ
ಪರಿಹರಿಸಿ ಕರಪಿಡಿದು ಕರುಣದಿ ಸಲಹುವ ೩

೫೯೬

ಹರಿನಾಮಾಮೃತವನು ಸುರಿದು ಪರಿಪಕ್ವರಾಗಿ
ಜರೆಮರಣೆಂದೆಂಬ ಉರುಲನು ಗೆಲ್ಲಿರೊ ಪ

ತರಳತನದಿ ಸುರಿದು ಪರಮ ಪ್ರಹ್ಲಾದನು
ಪರಮಕಂಟಕ ಗೆಲಿದು ವರಮೋಕ್ಷಕೈದಿದ

ನಿರುತದಿಂ ವಿಭೀಷಣ ಸುರಿದು ಈ ಅಮೃತ
ಸ್ಥಿರಪಟ್ಟವೇರಿದ್ದು ಅರಿವಿಟ್ಟು ನೋಡಿ ೧

ಸುರಿದು ಈ ಅಮೃತ ಕರಿ ತನ್ನ ಭಾವದಿ
ಪರಮಾಪತ್ತು ಗೆಲಿದದ್ದರಿದು ಸ್ಮೃತಿಯಿಂದ
ಸುರಿಯುತೀ ಅಮೃತ ನರನು ಧರೆಯನೆಲ್ಲ ತಿರುಗುತ
ಪರತರಧುರವ ಜೈಸಿದರಿದು ೨

ಸೇವಿಸಿಅಮೃತ ಪಾವನೆನಿಸಿ ಯುವತಿ
ಕೇವಲಮಾನದಿಂ ಬುವಿಯೊಳ್ಬಾಳಿದಳು
ದೇವ ಶ್ರೀರಾಮನ ಪಾವನ ನಾಮಾಮೃತ
ಭಾವದೊಳ್ಸವಿಯುತ ಕೇವಲರೆನಿಸಿರೊ ೩

೫೯೭

ಹರಿಪಾದ ಮರೆಹೊಕ್ಕು ಪರಿಭವವ ಗೆಲಿರೋ
ಪರಮ ಪರತರ ಕರುಣಶರಧಿ ಸಿರಿವರಗೆ ಪ

ಕುಲವನು ಗಣಿಸದೆ ಎಳೆಬಾಲನೆಂದಪ್ಪಿ
ಬಲು ಉಗ್ರರೂಪದಿಂ ಬಲವಾಗಿ ಕಾಯ್ದ
ಖಳನನುಜನೆಂಬುದನು ತಿಲಮಾತ್ರ ತಿಳಿಯದೆ
ಒಲಿದು ಸ್ಥಿರಪಟ್ಟವನು ಸುಲಭದಿಂ ಕೊಟ್ಟ ೧

ಬಡವನ್ಹಿಡಿ ಅವಲಕ್ಕಿಗೊಡನೆ ತಾ ಮೆಚ್ಚಿ ಹರಿ
ಬಡತನವ ಕಡೆಮಾಡಿ ಸಡಗರದಿ ಕಾಯ್ದ
ಕಡುಪಾಪಿ ಅಜಮಿಳನು ನುಡಿದ ಒಂದಕ್ಷರಕೆ
ಕಡುಮುಕ್ತಿಸಂಪದ ತಡೆಯದಲೆ ಕೊಟ್ಟ ೨

ದುರುಳನ ಸಭೆಯಲ್ಲಿ ಮೊರೆಯಿಟ್ಟು ಕೂಗಿದ
ತರುಣಿ ದ್ರೌಪದಿಮಾನ ಪೊರೆದಿಂಬುಗೊಟ್ಟ
ಕರುಣಾಳು ಶ್ರೀರಾಮ ಜರಹೇವ ಇಲ್ಲದಲೆ
ಚರಣದಾಸರ ಮನೆಯ ತುರಗ ತಿರುವಿದನು ೩

೫೯೮

ಹರಿಭಜನವೇ ಬಹುಮಿಗಿಲು ನರನಿಗೆ
ಧರೆಯಸುಖವೆಲ್ಲ ಸುಳ್ಳೊ ಸುಳ್ಳೋ ಪ

ತಂದೆತಾಯಿಗಳು ಮಂದಿ ಮಕ್ಕಳು
ಬಂಧುಬಳಗ ಒಂದು ಸಂಬಂಧವಿಲ್ಲ ೧

ಕೋಟಿಕೊತ್ತಲ ಕೋಟಿಧನಬಲ
ನೀಟಾದ ಮಹಲು ನಿಜವಿಲ್ಲ ಇಲ್ಲ ೨

ರಾಜ್ಯಭಂಡಾರ ಪ್ಯಾಟೆ ತೇಜಿ ಆನೆ ಒಂಟೆ
ರಾಜಿಪುದೆಲ್ಲ ಸುಳ್ಳ ಮುಷ್ಟಿಮುಷ್ಟಿ ೩

ಸೌಂದರ್ಯದ ಸಿರಿ ಅಂದಣ ಭಾರಿ
ನಂದಿಪೋಗುವುದೆಲ್ಲ ಹಾರಿ ಹಾರಿ ೪

ವರದ ಶ್ರೀರಾಮನ ಚರಣಸ್ಮರಣೆಲ್ಲದ
ನರರ ಜನುಮವೆಲ್ಲ ಹಾಳು ಹಾಳು ೫

೫೯೯

ಹರಿಯೆನ್ನೋ ಹರಿಯೆನ್ನೋ ಹರಿಯೆನ್ನೋ ಖೋಡಿ
ಹರಿಯದಾಸರ ಸಿರಿಸಂಪದ ನೋಡಿ ಪ

ಎರವಿನ ಸಿರಿಗೆ ನೀ ಮರುಳಾದಡಿ
ಹರಿಯೆಂದು ನುಡಿಲಿಕ್ಕೆ ನೀನಗೇನು ಧಾಡಿ
ಧರೆಯೊಳಾರಿಲ್ಲ್ಹರಿದಾಸರ ಜೋಡಿ
ಮರುಳ ಯಮದೂತರಂಜಿ ಹೋಗುವರೋಡಿ ೧

ಭವಚಕ್ರದೊಳುಬಿದ್ದು ಬೆಂಡಾದೆ ಕಾಗಿ
ಅವನಿಸುಖ ನೀನಿನ್ನು ತಿಳಿವಲ್ಲಿ ಗೂಗಿ
ಭವಹರನರ್ಚಿಸಿ ನೋಡೋ ದೃಢಮಾಗಿ
ಭವತಾಪ ನಿನಗೆಂದಿಗಿರದೋ ನಿಜವಾಗಿ ೨

ಮತಿಶೂನ್ಯನಾಗಧೋಗತಿ ಕಾಣಬೇಡೋ
ಮತಿಯಿಂದ ನಿಜಸ್ಥಿತಿ ವಿಚಾರಮಾಡೋ
ಕೃತಕೃತ್ಯರೆನಿಪ ಹರಿದಾಸರೊಳಾಡೋ
ಪತಿತ ಶ್ರೀರಾಮನರಸಿ ಮುಕ್ತಿಯ ಕೂಡೋ ೩

೬೦೦

ಹಾನಿಯಾದ ಮೇಲೆ ಏನು ಬೆಂಬಲವಾದರಿನ್ನೇನಿನ್ನೇನು
ಮಾನಹೋದ ಮೇಲೆ ದಿನವೆಷ್ಟು ಬಾಳಿದರಿನ್ನೇನಿನ್ನೇನು ಪ

ಆಪತ್ತಿಗಿಲ್ಲದ ಆಪ್ತರೆಷ್ಟಿದ್ದರು ಇನ್ನೇನಿನ್ನೇನು
ತಾ ಪರರಾಳದವಗ್ಗಣವು ಎಷ್ಟಿರ್ದರಿನ್ನೇನಿನ್ನೇನು
ಕೋಪಿಷ್ಠನಾದವ ತಪವೆಷ್ಟು ಗೈಯಲು ಇನ್ನೇನಿನ್ನೇನು
ಪಾಪಕ್ಕಂಜದನೀಗಧಿಕಾರರ್ವಿರಿನ್ನೇನಿನ್ನೇನು ೧

ವನಿತೆಯ ಸೇರದ ಗಂಡ ಮನೆಯೊಳಿರ್ದರಿನ್ನೇನಿನ್ನೇನು
ಒಣಗಲು ಪೈರಿಗೆ ಬಾರದ ಮಳೆ ತಾನಿನ್ನೇನಿನ್ನೇನು
ಬನ್ನಬಡುವರ ಕಂಡು ಗಹಗಹಿಸಿ ನಕ್ಕರಿನ್ನೇನಿನ್ನೇನು
ಮನ್ನಣೆಲ್ಲದ ಸಭೆ ಮಾನ್ಯರು ಪೊಕ್ಕರಿನ್ನೇನಿನ್ನೇನು ೨

ಅವಮಾನ ಸಮಯಕ್ಕೆ ಒದಗದ ಗೆಳತನವಿನ್ನೇನಿನ್ನೇನು
ಧವ ಸತ್ತ ಯುವತಿಯ ಕುರುಳು ಮಾರಿದರಿನ್ನೇನಿನ್ನೇನು
ದಯದಾಕ್ಷಿಣ್ಯಲ್ಲದ ಅರಸನಾಳಿಕಿದ್ದರಿನ್ನೇನಿನ್ನೇನು
ದಿವಮಣಿ ತನ್ನಯ ಕಿರಣಂಗಳ್ತೋರದಿರಲಿನ್ನೇನಿನ್ನೇನು ೩

ಬಾಗಿ ನಡೆಯದ ಸತಿ ರೂಪಸ್ಥಳಾದರಿನ್ನೇನಿನ್ನೇನು
ರೋಗ ಕಳೆಯದ ವೈದ್ಯರಾನಂಗರಿದ್ದರಿನ್ನೇನಿನ್ನೇನು
ಆಗಿಬಾರದವರ ಬಾಗಿಲ ಕಾಯ್ದರಿನ್ನೇನಿನ್ನೇನು
ಭೋಗಿವಿಷಕೆ ಗರುಡಮಂತ್ರನುವಾಗಲು ಇನ್ನೇನಿನ್ನೇನು ೪

ಪ್ರೇಮದವರೆ ತನ್ನೊಳ್ ತಾಮಸರಾದಿರಿನ್ನೇನಿನ್ನೇನು
ನೇಮಿಸಿದ್ಯೆಲ್ಲವು ಇದಿರಾಗಿ ಕೂತಮೇಲಿನ್ನೇನಿನ್ನೇನು

ಕಾಮಧೇನುವೆ ಮನದಿ ಕಾಮಿತವೀಯದಿರೆ ಇನ್ನೇನಿನ್ನೇನು
ಸ್ವಾಮಿ ಶ್ರೀರಾಮನ ಪ್ರೇಮ ಪಡೆಯದ ನರ ಇನ್ನೇನಿನ್ನೇನು ೫

೬೦೧

ಹುಚ್ಚನಾಗಬೇಕೋ ಜಗದಿ ಹುಚ್ಚನಾಗಬೇಕೋ ಪ

ಅಚ್ಚುತಾನಂತನ ನಿಶ್ಚಲ ಧ್ಯಾನದಿ
ಇಚ್ಛೆಯಿಟ್ಟು ಜಗದೆಚ್ಚರ ನೀಗಿ ಅ.ಪ

ಮರವೆ ಹರಿಯಬೇಕೋ ಪರಲೋಕ
ದರಿವಿನೊಳಿರಬೇಕೊ
ಪರಿಪರಿಯಿಂದಲಿ ಸಿರಿಯರಸನ ಪಾದ
ಸ್ಮರಿಸಿ ಇಹ್ಯದರಿವು ತೊರೆದಾನಂದದಿ ೧

ಪರನೆಲೆ ತಿಳಬೇಕೋ ಕಾಯದ
ನರನೊದೆಯ ಬೇಕೊ
ದುರಿತಾಕಾರಿಗಳ ಕಿರಿಕಿರಿಯಿಲ್ಲದೆ
ಹರಿಹರಿಯೆನ್ನುತ ಪರಮಾನಂದದಿ ೨

ಕಾಮ ಕಳೆಯಬೇಕೋ ಕಾಯದ
ಪ್ರೇಮ ತೊರೆಯಬೇಕೊ
ನೇಮದಿಂದ ಮಮಸ್ವಾಮಿ ಶ್ರೀರಾಮನ
ನಾಮ ಭಜಿಸಿ ನಿಸ್ಸೀಮನಾಗಾನಂದದಿ ೩

೬೦೨

ಹುಚ್ಚರಾಗಿ ಕೆಡಬೇಡಿರೆಚ್ಚರವ ಪಡಿರೋ
ಮೆಚ್ಚಿ ಸ್ತ್ರೀಯರ ಇಚ್ಛೆಗೊಳಗಾಗದಿರಲೊ ಪ

ಬಡಿವಾರತನದಿಂದ ಕಡುದೈನ್ಯದೋರುವರು
ಒಡಲೊಳಗಿನ ಹರಳು ಒಡೆದರಳುವಂತೆ

ಒಡಲೊಳೊಂಚನೆ ಬಿಡರು ಕಡೆತನಕ ಸ್ಥಿರವಲ್ಲ
ಕಡುಪಾಪಿರೂಪಿನ ಮಡದಿಯರ ಮನವು ೧

ಮನವ ಕರಗಿಸಿ ತನ್ನ ಮನೆಯ ಪುರುಷನ ಜರೆದು
ಮನಮೋಹಿಸಿನ್ನೊಬ್ಬ ಗೆಣೆಯನಂ ಕೂಡಿ
ತಿನುವಳು ಬಿಡದೊಂದುದಿನ ಪತಿಯ ಪ್ರಾಣಮಂ
ಘನಪಾಪಿ ವನಿತೆಯರ ಮನನಂಬಿಗಲ್ಲ ೨

ತನ್ನ ಪುರುಷನಮುಂದೆ ಬಣ್ಣದಮಾತಾಡಿ
ಹಣ್ಣಿಗೆತಂದವನ ತನ್ನೊಶದಲಿರಿಸಿ
ಮುನ್ನ ಜನನೀ ಜನಕರನ್ನು ಅಗಲಿಸಿ ಒಡನೆ
ತನ್ನಯ ಅನುಕೂಲವನ್ನೆ ಸಾಧಿಪಳು ೩

ಅವಗೆ ಹಿತವನೆ ತೋರಿ ಇವಗೆ ಕಾಲನೆ ಎತ್ತಿ
ಅವನಿಗೆ ಕೈಕೊಟ್ಟು ದಿವರಾತ್ರಿಯೆನದೆ ಭ
ಯವನಿತು ಇಲ್ಲದೆ ಭವ ಭವವ ತಿರುಗುವರು
ಜೀವಘಾತಕಿಯರದಾವ ಭರವಸವೊ ೪

ಹರಿದಿಯರ ಒಡನಾಟ ನರಕಕ್ಕೆ ಮೂಲವು
ದುರಿತಕ್ಕೆ ತವರಿದು ಮರೆಮೋಸದುರುಲು
ದುರುಳೆಯರ ಚರಿತಕ್ಕೆ ಮರುಳಾಗಿ ಕೆಡದೆ ಭವ
ಹರ ಶ್ರೀರಾಮನ ಪದಸ್ಮರಣೆ ಸಂಪಾದಿಸಿರೊ ೫

೬೦೩

ಹುಡುಕಿ ಕರೆತಾರೆ ಸಖಿ ಜಡಜನಯನ ಒಡೆಯನ್ನಂಬಲ
ತಡೆಯಲಾರೆ ಪಿಡಿವೆ ಪಾದ ಗಡನೆ ಪೋಗಿ ಪ

ಧ್ಯಾನಧೃಢ ಅವನು ಇರುವ
ಸ್ಥಾನ ಪೇಳುವೆ
ಜಾಣೆ ಕೇಳೆ ಹಗಲು ಇರುಳು

ಖೂನವಿಲ್ಲವನಿಹ್ಯ ಸ್ಥಳದಿ
ತಾನೆತಾನಾಗಿ ಸೂಕ್ಷ್ಮದಿ
ಶೂನ್ಯ ಪೀಠದಿ ವಾಸಿಪ
ಜಾಣನ ಜವದಿಂ ಪೋಗಿ ೧

ಅರಿದು ಮರೆದಿರೆ ಅವನ
ಗುರುತು ಒರೆಯುವೆ
ಜರಾಮರಣೆವಿಲ್ಲವಗೆ
ಧರಿಸಿರುವಂತವತಾರ
ತಿರುಗಲು ಮೂಡವು ಅಡಿಗಳು
ನೆರಳೇ ಇಲ್ಲವು ನಿಲ್ಲಲು
ಶರೀರವಿಲ್ಲದೆ ತೋರುವ
ಪರಮನ ತ್ವರಿತದಿ ಹಿಡಿದು ೨

ಪ್ರೇಮ ಸುಂದರೀ ಅವನ
ನಾಮ ಪೇಳುವೆ
ನೇಮದಿಂದ ಕೂಗುತಿಹ್ಯವು
ಸಾಮಯಜುರಾದಿ ವೇದವು
ಆಮಹಮಹಿಮನ ಘನತರ
ನಾಮದ ನೆಲೆಯೇ ಸಿಗದಿದೆ
ಕಾಮಿನಿಯಂಥ ಸ್ವಾಮಿ ಶ್ರೀ
ರಾಮ ಸದ್ಗುರು ಪ್ರಭುವಿನ ೩

೬೦೪

ಹೆಚ್ಚಿನ ಗೋಜ್ಯಾಕೆಲೆ ಹುಚ್ಚು ತಿಳಿ
ಮುಚ್ಚಿಕೊಂಡಿದೆ ನಿನ್ನ ಭವಕಿಚ್ಚು ಪ

ಹುಚ್ಚು ಮತಿಯ ನೀಗಿ ಅಚ್ಯುತನಂಘ್ರಿಯ
ಮೆಚ್ಚಿಸಿ ಮೆಲಿ ಅನುಭವದ್ದುಚ್ಚು ಅ.ಪ

ಕೀಳನಾಗದೆ ನೀ ನಿಜವ ತಿಳಿ ನಿನ್ನ ಕಾ
ಲೊಳು ಬಿದ್ದಾದ ಸಂಕೋಲಿ
ನಾಳೆಗೆ ಬರುತಾದ ಕಾಲನ ದಾಳಿಯು
ತಾಳದೆಳಿತಾರ ಜಡಿದ್ವಜ್ರದ ಕೀಲಿ ೧

ನಿಂದೆಯಾಡಬೇಡೆಲೆ ಖೋಡಿ ಮುಂದೆ
ಹಂದಿಯ ಜನುಮಕೆ ಬೀಳಬೇಡ ಬೇಡಿ
ಮಂದ ನೀನಾಗದೆ ಮಂದರ ನಿಲಯನ
ಹೊಂದಿ ಭಜಿಸಿ ಆನಂದಪಡಿ ೨

ದೂರದಿಂದ ಬಂದಿದ್ದಿ ಹೌಹಾರಿ ತ್ವರ ವ್ಯಾ
ಪಾರ ಮಾಡಿಕೊಳ್ಳೊ ಭರ್ಜರಿ
ಸಾರ ಮೋಕ್ಷಾಧಿಪ ಧೀರ ಶ್ರೀರಾಮನ ಪಾದ
ವಾರಿಜ ನಂಬಿ ಹೊಡಿ ಜಯಭೇರಿ ೩

೬೦೫

ಹೋಗುತಾದೋ ಹೊತ್ತು ಹೋಗುತಾದೋ
ಸಾಗಿ ಮುಂಚೆ ಮತ್ತೆ ತಿರುಗಿ ಬಾರದಂತೆ ಪ

ಹಿಂದಿನ ಸುಕೃತದಿಂದ ಒದಗಿದಂಥ
ಸುಂದರಮಾದ್ಹೊತ್ತು ಎಂದೆಂದು ಸಿಗದಂತೆ ೧

ಅರ್ತುಕೊಂಡವರಿಗೆ ಸಾರ್ಥಕಗೊಳಿಸುತ್ತ
ಮರ್ತಕರಿಗೆ ಮತ್ತೆ ಗುರ್ತು ತೋರದಂತೆ ೨

ಎಷ್ಟೆಷ್ಟೋ ಯೋನಿಯೊಳ್ಹುಟ್ಟುಟ್ಟಿ ಬಲಗೋ
ಳಿಟ್ಟು ಪಡೆದ ಹೊತ್ತು ನಷ್ಟವಾಗುತ ವ್ಯರ್ಥ ೩

ಅಘನಾಶಗೊಳಿಸಿ ಬಹು ಮಿಗಿಲಾದ ಪದವೀನ
ಸಿಗದಂಥ ವಸ್ತಿದು ಅಗಲಿ ತಾ ಸುಮ್ಮನೆ ೪

ನೇಮವಲ್ಲೆಲೋ ಮತ್ತೆ ಆ ಮಹ ಸಮಯವು
ಪಾಮರಾಗದೆ ಶ್ರೀರಾಮ ಪ್ರೇಮವ ಪಡಿ ೫

೬೦೬

ಹಿಂಗವ್ವ ಭವ ಹಿಂಗವ್ವ ಸುಳ್ಳೆ
ಮಂಗ್ಯಳಾಗಿ ತಿರುಗಬೇಡವ್ವ ಪ

ಪಿಂಗಟದಿಂದ ಭವಸಂಕಟದಲಿ ಬಿದ್ದು
ಭಂಗದಿಂ ಕಂಗೆಡಬೇಡವ್ವ ಅ.ಪ

ಮುಂಗಿಯ ಮನೆಯೊಳು ನಿಂತೆವ್ವ ತಂಗಿ
ಹ್ಯಾಂಗಿದ್ದದರಂತರಿಯವ್ವ
ಕಂಗಳಿನಿಕ್ಕಿ ಮಹ ಮಂಗಳಾತ್ಮನ ಕಂಡು
ಪಿಂಗದ ಸವಿಸುಖ ಸುರಿಯವ್ವ ೧

ಹಾಳು ಜಗದ ಗಾಳಿ ಬೇಡವ್ವ ನಿಜ
ಬಾಳುವ ಮಾರ್ಗವ ತಿಳಿಯವ್ವ
ನೀಲ ಶ್ಯಾಮನ ಧ್ಯಾನ ತಾಳಿಯ ಕಟ್ಟಿಕೊಂಡು
ಕಾಲನ ದಾಳಿಯ ಗೆಲಿಯವ್ವ ೨

ಮೈಲಿ ಮುಟ್ಟು ಚಟ್ಟಳಿಯವ್ವ ನೀ
ಮೇಲುಮಂಟಪ ಹತ್ತಿ ನೋಡವ್ವ
ಬೈಲಿಗೆ ಬೈಲು ನಿರ್ಬೈಲು ಶ್ರೀರಾಮನ
ಲೀಲೆಯೊಳಗೆ ನಿಂತು ನಲಿಯವ್ವ ೩

೬೦೭

ಹೆಂಡತಿ ನೋಡಣ್ಣ ಈಕಿನ
ನ್ಹೆಂಡತಿ ನೋಡಣ್ಣ ಪ

ಮಂಡೆಮುಸುಕು ತೆಗೆದ್ಹಿಂಡುಜನರ ಮುಂದೆ
ಬಂಡುಮಾಡಿ ಎನ್ನ ಬೈಲಿಗೆ ತರುವಳು ಅ.ಪ

ಕಂಡದ್ದು ಬೇಡುವಳು ತರದಿರೆ
ಗಂಡನಲ್ಲೆಂಬುವಳು

ತಿಂಡಿಗಾಗಿ ಎನ್ನ ಕಂಡವರ ಕಾಲ್ಹಿಡಿಸಿ
ದಂಡಿಸುವಳು ಬಲು ಮಿಂಡೆ ಭಂಡ ೧

ಮಾತುಮಾತಿಗಿವಳು ಎನ್ನನು
ಕೋತ್ಯಂತೆ ಕುಣಿಸುವಳು
ಸೋತೆನೆಂದ್ಹೇಳುತ ಪಾತಕದ್ಹಾಕೆನ್ನ
ನೀತಿಗೆಡಿಸುವಳು ಭೀತಿಲ್ಲದ ೨

ಒಯ್ಯಾರ ಮಾಡುವಳು ಬೈದರೆ
ಬಾಯಿ ತೆರೆದಳುವಳು
ಬಾಯಿ ಮುಚ್ಚೆಂದರೆ ಕೈಬಿಟ್ಟೋಡ್ವಳು
ದಾಯಾದಿಗಳು ಮುಂದೆ ಹೊಯ್ಕಾಲಿ ೩

ಎಡರು ತೊಡರು ಬಿಡಳು ಒಡಲಿನ
ಕೆಡಕುಗುಣವ ಕಡಿಯಳು
ಅಡಿಗಡಿಗೆನ್ನನು ದುಡುಕು ನುಡಿದು ಮನ
ಮಿಡುಕಿಸುವಳು ಬಾಯ್ಬಡಕಿ ಬಿಡಿಕಿ ೪

ಒದಗಿಸಿ ನಾಂ ತರಲು ಅದರೊಳು
ಕದಿದರ್ಧ ತಿನ್ನುವಳು
ಪದುಮನಾಭ ನಮ್ಮ ಸದಯ ಶ್ರೀರಾಮನ
ಪಾದ ಕೃಪೆಯ ಪಡೆಯದಧಮ ೫

೬೦೮

ಹೊಂದಿ ಭಜಿಸಿರೆಲೋ ಹರಿನಾಮ ದಯ
ಸಿಂಧು ಭಜಕಬಂಧು ಹರಿನಾಮ ಪ

ಬಂಧನಿವಾರಣ ಹರಿನಾಮ ಬಹ
ಕುಂದು ನಿಂದೆ ದೂರ ಹರಿನಾಮ ಅ.ಪ

ವಿಷಯಲಂಪಟಹರ ಹರಿನಾಮ ಮಹ
ವ್ಯಸನ ಕಳೆದು ಕಾಯ್ವ ಹರಿನಾಮ

ಅಸಮಸೌಖ್ಯಜ್ಞಾನ ಹರಿನಾಮ ಮಾಯಾ
ಮುಸುಕು ನಿವಾರಣ ಹರಿನಾಮ ೧

ಬೇಡಿದ್ದು ಕೊಡುವುದು ಹರಿನಾಮ ಮಹ
ಕೇಡು ತಪ್ಪಿಸುವುದು ಹರಿನಾಮ
ಗಾಢಪದವನೀಯ್ವ ಹರಿನಾಮ ತಾ
ಕೂಡಿ ಅಗಲದಿಪ್ಪ ಹರಿನಾಮ ೨

ಗಾನಲೋಲಾನಂದ ಹರಿನಾಮ ಮಹ
ದೀನ ದಯಾಪರ ಹರಿನಾಮ
ಧ್ಯಾನದಾಯಕ ನಿಜ ಹರಿನಾಮ ಮಮ
ಪ್ರಾಣದೊಡೆಯ ಶ್ರೀರಾಮನಾಮ ೩

೬೦೯

ಕ್ಷಣತೋರಿ ಇಲ್ಲದಂತಾಗುವ ವಿಷಮ ಮಹ
ಕನಸಿನ ಮೋಹದಿಂ ಕೆಡಬೇಡ ಮನುಜ ಪ

ಹಲವು ಜನಮದಿ ಬಿದ್ದು ತಿಳಿಯದೆ ಇಹ್ಯಪರಕೆ
ತೊಳಲುತ ಬಳಲುತ ತಿರುತಿರುಗಿ
ಗಳಿಸಿದ ನರಜನುಮ ವಿವರಿಸಿ ನೋಡದೆ
ಕಳಕೊಂಡು ಬಳಿಕಿನ್ನು ಸುಲಭವಲ್ಲೆಲೆ ಖೋಡಿ ೧

ನೀರಮೇಲಣ ಗುರುಳೆಯಂತೆ ಕಾಂಬುವ ಈ
ನರಕ ಮೂತ್ರದ ತನುಭಾಂಡವಿದು
ಅರಿಯದೆ ಮೋಹಿಸಿ ಪರಿಪರಿ ಕುಣಿಕುಣಿದು
ಪರಮ ರೌರವ ನರಕಕ್ಹೋಗ ಬೇಡೆಲೆ ಖೋಡಿ ೨

ಜವನದೂತರು ಬಂದು ಕವಿದುಕೊಳ್ಳಲು ಆಗ
ಕಾಯುವರಾರಿಲ್ಲ ಕೈಪಿಡಿದು
ದಿವನಿಶಿಯೆನ್ನದೆ ಭವಹರ ಶ್ರೀರಾಮ
ದೇವನ ನೆರೆನಂಬಿ ಭವಮಾಲೆ ಗೆಲಿಯೊ ೩

೬೧೦

ಜ್ಞಾನಶೂನ್ಯಗಾತ್ಮದನುಭವವ್ಯಾಕೆ
ಹೀನ ಸಂಸಾರಿಗೆ ಪರದ ಸುದ್ದ್ಯಾಕೆ ಪ

ಕತ್ತೆಗೆ ಬೆಲೆಯುಳ್ಳ ಉತ್ತಮ ಜೀನ್ಯಾಕೆ
ಕೃತ್ರಾಮಗೆ ಸತತ ಸತ್ಪಥದ ಬೋಧ್ಯಾಕೆ
ತೂತ್ತಿಗ್ಹೋಗುವಗರಸೊತ್ತಿಗಧಿಕಾರವ್ಯಾಕೆ
ಮಿಥ್ಯೆಮತಿಗ್ಯಾತಕ್ಕೆ ಉತ್ತಮರ ನೆರೆಯು ೧

ನಂಬಿಗಿಲ್ಲದವಗ್ಯಾಕೆ ಗುಂಭದ ಮಾತುಗಳು
ಜಂಬಕೊಚ್ಚುವವಗ್ಯಾಕೆ ಗಂಭೀರತನವು
ಅಂಬುಜಾಕ್ಷನ ಚರಿತ ಡಂಭನಿಗ್ಯಾತಕ್ಕೆ
ಗೊಂಬೆಯಾಟಗಾರಗ್ಯಾಕೆ ತಂಬೂರಿ ತಬಲ ೨

ದಾನಧರ್ಮದ ಮಹಿಮೆ ಜೀನನಿಗೆ ಏತಕ್ಕೆ
ಗೋಣು ಮುರಿವವಗ್ಯಾಕೆ ದೈನ್ಯಮಾತುಗಳು
ನಾನಾ ಬಯಕೆಯುಳ್ಳ ಮಾನವಗೆ ಭಕ್ತಜನ
ಪ್ರಾಣ ಶ್ರೀರಾಮ ನಿಮ್ಮ ಧ್ಯಾನವಿನ್ಯಾಕೆ ೩

೬೧೧

ಜ್ಞಾನಿಗಳು ತಪ್ಪುವರೆ ಕೊಟ್ಟ ವಚನ
ಪ್ರಾಣಹೋದರೂ ಭಾಷೆ ಕೊನೆಗಾಣೋತನಕ ಪ

ಖ್ಯಾತಿವಂತ ನಳರಾಜ ಸೋತ ರಾಜ್ಯಾಕೆಂದು
ಮಾತಿಗಾಗಿಯೆ ತಾಂ ಪೋದ ವನವಾಸ
ಮಾತುಳುಹಿಕೊಳ್ಳಲ್ಕೆ ಸತ್ಯವಂತ್ಹರಿಶ್ಚಂದ್ರ
ನೀತಿಯಿಂ ತಾ ಕಾಯ್ದ ಸುಡುಗಾಡವ ೧

ವಾಮನಮೂರುತಿಗೆ ಭೂಮಿ ಮೂರಡಿಯಂ
ಭೂಮಿಪ ಬಲಿಚಕ್ರಿ ಪ್ರೇಮದಿಂದಿತ್ತಿರಲು

ಸ್ವಾಮಿ ತಾಂ ಪರಿಕಿಸಲಿ ಭೂಮಿ ಈರಡಿಗೈಯೆ
ಸ್ವಾಮಿ ಮಿಕ್ಕಾದಡಿಗೆ ಪ್ರೇಮದಿತ್ತ ಶಿರವ ೨

ನಾರಿಗೆ ಪಿತನ್ವೊಚನ ಮೀರಲಾಗದುಯೆನುತ
ನಾರಿಅನುಜರಿಂದ್ವಿಪಿನ ಸೇರಿದೆಯೊ ಶ್ರೀರಾಮ
ಆರುಳಿಯ ಬಲ್ಲರೈ ಮೀರಿ ನಿಮ್ಮಾಜ್ಞೆಯನು
ಭೂರಿ ಕರುಣದಿ ನೀನೆ ಪಾರುಮಾಡೆನ್ನ ೩

VII. ತಾತ್ವಿಕ ಹಿನ್ನೆಲೆ

೬೧೨

ಅಗಣಿತಾಗಣಿತ ಮಹಿಮ ಜಗದೊಳು ನಿಮ್ಮ
ಬಗೆ ತಿಳಿಯುವರಾರಮಮ ಪ

ಮಗನ ಮಗನಿಗೆ ಒಲಿದು ಮಗಳಧಾರೆಯನೆರದಿ
ಮಗಳಮಗನ್ವೈರಿಯ ನಿಗಯಿಟ್ಟು ಸಲಹಿದಿ ಅ.ಪ

ಓಂಕಾರದಾಚೆಗಿರ್ದ ಅಮಲರೂಪ
ಓಂಕಾರದೊಳು ನೆಲೆಸಿದಿ
ಅಂಕುರಿಸಕ್ಷರ ತ್ರಯಲಂಕಾರದಿಂ ಸೃಷ್ಟಿ
ಸಂಕಲ್ಪಗೈದು ನಿಷ್ಕಲಂಕನೆಂದೆನಿಸಿದಿ ೧

ಸೃಷ್ಟಿ ಉತ್ಪತ್ತಿಗೈದಿ ಉದರದಿ
ಇಟ್ಟು ರಕ್ಷಕನೆಂದೆನಿಸಿದಿ
ಶಿಕ್ಷಕೆನಿಸಿ ಸರ್ವಸಾಕ್ಷಿನೀನೆಯಾಗಿ
ಮೋಕ್ಷ ನೀಡುವ ಮದಧ್ಯಕ್ಷನೆಂದೆನಿಸಿದಿ ೨

ಮೇದಿನಿಗೆ ಪತಿಯೆನಿಸಿದಿ ದಾಸರ ಪ್ರಿಯ
ಮೇದಿನಿಸುತೆ ಮದುವ್ಯಾದಿ
ವೇದಸಮ್ಮತಗೈದಿ ಸಾಧುಜನಕಹುದಾದಿ
ಆದಿಶ್ರೀರಾಮ ಮಮ ಬೌದ್ಧದೇವನಾದಿ ೩

೬೧೩

ಅಮೃತ ನೀಡೆನಗೆ ಶ್ರೀಹರಿ ಅಮೃತ ನೀಡೆನಗೆ ಪ

ಅಮೃತ ನೀಡಪಮೃತ್ಯುಕಳೆದು ಧ್ಯಾ
ನಾಮೃತವೆಂಬ ಸಾಮ್ರಾಜ್ಯ ಸಂಪದವಿತ್ತು ಅ.ಪ

ಜರಾ ಮರಣವ ಗೆಲಿಪ ಅಮೃತ
ದುರಿತ ಪರ್ವತಲೋಪ
ಭ[illegible]ದಿಗೈದು ಮಾಯಮರವೆ ಹರಿಗೆ
[illegible]ತ ಪರಮಪಾವನ ಮಾಳ್ಪ ಹರಿಸ್ಮರಣಾನಂದ ೧

ಭವಬಾಧೆಯ ಗೆಲಿಪ ಅಮೃತ
ಜವನ ಭಯವ ಲೋಪ
ಜವದಿಗೈದು ತ್ರಯ ಭುವನದೊಳ್ಮಿಗಿಲಾಗಿ
ಧ್ರುವನು ನಿರುತಮಾಗಿ ಸವಿದ ಮಹದಾನಂದ ೨

ತಾಮಸಗಳನಳಿವ ಅಮೃತ
ಪಾಮರತನ ತುಳಿವ
ಆ ಮಹ ವೈಕುಂಠದ ವಿಮಲ ಪದವಿಯನು
ಕ್ಷೇಮದೀಯುವ ಶ್ರೀರಾಮ ಪ್ರೇಮಾನಂದ ೩

೬೧೪

ಅರಿವರಾರೆಲೋ ನಿನ್ನ ಅಗಮ್ಯ ಚರಿತ
ಚರಣದಾಸರ ಪರಮ ಆನಂದಭರಿತ ಪ

ದೇವರುಂಟೆಂಬ ಕೆಲವಾಧಾರಪುಟ್ಟಿಸಿದಿ
ದೇವರಿಲ್ಲೆಂಬ ಹಲವು ಆಧಾರ ತೋರಿಸಿದಿ
ಜೀವಬ್ರಹ್ಮೈಕ್ಯೆಂಬುಪಾಯಗಳ ಸ್ಥಾಪಿಸಿದಿ
ಆವರೀತಿಗು ಕಾವದೇವ ನಾನೆಂದಿ ೧

ಜೀವವೆ ಮಾಯೆಯೆಂದು ಕಾಯವೆ ಕರ್ಮವೆಂದು
ಭಾವಿಗಳ ಕೈಯಿಂದ ಬರೆಸಿದೆಯೋ ನಿಂದು
ಜೀವಜೀವರಲಿ ಜಡ ಜೀವ ಬೇರೆನಿಸಿದಿ
ಜೀವಜೀವರ ಜೀವ ಚೈತನ್ಯರೂಪ ೨

ವೇದ ಸುಳ್ಳೆಂಬ್ಬಲವು ವಾದಿಗಳ ನಿರ್ಮಿಸಿದಿ
ವೇದ ಅಹುದೆಂಬ ನಿಜವಾದಿಗಳ ಪುಟ್ಟಿಸಿದಿ
ನಾದಬ್ರಹ್ಮವುಯೆಂಬ ಹಾದಿ ರಚಿಸಿದಿ
ಸರ್ವಸಾಧನಕೆ ಒಲಿದು ಪ್ರಸನ್ನ ನೀನಾದಿ ೩

ಬಗೆಬಗೆಯ ವಚನದಿಂ ಬಗೆಬಗೆಯ ನಿಗಮದಿಂ
ಬಗೆಬಗೆಯ ಸ್ಮೃತಿಯಿಂದ ಜಗದಯ್ಯ ನೀನೆ
ಬಗೆಬಗೆಯ ರೂಪದಿಂ ನಿಗವಿಟ್ಟು ಸರ್ವರನು
ಬಗೆಗೊಂಡು ಬೆಳಗುವೆಯೊ ಜಗಭರಿತನಾಗಿ ೪

ಅವಸಾಧನವೊಲ್ಲೆ ಜಾವಜಾವಕೆ ನಿಮ್ಮ
ದಿವ್ಯಸ್ಮರಣೆಯ ಎನ್ನ ಭಾವದೊಳು ನಿಲಿಸಿ
ದೇವದೇವರ ದೇವ ದೇವ ಶ್ರೀರಾಮ ತವ
ಸೇವಕನೆನಿಸೆನ್ನ ಕಾಯೊ ಕೈಪಿಡಿದು ೫

೬೧೫

ಅರಿವೆ ಮಹದ್ವರವೆ ನೀನೆ
ಪರಕೆಪರಮ ಪರಮಸೂತ್ರನು ಪ

ತ್ರಿಕಾಲ ಬಲ್ಲಿ ನೀ ತ್ರಿಲೋಕವನು ಬಲ್ಲಿ
ತ್ರಿದ್ವಿಶಾಸ್ತ್ರವ ಬಲ್ಲಿ ತ್ರಿಯೊಂದ್ವೇದವ ಬಲ್ಲಿ ೧

ತ್ರಿವರ್ಗರಳಿಬಲ್ಲಿ ತ್ರಿದ್ವಿಗುಣ ಕಳಿಬಲ್ಲಿ
ತ್ರಿನಾಲ್ಕು ಗೆಲ್ಲಬಲ್ಲಿ ತ್ರಿಸಪ್ತರೊದಿಬಲ್ಲಿ ೨

ತ್ರಿಸದ್ವಾರಬಲ್ಲಿ ತ್ರಿಣಯರಸ್ಥಲಬಲ್ಲಿ
ತ್ರಿತ್ರೀಯಬಂಧನ ಬಲ್ಲಿ ತ್ರಿವಿಧದಿ ಹರಿಬಲ್ಲಿ ೪

ತ್ರಿದ್ವಯ ಮೂಲವ ಬಲ್ಲಿ ತ್ರಿದಶಸ ಭೇದವ ಬಲ್ಲಿ
ತ್ರಿಕೂಟಕಳೆ ತ್ರಿಪಂಚದುಳಿ ಬಲ್ಲಿ ೫

ವರದ ಶ್ರೀರಾಮ ಚರಿತ ಪೊಗಳಬಲ್ಲಿ
ಕರುಣದಿಂದೆನ್ನೊಳು ಬೆರದೇಕನಾಗೆಲೊ ೬

೬೧೬

ಅಹುದಹುದೊ ಭಕುತಭಮಾನಿ ನೀನಹುದೋ ಪ

ಮಹ ಭಕ್ತಿಯಿಂ ನಿಮ್ಮ ಭಜಿಪ ಜನರಿಗೊದಗಿ
ಬಹ ದುಃಖ ಪರಿಹರಿಸಿ ಸಹಾಯದಿಂ ಕಾಯುವಿ ಅ.ಪ

ಮೂರು ಜಗಕೆ ಆಧಾರ ಮಾಧವನೆಂದು
ಸಾರಿಭಜಿಪರ ಕಷ್ಟ ದೂರಮಾಡುವಿ ನೀ ೧

ಹರಿಸರ್ವೋತ್ತಮನೆಂದು ಸ್ಮರಿಪರ ಜರಾಮರಣ
ತರಿದು ಪರಿಭವಶರಧಿ ಕರುಣದಿಂ ಗೆಲಿಸುವ ೨

ಭಕ್ತರ ಸೌಭಾಗ್ಯ ಸತ್ಯ ಶ್ರೀರಾಮನೆಂದು
ನಿತ್ಯದಿ ನೆನೆವರ್ಗೆ ಮುಕ್ತಿ ನೀಡುವಿ ನೀ ೩

೬೧೭

ಆರು ಸಂಗಡ ಬಾಹೊರೆಲೆ ಮನುಜ ನಿನಗೆ
ಹಾರೈಸಿ ಬಳಲುವೆ ಬರಿದೆ ಭವದೊಳಗೆ ಪ

ಗುರುಹಿರಿಯರಗ್ನಿಯ ಪರಿಮುಖದಿ ನಿನ್ನಯ
ಕರಪಿಡಿದು ಮಾಂಗಲ್ಯ ಧರಿಸಿಕೊಂಡರ್ಧ
ಶರೀರವೆನಿಸುವ ಸತಿಯು ಮರಣ ಕಾಲದಿ ನಯನ
ತಿರುಗುವುದ ಕಂಡಂಜಿ ತಿರಿಗಿನಿಂತಳುತಿಪ್ಪಳು ೧

ತನುಜಮನುಜರಿವರೆಲ್ಲ ನಿನಗತಿಹಿತ ಬಂಧು
ಮಣಿದು ಸೇವಿಪರು ನಿನ್ನನುದಿನವು ಬಿಡದೆ
ತನುಬಿಟ್ಟ ಕ್ಷಣದಿ ನನನಿನಗೆನುತ ಮನೆಕೀಲಿ
ಘನ ಜಗಳ ಕಾಣು ಬಿದ್ದ್ಬಣದ ಪರಿವಿಲ್ಲದೆ ೨

ಕುಲವಿದ್ಯವ್ಯವಹಾರ ಕಳವುಕೊಲೆ ನೃಪಸೇವೆ
ತಲೆ ಬಾಗಿ ಜನರಲ್ಲಿ ಬಲುದೈನ್ಯ ಬಟ್ಟು
ಗಳಿಸಿ ಹೂಳಿದ ದ್ರವ್ಯ ಎಳೆದೊಯ್ಯಲ್ಯಮ ನಿನ್ನ
ತಲೆಯೆತ್ತಿ ನೋಡದಲೆ ನೆಲದಿ ನಿಲ್ಲುವುದು ೩

ಭೂಮಿ ನಿನ್ನದು ಎಂದು ನೇಮವನು ಬರಕೊಂಡು
ಕೋಮಲ ಮನೆಕಟ್ಟಿ ತಾಮಸದಿ ನಲಿವಿ
ಭೂಮಿಯ ರಿಣತೀರಿ ನೀ ಮಡಿದಾಕ್ಷಣ ಬಹಿ
ರ್ಭೂಮಿಯೋಳ್ಹುತಿವರೆಲೆ ಪಾಮರ ಮನುಜ ೪

ಮಂದಮನುಜನೆ ಧನವು ಮಂದಿರದಿ ನಿಲ್ಲುವುದು
ಬಂಧುಬಾಂಧವರೆಲ್ಲ ಹಿಂದೆ ಉಳಿಯುವರು
ಮಂದನಾಗದೆ ತಂದೆ ಶ್ರೀರಾಮ ಪಾದಾರವಿಂದಮಂ
ನಂಬಿ ಭವಬಂಧವನು ಗೆಲಿಯೊ ೫

೬೧೮

ಎನ್ನಳವೇನಯ್ಯ ಬಣ್ಣಿಸಲು ನಿನ್ನ
ಉನ್ನತ ಮಹಿಮ ಶ್ರೀ ಪನ್ನಂಗಶಯನ ಪ

ವೇದಾದಿ ಗುಪಿತ ನೀ
ವೇದಾಗಮಾತೀತ
ಆದಿಮಧ್ಯಂತಿಲ್ಲದಾ
ನಾದಿ ವಸ್ತುವೆ ಸ್ವಾಮಿ ೧

ಗಣನೆಯಿಲ್ಲದ ಕಾಲು
ಎಣಿಕೆಯಿಲ್ಲದ ಹಸ್ತ

ಗುಣಿತಕ್ಕೆ ಮೀರಿದ ಅ
ಗಣಿತಮುಖಬ್ರಹ್ಮ ೨

ಹುಟ್ಟು ಸಾವಿಲ್ಲದ
ಶಿಷ್ಟ ಶ್ರೀರಾಮ ಭಕ್ತ
ರಿಷ್ಟದಾಯಕನೆಂದು
ನಿಷ್ಠೆಯಿಂ ಪಾಡ್ವೆ ೩

೬೧೯

ಎಲ್ಲಿ ನೋಡಿದರು ಹಾನಂತೆ ಹರಿ
ಎಲ್ಲ ಜಗವ ತುಂಬಿಹನಂತೆ ಪ

ಮಣ್ಣುಮುಳ್ಳು ಎಲ್ಲ ಬಿಡದೆ
ಸೋಸಿಲಿನೋಡಲಲ್ಲಾನಂತೆ ಅ.ಪ

ಸಾಗರ ನಿಲಯ ತಾನಂತೆ
ಕೂಗಲು ಕಂಬಂದಿ ಬಂದನಂತೆ
ನಾಗಶಾಯಿದ್ದ್ವೊಯ್ಯುಂತಂತೆ
ಬೇಗನೆ ಸರಸಿಯಲ್ಲಿದ್ದನಂತೆ
ನೀಗಿ ಚಂಚಲಮನ ಬಾಗಿ ವಿಚಾರಿಸಲು
ಯೋಗಿ ವಂದ್ಯ ಎಲ್ಲಿಲ್ಲಂತೇ ೧

ದ್ವಾರಕಾಪುರದಲ್ಲಿ ಮನೆಯಂತ
ಕ್ರೂರನ ಸಭೆಗೊದಗಿದನಂತೆ
ಸಾರನಿಗಮಕಗೋಚರನಂತೆ
ಪೋರಗೆ ದೊರೆತ್ವವಿತ್ತನಂತೆ
ಸಾರಮನದ ವಿಕಾರವಳಿದು ತಿಳಿ ಅ
ಪಾರಮಹಿಮ ಯಾರೆಲ್ಲಂತೇ ೨

ಘೋರರಕ್ಕಸ ಸಂಹರನಂತೆ
ಸೇರಿಭಕ್ತರ ಸಲಹುವನಂತೆ

ಮೂರು ಲೋಕಗಳ ದೊರೆಯಂತೆ
ಸಾರಥಿತನ ಮಾಡಿದನಂತೆ
ಮೂರುಲೋಕದ ಧಣಿ ಓರ್ವ
ಶ್ರೀರಾಮನೆ ಆರಾಧಿಪರಲ್ಲಿ ಹಾನಂತೆ ೩

೬೨೦

ಏನುಧನ್ಯನೊ ಇವನು ಎಂಥ ಪುಣ್ಯನೊ
ದೀನದಯಾಳು ಜಾನಕೀಶನ ಧ್ಯಾನ ಮಾಳ್ಪ ಮಾನವನು ಪ

ಜ್ಞಾನದಿಂದ ತಿಳಿದು ಜಗ ಶೂನ್ಯವೆಂದು ಊಹಿಸಿ ಮನದಿ
ದಾನವಾಂತಕನಾದ ಹರಿಯ ಧ್ಯಾನವೊಂದೇ ಕಾರಣೆಂದು
ಜ್ಞಾನಬೆಳಗಿನೊಳಗೆ ನೋಡಿ ಆನಂದಿಸುತಲ್ಲಿಗ್ಗುವವ ೧

ಆಶಪಾಶಗಳನು ನೀಗಿ ಈ ಮೋಸಮಯ ಸಂಸಾರದೊಳು
ವಾಸನಾರಹಿತನಾಗಿ ಸದಾ ದಾಸಸಂಗಸುಖಪಡೆದು
ಈಶ ಭಜನೆಯೊಳ್ಮನವಿಟ್ಟು ಈಸಿಭವಾಂಬುಧಿ ಪಾರಾಗುವವ ೨

ನಂಬಿಗಿಲ್ಲದ ದೇಹವಿದನು ನಂಬಿನೆಚ್ಚಿ ಸಂಭ್ರಮಿಸದೆ
ಹಂಬಲಳಿದು ಅಲ್ಪಸುಖದ ಕಂಬುಕಂಧರ ಶಂಭುವಿನುತ
ಅಂಬುಜಾಕ್ಷ ಶ್ರೀರಾಮನ ನಂಬಿ ಗಂಭೀರಸುಖದೊಳಿರುವವ ೩

೬೨೧

ಕಾಲವೆಂತು ಕಳೆಯಲೆನ್ನಯ್ಯ ಗಂಡನಿಲ್ಲದೆ
ಕಾಲವೆಂತು ಕಳೆಯಲೆನ್ನಯ್ಯ ಪ

ಕಾಲಕಳೆಯಲೆಂತು ನಾನು
ತಾಳಿಮೂಗುತಿ ಕಾಣದೊನಿತೆಯ
ಹಾಳುಮುಖವ ನೋಡೆವೆಂದು
ಶೀಲಮುತ್ತೈದೇರ್ಹಳಿಯುತಿಹ್ಯರು ಅ.ಪ

ಏಳುಸುತ್ತಿನಕೋಟಿ ಪಟ್ಟಣದಿ ಖೂಳರುಪಟಳ
ಹೇಳಲಳವಲ್ಲ ಸೇರಿ ವಿಧ ವಿಧದಿ
ದಾಳಿನಿಕ್ಕಿ ಹಾಳು ಮಾಡ್ವರು ಮನಕೆ ಬಂದತೆರದಿ
ಗೋಳು ಕೇಳುವರಿಲ್ಲವ್ಹೋರ್ವರು ತಾಳೆನೀಬಾಧೆ
ಶೀಲದೆನ್ನ ಬಹು ಜೋಕಿಯಿಂ ಮೇಲ್ಮಾಲಿನೋಳಿಟ್ಟು
ಆಳುವಂಥ ಮೂಲಪುರಷನಿಲ್ಲದಿನ್ನು ೧

ಆರು ಕೇಳುವರಿಲ್ಲ ಇವಳಿಗೆಯೆನುತ ಕೀಳ
ಮೂರು ಮಂದಿ ಊರ ಬೀದಿಯೊಳಗೆ
ದಾರಿ ತರುಬಿ ಸಾರಿ ತರಿವರು ಮಾರಕೇಳಿಗೆ ಸೈರಿಸಲಿ ಹ್ಯಾಗೆ
ಚೋರನೋರ್ವನು ಮೀರಿ ಬಾಧಿಪ
ಆರು ಮಂದಿ ಬಿಡದೆ ಎನ್ನನು ಘೋರಿಸುವರು ನಾನ ವಿಧದಿ
ಪಾರುಗಾಣೆನು ವ್ರತದಿ ಇನ್ನು ೨

ಪತಿಯು ಇಲ್ಲದ ಜನ್ಮವ್ಯಾತಕ್ಕೆ ಕ್ಷಿತಿಯಮೇಲೆ
ಸತಿಗೆ ಪರಮ ಗತಿಯ ಕೊಡಲಿಕ್ಕೆ
ಪತಿಯೆ ಬಾಧ್ಯ ಇತರರು ಕಾರಣಲ್ಲ ಕಾಯಕ್ಕೆ ಜತನ ಗೈಲಿಕ್ಕೆ
ಪ್ರಥಮ ಮುತ್ತಿನ ಮೂಗುತಿಯನು ಹಿತದಿ ಕರುಣಿಸಿ
ಪತಿಯಾಗೆನಗೆ ಗತಿಯ ನೀಡಿ ಹಿತದಿಂ ಸಲಹು
ಪತಿತ ಪಾವನೆನ್ನ ಪ್ರಾಣ ಶ್ರೀರಾಮ ೩

೬೨೨

ಕೆಡದಿರು ಕಡುಮೋಹದಡವಿಬಿದ್ದು ಮನ
ಕೆಡುವ ಶರೀರ ಜಡದೃಶ್ಯವಿದು ಪ

ಜಲದ ಮೇಲಿನ ಗುರುಳೆಯಂತೆ ಈ ದೇಹ್ಯ
ಗಳಿಗೆ ಚಲಿಸಿ ಒಡೆದು ನೆಲಕೆ ಬೀಳುವುದು
ಬಳಿದ ಕಸದತೆರಗಳಿಗೆ ನಿಲ್ಲದೆ ಇದನು
ಎಳೆದುಹಾಕುವರಂತ್ಯ ಕಾಲದಲಿ ೧

ಕ್ಷಿತಿಯೊಳಿರುವ ತನಕ ಸತಿಸುತರೆಲ್ಲರು
ಸತತ ಹಿತದಿ ಬಲುಪೂಜೆ ಮಾಳ್ಪರು
ಸತ್ತ ಬಳಿಕ ತಮಗ್ಯತ್ತಿತ್ತು ಮುಟ್ಟೆಂದು
ಹಿತದವರೆಲ್ಲ ಮುಟ್ಟುತೊಳಕೊಂಬರು ೨

ಗಳಿಸಿದ ಧನಮಾನ್ಯ ಬಲುಸಂಪದವೆಲ್ಲ
ಉಳಿವುದು ಎಲ್ಲ ಇಲ್ಲೇ ಜತೆಯಲಿ ಬರದೇನು
ತಿಳಿದು ಶ್ರೀರಾಮನ ಚರಣಕಮಲಧ್ಯಾನ
ಗಳಿಸಿ ಘನಮುಕ್ತಿ ಪಡಕೊಳ್ಳೆಲೊ ೩

೬೨೩

ಗೆಲಿಯಬಲ್ಲವರಾರು ಮೂಜಗದಿ ಪಣೆಯ ಬರಹ
ಗೆಲಿಯಬಲ್ಲವರಾರು ಮೂಜಗದಿ ಪ

ಗೆಲಿಯಬಲ್ಲವರಾರು ಮೂಜಗದೊಳಗೆ
ಬಲ್ಲಿದರೆಂಬರೆಲ್ಲರು
ಜಲಜಪೀಠನ ಲಿಪಿಗೆ ಸಿಲ್ಕಿ
ತೊಳಲಿ ಬಲಳಿದರ್ಹಲವು ಪರಿಯಲಿ ಅ.ಪ

ಒಂದೇ ಧರ್ಮದಿಗೂಡಿ ತಾ ನಡೆದ ವಿಕ್ರಮನೆಂಬುವ
ಒಂದೆ ಕೊಡೆಲಿಡೀಭುವನವಾಳಿದ ಸದ್ಧರ್ಮ ತನದಿಂ
ದೊಂದೆ ಆ ಸುಮರೂಪ ಪ್ರಜರ ಪಾಲಿಸಿದ ಉದ್ದಂಡನೆನಿಸಿದ
ಒಂದು ಪಾಪಾಚರಣೆಗೈಯದೆ
ಒಂದು ಬಿಡಿದಖಿಲ್ವಿದ್ಯವರಿದ
ಒಂದು ಅರಿಯದೆ ತನ್ನ ಕೈಕಾಲು
ಒಂದೇ ಮಾತಿಗೆ ಕಳೆದುಕೊಂಡ ೧

ಎರಡುಹೊತ್ತು ಸತ್ಯಮಂ ಬಿಡದ ಸುಚಿಂತದಿರುವ
ಎರಡನೇ ಗುಣ ಸ್ವಪ್ನದರಿಯದ ನಳಚಕ್ರವರ್ತಿ
ಎರಡು ತಿಳಿಯದೆ ಜೂಜನಾಡಿದ ಮಹವಿಪಿನಕ್ಕೈದಿದ
ಎರಡು ಮಕ್ಕಳ ವನದಿ ಅಗಲಿದ

ಎರಡನರಿಯದೆ ಮಲಗಿದರಸಿಯ
ಎರಡನೆಬಗೆದಡವಿಯಲಿ ಬಿಟ್ಟು
ಎರಡನೇರಾಯನಶ್ವ ತಿರುವಿದ ೨

ಮೂರು ಜಗ ಅರೆಲವದಿ ತಿರುಗುವ ದಿನದಿನವುಬಿಡದೆ
ಮೂರುಮೂರ್ತಿದರ್ಶನವ ಪಡೆಯುವ ಆ ಪರಮಪಾವನ
ಮೂರು ಕಾಲದ ಜ್ಞಾನ ಬಲ್ಲವ ನಾರದನೆಂಬುವ
ಮೂರುಮಂದಿ ಶಕ್ತಿಯರಿಗೆ
ಮೂರು ಬಟ್ಟೆಯ ಸುದ್ದಿ ಪೇಳಿ
ಮೂರು ಮೂರ್ತಿಗಳುಪಾಯನರಿಯದೆ
ಮೂರಿಪ್ಪತ್ತು ಮಕ್ಕಳ್ಹಡದ ೩

ನಾಲ್ಕುಯುಗ ಪ್ರಮಾಣಗಳ ತಿಳಿದ ಬ್ರಹ್ಮನುಬಿಡದೆ
ನಾಲ್ಕುವೇದಗಳ್ಹಸ್ತದೋಳ್ಹಿಡಿದು ವಿಧವಿಧದಿ ಎಂಭತ್ತು
ನಾಲ್ಕುಲಕ್ಷಜೀವರಾಶಿಗಳ ಬರಿದೆ ಉತ್ಪತ್ತಿಗೈದು
ನಾಲ್ಕುಭುಜನ ಸುರನೆಂದೆನಿಸಿ
ನಾಲ್ಕು ವಿಧ ಮತಿವಂತನಾದವ
ನಾಲ್ಕು ಒಂದು ಮುಖ ಮೊದಲಿಗಿರ್ದನು
ನಾಲ್ಕೆ ಮುಖದವನೆನಿಸಿಕೊಂಡು ೪

ಐದುಬಾಣನಪಿತನಸಖನಾದ ಉರಿನೇತ್ರ ಬಿಟ್ಟು
ಐದುಬಾಣನ ಭಸ್ಮ ಮಾಡಿದ ಅಪಾರ ಶಂಭೋ
ಐದು ಒಂದು ಮುಖದವನ ತಾ ಪಡೆದ ಹರಿಕರುಣದಿಂದ
ಐದು ಒಂದು ಮುಖದವನಿಂ ತಾರಕ
ನೈದುವಂದುದಲ್ಲೆ ಸೀಳಿಸಿ
ದೈದುತತ್ವಕಾಲಯೆನಿಸಿದ
ಐದುಮುಖಸ್ಮಶಾನ ಸೇರಿದ ೫

ಆರು ಎರಡೈಶ್ವರ್ಯಗಳಲೊಳ ವೈಕುಂಠನಾಯಕ
ಆರು ಎಂಟುಲೋಕಗಳ ಪರಿಪಾಲ ಬಿಡದೇಳು ಇಪ್ಪತ್ತು

ಆರುಕೋಟಿ ಅಮರಾದಿಗಳ ಮೂಲ ಮಹಮಂತ್ರ ಜಾಲ
ಆರುನಾಲ್ಕು ಭುಜನ ಮೊರೆ ಕೇ
ಳಾರುನಾಲ್ಕು ಶಿರನ ವಧಿಸಿದ
ಆರುನಾಲ್ಕರಗಧಿಕನೆನಿಸಿ
ಆರುನಾಲ್ಕವತಾರ ತಾಳಿದ ೬

ಆರಿಗಾದರು ಬಿಡದೀ ಬರವಣಿಗೆ ಬಿದ್ದಂತೆ ಫಲಿಸಿತು
ತೀರಲಿಲ್ಲದಂತಂಥ ಹಿರಿಯರಿಗೆ ಸಾಧ್ಯದಪ್ಪಿ ಮಹ
ಘೋರ ಬಡಿಸಿತು ಸರ್ವ ಶಕ್ತರಿಗೆ ಬ್ರಹ್ಮನಸುಡಗಿ
ವಾರಿಜನು ಬರೆದ ಬರೆಹ
ಮೀರಿ ನಡೆದೇನೆಂದರಿನ್ನು
ಸಾರಮೋಕ್ಷಕ್ಕಧಿಪ ನಮ್ಮ
ಧೀರಪ್ರಭು ಶ್ರೀರಾಮ ಬಲ್ಲ ೭

೬೨೪

ತಿಳಿಯದು ಆರಿಗೆ ನಳಿನಾಕ್ಷನ ಘನ
ವಿಲಸಿತಮಹಿಮೆ ಸುಲಭವಲ್ಲಮಮ ಪ

ಒಳಗು ತಾನೆ ಹೊರಗು ತಾನೆ
ಒಳಗ್ಹೊರಗೊಂದಾಗಿ ಬೆಳಗುವ ತಾನೆ
ಬಳಗ ತಾನೆ ಬಂಧು ತಾನೆ
ಹಲವು ಜೀವರ ಸಲೆರೂಪನು ತಾನೆ ೧

ಹಸಿವು ತಾನೆ ತೃಷೆಯು ತಾನೆ
ಹಸಿತೃಷೆ ತೀರಿಪ ಸೂತ್ರನು ತಾನೆ
ಎಸೆವ ತತ್ವಮಸಿ ಮಹವಾಕ್ಯವ
ಕುಶಲದಿ ನುಡಿಸುವ ಈಶನು ತಾನೆ ೨

ರಕ್ಷಕ ತಾನೆ ಶಿಕ್ಷಕ ತಾನೆ
ಸಾಕ್ಷಿಯಾಗಿ ನ್ಯಾಯ ವೀಕ್ಷಿಪ ತಾನೆ

ಸೂಕ್ಷ್ಮಜ್ಞಾನವಿತ್ತಕ್ಷಯದ್ದೊರೆಯುವ
ಮೋಕ್ಷಕರ್ತ ಶ್ರೀರಾಮ ತಾನೆ ೩

೬೨೫

ದಾಸನಾದ ಮೇಲೆ ಈಶ ದೂರುಂಟೆ
ಆಸೆನೀಗಲು ಸುಖದ ರಾಶಿ ಬೇರುಂಟೆ ಪ

ದೋಷಕ್ಕಂಜಿದಮೇಲೆ ಸನ್ಮಾರ್ಗ ಬೇರುಂಟೆ
ಕ್ಲೇಶ ನೀಗಿದಮೇಲೆ ಪುಣ್ಯ ಇನ್ನುಂಟೆ
ಹೇಸಲು ಪ್ರಪಂಚಕೆ ಸತ್ಸಂಗ ಬೇರುಂಟೆ
ವಾಸನ್ಬಿಂಗಿದಮೇಲೆ ವೈರಾಗ್ಯವುಂಟೆ ೧

ಜ್ಞಾನಗೂಡಿದಮೇಲೆ ಮತ್ತೆ ತೀರ್ಥಗಳುಂಟೆ
ಧ್ಯಾನವಿಡಿದಮೇಲೆ ಅನ್ಯಮೌನುಂಟೆ
ಹೀನಗುಣ ತೊಳೆದಮೇಲಿನ್ನು ಸ್ನಾನಗಳುಂಟೆ
ಮಾನಸವು ಶುದ್ಧಿರಲು ಬೇರೆ ಮಡಿಯುಂಟೆ ೨

ಕರುಣಪಡೆದಮೇಲೆ ಕೈವಲ್ಯ ಇನ್ನುಂಟೆ
ಶರಣು ಪೊಂದಿದಮೇಲೆ ಪರಮಾರ್ಥ ಬೇರುಂಟೆ
ಅರಿವನರಿತರೆ ಬೇರೆ ಪರಲೋಕ ಇರುಲುಂಟೆ
ಶರಣರೊಲಿದಮೇಲ್ಹರಿಚರಣ ಹೊರತುಂಟೆ ೩

ಸಫಲನಾದಮೇಲೆ ವ್ರತನೇಮ ಬೇರುಂಟೆ
ಗುಪಿತವರಿತಮೇಲೆ ಪರತತ್ವವುಂಟೆ
ಅಪರೂಪ ಧ್ಯಾನಿರಲು ತಪ ಬೇರೆ ಇರಲುಂಟೆ
ಅಪರೋಕ್ಷಜ್ಞಾನ್ಯಾದ ಮೇಲೆ ಮಿಕ್ಕಸಾಧನುಂಟೆ ೪

ಮಾನಹೋದಮೇಲೆ ಮರಣ ಬೇರಿರಲುಂಟೆ
ನಾನತ್ವ ಪೋದಮೇಲೆ ಸತ್ಕರ್ಮವುಂಟೇ
ಧ್ಯಾನದಾಯಕ ಮಮಪ್ರಾಣ ಶ್ರೀರಾಮನಡಿ
ಖೂನ ತಿಳಿದ ಮೇಲೆ ಮುಕ್ತಿ ಬೇರುಂಟೆ ೫

೬೨೬

ಧನ್ಯರಿಗನ್ಯರ ಪರಿವ್ಯೇ
ದೈನ್ಯಬಿಡುವರೆ ಅವರಿಗಿರುವುದೇ ಅರಿವು ಪ

ಮೇಲು ಉಪ್ಪರಿಗೆಯ ಮಾಲಿನೊಳನುದಿನ
ಶೀಲಸುಂದರಿಯರ ಲೋಲರಾಗಿರುವಂಥ ೧

ನೀಲಕೌಸ್ತುಭಮಣಿ ಮಾಲಾಲಂಕೃತರಾಗಿ
ಕಾಲಕಾಲದಿ ಮಹಲೀಲೆಯೊಳಿರುವಂಥ ೨

ಮೂರ್ಧತ್ತು ಮೂರುಕೋಟಿ ವಾರಿಜಾಸನ ಸುರರಿಂ
ಮೂರ್ಹೊತ್ತು ಬಿಡದಂತೆ ಸಾರಿ ಪೂಜೆಯಗೊಂಬ ೩

ಎಂಟುಐಶ್ವರ್ಯಂಗಳಂಟಿಕೊಂಡು ಬಿಡದ್ವೈ
ಯ್ಕುಂಠ ಪದವಿಯೊಳು ಬಂಟರಾಗಿರುವಂಥ ೪

ಲೋಕೈಕ ಶ್ರೀರಾಮ ಲೋಕತ್ರಯಕೆ ತಾನೆ
ಏಕದೇವನು ಎಂಬ ಯಾಕಿಂಥ ಮದವಯ್ಯ ೫

೬೨೭

ನ್ಯಾಯವಾಕೊ ನ್ಯಾಯವಾಕೊ
ತೋಯಜಾಕ್ಷನಲ್ಲದಿಲ್ಲ ಪ

ಸಾವಧಾನ ಚಿತ್ತನಾಗಿ ಮಾಯನೀಗಿ ಜ್ಞಾನಗೂಡಿ
ಸೇವೆ ಮಾಡೆಲೊ ದಾಸಜನರ ದಿವ್ಯತತ್ವವು ತೋರುತದೆ ೧

ವೃತ್ತಿಬಲಿಸಿ ನಿತ್ಯದಿ ಹರಿ ಕೀರ್ತನದಿ ನಿನ್ನ ಚಿತ್ತನಿಲಿಸಿ
ಸತ್ಯದಿಂದರಿಯುತ್ತಲಿರ್ದರೆ ಸತ್ಯವಸ್ತುವು ಅರ್ಥವಾಗ್ವುದು ೨

ಮಹಾತ್ಮರ ನಿಜವಾಕ್ಯ ನಂಬಿ ದುರಾತ್ಮತನವಂ ದೂರಮಾಡಿ
ಆತ್ಮನೊಳ್ನಿಂತು ನೋಡೆಲೋ ಆತ್ಮರಾಮನ
ಮಹಾತ್ಮೆ ಕಾಂಬುದು ೩

೬೨೮

ನಿಖಿಲಾತ್ಮ ನಿಖಿಲಾತ್ಮ ಅಖಿಲಬ್ರಹ್ಮಾಂಡಪತಿ
ಸಲಹು ಸರ್ವೋತ್ತಮ ಪ

ಮಂದರಧರ ಎನ್ನ ಮಂದಮತ್ಯಳಿದಾ
ನಂದ ಮತಿಯಿತ್ತು ಚೆಂದದಿಂ ರಕ್ಷಿಸು ೧

ನಿತ್ಯನಿರುಪಮ ಸತ್ತು ಚಿತ್ತ ನಿಮ್ಮ
ಭಕ್ತಿ ಭಜನೆ ಎನ್ನ ಚಿತ್ತಕ್ಕೆ ದಯಮಾಡು ೨

ಬಗೆದು ಎನ್ನಂತರಂಗದಗಲದೆ ನಿಂತು ನಿಜ
ಸುಗುಣವಿತ್ತು ಪೊರೆ ಸುಗುಣಾಂಬುಧಿ ೩

ಕಾಮಿತಜನಕಲ್ಪ ಕಾಮಧೇನು ಎನ್ನ
ಕಾಮ ಪೂರೈಸಿ ನಿನ್ನ ನಾಮವಿತ್ತು ಕಾಯೊ ೪

ಭಕ್ತಿದಾಯಕ ನಿನ್ನ ಭಕ್ತಿಯಿಂ ಭಜಿಸುವೆ
ಸತ್ಯ ಶ್ರೀರಾಮ ನಿತ್ಯಮುಕ್ತಿಯಿತ್ತು ಪೊರೆ ೫

೬೨೯

ನಿತ್ಯದುದಯಾಸ್ತಮಾನದಲಿ ಸ
ರ್ವೋತ್ತಮ ಹರಿನಾಮ ಬರೆದೋದಿ
ಭಕ್ತಿಯಿಂದಾಲಿಪರ ಭವತಾಪ ಜರೆ
ಮೃತ್ಯುನೀಗಿ ನಿತ್ಯಮುಕ್ತಿ ಕೈಸೇರುತಿಹ್ಯವು ಪ

ನರಿಹರಿ ಹಯವದನ ಜನಾರ್ದನ
ಗರುಡಗಮನ ವಾಸುದೇವ ವಾರಿಜಾಕ್ಷ
ಮುರಧ್ವಂಸಿ ಮುಪ್ಪುರಾಂತಕ ಮುಕ್ಕುಂದ
ಹರಿ ಸರ್ವೇಶ ಉರಗಪರ್ಯಂಕ
ನಿರವಯ ನಿರಂಜನ ನಿರ್ಜರೇಶ
ಶರಣಜನಮಂದಾರ ಸಿರಿಯರಸ

ಪರಮಪ್ರಕಾಶ ಪರತರೇಶ
ಪರಮಪುರುಷ ಪರಾತ್ಪರನೆಂದು ೧

ವನಮಾಲ ಮಾಧವ ದೇವದೇವೇಶ
ದನುಜರಸಂಹರ ಶ್ಯಾಮಸುಂದರ
ಘನಮೇಘಶ್ಯಾಮ ಸಚ್ಚಿದಾನಂದ
ಚಿನುಮಯಾತ್ಮ ತಚ್ಚೈತನ್ಯರೂಪ
ವೇಣುಧರ ಗೋಪಾಲ ಗೋವ
ರ್ಧನೋದ್ಧಾರ ಗಾನಾಂದಧೋಕ್ಷಜಪಿತ
ಧ್ಯಾನಗಮ್ಯ ತ್ರಿಭುವನೇಶ ತ್ರಿವಿಕ್ರಮನೆಂದು ೨

ನಿತ್ಯಗುಣಾರ್ಣವ ನಿಜಗುಣ ನಿಷ್ಕಲಂಕ
ನಿತ್ಯಾತ್ಮ ನಿರುಪಮ ಪರಂಜ್ಯೋತಿ
ನಿತ್ಯನಿರ್ಮಲ ಸತ್ಯಭಾಮಾಕಾಂತ ಚಿದ್ರೂಪ
ಚಿತ್ಕಳಂಕ ಕಮಲಾಕ್ಷ ಲಕುಮೀಶ
ಚಿತ್ತಜಪಿತ ಶೌರಿ ಸೂತ್ರಧಾರಿ
ಭಕ್ತವತ್ಸಲ ಭಯನಿವಾರ ನರಸಿಂಹ
ಮುಕ್ತಿದಾಯಕ ಮಧುಸೂದನ ರಮಾರಮಣ
ಮೃತ್ಯುಂಜಯ ವಿಶ್ವೇಶ ವಿಶ್ವವ್ಯಾಪಕನೆಂದು ೩

ಕಾಲಾರಿ ಚಕ್ರಿ ಚತುರ್ಭುಜ ಭವನಾಶ
ನೀಲಾಂಗ ರಂಗ ರಾಘವ ಭುವನೇಶ
ನೀಲಲೋಚನ ನಗಧರ ಜಗಮೋಹ
ಮೇಲುನಿಲಯ ನಿಗಮಾತೀತ ಪದ್ಮನಾಭ
ಕಾಲೀಮರ್ದನ ಕೌಸ್ತುಭಾಂಬರ ವಿಷ್ಣು
ಪಾಲಸಾಗರಕನ್ನಿಕಾಪ್ರಿಯನಾಥ
ಲೀಲಜಾಲ ಜಾಹ್ನವೀಜನಕ ಕೇಶವ
ಶೂಲಪಾಣಿಸಖ ಶಾಂತಾಕಾರನೆಂದು ೪

ಪರಮಾನಂದ ಗೋವಿಂದ ಗಜರಕ್ಷ
ಶರಧಿಮಥನ ಕೂರ್ಮಮತ್ಸ್ಯ

ಕರುಣಾಂಗ ವಾಮನ ಧ್ರುವಪಾಲ
ದುರಿತಾರಿ ಕೃಷ್ಣ ವೆಂಕಟ ವಿಠಲ
ಶರಣಾಗತವರದ ನುತಪಾಲ
ವರದಾತ ವೇದಾಂಗ ಸುಖಧಾಮ
ವರ ಶ್ರೀರಾಮ ಪರಮ ಪುಣ್ಯನಾಮ
ಧರೆಮೂರರೊಳತ್ಯಧಿಕಮೆಂದು ೫

೬೩೦

ನಿನ್ನಬಿಟ್ಟನ್ಯಬಲ ಮುನ್ನಿಲ್ಲಸ್ವಾಮಿ
ಎನ್ನಯ್ಯ ವಿಶ್ವೇಶ ಪನ್ನಂಗಶಾಯಿ ಪ

ಇನಚಂದ್ರ ಮಂಗಳಬುಧಗುರು ಭಾರ್ಗವ
ಶನಿರಾಹುಕೇತು ನವಮಹರ್ದಶನು ನೀನೆ
ಘನನಿಮ್ಮ ಮಹಿಮೆಯಿಂ ವಿಧವಿಧದಿ ಸೃಷ್ಟಿಗೈ
ದೊನರುಹ ಭುವನಂಗಳಾಳುವವ ನೀನೆ ೧

ನಕ್ಷತ್ರಯೋಗಾದಿಕರಣಂಗಳು ನೀನೆ
ಪಕ್ಷಮಾಸ ಸರ್ವಕಾಲ ವಾರ ತಿಥಿ ನೀನೆ
ಸುಕ್ಷೇತ್ರಯಾತ್ರ ಮಹಪುಣ್ಯತೀರ್ಥವು ನೀನೆ
ಸಾಕ್ಷಾತ ನಿಖಿಲ ಶುಭಮುಹೂರ್ತಗಳು ನೀನೆ ೨

ಪರಮವೇದ ಪುಣ್ಯಪುರಾಣಕಥೆ ನೀನೆ
ವರ ನಿಖಿಲ ಶಾಸ್ತ್ರರ್ಥ ಮೂಲವಿಧಿ ನೀನೆ
ಚರಣದಾಸರ ಪ್ರಾಣಪದಕ ಶ್ರೀರಾಮಯ್ಯ
ಸ್ಥಿರಮೋಕ್ಷ ಪಾಲಿಪ ಶ್ರೀಗುರುವು ನೀನೆ ೩

೬೩೧

ನೀನೆನನ್ನುಟ್ಟಿಸಿದ್ಯೋ ನಾನೆ ನಿನ್ನುಟ್ಟಿಸಿದೆನೋ
ಜಾನಕೀಶ ನೀನೆನಗೆ ಸಿಟ್ಟಾಗದ್ಹೇಳ್ಳೈ ಪ

ತಂದೆ ಮಗನ್ನೆತ್ತಿನೋ ಮಗ ತಂದೆನ್ಹೆತ್ತನೋ
ತಂದೆ ಮಗನ್ನೀರ್ವರನು ತಾಯಿ ಹೆತ್ತಳೇನೋ
ತಂದೆತಾಯಿಮಗತ್ರಯರು ಬಿಂದಿನಲುದ್ಭವಿಸಿದರೆ
ಅಂದಮಾದ ಸಂಧಿದನು ಚೆನ್ನಾಗಿ ಬಿಡಿಸೈ ೧

ಬೀಜದಿಂದ್ವೃಕ್ಷಾಯ್ತೋ ವೃಕ್ಷದಲಿ ಬೀಜಾಯ್ತೋ
ಬೀಜವೃಕ್ಷಗಳೆರಡು ಹಣ್ಣಿನೊಳ್ಹುಟ್ಟಿದವೇ
ಬೀಜವೃಕ್ಷಣ್ಣುಮೂರು ಭೂಮಿಯೊಳ್ಹುಟ್ಟಿದವೇ
ಸೋಜಿಗದ ಸಂಧಿದನು ನೈಜದಿಂ ಬಿಡಿಸೈ ೨

ಜೀವದಿಂ ಮಾಯವೋ ಮಾಯದಿಂ ಜೀವವೋ
ಜೀವಮಾಯಗಳೆರೆಡು ಭಾವದ್ಹುಟ್ಟಿಹ್ಯವೋ
ಜೀವ ಮಾಯ ಮೂರು ಕಾಯದಲಿ ಜನಿಸಿದವೋ
ನ್ಯಾಯದ ಸಂಧಿದನು ದಿವ್ಯವಾಗಿ ಬಿಡಿಸೈ ೩

ಉತ್ಪತ್ತಿಯಿಂ ಲಯವೋ ಲಯದಿಂದ ಉತ್ಪತ್ಯೋ
ಉತ್ಪತ್ತಿಲಯವೆರಡು ಸ್ಥಿತಿಯಿಂ ತೋರುವವೋ
ಉತ್ಪತ್ತಿಲಯಸ್ಥಿತಿ ತತ್ವದೊಳು ಜನಿಸಿಹ್ಯವೋ
ಗುಪ್ತದ ಸಂಧಿದನು ನಿರ್ತಾಗಿ ಬಿಡಿಸೈ ೪

ವೇದದಿಂ ಸಾಧನವೋ ಸಾಧನದಿಂ ವೇದವೋ
ವೇದಸಾಧನವೆರಡು ನಾದದ್ಹುಟ್ಟಿಹ್ಯವೋ
ವೇದಸಾಧನ ನಾದಶೋಧದಿಂ ಜನಿಸಿಹ್ಯವೋ
ಮೋದದ ಸಂಧಿದನು ಬೋಧದಿಂ ಬಿಡಿಸೈ ೫

ಪಿಂಡಾಂಡದಿಂ ಬ್ರಹ್ಮಾಂಡೋ ಬ್ರಹ್ಮಾಂಡದಿಂ ಪಿಂಡಾಂಡೋ
ಪಿಂಡಾಂಡಬ್ರಹ್ಮಾಂಡೆರಡು ಖಂಡನಿಂದ್ಹುಟ್ಟಿಹ್ಯವೋ
ಪಿಂಡಾಂಡಬ್ರಹ್ಮಾಂಡ ಖಂಡನ್ಯೋಗಿಯಲಿ ಜನಸಿಹ್ಯವೊ
ಗಂಡಾಂತರದ ಸಂಧಿದನು ಖಂಡಿತದಿಂ ಬಿಡಿಸೈ ೬

ಕಾಮದಿಂ ನೇಮವೋ ನೇಮದಿಂ ಕಾಮವೋ
ಕಾಮನೇಮಗಳೆರಡು ನಿತ್ಯದ್ಹುಟ್ಟಿಹ್ಯವೋ

ಕಾಮನೇಮ ನಿತ್ಯ ಶ್ರೀರಾಮ ನಿನ್ನಾಟವೋ
ಈ ಮಹಸಂಧ್ಯೆನಗೆ ಪ್ರೇಮದಿಂ ಬಿಡಿಸೈ ೭

೬೩೨

ಪರಸುಖದಿರವನು ಕರುಣಿಸು ಎನಗೆ
ಪರಮಪಾವನ ತವಚರಣಸೇವೆಯೆಂಬ ಪ

ಅರಿಷಡ್ವರ್ಗದ ಉರುಬಾಧೆ ತಪ್ಪಿಸಿ
ಮೆರೆವೆಂಟುಕೋಣಗಳು ಶಿರತರಿದ್ಹಾರಿಸಿ
ಜರೆಮರಣೆಂದೆಂಬ ಉರುಲನು ಜೈಸಿದ
ಹರಿಶರಣರ ಮಹ ಕರುಣಕಟಾಕ್ಷವೆಂಬ ೧

ಹತ್ತು ಇಂದ್ರಿಯಗಳು ಒತ್ತಿ ಮುರಿದು ನೂಕಿ
ಸುತ್ತಿಸುಳಿವ ಕಪಿನ್ಹತ್ತಿರ ಬಂಧಿಸಿ
ಹತ್ತಿಕಾಡುವ ಭವ ಕತ್ತರಿಸೊಗೆದ
ಚಿತ್ತಜತಾತನ ಭೃತ್ಯಂ ನಡೆಯೆಂಬ ೨

ಹರಣಪೋದರು ನಿನ್ನ ಚರಣಸ್ಮರಣೆಯನ್ನು
ನೆರೆನಂಬಿ ಬಿಡದಂಥ ಪರಮದಟವ ನೀಡೋ
ಪೊರೆ ತವದಾಸರ ನೆರೆಯೊಳಿರಿಸಿ ಎನ್ನ
ಶಿರದಿ ಹಸ್ತವನಿತ್ತು ವರದ ಶ್ರೀರಾಮ ೩

೬೩೩

ಪೇಳಲಳವಲ್ಲ ನಮ್ಮಯ್ಯನಾಟ ತಿಳಿವರಾರಿಲ್ಲ ಪ

ಪೇಳೇನೆಂದರೆ ನಿಲುಕೊ ಮಾತಲ್ಲ
ಕೇಳೇನೆಂದರೆ ತಿಳಿವ ಶಕ್ತಿಲ್ಲ
ಹೇಳಿಕೆ ಕೇಳಿಕೆಗೆ ಮೀರಿದ
ಮೇಲುಮಹಿಮನ ಲೀಲಾಜಾಲವ ಅ.ಪ

ಸಾಧ್ಯ ಮಾತಲ್ಲ ಜಗಸೂತ್ರನಾಟಕೆ
ಆದಿ ಅಂತಿಲ್ಲ ಜಗಮೂರರೊಳಗೆ
ಸಾಧನಿಕರೆಲ್ಲ ನಿಜಭೇದ ತಿಳಿದಿಲ್ಲ
ಸಾಧನಿಟ್ಟು ಆವಕಾಲದಿಂ
ನಾದ ತಡೆಯದೆ ವೇದಗಳ ಬಿಡ
ದೋದಿ ದಣಿದು ಇನ್ನು
ಆದಿಮಹಿಮನ ಪಾದಕಾಣವು ೧

ಬಾಗಿ ಅನುಗಾಲ ನಿಜತತ್ವಭೇದಿಸಿ
ನೀಗಿ ಭವಮಾಲ ಜಡವಾದ ದುರ್ಭವ
ರೋಗಗಳುಯೆಲ್ಲ ಪಾರಾಗಿ ನಿರ್ಮಲ
ರಾಗಿ ಪರಮಯೋಗ ಒಲಿಸಿ
ಯೋಗಿಗಳು ಮಹ ಉಗ್ರತಪದಿಂ
ಯೋಗಬೆಳಗಿನೊಳಗೆ ನೋಡಲು
ನಾಗಶಯನ ಮಹಿಮೆ ತಿಳಿಯದು ೨

ಸಾನಂದಾದಿಗಳು ಮಹ ಭೃಗು ಗಾರ್ಗೇಯ ಮನು
ಮುನ್ಯಾದಿಗಳು ದೇವರ್ಷಿ ನಾರದ
ಶೌನಕಾದಿಗಳು ಘನ ಸಪ್ತಋಷಿಗಳು
ಅನಂತಾನಂತ ಪ್ರಳಯದಿಂದ
ಜ್ಞಾನ ಬೆಳಗಿನೋಳ್ನಿಂತು ನೋಡಿ
ಕಾಣದೆ ಶ್ರೀರಾಮಪಾದ
ಮೌನದೋಳ್ಮುಳುಗೇಳುತಿಹರು ೩

೬೩೪

ಪೇಳಿದರೆ ತಿಳಿಯುವುದೆ ಮಾಯಮೋಹಿಗಳಿಗೆ
ನೀಲಶ್ಯಾಮನ ದಿವ್ಯಗೂಢದಿಹಮಹಿಮೆ ಪ

ಬಂಜೆಗ್ಹೊಳೆವುದೆ ಪ್ರಸೂತಿವೇದನೆ ಸುದ್ದಿ
ಸಂಜೀವನ ಮಹಿಮೆ ತಿಪ್ಪೆ ತೃಣಕೆ ತಿಳಿಯುವುದೆ

ಅಂಜುಬುರುಕಗ್ವೀರತ್ವ ಸಾರಸವಿದೋರುವುದೆ
ವಂಜಗೊಳುಪಾಗುವುದೆ ಹರಿಭಕ್ತಿಸಾರ ೧

ನಾಗನ್ಹೆಡೆಯೆತ್ತಾಡಲಮೇಧ್ಯಜಂತರಿಯುವುದೆ
ಕೋಗಿಲೆಯು ಕೂಗಲು ಕಾಗೆ ತಿಳಿಯುವುದೆ
ಗೂಗೆಗ್ಹೇಳಲು ಅರುಣಪ್ರಭೆ ನೋಡಬಲ್ಲುದೆ
ಭಾಗವತರ ನಡೆ ಭವರೋಗಿಗ್ಹೊಳಪಹ್ಯದೆ ೨

ರಾಜ್ಯದಾಡಳಿತವನು ಚಾಂಡಾಳ ತಿಳಿಯುವನೆ
ತೇಜಿಯ ಮಹಯೋಗ ಪಾಜಿಗ್ಹುಟ್ಟುದೆ
ಭೋಜನದ ಸವಿಸಾರ ರೋಗಿಗ್ಹೇಳಲು ಫಲವೆ
ರಾಜಿಪ ಪರಲೋಕ ಕುಜನರರಿಯುವರೆ ೩

ಹೀನನಿಗತಿ ತಿಳಿಯುವುದೆ ಜ್ಞಾನಬೋಧಾಮೃತ
ಶ್ವಾನನಿಗೆ ಸೇರುವುದೆ ರಾಗ ಸುಖಸ್ವಾದ
ಕೋಣಗ್ಹೊಳೆವುದೆ ವೇಣು ಮೃದಂಗ ಸುಖವಾದ್ಯ
ಧ್ಯಾನಮಹಿಮೆಯ ಫಲವು ಭವಿಗೆ ತಿಳಿಬಲ್ಲುದೆ ೪

ನೇಮದೊರುಷವು ಸುರಿಯೆ ಕಲ್ಲು ನೀರು ಕುಡಿಯುವುದೆ
ಕಾಮಿಗಳಗನುಭವದ ಹಾದಿ ತಿಳಿ ಬಲ್ಲುದೆ
ಪಾಮರಧಮರಿಗಿಲ್ಲ ದೀನಜನನಾಥ ಶ್ರೀ
ರಾಮನಡಿ ನಿಜಭಕ್ತಿ ಸಾಧ್ಯವಾಗುವುದೆ ೫

೬೩೫

ಪೊಗಳಲಳವಾರಿಗೆ ಎಲೆ ದೇವ ನಿನ್ನ
ನಿಗಮ ಆಗಮಾತೀತ ಗರುವರಹಿತನ ಪ

ನೆಲೆಬುಡತುದಿ ಮೊದಲಿಲ್ಲದವನು ನೀ
ಪ್ರಳಯ ಪ್ರಳಯಕ್ಕಾದಿ ಆದಿಯಾದವನು ನೀ
ನಲಿಯುವಿ ನಲಿಯದೆ ಚಲಿಸುವಿ ಚಲಿಸದೆ
ತಿಳಿಯದೆ ತಿಳಿಯುವಿ ವಿಲಸಿತ ಮಹಿಮ ೧

ಆರಾರರಿಯದ ಮಹದಾದಿ ಅನಾದಿ ನೀನು
ಸಾರ ಚರಾಚರಕ್ಕಾಧಾರರಾದವ ನೀ
ಕೋರುವಿ ಕೋರದೆ ತೋರುವಿ ತೋರದೆ
ಬಾರದೆ ಬರುವಿಯೊ ಮೀರಿದ ಮಹಿಮ ೨

ಗುಣಿಸಿ ನೋಡಲು ತುಸುಗುಣ ತೊರೆದವ ನೀನು
ಗಣಿತಕ್ಕೆ ನಿಲುಕದಕಲಂಕ ಮಹಿಮ ನೀ
ಜನಿಸುವಿ ಜನಿಸಿದೆ ಕುಣಿಸದೆ ಕುಣಿಸುವಿ
ಮಣಿಸುವಿ ಮಣಿಸದೆ ಅನುಪಮಮಹಿಮ ೩

ತೊಡರೆಡರಿಗಡರದೆ ಕಡೆಯಲಾಡುವಿ ನೀನು
ತೊಡರಿನೊಳಗೆ ಬಿಡದೆ ತೋರುವಿ ನೀ
ನುಡಿಯಿಲ್ಲದೆ ನುಡಿಸುವಿ ನಡೆಯಿಲ್ಲದೆ ನಡೆಸುವಿ
ಮಡಿಯಿಲ್ಲದೆ ಮಡಿಯೆನಿಪ ಕಡುಚಿತ್ರ ಮಹಿಮ ೪

ಮೀಸಲು ಮಡಿರಹಿತಪಾವನ ನೀನು
ಸಾಸಿರನಾಮದಿ ಕರೆಸಿಕೊಂಬುವಿ ನೀ
ವಾಸಿಸದೆ ವಾಸಿಸುವಿ ಪೋಷಿಸದೆ ಪೋಷಿಸುವಿ
ಶ್ರೀಶ ಶ್ರೀರಾಮ ದಾಸಜನರ ಸುಲಭ ನಿನ್ನ ೫

೬೩೬

ಬಣ್ಣಿಪ ಪ್ರಾಣವಾರಿಗೆ ನಿಮ್ಮ
ಉನ್ನತೋನ್ನತ ಜಾಣ ಮಹಿಮ ಪ

ಸಾಧಿಸಿ ವೇದನಾದ ಬಿಡದೆ
ಓದಿ ಓದಿ ದಣಿದು ತವ
ಪಾದಕಾಣದೆ ಒರಲುತಿಪ್ಪವು
ಭೇದರಹಿತಾಗಾಧ ಮಹಾತ್ಮ ೧

ಶೇಷರಾಜ ದೃಢದಿ ತನ್ನ
ಸಾಸಿರ ಜಿಹ್ವೆಗಳಿಂದ ಅನು

ಮೇಷ ಪೊಗಳಿ ನಿನ್ನ ಕಾಣದೆ
ಬೇಸತ್ತು ಬಾಯಬಿಡುವನಭವ ೨

ಸುರಜೇಷ್ಠಸುರಾದಿಗಳು
ಅರಿಯರು ನಿನ್ನ ಪುಣ್ಯಚರಣ
ಅರಿವೆನೆಂತು ಮೂಢನು ನಾನು
ಪೊರೆ ನೀನೆ ದಯದಿ ಶ್ರೀರಾಮ ೩

೬೩೭

ಬಿದ್ದ ಹಣ್ಣು ಮಾಯವಲ್ಲದವ್ವಾ
ಹ್ಯಾಂಗೆ ಸಹಿಸಲಸಾಧ್ಯ ಬೇನೆ
ನಿದ್ರೆ ಬರದವ್ವಾ ಪ

ಬಿದ್ದ ಹಣ್ಣು ಮಾಯವಲ್ಲದು
ಮುದ್ದು ಮುಖ ನಿನ್ನಪಾದ ಪದ್ಮಕೆ
ಬಿದ್ದು ಬೇಡುವೆ ಸದ್ದು ಮಾಡದೆ
ಅಬ್ಧಿಶಯನನೆಂಬ್ವೈದ್ಯನ್ನ್ಹುಡಿತಾ ಅ.ಪ

ಮುತ್ಯ ಅಜ್ಜರನಳೀತು ಯೀ ಹಣ್ಣು
ಮತ್ತು ಎನ್ನ ಹೆತ್ತ ತಾತ ಮಾತಾ ಪಿತರನು
ಹತ್ತಿಕೊಂಡು ಭ್ರಾತೃ ಬಂಧುವನು
ಗೊತ್ತಿಗ್ಹಚ್ಚಿತು ಎತ್ತಪೋದರೊ
ಪತ್ತೆಗಾಣೆನು ಅತ್ತು ಅತ್ತು ಇದರ ಬೇನೆಗೆ
ಸತ್ತು ಸತ್ತು ಹೋದರೆಲ್ಲರು ಪುತ್ರ ಮಿತ್ರ ಕ
ಳತ್ರರೆಲ್ಲರ ವ್ಯರ್ಥಕೊಲ್ಲಿ ಬೆನ್ಹತ್ತಿದೆನ್ನಗೆ ೧

ಎಷ್ಟು ಬಂಧುಬಳಗವನೀ ಹಣ್ಣು ನುಂಗಿಬಿಟ್ಟಿದೆ
ಇಷ್ಟು ಖೂನಕ್ಕುಳಿಸಿಲ್ಲೋರ್ವರನು
ಶಿಷ್ಟಜನರಿಗೆ ಮೃತ್ಯು ಕಾಣ್ಹುಣ್ಣು ಬಿಟ್ಟಿಲ್ಲಾರನು
ಎಷ್ಟು ಪೇಳಲಿ ನಷ್ಟಸುದ್ದಿಯನು
ದುಷ್ಟಶಿಷ್ಟರೆಂಬರೆಲ್ಲರ ಕಟ್ಟಿ ಮುರಿದು

ಮುಟ್ಟಿಗಿಯಮಾಡಿ ಮೊಟ್ಟೆಕಟ್ಟಿ
ಕೊಟ್ಟು ಮೃತ್ಯಿಗೆ ಕಟ್ಟಕಡಿಗೆ ಬೆನ್ನಟ್ಟಿದೆನಗೆ ೨

ಕುಂತೆನೆಂದರೆ ಕುಂದ್ರಗೊಡದಮ್ಮ ಸಂತಜನರೊಳು
ನಿಂತೆನೆಂದರೆ ನಿಂದ್ರ ಗೊಡದಮ್ಮ
ಸಂತಸೆಂಬುದು ಇನಿತು ಇಲ್ಲಮ್ಮ
ಅಂತರಂಗದಿ ನಿಂತು ಸುಡುವುದು ತಾಳಲೆಂತಮ್ಮ
ಅಂತಃಕರಣದಿ ಪೋಗಿ ಎನ್ನಯ ಅಂತ್ಯಕ್ವೈದ್ಯನಾದಂಥ ಪ್ರಾಣದ
ಕಾಂತ ಶ್ರೀರಾಮನನ್ನು ಕರೆತಂದು
ಕಾಂತೆ ಈ ಹುಣ್ಣು ಮಾಯ್ಸೆ ಬೇಗನೆ ೩

೬೩೮

ಬೇಡಿದವರಿಗೆ ದೊರೆವುದೇನೆಲೊ ಸಜ್ಜನರ ಸಂಗ
ಬೇಡಿದವರಿಗೆ ದೊರೆವುದೇನೆಲೊ ಪ

ಬೇಡಿದವರಿಗೆ ದೊರೆವುದೇನೆಲೊ
ಗಾಢಮಹಿಮನ ಭಕ್ತರಾವಾಸ
ಮಾಡಿದ್ಹಿಂದಿನ ಸುಕೃತ ಫಲವು
ಕೂಡಿಬಂದ ಕೋವಿದರಿಗಲ್ಲದೆ ಅ.ಪ

ದೃಢಕರಡಿಯಿಟ್ಟ ಭುವನವೆ ಕ್ಷೇತ್ರ
ಪುಸಿಯಲ್ಲ ಕೇಳಿರಿ
ದೃಢಕ ಜನರಡಿಯೇ ಸುಯಾತ್ರಾ
ಸಿದ್ಧಾಂತ ಮಾತಿದು
ದೃಢಕರಾಡಿದ ಮಾತೆ ನಿಜಮಂತ್ರ
ಇದೆ ಮೂಲಶಾಸ್ತ್ರ
ದೃಢಕರು ನಿಂತ ಸ್ಥಳವೆ ಬದರಿ
ದೃಢಕರು ಕೂತಸ್ಥಾನ ಮಧುರೆ
ದೃಢಕರೊಟನಾಟ ಲಭ್ಯವೆಂದರೆ
ಪಡೆದ ಪುಣ್ಯ ಮಹಭಾಗ್ಯಗಲ್ಲದೆ ೧

ಭಕ್ತ ಜನಮಿಂದದೆ ತೀರ್ಥವು
ನಿಖಿಲರರಿವುದೆ
ಭಕ್ತ ಜನರುಂಡಸ್ಥಳ ಸಿರಿಯಾವಾಸವು
ದೊರೆಯದಾರಿಗೆ
ಭಕ್ತ ದರ್ಶನ ಪರಮ ಮಂಗಲವೋ
ಶುಭಕೆ ಶುಭಕರವು
ಭಕ್ತಜನರಿಹ್ಯ ಸಭೆಯೆ ಹರಿಸಭೆ
ಭಕ್ತರೊಪ್ಪಿಗೆ ಹರಿಯ ಒಪ್ಪಿಗೆ
ಮೃತ್ಯುದೂರ ಮಾಳ್ಪ ಸರ್ವೋತ್ತಮನ
ಭಕ್ತರ ಪ್ರೇಮದೊಲುಮೆ ೨

ದಾಸರ್ವಾಸವೆ ಕಾಶಿಕೇಂದ್ರವು
ಸತ್ಯ ಸತ್ಯವಿದು
ದಾಸರಿರುವುದೆ ಪರಮ ವೈಕುಂಠವು
ಮರ್ತ್ಯರರಿವುದೆ
ದಾಸಗಿತ್ತದ್ದು ಹರಿಗೆ ಅರ್ಪಣವು
ಪರಮ ಸುಖಕರವು
ದಾಸರೊರ್ಣವು ತೀರದಾರಿಗೆ
ಶ್ರೀಶ ಶ್ರೀರಾಮನಡಿಯಕಮಲ
ದಾಸರಿಜನರಡಿ ಪಿಡಿದು ಸುಸಹ
ವಾಸದಿರುವುದೆ ಮುಕ್ತಿಸಂಪದ ೩

೬೩೯

ಬೆಂಕಿಗಿರುವೆಗಳ ಕಾಟುಂಟೇ ಹರಿ
ಕಿಂಕರರಿಗೆ ಭವ ಭಯಮುಂಟೆ ಪ

ಪಂಕಜಸಖನಿಗೆ ಕತ್ತಲಂಜಿಕೆಯುಂಟೆ
ಪಂಕಜಾಕ್ಷನ ಧ್ಯಾನಕ್ಕೆಣೆಯುಂಟೆ ಅ.ಪ

ವಜ್ರಾಯುಧಕೆ ಗಿರಿ ಉಳಿಯಲುಂಟೆ ಗಂಗೆ
ಮಜ್ಜನದಿಂ ಮೈಲಿಗೆಯಿರುಲುಂಟೆ

ಸಜ್ಜನರಿಂಗೂಡಿ ನಿರ್ಜರೇಶನ ಭಜ
ನ್ಹೆಚ್ಚೆಚ್ಚಿಗಿರೆ ಜನ್ಮ ಬರಲುಂಟೆ ೧

ಮೌನಧಾರಿಗೆ ಅಭಿಮಾನ ಉಂಟೆ ನಿಜ
ಧ್ಯಾನಿಕರಿಗೆ ಹೀನ ಬವಣೆಯುಂಟೆ
ಜ್ಞಾನದೊಳೊಡಗೂಡಿ ಗಾನಲೋಲನ ಪಾದ
ಆನಂದಕರಿಗಿಹ್ಯಸ್ಮರಣುಂಟೆ ' ೨

ತಾಮಸ್ಹೋಗಲು ಕ್ಷೇಮ ಬೇರುಂಟೆ ದು
ಷ್ಕಾಮಿ ತಳೆಯಲು ಮುಕ್ತಿದೂರುಂಟೆ
ಭೂಮಿಗಧಿಕ ನಮ್ಮ ಸ್ವಾಮಿ ಶ್ರೀರಾಮನ
ಪ್ರೇಮಪಡೆದ ಮೇಲೆ ಬಂಧ ಉಂಟೆ ೩

೬೪೦

ಭಕ್ತವತ್ಸಲನೆಂಬ ಬಿರುದು ನಿನಗಿರಲು
ಭಕ್ತಜನಾಪತ್ತಿಗ್ಯಾಕೆ ನೀ ಬರದಿರುವಿ ಪ

ಮುಕ್ತಿದಾಯಕನೆಂಬ ಯುಕ್ತ ಬಿರದ್ಹೊತ್ತಿರುವಿ
ಚಿತ್ತಜಪಿತ ಭಕ್ತರ್ಹೊತ್ತಿಗ್ಯಾಕಿಲ್ಲೋ
ನಿತ್ಯ ನಿರ್ಗುಣನೆಂದು ನಿತ್ಯ ಬಿಡದ್ಹೊಗಳುವ
ಸತ್ಯ ವೇದೋಕ್ತಿಗಳು ವ್ಯರ್ಥವೇನಯ್ಯಾ ೧

ದೋಷನಾಶನೆ ನಿನ್ನ ಸಾಸಿರನಾಮಗಳಿಂ
ಘೋಷಿಪರು ಮನುಮುನಿ ಬೇಸರಿಲ್ಲದಲೆ
ದಾಸಜನರಾಶಕ್ಕೆ ಬೇಸತ್ತ ಬಳಿಕ ನಿನ
ಗೀಸು ಬಿರುದುಗಳಿರ್ದು ಲೇಶವೇನಯ್ಯಾ ೨

ಪರಮ ಕರುಣಾಕರ ಶರಣಜನಮಂದಾರ
ಚರಣಸ್ಮರಿಪರ ಘೋರದುರಿತಪರಿಹಾರ
ಖರೆಯಿರ್ದರಿಗೆನ್ನ ದುರಿತಮಂ ಪರಿಹರಿಸಿ
ಕರುಣದಿಂ ರಕ್ಷಿಸೈ ಧರೆಗಧಿಕ ಶ್ರೀರಾಮ ೩

೬೪೧

ಭಾರ ನಿನ್ನದೋ ಮಾರಜನಕ
ಭಾರ ನಿನ್ನದೊ ಪ

ಭಾರ ನಿನ್ನದಯ್ಯ ಸರ್ವ
ಸಾರತರದಿ ಕಾಯುವಂಥ
ಪಾರಮಹಿಮ ನಿನ್ನ ಚರಣ
ವಾರಿಜವೇ ಗತಿ ಎನಗೆ ೧

ನಿನ್ನ ಧ್ಯಾನವೆ ಪರುವಕಾಲ
ನಿನ್ನ ನಾಮವೆ ಸೌಖ್ಯ ಸಕಲ
ನಿನ್ನ ಕೀರ್ತನೆನಗೆ ಸುಫಲ
ಪನ್ನಂಗಶಯನ ವೇಣುಗೋಪಾಲ ೨

ನಿನ್ನ ಧ್ಯಾನದಿಂ ಕರಿ ಸಂಕಟ
ವನ್ನು ನಿರುತ ಗೆಲಿದನಕಟ
ನಿನ್ನ ಭಜಿಸಿ ವಿಭೀಷಣ ಪಟ್ಟ
ವನ್ನು ಸ್ಥಿರಪಡೆದ ದಿಟ ೩

ಜಯ ನಿನ್ನ ಧ್ಯಾನವೆಂದೆ
ಜಯ ನಿನ್ನ ಚರಣವೆಂದೆ
ಜಯ ನಿಖಿಲ ನಿನ್ನದೆಂದೆ
ದಯಪಾಲಿಸು ಶ್ರೀರಾಮ ತಂದೆ ೪

೬೪೨

ಭಿಡೆ ಇನ್ನ್ಯಾತಕೆ ಹೊಡಿ ಹೊಡಿ ಡಂಗುರ
ಪೊಡವಿ ತ್ರಯದಿ ಹರಿ ಅಧಿಕೆಂದು ಪ

ಅಡಿಯ ದಾಸರ ಕರದ್ಹಿಡಿದು ಬಿಡದೆ ಬಲು
ಸಡಗರದಾಳುವ ನಿಜಧಣಿಯೆಂದು ಅ.ಪ

ನಂದಕಂದ ಗೋವಿಂದ ಮುಕ್ಕುಂದ ಭಕ್ತ
ಬಂಧು ಎಂದು ಕೈತಾಳವಿಕ್ಕುತ
ತಂದೆ ತನ್ನ ಪಾದನ್ಪೊಂದಿ ಭಜಿಪರ
ಬಂಧ ಛಿಂದಿಪ ಪರದೈವವೆಂದು ನಲಿಯುತ ೧

ಸ್ಮರಿಪ ಜನರ ಮಹದುರಿತಪರ್ವತವ ತರಿದು
ಪೊರೆವ ಸಿರಿದೊರೆಯೆಂದೊದರುತ
ಪರಮಪುರಷನ ಚರಿತ ಪೊಗಳ್ವರ ಮೈ
ನೆರಳುಯೆಂದು ಮೈಮರೆದು ಕೂಗುತ ೨

ಶರಣಾಗತರ ತನ್ನ ಹರಣದಂತೆ ಕಾಯ್ವ
ಕರುಣಿ ಈತನೆಂದು ಕರ ಮೇಲಕೆತ್ತಿ
ಮರೆಯ ಬಿದ್ದವರ ಪರಮ ಬಡತನವ
ಭರದಿ ಕಳೆದನೆಂದು ಒರೆದು ಸಾರುತ ೩

ಸಾಗರಶಾಯಿ ತನ್ನ ಬಾಗಿ ಬೇಡುವರ
ಬೇಗ ಕ್ಷೇಮನೀಯ್ವ ಭಾಗ್ಯದರಸನೆಂದು
ನೀಗದ ಕಷ್ಟದಿ ಕೂಗಲು ತಡೆಯದೆ
ಸಾಗಿ ಬರುವ ಭವರೋಗವೈದ್ಯನೆಂದು ೪

ಅಚ್ಯುತಗಿಂ ಭಕ್ತರಿಚ್ಛೆ ಪೂರೈಸಲು
ಪೆಚ್ಚಿನವಿರಲ್ಲೆಂದು ಬಿಚ್ಚಿ ಹೇಳುತ
ಇಚ್ಛಜಪಿತ ಮಹಸಚ್ಚಿದಾನಂದ
ಸರ್ವಕ್ಕೆಚ್ಚು ಹೆಚ್ಚು ಶ್ರೀರಾಮನೆ ಎನ್ನುತ ೫

೬೪೩

ಮಾಲೆ ಧರಿಸಿಕೊಂಡೆ ಮಾಧವನೆಂಬ ಮಣಿ
ಮಾಲೆ ಧರಿಸಿಕೊಂಡೆ ಪ

ಮಾಲೆ ಧರಿಸಿಕೊಂಡೆ ನೀಲಶಾಮನದಿವ್ಯ
ಲೀಲೆ ಮೂಲೋಕಕ್ಕೆ ಮೇಲುಮೇಲುಯೆಂಬ ಅ.ಪ

ಭವದೂರ ಪಾದವಂದನೆಂಬ ಮುಕುಟ ಧರಿಸಿಕೊಂಡೆ
ಮಾದಮರ್ದನನಂಘ್ರಿಸ್ಮರಣೆಂಬ ಕರ್ಣಕುಂಡಲಿಟ್ಟುಕೊಂಡೆ
ಭುವನತ್ರಯದ ಮೇಲೆ ಜವನ ನಿರ್ಭಯಕೇಶವನ
ದಯವು ಎಂಬ ಭವದೊಳಗೆ ಹೊಕ್ಕು ೧

ಜಡಜನಾಭನಚರಣ ದೃಢವೆಂಬ ಮಡಿಯನುಟ್ಟುಕೊಂಡೆ
ಕಡಲಶಯನನಡಿಯ ಭಕ್ತೆಂಬ ಕವಚ ತೊಟ್ಟುಕೊಂಡೆ
ಪೊಡವಿಗಧಿಕ ಓರ್ವ ಒಡೆಯ ಹರಿ ಅಹುದೆಂಬ
ದೃಢನಿಶ್ಚಯದ ಮೇಲ್ಮಾಡಿನೊಳಗೆ ಕೂತು ೨

ಅಂಗಜಪಿತನೆಂಬ ಬಂಗಾರ ಕಂಕಣಿಟ್ಟುಕೊಂಡೆ
ರಂಗ ಕೃಷ್ಣನೆಂಬ ರತ್ನದ ಉಂಗುರಿಟ್ಟುಕೊಂಡೆ
ಮಂಗಲಮಯ ನೀಲಾಂಗ ಶ್ರೀರಾಮನಾಮ
ಚಂದ್ರಹಾರ ಹಾಕಿಕೊಂಡು ಶೃಂಗಾರನಾಗಿ ನಿಂತೆ ೩

೬೪೪

ಮುಚ್ಚ್ಯಾಕೆ ಮರೆಯಾಕ್ಹೆಚ್ಚೀತನೆ
ಅಚ್ಯುತ ಸಕಲಕ್ಕೆ ಅಧಿಕಿಹ್ಯನೆ ಪ

ಬಚ್ಚಿಟ್ಟುಕೊಂಡು ವೇದ ಕುಚ್ಛಿತ ದೈತ್ಯರೊಯ್ಯೆ
ಇಚ್ಛೆಗಾರ ಪಿತ ತಂದು ನಿಶ್ಚಯಗೈದ ಸೃಷ್ಟಿ ಅ.ಪ

ಸವೆಯದ ವರವನ್ನು ಹಿರಣ್ಯಕಶ್ಯಪನಿಗೆ
ಶಿವ ತಾನುಕೊಟ್ಟ ವೈಕುಂಠನ ಉದರ ಸೀಳಿ
ಜವದಿ ತ್ರಿಭುವನವ ದಯದಿ ಸಲಹಿದ ಸಿರಿ
ಧವ ನರಸಿಂಗನೆನಿಸಿ ೧

ಕೇಳಿದ ವರವನ್ನು ದುರುಳರಾವಣನಿಗೆ
ಪಾಲಿಸಿ ವರ ಶಂಭು ಹರಿಯನ್ನು ಅರ್ಚಿಸೆ
ಕೀಳುದೈತ್ಯನ ಕುಲಮೂಲ ತರಿದು ಸುರರ
ಪಾಲಿಸಿದನು ದಿವ್ಯ ಮೇಲುರೂಪವ ತಾಳಿ ೨

ದುರುಳಗೊಲಿದು ಶಿವ ಉರಿಹಸ್ತ ಕರುಣಿಸಿ
ಮರುಗುತ ಹರಿಯೆಂದು ಕರವೆತ್ತಿಕೂಗಲು
ಭರದಿ ಒದಗಿಬಂದು ಮೆರೆವೀ ಅಸುರನನ್ನು
ಉರಿಹಸ್ತ ಹರನಿಗೆ ವರವಿತ್ತ ಶ್ರೀರಾಮ ೩

೬೪೫

ಮುತ್ತಿ ಎನಗೆ ಬಡಿತವ್ವ ಹರಿ
ಭಕ್ತರ ಮನಿಯನ ದೆವ್ವ ಪ

ಅತ್ತಿತ್ತಮಾಡಿ ಬೆನ್ನತ್ತಿ ಬಿಡದೆ ಎನ್ನ
ನೆತ್ತಿಕೊಂಡು ಓಡ್ಹೋಯ್ತವ್ವ ಅ.ಪ

ಬಿದ್ದರೆ ಬೀಳಗೊಡಲಿಲ್ಲವ್ವ ಸುಮ್ಮ
ನಿದ್ದರೆ ಇರಗೊಡಲಿಲ್ಲವ್ವ
ಬುದ್ಧಿಭ್ರಮಿಸಿ ಬಲುಗದ್ದಲಮಾಡೆನ್ನ
ಮುದ್ದಿಟ್ಟೆಬ್ಬಿಸಿಕೊಂಡ್ಹೋಯ್ತವ್ವ ೧

ಉಟ್ಟದಟ್ಟಬಿಡಿಸೊಗಿತವ್ವ ಬಂದ
ಬಟ್ಟೆಯ ಎರವು ಮಾಡಿತವ್ವ
ವೊಷ್ಟು ಬಿಡಿಸಿ ಎನ್ನ ಗಟ್ಯಪ್ಪಿ ತಿರುಗದ
ಬೆಟ್ಟಕ್ಕೆ ಎಳಕೊಂಡ್ಹೋಯ್ತವ್ವ ೨

ಭೋರಿಟ್ಟತ್ತರು ಎನ್ನ ಬಳಗವ್ವ ಸಮೀ
ಪಾರನು ಬರಗೊಡಲಿಲ್ಲವ್ವ
ಸಾರಸೌಖ್ಯಕ್ಕಾಧಾರ ಶ್ರೀರಾಮಪಾದ
ಸೇರಿಸಾನಂದಪದವೇರಿಸಿತವ್ವ ೩

೬೪೬

ಯಾಕೆ ಸುಮ್ಮನೆ ಇದ್ದೆಪ್ಪ ಬಂದು
ಜೋಕೆ ಮಾಡು ಎನ್ನ್ನಡೆದಪ್ಪ ಪ

ಸಾಕಾರವಿಲ್ಲದ ಭವಕಪ್ಪ ಎನ್ನ
ನೂಕಬಾರದಿತ್ತೆನ್ನಪ್ಪ ಅ.ಪ

ಕೇಡಿನುಗಮ ಪ್ರಪಂಚಪ್ಪ ಇದು
ಮಾಡಿಟ್ಟ ಮಹ ಕಾಡಡವ್ಯಪ್ಪ
ಮೋಡಿ ಇಂದ್ರಜಾಲ ಛಾಯಪ್ಪ ತುಂಬಿ
ಮಾಡಿದ್ಯೋ ಬಲು ಮಂಗಮಲಕಪ್ಪ
ಗಾಢಾಂಧಾಕಾರಮಯ ಕಾಳಪ್ಪ ಎನ್ನೀ
ಕೇಡಿನಿಂದುಳಿಸು ಸದಾನಂದಪ್ಪ ೧

ತುಂಬಿ ಪ್ರಪಂಚವೆಂಬ ಬೈಲಪ್ಪ ಜಡ
ಬೊಂಬೆ ಕುಣಿಸುವಿ ಬಲು ಚಂದಪ್ಪ
ನಂಬಿದವರ ಅಂತರಂಗಪ್ಪ ನಿನ್ನ
ಕಾಂಬುವರರಾರು ಮಹಿಮೆ ಮೇಲಪ್ಪ
ನಂಬಿದೆ ನಿನ್ನ ಪಾದಪದುಮಪ್ಪ ಎನ
ಗಿಂಬುಪಾಲಿಸು ನಿಜ ಧರ್ಮಪ್ಪ ೨

ಧಾತ್ರಿ ಈರೇಳಕ್ಕೆ ರಾಜಪ್ಪ ಜಗ
ಸೂತ್ರಧಾರ ನೀನೆ ಸತ್ಯಪ್ಪ
ಭ್ರಾತೃ ಬಂಧು ನೀನೆ ಶರಣಪ್ಪ ಪಿತ
ಮಾತೃ ನೀನೆ ಎನ್ನ ಪಾಲಪ್ಪ
ಪಾತ್ರನೆನಿಸು ದಾಸಸಂಗಪ್ಪ ನಿನ್ನ
ಖಾತ್ರಿ ಕೊಡೆನಗೆ ಶ್ರೀರಾಮಪ್ಪ ೩

೬೪೭

ಯಾಕೊಲ್ಲ ಯಾಕೊಲ್ಲ ನಲ್ಲೆ ಸಂಪದ ಇವ
ಯಾಕೊಲ್ಲ ಯಾಕೊಲ್ಲ ಪ

ಅಲ್ಲಬೆಲ್ಲವನೊಲ್ಲ ನಲ್ಲೆಯಾದರವೊಲ್ಲ
ಒಲ್ಲನ್ಯಾಕವ್ವ ನಲ್ಲ ಇಲ್ಲದದಕೆ ಒಲ್ಲ ಅ.ಪ

ಮೇಲು ಮಾಲು ಒಲ್ಲ ನೀಲದುಪ್ಪರಿಗೊಲ್ಲ
ಶಾಲು ಸಕಲಾತೊಲ್ಲ ಶೀಲಮಂಚವನೊಲ್ಲ
ಹಾಲು ಅಮೃತ ಉಂಡು ವೀಳ್ಯ ಮೆಲ್ಲಲು ಒಲ್ಲ
ಬಾಲೆ ಯಾಕೊಲ್ಲ ಕೈಯೊಳಿಲ್ಲದದಕೆ ಒಲ್ಲ ೧

ರತ್ನದುಂಗುರ ಒಲ್ಲ ಮುತ್ತಿನ್ಹಾರ ಒಲ್ಲ
ಪುತ್ಥಳೀ ಚಿನ್ನ ಒಲ್ಲ ಕಸ್ತೂರಿಗಂಧ ಒಲ್ಲ
ಉತ್ತಮ ಹಯವನ್ನು ಹತ್ತಿ ಮರೆಯ ಒಲ್ಲ
ಮಿತ್ರೆ ಯಾತಕೊಲ್ಲ ಹತ್ತಿರಿಲ್ಲದದಕೊಲ್ಲ ೨

ಸತಿಯ ಸುತರನೊಲ್ಲ ಅತಿಭಾಗ್ಯವನೊಲ್ಲ
ಕ್ಷಿತಿ ಅಧಿಕಾರನೊಲ್ಲ ಛತ್ರ ಚಾಮರನೊಲ್ಲ
ಸತತ ಸೌಭಾಗ್ಯನೊಲ್ಲ ಮತಿಮಾನ್ಯವನೊಲ್ಲ
ಮತಿಯುತೆ ಯಾತಕೊಲ್ಲ ಗತಿಯಿಲ್ಲದದಕೊಲ್ಲ ೩

ಭೋಗಭಾಗ್ಯ ಒಲ್ಲ ರಾಗರಚನೆಯೊಲ್ಲ
ಭೋಗದಾಸೆಗೆ ತಲೆದೂಗಿ ಒಲಿಯ ಒಲ್ಲ
ತೂಗುಮಂಚವೇರಿ ತೂಗಿಸಿಕೊಳ್ಳಲೊಲ್ಲ
ಸುಗುಣೆ ಯಾಕೊಲ್ಲ ಕೈಸಾಗದದಕೆ ಒಲ್ಲ ೪

ಜಾಣತನದಿ ಧನಧಾನ್ಯಗಳಿಸಲೊಲ್ಲ
ಜಾಣ ಜನರ ಕೂಡಿ ಮಾನ ಪಡೆಯಲೊಲ್ಲ
ಜಾಣೆ ಏನಾಶ್ಚರ್ಯ ಏನು ಯಾಕೆ ಒಲ್ಲ
ಪ್ರಾಣೇಶ ಶ್ರೀರಾಮ ತ್ರಾಣಕೊಡದದಕೊಲ್ಲ ೫

೬೪೮

ಯಾತ್ರಕ್ಕೆ ಬಂದಿರ್ದೆನೋ ಭುವನ
ಯಾತ್ರ ಮಾಡುವೆನು ಪ

ಧಾತ್ರಿ ಈರೇಳಕ್ಕೆ ಸೂತ್ರಧಾರನ ಕೃಪಾ
ಪಾತ್ರನಾಗಿ ಪವಿತ್ರನಾಗುವೆನು ಅ.ಪ

ದೇಶ ತಿರುಗುವೆನು ದೇಹ್ಯದ
ವಾಸನೆ ತೊಡೆಯುವೆನು
ಆಶಾಪಾಶ ನೀಗಿ ದೋಷರಹಿತನಾಗಿ
ದಾಸಜನಕೆ ಬಾಗಿ ಸಂತೋಷ ಪಡೆಯುವೆನು ೧

ಪೃಥ್ವಿ ತಿರುಗುವೆನು ಹುಡುಕಿ
ಸತ್ಯರ ಕಾಂಬುವೆನು
ನಿತ್ಯನಿರ್ಮಲ ಹರಿಭಕ್ತಿ ಕವಚ ತೊಟ್ಟು
ಮತ್ತೆ ಸಾವ್ಹುಟ್ಟುವ ಕುತ್ತ ಗೆಲಿಯುವೆನು ೨

ಕ್ಲೇಶವ ತರಿಯುವೆನು ಮಾಯ
ಮೋಸವ ಗೆಲಿಯುವೆನು
ದಾಸಜನರ ಪ್ರಾಣೇಶ ಶ್ರೀರಾಮನ
ದಾಸನಾಗಿ ಮುಕ್ತಿ ಆಸನೇರುವೆನು ೩

೬೪೯

ರತುನ ಸಿಕ್ಕಿದೆ ತಮ್ಮ ಇದು ಬಹು
ಜತನೆಲೋ ನಿಸ್ಸೀಮ ರತುನ ಸಿಕ್ಕಿದೆ ಪ

ನಿನ್ನ ಸುಕೃತದ ಫಲದಿಂದ
ಪತಿತಪಾವನ ಸಿರಿಪತಿ ವಿಮಲನಾಮ ಅ.ಪ

ದುರಿತ ದಾರಿದ್ರ್ಯವಿಲ್ಲದ ಈ ರತ್ನದಿಂ
ಜರಮರಣಂಟಿಲ್ಲ
ನರಹರಿ ವರಪಾದ ಶರಣರು ಪರಕ್ಕೆ
ಪರಮ ಗೌಪ್ಯದಿಂದ ಶೋಧಿಸುತಿರುವಂಥ ೧

ತಾಪತ್ರಯಗಳಿಲ್ಲ ಈ ರತ್ನದಿಂ
ಪಾಪ ಶಾಪವಿಲ್ಲ
ಪಾಪಿಯಮದೂತರ ಲೋಪಗೈದಯ ಭಯ
ಆಪಾರ ಪರಲೋಕ ಸೋಪಾನಕ್ಹಚ್ಚುವ ೨

ಧರ್ಮಕೆ ಕೊಡು ನದರ ಈ ರತ್ನದ
ಮರ್ಮ ತಿಳಿಯೆ ಚದರ
ಬ್ರಹ್ಮ ಬ್ರಹ್ಮಾದಿಗಳೊಮ್ಮನದ್ದೊಗಳುತ
ನಿರ್ಮಲಾಗುವ ಪರಬ್ರಹ್ಮ ಶ್ರೀರಾಮನೆಂಬ ೩

೬೫೦

ವನಜಾಕ್ಷ ಎನಗ್ಯಾಕೆ ಘನತರ ಅಪರಾಧ
ಎನಗೆ ಆಧೀನವೇನು ವಿಶ್ವವ್ಯಾಪಕ ನೀನೆ ಪ

ನಾ ನುಡಿವುದೆಲ್ಲ ನಿನ್ನ ನಿಜವಾದ ಮಂತ್ರವು
ನಾ ನಡೆವುದೆಲ್ಲ ನಿನ್ನ ಯಾತ್ರವೆಲೋ ದೇವನೆ
ನಾ ಬೇಡುವುದೆಲ್ಲ ನಿನ್ನ ವಿಮಲಾತ್ಮ ಪ್ರಸನ್ನತೆ
ನಾ ತೊಡುವುದೆಲ್ಲ ನಿನ್ನ ಪರಮಕೃಪಾಕವಚ ೧

ನಾನುಂಬುವುದೆಲ್ಲ ನಿನ್ನ ಕರುಣ ಪ್ರಸಾದವು
ನಾ ಕುಡಿವುದೆಲ್ಲ ನಿನ್ನ ಚರಣ ಉದಕವಯ್ಯ
ನಾ ಬಯಸುವುದೆಲ್ಲ ನಿನ್ನ ಪ್ರೇಮಾಮೃತವು
ನಾನಿರುವುದೆಲ್ಲ ನಿನ್ನ ಭಜನಮಂದಿರವು ೨

ನಾ ಕೇಳುವುದೆಲ್ಲ ನಿನ್ನ ಧರ್ಮಕಥಾಶ್ರವಣವು
ನಾ ಪೇಳ್ವುದೆಲ್ಲ ನಿನ್ನ ಚರಣಸುಚರಿತ
ನಾನು ಮಾಡುವುದೆಲ್ಲ ನಿನ್ನ ಪೂಜೆಯು
ನಾನನುಭವಿಪುದು ಎಲ್ಲ ಶ್ರೀರಾಮನಾಟವು ೩

೬೫೧

ವಾದಿಸಿ ಗತಿಹ್ಯದೇನಣ್ಣ ನಿಜ
ಹಾದಿತಿಳಿದು ನೋಡೆಲೊ ಜಾಣ ಪ

ವಾದ ಭೇದ ನೀಗಿ ಮಾಧವನ ಮಹ
ಪಾದ ಮಹಿಮೆಯನು ಕಾಣಣ್ಣ ಅ.ಪ

ವೇದಕೆ ನಿಲುಕದ ಮಾತಣ್ಣ ನಿನ್ನ
ವಾದಕೆ ಸುಲಭರುತಿಪ್ಪದೇನ
ವೇದಸ್ಮೃತಿಯ ನಿಜಬೋಧನರಿದು ಯಮ
ಬಾಧೆ ಗೆಲಿದು ಭವ ತುಳಿಯಣ್ಣ ೧

ವಾಸನೆ ಹಸನ ಮಾಡಣ್ಣ ಮನ
ದಾಸೆ ದ್ವೇಷಗಳ ಕಡಿಯಣ್ಣ
ಶ್ರೀಶನ ದಾಸರ ವಾಸದಿರ್ದು ಅನು
ಮೇಶ ಈಶನ ಪಾದ ಭಜಿಸಣ್ಣ ೨

ಹಮ್ಮು ಚುಮ್ಮುಗುಣ ನೀಗಣ್ಣ ಕಾಯ
ಕರ್ಮ ಕಡಿದು ನಿರ್ಮಲಾಗಣ್ಣ
ನಿರ್ಮಲಾತ್ಮ ಪರಬ್ರಹ್ಮ ಶ್ರೀರಾಮನ
ಮರ್ಮ ತಿಳಿದು ಮುಕ್ತಿ ಕೂಡಣ್ಣ ೩

೬೫೨

ಶ್ರೀಶನ ಚರಣದಾಸನಾಗಿರ್ದರೆ
ಆಶಾಪಾಶ ನೀಗಿರಬೇಕು ಪ

ಈಶನರಿತ ಗುರು ಶಿಷ್ಯನಾಗಿರ್ದರೆ
ದೂಷಣ ಭೂಷಣ್ಹೋಗಿರಬೇಕು ಅ.ಪ

ಹರಿಸರ್ಮಣಾಮೃತ ಸುರಿವನಾಗಿರ್ದರೆ
ಧರೆಯ ಭೋಗ ಮೀರಿರಬೇಕು
ಪರತತ್ವದ ಮೂಲರಿತವನಾದರೆ
ಮರವೆ ಮಾಯ ಹಾರಿರಬೇಕು ೧

ವೇದ ವೇದಾಂತವ ಸಾಧಕನಾದರೆ
ವಾದ ವಾಂಛಲ್ಯವ ತೊಡೆದಿರಬೇಕು
ಬೋಧ ಪಡೆದು ನಿಜ ಸಾಧುವಾದರೆ
ನಾದಶಬ್ದವಡಗಿರಬೇಕು ೨

ಮಾನಸಪೂಜೆಯ ಖೂನ ಬಲ್ಲ್ಯಾದರೆ
ತಾನು ತನ್ನನು ಅರಿತಿರಬೇಕು
ಧ್ಯಾನವಿಡಿದು ನಿಜಜ್ಞಾನಿಯಾದರೆ
ಮಾನಭಿಮಾನಕ್ಕೊರತಿರಬೇಕು ೩

ಬೋಗದ್ವಾಸನ್ಹಿಂಗಿ ಭಾಗವತನಾದರೆ
ಕೂಗಿನ ನೆಲೆ ತಿಳಿದಿರಬೇಕು
ಯೋಗ ಬಲಿಸಿ ಮಹಯೋಗಿಯಾದರೆ
ರಾಗರಹಿತನಾಗಿರಬೇಕು ೪

ಲಿಂಗವ ಧರಿಸಿ ಜಂಗಮನಾದರೆ
ಸಂಗರಹಿತನಾಗಿರಬೇಕು
ಅಂಗ ಮೂರು ನೀಗಿ ಲಿಂಗ ತಾನಾದರೆ
ಲಿಂಗಾಂಗ ಸಮರಸ ತೋರಬೇಕು ೫

ಸತ್ಯವರಿತು ಸತ್ಪುರುಷನಾದರೆ
ಸತ್ತಂತೆ ಜಗದೊಳಿರಬೇಕು
ಮೃತ್ಯುಗೆಲಿದು ಪರಮಾರ್ಥಿಕನಾದರೆ
ಮರ್ತ್ಯರ ಗುಣ ಮರ್ತಿರಬೇಕು ೬

ಘೋರ ಭವಾಂಬುಧಿ ಪಾರುಗಂಡಿರ್ದರೆ
ಪಾರ ಹಾರ್ರೈಕೆ ಅಳೆದಿರಬೇಕು
ಸಾರಮೋಕ್ಷ ತನ್ನ ಸೇರಬೇಕಾದರೆ
ಧೀರ ಶ್ರೀರಾಮನೊಲಿಸಿರಬೇಕು ೭

೬೫೩

ಸಕಲಕ್ಕೆ ನೀನೆ ಸ್ವತಂತ್ರನಾಗಿರ್ದು
ಅಖಿಲೇಶ ಎನ್ನ ಸ್ವತಂತ್ರನೆನಿಸಿ ಕೊಲ್ಲುವರೆ ಪ

ನೀನೆ ನಡೆಸಲು ನಡೆವೆ ನೀನೆ ನುಡಿಸಲು ನುಡಿವೆ
ನೀನೆ ಆಡಿಸಲಾಡ್ವೆ ಕಾಣುವ ಸೂತ್ರ ಬೊಂಬ್ಯಂತೆ

ನಾನಾಪರಿಯಲಿ ಎನಗೆ ಹೀನ ಬವಣ್ಯಾತಕೊ
ದೀನಜನ ಭಂಧುವೆ ನೀನೆ ನೀಖಿಲೇಶ ೧

ಅಡವಿ ಮಹದಾರಣ್ಯ ಗಿಡ ಗುಡ್ಡ ಗಂಹ್ವರ
ಕಡುಕ್ಷೇತ್ರ
ಮೊದಲಾದ ಇಡಿ ಬ್ರಹ್ಮಾಂಡಗಳ
ಬಿಡದೆ ಉದರದೊಳಿಟ್ಟು ಅಡಗಿ ಮತ್ತದರೊಳಗೆ
ನಡೆಸುವಿಯೆಲೊ ಸೃಷ್ಟಿ ಕಡುಚಿತ್ರಮಹಿಮ ೨

ನಿನ್ನ ಮಹಿಮಿದು ಎಲ್ಲ ಭಿನ್ನವಿದರೊಳೊಂದು
ಎನ್ನನು ಈ ಪರಿ ಬನ್ನ ಬಡಿಸುವುದು
ಇನ್ನಿದು ತರವಲ್ಲ ಪನ್ನಂಗಶಯನನೆ
ಮನ್ನಿಸಿ ಪೊರೆ ದಯದಿ ಎನ್ನಯ್ಯ ಶ್ರೀರಾಮ ೩

೬೫೪

ಸತ್ಯವೋ ಏನು ಮಿಥ್ಯವೋ ಚಿತ್ತಜಪಿತ
ಭಕ್ತವತ್ಸಲನೆಂಬೋಕ್ತಿ ಪ

ಕಷ್ಟನಿವಾರ ಭಕ್ತರಿಷ್ಟದಾಯಕನೆಂದು
ಅಟ್ಟಹಾಸದಿ ವೇದ ಕಟ್ಟಳಿಲ್ಲದೆ ಕೂಗ್ವುದು ೧

ಧಾತ್ರಿತ್ರಯಕೆ ತಾನೆ ಸೂತ್ರಧಾರಕನೆಂದು
ಸ್ತೋತ್ರ ಪೊಗಳಿದು ಮನು ಗೋತ್ರರ್ವಚನಂಗಳು ೨

ಭಕ್ತವತ್ಸಲ ನೀನು ಸತ್ಯವಾಗಿರ್ದೊಡೆ
ಭೃತ್ಯನ ಮನಕೀಗ ಪ್ರತ್ಯಕ್ಷಾಗಲಿ ರಾಮ ೩

೬೫೫

ಸತ್ಯ ಸರ್ವೋತ್ತಮಸ್ವಾಮಿ ನಿತ್ಯ ನಿರುಪಮ
ನಿತ್ಯಾನಂದ ನಿಮ್ಮ ನೆನವು ನಿತ್ಯ ಎನ್ನ ಚಿತ್ತದಿ ನಿಲಿಸು ಪ

ಮರವೆ ಮಾಯದೆ ಕೆಟ್ಟ ಪರದೆಯೊಳ್ಸದಾ
ಬೆರೆದು ಶ್ವಾನಸೂಕರನಂತೆ
ಚರಿಸಿದೆ ಧರೆಭೋಗ ನೆಚ್ಚಿ
ನರಜನ್ಮ ವಿವರಿಸಿ ನೋಡದೆ
ಮರುಳತನದಿ ನರಕಿಯಾದೆ ೧

ಮೃತ್ಯುಗೀಡಾದೆ ತವಭೃತ್ಯನೆನಿಸದೆ
ಸುತ್ತಿ ಸುತ್ತಿ ಇಹ್ಯಕೆ ಪರಕೆ
ಕತ್ತೆಯಂತೆ ತಿರುಗಿ ತಿರುಗಿ
ಮರ್ತು ನಿನ್ನ ಚರಣ ಮರ್ತ್ಯದಿ
ನಿತ್ಯಸುಖವ ಪಡೆಯದ್ಹೋದೆ ೨

ಭೇದ ನೀಗದೆ ಭವಬಾಧೆಗೊಳಗಾದೆ
ಆದದ್ದಾಗಿಹೋಯಿತಭವ
ವೇದಾಗಮ್ಯ ಪದುಮನಾಭ
ಪಾದನಂಬಿದೆ ಪಾಲಿಸಿನ್ನು
ಮೋದದೆನ್ನನೆತ್ತಿ ಶ್ರೀರಾಮ ೩

೬೫೬

ಸತ್ತು ಚಿತ್ತಾನಂದ ಭಕ್ತಜನಬೆಂಬಲನೆ
ಸತ್ಯಾತ್ಮ ಸರ್ವೋತ್ತಮ ಪ

ಮೃತ್ಯುಸಂಹರ ಸರ್ಗಮರ್ತ್ಯಪಾತಾಳತ್ರಯ
ಪೊತ್ತು ಆಳ್ವ ಸೂತ್ರಧಾರಿ ಶೌರಿ ಅ.ಪ

ಬದ್ಧಕುಲಹರಣ ಗೋವರ್ಧನೋದ್ಧಾರ ಕ್ಷೀ
ರಾಬ್ಧಿ ಕನ್ನಿಕಾರಮಣ
ಬದ್ಧಸಂಸಾರದೊಳಗೆ ಬಿದ್ದು ಬಳಲುವ ಎನ್ನ
ನುದ್ಧರಿಸು ದಯಭೂಷಣ
ಬಿದ್ದೆ ನಿಮ್ಮಯಪದಕೆ ಮಧ್ವಮುನಿಪ್ರಿಯನೆ ಪರಿ

ಶುದ್ಧನೆಂದೆನಿಸೆನ್ನ
ಶುದ್ಧಪದ್ಧತಿಗಳನು ತಿದ್ದು ಎನ್ನೊಳಗಿದ್ದು
ಶುದ್ಧಚೈತನ್ಯರೂಪ ಭೂಪ ೧

ಕಪಟಬುದ್ಧಿಯ ಕಳೆದು ಅಪರೂಪ ನಿಜಜ್ಞಾನ
ಕೃಪೆಮಾಡು ಭಕ್ತಲೋಲ
ಅಪರೋಕ್ಷಮತಿ ನೀಡಿ ಅಪಮೃತ್ಯು ಪರಿಹರಿಸು
ಅಪರಿಮಿತ ಮಹಿಮ ಜಾಲ
ಸುಫಲದಾಯಕ ನಿಮ್ಮ ಜಪವೆನ್ನ ಜಿಹ್ವೆಯೊಳು
ಸ್ಥಾಪಿಸೈ ಭಜಕಜನಪಾಲ
ಕಪಿವರದ ವನಮಾಲ ಕಪಟಗಳಕುಲಕಾಲ
ಕೃಪಾದೃಷ್ಟಿನೀಡೆನ್ನೊಳು ಕೇಳು ೨

ಭ್ರಷ್ಟನು ಇವನೆಂದು ಬಿಟ್ಟಿ ಬೇಸರ ಬೇಡ
ಮುಟ್ಟಿಭಜಿಪೆ ತವಪಾದವ
ಎಷ್ಟು ತಪ್ಪಿರ್ದರು ಸುಟ್ಟು ಸಫಲೆನಿಸೆನ್ನ
ಕೆಟ್ಟ ಬವಣೆ ಕಳಿಯಭವ
ಹುಟ್ಟಿ ಸಾಯುವ ಮಹಕೆಟ್ಟ ಕಷ್ಟದ ಹಾದಿ
ಕಟ್ಟುಮಾಡು ಹೇ ಮಾಧವ
ದಿಟ್ಟ ಶ್ರೀರಾಮ ಎನ್ನ ಇಷ್ಟದೇವರು ನೀನೆ
ಶಿಷ್ಟ ಸಜ್ಜನರ ಪ್ರೇಮಿ ಸ್ವಾಮಿ ೩

೬೫೭

ಸರ್ವಾಂತರ್ಯಾಮಿ ಸರ್ವೇಶ ಬಾರೊ
ಸರ್ವಸ್ವತಂತ್ರನೆ ಸರ್ವಭಯನಾಶ ಪ

ಸರ್ವತಂತ್ರನೆ ಸರ್ವವೇದದಿ
ಸರ್ವತತ್ತ್ವದಿ ಸರ್ವಸಾಕ್ಷಿ ನೀ
ಸರ್ವವ್ಯಾಪಕ ಸರ್ವದೇವರ ಸಾರ್ವಭೌಮ ಅ.ಪ

ಜಡಬೊಂಬೆ ನಾಟಕರಚಿಸಿ
ಎಡಬಿಡದೆ ಕುಣಿಸ್ಯಾಡುವಿ ಕಡುಮೋಹಗೊಳಿಸಿ
ಕಡುಗೌಪ್ಯದದರೊಳು ನೆಲೆಸಿ ನೀನೆ
ನುಡಿಸುವಿ ಅಗಣಿತ ಕಲ್ಪನೆವೆರಸಿ
ಜಡಕೆ ಜಡವಾದ ತೊಡರಿನಾಟದ
ಕೆಡಕು ತಪ್ಪಿಸಿ ಪಿಡಿದು ಎನ್ನನು
ಒಡೆಯ ನಿನ್ನಡಿ ಭಕ್ತರಾವಾಸ
ದಿಡು ಎಂದೆರಗುವೆ ಪಾಲಿಸಭಯ ೧

ನಾನಾವಿಧದ ಸೃಷ್ಟಿಗಳ ಸೃಜಿಸಿ
ಪೋಣಿಸಿ ಮಾಡಿಟ್ಟೆ ಭವವೆಂಬ ಮಾಲೆ
ಏಳು ಮೋಹವ ತುಂಬಿದೆಲ ಪುಸಿ
ಕಾಣದಂತೊಗೆದಿ ಮಹಾಮಾಯದ ಜಾಲ
ನಾನು ನೀನೆಂಬ ಜಾಣರೆಲ್ಲ ಬಿದ್ದು
ಏನುಕಾಣದೆ ತ್ರಾಣಗೆಟ್ಟರು
ಹೀನಮತಿ ನಾನೇನು ಬಲ್ಲೆನು
ನೀನೆ ಸಲಹೆನ್ನ ದೀನರಕ್ಷಕ ೨

ಪಾವನ ಪರಮಪ್ರಕಾಶ ದೇವ
ಭಾವಜನಯ್ಯ ನಿಜಭಾವಿಗಳರಸ
ಕೇವಲಸುಗುಣಾಂತರ್ವಾಸ ನಿನ್ನ
ಸೇವಕನೆನಿಸೆನ್ನ ಕಾಯೊ ನುತಪೋಷ
ಜೀವಜೀವರಜೀವ ಚೈತ್ಯನದೇವ
ದೇವರ ದೇವ ನಂಬಿದೆ ಜಾವ
ಜಾವಕೆ ಒದಗುತಿಪ್ಪ ಮಹ
ನೋವು ಗೆಲಿಸೆನ್ನಯ್ಯ ಶ್ರೀರಾಮ ೩

೬೫೮

ಸುಜ್ಞಾನಿ ನಡೆ ಬೇರೆ ಅಜ್ಞಾನಿ ನಡೆ ಬೇರೆ
ಜ್ಞಾನದಿಂದ ಪ್ರಮಾಣಿಸಿ ನೋಡಲು ಪ

ಸುಜ್ಞಾನಿ ನುಡಿಯದರ ಕಡೆತನಕ
ಅಜ್ಞಾನಿ ನುಡಿ ಸದಕ
ಸುಜ್ಞಾನಿಯನುಡಿ ಒಂದೆ ನಿರ್ಧಾರ
ಅಜ್ಞಾನಿಯ ನುಡಿ ಪದರುದರ ೧

ಸುಜ್ಞಾನಿ ಬಾಳು ಭವಲೂಟಿ ಕಡೆತನ
ಅಜ್ಞಾನಿ ಬಾಳು ಸುಳ್ಳು ಮುಷ್ಟಿ
ಸುಜ್ಞಾನಿಯ ವರ್ತನೆ ವಜ್ರದಗಟ್ಟಿ
ಅಜ್ಞಾನಿವರ್ತನೆ ಗಾಳಿಯ ಮೊಟ್ಟೆಮೊಟ್ಟೆ ೨

ಸುಜ್ಞಾನಿಗೆ ಮುಕ್ತಿಪಟ್ಟ ಕಡೆತನ
ಅಜ್ಞಾನಿಗೆ ಮೃತ್ಯುಕಾಟ
ಅಜ್ಞಾನಿಕಾಣುವ ಯಮನಗೂಟ
ಸುಜ್ಞಾನಿ ಕಾಣುವ ಶ್ರೀರಾಮನಾಟ ಆಟ ೩

೬೫೯

ಸುಮ್ಮನೆ ಹೊಗಳಿದರ್‍ಯಾತಕೀತನ ಪರ
ಬ್ರಹ್ಮ ಪರಮಾತ್ಮಲ್ಲ್ಯಾನ ಪ

ರಮ್ಮೆ ಮಾಡಿ ಬಲುಜಮ್ಮಾಸಿ ಮನುಗಳು
ದಿಮ್ಮಾಕಿನಿಂದ ವೇದಸ್ಮೃತಿಯನ್ನು ಅ.ಪ

ಎಲ್ಲಿ ಕರೆಯಲಿಲ್ಲ್ಯಾನಂತೆ ಸುಳ್ಳೆ
ಸಲ್ಲದ ಮಾತ್ಹೇಳಿಹ್ಯರಿಂತೆ
ಸೊಲ್ಲು ಸೊಲ್ಲಿಗೆ ನಾನೆಲ್ಲೆಲ್ಲಿಕೂಗಲು
ಕಲ್ಲಿಗು ಕಡೆಯಾಗಿರುವ ಪುಲ್ಲನಾಭ ೧

ಭಕ್ತ ರಕ್ಷಕನೆಂಬ ಬಿರುದಂತೆ ಇವ
ಹೊತ್ತುಕೊಂಡು ಇರುತಿಹ್ಯನಂತೆ
ಅರ್ತುಕೊಂಡು ನಾ ನಿರ್ಕಾಗಿ ಭಜಿಸಲು
ಸಾರ್ಥಕಮಾಡವಲ್ಲ ಕರ್ತನೆಂಬಂಥವ ೨

ಮೊರೆಯಿಟ್ಟು ಭಕ್ತರಪ್ರಿಯಬಂಧು ಮಹ
ಕರುಣಾಳು ಶ್ರೀರಾಮನೆ ಎಂದು
ಪರಿಪರಿಯಲಿ ಈ ಪರಿ ಸ್ಥಿರವಾಕ್ಯವೇ
ನರಿತು ಪೊಗಳಿದರು ಪರಮ ಪಾವನರು ೩

೬೬೦

ಸೂತ್ರಧಾರಿ ಶೌರಿ ಸುರಸೇವ್ಯ ಸುಜನಾತ್ಮ
ಸತ್ಯ ಆನಂದ ತವಸೇವೆ ನೀಡೆನಗೆ ಪ

ಕೊಡು ಎನ್ನ ಕರ್ಣಕ್ಕೆ ದೃಢಮಾಡು ವಚಶ್ರವಣ
ಬಿಡದೆನ್ನ ನಯನಕ್ಕೆ ಇಡು ನಿನ್ನ ದರ್ಶನವ
ನುಡಿಸೆನ್ನ ವದನದಿಂ ಕಡು ಸತ್ಯವಚನವನು
ಎಡಬಿಡದೆ ಜಿಹ್ವೆಕ್ಕೆ ನೀಡು ತವಧ್ಯಾನ ೧

ಒದಗಿಸ್ಯೆ ಕೈಗೆ ತವಪಾದಪದುಮ ಸೇವಾ
ಹೃದಯಕ್ಕೆ ಕರುಣಿಸು ಸದಮಲ ಸುಶಾಂತಿ
ಸದಯಾತ್ರ ನೀಡೆನ್ನ ಪಾದಕ್ಕೆ ಪುಣ್ಯಸ್ಥಳ
ವಿಧವಿಧದಿ ಬೇಡ್ವೆ ನೀನು ದಯನಾಗೆನ್ನೊಳಗೆ ೨

ಚಿತ್ತಕ್ಕೆ ಸ್ಥಿರನೀಡು ಸ್ವಸ್ಥತೆ ಕೊಡು ಮನಕೆ
ಸತ್ಯರಿಗೆ ಮಣಿಸೆನ್ನ ಮಸ್ತಕವ ಸತತ
ನಿತ್ಯ ಪರಿಪೂರ್ಣ ಮಮ ಕರ್ತ ಶ್ರೀರಾಮ ನಿನ್ನ
ಭಕ್ತನೆಂದೆನಿಸೆನ್ನ ಮುಕ್ತಿ ಪಥಕ್ಹಚ್ಚು ೩

೬೬೧

ಹರಿ ನಿಮ್ಮ ಮಹಿಮೆ ಅರಿಯರಾರಾರು
ನರ ಮನುಜರ ಪಾಡೇ
ಸುರಮುನಿಗಳೆ ನಿನ್ನರಸಿ ಕೊಂಡಾಡಲು
ದೊರೆಯದಿರುವಿ ಘನ ಪರತರಮಹಿಮ ಪ

ದುಷ್ಟರ ಶಿಕ್ಷಿಸಿ ಶಿಷ್ಟರ ಪೊರೆಯುತ
ಸೃಷ್ಟಿಗೊಳಿಸುತಿರುವಿ
ಇಷ್ಟಭಕುತರ ಕಷ್ಟ ನಿವಾರಿಸಿ
ಇಷ್ಟಪೂರ್ರೈಸುತಿರುವಿ
ನಿಷ್ಠೆಯಿಂದ ಮನಮುಟ್ಟಿಭಜಿಪರನು
ಬಿಟ್ಟಗಲದೆ ದೃಷ್ಟಿಯಿಂ ನೋಡುವಿ ೧

ಬೇಸರವಿಲ್ಲದೆ ದಾಸರ ಮನದಭಿ
ಲಾಷೆಯ ನೀಡುತಲಿ
ಕೇಶವ ಗತಿಯೆನೆ ಘಾಸಿ ಮಾಡದೆ
ದೋಷರಾಶಿಯ ಕಳೆಯುತಲಿ
ಪೋಷಿಸಿ ತ್ರಿಜಗದೀಶನೆ ಈ ಭವ
ಪಾದವ ಖಂಡಿಸಿ ವಾಸುಕಿಶಯನ ೨

ಮನಸಿಜಾರಿಯಂ ಘನಸಂಕಟದಿಂದ
ಕನಿಕರದಿಂ ಕಾಯ್ದಿ
ದನುಜಕುಲವನು ಹಣಿದು ಸುರರಿಗೆ
ಘನಸೌಖ್ಯವನ್ನಿತ್ತಿ
ತನುಮನ ಧನದಿಂ ನೆನೆಯುವ ಭಕುತರ
ನೆನವಿಗೆ ಸಿಲುಕದಿ ಚಿನುಮಯ ರಾಮ ೩

೬೬೨

ಹರಿಸರ್ವೋತ್ತಮನೆಂದರಸುವರು ಪ

ಹರಿದಾಸರಿವರು ಧರೆಯೊಳಿವರಿಗೆ
ಸರಿಗಾಣೆ ಕೇಳಮ್ಮ ಜಾಣೆ ಅ.ಪ

ಸಾಧುಸಜ್ಜನರಿಗೆ ಬಾಗುವರು
ವೇದಕೆ ನಮಿಸುವರು
ವಾದವಾಂಛಲ್ಯವ ತೊಡದಿಹ್ಯರು
ಭೇದಿಲ್ಲದಿವರು ೧

ಕಾಮ ಕ್ರೋಧಾದಿಗಳು ಜೈಸಿಷ್ಯರು
ತಾಮಸಬಿಟ್ಟಿಹರು
ಭೂಮಿ ಮೋಹಾದಿಗಳನಳಿದಿಷ್ಯರು
ಸ್ವಾಮಿನ ಭಜಿಸುವರು ೨

ಕ್ಲೇಶಪಂಚಕದಿಂದುಳಿದಿಷ್ಯರು
ಮೋಸಕೆ ಒಳಪಡರು
ಅಶಪಾಶಗಳೆಲ್ಲ ತುಳಿದಿಷ್ಯರು
ವಾಸನೆ ತೊಳೆದಿಷ್ಯರು ೩

ಮೆಚ್ಚದೆ ಸಂಸಾರ ತುಚ್ಛೀಕರಿಸಿಷ್ಯರು
ಎಚ್ಚರಗೊಂಡಿಷ್ಯರು
ಅಚ್ಚುತಾನಂತನೆ ಗತಿಯೆಂಬುವರು
ಬಚ್ಚಿಟ್ಟು ನೆನೆಯುವರು ೪

ಹರಿಯೆ ಪರದೈವವೆಂದರಿತಿಷ್ಯರು
ಹರಿಯ್ಹೊರತಿಲ್ಲೆಂಬುವರು
ಸರುವ ಜಗಭರಿತನೆಂದವರು
ಸಿರಿರಾಮನ್ನ ತಿಳಿದಿಷ್ಯರು ೫

೬೬೩

ಹಿತವಾವುದದೆ ಪಥದಿ ಸತತದೆನ್ನಿರಿಸೊ
ಮತಿಹೀನನ್ಹಿತದ ಪಥವರಿಯೆ ಹರಿಯೆ ಪ

ಅರಿವಿಗರಿವು ನೀನು ಮರೆಯಮಾನವ ನಾನು
ಹರಿದಾಸರರಸ ನೀ ಚರಣದಾಸನು ನಾನು
ದುರಿತ ಪರಿಹರ ನೀನು ದುರಿತಕಾರಿಯು ನಾನು
ದುರಿತ ಪರಿಹರಿಸೆನ್ನ ಪೊರೆಯೊ ಸಿರಿದೊರೆಯೆ ೧

ಜೀವಜೀವೇಶ ನೀ ಜೀವನಾಧಾರ ನೀ
ಪಾವನೇಶ್ವರ ನೀ ಭಾವಿ ಭಕ್ತನು ನಾ

ಭವರೋಗದ್ವೈದ್ಯ ನೀ ಭವದ ರೋಗಿಯು ನಾನು
ಭವರೋಗ ಪರಿಹರಿಸಿ ಪಾವನನೆನಿಸಭವ ೨

ನಾಶರಹಿತನು ನೀನು ನಾಶಕಾರಿಯು ನಾನು
ನಾಶನದಿಂದುಳಿಸೆನ್ನ ಪೋಷಿಸಲಿ ಬೇಕೊ
ಧ್ಯಾನಿಪೆನು ಅನುದಿನ ಮೀಸಲಮನದಿಂದ
ಶ್ರೀಶ ಶ್ರೀರಾಮ ನಿಮ್ಮ ದಾಸನೈ ನಾನು ೩

೬೬೪

ಹೊಡಿ ಚೋಕ ಒಡೆಯ ಶ್ರೀ ಹರಿಪಾದ
ಪೊಡವಿತ್ರಯದಧಿಕೆಂದು ಪ

ಸಾಧು ಸಜ್ಜನರಿಗೆ ಆಧಾರವಾದ ಪಾದ
ವೇದ ಉದ್ಧರಿಸಿದ ಪಾದ ಬಹು ಮಿಗಿಲೆಂದು ೧

ಪಾರವಾರಿಧಿ ಕಡೆದು ಪೀರಿದಮೃತಪಾದ
ಘೋರರಕ್ಕಸರೊದೆದಪಾರಮಹಿಮ ಪಾದೆಂದು ೨

ಗೋವಳರಾಳಿದ ಪಾವನ ಶ್ರೀಪಾದ
ದೇವ ಶ್ರೀರಾಮಪಾದಕಾವಪಾದೀಡಿಲ್ಲೆಂದು ೩

೬೬೫

ಹೊತ್ತಾಗಿ ಹೊರಟಿಹೆನು ವೈಕುಂಠಕೆ
ಮುಟ್ಟಬೇಕು ನಾನು ಪ

ಹೊತ್ತಾಗಿ ಹೊರಟಿಹೆ ಹೊತ್ತುಗಳೆದು ವ್ಯರ್ಥ
ವತ್ತರದಿಂ ಪೋಗಿ ಹೊತ್ತೆ ಮುಟ್ಟಬೇಕು ಅ.ಪ

ಊರುದೂರಾದಿನ್ನು ಕೇಳದೆ
ಅರುಮಾತನಾನು
ಊರಜನರ ಮಾತು ಮೀರಿ ಆತುರದಿಂದ
ಪಾರವಾರಿಲ್ಲದ ವಾರಿಧಿಯನೀಸಿ ೧

ದಾರಿ ಅರಿಯೆ ನಾನು ಬಲ್ಲವರು
ತೋರಿರೆ ಮಾರ್ಗವನು
ಸಾರಮೋಕ್ಷಕ್ಕಾಧಾರನ ಪಟ್ಟಣ
ಸಾರಸೌಖ್ಯ ತಲೆಸೇರಿ ಸಕಲ ಮೀರಿ ೨

ಭೂಮಿಸುಖವ ನೋಡಿ ಪೂರ್ವದ
ಆ ಮಹ ಸುಕೃತಗೂಡಿ
ನಾಮಾಮೃತಮಂ ನೇಮದಿ ಸವಿಯುತ
ಸ್ವಾಮಿ ಶ್ರೀರಾಮನ ಪ್ರೇಮಯಾನವೇರಿ ೩

VIII. ಉಗಾಭೋಗಗಳು

೬೬೬

ಅಂಬ ಅಂಬಿಕೆ ಅಂಬುಜದಳಾಯತಾಕ್ಷಿ
ಶುಂಭ ನಿಶುಂಭರ ಜಂಬಮಂ ಮುರಿದ
ಗಂಭೀರೆ ಗೌರಿ
ಶಂಭುವಿನರಸಿ ತವ ಪಾದಾಂಬುಜಗಳನು
ನಂಬಿಭಜಿಪರ ಇಂಬುದಾಯಕಿ
ಅಂಬುಜಾಕ್ಷ ಶ್ರೀರಾಮಪ್ರೇಮಿ ಪರತರಿ

೬೬೭

ಆವವರ್ಣಗಳಲಿ ಆವಮತಗಳಲಿ
ಆವಮಾತುಗಳಲಿ ಆವದೇವರುಗಳಲಿ
ಆವಜೀವರಲಿ ದೇವ ನಿನ್ನನೆ ಕಂಡು
ಭಾವಿಸಿ ಭಜಿಪೆ ಮಮಜೀವೇಶ ಶ್ರೀರಾಮ

೬೬೮

ಇನ್ನು ನಿನ್ನಯ ಧ್ಯಾನವನ್ನು ಬಿಡದಂತೆನಗೆ
ಮನ್ನಿಸಿ ಕೊಡು ದೃಢ ಉನ್ನತ ಭಕುತಿ

ನಿನ್ನನೇ ನಂಬಿದೆನು ನಿನ್ನ ದಾಸತ್ವವೇ
ಎನ್ನಗೆ ಸ್ಥಿರಮಾಡು ಎನ್ನಯ್ಯ ಶ್ರೀರಾಮ

೬೬೯

ಎನ್ನ ಮನದ ಹರಿದಾಟವನು ಕಳೆಯೋ ವೈಕುಂಠ
ಧಣಿ ದಾಸರೊಡನಾಟ ಕನಿಕರದಿಂ ಕರುಣದ್ವೆಂಕಟ
ಘನವಾದ ಸಂಕಟವನು ಕಳೆದು ತವನಿಷ್ಠೆ
ಯನು ಪಾಲಿಸೈ ಶಿಷ್ಟಜನವರದ ಶ್ರೀರಾಮ

೬೭೦

ಎಂತಾದರು ಬಿಡೆನಯ್ಯ ಕಂತುಜನಕ ನಿಮ್ಮ ಪಾದ
ದಂತ:ಕರಣ ಪಡೆವನಕ ಕುಂತಿಸುತರ ಪಾಲ
ಚಿಂತೆಪರಿಹಾರನೆ ಭಕ್ತಾಂತರಂಗನೆ ಎನ್ನೊ
ಳಿಂತು ನಿರ್ದಯ ಬೇಡ ಸಂತರೊಡೆಯ ಶ್ರೀರಾಮ

೬೭೧

ಎಂಥ ಕರುಣ್ಯಯ್ಯ ನೀನು ಸಂತರಾತ್ಮಕ ಪ್ರಭು
ಕಂತುಪಿತ ಕುಜನ ಕುಠಾರ ಚಿಂತೆ ಭ್ರಾಂತಿ ವಿದೂರ
ಸಂತಸದಿಂ ನೀನೆ ಎನ್ನ ಅಂತರಂಗದಿ ನಿಂತುನುಡಿಸು
ಸಂತಸಜ್ಜನರೊಪ್ಪಿ ತಲೆದೂಗುವಂತೆ ನಿಮ್ಮ ವಿಮಲನಾಮ ಶ್ರೀರಾಮ

೬೭೨

ಏನು ತಪ್ಪಿರ್ದಡೆ ನೀನೆ ತಿದ್ದೈತಂದೆ
ನಾನೇನು ಬಲ್ಲೆನು ಏನನರಿಯದಧಮ
ನೀನೆ ಎನ್ನೊಳು ನಿಂದು ಜ್ಞಾನಮಾರ್ಗಕೆ ಹಚ್ಚಿ
ಪಾನಮಾಡಿಸು ನಿನ್ನ ಧ್ಯಾನ ಅಮೃತ ಶ್ರೀರಾಮ

೬೭೩

ಏನು ಮೂರ್ಖನಾದೆನು ಮಾನವನಾಗ್ಹುಟ್ಟಿ ನಾ
ಜಾನಕೀಶನ ಒಲವ ಧ್ಯಾನದಿಂ ಪಡೆಯದೆ
ನಾನಾಪರಿಯಲಿ ಭ್ರಮಿಸಿ ಶ್ವಾನನಂದದಿ ಕೂಗಿ
ಖೂನವಿಲ್ಲದೆ ಕೆಟ್ಟೆ ಪ್ರಾಣೇಶ ಶ್ರೀರಾಮನೆ

೬೭೪

ಏನೇನು ಅರಿಯದ ಅಜ್ಞಾನಿ ನಾನಯ್ಯ
ದೀನಜನಬಂಧು ನೀ ಧ್ಯಾನಿಪರ ಸುರತರುವೆ
ನೀನೆ ಪಾಲಿಸಿ ಜ್ಞಾನ ಜಾಣನೆನಿಸಿ ನಿನ್ನ
ಧ್ಯಾನದಮೃತ ಸುರಿಸು ಪ್ರಾಣೇಶ ಶ್ರೀರಾಮ

೬೭೫

ಕಮಲಾಕ್ಷ ಇಂದು ನಾ ಕ್ರಮದಪ್ಪಿ ವರ್ತಿಸಿದೆ
ಕಮಲನಾಭನೆ ನಿಮ್ಮ ವಿಮಲಪಾದ ಮರೆದು
ಕ್ಷಮೆ ಮಾಡಿ ಎನ್ನ ತಪ್ಪು ಸುಮತಿಯಿಂ ಪಾಲಿಸೈ
ಶಮೆಶಾಂತಿನಿಲಯ ಶ್ರೀರಾಮಪ್ರಭು ತಂದೆ

೬೭೬

ಕುರುಹು ತೋರಿದಿ ದೇವ ಅರಿವುಯಿಲ್ಲದೆ ನಾನು
ಮರೆದು ನಿಮ್ಮಯ ಸ್ಮರಣೆ ಮರುಳನಾಗಿರುವೆ
ಚರಣದಾಸನ ತಪ್ಪು ಕರುಣದಿಂ ಕ್ಷಮೆ ಮಾಡಿ
ಕರುಣದಿಂ ಪೊರೆಯೆನ್ನ ಕರುಣಿ ಶ್ರೀರಾಮ

೬೭೭

ಕೊಡು ನಿನ್ನವರೊಡನಾಟ
ಇಡು ನಿನ್ನವರಡಿಸೇವೆ

ಬಿಡಿಸೆನ್ನ ಕಡುಸುಳ್ಳು
ನುಡಿಸು ನಿನ್ನಯ ಮಾತು
ಬಡಿಸು ನಿನ್ನೆಂಜಲವ
ತೊಡಿಸು ನಿನ್ನಡಿಭಕ್ತಿ
ಹಿಡಿಸು ವೈಕುಂಠಪಥೆ
ನ್ನೊಡೆಯ ಶ್ರೀರಾಮ

೬೭೮

ಕೌಸ್ತುಭಾಂಬರಧರಂ ಹರಿ ಪರಮ ಪ್ರಕಾಶಂ
ಸುರೇಶ ಪರಮಪುರುಷಂ
ಪರಾತ್ಪರಂ
ಪರಾತ್ಮರಂ ಕರುಣಮಂದಾರಂ ರಮೇಶಂ
ವರವೇದಸ್ಮೃತಿಸಾರಂ ನಿರವಯಂ ನಿರಂಜನಂ
ನಿತ್ಯಾತ್ಮನಿಖಿಲೇಶಂ
ಸರ್ವಕಂಟಕ ಪರಿಹಾರಂ ನಿಗಮಾತೀತಂ
ಗುರುಕುಲೇಶಂ ಶ್ರೀರಾಮಂ ನಮೋ

೬೭೯

ಗಜಮುಖನೆ ನಿಮ್ಮ ಪಾದ ಭಜಿಸಿ ಬೇಡುವೆನಯ್ಯ
ಭುಜಗಭೂಷಣಸುತನೆ ಸುಜನಜನವಿನುತ
ತ್ರಿಜಗಾದಿ ಪೂಜ್ಯನೆ ನಿಜಪದದಾತನೆ
ನಿಜಮತಿಯ ಕರುಣಿಸು ಸುಜನೇಶ ಶ್ರೀರಾಮಕೃಪಾಪಾತ್ರನೆ

೬೮೦

ಗಜಮುಖನೆ ನಿಮ್ಮಯ ನಿಜಪದಕೆ ವಂದಿಸಿ
ಭಜಿಸಿ ಬೇಡುವೆ ನಾಂ ನಿಜಸುತನೆ ದಯದಿ
ನಿಜಮತಿಯ ಕರುಣಿಸು ಸುಜನರೊಂದಿತ ಜನ
ಕಜೆಯಪತಿ ಶ್ರೀರಾಮನ ಪೊಗಳಲ್ಕೆ

೬೮೧

ಗೋಪಾಲವಿಠಲ ಶ್ರೀಪಾದ ಕಮಲಮಂ
ನಾಪಾಡಿ ಬೇಡುವೆನಾಪಾರಮಹಿಮ
ಕೌಪೀನಧರ ಎನಗಾಪಾರ ದಯವಿಟ್ಟು
ಕಾಪಾಡು ಮುಕ್ತಿಪದ ಸೋಪಾನ್ವಚ್ಚಿ ಶ್ರೀರಾಮ

೬೮೨

ಚತುರ್ದಶ ಭುವನಂಗಳುದರದಿಟ್ಟು
ಸತತನುತಿಪ ಭಕ್ತರಿಗತಿ ಸೌಖ್ಯ ಕೊಟ್ಟು
ಮಿತಿದಪ್ಪಿ ಮೆರೆವ ದೈತ್ಯರ ಚಕ್ರಕೆ ಬಲಿಗೊಟ್ಟು
ಮತಿಹೀನಳಾದ ಶೂರ್ಪನಖಿಗೆ ಭಂಗವಿತ್ತು
ಅತಿಭ್ರಷ್ಟ ರಾವಣನ ಹತ್ತು ತಲೆ ಕೊರೆದಿಟ್ಟು
ಗತಿನೀನೆನಲವನ ತಮ್ಮಗೆ ಸ್ಥಿರಪಟ್ಟವನು ಕೊಟ್ಟು
ಕೃತಕೃತ್ಯ ಮಾಡಿ ನಿಖಿಳಭುವನಗಳನು ಪೊತ್ತು
ಜತನ ಮಾಡಿದಯ್ಯ ಪತಿತಪಾವನ ಶ್ರೀರಾಮ ರಕ್ಷಿಸು

೬೮೩

ಜಗತ್ಕಲ್ಯಾಣ ಜಗತ್ರಾಣ ಜಗಜ್ಜೀವನ
ಜಗತ್ಪಾವನ ಜಗತ್ ಸ್ಥಾಪನ ಜಗದ್ರಕ್ಷಣ
ಜಗತ್ಸೂತ್ರ ಜಗನ್ಮೋಹ ಶ್ರೀರಾಮ

೬೮೪

ಜಗದೀಶ ಜಗಧಾರಿ ಜಗಸೂತ್ರ ಜಗದಾತ್ಮ
ನಿಗಮಾಗಮಂಗಳಾದಿವಿನುತ ಸತತ
ನಗಧರನೆ ಖಗಗಮನ
ಮಗನಿಂದ ರಘುರಾಮ
ಪೊಗಳಿಸು ನೀನೆ ವಿಮಲ ಸುಚರಿತ

೬೮೫

ಜಡಜಾಕ್ಷ ಎನ್ನಯ ಜಡಮತಿಯ ಕಡೆಹಾಯ್ಸು
ಕೊಡು ವಿಮಲ ಸುಜ್ಞಾನ
ಬಿಡಿಸು ಬಂಧನಂದಿಂದೆನ್ನನು
ಕಡುದಯದಿ ತವಧ್ಯಾನೆ
ನ್ನೊಡಲಿಗೆ ದಯಮಾಡು
ಗಡನೆ ಮೂಲೋಕಂಗಳೊಡೆಯ ಶ್ರೀರಾಮ

೬೮೬

ಜಪನೇಮನಿತ್ಯರಿಯೆ ಸ್ಮೃತಿಶಾಸ್ತ್ರವಾಕ್ಯರಿಯೆ
ತಪಯಾಗಯಜ್ಞರಿಯೆ ವೇದಾಗಮ ಮೊದಲರಿಯೆ
ಗುಪಿತಮಂತ್ರಗಳರಿಯೆ ಮಡಿಮೈಲಿಗಿನಿತರಿಯೆ
ಅಪರೂಪ ಬಲ್ಲೆನಿದೊಂದೆ ಶ್ರೀರಾಮ ನಿನ್ನಿಂದ ಮುಕ್ತಿ ಸಂಪದವೊ

೬೮೭

ಜಾನಕೀಶನೆ ನಿಮ್ಮ ಮೌನದಿಂದೊಲಿಸಲು
ನಾನಾಪರಿಯ ಮನವು ಕುಣಿಯುತಿಹ್ಯನು ಕೋತಿಯಂತೆ
ಧ್ಯಾನದಿಂದೊಲಿಸಲು ಜ್ಞಾನಮೊದಲಿಲ್ಲೆನಗೆ
ಏನು ಅರಿಯದಧಮ ನಾ ನೀನೆ ಸಲಹಯ್ಯ ಶ್ರೀರಾಮ

೬೮೮

ತೀರದೈ ಎನಗಿದರ ಸ್ವಾರಸ್ಯ ಸಂಗತಿಯು
ಕಾರುಣ್ಯನಿಧಿ ನಿನ್ನಪಾರಚರಿತವನು
ದಾರು ಬರೆಸಲು ಬರಿದೆ ತೋರು ನಿಜಸ್ಥಿತಿಯೆನಗ
ಪಾರಮಹಿಮನೆ ಒಲಿದು ಧೀರ ಶ್ರೀರಾಮ

೬೮೯

ದನುಜ ಸಂಹರ ನಿಮ್ಮ ವನರುಹಂಘ್ರಿಯ ನೆನಹು
ಅನುದಿನದಿ ಬಿಡೆನಯ್ಯ ಮನುಮುನಿವಿನುತ
ಜನಕಜಾಪತಿಯೆನ್ನ ಘನಪಾಪ ಖಂಡ್ರಿಸಿ
ಅಣುಗನೆಂದೊರೆಯೆಲೊ ಮಣಿವೆ ಶ್ರೀರಾಮ

೬೯೦

ದಾನವಾರಿಯೆ ನಿಮಗೆ ದೈನ್ಯದಿಂ ಬೇಡುವೆನು
ಪ್ರಾಣನೀಗಲು ಪುಸಿನುಡಿವ ಪ್ರಸಂಗಬೇಡ
ನಾನು ಮಾಡಿದ ಕೃತಿಗೆ ಏನು ಶಿಕ್ಷಿಸಲು ಸರಿ
ಮಾನವೊಂದಮಾತ್ರ ರಕ್ಷಿಸು ಶ್ರೀರಾಮ

೬೯೧

ದುಷ್ಟನೆಂದೆನ್ನೊಳು ಇಷ್ಟುದಯ ಬರದೇನು
ಸೃಷ್ಟಿಕರ್ತನೆ ಭಕ್ತರಿಷ್ಟಪರಿಪೂರ್ಣ
ಇಷ್ಟುಪುತ್ರರೋಳೋರ್ವ ದುಷ್ಟನಾಗಲು ತಂದೆ ಕ
ನಿಷ್ಟಗೈದು ಬಿಡುವನೆ ಶಿಷ್ಟ ಶ್ರೀರಾಮ

೬೯೨

ದುರಿತ ಪರ್ವತಕ್ಕೆ ಕುಲಿಷ ಸಿರಿರಮಣನ ನಾಮ
ಪರಮ ದಾರಿದ್ರ್ಯಕ್ಕೆ ಕುಠಾರ ನರಹರಿಯ ನಾಮ
ಪರಿಭವದ ಶರಧಿಗೆ ಹರಿಗೋಲು ವೈಕುಂಠನ ನಾಮ
ಮರವೆ ಅಂಧಕಾರಕ್ಕೆ ಪರಂಜ್ಯೋತಿ ಪಾವನ ನಾಮ
ಸ್ಮರಿಸಿದ್ದನ್ನೀವುದಕ್ಕೆ ಸುರಧೇನು ಪರಮಪುರುಷನ ನಾಮ
ವರಜ್ಞಾನನೀಡ್ವುದಕ್ಕೆ ಚಿಂತಾಮಣಿ ಕಂತುಜನಕನ ನಾಮ
ಚರಣದಾಸರಿಗೆ ಪಂಚಪರುಷ ವಿರಿಂಚಿಪಿತನ ನಾಮ
ಪರಮಮುಕ್ತಿ ಸಾಮ್ರಾಜ್ಯಕ್ಕೆ ಮೂಲ ಶ್ರೀರಾಮನಾಮ

೬೯೩

ನಾನಾಪರಿ ಯೋಚಿಸಲೇನಹುದೆಲೆ ಮನವೆ
ಹೀನಯೋಚನೆ ಬಿಟ್ಟು ಜಾನಕೀಶನ ಪಾದ
ಧ್ಯಾನದದನುದಿನ ತಾನೆ ಸುಖವಂ ಕೊಟ್ಟು
ಮಾನದಿಂ ರಕ್ಷಿಪ ಬಿಡದೆ ದೀನರಾಪ್ತ ಶ್ರೀರಾಮ

೬೯೪

ನಾನಾಪರಿ ಯೋಚಿಸಿದೆನಭವ
ಏನುತಿಳಿದವಲ್ಲದಿದರ ನಿಜವ
ದೀನಜನರ ಬೆಂಬಲಪೂರ್ಣನೆ
ನೀನೆ ಬರೆದಿರುವೆಯೊ ಪಣೆಬರಹ
ನಾನೆ ಬರಕೊಂಡಿದೆನೊ ತಿಳಿಯದೆ
ಮಾಣದರುಹು ನಿಜಸಂಗತಿ ಮಮ
ಪ್ರಾಣೇಶ ಶ್ರೀರಾಮ ಪ್ರಭುವೆ

೬೯೫

ನಾನಾ ಪಾಪವ ಮಾಡಿ ಏನ ಬೇಡಲಿ ನಿನ್ನ
ದೀನದಯಾಳು ಶ್ರೀ ವೇಣುಗೋಪಾಲ
ನೀ ದಯವಂತನಾಗಿ ಮಾನದಿಂ ಕಾಯೆಂದು
ಧ್ಯಾನಿಸಿ ಬೇಡುವೆನು ಧ್ಯಾನಿಪರೊಡೆಯ ಶ್ರೀರಾಮ

೬೯೬

ನಾನು ನೀನು ಒಂದೆ ಗೂಡಿನೊಳು ಇರುತಿರಲು
ನಾನ್ಹೋಗಿ ಪರರನ್ನು ಬೇಡಲಿ ಯಾಕೋ
ನೀನೆ ಎನ್ನನು ನಿಜ ನ್ಯಾಯದಿಂ ಸಲಹಯ್ಯ
ಧ್ಯಾನದಾಯಕ ಮಮ ಪ್ರಾಣ ಶ್ರೀರಾಮ

೬೯೭

ನಾನೇನು ಬಲ್ಲೆನೈ ನೀನೆ ಕಾರಣ ಹರಿಯೆ
ಹೀನಬವಣೆಯ ಬರಿದು ಮಾನವಜನುಮ
ಏನುಕಾರಣಕೊಟ್ಟೆ ಜ್ಞಾನಿಗರಸೆನಗೆ
ನೀನೆ ಸಕಲ ಸ್ವತಂತ್ರನಿರ್ದು ಆವ ತಪ್ಪೆನಗೆ ಶ್ರೀರಾಮ

೬೯೮

ನಿಗಮಗೋಚರ ನಿನ್ನ ಅಗಲಿ ನಾನಿರಲಾರೆ
ಹಗಲಿರುಳರೆಘಳಿಗೆನ್ನ ಅಗಲದೆ ಸಲಹೊ
ಭುಗಿಲು ಗುಣವ ಬಿಡಿಸಿ ಸೊಗಯಿಪ ಧೈರ್ಯವನಿತ್ತು
ಮಗನ ಸಮಯಕ್ಕೊದಗು ಜಗದಾತ್ಮ ಶ್ರೀರಾಮ

೬೯೯

ನಿತ್ಯ ಗುಣಾರ್ಣವ ನಿಗಮಗೋಚರ
ನಿತ್ಯನಿರುಪಮಾತ್ಮ ನಿಜಗುಣ ನಿಖಿಲೇಶ
ನಿತ್ಯ ನಿರ್ಮಲ ನಿಜಗುಣ ಪರಿಪೂರ್ಣ
ನಿತ್ಯ ಮುಕ್ತಿ ಸುಖವನಿತ್ತು ಸಲಹು ಶ್ರೀರಾಮ

೭೦೦

ನಿನ್ನ ಕೃಪೆಯಿಂ ನಾನು ಜನಿಸಿ ಮಾನವನಾಗಿ
ನಿನ್ನದೇ ಉಂಡುಟ್ಟು ಬದುಕಿಹೆನು ಜಗದಿ
ಇನ್ನಾರ ಹಂಗೆನಗೆ ಕಿಂಚಿತ್ತು ಇಲ್ಲಯ್ಯ
ಭಿನ್ನವಿಲ್ಲದೆ ಪೊರೆ ಶ್ರೀರಾಮ ಪ್ರಭುತಂದೆ

೭೦೧

ನಿನ್ನನ್ನೆ ಕಾಡುವೆನು ನಿನ್ನನ್ನೆ ಬೇಡುವೆನು
ನಿನ್ನೊಬ್ಬರತು ಅನ್ಯರನ್ನು ಇನ್ನ ನಾನರಿಯೆ
ಎನ್ನಾಗಿ ಪೂರೈಸು ಭಿನ್ನವಿಲ್ಲದಲೀಗ
ನಿನ್ನದಾಸನೆಂದೆನಿಸಿ ಎನ್ನಯ್ಯ ಶ್ರೀರಾಮ

೭೦೨

ನಿನ್ನ ಸೇವಕನೆಲೊ ನಾನು
ನಿನ್ನ ಸೇವೆಯ ನೀಡೆಲೊ ನೀನು
ಭಿನ್ನವಿಲ್ಲದಡಿಗಡಿಗೆ
ನಿನ್ನ ಚರಣಂಗಳೆನ್ನ ಹೃದಯದಿ
ಮನ್ನಿಸಿ ಸ್ಥಿರಪಡಿಸಿ
ಉನ್ನತೋನ್ನತ ಮಹಿಮ
ಪನ್ನಂಗಹರಗಮನ
ಎನ್ನಯ್ಯ ಶ್ರೀರಾಮ

೭೦೩

ನಿನ್ನಿಂದ ಬೆಳಗುವುದು ನಿನ್ನಿಂದ ಮುಳುಗುವುದು
ನಿನ್ನಿಂದಲಳಿಯುವುದು ನಿನ್ನಿಂದ ಉಳಿಯುವುದು
ನಿನ್ನಿಂದ ಶಕ್ತರು ನಿನ್ನಿಂದ ಮುಕ್ತರು
ನಿನ್ನೊಬ್ಬರತುಧನ್ಯರಾರೆನ್ನೊಳಿರ್ದು ಪೊರೆ ಶ್ರೀರಾಮ

೭೦೪

ನೀನೆ ಎನ್ನನು ಕಾಯಬೇಕಯ್ಯ
ಅನ್ಯರಾರೆನಗಿಲ್ಲ ಜಗದೊಳು
ನಿನ್ನ ಬಲವೇ ಬಲವು ಮುಕ್ಕುಂದ

ನಿನ್ನ ಬಿಟ್ಟರೆ ಗತಿಯ ನಾಕಾಣೆ
ನಿನ್ನ ದಾಸ ನಾನಲ್ಲವೇನಯ್ಯ
ನಿನ್ನ ಸ್ವಾಧೀನವಖಿಲ ಇರಲಿಕ್ಕೆ
ಎನ್ನಗೀಪರಿ ನಿಷ್ಠೂರ್‍ಯಾತಕ್ಕೆ
ನಿನ್ನ ನಂಬಿದೆ ಸಲಹು ಶ್ರೀರಾಮ

೭೦೫

ನೀನೆ ಗತಿಯೆನಗೆ ಧ್ಯಾನಿಪರ ಸುರಧೇನು
ದೀನಜನಮಂದಾರ ಪಾಪ್ನವೀಜನಕ
ನಾನಾದೈವಂಗಳನು ನಾನರಿಯೆ ನಾನರಿಯೆ
ನೀನೆ ರಕ್ಷಿಸು ಎನ್ನ ಪ್ರಾಣ ಶ್ರೀರಾಮ

೭೦೬

ನೀನೆ ಜಗತ್ಸೂತ್ರನು ದೀನಜನರಾಪ್ತನು
ಧ್ಯಾನಿಪರ ಜೀವನೆ ದೀನನೊಳೊಲಿದು
ಏನು ಬಂದುದನೆಲ್ಲ ನೀನೆ ನಿವಾರಿಸುತ
ಮಾನದಿಂ ಪೊರೆಯೆನ್ನ ಪ್ರಾಣೇಶ ಶ್ರೀರಾಮ

೭೦೭

ನೀನೆ ನಿರ್ಮಲಚಿತ್ತ ದೀನಜನ ಪ್ರಾಣದಾಪ್ತ
ಪ್ರಾಣ ಮೂಜಗನ್ನಾಥ ಜಾನಕೀ ಶ್ರೀರಾಮ ಪ್ರಮಥ

೭೦೮

ನೀನೆ ಮಣಿಸುವಿ ನೀನೆ ಓಡಿಸುವಿ
ನೀನೆ ನಗಿಸುವಿ ನೀನೆ ಅಳಿಸುವಿ ಜೀವಕೋಟಿಗಳ
ನೀನೆ ಕೊಡುವಿಯೊ ನಾನಾ ಸುಖದುಃಖ
ನೀನೆ ಬಿಟ್ಟಬಳಿಕೇನು ನರನ ಸ್ವತಂತ್ರ ಶ್ರೀರಾಮ

೭೦೯

ನೂಕಿ ಭವದೊಳು ಎನ್ನ ಕಾಕು ದೃಷ್ಟಿಯಿಂದವ
ಲೋಕಿಸುವೆಯೆಲೆ ದೇವ
ಏಕೆ ನಿನ್ನಯ ಮನಕೆ ಬಾರೆನು
ಶ್ರೀಕರನ ತವಪಾದ ಏಕಚಿತ್ತದಿಂ ಭಜಿಪೆ
ಜೋಕೆ ಮಾಡೈ ದಯದಿ ತ್ರಿಲೋಕೇಶ ಶ್ರೀರಾಮ

೭೧೦

ನೋಡಿ ಮಾಡಿಲ್ಲ ನಾ ಮಾಡಿ ಬೇಡಿಲ್ಲ ನಾ
ಬೇಡಿ ಪಡೆದಿಲ್ಲ ನಾ ರೂಢಿಯ ಮೇಲೆ
ಕೂಡಿ ಆಡಿಲ್ಲ ನಾ ಆಡಿ ಅರಿತಿಲ್ಲ ನಾ
ಕೂಡಿ ಹಿಂದಿನ ಸುಕೃತದ್ದಿಡಿದೆ ಶ್ರೀರಾಮನ

೭೧೧

ನೀಂ ಕೊಡುವೆ ನಾ ಪಡೆವೆ
ನೀ ನೀಡದೆ ಈ ಬಡವಗೆಲ್ಲಿರ್ಪುದು ಬೇರೆ
ನಾ ನಡೆವ ನಾನಿಡುವ ನಾ ತೋರುವ
ನಾನನುಭವಿಪುದೆಲ್ಲ ನಿನ್ನದೇ ಶ್ರೀರಾಮ

೭೧೨

ಪತ್ತಿಲ್ಲದ ಮಾನವಿದನಿತ್ಯ ಭವದೊಳಗೆನ್ನ
ಕತ್ತೆಯಂತ್ಹಾರಾಡಿಸಿ ಸತ್ಯಮಂ ಮರೆಸಿ
ಮಿಥ್ಯೆಅವರ್ತನದೆಳಸಿ ಮತ್ತೆ ನಿಮ್ಮನು ಮರೆಸಿ
ವ್ಯರ್ಥ ಮಾಡುವುದೆನ್ನ ಮರ್ತಿರಬೇಡ ಶ್ರೀರಾಮ

೭೧೩

ಪದ್ಮನಾಭನೆ ನಿಮ್ಮ ಶುದ್ಧ ಶ್ರೀಪಾದದಿ
ಬಿದ್ದು ಬೇಡವೆನಯ್ಯ ನಿರ್ಧರಿಸಿ ದೃಢವ
ಅಬ್ಧಿಶಯನನೆ ಎನ್ನಬದ್ಧ ದುರ್ಭವಣೆಯನ್ನು
ತಿದ್ದಿ ಪೊರೆ ಬೇಗನೆ ಮುದ್ದು ಶ್ರೀರಾಮ

೭೧೪

ಪದುಮಧರನೆ ಪದುಮನೇತ್ರನೆ
ಪದುಮ ನಾಭನೆ ಪದುಮಜಪಿತನೆ
ಪದುಮಜ ಪತಿಯೆ ಪದುಮಶರತಾತ
ಪದುಮವತಿನಾಥ ಪಾದಕೊಂದಿಪ್ಪೆ ಶ್ರೀರಾಮ

೭೧೫

ಪನ್ನಂಗಶಯನ ಎನಗಾಧಾರ ನೀನೆ
ನಿನ್ನ ಬಿಟ್ಟರೆ ಎನಗೆ ಅನ್ಯಬಲವಿಲ್ಲ_ಬರಿಯೆ
ಇನ್ನು ಭವಭವದಿ ನಿನ್ನ ಪದಕೆ ಬೇಡುವೆ
ನಿನ್ನಡಿಭಕ್ತಿ ಕೊಡು ಶ್ರೀರಾಮ

೭೧೬

ಪನ್ನಂಗಶಯನ ನಿನ್ನದೇ ತಪ್ಪಥವ ನನ್ನದೇ ತಪ್ಪೋ
ನನಗು ನಿನಗು ನ್ಯಾಯ ಹೇಳಿತೀರಿಸುವರಾರಪ್ಪ
ನಿನ್ನನೇ ಕೇಳುವೆನು ಅನ್ಯಾಯವಿಲ್ಲದ್ಹೇಳಪ್ಪ
ಎನ್ನನೀ ದುರ್ಭವಕೆ ನೂಕಿದವರಾರಪ್ಪ
ಗನ್ನಗತಕಗುಣಗಳಿತ್ತವರಾರಪ್ಪ
ಇನ್ನು ನಾನಾ ಬೇನೆಯಲಿ ಬನ್ನಬಡಿಸುವರಾರಪ್ಪ
ಎನ್ನೊಳನೃತವಿತ್ತು ಜವಗೀಡು ಮಾಡುವರಾರಪ್ಪ

ಭಿನ್ನವಿಲ್ಲದೆ ನ್ಯಾಯ ಹೇಳಪ್ಪ
ಎನ್ನಪ್ಪ ಶ್ರೀರಾಮ ಮನ್ನಿಸು ತಪ್ಪ

೭೧೭

ಪರನಿಂದೆಯಲ್ಲಿ ಎನ್ನ ಸರಿಯಾರು ಧರೆಮೇಲೆ
ದುರಿತಕರ್ಮದೆನಗೆದುರಿರುವರೇ ಲೋಕದಿ
ಗುರುವ ಹಿರಿಯರ ಜರೆವಲ್ಲಿ ಮಹನಿಪುಣ
ಪರಮಪಾಪಿಗಳಿಗೆಲ್ಲ ಹಿರಿಯ ನಾ ಶ್ರೀರಾಮ

೭೧೮

ಭಕ್ತವತ್ಸಲನೆಂಬ ಯುಕ್ತ ಬಿರುದುಗಳು ಕರ
ವೆತ್ತಿ ಸಾರುತಿವೆ ಯಾವತ್ತು ಭುವನದೊಳಗೆ
ಅರ್ತು ಭಜಿಸುವೆ ನಿನ್ನ ಭಕ್ತಜನರಾಪತ್ತು
ತುರ್ತು ಪರಿಹರಿಸು ಮಮ ಕರ್ತ ಶ್ರೀರಾಮ

೭೧೯

ಪಾವನನಾಮ ಪಾಪವಿರಾಮ
ಸೇವಕಜನಪ್ರೇಮ
ಸುಜನಸುಖಧಾಮ ರಕ್ಕಸಕುಲಭೀಮ
ರಮಣೀಯ ನಾಮ
ನೀಲಮೇಘಶ್ಯಾಮ ನಮಿತಸುರಸ್ತೋಮ
ಭಜಕಜನೋದ್ದಾಮ
ಭಕ್ತ ಕಲ್ಪದ್ರುಮ ಗಿರಿಜೇಶನ್ವಿತನಾಮ
ಗಿರಿಜೆಸನ್ನುತ ನಾಮ
ರಮೆಗೊಲಿದ ನಾಮ ರಘುಕುಲಸೋಮ
ಮುಕ್ತಿಪ್ರದಾನ ಶ್ರೀರಾಮ ನಾಮ

೭೨೦

ಬಡವರಾಧಾರನೆ ಬಡಭಕ್ತನ ರತಿಯನು
ಕಡುದಯದಿ ಮನ್ನಿಸಿ ಕಡೆಹಾಯ್ಸು ಚಿಂತೆಯಿಂದೆನ್ನ
ಪಿಡಿದು ನೀಂ ಬಿಡದೆನ್ನ ಒಡಲೊಳಿರ್ದೆಡೆಬಿಡದೆ
ಕೊಡು ನಿನ್ನ ದೃಢಭಕ್ತಿ ಒಡೆಯ ಶ್ರೀರಾಮ

೭೨೧

ಬರಿದೆ ಪರರಿಗೆ ಕುಂದು ಅರಿಯದೆ ಹೊರಿಸಿ ನಾ
ಗುರಿಯಾದೆ ದುರಿತಕ್ಕೆ ಮರವಿನೊಳು ಬೆರೆದು
ತಿರುಗಿ ಎನಗೀ ಮರೆವು ಬರದಂತೆ ದಯಮಾಡಿ
ಅರಿವು ಕರುಣಿಸಿ ಪೊರೆಯ್ಯೆ ವರದಶ್ರೀರಾಮ

೭೨೨

ಬೇಡುವುದು ನೀಡದಿರು ರೂಢಿಯೊಳು
ಮೂಢಜನ ಸೇವೆ
ಮಾಡಿ ಮುಖ ಬಾಡಿ ಪರರ
ಬೇಡ್ವುದ ಕಡೆಮಾಡು ಶ್ರೀರಾಮ

೭೨೩

ಭಾರ ನಿನ್ನದು ದೇವ ಮಾರಜನಕ ಎನ್ನ
ಘೋರ ಸಂಕಟವನ್ನು ದೂರಮಾಡುವುದು
ಸಾರಸಾಕ್ಷನೆ ನಿಮ್ಮಪಾರಕರಣವು ಎನಗೆ
ತೋರಿ ಬೇಗನೆ ಸಲಹು ಧೀರ ಶ್ರೀರಾಮ

೭೨೪

ಭಾರ ನಿನ್ನದಪಾರ ಮಹಿಮನೆ
ಘೋರ ದುರಿತದಿ ಪಾರು ಮಾಳ್ಪುದು

ಧೀರ ಪದಕೆ ಪರದಾರಿ ತೋರಿಸಿ
ಚಾರುವೇದ ಸುಸಾರವನು ತಿಳಿಸಿ
ಗಾರಮಾಳ್ಪ ಭವ ದೂರ ತೊಲಗಿಸಿ
ತಾರತಮ್ಯ ಸುವಿಚಾರ ಕರುಣಿಸಿ
ಸ್ವಾರಸ್ಯದ ಸುಖ ತೋರಿ ಪಾಲಿಸು
ನೀರಜಾಕ್ಷ ಸುಖಸಾರ ಶ್ರೀರಾಮ

೭೨೫

ಭುಜಗಶಯನನೆ ತವ ನಿಜದಾಸರನು ಮುಂದಿಟ್ಟು
ಭಜಿಪೆ ಭಕ್ತಿಲಿ ನಿನ್ನ ನಿಜಪಾದ ಅನವರತ
ಸುಜನರೊಂದ್ಯನೆ ಎನ್ನ ಗಜಿಬಿಜಿಯ ತೊಲಗಿಸಿ
ನಿಜಮತಿಯಿತ್ತು ನಿನ್ನ ನಿಜಧ್ಯಾನ ಕರುಣಿಸು ಶ್ರೀರಾಮ

೭೨೬

ಮಗನ ವಚನವ ಮಿಗಿಲಾಗಿ ಕಾಯುವ
ಬಗೆ ನಿನಗೆ ಕೂಡಿತು ಖಗಗಮನ ಶ್ರೀರಾಮ

೭೨೭

ಮನವು ಹರಿಯುವುದಯ್ಯ ವನಜಾಕ್ಷ ನಿಮ್ಮಪಾದ
ವನರುಹವ ಕಾಣಲು ಕನಿಕರದಿ ಎನ್ನ
ಮನಸಿನ ಭಯಹರಿಸಿ ಅನುಕೂಲ ಕರುಣಿಸು
ಮಣಿದು ಬೇಡುವೆನಯ್ಯ ಘಮನಹಿಮ ಶ್ರೀರಾಮ

೭೨೮

ಮಾನವ ಜನುಮಕೆ ಮಾನವೇ ರೂಪವು
ಮಾನಪೋದಬಳಿಕೇನಿರುಲು ಏನು

ಶ್ವಾನನ ಕನಸಿನಂತ್ಹೀನ ಸಂಸಾರಸುಖ
ಮಾನದಿಂ ಪೊರೆ ಭಕ್ತರ್ಧೇನು ಶ್ರೀರಾಮ

೭೨೯

ಮುರಹರನೆ ನೋಡೆನ್ನ ಪರಿಭವದ ದು:ಖವನು
ಮರಮರನೆ ಮರುಮರುಗಿ ಕೊರಕೊರಗಿ ಮನ ಕಾತರಿಸಿ
ತಿರುತಿರುಗಿ ಧರೆಯೊಳಗೆ ಹರಿಹರಿ ಬೇಸತ್ತೆ
ಮರೆದಿರೆನು ತವಸ್ಮರಣೆ ಪೊರೆ ಸತತ ಶ್ರೀರಾಮ

೭೩೦

ಮೂಢನು ನಾ ನಿನ್ನ ಗಾಢಮಹಿಮೆಯ ಕೊಂ
ಡಾಡಲೇನು ಬಲ್ಲೆ ಜಡಸಂಭವಗಸಾಧ್ಯ
ಮೂಢಭಕ್ತಿಯಿಂ ಕಾಪಾಡು ದಯಾಳೆಂದು
ಬೇಡುವೆನು ನೀಡು ವರ ರೂಢಿಪತಿ ಶ್ರೀರಾಮ

೭೩೧

ಮೃತ್ಯುಲೌಕಿಕದ ವರ್ತನಗೆ ಮನಗೊಟ್ಟು
ವ್ಯರ್ಥ ನಾನಾದರಪಕೀರ್ತಿ ನಿನಗಲ್ಲೇನು
ಕರ್ತು ನೀ ಗತಿಯೆಂದು ನಿರ್ತ ಮಾನಸದಿಂ
ದರ್ತು ನಾಂ ಭಜಿಸುವೆನು
ತುರ್ತು ದಯವಾಗು ಶ್ರೀರಾಮ

೭೩೨

ಮೊರೆ ಕೇಳಿ ಭಕ್ತಂಗೆ ಕರುಣಿಸು ಬೇಗನೆ
ಸೆರೆಗೊಡ್ಡಿ ಬೇಡುವೆ ಹರಿ ನಿಮ್ಮ ಧ್ಯಾನಮಂ
ಅರೆಘಳಿಗ್ಯಗಲಿಸದೆ ಇರಿಸೆನ್ನ ಹೃದಯದಿ
ಸುರಧೇನು ಚಿಂತಾಮಣಿ ವರಕಲ್ಪದ್ರುಮ ಶ್ರೀರಾಮ

೭೩೩

ಮಂದಮತಿ ನಾನೊಂದು ಅರಿಯೆನು
ಕುಂದು ನಿಂದೆಗಳೊಂದು ಎನಗಿಲ್ಲ
ಕಂದನೊಡಲೊಳು ತಂದೆ ಹರಿ ಗೋ
ವಿಂದ ಶ್ರೀರಾಮ ನಿಂದು ನುಡಿಸಿದನು

೭೩೪

ಮಂದರಧರ ಗೋವಿಂದ ನಿಮ್ಮಯ ಪಾದ
ದ್ವಂದ್ವಕ್ಕೆ ಭಕುತಿಲಿ ವಂದಿಸಿ ಬೇಡ್ವೆ
ಕಂದನಂ ಮರೆಯದೆ ಬಂದು ಬೇಗನೆ ವರ
ತಂದೆ ಪಾಲಿಸು ದಯಾಸಿಂಧು ಶ್ರೀರಾಮ

೭೩೫

ಶ್ರೀಮತ್ ಚಿತ್ಕಲಾರೂಪಿಣಿ ಕಾತ್ಯಾಯಿನಿ
ಕಾಮಿತಫಲಪ್ರದಾಯಿನಿ ಕರುಣಿ
ಮಾಮನೋಹರಿ ಮಂದಹಾಸಿನಿ ಕಾಮೇಶ್ವರ
ಮಾಮಾಂಕಸಿಂಹಾಸಿನಿ ಜಗತ್ರಾಣಿ
ಸೋಮಾರ್ಕಕೋಟಿತೇಜಸ್ವಿನಿ
ತಾಮಸ ಶುಂಭ ನಿಶುಂಭ ಹರಿಣಿ ಧುರಿಣೀ
ಸೋಮಧರನ ರಾಣಿ ಎನ್ನೃತ್ಕಮಲದಿ ನಿಂದು ಶ್ರೀ
ರಾಮಧ್ಯಾನಕುತ್ತೇಜನವ ನೀಡೆ ಜನನಿ ಕಲ್ಯಾಣಿ

೭೩೬

ಶ್ರೀರಂಗ ಕೃಪಾಂಗ ಭವಭಂಗ ಭಕ್ತಾಂ
ತರಂಗ ಎನ್ನ ಭಂಗ ಇಲ್ಲದ್ಹಾಂಗ ಮಾ
ಡನಂಗಪಿತ ಶ್ರೀರಾಮ

೭೩೭

ಶ್ರೀಶ ಭಜನದೊಳ್ ಧ್ಯಾನಿಪಂ ನುಡಿನುಡಿಗೆ
ಶ್ವಾಸ ಬಿಡದ್ವಿರಲೆಂದು ಸೋಸಿ ನೂರೆಂಟುಸಾರೆನಲು
ದೋಷನಾಶನರಾಗಿ ಮೋಹಪಾಶವ ಗೆಲಿದು
ಶ್ರೀಶ ಶ್ರೀರಾಮನಂಘ್ರಿದಾಸಪದಕ್ಕೈದುವರು ಸತ್ಯದಿ

೭೩೮

ಸಕಲಮಂತ್ರವು ಶ್ರೀರಾಘವೇಂದ್ರನ ನಾಮ
ನಿಖಿಲಿಸಿದ್ಧಿಯ ಜಾನಕಾರ್ಯನ ನಾಮ
ಅಖಿಲಸಂಪದವಕಳಂಕ ಮನತಪವು
ಸುಖಕರ ಸರ್ವರಿಗೆ ಶ್ರೀರಾಮನಡಿಭಕ್ತಿ

೭೩೯

ಸನಕಸಂದರೆಣಿಕೆಯಿಲ್ಲದೆ ನಿನ್ನ
ಇನಿತು ಪೊಗಳುವರಯ್ಯ
ಘನತರಭಕುತಿಲಿಂದ
ಅಣುರೇಣುತೃಣಕಾಷ್ಠ ಪರಿಪೂರ್ಣನಹುದು
ಕನಿಕರದಿಂ ಮನ್ನಿಸೈ ಎನ್ನ ತಪ್ಪ ಶ್ರೀರಾಮ

೭೪೦

ಸಾಕು ಸಾಕಯ್ಯ ಈ ಲೋಕವಾಸವು ಎನಗಿ
ನ್ಯಾಕೆ ಭ್ರಷ್ಟನಾಗಿ ಅನೇಕ ಕಾಲವಿರಲೇನು
ಲೋಕಾದಿಲೋಕಗಳ ಜೋಕೆಮಾಡುವ ಜಗ
ದೇಕನಾಥ ಶ್ರೀರಾಮ ನೀ ಮೂಕನಾದ ಬಳಿಕ

೭೪೧

ಸಾಧನವು ಸಾಗ್ವವೆಂತ್ವೇದ ನಿಗಮಕೆ ನಿನ್ನ
ಆಧಾರವಿಲ್ಲದೆ ಮಧುಸೂದನ ಮುರಾರಿ
ಪಾದದಾಸನು ನಿನ್ನ ಪಾದ ಮಹಿಮ್ಯರಿಯದೆ
ವಾದಿಸಿದ ತಪ್ಪು ಕ್ಷಮಿಸನಾದಿ ಶ್ರೀರಾಮ

೭೪೨

ಸಾಲವನು ಕೊಳುವಾಗ ಜೇನುತುಪ್ಪಮೆದ್ದಂತೆ
ಸಾಲಿಗನು ಕೇಳಲಾಗ ಹೊಟ್ಟೆಯೋಳ್ಬೆಂಕಿ ಬಿದ್ದಂತೆ
ಗೋಳು ಒದಗಿತು ತನ್ನ ಸತಿಸುತರು ಸತ್ತಂತೆ
ಹಾಳುಗುಣಗಳೆನಗೆ ಬೇಡಯ್ಯ ಶ್ರೀರಾಮ

೭೪೩

ಸಿರಿಯರಮಣ ದುರಿತಹರಣ
ಶರಧಿಶಯನ ಗರುಡಗಮನ
ಪರಮ ಕರುಣ ಕರುಣಾಭರಣ
ಶರಣುಸುಜನ ಕರುಣಿ ಶ್ರೀರಾಮ

೭೪೪

ಸಿರಿವರನೆ ಎನ್ನಯ ಮರೆವು ಮಾಯಗಳ್ಹರಿಸಿ
ಅರಿವು ಸ್ಥಿರನಿಲಿಸಿ ದುರಿತದಿಂ ಗೆಲಿಸಿ
ಕರಪಿಡಿದು ಎನ್ನನು ಕರುಣದಿಂದ ಪೊರೆಯೆಂದು
ಚರಣಕ್ಕೆ ಎರುಗುವೆ ಕರುಣಾಕರ ಶ್ರೀರಾಮ

೭೪೫

ಸುಖದಿಂದಿರುವರ ಕಂಡು ಜಕಜಕನೆ ಜರಿಯುತ
ದು:ಖಪಡುವ ಶರೀರಸುಖ ಸಾಕು ಅಖಿಲೇಶ
ನಿಖಿಲ ಸ್ವತಂತ್ರ ನಿನ್ನನು ಭಕ್ತಿಯಿಂ ಬೇಡುವೆನು
ಮುಕುತಿಕರುಣಿಸು ಬೇಗ ಭಕುತನಾಭ ಶ್ರೀರಾಮ

೭೪೬

ಸೃಷ್ಟೀಶ ಎನ್ನತಪ್ಪು ಎಷ್ಟಿರಲು ನೀಂ ದಯ
ದೃಷ್ಟಿಯಿಂ ಕ್ಷಮೆಮಾಡು ಕಷ್ಟನಿವಾರ
ಗಟ್ಯಾಗಿ ನೆರೆನಂಬಿ ನಿಷ್ಠೆಲಿ ಬೇಡ್ವೆ ಭಕ್ತ
ರಿಷ್ಟದಾಯಕನೆನ್ನ ಇಷ್ಟದೇ ಶ್ರೀರಾಮ

೭೪೭

ಸಂಧಿಸಿಹ್ಯ ಸಂಕಟದಿಂದ ಗೆಲಿಸಿ ಎನಗೆ
ಮುಂದೆ ಬುದ್ಧಿಯ ಕಲಿಸಿ
ಹೊಂದಿ ನಿನ್ನಯ ಪಾದ ಎಂದೆಂದು ಬಿಡದಂಥ
ಬಂಧುರ ಭಕ್ತಿಯನು ಕಂದನಿಗೆ ಕರುಣಿಸಿ
ತಂದೆ ಕಾಪಾಡು ಶ್ರೀರಾಮ

೭೪೮

ಸ್ಮರಣವಾಗದು ಮನವು ತವಧ್ಯಾನವು
ದೊರಕವಲ್ಲದು ಜಿಹ್ವೆಗೆ ನಿನ್ನ ನಾಮಾಮೃತವು
ಅರಿವಿಕೆಗೆ ಬಾರದು ನಿನ್ನ ವಿಮಲ ಸಚ್ಚರಿತವು
ಕರಕೆ ಸಿಗದಯ್ಯ ತವಚರಣ ಸೇವೆಯು
ಸ್ಥಿರವಾಗಲೊಲ್ಲದು ನಯನದಿ ತವಮೂರ್ತಿ
ಕರದಿಂ ಬರೆಯಲು ಸಾಗದು ತವಕೀರ್ತನೆ

ಚರಣದಾಸನಪರಾಧ ಗಣಿಸದೆ ಮನ್ನಿಸಿ
ಕರುಣಿಸು ನಿನ್ನ ಪ್ರಸನ್ನತೆ ವರದ ಶ್ರೀರಾಮ

೭೪೯

ಹರಿ ನಿಮ್ಮ ಉಪಕಾರ ಮರೆಯೆನಾವಕಾಲದಿ
ಪರಮದಯಾಕರನೆನ್ನ ದುರಿತಪರ್ವತವ
ವರಕುಣಕಟಾಕ್ಷದಿಂದರಿದು ಪೊರೆ ತವಚರಣ
ಸ್ಮರಣಾಮೃತವನಿತ್ತು ದುರಿತಹರ ಶ್ರೀರಾಮ

೭೫೦

ಹರಿ ನಿಮ್ಮ ಚರಣವು ದೊರಕುವುದು ಎನಗೆಂತು
ಅರಿಯೆನಿನಿತು ಸದ್ಧರ್ಮ ಪರಮಪಾಪಾತ್ಮ ನಾನು
ಗುರುಹಿರಿಯರನು ನಾನು ಪರಿಪರಿಯಿಂ ನಿಂದಿಸಿದೆ
ಪರಮತಪ್ಪೆಣಿಸದೆನ್ನ ಪೊರೆಯೊ ಶ್ರೀರಾಮ

೭೫೧

ಹರಿ ನಿಮ್ಮಯ ಸ್ಮರಣೆಯೇ ಶುಭಕರಣ ನಕ್ಷತ್ರ
ಹರಿ ನಿಮ್ಮ ಭಜನೆಯೇ ಶುಭಯೋಗ ತಿಥಿ ವಾರ
ಹರಿ ನಿಮ್ಮ ಕೀರ್ತನವೇ ಪಕ್ಷಮಾಸ ಪರ್ವಕಾಲ
ಹರಿ ನಿಮ್ಮ ಸ್ತೋತ್ರವೇ ನಿತ್ಯನೇಮ ಹಬ್ಬ
ಹರಿ ನಿನ್ನ ಪೊಗಳುವುದೇ ಜಪತಪ ಸಾಧನವು
ಹರಿ ನಿನ್ನ ಚರಣವೇ ಯಾಗ ಯಜ್ಞಗಳಯ್ಯ
ಹರಿ ನಿನ್ನ ಧ್ಯಾನವೇ ಗಾಯತ್ರಿ ತಾರಕವೋ
ಸಿರಿರಾಮ ನಿನ್ನ ನಾಮವೇ ಮುಕ್ತಿ ಸಾಮ್ರಾಜ್ಯಯ್ಯ

೭೫೨

ಹರಿ ನಿಮ್ಮ ಶುಭಚರಿತ ನುಡಿಸೆನ್ನ ವದನದಿಂ
ಹರಿಸೆನ್ನ ಮಂದಮತಿ ಕೊಡು ವಿಮಲಸುಜ್ಞಾನ

ಸುರಿಸೆನ್ನ ಜಿಹ್ವೆಯಿಂ ಕಡುಸತ್ಯವಚನಗಳು
ಜರಾಮರಣ ಪರಿಹರಿಸು ಸ್ಮರಿಪೆ ಶ್ರೀರಾಮ

೭೫೩

ಹರಿ ನೀನೆ ಬರೆದ್ಯೆನಲು ದುರಿತ ಕರ್ಮಗಳ್ಯಾಕೆ
ಬರಕೊಂಡೆ ನಾನೆನಲು ನನಗಧೀನವೇ
ಶರಣಾಗತವತ್ಸಲನೆ ತ್ವರಿತಿದರ ಪರಿ ತಿಳುಹಿ
ಪರಿಹರಿಸು ಮನಸಿನ ಮರುಳುತನ ಶ್ರೀರಾಮ

೭೫೪

ಹರಿ ಹರಿ ಎನ್ನೊಡನೆ ವೈರತ್ವ ಸಾಧಿಪರ
ಶಿರ ಒಂದಕ್ಷತ್ತಾಗಿ ಚಿರಕಾಲ ಸುಖದಿ
ಇರಲವ ಧರೆಮೇಲೆ
ನಿರುತಬೇಡುವೆ ನಿನಗೆ
ಕರುಣಿಸೆನಗೆ ತವಸ್ಮರಣೆ ಶ್ರೀರಾಮ

೭೫೫

ಹರಿಹರಿ ನಿಮ್ಮಯ ಚರಣ ಸರೋಜಕ್ಕೆ
ಶಿರಬಾಗಿ ಬೇಡುವೆನು ಸ್ಮರಿಪರ ಜೀವನೆ
ಮರಣವಾದರು ಕೊಡು ಮರಿಯಾದೆ ಕಳಿಬೇಡ
ಹರಿದ್ಹೋಗ್ವ ಸಂತೆಪರಿಪ್ರಪಂಚದಿ ಶ್ರೀರಾಮ

೭೫೬

ಹರಿ ಹರಿ ನಿಮ್ಮಯ ವರಮಹಿಮೆ ಅರಿಯಲು
ಹರಿವಿರಿಂಚಿಗಳಿಗಸದಳ ಪರಮ ಪಾಮರ ನಾನು
ಅರಿಯುವೆನೆಂತಯ್ಯ ಕರುಣಿಯೆಂದೆಂಬ ನಿಮ್ಮ
ಬಿರುದೊಂದೆ ಅರಿತ್ಹೊಗಳ್ವೆ ಕರುಣದೊರೆ ಶ್ರೀರಾಮ

೭೫೭

ಹಿಡಿಯಬಹುದು ಫಣಿವಣ್ಣೆಡೆಯನು
ಕುಡಿಯಬಹುದು ಕಾಲಕೂಟವಿಷವನು
ನಡೆದು ದಾಂಟಬಹುದು ಕಡಲೇಳನು
ಪಿಡಿದು ಸುರುಳಿ ಸುತ್ತ ಬಹುದಿಡೀಭೂಮಿಯನು
ಒಡನೆ ಬೆನ್ನಟ್ಟೋಡಿಸಬಹುದ್ಯಮನನು
ಬಿಡದೆ ಕಾಯದಿಂ ಸೇರಬಹುದ್ವಯ್ಕುಂಠವನು
ಪಿಡಿದು ಕಟ್ಟಲುಬಹುದು ತ್ರಿಣಯರನು
ಕಡುಕಷ್ಟ ಈ ಮನವ ನಿಲ್ಲಿಪುದು ಶ್ರೀರಾಮ

೭೫೮

ಹುಟ್ಟಬಾರದಿತ್ತು ನಾ ಹುಟ್ಟಿದರೇನಾಯಿತು
ನಿಷ್ಠರೊಡೆಯ ತವನಾಮ ಗಟ್ಟಿಸಿಕ್ಕಿತೆನಗೆ
ಭ್ರಷ್ಟತ್ವವನು ಬಿಡಿಸಿ ದುಷ್ಟಗುಣಳುಕಿಸಿ
ಶಿಷ್ಟಸಂಗದಿರಿಸಿ ಇಂಬುಗೊಟ್ಟು ಪೊರೆ ಶ್ರೀರಾಮ

೭೫೯

ಕ್ಷಮಿಸು ನಾ ಮಾಡಿದ ಅಪರಾಧ ಕೃಪೆಯಿಂದ
ನಮಿಸಿ ಬೇಡುವೆ ಹರಿಯೆ ವಿಮಲ ತವಪದಕೆ
ಸುಮನಸರೊಳಿರಿಸೆನ್ನ ಕರುಣದಿ ಸಲಹಯ್ಯ
ಕಮಲಾಕ್ಷ ನಿನ್ನ ನಂಬಿ ಮರೆಹೊಕ್ಕೆ ಶ್ರೀರಾಮ

೭೬೦

ಸುಮಂಗಲೆ ಸುನೀತೆ ಸುಜನಸನ್ನುತೆ
ಸುರಸೇವೆ ಶಂಕರಿ ಶುಭಚರಿತೆ
ಸುಖದಾತೆ ಸುಮನವಾಸೆ ಸುವಾಣಿ ಶೌರಿ

ಶುಭಗಾತ್ರೆ ಸುಚರಿತ್ರೆ ಸರಸಿಜದಳನೇತ್ರೆ
ಸುಗುಣಿ ಶಾಂತಾಕಾರಿ ಸ್ಮರಿಪಜನ
ಸುರಚಿಂತಾಮಣಿ ಶ್ರೀರಾಮ
ನಾಮೆನ್ನ ಜಿಹ್ವೆಯೊಳ್ಬರಿ ಸುಖಕರಿ

IX. ಕಥನಾತ್ಮಕ ಕೃತಿಗಳು

(ಶತಾಷ್ಟಕಗಳು)

೭೬೧

ಈಶ ಶ್ರೀಶ ಜಗತ್ತೋಷ ಇಂದಿರೇಶ ರಾಮ ನಮೋ
ನಿಖಿಲಜೀವ ಚರಾದ್ಯೈಕ್ಯ ಸಕಲಶಕ್ತ ರಾಮ ನಮೋ
ಕ್ಷೀರಸಾಗರಕನ್ಯವರಾಪಾರಮಹಿಮ ರಾಮ ನಮೋ
ಭಕುತಾಭೀಷ್ಟಪೂರ್ಣ ಆದಿಲಕುಮಿನಾಥ ರಾಮ ನಮೋ
ಅತುಲತುಲಸೀಮಾಲ ನಿತ್ಯ ನಿರ್ಮಲಾತ್ಮ ರಾಮ ನಮೋ
ವೇದವೇದಾಗಮ್ಯ ಶ್ಯಾಮಸುಂದರಾಂಗ ರಾಮ ನಮೋ
ವೇದವೇದಾಂತ ಗುಪ್ತ ವೇದಾತೀತ ರಾಮ ನಮೋ
ಆದಿ ಅನಾದಿವಸ್ತು ಆದಿಮೂರ್ತಿ ರಾಮ ನಮೋ
ಪತಿತಪಾವನಾಂಗ ಭಕ್ತರಂತರಂಗ ರಾಮ ನಮೋ
ಹರ ಅಜಸುರಾದ್ಯಖಿಲ ಸಾರ್ವಭೌಮ ರಾಮ ನಮೋ ೧೦

ಪರಕೆಪರಮ ಪರತರಾತ್ಮ ಶರಣರರಸ ರಾಮ ನಮೋ
ದಾಸರ್ವಾಸ ಶ್ರೀನಿವಾಸ ಶೇಷಶಾಯಿ ರಾಮ ನಮೋ
ಚತುರ್ಭುವನಕರ್ತ ಸರ್ವಾಂತರ್ಯಾಮಿ ರಾಮ ನಮೋ
ವಟಪತ್ರಶಾಯಿ ಸೃಷ್ಟಿಜಠರದೈಕ್ಯ ರಾಮ ನಮೋ
ದುಷ್ಟಕಾಲ ಶಿಷ್ಟಪಾಲ ಸೃಷ್ಟಿಲೋಲ ರಾಮ ನಮೋ
ತತ್ತ್ವತತ್ತ್ವಾರ್ಥ ಶ್ರುತಿ ಸ್ಮೃತಿಸಾರ ರಾಮ ನಮೋ

ಪರಮಪ್ರಕಾಶ ಜನನಮರಣ ಹರಣ ರಾಮ ನಮೋ
ಮಾನ್ಯನಿಖಿಲ ಶಾಸ್ತ್ರಪುರಾಣ ಪುಣ್ಯಕಥನ ರಾಮ ನಮೋ
ಶರಣು ಸಹಜಭಾವ ಪರಮ ಗುರುಕುಲೇಶ ರಾಮ ನಮೋ
ಧಾತ್ರಿ ದ್ವಯಪ್ತಂಗಳಸೂತ್ರಧಾರಿ ರಾಮ ನಮೋ

ಶರಣಸಂಕುಲಧಾಮ ಸರ್ವಾಧಾರ ರಾಮ ನಮೋ
ಸಚ್ಚಿತ್ತಾನಂತ ನಿತ್ಯ ನಿರುಪಮಾತ್ಮ ರಾಮ ನಮೋ
ಪರಮಮಂಗಲ ಸರ್ವಾಧೀಶ ನಿರ್ವಿಕಾರ ರಾಮ ನಮೋ
ಪರ್ವಕಾಲಮಾಸಪಕ್ಷ ಸರ್ವಾಸಾಕ್ಷಿ ರಾಮ ನಮೋ
ಕುಜಕುಠಾರ ಸುಜನಬಂಧು ಭಜಕಪ್ರಾಣ ರಾಮ ನಮೋ
ಮುಕ್ಕಣ್ಣೇಶ್ವರಮಿತ್ರ ಶಂಖಚಕ್ರಧಾರಿ ರಾಮ ನಮೋ
ನೀಲಶ್ಯಾಮ ಶೀಲಸುಂದರ ಮೇಲುನಿಲಯ ರಾಮ ನಮೋ
ವಿಮಲಮಣಿ ಕೌಸ್ತುಭಾಂಬುರ ಕಮಲನಾಭ ರಾಮ ನಮೋ
ಸುಮನವಾಸ ರಮೆ ಜೀವೇಶ ಅಮಿತ ಲೀಲ ರಾಮ ನಮೋ

ಸುಲಭ ಭಕ್ತಾಕಳಂಕಮಹಿಮ ಪ್ರಳಯಜಿತ ರಾಮ ನಮೋ
ಯೋಗಿವಂದ್ಯ ಭಾಗವತರ ಭೋಗದಾರ್ಯ ರಾಮ ನಮೋ
ನಾಗವೈರಿನೇರಿಮರೆವೆ ನಾಗರಶಾಯಿ ರಾಮ ನಮೋ
ಧಾತ್ರಿಸುತೆಯ ಮಿತ್ರ ಕೃಪಾನೇತ್ರ ದಾತ ರಾಮ ನಮೋ
ಲೋಕಪತಿ ಲೋಕಪಿತ ಲೋಕೈಕಬಂಧು ರಾಮ ನಮೋ
ಮಂತ್ರಮೂಲ ಮಂತ್ರಜಾಲ ಮಂತ್ರಮೂರ್ತಿ ರಾಮ ನಮೋ
ಕಂತುಪಿತ ನಿಶ್ಚಿಂತ ಶಾಂತ ಸಂತರೊಡೆಯ ರಾಮ ನಮೋ
ದೇವದೇವ ದಿವ್ಯಚರಿತ ಪಾವನನಾಮ ರಾಮ ನಮೋ
ವಾಣಿಪತಿಯ ಜನಕಾಪಾರಜ್ಞಾನಶರಧಿ ರಾಮ ನಮೋ
ನೀರಜಾಕ್ಷ ನಿರ್ಜರೇಶ ನಿರಾಕಾರ ರಾಮ ನಮೋ

ಕಾಮಿತಾರ್ಥ ಜನವಿಕಲ್ಪ ಪ್ರೇಮಪೂರ್ಣ ರಾಮ ನಮೋ
ಮಂದರ ಮಂದಿರ ನಂದ ಗೋವಿಂದ ಮುಕ್ಕುಂದ
ರಾಮ ನಮೋ
ನಾಮರೂಪರಹಿತ ನಿಸ್ಸೀಮಧಾಮ ರಾಮ ನಮೋ
ಸೋಮಕನೊದೆದು ವೇದತಂದ ಕೋಮಲಾಂಗ ರಾಮ ನಮೋ

ಶರಧಿಮಥಿಸಿ ಸುರರಪೊರೆದ ಕರುಣಶರಧಿ ರಾಮ ನಮೋ
ಶಂಭುಮೊರೆಯನಿಟ್ಟು ಕೂಗಲು ಇಂಬುಗೊಟ್ಟ ರಾಮ ನಮೋ
ಹಿಮಜೆಗೊಲಿದು ಪ್ರೇಮದುನ್ನುತ ನಾಮವಿತ್ತ ರಾಮ ನಮೋ
ಧ್ರುವನ ಪೊರೆದ ಜಗವಕಾಯ್ದ ಯುವತಿಗೊಲಿದ ರಾಮ ನಮೋ
ಕಲ್ಲನೊದೆದು ಕುಲಕೆ ತಂದು ಲಲನೆಯಲಿಸಿ ರಾಮ ನಮೋ
ಬಿಲ್ಲುಮುರಿದು ಫುಲ್ಲನೇತ್ರೆ ಕರವ ಪಿಡಿದ ರಾಮ ನಮೋ

ಭುವನ ಬೇಡಿ ಬಲಿಯ ತುಳಿದು ಪಾವನಗೈದ ರಾಮ ನಮೋ
ಹಂಬಲಿಪ ಭಕ್ತಗೊಲಿದು ಕಂಬದಿಬಂದ ರಾಮ ನಮೋ
ವನಕೆಪೋಗಿ ದನುಜಕುಲದ ಹಣೆಯಮುರಿದ ರಾಮ ನಮೋ
ದೈತ್ಯಗೊಲಿದು ಸ್ಥಿರಪಟ್ಟವನಿತ್ತ ಕರುಣಿ ರಾಮ ನಮೋ
ದಯದಿ ಬುವಿಭಾರವಿಳುಹಿ ಭಯವ ಕಳೆದ ರಾಮ ನಮೋ
ಚರಣಭಕ್ತರೆಂದು ಪ್ರೇಮದಿ ತುರುಗಕಾಯ್ದ ರಾಮ ನಮೋ
ಇಳಿದು ಗಿರಿಯ ಭೂವೈಕುಂಠಗೊಳಿಸಿ ಮೆರೆವ ರಾಮ ನಮೋ
ಕರುಣಾಭರಣ ನಿಮ್ಮ ಚರಣಮರೆಯ ಹೊಕ್ಕೆ ರಾಮ ನಮೋ
ತಂದೆನೀನೆ ತಾಯಿನೀನೆ ಬಂಧುನೀನೆ ರಾಮ ನಮೋ
ಕಂದನೆಂದು ಕರುಣದೆನ್ನ ಬಂಧ ತರಿಯೊ ರಾಮ ನಮೋ

ನಾನಾಯೋನಿಯೊಳಗೆ ಜನಿಸಿ ಜ್ಞಾನಗೆಟ್ಟೆ ರಾಮ ನಮೋ
ಉಣ್ಣಬಾರದನ್ನ ಉಂಡು ಬನ್ನ ಬಟ್ಟೆ ರಾಮ ನಮೋ
ನಿನ್ನ ಪಾದವನ್ನು ಮರೆದೀಬವಣೆ ಪಡೆದೆ ರಾಮ ನಮೋ
ಎನ್ನ ಪಾಪವನ್ನು ಕ್ಷಮಿಸಿ ಮನ್ನಿಸಿನ್ನು ರಾಮ ನಮೋ
ಮಂದಮತಿಯ ಛಿಂದಿಸೆನಗಾನಂದ ಮತಿ ದೇ ರಾಮ ನಮೋ
ಬಂದು ಬಿದ್ದೆ ನಿನ್ನ ಪಾದದ್ವಂದ್ವನಂಬಿ ರಾಮ ನಮೋ
ನಿನ್ನ ಬಿಟ್ಟು ಎನಗೆ ಅನ್ಯ ದೇವರಿಲ್ಲ ರಾಮ ನಮೋ
ಗುರ್ತುಯಿಲ್ಲದೆ ನಿನ್ನಪಾದ ಮರ್ತು ಕೆಟ್ಟೆ ರಾಮ ನಮೋ
ಬಿನುಗಣದೆ ಶಿಷ್ಟಸಂಗಕೆ ಮನವ ಕೊಡದೆ ರಾಮ ನಮೋ
ನಶಿಪ ಐಹಿಕಸುಖಕೆ ಮೆಚ್ಚಿ ಮಸಿಮಣ್ಣಾದೆ ರಾಮ ನಮೋ

ಭ್ರಷ್ಟತನದಿ ಇಷ್ಟುದಿನವು ನಷ್ಟಗೈದು ರಾಮ ನಮೋ
ಇಷ್ಟೆಸಾಕು ಕೆಟ್ಟಬವಣೆ ಕಷ್ಟಕಳೆಯೆ ರಾಮ ನಮೋ

ಭ್ರಷ್ಟನೆಂದು ಬಿಟ್ಟಿ ಬೇಸರದೃಷ್ಟಿ ಬೇಡ ರಾಮ ನಮೋ
ಗಟ್ಟಿನಿನ್ನ ಚರಣಕಮಲ ಮುಟ್ಟಿಭಜಿಪೆ ರಾಮ ನಮೋ
ಹೀನಸಂಸಾರದೊಳಗೆ ಕೊರಗಿ ಜ್ಞಾನ ತೊರೆದೆ ರಾಮ ನಮೋ
ಬಿನುಗುಮತಿ ನಾ ಗೈದ ದೋಷ ಗಣಿಸಬೇಡ ರಾಮ ನಮೋ
ಜನನ ಮರಣದು:ಖವೆಂಬ ಕುಣಿಕೆ ಬಿಡಿಸು ರಾಮ ನಮೋ
ಭವದತಾಪ ಭಯವು ತಡೆಯೆ ಜವದಿ ಕಾಯೊ ರಾಮ ನಮೋ
ತರಳನ್ನರಕೆ ಕರುಣದಾಲಿಸಿ ಕರವ ಪಿಡಿಯೋ ರಾಮ ನಮೋ
ಭರದಿ ಎನ್ನ ದುರಿತರಾಸಿ ತರಿದುಬಿಸುಡು ರಾಮ ನಮೋ

ದುರಿತಕರ್ಮದೊಳಗೆ ಕೊರಗಿ ಶರಣುಬಂದೆ ರಾಮ ನಮೋ
ನಿರುತಮಾರ್ಗ ಆವುದೆನಗೆ ಕರುಣದೊರೆಯೊ ರಾಮ ನಮೋ
ಮರವೆ ಮಾಯ ತರಿದು ಸ್ಥಿರವಾದವುನೀಡು ರಾಮ ನಮೋ
ಮಂಕುವಿಷಯಲಂಟಪವೆಂಬ ಸಂಕೋಲೆ ಕಡಿಯೊ ರಾಮ ನಮೋ
ತನುವುಮನವುಧನವು ನಿನಗೆ ಅರ್ಪಿಸಿದೆನು ರಾಮ ನಮೋ
ನಿನ್ನ ಪಾದದಾಸರೊಳಗೆ ಎನ್ನ ಕೂಡಿಸು ರಾಮ ನಮೋ
ಭಿನ್ನಭೇದವಿಲ್ಲದೆ ನಿನ್ನ ಮಣಿದುಬೇಡ್ವೆ ರಾಮ ನಮೋ
ಇನ್ನು ನೀನೆ ಎನ್ನ ಮನದ ಭಿನ್ನ ಬಿಡಿಸು ರಾಮ ನಮೋ
ಧನ್ಯನೆನಿಸು ಎನ್ನ ಪಾದಸೇವೆ ನೀಡಿ ರಾಮ ನಮೋ
ಈಶಎನ್ನಧ್ಯಾಸದೊಳಗೆ ವಾಸವಾಗೊ ರಾಮ ನಮೋ

ಹೇಸಿಕೆ ಪ್ರಪಂಚ ಮಾಯ ನಾಶಮಾಡು ರಾಮ ನಮೋ
ಪೋಷಿಸೆನ್ನನುಮೇಷ ನೇಮ ಧ್ಯಾನದಿರಿಸಿ ರಾಮ ನಮೋ
ಹೊಲೆಯಬವಣೆಯೊಳಗೆ ಬಿದ್ದು ಬಳಲಲಾರೆ ರಾಮ ನಮೋ
ಗೆಲುವುನೀಡು ನಿಮ್ಮಧ್ಯಾನ ಫಲವು ಫಲಿಸಿ ರಾಮ ನಮೋ
ಬೇಡಿಕೊಂಬ ಶಕ್ತನಲ್ಲ ಮೂಢನಾನು ರಾಮ ನಮೋ
ನಿನ್ನ ಮಹಿಮೆಗಳನು ಬಣ್ಣಿಸಲೆನ್ನಗಳವೇ ರಾಮ ನಮೋ
ಶೇಷಬ್ರಹ್ಮ ಸುರಾದಿಗಳಿಗೆ ಶಕ್ಯವಲ್ಲ ರಾಮ ನಮೋ
ಮರ್ತ್ಯದವನು ನಾನು ನಿಮ್ಮನರ್ತೇನೆಂತು ರಾಮ ನಮೋ
ಭಕ್ತವತ್ಸಲನೆಂಬ ಬಿರುದಹೊತ್ತು ಆಳ್ವ ರಾಮ ನಮೋ
ಒಡೆಯ ನೀನೆ ನುಡಿಸಿದಂತೆ ನುಡಿವೆನಯ್ಯ ರಾಮ ನಮೋ

ಅಂಬುಜಾಕ್ಷ ನಿನ್ನ ಕರದ ಕೊಂಬೆ ನಾನು ರಾಮ ನಮೋ
ನಿನ್ನ ಸೂತ್ರದಿಂದ ಉಂಡುಉಟ್ಟು ಕುಣಿವೆ ರಾಮ ನಮೋ
ಮಾನ ಅಭಿಮಾನವೆಲ್ಲ ನಿನ್ನ ಬಿರುದು ರಾಮ ನಮೋ
ನಿನ್ನ ಬೆನ್ನುಬಿದ್ದು ನಾನು ಧನ್ಯವಾದೆ ರಾಮ ನಮೋ
ಭಕ್ತಿಯಿಂದ ನಿನ್ನ ಭಜಿಸಿ ಮುಕ್ತನಾದೆ ರಾಮ ನಮೋ
ನಿತ್ಯಬಿಡದೀ ನಿನ್ನನಾಮ ಪಠಿಸುವವರು ರಾಮ ನಮೋ
ಸತ್ಯನಿತ್ಯ ಸುಖಪಡೆದು ಮುಕ್ತರಾಹರು ರಾಮ ನಮೋ
ಮಂಗಳೆಂದು ಶ್ರೀರಾಮಂಗೆ ಹಿಂಗಿದೆ ಭವಭಯ
ರಾಮ ನಮೋ ೧೦೮

೭೬೨

ಕರ್ತು ಸರ್ವೋತ್ತಮ ಸತ್ಯ ಸತ್ಯ ಹರಿ
ಭಕ್ತವತ್ಸಲ ಸಿರಿಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧

ಜಿತಮುರ ಮುಪ್ಪುರಹಿತ ಪತಿವ್ರತಸ್ತ್ರೀಯ
ರತುಲತುಲಸಿಮಾಲ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೨

ಈಶ ಕೇಶ ಜಗದೀಶ ದೋಷಹರ ಶ್ರೀಶ
ಶೇಷಶಾಯಿ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೩

ಪಾತಕಹರ ವಿಧಿತಾತ ವಿಮಲ ಸುಖ
ದಾತ ಜಗನ್ನಾಥ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೪

ಮಂದರಗಿರಿಧರ ಸುಂದರಮೂರುತಿ
ಇಂದಿರೆಯರ ಪ್ರಿಯ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೫

ನಾರಾಯಣಪಾದ ಪಾರಾಯಣಜನ
ಘೋರ ನಿವಾರಣ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೬

ರಮಾಲೋಲ ಭಕ್ತಕ್ಷಮಾಶೀಲ
ಭವಭ್ರಮಜಾಲಹರ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೭

ಪ್ರೇಮಮಂದಿರನುತ ಕಾಮಜನಕ ಸುಖ
ಧಾಮ ದಾಮೋದರ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೮

ರತಿಪತಿಪಿತ ಕ್ಷಿತಿಕಪತಿಗತಿಮತಿಯುತ
ಯತಿನುತ ಹತಭವ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೯

ನಿಗಮಗೋಚರ ತ್ರಿಜಗದ ಜೀವನ
ಬಗೆಬಗೆಯವತಾರದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೦

ಕಲಕದಂತೆ ಆಲದೆಲೆಯಲಿ ಮಲಗಿ ಮಹ
ಪ್ರಳಯಗೆಲಿದ ಸಿರಿ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೧

ಪೋಗಿರ್ದವೇದವ ಯೋಗದಿ ತಂದು ಸೃಷ್ಟಿ
ಸಾಗಿಸಿದಗಧರ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೨

ಬಂಧುರ ಬೆನ್ನಲಿ ಮಂದರಗಿರಿ ಪೊತ್ತು
ಸಿಂಧುವ ಕಲಕಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೩

ಸುಂದರಸ್ತ್ರೀಯಾಗಿ ತಂದು ಅಮೃತ ಸುರ
ವೃಂದಕೆ ನೀಡಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೪

ಅಂದು ಅಮರರಿಗೆ ಬಂದ ಕಂಟಕಮಂ
ಛಿಂದಿಸಿ ಸಲಹಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೫

ಕೋರೆದಾಡಿಲಿಂದ ಹಿರಣ್ಯಾಕ್ಷನಂ
ಸೇರಿಸಿದೆಮಪುರ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೬

ಮೂರುಲೋಕಕಾಪಾರಸುಖವನಿತ್ತಾ
ಪಾರಮಹಿಮೆಗಾರ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೭

ನರಮೃಗವೇಷದಿ ದುರುಳ ಕಶ್ಯಪನ
ಕರುಳ ಬಗೆದ ವೀರಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೮

ಭಕ್ತಪ್ರಹ್ಲಾದನ ಎತ್ತಿ ಪ್ರೀತಿಯಿಂ
ಮುಕ್ತಿಸಂಪದವಿತ್ತ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೯

ಭೂಮಿಪ ಬಲಿಯಂ ಭೂಮಿಯೊಳಿಳಿಸಿದ
ವಾಮನಾವತಾರದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೨೦

ನೇಮತೀರಿಸಿ ಮತ್ತೆ ಭೂಮಿಪಾಲಕನಂ
ಪ್ರೇಮದುದ್ಧರಿಸಿ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೨೧

ಕಡಿದು ಮಾತೆಶಿರ ಒಡನೆ ಪಿತನ ಮನ
ಕಡುಸಂತಸಗೈದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೨೨

ಮತ್ತೆ ತಾತನಿಂದ ಸತ್ತ ಮಾತೆಯ ಪಡೆದ
ದ್ಭುತ ಮಹಿಮ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೨೩

ದಿವ್ಯಚರಿತ ಜಗದಯ್ಯಾ ಬಲದಿ ಕಾ
ರ್ತವ್ಯನ ವಧಿಸಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೨೪

ರಘುಕುಲದ್ಭುಟ್ಟಿದ ಜಗವನುದ್ಧರಿಸಲು
ನಿಗಮಾಗಮನುತ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೨೫

ಯೋಗದಿಂದ ಮುನಿಯಾಗ ರಕ್ಷಿಸಿ ಮುಂದೆ
ಸಾಗಿದ ಮಿಥಿಲೆಗೆ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೨೬

ಪಥದಿ ಶಿಲೆಯನೊದ್ದು ಪತಿತಪಾವನಾಂಗಿ
ಸತಿಯೆಂದೆನಿಸಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೨೭

ನಾಥ ತ್ರಿಲೋಕ ಶ್ರೀ ಸೀತಾಕಲ್ಯಾಣ ಮಹ
ಖ್ಯಾತಿಲಿ ಕೈಗೊಂಡ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೨೮

ಅಗಣಿತಭಾರ ಸೊಗಯಿಪ ಶಿವಧನುವ ಮುರಿ
ದಘನಾಶ ರಘುವರ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೨೯

ಪರಮನಿರ್ಜರರು ಗರೆದ ಪೂವೃಷ್ಟಿಯಿಂ
ಹರುಷದಿ ಧರಿಸಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೩೦

ಜನಕನ ಬಹುಮಾನ ಘನಕನಿಕರದಿಂ
ದನುಕರಿಸಿದ ಹರಿ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೩೧

ನರಲೀಲೆಗದುಸರಿಸೆರಗಿದ ಪಿತನಿಗೆ
ಕರೆತಂದು ಸತಿಯಂ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೩೨

ವರಪಿತನೊಚನವ ಪರಿಪಕ್ವಗೈಯಲು
ತೆರಳಿದರಣ್ಯಕೆ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೩೩

ಸೀತಾಲಕ್ಷ್ಮಣರ ಆತುರಮಂ ಕಂಡು
ಜೊತೆಯಲಿ ಕರೆದೊಯ್ದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೩೪

ಚಿತ್ರಕೂಟದಲಿ ಪತ್ರಶಾಲೆಯೊಳು
ಅರ್ಥಿಯಿಂದರ್ದನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೩೫

ಭರತ ಬಂದೆರಗಲು ಕರುಣಿಸಿ ಪಾದುಕೆ
ವರದ ಹಸ್ತವಿತ್ತ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೩೬

ದಂಡಕಾರಣ್ಯಕ್ಕೈದು ತಂಡತಂಡದಿ ಮುನಿ
ಹಿಂಡುಜನರ ಕಂಡು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೩೭

ಮಾಯಾದನುಜರಿಂ ನೋಯುವ ಮುನಿಗಣ
ಕಾಯಿದ ಕರುಣದಿಂದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೩೮

ಪುಂಡ ವಾಸಿಸಿದ ದಂಡಕಾರಣ್ಯದಲಿ
ಭಂಡ ರಕ್ಕಸಹರ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೩೯

ಅಗ್ನಿದೇವನಲ್ಲಿ ಸಂಜ್ಞೆತಿಳುಹಿ ತನ್ನ
ಪ್ರಾಜ್ಞೆ ಸತಿಯನಿಟ್ಟ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೪೦

ಛಾಯ ಸೀತೆಯಂ ಮಾಯದಿಟ್ಟು ಉ
ಪಾಯದಂದಿರ್ದನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೪೧

ಮಾಯಾ ಶೂರ್ಪನಖಿ ಮೋಹಿಸಿ ಬರಲವಳ
ವಯವ ಖಂಡ್ರಿಸಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೪೨

ಖರದೂಷಣ ತ್ರಿಶಿರರ ಮರ್ದಿಸಿದ
ಪರತರಭುಜಬಲ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೪೩

ವನಿತೆಕಾವಲಿಗೆ ಅನುಜನಿಟ್ಟು ಮೃಗ
ಬೆನ್ನಟ್ಟಿ ಪೋದನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೪೪

ವನಕೆಳೆದೊಯ್ಯುವ ಕನಕಮೃಗವ ಕೊಂದು
ಘನತ್ವರ ತಿರುಗಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೪೫

ಸತಿಯ ಬಿಟ್ಟುಬಂದ ಹಿತದ ತಮ್ಮನ ಕಂಡು
ಅತಿಮೌನ ತಾಳಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೪೬

ಸವರಿ ರಕ್ಕಸಕುಲ ಭುವನ ಭಾರಿಳುಹಲು
ನವನವ ತೋರಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೪೭

ಅರಿಯದ ನರನಂತೆ ಮರುಗುತ ಬಂದು ಕಂಡು
ಬರಿಯ ಆಶ್ರಮವ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೪೮

ಸತಿಯೆ ಪೋದೆಯೆಂದು ಕ್ಷಿತಿಯಮೇಲೆರಗಿದ
ಮತಿದಪ್ಪಿದವನಂತೆ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೪೯

ಎದ್ದು ನಿಂತು ಮತ್ತೆ ಮುದ್ದು ಮೋಹಿನಿ ಎ
ಲ್ಲಿದ್ದ್ಯೆಂದು ಕೂಗುತ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೫೦

ಹೆಂಡತಿಯೆಲ್ಲೆಂದು ಕಂಡಕಂಡಂತೆ ಮೃಗ
ಹಿಂಡನು ಕೇಳಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೫೧

ಘನರೋಷದಿ ಹೊರಟನು ಸತಿಯನ್ನುಡುಕುತ
ದನುಜಕುಲಾಂತಕ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೫೨

ಮರಣಪ್ರಾಯನಾದ ಗರುಡನ ಕಂಡನು
ಶರಣು ಸಹಜಭಾವ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೫೩

ಕರುಣದಿ ಗರುಡಂಗೆ ಪರಮ ಮುಕ್ತಿಪದ
ಕರುಣಿಸಿದನು ತ್ವರ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೫೪

ಶಬರಿ ಗೈದ ಪೂಜೆ ಸೊಬಗಿನಲಿ ಕೈಕೊಂಡ
ಪ್ರಭುವರ ಪರತರ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೫೫

ಶೀಘ್ರದಿಂದ ಪೋಗಿ ಸುಗ್ರೀವನ ಸಖ್ಯ
ಆಗ್ರದಿ ಬೆಳೆಸಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೫೬

ವಾಲಿಯ ನಿಗ್ರಹಿಸಿ ಶೀಲ ಸುಗ್ರೀವನಿಗೆ
ಲೋಲನೆನಿಸಿದ ಪಟ್ಟ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೫೭

ಸಾರಸಾಕ್ಷಿಯರ ಸಾರ ವೃತ್ತಾಂತ ತಿಳಿ
ಧೀರಹನುಮನಿಂದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೫೮

ಕ್ಷಣದಿ ಕೂಡಿಸಿದನಗಣಿತ ಕಪಿಬಲ
ಪ್ರೈಣ ಬೆಳೆಸಿದನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೫೯

ಭರದಿಂ ತೆಂಕಣ ಶರಧಿಯ ತಟಕಿಳಿದ್ದರ
ಸುರ ವಿನಮಿತ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೬೦

ತಟ್ಟನೆ ಸೇತುವೆ ಕಟ್ಟಿಸಿ ಲಂಕೆಗೆ
ಇಟ್ಟನು ಮುತ್ತಿಗೆ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೬೧

ಕೀಳುದೈತ್ಯಗೆ ಬುದ್ಧಿ ಪೇಳಿಸಿದನು ಕರು
ಣಾಳು ಮೇಘಶ್ಯಾಮ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೬೨

ಕೀಳುದೈತ್ಯ ಹೀಯಾಳಿಸಿ ನುಡಿಯಲು
ತಾಳಿದ ಪಂಥವ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೬೩

ದೋಷನಾಶ ಜಗದೀಶ ಈಶ ಕಡು
ರೋಷದೆತ್ತಿದ ಧನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೬೪

ಒದರಿಸಿದ ಧನು ಪದುಮನಾಭ ತನ್ನ
ಭುಜಬಲಶಕ್ತಿಯಿಂ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೬೫

ಬೆದರಿತು ಭೂತ್ರಯ ಅದರಿತು ದಿಕ್ಕು ಬಿ
ಲ್ಲದೆಗೆ ಶರಪೂಡಲು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೬೬

ಉದುರಿ ಬಿದ್ದವು ತಾರೊದರಿತಾಕಾಶ ವಿಧ
ವಿಧದಿಂದಬ್ಬರಿಸಲು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೬೭

ಮೂರು ಲೋಕಂಗಳು ಬೀರಿತು ಧನುಷ್ಠೇಂ
ಕಾರ ಗೈಯಲು ಹರಿ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೬೮

ಸದನದೊಳಡಗಿಸಿದೆದೆಯೊಡಿಸಧಮನ
ವಿಧ ವಿಧಸುರಬಲ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೬೯

ನೆರೆದರಂಬರದಲಿ ಸುರನಿಕರರು ಬಂದು
ಧುರಕನುವಾಗಲು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೭೦

ತ್ರಾಣಗೆಟ್ಟ ಹರ ಪೋಣಿಸಿ ಶರಸಂ
ಧಾನ ಗೈಯಲು ಹರಿ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೭೧

ಮುಚ್ಚಿದ ಕಿಚ್ಚು ಪುರ ಬಿಚ್ಚಿದ ಖಳರೆದೆ
ಕೊಚ್ಚಿಸದುರಲು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೭೨

ಶುಂಭ ಇಂದ್ರಜಿತು ಕುಂಭಕರ್ಣ ಮಹ
ಗಂಭೀರನಳಿದನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೭೩

ತಾಮಸ ರಾವಣನ ಭೂಮಿಗುರುಳಿಸಿದ
ಸ್ವಾಮಿ ಸೀತಾಪತಿ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೭೪

ಲೋಕಕಂಟಕರ ನೂಕಿ ಒದೆದು ಯಮ
ಲೋಕ ಸೇರಿಸಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೭೫

ಗೆಲಿದು ಲಂಕಾಪುರ ಸುಲಭದ್ವಿಭೀಷಣ
ಗೊಲಿದು ಒಪ್ಪಿಸಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೭೬

ಪಟ್ಟಗಟ್ಟಿದ ಮುದದಿಟ್ಟ ಲಂಕಾಪುರ
ಶಿಷ್ಟ ವಿಭೀಷಣಂಗೆ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೭೮

ಸತಿಯ ಗೆಲಿದು ತನ್ ರಥದೊಳಿರಿಸಿಕೊಂಡು
ಅತಿತ್ವರ ತಿರುಗಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೭೯

ಭೋರ್ಗರೆದವು ನಭೋಮಾರ್ಗದಿ ಸುರ ಭೇರಿ
ಧೀರ್ಘ ಸಂಭ್ರಮಿಸಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೮೦

ಸಮ್ಮತಕ್ಕಾಗಿ ಶಿವಲಿಂಗ ಪ್ರತಿಷ್ಠೆ ಮಾಡಿ
ಬ್ರಹ್ಮತ್ಯ ಕಳಕೊಂಡು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೮೧

ಛಾಯ ಸೀತೆಯನುಪಾಯದಗ್ನಿಲಿ ಬಿಟ್ಟು
ದಿವ್ಯ ಸೀತೆಯ ಕೊಂಡ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೮೨

ಪಾರ ಸಂಭ್ರಮದಿ ಸಾರಿ ಅಯೋಧ್ಯಾಪುರ
ಏರಿದ ಪಟ್ಟವ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೮೩

ಪರಲೋಕ ಸೇರಿದ ಪಿತನ ಕರೆಸಿ ತನ್ನ
ದರುಶನವಿತ್ತನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೮೪

ವಸುದೇವ ದೇವಕಿ ಗರ್ಭಾವತಾರಗೈದು ಪಾವನೆ
ನಿಸಿದ ಭೂ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೮೫

ವಿಕಟ ಪೂತನಿಯಂ ಯುಕುತಿಲಿ ಮರ್ದಿಸಿ
ಶಕಟನ್ನಹರಣಕೊಂಡ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೮೬

ಧೇನುಕಾಸುರ ಮಹಾತೃಣಾವರ್ತಕರೊದ್ದು
ಪ್ರಾಣಹೀರಿದನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೮೭

ದುಷ್ಟಕಂಸನ ಶಿರ ಕುಟ್ಟಿ ಪಿತಮಾತೆಯ
ರಿಷ್ಟ ಪೂರೈಸಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೮೮

ಗಿರಿಯೆತ್ತೇಳುದಿನ ಪೊರೆದ ಗೋವುಗಳ
ಗರುವ ಮುರಿದಿಂದ್ರನ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೮೯

ಬ್ರಹ್ಮಂಗಿರುವ ಮಹ ಹಮ್ಮು ಮುರಿದು ವಿಶ್ವಅಮಿತ
ಮಹಿಮೆತೋರ್ದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೯೦

ಗೋಕುಲ ಸಂಟಕ ನೂಕಿ ಸೌಖ್ಯವಿತ್ತು
ಜೋಕೆ ಮಾಡಿದ ವ್ರಜ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೯೧

ಆಟವಾಡಿದ ಗೋಪೆರಾಟದೊಲಿಸಿ ಜಗ
ದಾಟ ಕಾಂಬರನೀತ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೯೨

ಬಂಧಿಸಿ ರುಕ್ಮನ ತಂದು ರುಗ್ಮಿಣಿಯಂ
ಚೆಂದದಿ ಮದುವ್ಯಾದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೯೩

ಜಾಂಬವಂತನ ಜಂಬವ ಮುರಿದು
ಜಾಂಬವತಿಯ ತಂದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೯೪

ಸತ್ರಾಜಿತನಿಗೆ ಖಾತ್ರಿತೋರವನ
ಪುತ್ರಿ ಕೈಪಿಡಿದನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೯೫

ಪಕ್ಷಿಗಮನ ಪಾಂಡುಪಕ್ಷನೆನಿಸಿಕೊಂಡು
ರಕ್ಷಿಸಿದವರಂ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೯೬

ರಕ್ಷತ್ರಿಜಗಮಾನ ರಕ್ಷಿಸೆಂದೆನೆ ಸತಿ
ಗಕ್ಷಯಾಂಬರವಿತ್ತ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೯೭

ಪರಮ ಭಕ್ತರೆಂದು ಪೊರೆದ ಪಾಂಡವರ
ಧುರದಿ ಗೆಲುವನಿತ್ತು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೯೮

ಬದ್ಧರಂಗನೆಯರ ಬೌದ್ಧನಾಗಿ ವ್ರತ
ಬದ್ಧಗೆಡಿಸಿದನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೯೯

ಪರಿಯ ತಿಳಿಸಿ ತ್ರಿಪುರರ ಮೂಲವಂ
ಹರನಿಂದಳುಕಿಸಿದ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೦೦

ಕಲಿಯುತಾನಾಗಿ ತಿಲಿದವರೊಡಲೊಳು
ಹೊಳೆಯುತ ನಿಂತನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೦೧

ಭಕ್ತರೋದ್ಧಾರಕೆ ಹತ್ತು ಅವತಾರಮಂ
ಪೊತ್ತು ಆಳಿದನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೦೨

ಭಕ್ತಿಯಿಂ ಪಠಿಸಲು ಹತ್ತು ಅವತಾರ ಸ
ಮಸ್ತ ಸಿದ್ಧಿನೀಯ್ವನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೦೩

ಪುತ್ರಾಪೇಕ್ಷಕರು ತೃಪ್ತಿಯಿಂ ಪಠಿಸಲು
ಪುತ್ರರನೀಯ್ವನು ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೦೪

ನಿರುತ ಭಕ್ತಿಯಿಂ ಸ್ಮರಿಸಲು ದಾರಿದ್ರ್ಯ
ದುರಿತ ದೂರ ಮಾಳ್ಪ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೦೫

ಘನತರ ದೃಢದಿ ದಿನದಿನ ಪೊಗಳಲು
ಅನುಪಮ ಪದವೀಯ್ವ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೦೬

ಸೇರಿ ಪಠಿಸಲಂತು ನೂರೆಂಟು ನಾಮ ಮುಕ್ತಿ
ಕೋರಿದಾಕ್ಷಣವೀಯ್ವ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೦೭

ಜಯ ಜಯ ನುತಪ್ರೇಮ ಜಯ ಜಯ ಸುಖಧಾಮ
ಜಯ ಜಯ ಶ್ರೀರಾಮ ಗೋವಿಂದ ನಮೋ
ಮುಕ್ತಿದಾಯಕ ಸಿರಿಗೋವಿಂದ ೧೦೭

೭೬೩

ತನುಮನಧದಿಂದ್ಧನುಮನನಾಮವ
ನೆನೆಯೆ ಮುಕ್ತಿಪದ ಸಿದ್ಧಾಂತ
ಜೈ ಶ್ರೀರಾಮನ ದೂತ್ಹನುಮಂತ ೧

ಮೇರುಪರ್ವತದಿ ಘೋರದನುಜನಿಗೆ
ಸಾರಿ ಶಾಪವಿತ್ತ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೨

ಸಂಜನಿಸಿದಿ ಹರಿ ಕಂಜನಾಭನ ದಯ
ದಂಜನೆಗರ್ಭದಿ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೩

ಪಟುತರ ವಾಕ್ಯದಿ ನಟಿಸಿದ ಜನನಿಗೆ
ಜಠರದೊಳಗೆ ನಿಂತು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೪

ಮಾರುತ ಮಮ ಸುಕುಮಾರ ಬಾರೆಂದು
ಕರೆಯೆ ಧೀರ ಬರುವೆನೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೫

ನಯನವಿಲ್ಲದೆ ದು:ಖಮಯದಿಹ್ಯಂಜನೆದೇವಿ
ಭಯ ನಿವಾರಿಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೬

ರಾಜಿಸಿದಿನಕೋಟಿ ತೇಜ:ಪುಂಜನಾಗಿ
ಮೂಜಗೊಪ್ಪುವಂತೆ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೭

ಬಾಲತನದಿ ಘನಲೀಲೆ ತೋರಿದ ಸು
ಶೀಲ ಅಸಮಬಲ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೮

ತಿಳಿಯದ್ಹಣ್ಣುಯೆಂದು ನಳಿನಮಿತ್ರನನು
ಸೆಳೆದು ನುಂಗಿದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೯

ಉದಯಾದ್ರಿಗೆ ಜಿಗಿದುದಿಸಿದ ಮರುದಿನ
ದದಟಪರಾಕ್ರಮ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೦

ವೀರಪ್ರತಿಜ್ಞೆಯ ಪೂರೈಸಲು ಬಂದು
ಸೇರಿದ ಕಿಷ್ಕಿಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೧

ಜಾಗ್ರದಿಂ ವಾಲಿಯ ಉಗ್ರತಾಪದಿಂದ
ಸುಗ್ರೀವನ ಕಾಯ್ದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೨

ಪೋಷಿಸುತಿನಸುತಾನ್ವಾಸಿಸಿದನು ಋಷಿ
ವಾಸಪರ್ವತದಿ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೩

ಪರಮನು ತನ್ನಗೆ ಕರುಣಿಸಿದ್ವಾಕ್ಯವ
ಸ್ಮರಣಕೆ ತಂದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೪

ಅಭಯಕರ್ತನೆ ಎನ್ನ ಪ್ರಭುವೆ ನೀಡಿದ ಮಹ
ದಭಯ ಪೂರೈಸೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೫

ಗುರ್ತಿಡಿದನು ತನ್ನ ಕರ್ತನು ಬಂದದ್ದು
ಭಕ್ತಶಿರೋಮಣಿ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೬

ಸಪ್ತದ್ವಿಭುವನಗಳ್ಹೊತ್ತು ಆಳುವನಂ
ಹೊತ್ತು ಹಾರಿದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೭

ಪನ್ನಂಗಶಯನ ಉನ್ನತ ಪಾದಸೇವೆ
ಯನ್ನು ಕೈಕೊಂಡನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೮

ತನುಮನಧವನು ವನಜನಾಭನಿಗಿತ್ತು
ಮಣಿದು ಧನ್ಯನಾದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೯

ಗುಪ್ತದಿಂದ ಜಗದಾಪ್ತನ ಸತ್ಕೃಪಾ
ಪ್ರಾಪ್ತ ಮಾಡಿಕೊಂಡ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೨೦

ಸಾರ ಕಪಿಗಳೊಳು ತೋರಿದ ನಿರುತೀತ
ಸಾರಸಾಕ್ಷನಿಗೆ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೨೧

ಖಾತ್ರಿತೋರಿದ ಜಗಸೂತ್ರಧಾರನಿಗೆ
ಧಾತ್ರಿಜೆನ್ನುಡುಕಲು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೨೨

ಅಬ್ಧಿಶಯನನಿಂದ ಮುದ್ದಿ ನುಂಗುರಕೊಂಡು
ಸಿದ್ಧನಾಗ್ಹೊರಟನುಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೨೩

ಜಾಂಬವಾದಿಗಳ ಜಂಬವ ಕೇಳುತ
ಗುಂಭದಿಂದಿರ್ದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೨೪

ಗಂಭೀರತನದಿಂದಂಬುಧಿ ಹಾರಲು
ಸಂಭ್ರಮದೆದ್ದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೨೫

ದೇವತೆರ್ವಾಸಿಪ ಪಾವನಪರ್ವತ
ಭುವನದಿ ತುಳಿದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೨೬

ಸುರಸದೇವಿಯಳ ಸರಸದಿ ಗೆಲಿದೀತ
ಸುರರಗ್ಗರುಷವಿತ್ತ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೨೭

ಮೋಡಗಳಿಕ್ಕಡಿ ಮಾಡುತ ಪೊಕ್ಕನು
ಗಾಢಸಾಮರ್ಥ್ಯದಿ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೨೮

ಮೈನಾಕಪರ್ವತ ದೈನ್ಯಬಡಲು ಬಹು
ಸನ್ಮಾತವಿತ್ತನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೨೯

ಕಾಲಭೈರವನಂತೆ ವಾಲಝಳ್ಪಿಸಿ ಗಗನ
ಮಾಲಿನೊಳ್ ನಡೆದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೩೦

ಖೇಚರದ್ವಾರತ ಯೋಚಿಸುತಿರ್ದನು
ವಾಚ ಮಾನಸದಿಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೩೧

ಮೂರು ಪುರಂಗಳಂ ಹಾರಿ ನೋಡುವೆ ಮಮ
ವೀರ ಮಾತೆಯನೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೩೨

ಛಾಯಗ್ರಹಗಳುಪಾಯದೊದೆದು ಯಮ
ರಾಯಗೊಪ್ಪಿಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೩೩

ರೌದ್ರದಿ ಮಹಸಮುದ್ರ ಹಾರಿ ಸುವೇ
ಲಾದ್ರಿಯ ಸೇರಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೩೪

ಭೂಪ ಲಂಕಿಣಿಗೆ ಪಾಪದಿಂದ ಬಂದ
ಶಾಪವಿಮೋಚಿಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೩೫

ಮಿಕ್ಕಿದ ಪುರವನು ತರ್ಕಿಸದ್ಹೊಕ್ಕನು
ರಕ್ಕಸಕುಲಭೀತ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೩೬

ಘೋರರಕ್ಕಸರ ಸಾರಭವನಗಳ
ಸೇರಿ ಶೋಧಿಸಿ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೩೭

ಶುಂಭ ರಾವಣ ಮಹ ಕುಂಭಕರ್ಣರ ಮನೆ
ಗುಂಭದಿ ಹುಡುಕಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೩೮

ಲಕ್ಷಮಂದಿ ಭವನಕ್ಷಯಾದಿಗಳ
ಲಕ್ಷಿಸದ್ಹೊಕ್ಕನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೩೯

ಮನೆಮನೆ ಹುಡುಕ್ಹುಡುಕನುಪಮದಣಿದು ತಾ
ಮನದಿ ಯೋಚಿಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೪೦

ಉರುತರ ರೋಷದಿ ಪುರವಕಿತ್ತ್ಹೊಯ್ಯಲು
ಭರದಿ ಸಿದ್ಧನಾದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೪೧

ತ್ರಾಣಯುತನು ಆಗ ವಾಣಿವಾಕ್ಯವನು
ಮಾಣದೆ ಕೇಳಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೪೨

ಎದ್ದು ವೇಗದಿ ಉದ್ಯಾನವನಕೆ ಹಾರಿ
ಮುದ್ದು ಮುಖಿಯ ಕಂಡ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೪೩

ಪುಂಡರೀಕ್ಷಾನ ಹೆಂಡತಿಪಾದ ಕಂಡು
ಮಂಡೆ ಬಾಗಿದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೪೪

ಸಚಿತ್ತನರಸಿಯು ಮುಚ್ಚಿನಯನಗಳ
ಬಿಚ್ಚದಿರುವುದು ಕಂಡು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೪೫

ಹುರುದುಂಬೆದ್ದನು ದುರುಳನಪುರ ತುಳಿ
ದೊರೆಸಿ ಬಿಡುವೆನೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೪೬

ಹತ್ತುತಲೆಯಹುಳಕೆತ್ತಣೀ ಅದ್ಭುತ
ಶಕ್ತಿ ಒದಗಿತೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೪೮

ಭ್ರಷ್ಟನ ಕುಲ ತರಿದೊಟ್ಟಿ ಯಮನಪುರ
ಕಟ್ಟಿಬಿಡುವೆನೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೪೯

ಸಿಟ್ಟಿನಿಂದೆತ್ತಿದ ದಿಟ್ಟ ತನ್ನ ವಜ್ರ
ಮುಷ್ಟಿ ಖಳನಮೇಲೆ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೫೦

ಪರಮ ಭಕ್ತ ಮತ್ತೆ ಅರಿವಿನೊಳಗೆ ಬಂದು
ತಿರುಗಿ ಯೋಚಿಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೫೧

ಚಿತ್ತಜತಾತನ ಕತ್ತಿಗೆ ಮೀಸಲು
ಹತ್ತುತಲೆಗಳೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೫೨

ಪರಮನಚರಿತವರಿದು ಧರೆಯಸುತೆ
ಗ್ಹರುಷವಿತ್ತನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೫೩

ಆದಿಶಕ್ತಿ ಮುಂದೋದಿ ರಾಮಾಯಣ
ಖೇದ ನಿವಾರಿಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೫೪

ಮೂಜಗಕರ್ತನ ನೈಜಗುಣಗಳೊಂದು
ಮಾಜದ್ಹೇಳಿದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೫೫

ಮಣಿವೆ ಜನನಿ ನಿನ್ನಣುಗನ ನೋಡಿನ್ನು
ಧನ್ಯನ ಮಾಡೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೫೬

ಸರಸಿಜಾಕ್ಷಿಮನದಿರವ ತಿಳಿದು ಘನ
ಪರಮಭಕ್ತ ಜ್ಞಾನಿ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೫೭

ಶಂಕಿಸಬೇಡೌ ಪಂಕಜಮುಖಿ ನಿನ್ನ
ಕಿಂಕರ ನಾನೆಂದ ಧೀಮಂತ
ಜೈ ಶ್ರೀರಾಮ ದೂತ್ಹನುಮಂತ ೫೮

ಕಂಜನಾಭನ ದಯದಂಜನೆಗರ್ಭದಿ
ಸಂಜನಿಸಿಹೆನೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೫೯

ಪರಮನ ದಯದಿಂದ ಶರಧಿಜಿಗಿದು ನಿನ್ನ
ತರುಣಿ ಕಂಡಿಹೆನೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೬೦

ನಿನ್ನನ್ನುಡುಕಲಿಕ್ಕೆ ಎನ್ನನ್ನಚ್ಚಿಹ್ಯನಾ
ಪನ್ನಂಗಶಯನನೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೬೧

ಜಾನಕಿನಾಥನು ಮಾಣದೆ ಕೊಟ್ಟಂಥ
ಖೂನವ ತೋರಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೬೨

ಉಂಗುರಿತ್ತು ವಿಮಲಾಂಗಿಮನದ ದು:
ಖಂಗಳೀಡ್ಯಾಡಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೬೩

ಗೌಪ್ಯದಿಂದ ಜಗದಾಪ್ತ ಪೇಳಿದ ಮಹ
ಗುಪ್ತಮಂ ಪೇಳಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೬೪

ಧಾತ್ರಿಜಾತೆಗೆ ಮಹಖಾತ್ರಿ ತೋರಿಸಿ ಕೃಪಾ
ಪಾತ್ರನಾದ ಬಲು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೬೫

ಕ್ಷೇಮದಿಂದೊಯ್ಯುವೆ ಶಾಮಸುಂದರನಲ್ಲಿ
ಗ್ಹೇಮಾತೆ ನಡೆಯೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೬೬

ವಿಸ್ಮಯ ಬಡಿಸಿದ ವಿಶ್ವರೂಪವ ತೋರಿ
ಶಾಶ್ವತಭುಜಬಲ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೬೭

ತಾಯಿಮಾತಿನ ರಾಯಿಯಂತೆ ಇವ
ಸಾವಧಾನನಾದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೬೮

ಭಂಡರಕ್ಕಸರ ಗಂಡುಗಲಿಯತನ
ಕಂಡುಬಿಡುವೆನೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೬೯

ವನದಿ ಹಾರಿದನು ಘನತರರೋಷದಿ
ಇನಕೋಟಿತೇಜದಿ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೭೦

ಅತ್ಯದ್ಭುತದಿಂದೆತ್ತ ನೋಡಲು ವನ
ಕಿತ್ತಿ ಈಡ್ಯಾಡಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೭೧

ಕಾಳರಕ್ಕಸಕುಲಕಾಲನಾಗಿ ನಿ
ರ್ಮೂಲ ಮಾಡಿದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೭೨

ಅಬ್ಬರದಸುರರ ಕೊಬ್ಬುಕಿತ್ತಿ ವೀರ
ಬೊಬ್ಬೆಯನಿಟ್ಟನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೭೩

ಹಣಿದು ರಕ್ಕಸಂ ಹೆಣಮೆದೆಯೊಟ್ಟಿದ
ಕುಣಿಕುಣಿದಾಡಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೭೪

ಭೀಕರರಥಮರ ನೂಕಿ ಒದೆದು ಯಮ
ಲೋಕ ಸೇರಿಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೭೫

ಅಧಮನ ಸಭೆಯನು ಹೆದರದೆ ಪೊಕ್ಕವ
ಬೆದರಿಸಿದಸುರರ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೭೬

ಛಲದಿ ರಾವಣನ ಕುಲವೆನೆಣಿಸಿದೀ
ತಳುಕದೆ ಪಟುಭಟ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೭೭

ಹೊಲೆಯ ದನುಜನಿಗೆ ಬಲುಮಿಲಿ ಜರಿದ್ಹತ್ತು
ತಲೆಹುಳವೆನ್ನುತ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೭೮

ವೀರ ಜರಿದ ಮನಸಾರ ರಕ್ಕಸನಿಗೆ ನಾರಿ
ಚೋರನೆಂದು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೭೯

ಪಾತಕನಿಗೆ ಬಲುನೀತಿ ಪೇಳಿದ ನಿ
ರ್ಭೀತನಾಗಿ ಕೂತು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೮೦

ವೈರಿಯಾಗಿ ಜಗದಾರು ಬದುಕಿದರು
ಸಾರಸಾಕ್ಷಗೆಂದು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೮೧

ಭ್ರಷ್ಟನಿಗೆಷ್ಟೋಸಾರ್ಹುಟ್ಟುಟ್ಟಿ ಕೆಟ್ಟದ್ದು
ದೃಷ್ಟಾಂತಗೊಳಿಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೮೨

ಮಿಡುಕಿದ ದುರುಳನ ಕೆಡಕುಗುಣಕೆ ಬಲು
ದೃಢತರ ಬಲಯುತ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೮೩

ಪರಿ ಪರಿ ಒರೆದನು ಶರಣು ಹೋಗ್ವರಿಗೆಂದು
ಕರುಣದಿ ಧುರಧೀರ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೮೪

ಕತ್ತೆರಾವಣನ ಸುತ್ತಿ ಪುರವನೆಲ್ಲ
ಮುತ್ತಿಗಿಟ್ಟುರುವಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೮೫

ಪೊಡವಿಜಾತೆಯಿಂದ ಪಡೆದು ಆಶೀರ್ವಾದ
ಕಡಲ ತಿರುಗ್ಹಾರಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೮೬

ಸಾರಸಾಕ್ಷನಿಗೆ ಸಾರಜಾನಕಿ ಕಥೆ
ಸಾರಿ ಧನ್ಯನಾದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೮೭

ಒಡೆಯನಿಗ್ಹೇಳಿದ ತಡೆಯಳು ಮಮಮಾತೆ
ಗಡನೆ ಹೊರಡುಯೆಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೮೮

ನಿಮಿಷದಿ ಕೂಡಿಸಿದಮಿತಕಪಿಗಳನು
ಪ್ರಮಥ ಭಕ್ತಮಣಿ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೮೯

ಶಿಕ್ಷದನುಜಕುಲ ಸಾಕ್ಷಾತನಿಗೀತ
ಸಾಕ್ಷಿ ಹೇಳಿದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೯೦

ಶರಧಿನ್ಹೊಳುಪರಿಯೊರೆದು ಪರಮನಿಗೆ
ಹರುಷವನಿತ್ತನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೯೧

ಸೇತುವೆ ನಿಲ್ಲಲು ಈತ ಕೈಲಾಸಕ್ಕೆ
ಖ್ಯಾತಿಯಿಂದ್ಹಾರಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೯೨

ಭಕ್ತಿ ಸಾಮರ್ಥ್ಯದಿ ಅತ್ಯದ್ಭುತಗಿರಿ
ಎತ್ತಿ ತೂಗಿದನು ಧೀಮಂತ
ಜೈ ಶ್ರೀರಾಮ ದೂತ್ಹನುಮಂತ ೯೩

ಸಡಲಿಸೀರೇಳುಲೋಕ ಗಡಗಡ ನಡುಗಿಸಿ
ಬಿಡದ್ಹೂಂಕರಿಸಿದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೯೪

ಮೃಡನು ಬಂದ್ಹೇಳಲು ತೊಡರುಯಾತಕೆಂದು
ಧೃಢದಿಬಿಟ್ಟ ಗಿರಿ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೯೫

ಸುತ್ತಿ ನಶಿಖರಗಳು ಕಿತ್ತಿ ಸೇತುವೆ ಸ
ಮಸ್ತ ಪೂರೈಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೯೬

ಸೊಗಸುವ ಕಪಿಗಳಿಂ ಜಿಗಿದಾಡುತ ಲಂಕ
ದಗಳತುಳಿದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೯೭

ಧೈರ್ಯವಿತ್ತು ಕಪಿವರ್ಯರಿಂ ಪುರದ್ಹೈ
ಶ್ವರ್ಯ ಸೂರೆಗೊಂಡ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೯೮

ಕೂಗಿ ಗರುಡನಿಂದ ನಾಗಪಾಶವನು
ಬೇಗ ನೀಗಿಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೯೯

ಮಂಕುದಾನವರ ಬಿಂಕ ಮುರಿಸಿದನು
ಪಂಕಜಾಕ್ಷನಿಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೦೦

ಅಂಜದೆ ತೇಜಃಪುಂಜನಾಗಿ ಮಹ
ಸಂಜೀವನ ತಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೦೧

ಕುಂಭಕರ್ಣನ ಶಿರ ಜಂಬದಿ ಮುರಿದವ
ಗಂಭೀರನೆನಿಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೦೨

ಅಂಬುಜಾಕ್ಷಿಯ ತಂದು ಅಂಬುಜನಾಭಂಗೆ
ಸಂಭ್ರಮದಿತ್ತನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೦೩

ಮಂಗಳಾಂಗ ಶಿವಲಿಂಗ ತಂದು ವಿಮ
ಲಾಂಗನೆಂದೆನಿಸಿದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೦೪

ಶ್ರೀಶನ ಪಟ್ಟಾಭಿಷೇಕವ ಕಂಡು ತಾ
ಶಾಶ್ವತನಾದನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೦೫

ನಾಮಮಾಲೆಯನು ಪ್ರೇಮದಿ ಬೇಡಿದ
ಶಾಮಸುಂದರಿಯಿಂದ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೦೬

ಭಕ್ತಯಿಂದ ಜಗದಾಪ್ತನ ಮನಸಿಗೆ
ತೃಪ್ತಿಯನಿತ್ತನು ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೦೭

ಸತ್ಯ ಶ್ರೀರಾಮನು ಚಿತ್ತದಿಟ್ಟು ತನ್ನ
ಭಕ್ತರ ಸಲಹುವ ಧೀಮಂತ
ಜೈ ಶ್ರೀರಾಮನ ದೂತ್ಹನುಮಂತ ೧೦೮

೭೬೪

ನೀಲಕಂಠ ಭವಮಾಲಹರಣ ದಯಾ
ಶೀಲ ಪಾಲ ನುತಶಂಭು ನಮೋ
ಶಾಂಭವಿಪತಿ ಶಿವ ಶಂಭೋ ಪ

ಶೂಲಪಾಣಿ ರುಂಡಮಾಲ ಉರಗಭೂಷ
ಕಾಲಸಂಹರ ಹರ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧

ಅಂಬುಧಿಧರ ಜಗದಂಬ ಮಹೇಶ ಭಕ್ತ
ರಿಂಬುದಾಯಕ ಮೃಡ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨

ಗಜಚರ್ಮಾಂಬರ ಸುಜನಸುಖಂಕರ
ಭಜಕಪ್ರೇಮನಿಧಿ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೩

ಪರಮಪ್ರಕಾಶ ಸುರವರದ ಮಹೇಶ ಮಹ
ದುರಿತನಿವಾರಣ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೪

ಚಂದ್ರಚೂಡ ಸುಗುಣೇಂದ್ರ ಪರಮಕೃಪಾ
ಸಾಂದ್ರ ಭೂತನಾಥ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೫

ಮರಣನಿವಾರ ನಿಜಶರಣಸಂಕುಲಧಾಮ
ಪರಕೆಪರತರಾತ್ಮ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೬

ತ್ರಿಪುರಸಂಹರ ಮಹಕಪಾಲಧರಿಸಿದ
ಸುಫಲದಾಯಕ ವರಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೭

ಸುಮನಸರೊಂದಿತ ಹಿಮಗಿರಿ ಸುತೆಪತಿ
ಅಮಿತಮಹಿಮ ವರಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೮

ಮೇರುಕಾರಣ ಭವಘೋರನಿವಾರಣ
ಮಾರಮದಾಂತಕ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೯

ನಿತ್ಯನಿರ್ಮಲಾತ್ಮ ನಿತ್ಯನಿರಾಕಾರ
ನಿತ್ಯನಿರಂಜನ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೦

ನಂದಿರೂಢ ನಿಜಾನಂದ ಅಸಮಚಿದಾ
ನಂದ ಚಿದಾಕಾರ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೧

ನೀರ್ಹೊತ್ತು ತ್ರೈಜಗ ಸೇರಿ ಸಂರಕ್ಷಿಪ
ಪಾರಾವಾರದಯ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೨

ಕಲ್ಲಲ್ಹೊಡೆಸಿಕೊಂಡು ಬಲ್ಲಿದ ವರವಂ
ಸಲ್ಲಿಸಿ ಸಲಹಿದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೩

ಬಿಲ್ಲಿನೆಸುಗೆಯನು ವಲ್ಲಭೇಗ್ಹೇಳುತ
ಬಲ್ಲಿದ ಶರವಿತ್ತ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೪

ಕಾಲಲೊದೆಸಿಕೊಂಡು ಮೇಲಾದಪದವಿಯ
ಪಾಲಿಸಿಧಘರಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೫

ಕುಂಬಾರಗೊಲಿದು ಸಂಭ್ರಮದಿಂದ ಮನೆ
ಮುಂಭಾಗದಾಡಿದ ಶಂಭು
ಶಾಂಭವಿಪತಿ ಶಿವ ಶಂಭೋ ೧೬

ಕನ್ನವಕೊರೆದು ಚಿನ್ನದ್ರವ್ಯವನು
ತನ್ನ ಭಕ್ತಗಿತ್ತ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೭

ಶಿಶುವನು ಕೊರೆಸುಂಡು ಕುಶಲಮಹಿಮೆ ತೋರಿ
ಅಸಮೋಕ್ಷವಿತ್ತು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೮

ಮಾದರವನ ಪ್ರಸಾದ ಒಲಿದು ಬಹು
ಮೋದದಿ ಸಲ್ಲಿಸಿದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೯

ಸೋಳವರುಷದ ಬಾಲಗೊಲಿದು ಯಮ
ದಾಳಿಗೆಲಿಸಿ ಕಾಯ್ದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೦

ದಿಟ್ಟ ಶಿವಶರಣೆಯು ಕೊಟ್ಟ ಹುಟ್ಟಿನ ಘನ
ಪೆಟ್ಟಿಗೆ ಪ್ರಸನ್ನನಾದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೧

ಶಮೆಶಾಂತಿಆಲಯ ನಮಿತ ಭುವನತ್ರಯ
ಪ್ರಮಥಶಣಾದಿನುತ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೨

ಡಮರುಪಾಣಿಭವ ಭ್ರಮವಿದೂರ ಮಯಾ
ಮಮತ ಪರಿಹಾರ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೩

ಶಾಂತಮೂರ್ತಿ ಉಮೆಕಾಂತ ಸುಜನಗಣ
ರಂತರಾತ್ಮಪ್ರಭು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೪

ನಾದಕಲಾಭರಿತಾದಿ ಅನಾದಿ ವರ
ವೇದವೇದಾಂಗ ಹರಿ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೫

ವೇದವೇದಾಗಮ್ಯ ಸಾಧು ಸುಗುಣವಂದ್ಯ
ನಾದಕಳಾತೀತ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೬

ಪರಕೆಪರಮತರ ಪರತತ್ವಾಧಾರ
ಸುರಮುನಿವಿನಮಿತ ಶಂಭೋ ನಮೋ
ಶಾಂಭವಿಪತಿ ಶಿವ ಶಂಭೋ ೨೭

ಸತ್ತ ಗಂಡನ ಕೊಟ್ಟು ಮೃತ್ಯುಗೆಲಿಸಿ ವರ
ಮುಕ್ತಿಪದವನಿತ್ತ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೮

ಚೋರ ಮಾದಯ್ಯನ ವೀರಭಕ್ತಿಗೆ ಮೆಚ್ಚ
ಪಾರಪದವನಿತ್ತ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೯

ಸೂಳೆ ಚೆನ್ನಕ್ಕನ ಶೀಲವ್ರತಕೆ ಮೆಚ್ಚಿ
ಮೇಲುಸೌಖ್ಯವಿತ್ತ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೩೦

ದಕ್ಷನು ಯಜ್ಞದಿ ದಾಕ್ಷಾಯಣಿಯ ನಿ
ರ್ಲಕ್ಷ್ಯಗೈದದ್ದು ಕಂಡು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೩೧

ರೌದ್ರದಿಂದ ವೀರಭದ್ರ ಚೌಡಿ ಮಹ
ರುದ್ರಗಣರನಟ್ಟಿ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೩೨

ದಕ್ಷನ ಮದಮುರಿದಾಕ್ಷಣ ಸುರಗುಣ
ರಕ್ಷಿಸಿದಳಂಕ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೩೩

ಭಂಗ ಸಹಿಸದೆ ವಾಮಾಂಗಿ ಗೌರಿ ಅಗ್ನಿ
ಗಂಗ ನೀಡಲು ಪರಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೩೪

ಗಿರಿರಾಜನಲಿ ಅವತರಿಸುಯೆಂದು ತನ್ನ
ಅರಸಿಗಭಯವಿತ್ತು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೩೫

ದುರುಳರ್ಧಾವಳಿಯಿಂದ ಮರೆಬಿದ್ದ ಸುರರಿಗೆ
ಕರುಣಿಸಿದಭಯವ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೩೬

ತಾರಕಾಸುರನ ಭಾರವನಿಳುಹಲು
ಸೇರಿದ ಸಮಾಧಿ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೩೭

ಸಮಾಧಿ ಕೆಡಿಸಲು ಸುಮಶರ ಬಂದು ತನ್ನ ಕು
ಸುಮಶರವೆಸೆಯಲು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೩೮

ಮಾರನ ತಾಪವ ಸೈರಿಸದುರಿನೇತ್ರ
ತೆರೆದನಬ್ಬರಿಸುತ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೩೯

ಸಮಯ ಸಾಧಿಸಿ ತ್ವರ ಹಿಮಜೆ ಒದಗಿಬಂದು
ನಮಿಸಿ ಆಲಂಗಿಸಿ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೪೦

ಕಾಂತೆ ಆಲಂಗಿಸಲತ್ಯಂತಮಹಿಮ ಮಹ
ಶಾಂತಾಕಾರನಾದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೪೧

ಗಿರಿಜೆಕಲ್ಯಾಣವ ಹರುಷದಿ ಕೈಕೊಂಡು
ಸರಸದಿ ನಡೆದನು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೪೨

ವಾರಿಧತಟದೊಳಾರುಶಿಶುಗಳು
ನೀರೊಳಾಡ್ವುದ ಕಂಡು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೪೩

ನಡೆಯಲು ಮುಂದಕೆ ಮಡದಿ ದೈನ್ಯದಾಗ್ರಹ
ಬಡಲು ವಿವರಿಸಿದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೪೪

ಎನ್ನ ವೀರ್ಯದಿಂ ಜನಿಸಿದ ಶಿಶುವೆಂದು
ವನಿತೆಗೆ ಪೇಳಿದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೪೫

ನಮ್ಮ ಬಾಲರೆಂದು ಒಮ್ಮನದೆತ್ತಲು ಉಮೆ
ಸಮ್ಮತಬಟ್ಟನು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೪೬

ಆರುಪಿಡಿದೆತ್ತಲು ತೋರಿತೊಂದೆ ದೇಹ
ನಾರಿ ಗಾಬರಿಸಲು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೪೭

ನಾರಿ ಗಾಬರಿ ಬೇಡ ಅರು ಮುಖವು ಈ
ರಾರುಭುಜವಗೆಂದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೪೮

ತಾರಕಾಸುರನ ಸಂಹಾರಕ್ಕಾಗಿ ಅವ
ತಾರವಿದೆಂದನು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೪೯

ತಾಳಿ ಮಹಸಂತಸ ಬಾಲಕನೆತ್ತಿ
ಕೈಲಾಸಕೆ ಬಂದನು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೫೦

ಅಮರಾದಿಸುರರೆಲ್ಲ ಭ್ರಮೆಯಿಂ ಬಂದು ಪಾದ
ನಮಿಸಿ ಮರೆಬೀಳಲು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೫೧

ಅಧಮನು ವರವಿನ ಮದದಿ ಮೆರೆವ ಸುರನಿ
ಗಿದಿರು ಯಾರುಯೆಂದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೫೨

ಬೇಡಿದ ವರಗಳ ನೀಡಿ ಭಕ್ತರಿಗೆ
ಕೇಡು ಬಗೆಯೆನೆಂದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೫೩

ಹರಿಹರ ಸುರರಿಂ ಮರಣವೆ ಇಲ್ಲೆಂದು
ವರವಿದೆ ಅವಗೆಂದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೫೪

ಎಷ್ಟು ತಲೆಯವರಿಗಷ್ಟುದಿನಡಗಲು
ನಷ್ಟವಿಲ್ಲವಗೆಂದು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೫೫

ನಡುವೆ ಸಿಗಲು ಆ ದುಡುಕು ದನುಜನಿಗೆ
ಕೆಡಕು ಬರುವುದೆಂದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೫೬

ಇದನು ಬಿಟ್ಟ ಮೇಲಧಮ ಅಸುರನಿಗೆ
ಒದಗದು ಮರಣೆಂದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೫೭

ಪಿತನ ವಚನ ಕೇಳತಿರೋಷದಿ ಎದ್ದ
ಸುತನ್ಹಿತದಪ್ಪಿದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೫೮

ವೀರ ಬೊಬ್ಬೆಯಿಟ್ಟು ಹಾರಿಗರ್ಜಿಪಕು
ಮಾರನ ತಡೆದನು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೫೯

ಕಾರುತ ಕೆಂಗಿಡಿ ವೀರ ಷಣ್ಮುಖ ತ್ವರ
ತೋರು ತಾರಕನಂ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೬೦

ಬಿಂಕಕೊಚ್ಚದೆ ಆ ಮಂಕುದೈತ್ಯನ ಬಲು
ಶಂಕಿಸದಿಡು ಆಜ್ಞೆ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೬೧

ಮಿಕ್ಕಿದ ವರಗಳಿಂ ಸೊಕ್ಕಿ ಮೆರೆವನವ
ಶಕ್ಯವಲ್ಲಾರಿಗೆಂದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೬೨

ಕಂಡುಬಿಡುವೆ ಆ ಭಂಡನಂ ಎನ್ನ ಉ
ದ್ದಂಡತನವ ನೋಡು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೬೩

ಕಲ್ಲಮೇಲಿರಲಿ ಕಲ್ಲಿನೊಳಡಗಲಿ
ಎಲ್ಲಿ ಪೊಕ್ಕರು ಬಿಡೆ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೬೪

ಆರುದಿನಡಗಲು ತೀರಿತು ನಿನ್ನ ಬಲ
ಯಾರು ಅವಗಿದಿರೆಂದು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೬೫

ಅರಲವದಲಿ ಆ ದುರುಳನ ಸೆರೆಪಿಡಿ
ದುರುವಿ ಬಿಡುವೆ ಮಮ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೬೬

ಹಲವುಯೋಚನೆ ಬಿಡು ಗೆಲವು ನೀಡಿ ಎನ
ಗೊಲಿದು ಅಭಯಕೊಡು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೬೭

ಬಾಲನ ವಚನವ ಆಲಿಸಿ ಕರುಣದಿ
ಪಾಲಿಸಿದಾಜ್ಞೆನ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೬೮

ಬದ್ಧರಕ್ಕಸನ ಗೆದ್ದು ಬಾ ಧುರವೆಂದು
ಮುದ್ದಿಟ್ಟುರಿಸಿದನು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೬೯

ಜಯ ಸುಕುಮಾರನೆ ಜಯವೊಂದು ರಣದಿ ನಿ
ರ್ಭಯದಿ ಪೋಗೆಂದನು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೭೦

ಆರುಮುಖನ ಪಡೆದಾರುದಿನದಿ ಘೋರ
ತಾರಕನ್ವಧಿಸಿದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೧

ಪರಕೆಪರಮತರ ಶರಣುಮಂದಾರ ಮಹ
ಧರೆಭಾರನಿಳುಕಿದ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೨

ಕರೆದರು ಪೂಮಳೆ ಸುರಗುಣ ಹರುಷದಿ
ಹರನ ಕೊಂಡಾಡುತ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೩

ಮೂರುಜಗದಬಂಧ ದೂರಮಾಡಿದ ಮಹ
ಪಾರಾವಾರ ದಯ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೪

ಚರಣನಂಬಿ ನಿನ್ನ ಸ್ಮರಣೆ ಮಾಳ್ಪ ನಿಜ
ಅರಿವು ಕರುಣಿಸೆಲೋ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೫

ಮಸಣಬುದ್ಧಿಯನು ಹಸನು ಮಾಡಿ ಎನ್ನ
ಒಸೆದು ಸಂರಕ್ಷಿಸು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೬

ಕಂದನದ್ವನದಿಂ ಕುಂದುಯಿಲ್ಲದ ನುಡಿ
ಚಂದದ್ದೊರಡಿಸು ಸದಾ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೭

ನೋಯಲಾರೆ ಭವಮಾಯಮೋಹಳುಕಿಸಿ
ಕಾಯಸಿದ್ದಿಯ ನೀಡು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೨೮

ವಿಷಯಲಂಪಟ ದುರ್ವ್ಯಸನ ನಾಶಗೈದು
ಹಸನಮತಿಯ ಕೊಡು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೭೯

ದೋಷದಾರಿದ್ರ್ಯವ ನಾಶಮಾಡನು
ಮೇಷದಯದಿ ಪೊರೆ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೮೦

ಆಪ್ತ ದೀನಜನವ್ಯಾಪ್ತ ವಿಮಲಜ್ಞಾನ
ಪ್ರಾಪ್ತಿ ನೀ ಎನ್ನಗೆ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೮೧

ವೇದವೇದಕೆ ಗುಪ್ತನಾದ ಪರತತ್ತ್ವದ
ಹಾದಿ ನಿವೇದಿಸು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೮೨

ವಾದವಾಂಛಲ್ಯದಹಾದಿ ಮರೆಸಿ ಪರ
ಸಾಧನೆ ಕರುಣಿಸು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೮೩

ಜನರು ಮೆಚ್ಚಲೆಂಬ ಬಿನಗು ಅಭಿಮಾನೆನ್ನ
ಕನಸಲಿ ಕೊಡದಿರು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೮೪

ಅಶನವಸನಕ್ಕಾಗಿ ಪುಸಿಯ ನುಡಿಯದಂಥ
ಅಸಮಸತ್ಯತೆ ನೀಡು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೮೫

ಕಷ್ಟನಷ್ಟಾದಿಗಳಿಗೆಷ್ಟು ಮಾತ್ರಂಜದ
ದಿಟ್ಟತನವಕೊಡು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೮೬

ಸೃಷ್ಟಿಮೇಲಾರಿಗೆ ನಿಷ್ಠುರ ನುಡಿಯದ
ನಿಷ್ಠಪರನೆನಿಸೆನ್ನ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೮೭

ನಿಷ್ಠಾವಂತರ ಕಂಡು ಮುಟ್ಟಸೇವಿಪ ನಿಜ
ಶಿಷ್ಟಭಕುತಿ ದೇ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೮೮

ನಿಂದಿಪಜನರ ಕಂಡೊಂದನೆಗೈವಂಥ
ಬಂಧುರಮನ ಕೊಡು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೮೯

ಆಶಾಪಾಶ ಭವದ್ವಾಸನೆ ಹಿಂಗಿಸಿ
ಪೋಷಿಸು ಸತತದಿ ಶಂಭೋ ನಮೋ
ಶಾಂಭವಿಪತಿ ಶಿವ ಶಂಭೋ ೯೦

ದುರಿತಕರ್ಮವನು ತರಿದುಹಾಕೆನ್ನಗೆ
ನಿರುತ ಮಾರ್ಗತೋರು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೯೧

ಸೆರೆಗೊಡ್ಡಿ ಬೇಡುವೆ ಕರುಣಗುಣಂಗಳೆನ್ನ
ಹೃದಯದಿ ಸ್ಥಾಪಿಸು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೯೨

ಪರನಿಂದೆ ಪರಪೀಡೆ ಪರಹೆಣ್ಣು ಪರಧನ
ಸ್ಮರಣಕ್ಕೆ ಕೊಡುದಿರು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೯೩

ಕುಂಭಿನಿಯವರಲಿ ಜಂಬಬಡಿವ ಎನ್ನ
ಶುಂಭಗುಣವ ಕಡಿ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೯೪

ಕಂದನ ವಚನಾನಂದದಿ ಆಲಿಸಿ
ಮಂದಮತಿಯ ಕಳಿ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೯೫

ಭಾನುಕೋಟಿತೇಜ ಧ್ಯಾನದಾಯಕ ನಿಜ
ಜ್ಞಾನವ ಕರುಣಿಸು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೯೬

ನಾಮರೂಪರಹಿತ್ಹೇಮಕೂಟವಾಸ
ಕಾಮಿತವರದಾತ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೯೭

ಪಾರಮಾರ್ಥಪಥ ತೋರಿಸೆನಗೆ ಗಂ
ಭೀರಪದವಿ ನೀಡು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೯೮

ದೇವದೇವನುತ ಭಾವಪೂರ್ಣ ಜಗ
ಕಾವಕರುಣಿ ವರ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೯೯

ಲಿಂಗರೂಪಭವಭಂಗಸಂಗ ನಿಜ
ಜಂಗಮಾತ್ಮ ಹರ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೦೦

ವಿಶ್ವ ವಿಶ್ವರೂಪ ವಿಶ್ವ ವಿಶ್ವಧಾರ
ವಿಶ್ವ ವಿಶ್ವನಾಥ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೦೧

ನಂಬಿ ನಿನ್ನ ಪಾದ ಅಂಬುಜ ಭಜಿಪೆನು
ಇಂಬುಗೊಡೆನ್ನಗೆ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೦೨

ಶಾಂತಮೂರ್ತಿ ಚಿಂತೆ ಭ್ರಾಂತಿ ಬಿಡಿಸೆನ್ನಗೆ
ಶಾಂತಿ ಸುಖವ ನೀಡು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೦೩

ಅಜಸುರವಿನಮಿತ ಸುಜನೈಕಬಾಂಧವ
ರಜತಾದ್ರಿ ಆಲಯ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೦೪

ಕರುಣಿಸೆನ್ನಗೆ ವರ ಶರಣಜನಮಂದಾರ
ನಿರುತ ಸ್ಮರಣೆ ಮಾಳ್ಪೆ ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೦೫

ಕನಸುಮನಸಿನಲಿ ಜನಕಜಾಪತಿಪಾದ
ನೆನವು ದಯಪಾಲಿಸು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೦೬

ನಿತ್ಯ ನಿತ್ಯದಲಿ ಸತ್ಯ ಶಿವನಾಮ
ಭಕ್ತಿಯಿಂ ಭಜಿಸಲು ಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೦೭

ಕಷ್ಟ ಕಳೆದು ಸಕಲಿಷ್ಟಾರ್ಥ ಕೊಟ್ಟು ಕಾಯ್ವ
ಶಿಷ್ಟ ಶ್ರೀರಾಮಸಖಶಂಭು ನಮೋ
ಶಾಂಭವಿಪತಿ ಶಿವ ಶಂಭೋ ೧೦೮

೭೬೫

ಭಕ್ತರ ಸೌಖ್ಯ ಮುಕ್ತಿಗೆ ಮುಖ್ಯ
ಚತುರ್ದಶಭುವನಕೆ ಪ್ರೇಮ
ಹರಿ ಜಯಜಯ ವಿಠಲನಾಮ ೧

ದುರಿತಪರಿಹರ ಪರಮಸುಖಕರ
ಶರಣು ಸಜ್ಜನರ ಪ್ರೇಮ
ಹರಿ ಜಯಜಯ ವಿಠಲನಾಮ ೨

ಮೃತ್ಯುಸಂಹರ ಸತ್ಯರಾಧಾರ
ನಿತ್ಯನಿರ್ಮಲರ ಪ್ರೇಮ
ಹರಿ ಜಯಜಯ ವಿಠಲನಾಮ ೩

ಬಂಧವಿದೂರ ಮಂದರೋದ್ಧಾರ
ಸಿಂಧುನಂದನೆಯ ಪ್ರೇಮ
ಹರಿ ಜಯಜಯ ವಿಠಲನಾಮ ೪

ವಾಣಿವರಪಿತ ದೀನರ ನಾಥ
ದಾನವಹರ ನುತಪ್ರೇಮ
ಹರಿ ಜಯಜಯ ವಿಠಲನಾಮ ೫

ಕುಜನರ ಕಾಲ ತ್ರೈಜಗಪಾಲ
ಭಜಕಜನನುಪಮ ಪ್ರೇಮ
ಹರಿ ಜಯಜಯ ವಿಠಲನಾಮ ೬

ವೇದೋದ್ಧಾರ ವೇದಾಧಾರ
ವೇದವೇದಾಗಮ ಪ್ರೇಮ
ಹರಿ ಜಯಜಯ ವಿಠಲನಾಮ ೭

ಅಗಾಧಮಹಿಮ ನೀಗದ ನಾಮ
ಬಾಗಿ ಭಜಿಪ ಜನಪ್ರೇಮ
ಹರಿ ಜಯ ಜಯ ವಿಠಲನಾಮ ೮

ಸಾಗರಶಯನ ನಾಗಾರಿಗಮನ
ಭಾಗವತರ ಘನಪ್ರೇಮ
ಹರಿ ಜಯಜಯ ವಿಠಲನಾಮ ೯

ವೇದಸಂಪಾದನ ಮೇದಿನೀಪಾಲನ
ಸಾಧುಸಂತತಿ ಸುಪ್ರೇಮ
ಹರಿ ಜಯಜಯ ವಿಠಲನಾಮ ೧೦

ನಂಬಿಭಜಿಪರ ಇಂಬು ದಯಾಕರ
ಶಂಭುಸುರಾದಿಗಳ ಪ್ರೇಮ
ಹರಿ ಜಯಜಯ ವಿಠಲನಾಮ ೧೧

ಪತಿತಪಾವನ ಕ್ಷಿತಿಸುತೆರಮಣ
ರತಿಪತಿಪಿತ ಯತಿಪ್ರೇಮ
ಹರಿ ಜಯಜಯ ವಿಠಲನಾಮ ೧೨

ಆಗಮವಂದನ ಸಾಗರಬಂಧನ
ಯೋಗಿಜನರ ಸದಪ್ರೇಮ
ಹರಿ ಜಯಜಯ ವಿಠಲನಾಮ ೧೩

ನಿಖಿಲದಯಾಪರ ಸಕಲಶುಭಕರ
ಸಕುಲ ಸುಗುಣಗಣ ಪ್ರೇಮ
ಹರಿ ಜಯಜಯ ವಿಠಲನಾಮ ೧೪

ನಿಗಮಾದಿವಿನುತ ಜಗದಾದಿನಮಿತ
ಸೊಗಯಿಪ ವರ್ಣಾಶ್ರಮ ಪ್ರೇಮ
ಹರಿ ಜಯಜಯ ವಿಠಲನಾಮ ೧೫

ಪಾಪಖಂಡನ ಶಾಪಮೋಚನ
ತಾಪಸೋತ್ತಮರ ಪ್ರೇಮ
ಹರಿ ಜಯಜಯ ವಿಠಲನಾಮ ೧೬

ಸಾಗರಮಥನ ಸಾಗರಸದನ
ರಾಘವ ರಘುಕುಲ ಪ್ರೇಮ
ಹರಿ ಜಯಜಯ ವಿಠಲನಾಮ ೧೭

ಅಮೃತನೀಡಿದ ಅಮರರಕಾಯ್ದ
ಸುಮನಮಾನಸರ ಪ್ರೇಮ
ಹರಿ ಜಯಜಯ ವಿಠಲನಾಮ ೧೮

ದುಷ್ಟಮರ್ದನ ಶಿಷ್ಟವರ್ಧನ
ಸೃಷ್ಟಿಯಾಳುವ ಅತಿಪ್ರೇಮ
ಹರಿ ಜಯಜಯ ವಿಠಲನಾಮ ೧೯

ಸುಲಭ ಭಕ್ತರನಿಲಯ ಕನಿಕರ
ಬಲಹೀನರ ಬಲುಪ್ರೇಮ
ಹರಿ ಜಯಜಯ ವಿಠಲನಾಮ ೨೦

ಸೇವಕಪ್ರಿಯ ಭಾವಜನಯ್ಯ
ಕಾವ ಭಾವಿಗಳ ಪ್ರೇಮ
ಹರಿ ಜಯಜಯ ವಿಠಲನಾಮ ೨೧

ಮೇಲುಮಂದಿರ ಶೀಲಸುಂದರ
ಮಾಲತುಲಸಿವನ ಪ್ರೇಮ
ಹರಿ ಜಯಜಯ ವಿಠಲನಾಮ ೨೨

ಗೋಪಿಯ ಕಂದ ಗೋಪೇರಾನಂದ
ಗೋಪಗೋಪತಿಯರ ಪ್ರೇಮ
ಹರಿ ಜಯಜಯ ವಿಠಲನಾಮ ೨೩

ಗೋಪಾಲಬಾಲ ಅಪಾರಲೀಲ
ಗೌಪ್ಯದ್ಟೊಗಳುವರ ಪ್ರೇಮ
ಹರಿ ಜಯಜಯ ವಿಠಲನಾಮ ೨೪

ಲೋಕರಕ್ಷಣ ಲೋಕಪಾವನ
ಗೋಕುಲಾಂಗನೆಯರ ಪ್ರೇಮ
ಹರಿ ಜಯಜಯ ವಿಠಲನಾಮ ೨೫

ಸದಮಲನಾಮ ಯದುಕುಲಸೋಮ
ಸದಮಲಾನಂದರ ಪ್ರೇಮ
ಹರಿ ಜಯಜಯ ವಿಠಲನಾಮ ೨೬

ಬ್ರಹ್ಮನಿಗಿರ್ದ ಹಮ್ಮನು ಮುರಿದ
ನಿರ್ಮಲಯುತರತಿಪ್ರೇಮ
ಹರಿ ಜಯಜಯ ವಿಠಲನಾಮ ೨೭

ವೇಣುವಿನೋದ ಗಾನಕೆ ಒಲಿದ
ಧ್ಯಾನಪರರ ವರಪ್ರೇಮ
ಹರಿ ಜಯಜಯ ವಿಠಲನಾಮ ೨೮

ಮಂಕುದನುಜ ಮದ ಬಿಂಕವ ಮುರಿದ
ಕಿಂಕರರೊದೆದತಿಪ್ರೇಮ
ಹರಿ ಜಯಜಯ ವಿಠಲನಾಮ ೨೯

ನಾದವಿನೋದ ರಾಧೆಗೆ ಒಲಿದ
ಮೋದದಾಡಿದ ಸದಪ್ರೇಮ
ಹರಿ ಜಯಜಯ ವಿಠಲನಾಮ ೩೦

ತಾಯಿಗೆ ತೋರಿದ ಭುವನ ಬ್ರಹ್ಮಾಂಡ ಮುದ
ಬಾಯಿದೆರೆದು ಸತ್ಪ್ರೇಮ
ಹರಿ ಜಯಜಯ ವಿಠಲನಾಮ ೩೧

ತಾಯಿ ಯಶೋಧ ಭಾವ ಪೂರೈಸಿದ
ದೇವಿ ರುಗ್ಮಿಯಳ ಪ್ರೇಮ
ಹರಿ ಜಯಜಯ ವಿಠಲನಾಮ ೩೨

ಕಡುಗೋಲು ಪಿಡಿದ ಹುಡುಗನಾಗಾಡಿದ
ಕಡುಲೀಲೆಯಾಟ ಜಗಪ್ರೇಮ
ಹರಿ ಜಯಜಯ ವಿಠಲನಾಮ ೩೩

ಸತಿಗೆ ಮೆಚ್ಚಿದ ಹಿತದಿ ಕರುಣಿಸಿದ
ಮಿತಸಾಲಿಗ್ರಾಮ ಪ್ರೇಮ
ಹರಿ ಜಯಜಯ ವಿಠಲನಾಮ ೩೪

ಹಿಂಡುದೇವರಗಂಡ ಪ್ರಭುವರ
ಪಾಂಡುನಂದನರ ಪ್ರೇಮ
ಹರಿ ಜಯಜಯ ವಿಠಲನಾಮ ೩೫

ಭಕ್ತೋದ್ಧಾರ ಭಕ್ತರಾಧಾರ
ಭಕ್ತಜನರ ನಿಜ ಪ್ರೇಮ
ಹರಿ ಜಯಜಯ ವಿಠಲನಾಮ ೩೬

ಇಳೆಯ ಪಾಲಿಸಲು ಇಳಿದು ಭುವಿಯೊಳು
ಭೂವೈಕುಂಠೆನಿಸಿದ ಪ್ರೇಮ
ಹರಿ ಜಯಜಯ ವಿಠಲನಾಮ ೩೭

ಭವಿಗಳ ತೂರಿದ ಭವದಾಟವಾಡಿದ
ಭವಭಯಹರ ದ್ವಿಜಪ್ರೇಮ
ಹರಿ ಜಯಜಯ ವಿಠಲನಾಮ ೩೮

ಗಿರಿಯೊಳ್ ನೆಲೆಸಿದ ವರಗಳ ನಡೆಸಿದ
ಪರಿಪರಿ ನರರಿಗೆ ಪ್ರೇಮ
ಹರಿ ಜಯಜಯ ವಿಠಲನಾಮ ೩೯

ಕೊಡುತ ಇಷ್ಟ ವರ ಪಿಡಿದು ದೃಢಕರ
ಬಿಡದೆ ಸಲಹಿದನು ಪ್ರೇಮ
ಹರಿ ಜಯಜಯ ವಿಠಲನಾಮ ೪೦

ಅಧಮರನಾಶ ಬುಧಜನರ ಪೋಷ
ಪದುಮವತಿಯ ಪ್ರಾಣ ಪ್ರೇಮ
ಹರಿ ಜಯಜಯ ವಿಠಲನಾಮ ೪೧

ಕರ್ತನೆನಿಸಿದ ಅರ್ಥಕೆ ಒಲಿದ
ಮರ್ತ್ಯಲೋಕರಿಗೆ ಪ್ರೇಮ
ಹರಿ ಜಯಜಯ ವಿಠಲನಾಮ ೪೨

ಕೇಸಕ್ಕಿ ಮೆದ್ದ ಕಾಸು ಕೂಡಿಸಿದ
ಬೇಸರಿಲ್ಲದೆ ಘನ ಪ್ರೇಮ
ಹರಿ ಜಯಜಯ ವಿಠಲನಾಮ ೪೩

ಬೇಡಿದ ವರವ ಕಾಡದೆ ನೀಡುವ
ಗಾಢಮಹಿಮ ಸುರಪ್ರೇಮ
ಹರಿ ಜಯಜಯ ವಿಠಲನಾಮ ೪೪

ದಾಸರ ಪರೀಕ್ಷಿಸಲೋಸುಗ ಲಕು
ಮೀಶ ಆಸೆಕಾರೆನಿಸಿದ ನುತ ಪ್ರೇಮ
ಹರಿ ಜಯಜಯ ವಿಠಲನಾಮ ೪೫

ವಾಸಿಸಿ ಗುಡ್ಡವ ಕುಶಲದಿಂದ ಭವ
ವಸುಧೆಪಾಲಿಪನತಿ ಪ್ರೇಮ
ಹರಿ ಜಯಜಯ ವಿಠಲನಾಮ ೪೬

ಮೂವತ್ತು ಮೂರ್ಕೋಟಿ ದೇವತೇರ್ಮನಮುಟ್ಟಿ
ಸೇವಕರಮಿತದಯ ಪ್ರೇಮ
ಹರಿ ಜಯಜಯ ವಿಠಲನಾಮ ೪೭

ಸಪ್ತುಋುಷಿಗಣ ಗುಪ್ತದಿಂ ಭಜನೆ
ಅರ್ತಿಯಿಂ ಗೈವರು ನಿತ್ಯಪ್ರೇಮ
ಹರಿ ಜಯಜಯ ವಿಠಲನಾಮ ೪೮

ತುಂಬುರನಾರದ ಅಂಬುಜಾಸನ ಸದಾ
ಗುಂಭದಿ ಗೈವರು ಸ್ತುತಿ ಪ್ರೇಮ
ಹರಿ ಜಯಜಯ ವಿಠಲನಾಮ ೪೯

ಸಿದ್ಧಕಿನ್ನರರು ಸಾಧ್ಯಯಕ್ಷರು
ಬಿದ್ದು ಬೇಡ್ವರು ಸ್ಥಿರ ಪ್ರೇಮ
ಹರಿ ಜಯಜಯ ವಿಠಲನಾಮ ೫೦

ಧಾತ್ರಿಗೆ ಬಂದ ಕ್ಷೇತ್ರದಿ ನಿಂದ
ಧಾತ್ರಿಮೂರುದ್ಧರಿಸಿದ ಪ್ರೇಮ
ಹರಿ ಜಯಜಯ ವಿಠಲನಾಮ ೫೧

ಸಿದ್ಧಾಂತದೊಳಗೆ ಮಧ್ವಮುನಿಪಗೆ
ಶುದ್ಧಮತಿಯನಿತ್ತ ಪ್ರೇಮ
ಹರಿ ಜಯಜಯ ವಿಠಲನಾಮ ೫೨

ದೃಢಮುನಿಗೈದ ಕಡುತಪಕೊಲಿದ
ಉಡುಪಿಯೊಳ್ವಾಸನಾದ ಪ್ರೇಮ
ಹರಿ ಜಯಜಯ ವಿಠಲನಾಮ ೫೩

ಪದ್ಧತಿಯಿದ್ದಂತೆ ದ್ವೈತಸಿದ್ಧಾಂತ
ತಿದ್ದಿಸಿದ್ಯತಿಯಿಂದ ಪ್ರೇಮ
ಹರಿ ಜಯಜಯ ವಿಠಲನಾಮ ೫೪

ಅದ್ವೈತ ಸೋಲಿಸಿ ದ್ವೈತ ಮೇಲೆನಿಸಿ
ಮಧ್ವನ ಸಲಹಿದ ಪ್ರೇಮ
ಹರಿ ಜಯಜಯ ವಿಠಲನಾಮ ೫೫

ಮಧ್ವಮತವೆ ಪ್ರಬುದ್ಧವೆನಿಸಿ ಪ್ರ
ಸಿದ್ಧ ಪಡಿಸಿದ್ಯತಿ ಪ್ರೇಮ
ಹರಿ ಜಯಜಯ ವಿಠಲನಾಮ ೫೬

ಉಡುಪಿನಿವಾಸ ದೃಢಕರ ಪೋಷ
ದೃಢತರ ದ್ವೈತರ ಪ್ರೇಮ
ಹರಿ ಜಯಜಯ ವಿಠಲನಾಮ ೫೭

ತೋರಿ ಗೆಲಿಸಿದಿ ಪಾರಾವಾರಿಧಿ
ಸೇರಿ ಸೇವಿಪರ ಪ್ರೇಮ
ಹರಿ ಜಯಜಯ ವಿಠಲನಾಮ ೫೮

ವಿಷಮಸಂಸಾರ ವ್ಯಸನನಿವಾರ
ಅಸಮಜ್ಞಾನಿಗಳ ಪ್ರೇಮ
ಹರಿ ಜಯಜಯ ವಿಠಲನಾಮ ೫೯

ಪರವ ಸಾಧಿಪರ ಪರಮ ಸುಸಾರ
ನಿರುತ ತತ್ತ್ವೇಶರ ಪ್ರೇಮ
ಹರಿ ಜಯಜಯ ವಿಠಲನಾಮ ೬೦

ಕಾಮಿಸಿ ಬೇಡ್ವ ಕಾಮಿತ ನೀಡ್ವ
ಕಾಮಿತ ಹರಣರ ಪ್ರೇಮ
ಹರಿ ಜಯಜಯ ವಿಠಲನಾಮ ೬೧

ಆಶಕ್ಕೆ ದೂರ ಆಶಕ್ಕೆ ಸದರ
ಆಶನಾಶಕರ ಪ್ರೇಮ
ಹರಿ ಜಯಜಯ ವಿಠಲನಾಮ ೬೨

ನೇಮನಿತ್ಯರ ಕ್ಷೇಮಮಂದಿರ
ತಾಮಸ ಹರಣರ ಪ್ರೇಮ
ಹರಿ ಜಯಜಯ ವಿಠಲನಾಮ ೬೩

ಧ್ರುವನಿಗೊಲಿದ ಭವಭಯ ತರಿದ
ಸವೆಯದ ಪದವಿತ್ತ ಪ್ರೇಮ
ಹರಿ ಜಯಜಯ ವಿಠಲನಾಮ ೬೪

ಗಣಿತಕ್ಕೆ ಮೀರಿದ ಗಣಿತಕ್ಕೆ ತೋರದ
ಗಣಿಸಲಳವಲ್ಲದ ಪ್ರೇಮ
ಹರಿ ಜಯಜಯ ವಿಠಲನಾಮ ೬೫

ರಕ್ಕಸಭೀಮ ಮಿಕ್ಕಿದನಾಮ
ಚಕ್ರಪಾಣಿಧರ ಪ್ರೇಮ
ಹರಿ ಜಯಜಯ ವಿಠಲನಾಮ ೬೬

ಅಪಾರಮಹಿಮ ಶ್ರೀಪರಬ್ರಹ್ಮ
ವ್ಯಾಪಕಖಿಲಸೃಷ್ಟಿ ಪ್ರೇಮ
ಹರಿ ಜಯಜಯ ವಿಠಲನಾಮ ೬೭

ಸ್ತ್ರೀಯನು ತರಿದ ಸ್ತ್ರೀಯಳ ಪೊರೆದ
ಸ್ತ್ರೀಯಾಗ್ರರನ ಕಾಯ್ದ ಪ್ರೇಮ
ಹರಿ ಜಯಜಯ ವಿಠಲನಾಮ ೬೮

ಕೌಪೀನಾಂಬರ ಲೋಪವಿಕಾರ
ತಾಪತ್ರಹರ ಸಿರಿಪ್ರೇಮ
ಹರಿ ಜಯಜಯ ವಿಠಲನಾಮ ೬೯

ಕುಲಗೆಟ್ಟಂತ್ಯಜಕುಲದಿ ಬಿದ್ದ ಅಜ
ಮಿಳನ ಪಾಲಿಸಿದ ಪ್ರೇಮ
ಹರಿ ಜಯಜಯ ವಿಠಲನಾಮ ೭೦

ಕಲ್ಲನು ತುಳಿದ ನಲ್ಲೆಯೆನಿಸಿದ
ವಲ್ಲಭನ ಕಲೆಸಿದ ಪ್ರೇಮ
ಹರಿ ಜಯಜಯ ವಿಠಲನಾಮ ೭೧

ಮೊಲೆಮೂಗು ಕೊಯ್ದು ಹೊಲೆದೈತ್ಯಳೊದೆದ
ಸಲಹಿದ ಮುನಿಗಣ ಪ್ರೇಮ
ಹರಿ ಜಯಜಯ ವಿಠಲನಾಮ ೭೨

ಲಕ್ಷ್ಯದಿ ಕಂಡನು ಪಕ್ಷಿರಾಜನನು
ಮೋಕ್ಷಕ್ಕೆ ಕಳುಹಿದ ಪ್ರೇಮ
ಹರಿ ಜಯಜಯ ವಿಠಲನಾಮ ೭೩

ಶೀಘ್ರದ ವಾನರಾಗ್ರಣಾಸನ ಸು
ಗ್ರೀವಗಿತ್ತನು ಪ್ರೇಮ
ಹರಿ ಜಯಜಯ ವಿಠಲನಾಮ ೭೪

ಕನಿಕರದೊಲಿದ ಘನಶಕ್ತಿ ನೀಡಿದ
ಹನುಮನೊಳಾಡಿದ ಪ್ರೇಮ
ಹರಿ ಜಯಜಯ ವಿಠಲನಾಮ ೭೫

ಶಿಷ್ಟ ಅಸುರನ ನಿಷ್ಠೆಗೊಲಿದು ಘನ
ಪಟ್ಟವ ಕಟ್ಟಿದ ಪ್ರೇಮ
ಹರಿ ಜಯಜಯ ವಿಠಲನಾಮ ೭೬

ಪಿತನ ಭೇದಿಸಿದ ಸುತನ ರಕ್ಷಿಸಿದ
ಪತಿತಪದವನಿತ್ತು ಪ್ರೇಮ
ಹರಿ ಜಯಜಯ ವಿಠಲನಾಮ ೭೭

ಬಲಿಯ ಬೇಡಿದ ಇಳೆಯೊಳು ತುಳಿದ
ಒಲಿದು ಬಾಗಿಲ ಕಾಯ್ದ ಪ್ರೇಮ
ಹರಿ ಜಯಜಯ ವಿಠಲನಾಮ ೭೮

ನಂಬಿ ಮೊರೆಯಿಟ್ಟ ಅಂಬರೀಷನ ದಿಟ್ಟ
ಇಂಬುಗೊಟ್ಟು ಕಾಯ್ದ ಪ್ರೇಮ
ಹರಿ ಜಯಜಯ ವಿಠಲನಾಮ ೭೯

ಶೀಲ ಭಕ್ತನ ಕೈಲೆ ಹಾಲುಂಡು ಚೆಲ್ಲಿ
ಪಾಲ ಸಮುದ್ರನಿಸಿದ ಪ್ರೇಮ
ಹರಿ ಜಯಜಯ ವಿಠಲನಾಮ ೮೦

ಲಕ್ಷ್ಮೀರಮಣ ರುಕ್ಮಾಂಗದನ
ಸೂಕ್ಷ್ಮದಿ ಸಲಹಿದ ಪ್ರೇಮ
ಹರಿ ಜಯಜಯ ವಿಠಲನಾಮ ೮೧

ರಕ್ಕಸಿಯಾಳ್ದನ ಅಕ್ಕರ ತಮ್ಮನ
ಇಕ್ಕೆಲ ಗೆಲಿಸಿದ ಪ್ರೇಮ
ಹರಿ ಜಯಜಯ ವಿಠಲನಾಮ ೮೨

ಜನನಿಯ ಕೊಂದ ಜನಕನ ಕಡೆಯಿಂದ
ಪ್ರಾಣಪಡೆದ ಪುನ: ಪ್ರೇಮ
ಹರಿ ಜಯಜಯ ವಿಠಲನಾಮ ೮೩

ಕರಿಕೆರೆಯ ಮೆದ್ದ ನರಕಾಸುರನ ಗೆದ್ದ
ಕರುಣದ್ಹೊರೆದ ಧರೆ ಪ್ರೇಮ
ಹರಿ ಜಯಜಯ ವಿಠಲನಾಮ ೮೪

ಕರುಣಾಂತರಂಗ ಪರಮಶುಭಾಂಗ
ತರುಣಿಗಕ್ಷಯವಿತ್ತ ಪ್ರೇಮ
ಹರಿ ಜಯಜಯ ವಿಠಲನಾಮ ೮೫

ಕುರುಕುಲಭಂಗ ಶರಣಾಂತರಂಗ
ಜರಾಮರಣ್ಹರ ವರಪ್ರೇಮ
ಹರಿ ಜಯಜಯ ವಿಠಲನಾಮ ೮೬

ಸಿರಿನರಸಿಂಗ ಪರಿಭವಭಂಗ
ನಿರುತರ ಸುರತರ ಪ್ರೇಮ
ಹರಿ ಜಯಜಯ ವಿಠಲನಾಮ ೮೭

ಗುರುಕುಲೋತ್ತುಂಗ ವರಸುರಗಂಗ
ಚರಣಸರೊಜದತ್ತ ಪ್ರೇಮ
ಹರಿ ಜಯಜಯ ವಿಠಲನಾಮ ೮೮

ಅತ್ರಿವರದ ಧರೆಪುತ್ರಿಹರಣದೊರೆ
ಶರಣಸಂಕುಲಧಾಮ ಪ್ರೇಮ
ಹರಿ ಜಯಜಯ ವಿಠಲನಾಮ ೮೯

ಗರುಡನೇರಿದ ಸರಸಿಗೆ ಇಳಿದ
ಕರಿಯ ರಕ್ಷಿಸಿದ ಪ್ರೇಮ
ಹರಿ ಜಯಜಯ ವಿಠಲನಾಮ ೯೦

ಕಾಳಿಂದ ಧುಮುಕಿದ ಕಾಳಿಫಣಿಮೆಟ್ಟಿದ
ಬಾಲನಾಗಾಡಿದ ಪ್ರೇಮ
ಹರಿ ಜಯಜಯ ವಿಠಲನಾಮ ೯೧

ಅಗವಧರಿಸಿದ ಹಗರಣದ್ಹೆಣ್ಣಾದ ಮಗನ
ಮಗನ ಕಾಯ್ದ ಪ್ರೇಮ
ಹರಿ ಜಯಜಯ ವಿಠಲನಾಮ ೯೨

ಸುತನ ಸುತನಿಗೆ ಸುತೆಯನಿತ್ತವಗೆ
ಮುತ್ಯ ಮಾವನೆನಿಸಿದ ಪ್ರೇಮ
ಹರಿ ಜಯಜಯ ವಿಠಲನಾಮ ೯೩

ಭಾವನೆನಿಸಿದ ಬೋವನೆನಿಸಿದ
ಕಾವದೇವರಾದ ಪ್ರೇಮ
ಹರಿ ಜಯಜಯ ವಿಠಲನಾಮ ೯೪

ಮಾಯಿನ ಪಡೆದ ಮಾಯಿನ ಕಡಿದ
ಮಾಯದೊಳಾಡಿದ ಪ್ರೇಮ
ಹರಿ ಜಯಜಯ ವಿಠಲನಾಮ ೯೫

ಧಾತ್ರಿಗೆ ಪತಿಯಾದ ಧಾತ್ರಿಗಳಿಯನಾದ
ಧಾತ್ರಿ ಸೂತ್ರನಾದ ಪ್ರೇಮ
ಹರಿ ಜಯಜಯ ವಿಠಲನಾಮ ೯೬

ಮುನ್ನ ತಮ್ಮೆನಿಸಿದ ಅಣ್ಣಮತ್ತೆನಿಸಿದ
ಉನ್ನತ್ತಾಸಿಗೆನಿಸಿದ ಪ್ರೇಮ
ಹರಿ ಜಯಜಯ ವಿಠಲನಾಮ ೯೭

ಚರಣದಿ ಪಡೆದ ಶರೀರವ ತೊಳೆದ
ಧರೆಪಾವನೆನಿಸಿದ ಪ್ರೇಮ
ಹರಿ ಜಯಜಯ ವಿಠಲನಾಮ ೯೮

ಸೃಷ್ಟಿ ಪುಟ್ಟಿಸಿದ ಸೃಷ್ಟಿಯೊಳ್ಪುಟ್ಟಿದ
ಸೃಷ್ಟಿ ಉದರದಿಟ್ಟ ಪ್ರೇಮ
ಹರಿ ಜಯಜಯ ವಿಠಲನಾಮ ೯೯

ಕನಿಕರದೊಲಿದ ಘನಮತಿಯಿತ್ತ
ಕನಕನೊಳಾಡಿದ ಪ್ರೇಮ
ಹರಿ ಜಯಜಯ ವಿಠಲನಾಮ ೧೦೦

ಪರಿಪರಿ ಬೇಡಿದ ಪುರಂದರಗೊಲಿದ
ಪರಮಜ್ಞಾನವಿತ್ತ ಪ್ರೇಮ
ಹರಿ ಜಯಜಯ ವಿಠಲನಾಮ ೧೦೧

ಅತಿಗುಣಸಾಂದ್ರ ಕ್ಷಿತಿಯೊಳು ರಾಘವೇಂದ್ರ
ಯತಿಗೆ ಪ್ರಸನ್ನನಾದ ಪ್ರೇಮ
ಹರಿ ಜಯಜಯ ವಿಠಲನಾಮ ೧೦೨

ಗೋಪಾಲಗೊಲಿದ
ಪರಲೋಕದ ಸೋಪಾನವೇರಿಸಿದ
ಹರಿಜಯಜಯಪ್ರೇಮ ವಿಠಲನಾನು ೧೦೩

ವಿಜಯರಾಯರ ಭಜನೆಗೊಲಿದು ವರ
ನಿಜಪದಕ್ಕಚ್ಚಿದ ಪ್ರೇಮ
ಹರಿ ಜಯಜಯ ವಿಠಲನಾಮ ೧೦೪

ನಾಮದೇವ ತುಕಾರಾಮರಿಗಮಿತಸುಖ
ಕ್ಷೇಮದಿ ಇತ್ತನು ಪ್ರೇಮ
ಹರಿ ಜಯಜಯ ವಿಠಲನಾಮ ೧೦೫

ಪುಂಡಲೀಕನ ಪುಂಡಭಕ್ತಿಗೆ ಘನ
ಪಂಢರಪುರದಿ ನಿಂತ ಪ್ರೇಮ
ಹರಿ ಜಯಜಯ ವಿಠಲನಾಮ ೧೦೬

ವಿಶ್ವವಿಶ್ವಕಾರ ವಿಶ್ವ ವಿಶ್ವಾಧಾರ
ವಿಶ್ವವಿಶ್ವರಕ್ಷ ಪ್ರೇಮ
ಹರಿ ಜಯಜಯ ವಿಠಲನಾಮ ೧೦೭

ಸಾಸಿರನಾಮ ದಾಸರಪ್ರೇಮ
ಈಶ ಶ್ರೀಶ ಶ್ರೀರಾಮ
ಹರಿ ಜಯಜಯ ವಿಠಲನಾಮ ೧೦೮

೭೬೬

ವರವ ಕರುಣಿಸು ಚರಣಭಕ್ತಗೆ
ಹರಿಯೆ ನಿಮ್ಮಯ ಪರಮ ಸುಚರಿತ
ಬರೆಸು ನೀನೆ ಕರವ ಪಿಡಿದೆನ್ನ
ಪರಮಮತಿಯಿತ್ತು ಕರುಣಿ ಶ್ರೀರಾಮ

ಧಾತ್ರಿತ್ರಯಂಗಳ ಸೂತ್ರಧಾರ ಹರಿ
ಸ್ತೋತ್ರಕೆ ಸಿಲುಕಿದ ರಾಮ ಹರಿ ಜೈ ಜೈ ಸೀತಾರಾಮ ೧

ದಶಶಿರನುಪದ್ರಕೆ ಕುಸುಮಜಾತಮರರು
ಬಸವಳಿದತಿಶಯ ರಾಮ ರಾಮ ಹರಿ ಜೈ ಜೈ ಸೀತಾರಾಮ ೨

ಪಶುಪತಿಗುಸುರುತ ವ್ಯಸನದಿ ಮೊರೆಯಿಡ
ಲೊಸೆದವರಿಂ ಶಿವ ರಾಮ ಹರಿ ಜೈ ಜೈ ಸೀತಾರಾಮ ೩

ಅಸುರಾರಿ ಕಾಯೆಂದು ಶಶಿಧರ ಭಜಿಸಲು
ಒಸೆದು ಅಭಯನೀಡಿ ರಾಮ ಹರಿ ಜೈ ಜೈ ಸೀತಾರಾಮ ೪

ವಸುಧೆಯೊಳಗೆ ಬಂದು ದಶರಥನ್ಹಿರೇಸತಿ
ಬಸಿರೊಳೌತರಿಸಿದ ರಾಮ ಹರಿ ಜೈ ಜೈ ಸೀತಾರಾಮ ೫

ಬಾಲತನದಿ ಮುನಿಲೋಲನ ಯಾಗವ
ಪಾಲಿಸಿದನು ಸ್ಥಿರ ರಾಮ ಹರಿ ಜೈ ಜೈ ಸೀತಾರಾಮ ೬

ಜತೆಯಲಿಮುನಿವರ ಮಿಥಿಲೆಗೆ ಕರೆದೊಯ್ಯೆ
ಹಿತದಿಂ ಪೋದನು ರಾಮ ಹರಿ ಜೈ ಜೈ ಸೀತಾರಾಮ ೭

ಪಥದಿ ಪಾಷಣಕೆ ಪತಿತಪಾವನ ಪಾದ
ಹಿತದಿಂ ಸೋಂಕಿಸಿ ರಾಮ ಹರಿ ಜೈ ಜೈ ಸೀತಾರಾಮ ೮

ಸತಿರೂಪವನಿತ್ತತಿ ಮಹತ್ವ ತೋರ್ದ
ದ್ಭುತ ಮಹಿಮನು ರಾಮ ಹರಿ ಜೈ ಜೈ ಸೀತಾರಾಮ ೯

ಮುನಿವರನೊಡಗೂಡಿ ಜನಕನ ಪುರ ವೊ
ಕ್ಕಿನಕುಲಸಂಭವ ರಾಮ ಹರಿ ಜೈ ಜೈ ಸೀತಾರಾಮ ೧೦

ಶಿವನಬಿಲ್ಲನು ಜವದಿ ಮುರಿದು ಸೀತಾ ಜ
ಯವನು ಪೊಂದಿದ ರಾಮ ಹರಿ ಜೈ ಜೈ ಸೀತಾರಾಮ ೧೧

ಜನಕಮುನಿಯು ಕಂಡು ಘನಹರುಷಿತನಾಗಿ
ತನುಜೆ ಜಾನಕಿಯ ರಾಮ ಹರಿ ಜೈ ಜೈ ಸೀತಾರಾಮ ೧೨

ಧಾರುಣಿ ವರಮುನಿ ಅಪಾರ ಸಂಭ್ರಮದಿಂ
ಧಾರೆಯನೆರೆದನು ರಾಮ ಹರಿ ಜೈ ಜೈ ಸೀತಾರಾಮ ೧೩

ಖ್ಯಾತ ಜನಕಮುನಿನಾಥನ ಬಹುಮಾನ
ಪ್ರೀತಿಲಿ ಕೈಕೊಂಡು ರಾಮ ಹರಿ ಜೈ ಜೈ ಸೀತಾರಾಮ ೧೪

ಭರದಿ ಅಯೋಧ್ಯಾಪುರಕೆ ತೆರಳಿದನು
ಪರಮ ವೈಭವದಿಂ ರಾಮ ಹರಿ ಜೈ ಜೈ ಸೀತಾರಾಮ ೧೫

ಸತಿಸಮೇತನಾಗಿ ಪಿತನ ಕಂಡ
ದಶರಥ ವಂಶೋದ್ಧಾರ ರಾಮ ಹರಿ ಜೈ ಜೈ ಸೀತಾರಾಮ ೧೬

ಮಿತಿಯಿಲ್ಲದ್ಹೊಗಳುತ ಸುತನ ಗುಣಂಗಳನು
ಪಿತನಯೋಧ್ಯಾಪಟ್ಟ ರಾಮ ಹರಿ ಜೈ ಜೈ ಸೀತಾರಾಮ ೧೭

ಕಟ್ಟಿಲೊಶಿಷ್ಠಾದಿ ಶಿಷ್ಟಜನರ ಕೂ
ಡಿಟ್ಟು ಯೋಚಿಸಿದ ರಾಮ ಹರಿ ಜೈ ಜೈ ಸೀತಾರಾಮ ೧೮

ಮುಹೂರ್ತ ನೇಮಿಸಿ ಪುರದೊರ್ತಕಜನ
ಮಹದರ್ತಿಯಿಂದಿರುತಿರೆ ರಾಮ ಹರಿ ಜೈ ಜೈ ಸೀತಾರಾಮ ೧೯

ಮಲತಾಯಿ ಕೇಳಲು ಛಲದಿಂ ದಶರಥ
ನೊಲಿದಿತ್ತ ವಾಕ್ಯವ ರಾಮ ಹರಿ ಜೈ ಜೈ ಸೀತಾರಾಮ ೨೦

ಪೂರೈಸೆನುತ ಹಾರೈಸಿದಳಂದು
ಈರೈದು ರಥಗೆ ರಾಮ ಹರಿ ಜೈ ಜೈ ಸೀತಾರಾಮ ೨೧

ಸ್ಮರಿಸಿದ್ದೀಯ್ವೆನೆಂದರಿಯದಭಯವಿತ್ತು
ನಿರುತದಿ ಭೂವರ ರಾಮ ಹರಿ ಜೈ ಜೈ ಸೀತಾರಾಮ ೨೨

ಭರತಗೆ ರಾಜ್ಯವು ಹೀರೆಸುತಗ್ವನವಾಸ
ಸ್ಮರಿಸಿದಳಳುಕದೆ ರಾಮ ಹರಿ ಜೈ ಜೈ ಸೀತಾರಾಮ ೨೩

ಕೇಳಿ ಭೂಪಾಲನು ತಾಳದೆ ಜರಿದನು
ಕೀಳೆ ಹೋಗೆನ್ನುತ ರಾಮ ಹರಿ ಜೈ ಜೈ ಸೀತಾರಾಮ ೨೪

ತಂದೆ ವಚನಕೆ ಇಂದು ಜಗದಿ ಮಹ
ನಿಂದೆ ಬರುವುದೆಂದು ರಾಮ ಹರಿ ಜೈ ಜೈ ಸೀತಾರಾಮ ೨೫

ಸಿದ್ಧನಾಗೆ ವನಕಬ್ಧಿಶಯನ ಜಗ
ದೋದ್ಧಾರಣ ಶ್ರೀ ರಾಮ ಹರಿ ಜೈ ಜೈ ಸೀತಾರಾಮ ೨೬

ನಗರ ಜನರು ಕೇಳ್ದಗರಣ ಸುದ್ದಿಯಂ
ಬಗೆ ಬಗೆ ಶೋಕಿಸಿ ರಾಮ ಹರಿ ಜೈ ಜೈ ಸೀತಾರಾಮ ೨೭

ಸನುಮತವನು ಪೇಳಿ ಜನಕನನುಮತಿಯಿಂ
ದನುಜ ಸತಿಯಗೂಡಿ ರಾಮ ಹರಿ ಜೈ ಜೈ ಸೀತಾರಾಮ ೨೮

ಗುರುಗಳಿಗೊಂದಿಸಿ ತೆರಳಿದ ವಿಪಿನಕೆ
ಹರಸುರವಿನಮಿತ ರಾಮ ಹರಿ ಜೈ ಜೈ ಸೀತಾರಾಮ ೨೯

ಭ್ರಷ್ಟನಾದೆ ನಾನು ಕೊಟ್ಟು ವಚನವೆಂದು
ನಿಟ್ಟುಸಿರ್ಹಾಕುತ ರಾಮ ಹರಿ ಜೈ ಜೈ ಸೀತಾರಾಮ ೩೦

ಮೊರೆಯೋ ದೇಹ್ಯದಿ ಪರಲೋಕ ಸೇರಿದ
ಧರೆವರ ದಶರಥ ರಾಮ ಹರಿ ಜೈ ಜೈ ಸೀತಾರಾಮ ೩೧

ಜವದಿ ಕೈಕೆ ತನೂಭವನ ಕರೆಸಿ ಈ
ಭುವನ ಪಟ್ಟವನು ರಾಮ ಹರಿ ಜೈ ಜೈ ಸೀತಾರಾಮ ೩೨

ಕಟ್ಟುವೆನೆಂದು ಸುತಗಟ್ಟಹಾಸದಿ ಪೇಳ್ವ
ಕೆಟ್ಟ ಕೃತಿಯ ಕಂಡು ರಾಮ ಹರಿ ಜೈ ಜೈ ಸೀತಾರಾಮ ೩೩

ನೀಚಮನೋವೃತ್ತಿ ವಾಚಿಸದಿರು ನಾ
ಯೋಚಿಸಯೋರ್ಧ್ಯಕೆ ರಾಮ ಹರಿ ಜೈ ಜೈ ಸೀತಾರಾಮ ೩೪

ಶೀಘ್ರದಿ ಹೊರಟ ಸಮಗ್ರಬಿಟ್ಟು ತ
ನ್ನಾಗ್ರಜನ್ನುಡುಕುತ ರಾಮ ಹರಿ ಜೈ ಜೈ ಸೀತಾರಾಮ ೩೫

ಭರತ ಹೊರಟಿದ್ದನ್ನರಿತು ವಸಿಷ್ಠಮುಖ್ಯ
ವರ ಸುಮಂತ ಪ್ರಜಾ ರಾಮ ಹರಿ ಜೈ ಜೈ ಸೀತಾರಾಮ ೩೬

ಸರುವರ ಕೂಡಿ ಸುರನದಿಯಂ ದಾಂ
ಟರಸುತ ಬಂದನು ರಾಮ ಹರಿ ಜೈ ಜೈ ಸೀತಾರಾಮ ೩೭

ಚಿತ್ರಕೂಟದಿ ಪವಿತ್ರ ಸ್ವಾಮಿಯ ಕಂಡು
ಸ್ತೋತ್ರಪಾಡಿದರು ರಾಮ ಹರಿ ಜೈ ಜೈ ಸೀತಾರಾಮ ೩೮

ಶಿಷ್ಟಗುರುಗಳಂ ಇಷ್ಟಭಕ್ತರ ಕೃಪಾ
ದೃಷ್ಟಿಯಿಂ ನೋಡಿದ ರಾಮ ಹರಿ ಜೈ ಜೈ ಸೀತಾರಾಮ ೩೯

ವಿಮಲಪಾದದಿ ಬಿದ್ದು ಕ್ಷಮೆ ಬೇಡ್ವನುಜನ
ನಿರ್ಮಲ ಭಕ್ತಿಗೆ ಮೆಚ್ಚಿ ರಾಮ ಹರಿ ಜೈ ಜೈ ಸೀತಾರಾಮ ೪೦

ಕನಿಕರದಿಂದಪ್ಪಿ ಅನುಜನ ಮನಸಿಗೆ
ಸನುಮತ ಪೇಳಿದ ರಾಮ ಹರಿ ಜೈ ಜೈ ಸೀತಾರಾಮ ೪೧

ತಾತನ ವಚನವ ಪೂರ್ತಿಗೊಳಿಸಿ ಸಹ
ಜಾತ ಬರುವೆನೆಂದ ರಾಮ ಹರಿ ಜೈ ಜೈ ಸೀತಾರಾಮ ೪೨

ಪಾದುಕೆ ಇತ್ತು ನೀತಿ ಬೋಧಿಸಾಶೀ
ರ್ವದಿಸಿ ಕಳುಹಿದ ರಾಮ ಹರಿ ಜೈ ಜೈ ಸೀತಾರಾಮ ೪೩

ಪುರಜನರರಿದರೆಂದಿರದೆ ತೆರಳಿ ದಂಡ
ಕಾರಣ್ಯ ಸೇರಿದ ರಾಮ ಹರಿ ಜೈ ಜೈ ಸೀತಾರಾಮ ೪೪

ಭಕ್ತಿಯಿಂದ ಮುನಿಪೋತ್ತಮರು ಗೈದ
ಸತ್ಕಾರ ಕೈಕೊಂಡು ರಾಮ ಹರಿ ಜೈ ಜೈ ಸೀತಾರಾಮ ೪೫

ತೆರಳಿ ಪಂಚವಟ ಪರಮಸ್ಥಾನದೊಳು
ಇರಳು ನೇಮಿಸಿದ ರಾಮ ಹರಿ ಜೈ ಜೈ ಸೀತಾರಾಮ ೪೬

ಪರ್ಣಶಾಲೆಯಂ ನಿರ್ಣಯಿಸಿರುತಿರ್ದ
ರುಣುಕುಲೋದ್ಭವ ರಾಮ ಹರಿ ಜೈ ಜೈ ಸೀತಾರಾಮ ೪೭

ದನುಜ ರಾವಣನ ಅನುಜೆ ಶೂರ್ಪನಖಿ
ಮನಮೋಹಿತಳಾಗಿ ರಾಮ ಹರಿ ಜೈ ಜೈ ಸೀತಾರಾಮ ೪೮

ಚಪಲರೂಪ ತಾಳಿ ಗುಪಿತದಿ ನಮಿಸಲು
ಕಪಟವರಿದು ಶ್ರೀರಾಮ ಹರಿ ಜೈ ಜೈ ಸೀತಾರಾಮ ೪೯

ಹೇಯ ದನುಜಳ ಮಾಯೆ ತಿಳಿದು ಉ
ಪಾಯದಿಂದ ರಘುರಾಮ ಹರಿ ಜೈ ಜೈ ಸೀತಾರಾಮ ೫೦

ಬಲುಮೆ ತಮ್ಮನಿಂ ಹೊಲೆಯ ದೈತ್ಯಳ
ಮೊಲೆ ಮೂಗು ಕೊಯ್ಸಿದ ರಾಮ ಹರಿ
ಜೈ ಜೈ ಸೀತಾರಾಮ ೫೧

ದುರುಳೆ ಭಂಗಪಟ್ಟು ಮರಳಿ ಲಂಕೆ ಸೇರಿ
ಒರೆದಳಗ್ರಜನಿಗೆ ರಾಮ ಹರಿ ಜೈ ಜೈ ಸೀತಾರಾಮ ೫೨

ಖಳನೆ ನಿನಗಾಗಿ ಮೊಲೆಮೂಗು ಕಳಕೊಂ
ಡುಳಿದು ಬಂದೆನೆಂದು ರಾಮ ಹರಿ ಜೈ ಜೈ ಸೀತಾರಾಮ ೫೩

ವನಚಾರಿಗಳಬಳಿಲಿನಕೋಟಿಪ್ರಭಾಮಯ
ವನಿತೆಯೋರ್ವಳ ಕಂಡು ರಾಮ ಹರಿ ಜೈ ಜೈ ಸೀತಾರಾಮ ೫೪

ಅಣ್ಣಗೆ ಸಲ್ಲವಳೆನ್ನುತ ಯತ್ನಿಸ
ಲೆನ್ನಗೆ ಈ ಭಂಗ ರಾಮ ಹರಿ ಜೈ ಜೈ ಸೀತಾರಾಮ ೫೫

ತಂಗಿ ಮಾತು ಕೇಳಿ ಮಂಗದನುಜ ತನ್ನ
ಭಂಗ ಯೋಚಿಸಿದ ರಾಮ ಹರಿ ಜೈ ಜೈ ಸೀತಾರಾಮ ೫೬

ತಂಗಿಯೆ ನಿನ್ನಯ ಭಂಗಪಡಿಸಿದ
ರಂಗನೆಯಳ ತಂದು ರಾಮ ಹರಿ ಜೈ ಜೈ ಸೀತಾರಾಮ ೫೭

ಆಳದಿರಲು ಎನ್ನ ಬಾಳು ಏತಕೆಂದು
ತಾಳಿದ ಪಂಥವ ರಾಮ ಹರಿ ಜೈ ಜೈ ಸೀತಾರಾಮ ೫೮

ನೀಚಮಾವ ಮಾರೀಚನ ಕರೆಸಿ ದು
ರ್ಯೋಚನೆ ಪೇಳಿದ ರಾಮ ಹರಿ ಜೈ ಜೈ ಸೀತಾರಾಮ ೫೯

ಮಂದಮತಿ ಎಲ್ಲಿಂದ ಸೇರಿತು ನಿನ್ನ
ಗೆಂದು ಮಾರೀಚನು ರಾಮ ಹರಿ ಜೈ ಜೈ ಸೀತಾರಾಮ ೬೦

ಆರೆಂದರಿದಿ ನಾರಾಯಣನವ
ತಾರವಿದೆಂದನು ರಾಮ ಹರಿ ಜೈ ಜೈ ಸೀತಾರಾಮ ೬೧

ಕಾಲವೊದಗಿ ಅವ ಪೇಳಿದವನ ಮೇಲೆ
ತಾಳಿದ ಕೋಪವ ರಾಮ ಹರಿ ಜೈ ಜೈ ಸೀತಾರಾಮ ೬೨

ಕೆಡುವ ಕಾಲಕ್ಕೆ ಸತ್ಯನುಡಿ ವಿಷತೋರ್ಪುವು
ಕೊಡು ವೀಳ್ಯವೆಂದನು ರಾಮ ಹರಿ ಜೈ ಜೈ ಸೀತಾರಾಮ ೬೩

ನೀಚನ ವೀಳ್ಯ ಮಾರೀಚ ಪಡೆದು ಬಂದು
ಯೋಚಿಸಿದನು ಮಾಯ ರಾಮ ಹರಿ ಜೈ ಜೈ ಸೀತಾರಾಮ ೬೪

ನೀತಿಗೆಟ್ಟ ನಾನು ಪಾತಕನಾಗಿನ್ನು
ಘಾತ ತಪ್ಪದೆಂದು ರಾಮ ಹರಿ ಜೈ ಜೈ ಸೀತಾರಾಮ ೬೫

ಮನದಿ ನಿಶ್ಚಯಿಸಿ ಕನಕ ಮೃಗವಾಗಿ
ವನದಿ ಸುಳಿಯುತಿರೆ ರಾಮ ಹರಿ ಜೈ ಜೈ ಸೀತಾರಾಮ ೬೬

ಸೀತೆ ನೋಡಿ ಇದ ನಾಥಗೆ ಪೇಳಿದ
ಳಾತುರದಿಂದಲಿ ರಾಮ ಹರಿ ಜೈ ಜೈ ಸೀತಾರಾಮ ೬೭

ಏನು ಚೆಲುವುಯಿದೆ ಕಾನನ ಮೃಗವೆಂದು
ಮಾನಿನಿ ಜಾನಕಿ ರಾಮ ಹರಿ ಜೈ ಜೈ ಸೀತಾರಾಮ ೬೮

ತಂದುಕೊಡಿದನಾನಂದಗಳೆವೆನ್ನೊತ್ತು
ಎಂದು ಬೇಡಿದಳು ರಾಮ ಹರಿ ಜೈ ಜೈ ಸೀತಾರಾಮ ೬೯

ಜ್ಞಾನ ಪೋಯಿತೇನೇ ಜಾನಕಿ ನಿನಗೆಂದ
ದೀನ ಜನರ ಬಂಧು ರಾಮ ಹರಿ ಜೈ ಜೈ ಸೀತಾರಾಮ ೭೦

ಮಂಕುತನದಿ ನೀ ಶಂಕಿಸಬೇಡಿದು
ಜಿಂಕೆಯಲ್ಲೆಂದನು ರಾಮ ಹರಿ ಜೈ ಜೈ ಸೀತಾರಾಮ ೭೧

ಅಯತಾಂಬಕಿ ಕೇಳ್ಮಾಯದನುಜರು
ಪಾಯವಿದೆಂದ ರಘುರಾಮ ಹರಿ ಜೈ ಜೈ ಸೀತಾರಾಮ ೭೨

ಮಾರಮಣನೆ ನೀ ತಾರದ ಮಾತಿಗೆ
ಈರೀತಿ ಪೇಳ್ವೆಯ ರಾಮ ಹರಿ ಜೈ ಜೈ ಸೀತಾರಾಮ ೭೩

ಮರುಳ ತನವು ಬೇಡ ದುರುಳರ ಕೃತಿಯಿದು
ಅರಿದುನೋಡೆಂದ ಶ್ರೀರಾಮ ಹರಿ ಜೈ ಜೈ ಸೀತಾರಾಮ ೭೪

ಹೇಮಮೃಗವೆ ನಿಜ ಶ್ಯಾಮಸುಂದರ ಮಮ
ಪ್ರೇಮ ತೀರಿಸೆಲೋ ರಾಮ ಹರಿ ಜೈ ಜೈ ಸೀತಾರಾಮ ೭೫

ಭೂಸುರಾಂಗಿ ಅಭಿಲಾಷಿಸಬೇಡ ನಿಜ
ಮೋಸದ ಮೃಗವೆಂದ ರಾಮ ಹರಿ ಜೈ ಜೈ ಸೀತಾರಾಮ ೭೬

ಮೃಗವು ಮೋಸದ್ದೆನೆ ನಗರೆ ಜಗದಿ ಈ
ಹಗರಣಸುದ್ದಿಗೆ ರಾಮ ಹರಿ ಜೈ ಜೈ ಸೀತಾರಾಮ ೭೭

ಹಟವ ಬಿಡೆಲೆ ಪ್ರಿಯೆ ಸಟೆಯಲ್ಲಸುರರ
ಕುಟಿಲತ್ವವಿದು ನಿಜ ರಾಮ ಹರಿ ಜೈ ಜೈ ಸೀತಾರಾಮ ೭೮

ಸಾಕು ನೀತಿನುಡಿ ಲೋಕನಾಥನಗೆ
ಬೇಕು ಪಿಡಿದು ತಾ ರಾಮ ಹರಿ ಜೈ ಜೈ ಸೀತಾರಾಮ ೭೯

ಮತಿತಪ್ಪಿದಳೀ ಸತಿಯಬಯಕೆಗಿ
ನ್ನೆತನವಿಲ್ಲೆಂದನು ರಾಮ ಹರಿ ಜೈ ಜೈ ಸೀತಾರಾಮ ೮೦

ಹಿತದನುಜನ ಕರೆದ್ವೆಥೆಯಿಂ ಪೇಳಿದ
ಸತಿಯಳು ಜೋಕೆಂದು ರಾಮ ಹರಿ ಜೈ ಜೈ ಸೀತಾರಾಮ ೮೧

ಪಿಡಿದು ತರುವೆ ಮೃಗ ಬಿಡಳು ಮಂದಮತಿ
ಪಿಡಿದ ಹಟವ ಸತಿ ರಾಮ ಹರಿ ಜೈ ಜೈ ಸೀತಾರಾಮ ೮೨

ಮರಳಿ ಬರುವತನಕರಲವ ಇಲ್ಲಿಂದ
ತೆರಳದಿರೆನ್ನುತ ರಾಮ ಹರಿ ಜೈ ಜೈ ಸೀತಾರಾಮ ೮೩

ಪರಿಪರಿ ಅನುಜಂಗರುಹಿ ಧನುವ ಪಿಡಿ
ದೆರಳೆಬೆನ್ನ್ಹತ್ತಿದ ರಾಮ ಹರಿ ಜೈ ಜೈ ಸೀತಾರಾಮ ೮೪

ವಾರೆ ನೋಡುತ ಕೈಸೇರುವಂತೆ ನಿಂತು
ಹಾರುವುದಗಣಿತ ರಾಮ ಹರಿ ಜೈ ಜೈ ಸೀತಾರಾಮ ೮೫

ಅಲ್ಲಿ ಉಲ್ಲಾಸದಿ ಹುಲ್ಲನು ಮೇಯುತ
ಮೆಲ್ಲಮೆಲ್ಲನೆ ಮತ್ತು ರಾಮ ಹರಿ ಜೈ ಜೈ ಸೀತಾರಾಮ ೮೬

ಎದರು ಬರಲು ತಿರುಗ್ಗೆದರಿ ಓಡುವುದು
ಕೆದರುತ ಕಾಲನು ರಾಮ ಹರಿ ಜೈ ಜೈ ಸೀತಾರಾಮ ೮೭

ಒದರಿ ನಿಲ್ಲುತ ಬೆದರಿ ನೋಡುವುದು
ಪದುಮನಾಭನನು ರಾಮ ಹರಿ ಜೈ ಜೈ ಸೀತಾರಾಮ ೮೮

ಕರದಿ ಸಿಗುವುದೊಮ್ಮೆ ಪಿರಿದು ಹಾರಿಹೋಗಿ
ಮರೆಯಾಗಿ ನಿಲ್ವುದು ರಾಮ ಹರಿ ಜೈ ಜೈ ಸೀತಾರಾಮ ೮೯

ಸಾಗಿಬಂದು ಮತ್ತೆ ಸಾಗರಶಾಯಿಮುಂದೆ
ಸಾಗರಬೀಳ್ವುದು ರಾಮ ಹರಿ ಜೈ ಜೈ ಸೀತಾರಾಮ ೯೦

ಸೊಗಸಿನಿಂದ ಎದ್ದು ಜಿಗಿಜಿಗಿದಾಡ್ವುದು
ಚಿಗರೆಯ ಹಗರಣ ರಾಮ ಹರಿ ಜೈ ಜೈ ಸೀತಾರಾಮ ೯೧

ವರ್ಣಿಸಲಳವಲ್ಲ ಪರ್ಣಶಾಲೆಯಿಂದ
ನಿರ್ಣಯಿಲ್ಲದ ಪಥ ರಾಮ ಹರಿ ಜೈ ಜೈ ಸೀತಾರಾಮ ೯೨

ಎಳಸಿತು ವನದೊಳು ಬಳಲಿಸಿತಭವನ
ಕಳವಳಗೊಂಡ ರಾಮ ಹರಿ ಜೈ ಜೈ ಸೀತಾರಾಮ ೯೩

ಮೊಸ ಮಾಯಾಮೃಗಪಾಶಕೆ ಬಹುತರ
ಬೇಸತ್ತು ಪ್ರಭುವರ ರಾಮ ಹರಿ ಜೈ ಜೈ ಸೀತಾರಾಮ ೯೪

ತೊಟ್ಟಬಾಣವಂ ಇಟ್ಟು ಗುರಿಯನು
ದುಷ್ಟಮರ್ದನ ರಘುರಾಮ ಹರಿ ಜೈ ಜೈ ಸೀತಾರಾಮ ೯೫

ಸೃಷ್ಟಿಒಡೆಯನಂತೆ ಗಟ್ಟಿಸ್ವರದಿ ಕೂಗಿ
ಬಿಟ್ಟಿತು ಪ್ರಾಣವ ರಾಮ ಹರಿ ಜೈ ಜೈ ಸೀತಾರಾಮ ೯೬

ಸೀತೆಲಕ್ಷ್ಮಣ ಘಾತವಾಯಿತೆಂದು
ಭೂತಟಾಕದೊಳು ಬಿತ್ತು ರಾಮ ಹರಿ ಜೈ ಜೈ ಸೀತಾರಾಮ ೯೭

ಜಾನಕಿ ಕೇಳಿ ದೀನಸ್ವರವು ಮಮ
ಪ್ರಾಣನಾಥದೆಂದು ರಾಮ ಹರಿ ಜೈ ಜೈ ಸೀತಾರಾಮ ೯೮

ಹಂಬಲಿಸಳುತ ಇಂಬುದಾಯಕನಂ
ಕುಂಭಿನಿಮೇಲೆ ಬಿದ್ದು ರಾಮ ಹರಿ ಜೈ ಜೈ ಸೀತಾರಾಮ ೯೯

ಜೀವದರಸನಿಗೆ ಆವ ಸಂಕಟವು
ಆವರಿಸಿಹ್ಯದೋ ರಾಮ ಹರಿ ಜೈ ಜೈ ಸೀತಾರಾಮ ೧೦೦

ಪೋಗುಲಕ್ಷ್ಮಣ ಬೇಗ ಕರೆದು ತಾ
ಭೋಗದಾರ್ಯನಂ ರಾಮ ಹರಿ ಜೈ ಜೈ ಸೀತಾರಾಮ ೧೦೧

ಮಾತೆಯೇನಿದು ಭೀತಿಗೊಳ್ವರೆ ಲೋಕ
ನಾಥನಿದಿರಾರು ರಾಮ ಹರಿ ಜೈ ಜೈ ಸೀತಾರಾಮ ೧೦೨

ಮಾಯಾರಕ್ಕಸರುಪಾಯವಿದೆಲ್ಲವು
ಬಾಯ ಬಿಡದರೌ ರಾಮ ಹರಿ ಜೈ ಜೈ ಸೀತಾರಾಮ ೧೦೩

ನಾಥನ ವಿಷಯ ಈ ರೀತಿ ಉಲ್ಲಂಘನ
ನೀತಿಯೆ ಲಕ್ಷ್ಮಣ ರಾಮ ಹರಿ ಜೈ ಜೈ ಸೀತಾರಾಮ ೧೦೪

ತಾಯಿ ಭಯವ ಬಿಡು ಮಾಯದೂರನಿಗೆ ಆವ
ಭಯವು ಇಲ್ಲ ರಾಮ ಹರಿ ಜೈ ಜೈ ಸೀತಾರಾಮ ೧೦೫

ಪೌರುಷ ಬಿಡು ನಿನ್ನ ಸಾರಾಂಶ ತಿಳಿಯಿತು
ಸೈರಿಸೆ ನಾನಿನ್ನು ರಾಮ ಹರಿ ಜೈ ಜೈ ಸೀತಾರಾಮ ೧೦೬

ನಿನ್ನ ಬಿಟ್ಹೋಗದಿರೆನ್ನುತ ಎನಗೆ
ಅಣ್ಣನಾಜ್ಞವಿದೆ ರಾಮ ಹರಿ ಜೈ ಜೈ ಸೀತಾರಾಮ ೧೦೭

ಗನ್ನಗತಕತನವನ್ನು ಯೋಚಿಸಿದಿ
ಅಣ್ಣಪೋದನೆಂದು ರಾಮ ಹರಿ ಜೈ ಜೈ ಸೀತಾರಾಮ ೧೦೮

ಸುತಗೆ ಇಂಥ ಅಹಿತದ ಮಾತಾಡಿ
ವ್ಯಥೆಯ ಬಡಿಸದಿರು ರಾಮ ಹರಿ ಜೈ ಜೈ ಸೀತಾರಾಮ ೧೦೯

ಮಾತೆಯೆನುತ ದುರ್ನೀತಿ ಬಗೆದು ಮಮ
ನಾಥ ಪೋದನೆಂದು ರಾಮ ಹರಿ ಜೈ ಜೈ ಸೀತಾರಾಮ ೧೧೦

ತಾಯಿ ನಮಿಸುವೆನು ಬಾಯಿ ಬಿಚ್ಚದಿರು
ಹೇಯ ನುಡಿಯಬೇಡ ರಾಮ ಹರಿ ಜೈ ಜೈ ಸೀತಾರಾಮ ೧೧೧

ಪೋಗುವೆ ನಾನಿನ್ನು ಭೋಗವಿದ್ದ ತೆರ
ಆಗಿತೀರುವದು ರಾಮ ಹರಿ ಜೈ ಜೈ ಸೀತಾರಾಮ ॥೧೨

ಕಪಟದನುಜರೀ ವಿಪಿನದೊಳತಿಶಯ
ಗುಪಿತದಿಂದಿಪ್ಪರಾ ರಾಮ ಹರಿ ಜೈ ಜೈ ಸೀತಾರಾಮ ॥೧೩

ಶಾಲೆಬಿಟ್ಟು ನೀ ಬೈಲಿಗೆ ಬರಬೇಡ
ಮೂಲಮಾತುಯಿದು ರಾಮ ಹರಿ ಜೈ ಜೈ ಸೀತಾರಾಮ ॥೧೪

ಮಂಡಲಪೊಯ್ದನು ಗಂಡುಗಲಿ ಉ
ದ್ದಂಡ ಲಕ್ಷ್ಮಣ ರಾಮ ಹರಿ ಜೈ ಜೈ ಸೀತಾರಾಮ ॥೧೫

ಕ್ಷಿತಿಜೆಯ ಮಾತಿಗೆ ಅತಿನೊಂದು ಮನದೊಳು
ಪಥ ಪಿಡಿದ್ವಿಪಿಪನಕೆ ರಾಮ ಹರಿ ಜೈ ಜೈ ಸೀತಾರಾಮ ॥೧೬

ಗುಪಿತದಿ ಅಡಗಿರ್ದ ಕಪಟರಾವಣ ಬಂದ
ತಪಸಿಯ ವೇಷದಿ ರಾಮ ಹರಿ ಜೈ ಜೈ ಸೀತಾರಾಮ ॥೧೭

ಭಿಕ್ಷೆವೆಂದೆನ್ನಲು ಲಕ್ಷ್ಮಣನ್ವಾಕ್ಯವ
ಲಕ್ಷಕೆ ತಾರದೆ ರಾಮ ಹರಿ ಜೈ ಜೈ ಸೀತಾರಾಮ ॥೧೮

ದುರುಳನ ಕೃತಿಯನ್ನರಿಯದೆ ಜಾನಕಿ
ಹೊರಗೆ ಬಂದಳೈ ರಾಮ ಹರಿ ಜೈ ಜೈ ಸೀತಾರಾಮ ॥೧೯

ನಿಂತಭೂಮಿಯಾದ್ಯಂತ ಕಿತ್ತು ಖಳ
ನಂತರ್ಯದಿಟ್ಟ ರಾಮ ಹರಿ ಜೈ ಜೈ ಸೀತಾರಾಮ ॥೨೦

ಮಂಕುದನುಜ ತನ್ನ ಲಂಕೆಗೆ ತಿರುಗಿದ
ಬಿಂಕದಿಂದ ಖಳ ರಾಮ ಹರಿ ಜೈ ಜೈ ಸೀತಾರಾಮ ॥೨೧

ತ್ರಾಣದಪ್ಪಿ ಪೂನೇತ್ರೆ ಸೀತೆ ಮಹನಿ
ತ್ರಾಣಿಯಾಗಿ ರಾಮ ಹರಿ ಜೈ ಜೈ ಸೀತಾರಾಮ ॥೨೨

ತಂದೆ ಲಕ್ಷ್ಮಣಗೆ ನಿಂದೆ ಮಾಡಿದ ಫಲ
ಬಂದಿತು ಎನಗೆಂದು ರಾಮ ಹರಿ ಜೈ ಜೈ ಸೀತಾರಾಮ ॥೨೩

ಕಂಬನಿಗರೆದಳು ಹಂಬಲಿಸುತ ಪ್ರಿಯ
ನಂಬುಜಾಕ್ಷಿಯಳು ರಾಮ ಹರಿ ಜೈ ಜೈ ಸೀತಾರಾಮ ೧೨೪

ರಾಮರಾಮಯೆಂಬ ನಾಮ ರಥದಿ ನಿ
ಸ್ಸೀಮ ಜಟಾಯು ಕೇಳಿ ರಾಮ ಹರಿ ಜೈ ಜೈ ಸೀತಾರಾಮ ೧೨೫

ಶೀಘ್ರಬಂದ ರಥ ನಿಗ್ರಹಿಸುವೆನೆಂದು
ಉಗ್ರ ಕೋಪದಿಂದ ರಾಮ ಹರಿ ಜೈ ಜೈ ಸೀತಾರಾಮ ೧೨೬

ಬದ್ಧದೈತ್ಯ ಎತ್ತ ಕದ್ದು ಪೋಗುವಿಯೆಂದು
ಒದ್ದನಾ ರಥ ರಾಮ ಹರಿ ಜೈ ಜೈ ಸೀತಾರಾಮ ೧೨೭

ಬಿತ್ತು ಭೂಮಿಮೇಲೆತ್ತ ಪೋಗದಂತೆ
ನಿತ್ಯನಿಂತು ರಥ ರಾಮ ಹರಿ ಜೈ ಜೈ ಸೀತಾರಾಮ ೧೨೮

ದುರುಳಯುಕ್ತಿಯಿಂ ಗರುಡನ ಶಕ್ತಿಯಂ
ಅರಿತುಕೊಂಡು ಖಳ ರಾಮ ಹರಿ ಜೈ ಜೈ ಸೀತಾರಾಮ ೧೨೯

ಖಗನ ಪಕ್ಕಮಂ ಬಿಗಿದು ಬೇಗ ಲಂಕಾ
ನಗರ ಸೇರಿದನು ರಾಮ ಹರಿ ಜೈ ಜೈ ಸೀತಾರಾಮ ೧೩೦

ಲಕ್ಷ್ಮಣನನೊನದಿ ನಿರೀಕ್ಷಿಸಿ ಶ್ರೀ ಕಮ
ಲಾಕ್ಷ ನೊಂದ ರಘುರಾಮ ರಾಮ ಹರಿ
ಜೈ ಜೈ ಸೀತಾರಾಮ ೧೩೧

ಏನು ತಮ್ಮ ಮತಿಹೀನನಾಗಿ ಕಾರ್ಯ
ಹಾನಿ ಮಾಡಿದೆಯೆಂದ ರಾಮ ಹರಿ ಜೈ ಜೈ ಸೀತಾರಾಮ ೧೩೨

ನಿಂದಿಸಿ ಅಟ್ಟಿದಳಿಂದು ಸೀತೆ ಎನ್ನ
ನೊಂದು ಬಂದೆ ರಘು ರಾಮ ಹರಿ ಜೈ ಜೈ ಸೀತಾರಾಮ ೧೩೩

ಸೀತೆ ಅಗಲಿದಳು ಘಾತವಾಯಿತು ಉ
ತ್ಪಾತ ಜರುಗಿತೆಂದ ರಾಮ ಹರಿ ಜೈ ಜೈ ಸೀತಾರಾಮ ೧೩೪

ಬೇಗ ಬೇಗ ಬಂದು ನಾಗಶಾಯಿ ಶಾಲೆ
ಬಾಗಿ ನೋಡಿದನು ರಾಮ ಹರಿ ಜೈ ಜೈ ಸೀತಾರಾಮ ೧೩೫

ಜಾನಕಿಯಿಂ ತಾ ಕಾಣದೆ ಘನತರ
ಮೌನ ತಾಳಿದನು ರಾಮ ಹರಿ ಜೈ ಜೈ ಸೀತಾರಾಮ ೧೩೬

ನಾನಾತೆರದಿ ತನ್ನ ಪ್ರಾಣದರಸಿಗುಣ
ಧ್ಯಾನಿಸಿ ಬಳಲಿದ ರಾಮ ಹರಿ ಜೈ ಜೈ ಸೀತಾರಾಮ ೧೩೭

ಸುಡುವೆ ಲೋಕವೆಂದು ಕಿಡಿಯನುಗುಳುತ
ಪಿಡಿದ ಧನುಸ್ಸು ರಘುರಾಮ ಹರಿ ಜೈ ಜೈ ಸೀತಾರಾಮ ೧೩೮

ಅಗ್ರಜ ಕೇಳು ಸಮಗ್ರ ಲೋಕಮಂ
ನಿಗ್ರಹಿಸುವಿರೇನು ರಾಮ ಹರಿ ಜೈ ಜೈ ಸೀತಾರಾಮ ೧೩೯

ಹ್ಯಾಗೆ ಸಹಿಸಲಿ ನೀಗದೆನ್ನ ಕೋಪ
ಯೋಗ ಹೆಚ್ಚುತಿದೆ ರಾಮ ಹರಿ ಜೈ ಜೈ ಸೀತಾರಾಮ ೧೪೦

ಪಾಪಿ ಓರ್ವಗಾಗಿ ಕೋಪದಿ ಜಗತ್ತಿನ
ಪಾಪ ಕೊಳ್ಳಬೇಡ ರಾಮ ಹರಿ ಜೈ ಜೈ ಸೀತಾರಾಮ ೧೪೧

ಸೈರಿಸು ಅನುಜನೆ ದುರಳನ ಶೋಧಿಸಿ
ಶಿರ ಚೆಂಡಾಡುವೆ ರಾಮ ಹರಿ ಜೈ ಜೈ ಸೀತಾರಾಮ ೧೪೨

ಹುಡುಕುತ ನಡೆದರು ಬಿಡದೆ ಗುಡ್ಡ ಗುಹೆ
ಕಡುಜಾಗ್ರತೆಯಿಂದ ರಾಮ ಹರಿ ಜೈ ಜೈ ಸೀತಾರಾಮ ೧೪೩

ಬರುತಿರೆ ವನದೊಳು ಹರಿಹರಿಯೆನ್ನುತ
ಸ್ಮರಣೆಯೊಳ್ಬಿದ್ದಿಹ್ಯ ರಾಮ ಹರಿ ಜೈ ಜೈ ಸೀತಾರಾಮ ೧೪೪

ಪಕ್ಷಿರಾಜನಂ ಕಂಡೀ ಶಿಕ್ಷೆಯಾತಕೆಂದು
ಲಕ್ಷಿಸಿ ಕೇಳಿದ ರಾಮ ಹರಿ ಜೈ ಜೈ ಸೀತಾರಾಮ ೧೪೫

ಪರಮಪೂಜ್ಯ ನಿಮ್ಮ ಅರಸಿಯಂ ರಾವಣ
ದುರುಳ ಒಯ್ಯುತಿರೆ ರಾಮ ಹರಿ ಜೈ ಜೈ ಸೀತಾರಾಮ ೧೪೬

ತಡೆಯದೊದೆದು ರಥ ಕೆಡಹಿದೆ ಪೊಡವಿಗೆ
ಕಡುದುರುಳನ್ನೊಳು ರಾಮ ಹರಿ ಜೈ ಜೈ ಸೀತಾರಾಮ ೧೪೭

ಮಿಥ್ಯನುಡಿದು ಎನ್ನ ಶಕ್ತಿ ತಿಳಿದು ಖಳ
ಕತ್ತರಿಸಿದ ಪಕ್ಕ ರಾಮ ಹರಿ ಜೈ ಜೈ ಸೀತಾರಾಮ ೧೪೮

ಮಂಕುದನುಜ ತನ್ನ ಲಂಕೆ ಸೇರಿದ ನಿಮ್ಮ
ಪಂಕಜಾಕ್ಷಿಯ ಕೊಂಡು ರಾಮ ಹರಿ ಜೈ ಜೈ ಸೀತಾರಾಮ ೧೪೯

ಕುಶಲದಿ ನೆರವೇರಿಸುವನು ತವಕಾರ್ಯ
ಪಶುರೂಪ ಸುಗ್ರೀವ ರಾಮ ಹರಿ ಜೈ ಜೈ ಸೀತಾರಾಮ ೧೫೦

ವಶದ ತೆಂಕಣ ದೆಸೆಗೆ ಪೋಗಿ ಮಹ
ಋಷ್ಯಮೂಕಾದ್ರಿ ಸೇರು ರಾಮ ಹರಿ ಜೈ ಜೈ ಸೀತಾರಾಮ ೧೫೧

ನಿನ್ನ ಪಾದ ಕಂಡು ಧನ್ಯವಾದೆ ಎನ
ಗಿನ್ನು ಮೋಕ್ಷ ಕೊಡು ರಾಮ ಹರಿ ಜೈ ಜೈ ಸೀತಾರಾಮ ೧೫೨

ಗರುಡಂಗೊಲಿದು ಕರುಣಿಸಿದನು ಮುಕ್ತಿ
ಕರುಣನಿಕರ ಶ್ರೀರಾಮ ಹರಿ ಜೈ ಜೈ ಸೀತಾರಾಮ ೧೫೩

ವಸುಧೆಯೊಳೆಸೆವ ಋಷ್ಯಮೂಕಪರ್ವತ
ದೆಸೆಯ ಶೋಧಿಸುತ ರಾಮ ಹರಿ ಜೈ ಜೈ ಸೀತಾರಾಮ ೧೫೪

ಹೊರಡಲು ಮಾರ್ಗದಿ ನಾರಿ ಶಬರಿ ಪೂಜೆ
ಹರುಷದಿ ಕೈಕೊಂಡು ರಾಮ ಹರಿ ಜೈ ಜೈ ಸೀತಾರಾಮ ೧೫೫

ಮುಂದೆ ನಡೆದು ವನಸೌಂದರ್ಯವ
ಕಂಡಾನಂದಿಸಿದನು ರಾಮ ಹರಿ ಜೈ ಜೈ ಸೀತಾರಾಮ ೧೫೬

ಎಲ್ಲಿ ನೋಡಲು ಜಾಜಿ ಮಲ್ಲಿಗೆ ಸೇವಂತಿ
ಕಲ್ಹಾರ ತೋರ್ಪವು ರಾಮ ಹರಿ ಜೈ ಜೈ ಸೀತಾರಾಮ ೧೫೭

ನಿಂಬೆ ಖರ್ಜುರ ದಾಡಿಂಬ ಹಲಸು ತೆಂಗು
ಜಂಬು ಕಿತ್ತಲೆ ಫಲ ರಾಮ ಹರಿ ಜೈ ಜೈ ಸೀತಾರಾಮ ೧೫೮

ಕಾಲಕಾಲದಿ ಫಲತಾಳಿ ನಂದನವನ
ಪೋಲುತಲಿದೆ ಸಮ ರಾಮ ಹರಿ ಜೈ ಜೈ ಸೀತಾರಾಮ ೧೫೯

ಎರಳೆಮರಿಗೆ ಹುಲಿ ಕೊರಳೆ ನೆಕ್ಕಿ ಮಹ
ಹರುಷದಾಡಿಸುವುವು ರಾಮ ಹರಿ ಜೈ ಜೈ ಸೀತಾರಾಮ ೧೬೦

ಹುಲಿಯಮರಿಗೆ ಜಿಂಕೆ ಮೊಲೆಯನುಣಿಸಿ
ಸಲಹುತಿಪ್ಪವು ರಾಮ ಹರಿ ಜೈ ಜೈ ಸೀತಾರಾಮ ೧೬೧

ಹಲವುಜಾತಿಮೃಗ ಒಲಿದೊಂದ್ದೊಂಡದಿ
ಜಲವ ಕುಡಿಯುತಿರೆ ರಾಮ ಹರಿ ಜೈ ಜೈ ಸೀತಾರಾಮ ೧೬೨

ನೋಡುಲಕ್ಷ್ಮಣೀನಾಡಪೆಂಪ ಮುನಿ
ಗಾಢ ಮಹಿಮವೆಂದ ರಾಮ ಹರಿ ಜೈ ಜೈ ಸೀತಾರಾಮ ೧೬೩

ನಾಗಶಯನ ಮುನಿಭೋಗ ಪೊಗಳಿ ತಲೆ
ದೂಗುತ ನಡೆದನು ರಾಮ ಹರಿ ಜೈ ಜೈ ಸೀತಾರಾಮ ೧೬೪

ಇನಕೋಟಿಪ್ರಭೆಯಂತೆ ಮಿನುಗುತಲೀರ್ವರು
ವನದಿ ಬರುತಲಿರೆ ರಾಮ ಹರಿ ಜೈ ಜೈ ಸೀತಾರಾಮ ೧೬೫

ಕಂಡು ಸುಗ್ರೀವ ಮಂಡರಾರಿವರೆಂದು
ದ್ದಂಡ ಹನುಮಗೆ ರಾಮ ಹರಿ ಜೈ ಜೈ ಸೀತಾರಾಮ ೧೬೬

ಅಜ್ಞೆಮಾಡಿದನು ಪ್ರಾಜ್ಞರಾರಿಹರೋ
ಸೌಜ್ಞ ತಿಳಿದು ಬಾ ರಾಮ ಹರಿ ಜೈ ಜೈ ಸೀತಾರಾಮ ೧೬೭

ವೀರಹನುಮ ತಾ ಹಾರಿಬಂದು ಕಂಡ ಆ
ಪಾರ ಮಹಿಮನಂ ರಾಮ ಹರಿ ಜೈ ಜೈ ಸೀತಾರಾಮ ೧೬೮

ಸ್ವಾಮಿಗೆರಗಿ ವಾಸಭೂಮಿ ದಾವುದೆಂದು
ನಾಮ ವಿಚಾರಿಸಿದ ರಾಮ ಹರಿ ಜೈ ಜೈ ಸೀತಾರಾಮ ೧೬೯

ವಾನರನಿವನೆಂಥ ಜ್ಞಾನಿಯಿರುವನೆಂದು
ಜಾನಕೀಶ ರಘು ರಾಮ ಹರಿ ಜೈ ಜೈ ಸೀತಾರಾಮ ೧೭೦

ವಾಯುಸುತನ ಭಕ್ತಿಭಾವಕೆ ಮೆಚ್ಚಿ ಸ್ವಾಮಿ
ಕೇವಲ ಪ್ರೇಮದಿ ರಾಮ ಹರಿ ಜೈ ಜೈ ಸೀತಾರಾಮ ೧೭೧

ಸೂರ್ಯವಂಶದ ಆರ್ಯದಶರಥ ಕು
ಮಾರರಿಹೆವು ಎಂದು ರಾಮ ಹರಿ ಜೈ ಜೈ ಸೀತಾರಾಮ ೧೭೨

ರಾಮಲಕ್ಷ್ಮಣರೆಂಬ ನಾಮ ನಮ್ಮದು ನಿ
ಸ್ಸೀಮ ನೀ ದಾರೆಂದ ರಾಮ ಹರಿ ಜೈ ಜೈ ಸೀತಾರಾಮ ೧೭೩

ವಾಯುದೇವನಿಂದ ದೇವಿ ಅಂಜನೆ ಗರ್ಭಾವ
ತಾರಾಂಜನೇಯ ರಾಮ ಹರಿ ಜೈ ಜೈ ಸೀತಾರಾಮ ೧೭೪

ವಾನರಾಧಿಪ ಸುಗ್ರೀವನ ಪಟ್ಟ ಪ್ರ
ಧಾನಯಿರುವೆನೆಂದ ರಾಮ ಹರಿ ಜೈ ಜೈ ಸೀತಾರಾಮ ೧೭೫

ಗುಪಿತದಿ ಋಷ್ಯಮೂಕ ತಪಸಿಯೊಳಡಿಗಿಹ್ಯ
ಕಪಿವರಾಗ್ರಜಗಂಜಿ ರಾಮ ಹರಿ ಜೈ ಜೈ ಸೀತಾರಾಮ ೧೭೬

ಉನ್ನತ ತವಪಾದವನ್ನು ಕಂಡುಬರ
ಲೆನ್ನಟ್ಟಿಹ್ಯನೈ ರಾಮ ಹರಿ ಜೈ ಜೈ ಸೀತಾರಾಮ ೧೭೭

ಸುಗ್ರೀವನ್ನುಡುಕುತ ಆಗ್ರಹದಿ ಬಂದಿಹೆ
ಜಾಗ್ರದಿ ತೋರೆಂದ ರಾಮ ಹರಿ ಜೈ ಜೈ ಸೀತಾರಾಮ ೧೭೮

ಪಾದಕಮಲಗಳು ಬಾಧಿಸುತಿರಬಹು
ದ್ವೇದನೆಯಿಂದ ರಘು ರಾಮ ಹರಿ ಜೈ ಜೈ ಸೀತಾರಾಮ ೧೭೯

ಭೃತ್ಯನ ಭುಜಗಳ್ಹತ್ತೀಕ್ಷಣ
ಹೊತ್ತುಕೊಂಡ್ಹೋಗುವೆ ರಾಮ ಹರಿ ಜೈ ಜೈ ಸೀತಾರಾಮ ೧೮೦

ಭ್ರಾಂತಿಯೇನೋ ಹನುಮಂತ ಈರ್ವರನು
ಎಂತು ಒಯ್ಯುವಿಯೆಂದ ರಾಮ ಹರಿ ಜೈ ಜೈ ಸೀತಾರಾಮ ೧೮೧

ಚರಣದಾಸನೊಳಿರಲಿ ಕರುಣವೆಂದು
ಭರದಿ ಸಿದ್ಧನಾದ ರಾಮ ಹರಿ ಜೈ ಜೈ ಸೀತಾರಾಮ ೧೮೨

ಹೊತ್ತು ಬಲವಂತ ಕಿತ್ತು ಹಾರಿದನು
ಭೃತ್ಯ ನೀನಹುದೆಂದ ರಾಮ ಹರಿ ಜೈ ಜೈ ಸೀತಾರಾಮ ೧೮೩

ಅಸಮಭುಜಬಲ ಕುಶಲದಿಂದಿಳಿಸಿದ
ಋಷ್ಯಮೂಕಾದ್ರಿಗೊಯ್ದು ರಾಮ ಹರಿ ಜೈ ಜೈ ಸೀತಾರಾಮ ೧೮೪

ಕಂಡು ಸ್ವಾಮಿಯಂ ಪುಂಡಸುಗ್ರೀವ ತಾ
ದಂಡಪ್ರಣಾಮಗೈದ ರಾಮ ಹರಿ ಜೈ ಜೈ ಸೀತಾರಾಮ ೧೮೫

ಚರಣಕೆರಗಿದ ವರಸುಗ್ರೀವಗೆ
ಕರುಣಹಸ್ತ ವಿಟ್ಟ ರಾಮ ಹರಿ ಜೈ ಜೈ ಸೀತಾರಾಮ ೧೮೬

ಲೋಕನಾಥ ತಮಗ್ಯಾಕೆ ವಿಪಿನವರಿ
ಬೇಕೆಂದ ಕಪಿವರ ರಾಮ ಹರಿ ಜೈ ಜೈ ಸೀತಾರಾಮ ೧೮೭

ಆರಿಗೆ ತಪ್ಪದು ಪೂರ್ವದ ಬರಹ
ಮೀರುವರಾರೆಂದ ರಾಮ ಹರಿ ಜೈ ಜೈ ಸೀತಾರಾಮ ೧೮೮

ಈಗ ಎಮಗೆ ಸಹಾಯಾಗಬೇಕೆಂದ ಭವ
ಸಾಗರ ಪರಿಹರ ರಾಮ ಹರಿ ಜೈ ಜೈ ಸೀತಾರಾಮ ೧೮೯

ಏನು ಕಾರ್ಯಸ್ವಾಮಿ ದೀನನಿಗರುಹೆಂದ
ವಾನರಾಗ್ರಣಿ ರಾಮ ಹರಿ ಜೈ ಜೈ ಸೀತಾರಾಮ ೧೯೦

ರಾವಣ ಖಳ ಮಮಜೀವದರಸಿಯಳ
ಮಾಯದಿ ಒಯ್ದಿಹ್ಯ ರಾಮ ಹರಿ ಜೈ ಜೈ ಸೀತಾರಾಮ ೧೯೧

ಜೀವ ಘಾತಕನು ಆವ ದೇಶದಿಹ್ಯ
ತೀವ್ರ ಹುಡುಕಿಸಿ ರಾಮ ಹರಿ ಜೈ ಜೈ ಸೀತಾರಾಮ ೧೯೨

ನಾಗಗಮನೆಯಳ ಯೋಗಕ್ಷೇಮವ
ಬೇಗ ಸೂಚಿಸೆಂದ ರಾಮ ಹರಿ ಜೈ ಜೈ ಸೀತಾರಾಮ ೧೯೩

ಭರದಿಯೆದ್ದು ಕಪಿವರನು ಬೇಡಿಕೊಂಡ
ಕರುಣದೀಕ್ಷಿಸೆಲೋ ರಾಮ ಹರಿ ಜೈ ಜೈ ಸೀತಾರಾಮ ೧೯೪

ಚರುಣಕರುಣದಿಂದ ದುರುಳರಾವಣನ
ತರುವ ತ್ರಾಣವಿದೆ ರಾಮ ಹರಿ ಜೈ ಜೈ ಸೀತಾರಾಮ ೧೯೫

ದುರುಳ ನಮ್ಮಣ್ಣನ ಭರಕೆ ಅಂಜಿ ಈ
ಪರುವತ ಸೇರಿಹ್ಯೆ ರಾಮ ಹರಿ ಜೈ ಜೈ ಸೀತಾರಾಮ ೧೯೬

ಶಾಪದಿಂದ ಆ ಪಾಪಿಗಿದೊಂದೆ ಸ್ಥಳ
ಲೋಪವಿರುವುದ್ಯೆ ರಾಮ ಹರಿ ಜೈ ಜೈ ಸೀತಾರಾಮ ೧೯೭

ಎಲ್ಲಿ ಪೋದರು ಎನ್ನ ಕೊಲ್ಲದೆ ಬಿಡನೆಂದು
ಇಲ್ಲೆ ಕಳೆವ ಕಾಲ ರಾಮ ಹರಿ ಜೈ ಜೈ ಸೀತಾರಾಮ ೧೯೮

ಎಲ್ಲ ಬಲವು ಆ ಖುಲ್ಲನ ಸ್ವಾಧೀನ
ದಲ್ಲಿ ಇರುವುದ್ಯೆ ರಾಮ ಹರಿ ಜೈ ಜೈ ಸೀತಾರಾಮ ೧೯೯

ಎನ್ನ ಪ್ರಾಣಸತಿಯನ್ನು ಒಲಿವಿನಿಂದ
ತನ್ನೊಶದಿಟ್ಟಿಹ್ಯ ರಾಮ ಹರಿ ಜೈ ಜೈ ಸೀತಾರಾಮ ೨೦೦

ನಡೆಯದವನ ಮುಂದೆ ಕಡುಗಲಿತನ ಎನ್ನ
ದಡಗಿ ಪೋಗಿಹ್ಯದೆ ರಾಮ ಹರಿ ಜೈ ಜೈ ಸೀತಾರಾಮ ೨೦೧

ಮೊರೆಯಿಟ್ಟ ಕಪಿವರ ಸರುವ ತನ್ನಣ್ಣನ
ದುರುಳ ಕೃತಿಗಳ ಪೇಳಿ ರಾಮ ಹರಿ ಜೈ ಜೈ ಸೀತಾರಾಮ ೨೦೨

ಕೇಳಿ ನಳಿನನಾಭ ತಾಳಿದ ಕೋಪವ
ಕೀಳನ ಸದೆಯಲು ರಾಮ ಹರಿ ಜೈ ಜೈ ಸೀತಾರಾಮ ೨೦೩

ದುಷ್ಟಶಿಷ್ಟಕ ಶಿಷ್ಟಪಾಲ ಭಕ್ತ
ಕಷ್ಟ ನಿವಾರಣ ರಾಮ ಹರಿ ಜೈ ಜೈ ಸೀತಾರಾಮ ೨೦೪

ಅಧಮ ನಿಮ್ಮಣ್ಣನಿಂ ಕದನ ತೆಗೆಯೋ ಪೋಗಿ
ಸದೆದುಬಿಡುವೆನೆಂದ ರಾಮ ಹರಿ ಜೈ ಜೈ ಸೀತಾರಾಮ ೨೦೫

ಕೇಳು ಸ್ವಾಮಿ ಎನಗ್ವಾಲಿಯೆಂದರೆ ಮೈ
ಕೀಲು ಸಡಲುವವು ರಾಮ ಹರಿ ಜೈ ಜೈ ಸೀತಾರಾಮ ೨೦೬

ಕೀಳನ ದೆಬ್ಬೆಗೆ ತಾಳದಿರಧೈರ್ಯವೆಂದು
ಮಾಲೆ ಹಾಕಿದನು ರಾಮ ಹರಿ ಜೈ ಜೈ ಸೀತಾರಾಮ ೨೦೭

ಸಂದು ಸಂದಿನೋಳ್ಬಂದಿತು ಧೈರ್ಯವು
ಅಂದು ಸುಗ್ರೀವನಿಗೆ ರಾಮ ಹರಿ ಜೈ ಜೈ ಸೀತಾರಾಮ ೨೦೮

ಕಾಲರುದ್ರನಂತೆ ತಾಳಿ ರೌದ್ರ ಹೋಗಿ
ವಾಲಿಯಂ ಕೆಣಕಿದ ರಾಮ ಹರಿ ಜೈ ಜೈ ಸೀತಾರಾಮ ೨೦೯

ಮೂಢ ಪ್ರಾಣಕಂಜಿ ಓಡಿ ಪರ್ವತಸೇರಿ
ಗೂಢದಡಗಿದವ ರಾಮ ಹರಿ ಜೈ ಜೈ ಸೀತಾರಾಮ ೨೧೦

ಬುದ್ಧಿಹೀನ ಮತ್ತೆ ಯುದ್ಧಕೆ ಬಂದಿಹ್ಯಾ
ಒದ್ದು ಕೊಲ್ಲುವನೆಂದ ರಾಮ ಹರಿ ಜೈ ಜೈ ಸೀತಾರಾಮ ೨೧೧

ಸಿದ್ಧನಾಗಲ್ವಾಲಿ ಮುದ್ದು ಮೋಹಿನಿ ಸತಿ
ತಿದ್ದಿ ಹೇಳಿದಳು ರಾಮ ಹರಿ ಜೈ ಜೈ ಸೀತಾರಾಮ ೨೧೨

ಆತನಿಗೆಲ್ಲಿಂದೀತೇರ ದೈರ್ಯ ವಿ
ಖ್ಯಾತರೀರ್ವರು ರಾಮ ಹರಿ ಜೈ ಜೈ ಸೀತಾರಾಮ ೨೧೩

ದಿಟ್ಟರು ಬೆಂಬಲಗೊಟ್ಟು ರಣಾಗ್ರಕೆ
ಅಟ್ಟಿಹ್ಯರಿವನಂ ರಾಮ ಹರಿ ಜೈ ಜೈ ಸೀತಾರಾಮ ೨೧೪

ಬಿಡುನಿನ್ನ್ಹಟ ನಡೆಯದಿನ್ನವನೊಳು
ತಡಿ ಕೋಪವೆಂದಳು ರಾಮ ಹರಿ ಜೈ ಜೈ ಸೀತಾರಾಮ ೨೧೫

ಪೊಡವಿ ಮೂರರೊಳು ತಡವಿ ಉಳಿವರಾರು
ಮಡಿದಿಯೆನ್ನನೆಂದ ರಾಮ ಹರಿ ಜೈ ಜೈ ಸೀತಾರಾಮ ೨೧೬

ಪೆರ್ಬುಲಿಯಿಂದದಿ ಆರ್ಭಟಿಸುತ ಬಂದು
ಮಬ್ಬುಲಿ ಕಾದಿದ ರಾಮ ಹರಿ ಜೈ ಜೈ ಸೀತಾರಾಮ ೨೧೭

ಓರ್ವರಿಗೋರ್ವರು ಶೌರ್ಯದಿ ಕಾದಿದ
ರೀರ್ವರು ಸೋಲದೆ ರಾಮ ಹರಿ ಜೈ ಜೈ ಸೀತಾರಾಮ ೨೧೮

ಕುಸುಮನಾಭ ತನ್ನಸಮಶಕ್ತಿಶರ
ದೆಸೆದನು ವಾಲಿಯಂ ರಾಮ ಹರಿ ಜೈ ಜೈ ಸೀತಾರಾಮ ೨೧೯

ಶರವು ಭರದಿ ಆವನುದರದಿ ಸೇರಿತು
ಎರಗಿದ ಧರಣಿಗೆ ರಾಮ ಹರಿ ಜೈ ಜೈ ಸೀತಾರಾಮ ೨೨೦

ಹೊರಳಿ ನೋಡಿ ವಾಲಿ ಪರಮ ಭಕ್ತಿಯಿಂದ
ಅರಿಕೆ ಮಾಡಿಕೊಂಡ ರಾಮ ಹರಿ ಜೈ ಜೈ ಸೀತಾರಾಮ ೨೨೧

ಅರು ತಾವು ನಿಷ್ಕಾರಣ ಎನ್ನೊ
ಳ್ವೈರವ್ಯಾತಕೆಂದು ರಾಮ ಹರಿ ಜೈ ಜೈ ಸೀತಾರಾಮ ೨೨೨

ನಿನ್ನ ಕೃತಿಯೆ ನಿನಗಿನ್ನು ವೈರ ಕೇ
ಳನ್ಯರಾರ್ವೈರ್ಯೆಂದ ರಾಮ ಹರಿ ಜೈ ಜೈ ಸೀತಾರಾಮ ೨೨೩

ಧರ್ಮತಪ್ಪಿ ಅಧರ್ಮದಿ ಚರಿಸಿದ
ಕರ್ಮದಿಂದಳಿದೆಂದ ರಾಮ ಹರಿ ಜೈ ಜೈ ಸೀತಾರಾಮ ೨೨೪

ನೀಲವರ್ಣ ನೀನ್ನ ಲೀಲೆಯಿದೆಲ್ಲವು
ಪಾಲಿಸೆನ್ನನೆಲೋ ರಾಮ ಹರಿ ಜೈ ಜೈ ಸೀತಾರಾಮ ೨೨೫

ಎನ್ನಗೆ ನಾಟಿದ ಬಾಣ ಕಿತ್ತು ಬೇಗ
ಧನ್ಯನ ಮಾಡು ಶ್ರೀ ರಾಮ ಹರಿ ಜೈ ಜೈ ಸೀತಾರಾಮ ೨೨೬

ವಾಲಿಭಕ್ತಿಗೆ ಮೆಚ್ಚಿ ಪಾಲಿಸಿದನು ವರ
ಶೂಲಧರನ ಸಖ ರಾಮ ಹರಿ ಜೈ ಜೈ ಸೀತಾರಾಮ ೨೨೭

ನಟ್ಟಂಬುಕಿತ್ತಿದ ಕೃಷ್ಣಾವತಾರದೆನ್ನ
ಹುಟ್ಟು ಸಖನಾಗೆಂದ ರಾಮ ಹರಿ ಜೈ ಜೈ ಸೀತಾರಾಮ ೨೨೮

ದಿಟ್ಟ ಸುಗ್ರೀವನಿಗೆ ಪಟ್ಟಗಟ್ಟಿದ ಕಿಷ್ಕಿಂಧ
ಅಟ್ಟಹಾಸದಿಂ ರಾಮ ಹರಿ ಜೈ ಜೈ ಸೀತಾರಾಮ ೨೨೯

ಸೃಷ್ಟಿಕರ್ತನಿಗೆ ಕೊಟ್ಟ ವಚನದಂತೆ
ನಿಷ್ಠೆಯಿಂ ಸುಗ್ರೀವ ರಾಮ ಹರಿ ಜೈ ಜೈ ಸೀತಾರಾಮ ೨೩೦

ದಿಟ್ಟಕಪಿಯಂ ಕೂಡಿಟ್ಟು ಬಿನ್ನೈಸಿಕೊಂಡು
ಸೃಷ್ಟಿಪಾಲನೊಳು ರಾಮ ಹರಿ ಜೈ ಜೈ ಸೀತಾರಾಮ ೨೩೧

ಫುಲ್ಲನಾಭ ನೋಡು ಬಲ್ಲಿದ ವೀರರಂ
ನಿಲ್ಲಿಸಿಹೆನು ತಂದು ರಾಮ ಹರಿ ಜೈ ಜೈ ಸೀತಾರಾಮ ೨೩೨

ವಂದಿಸಿ ಬೇಡಿದ ಮುಂದೆ ಏನಾಜ್ಞೆಯು
ತಂದೆ ಗೈವುದೆಂದು ರಾಮ ಹರಿ ಜೈ ಜೈ ಸೀತಾರಾಮ ೨೩೩

ಏನು ಪೇಳ್ವದಿದೆ ಜಾನಕಿಯಂ ಹುಡು
ಕಾನಂದವಾರ್ತೆಯಂ ರಾಮ ಹರಿ ಜೈ ಜೈ ಸೀತಾರಾಮ ೨೩೪

ತಂದರೆ ತೀರಿತು ಮುಂದೆ ಯೋಚಿಸಲು
ಬಂದಿತೆಂದ ರಘು ರಾಮ ಹರಿ ಜೈ ಜೈ ಸೀತಾರಾಮ ೨೩೫

ಜನಕಜಾನಾಥನ ಮನಸಿನಂತೆ ತ
ಕ್ಷಣದಿ ವೀರರಿಂ ರಾಮ ಹರಿ ಜೈ ಜೈ ಸೀತಾರಾಮ ೨೩೬

ಗಕ್ಕನೆ ಕಳುಹಿದ ದಿಕ್ಚತ್ರಯಕೆ ಸೀತೆ
ಯಕ್ಕರದ್ವಾರ್ತೆಯಂ ರಾಮ ಹರಿ ಜೈ ಜೈ ಸೀತಾರಾಮ ೨೩೭

ಅಪ್ಪಣೆಗೈದನು ತಪ್ಪದೆ ತಂದೆಮ
ಗೊಪ್ಪಿಸಬೇಕೆಂದು ರಾಮ ಹರಿ ಜೈ ಜೈ ಸೀತಾರಾಮ ೨೩೮

ತೆಂಕಣ ದಿಕ್ಕಿಂಗಶಂಕಶೂರ ಬಲ
ದಂಕ ಜಾಂಬವಂತ ರಾಮ ಹರಿ ಜೈ ಜೈ ಸೀತಾರಾಮ ೨೩೯

ನೀಲ ನಳ ಬಲಶಾಲಿವಾಲಿಸುತ
ಮೇಲೆ ಮಾರುತಿ ರಾಮ ಹರಿ ಜೈ ಜೈ ಸೀತಾರಾಮ ೨೪೦

ಮೂರುಮಾಸದೊಳು ಸಾರ ಸುವಾರ್ತೆಯು
ಸೇರಬೇಕೆಮ್ಮನೆಂದು ರಾಮ ಹರಿ ಜೈ ಜೈ ಸೀತಾರಾಮ ೨೪೧

ಅಟ್ಟಿದ ಸುಗ್ರೀವ ಕಟ್ಟಳೆಗೈದ ತ
ನ್ನಿಷ್ಟದ ಭಟರಂ ರಾಮ ಹರಿ ಜೈ ಜೈ ಸೀತಾರಾಮ ೨೪೨

ಆರು ಅರಿಯದಂತೆ ವೀರಹನುಮನಂ
ಸಾರಸಾಕ್ಷ ಕರೆದು ಶ್ರೀರಾಮ ಹರಿ ಜೈ ಜೈ ಸೀತಾರಾಮ ೨೪೩

ಉಂಗುರವಿತ್ತು ತನ್ನಂಗನೆಯಳ ಕುರು
ಹಂಗಳನೊರೆದ ರಾಮ ಹರಿ ಜೈ ಜೈ ಸೀತಾರಾಮ ೨೪೪

ಲಂಕೆಮಾರ್ಗದಸಂಖ್ಯ ರಕ್ಕಸರಾ
ತಂಕಗೈವರೆಂದು ರಾಮ ಹರಿ ಜೈ ಜೈ ಸೀತಾರಾಮ ೨೪೫

ವೇದವಂದ್ಯ ಲಂಕಾಭೇದ ಪೇಳಿದ ತನ್ನ
ಪಾದದಾಸನಿಗೆ ರಾಮ ಹರಿ ಜೈ ಜೈ ಸೀತಾರಾಮ ೨೪೬

ಪ್ರಾಣದಾಸನೆಲೊ ನೀನೆ ಇದನು ಕಡೆ
ಗಾಣಿಸಿ ಹೋಗೆಂದು ರಾಮ ಹರಿ ಜೈ ಜೈ ಸೀತಾರಾಮ ೨೪೭

ಹುಡುಕಿ ಹುಡುಕಿ ಮೂರುಕಡೆಯ ದಿಕ್ಕಿನ ಭಟ
ರೊಡನೆ ತಿರುಗಿದರು ರಾಮ ಹರಿ ಜೈ ಜೈ ಸೀತಾರಾಮ ೨೪೮

ಇತ್ತ ದಕ್ಷಿಣಕ್ಹೋದ ಸತ್ಯ ಭಟರ ತುಸು
ಪತ್ಯ ಇಲ್ಲದ್ಹೋಯ್ತು ರಾಮ ಹರಿ ಜೈ ಜೈ ಸೀತಾರಾಮ ೨೪೯

ದೇಶ ದೇಶಂಗಳ ಸೋಸಿ ಹುಡುಕಿ ಬಲು
ಬೇಸತ್ತು ದಕ್ಷಿಣ ರಾಮ ಹರಿ ಜೈ ಜೈ ಸೀತಾರಾಮ ೨೫೦

ಸಾಗರವನು ಸೇರಿ ನೀಗದಾಲೋಚನೆಯೊಳು
ಸಾಗಿ ಕೂತರ್ಯೆ ರಾಮ ಹರಿ ಜೈ ಜೈ ಸೀತಾರಾಮ ೨೫೧

ಗರುಡ ನೋಡಿ ಇವರಿರವ ತಿಳಿದು ಲಂಕಾ
ಪುರವ ತೋರಿಸಿದ ರಾಮ ಹರಿ ಜೈ ಜೈ ಸೀತಾರಾಮ ೨೫೨

ವಾರಿಧಿಯಾಚೆಗೆ ಹಾರಲು ನಿಮ್ಮಯ
ಕೋರಿಕೆಪುರವಿದೆ ರಾಮ ಹರಿ ಜೈ ಜೈ ಸೀತಾರಾಮ ೨೫೩

ಭರದಿಕೇಳಂಗದ ಹುರಿದುಂಬೆದ್ದ ಬೇಗ
ಶರಧಿ ಜಿಗಿವೆನೆಂದು ರಾಮ ಹರಿ ಜೈ ಜೈ ಸೀತಾರಾಮ ೨೫೪

ಏನ್ನೈ ಅಂಗದ ಅಜ್ಞಾನವ್ಯಾತಕೆಂದು
ಜ್ಞಾನಿಜಾಂಬವಂತ ರಾಮ ಹರಿ ಜೈ ಜೈ ಸೀತಾರಾಮ ೨೫೫

ದೇವದೇವನಿಗೆ ಜೀವದಾಸನಿವ
ವಾಯುಸುತ್ಹನುಮಂತ ರಾಮ ಹರಿ ಜೈ ಜೈ ಸೀತಾರಾಮ ೨೫೬

ಜಲಧಿ ಹಾರುವಂಥ ಬಲವೀತಗಲ್ಲದೆ
ಸುಲಭವಲ್ಲಾರಿಗೆ ರಾಮ ಹರಿ ಜೈ ಜೈ ಸೀತಾರಾಮ ೨೫೭

ಸರ್ವರು ಕೂಡಿ ಮೊರೆಯಿಟ್ಟರ್‍ಗುರುಗೆ
ಶರಧಿಯ ದಾಂಟಲು ರಾಮ ಹರಿ ಜೈ ಜೈ ಸೀತಾರಾಮ ೨೫೮

ಸದ್ದುಮಾಡದೆ ತಾ ಸಿದ್ಧನಾದ ಧೀರ
ಅಬ್ಧಿಯನ್ಹಾರಲು ರಾಮ ಹರಿ ಜೈ ಜೈ ಸೀತಾರಾಮ ೨೫೯

ಮಹಾನ್ ಹನುಮಂತ ಮಹೇಂದ್ರ ಪರ್ವತ
ಸಾಹಸದಿ ಮೇಲ್ಹತ್ತಿ ರಾಮ ಹರಿ ಜೈ ಜೈ ಸೀತಾರಾಮ ೨೬೦

ಝೇಂಕಾರ ನಾದಗೈದೋಂಕಾರಮೂರ್ತಿ ನಿ
ರಾಂಕಾರ ರಾಮೆಂದ ರಾಮ ಹರಿ ಜೈ ಜೈ ಸೀತಾರಾಮ ೨೬೧

ಅಬ್ಬರಿಸ್ಹಾರಿದ ಬೊಬ್ಬಿರಿಯುತ ಭೂ
ಇಬ್ಭಾಗಾಗುವಂತೆ ರಾಮ ಹರಿ ಜೈ ಜೈ ಸೀತಾರಾಮ ೨೬೨

ಬಾಲಸೂರ್ಯನಂತೆ ನೀಲಮೋಡ ತೆರೆ
ಯೋಳು ಪೋಗುತಿರೆ ರಾಮ ಹರಿ ಜೈ ಜೈ ಸೀತಾರಾಮ ೨೬೩

ಛಾಯಗ್ರಹ ತನ್ನ ಮಾಯೆಯಿಂದೀತನ
ಛಾಯೆಯಂ ಪಿಡಿಯಲು ರಾಮ ಹರಿ ಜೈ ಜೈ ಸೀತಾರಾಮ ೨೬೪

ಸಾಗದೆ ನಿಂತಿತು ಯೋಗವು ಮುಂದಕೆ
ಬೇಗ ತಿಳಿದುಕೊಂಡ ರಾಮ ಹರಿ ಜೈ ಜೈ ಸೀತಾರಾಮ ೨೬೫

ಛಾಯಗ್ರಹದ ಮಾಯವಿದೆನ್ನುತು
ಪಾಯದಿ ಕಡಿದ್ಹಾಕಿ ರಾಮ ಹರಿ ಜೈ ಜೈ ಸೀತಾರಾಮ ೨೬೬

ಹಾರಿ ಮುಂದಕೆ ಧೀರ ಯೋಚಿಸುತ
ಸೇರಿ ಲಂಕೆಯಂ ರಾಮ ಹರಿ ಜೈ ಜೈ ಸೀತಾರಾಮ ೨೬೭

ಶೋಧಿಪೆ ಸೀತೆಗಳ ಪಾದ ಕಾಣದಿರೆ
ಸಾಧಿಪೆ ಬ್ರಹ್ಮಪುರ ರಾಮ ಹರಿ ಜೈ ಜೈ ಸೀತಾರಾಮ ೨೬೮

ಅಲ್ಲಿ ಕಾಣದಿರೆ ಬಲ್ಲಿದ ಶಿವಪುರ
ದಲ್ಲಿ ನೋಡುವೆ ರಾಮ ಹರಿ ಜೈ ಜೈ ಸೀತಾರಾಮ ೨೬೯

ಮತ್ತಲ್ಲಿರದಿರೆ ಹತ್ತಿ ವೈಕುಂಠಮಂ
ಸುತ್ತಿ ನೋಡುವೆನು ರಾಮ ಹರಿ ಜೈ ಜೈ ಸೀತಾರಾಮ ೨೭೦

ಎಲ್ಲಿ ಕಾಣದಿರೆ ಖುಲ್ಲನ ಪಟ್ಟಣ
ಎಲ್ಲ ಕಿತ್ತು ತಂದು ರಾಮ ಹರಿ ಜೈ ಜೈ ಸೀತಾರಾಮ ೨೭೧

ಸ್ವಾಮಿ ಮುಂದಿಡುವೆನು ಭಾಮಿನಿಯೊಳನಂ
ಪ್ರೇಮದಿಂದ್ಹುಡುಕಲು ರಾಮ ಹರಿ ಜೈ ಜೈ ಸೀತಾರಾಮ ೨೭೨

ಈ ಪರಿಯೋಚಿಸುತಾಪಾರ ಶೌರಿ ಲಂಕೆ
ಗೋಪುರವೇರಿದ ರಾಮ ಹರಿ ಜೈ ಜೈ ಸೀತಾರಾಮ ೨೭೩

ಮೊದಲು ಲಂಕಿಣಿಯಂ ಸದೆದು ತಾಪದಿಂ
ಸದಮಲ ಗೈದನು ರಾಮ ಹರಿ ಜೈ ಜೈ ಸೀತಾರಾಮ ೨೭೪

ಹೊಕ್ಕ ಲಂಕೆಯೊಳು ಮಕ್ಕಮಾರಿಯಂತೆ
ಚಿಕ್ಕ ಕೋತಿಯಾಗಿ ರಾಮ ಹರಿ ಜೈ ಜೈ ಸೀತಾರಾಮ ೨೭೫

ಪ್ರಹಸ್ತಾದಿಯಮಳ ಪ್ರೌಢಜನರ ಮನೆಯ
ಪ್ರಥಮ ಶೋಧಿಸಿದ ರಾಮ ಹರಿ ಜೈ ಜೈ ಸೀತಾರಾಮ ೨೭೬

ಅಕ್ಷಯಕುಮಾರಾದಿ ಲಕ್ಷಭವನಗಳ
ಸೂಕ್ಷ್ಮದಿ ನೋಡಿದ ರಾಮ ಹರಿ ಜೈ ಜೈ ಸೀತಾರಾಮ ೨೭೭

ನಂಬಿಗ್ವಿಭೀಷಣ ಜಂಬುಕುಮಾರ ಮತ್ತು
ಕುಂಭಕರ್ಣರ ರಾಮ ಹರಿ ಜೈ ಜೈ ಸೀತಾರಾಮ ೨೭೮

ಅಂತಃಪುರಗಳ ಅಂತರ ಶೋಧಿಸಿ
ನಿಂತು ಯೋಚಿಸಿದ ರಾಮ ಹರಿ ಜೈ ಜೈ ಸೀತಾರಾಮ ೨೭೯

ಖುಲ್ಲನ ಅರಮನೆ ಗುಲ್ಲು ಮಾಡದೆ ಪೊಕ್ಕ
ಬಲ್ಲಿದ ಹನುಮಂತ ರಾಮ ಹರಿ ಜೈ ಜೈ ಸೀತಾರಾಮ ೨೮೦

ಹತ್ತು ತಲೆಗಳಿಪ್ಪತ್ತು ಭುಜದಿಂದೊ
ಪ್ಪುತ್ತ ಪವಡಿಸಿಹ್ಯ ರಾಮ ಹರಿ ಜೈ ಜೈ ಸೀತಾರಾಮ ೨೮೧

ರಾವಣನ ಕಂಡು ಭಾವದಿ ಹೊಗಳಿದ
ವಾಯುಸುತ್ಹನುಮ ಶ್ರೀ ರಾಮ ಹರಿ ಜೈ ಜೈ ಸೀತಾರಾಮ ೨೮೨

ದುಷ್ಟಕಾರ್ಯದಿಂದ ಕೆಟ್ಟುಹೊಗುವನಿವಂ
ಭ್ರಷ್ಟದನುಜನಿವ ರಾಮ ಹರಿ ಜೈ ಜೈ ಸೀತಾರಾಮ ೨೮೩

ಮಂಡೋದರಿಯ ಕಂಡು ಮಂಡೆದೂಗಿದನು
ದ್ದಂಡ ಹನುಮಂತ ರಾಮ ಹರಿ ಜೈ ಜೈ ಸೀತಾರಾಮ ೨೮೪

ಇಂದಿಗೆ ಕಂಡೆನು ಸುಂದರಿಸೀತೆಯ
ನೆಂದು ಹಿಗ್ಗಿದನು ರಾಮ ಹರಿ ಜೈ ಜೈ ಸೀತಾರಾಮ ೨೮೫

ಮತ್ತೆ ಯೋಚಿಸಿದ ಚಿತ್ತದೊಳಗ
ನರ್ಥನುಡಿದೆನೆಂದು ರಾಮ ಹರಿ ಜೈ ಜೈ ಸೀತಾರಾಮ ೨೮೬

ಪಾಪನಾಶಿನಿಯೇ ಪಾಪಿ ಬದಿಯೋಳೆಂತು
ತಾ ಪವಡಿಸುವಳು ರಾಮ ಹರಿ ಜೈ ಜೈ ಸೀತಾರಾಮ ೨೮೭

ಎನ್ನುತ್ತೊರಗೆ ಬಂದು ಸನ್ನದ್ಧನಾದ ಪುರ
ವನು ಕಿತ್ತಲಿಕ್ಕೆ ರಾಮ ಹರಿ ಜೈ ಜೈ ಸೀತಾರಾಮ ೨೮೮

ವಾನರ ಶ್ರೇಷ್ಠನೆ ಕಾಣುದ್ಯಾನವನವೆಂದು
ವಾಣಿ ಕೇಳಿಸಿತು ರಾಮ ಹರಿ ಜೈ ಜೈ ಸೀತಾರಾಮ ೨೮೯

ಕೇಳಿ ಹನುಮ ತಾ ತಾಳಿ ಶಾಂತಿಯಂ
ಬಾಲ ಎಳೆದುಕೊಂಡು ರಾಮ ಹರಿ ಜೈ ಜೈ ಸೀತಾರಾಮ ೨೯೦

ವೀರ ಉದ್ಯಾನವನಕ್ಹಾರಿ ನೋಡುವಲ್ಲಿ
ನೀರಜಾಕ್ಷಿಯ ಕಂಡು ರಾಮ ಹರಿ ಜೈ ಜೈ ಸೀತಾರಾಮ ೨೯೧

ರಾಮನಾಮವಂ ನೇಮದಿಂ ಪಠಿಸುತ
ಭೂಮಿಜಾತೆ ಮುಂದೆ ರಾಮ ಹರಿ ಜೈ ಜೈ ಸೀತಾರಾಮ ೨೯೨

ಆದಿಯಿಂದಕಡೆಗೋದಿ ರಾಮಾಯಣ
ಪಾದಕೆರಗಿದನು ರಾಮ ಹರಿ ಜೈ ಜೈ ಸೀತಾರಾಮ ೨೯೩

ಕಣ್ಣು ತೆರೆದ ಸೀತೆ ವನಚರನಂ ಕಂಡು
ದನುಜರ ಮಾಯ್ವೆನೆ ರಾಮ ಹರಿ ಜೈ ಜೈ ಸೀತಾರಾಮ ೨೯೪

ನಿನ್ನಪಾದಸಾಕ್ಷಿ ನಿನ್ನಸುತನು ನಾ
ಮನ್ನಿಸೆಂದ ಹನುಮ ರಾಮ ಹರಿ ಜೈ ಜೈ ಸೀತಾರಾಮ ೨೯೫

ಉಂಗುರವನಿತ್ತು ಕೃಪಾಂಗ ಕೊಟ್ಟ
ಮಂಗಳಾಂಗಿ ಸೀತೆಗೆ ರಾಮ ಹರಿ ಜೈ ಜೈ ಸೀತಾರಾಮ ೨೯೬

ಪತಿಯುಂಗರ ಕಂಡತಿ ಸಂತಸದಿಂ
ಎತ್ತಿದಳ್ಮುಖವಂ ರಾಮ ಹರಿ ಜೈ ಜೈ ಸೀತಾರಾಮ ೨೯೭

ನಾಥನ ಕುಶಲವ ಪ್ರೀತಿಲಿ ಕೇಳ್ದಳು
ಸೀತಾಮಾತ್ಹನುಮನಿಗೆ ರಾಮ ಹರಿ ಜೈ ಜೈ ಸೀತಾರಾಮ। ೨೯೮

ಪುಲ್ಲನಾಭ ಮತ್ತು ಬಲ್ಲಿದಲಕ್ಷ್ಮಣ
ರೆಲ್ಲ ಕ್ಷೇಮವಮ್ಮ ರಾಮ ಹರಿ ಜೈ ಜೈ ಸೀತಾರಾಮ ೨೯೯

ಭಿನ್ನವಿಲ್ಲದೊಂದು ತನ್ನಕುರುಹಂಗ
ಳನ್ನು ಪೇಳಿದಳು ರಾಮ ಹರಿ ಜೈ ಜೈ ಸೀತಾರಾಮ ೩೦೦

ಸೀತೆ ನಿನ್ನ ಬಹುರೀತಿ ಸ್ಮರಿಪಳೆಂದು
ನಾಥನಿಗ್ಹೇಳಿ ರಾಮ ಹರಿ ಜೈ ಜೈ ಸೀತಾರಾಮ ೩೦೧

ಹರಣದಾರ್ಯನಂ ಭರದಿ ಕರೆದು ತಾ
ತ್ವರದಿ ಪೋಗ್ವನುಮ ರಾಮ ಹರಿ ಜೈ ಜೈ ಸೀತಾರಾಮ ೩೦೨

ಆಜ್ಞೆಪಡೆದು ತಾ ಪ್ರಾಜ್ಞ ಹನುಮ ಕಾ
ಲಾಗ್ನಿ ಅಡರುವಂತೆ ರಾಮ ಹರಿ ಜೈ ಜೈ ಸೀತಾರಾಮ ೩೦೩

ಘನಭಯಂಕರ ವನಚರ ರೂಪದಿ
ವನದಿ ಲಂಘಿಸಿದ ರಾಮ ಹರಿ ಜೈ ಜೈ ಸೀತಾರಾಮ ೩೦೪

ಕ್ಷಣದಿ ವನವ ಕಿತ್ತು ಹಣಿವ ರಕ್ಕಸರ
ಕುಣಿಕುಣಿದಾಡುತ ರಾಮ ಹರಿ ಜೈ ಜೈ ಸೀತಾರಾಮ ೩೦೫

ಪುಂಖಾನುಪುಂಖ ಮಂಕು ರಕ್ಕಸರ
ಶಂಕಿಸುತ್ಹೋಗಿ ರಾಮ ಹರಿ ಜೈ ಜೈ ಸೀತಾರಾಮ ೩೦೬

ಮರುಳುರಾವಣಗೆ ಮೊರೆಯಿಟ್ಟವಾನರ
ಭರವ ಪೇಳುತಲಿ ರಾಮ ಹರಿ ಜೈ ಜೈ ಸೀತಾರಾಮ ೩೦೭

ಧ್ವಂಸ ಮಾಡಿತು ವನ ಹಿಂಸೆಗೈತು ನಮ್ಮ
ವಂಶ ಬುಡಲಿಂದ ರಾಮ ಹರಿ ಜೈ ಜೈ ಸೀತಾರಾಮ ೩೦೮

ಖೂಳ ರಾವಣನು ಕೇಳಿ ಮನದಿ ಮಹ
ತಾಳಿದ ಕೋಪವ ರಾಮ ಹರಿ ಜೈ ಜೈ ಸೀತಾರಾಮ ೩೦೯

ಅಕ್ಷಯ ಕುಮಾರನ ಲಕ್ಷಾದಿ ಮಹರ್ಬಲ
ತಕ್ಷಣ ಕಳುಹಿದ ರಾಮ ಹರಿ ಜೈ ಜೈ ಸೀತಾರಾಮ ೩೧೦

ಕಾರ್ಗಾಲಮಿಂಚಿನೋಲ್ ಕೂರ್ಗಣೆಗಳ ಬಲು
ಭೋರ್ಗರೆಸುತ ಬಂದ ರಾಮ ಹರಿ ಜೈ ಜೈ ಸೀತಾರಾಮ ೩೧೧

ಮುತ್ತಿದರ್ಹನುಮನ ಸತ್ವದಿ ಮದೋ
ನ್ಮತ್ತರಕ್ಕಸರಂ ರಾಮ ಹರಿ ಜೈ ಜೈ ಸೀತಾರಾಮ ೩೧೨

ಭಂಡರಕ್ಕಸರ ದಿಂಡುಗೆಡಹಿ ಶಿರ
ಚೆಂಡನಾಡಿದ ಪುಂಡ ರಾಮ ಹರಿ ಜೈ ಜೈ ಸೀತಾರಾಮ ೩೧೩

ಲಕ್ಷಿಸದ್ಹನುಮ ಅಕ್ಷಯಕುಮಾರನ
ವಕ್ಷ ಸೀಳಿದನು ರಾಮ ಹರಿ ಜೈ ಜೈ ಸೀತಾರಾಮ ೩೧೪

ಮತ್ತೆ ರುಧಿರಾಸುರ ಸತ್ವಶಾಲತಿಶಾಯ
ರೊತ್ತಿದೆಮಲೋಕಕ್ಕೆ ರಾಮ ಹರಿ ಜೈ ಜೈ ಸೀತಾರಾಮ ೩೧೫

ಬಣಗು ರಕ್ಕಸರೆಣಿಕೆಇಲ್ಲದೆ ಕೊಂದು
ಬಣವೆಯೊಟ್ಟಿದನು ರಾಮ ಹರಿ ಜೈ ಜೈ ಸೀತಾರಾಮ ೩೧೬

ಕುಂದಿ ರಾವಣ ಮನನೊಂದ ಉತ್ಪಾತ್ಯೆಮ
ಗಿಂದು ಒದಗಿತೆಂದ ರಾಮ ಹರಿ ಜೈ ಜೈ ಸೀತಾರಾಮ ೩೧೭

ಒಂದೇವಾನರ ಇಂದುಕೊಂದಿತು ಬಲರನು
ಮುಂದೇನು ಗತಿಯೆಂದ ರಾಮ ಹರಿ ಜೈ ಜೈ ಸೀತಾರಾಮ ೩೧೮

ಇಂದ್ರಜಾಲವಿದ್ಯಾಸಾಂದ್ರನಾದ ಕಂದ
ಇಂದ್ರಜಿತುವಿನ ರಾಮ ಹರಿ ಜೈ ಜೈ ಸೀತಾರಾಮ ೩೧೯

ಕರೆಸಿ ವಾನರನ ಚರಿಯಪೇಳಿ ತ್ವರ
ತರುವುದ್ಹಿಡಿದುಯೆನೆ ರಾಮ ಹರಿ ಜೈ ಜೈ ಸೀತಾರಾಮ ೩೨೦

ಪಿತನವಚನವಂ ಹಿತದಿ ಕೈಕೊಂಡಿಂದ್ರ
ಜಿತು ಬಂದು ಕಂಡನು ರಾಮ ಹರಿ ಜೈ ಜೈ ಸೀತಾರಾಮ ೩೨೧

ಸೋಜಿಗವಾದ ಕೋಟಿ ತೇಜೋಮಯನಿವ
ಅಜೇಯನಿಪ್ಪನೆಂದು ರಾಮ ಹರಿ ಜೈ ಜೈ ಸೀತಾರಾಮ ೩೨೨

ತೊಟ್ಟ ಬ್ರಹ್ಮಾಸ್ತ್ರವ ಬಿಟ್ಟ ಹನುಮ ನಿ
ಶ್ಚೇಷ್ಟನಾಗಿ ಬಿದ್ದ ರಾಮ ಹರಿ ಜೈ ಜೈ ಸೀತಾರಾಮ ೩೨೩

ಕಟ್ಟಿ ಪಿತನ ಮುಂದಿಟ್ಟ ಒಯ್ದು ಹನು
ಮಟ್ಟಹಾಸದೆದ್ದು ರಾಮ ಹರಿ ಜೈ ಜೈ ಸೀತಾರಾಮ ೩೨೪

ರಾವಣ ಕಂಡು ಭಾವದಿ ಹೆದರಿದ
ಆವ ಮೂರ್ತಿಯಿದು ರಾಮ ಹರಿ ಜೈ ಜೈ ಸೀತಾರಾಮ ೩೨೫

ಆರು ಎಲವೋ ನಿನಗಾರು ಕಳುಹಿದರು
ಸಾರು ಖಳ ಎಂದ ರಾಮ ಹರಿ ಜೈ ಜೈ ಸೀತಾರಾಮ ೩೨೬

ನಿನ್ನ ಪೆಸರ ಮೊದಲೆನ್ನಗುಸುರು ರಾವ
ಣೆನ್ನುವರನೇಕರು ರಾಮ ಹರಿ ಜೈ ಜೈ ಸೀತಾರಾಮ ೩೨೭

ಮಾಡದೆ ಕಾಳಗ ಬೇಡಿಖಾನ್ಯೊಳಬಿದ್ದ
ಹೇಡಿ ರಾವಣನೊಬ್ಬ ರಾಮ ಹರಿ ಜೈ ಜೈ ಸೀತಾರಾಮ ೩೨೮

ಅಂಗನಾಮಣಿಯರಿಂ ಭಂಗಟಪಟ್ಟೋಡಿದ
ಮಂಗರಾವಣನೊಬ್ಬ ರಾಮ ಹರಿ ಜೈ ಜೈ ಸೀತಾರಾಮ ೩೨೯

ಬಂಧನಪಟ್ಟೊಬ್ಬ ದ್ವಂದ್ವಯುದ್ಧಕ್ಕಾಗಿ
ಬಂದು ವಾಲಿಯಿಂ ರಾಮ ಹರಿ ಜೈ ಜೈ ಸೀತಾರಾಮ ೩೩೦

ನಾರಿಯಳನು ಕದ್ದು ಪಾರಾಗಿ ಬಂದಿಹ್ಯ
ಚೋರ ರಾವಣನೊಬ್ಬ ರಾಮ ಹರಿ ಜೈ ಜೈ ಸೀತಾರಾಮ ೩೩೧

ಇದರೊಳಾವ ನೀ ಮೊದಲು ಪೇಳೆಂದನು
ಹೆದರದಾಂಜನೇಯ ರಾಮ ಹರಿ ಜೈ ಜೈ ಸೀತಾರಾಮ ೩೩೨

ನಾರಿಯಳನು ಕದ್ದ ಚೋರ ನೀನಾದರೆ
ಸಾರುವೆ ನೀತಿ ಕೇಳು ರಾಮ ಹರಿ ಜೈ ಜೈ ಸೀತಾರಾಮ ೩೩೩

ಶರಣಾಗತರಪ್ರಿಯ ಕರುಣಾಕರನ ವರ
ಅರಸಿಯಂ ಕರೆತಂದು ರಾಮ ಹರಿ ಜೈ ಜೈ ಸೀತಾರಾಮ ೩೩೪

ಚರಣಕರ್ಪಿಸಿ ಶರಣುಹೋದರೆ ನಿನ್ನ
ಕರುಣದಿ ಕಾಯ್ವನು ರಾಮ ಹರಿ ಜೈ ಜೈ ಸೀತಾರಾಮ ೩೩೫

ಹುಚ್ಚದನುಜ ಕೇಳಿ ರೊಚ್ಚಿನಿಂ ಕತ್ತಿಯ
ಬಿಚ್ಚಿದನೊರೆಯಿಂದ ರಾಮ ಹರಿ ಜೈ ಜೈ ಸೀತಾರಾಮ ೩೩೬

ಪಿಡಿದು ವಿಭೀಷಣ ಒಡನೆ ನೀತಿ ಪೇಳಿ
ತಡೆದು ಕುಳ್ಳಿರಿಸಿದ ರಾಮ ಹರಿ ಜೈ ಜೈ ಸೀತಾರಾಮ ೩೩೭

ದುಷ್ಟನ ಬಾಲವ ಸುಟ್ಟುಬಿಡೆನ್ನುತ
ಕೊಟ್ಟನು ಅಪ್ಪಣೆ ರಾಮ ಹರಿ ಜೈ ಜೈ ಸೀತಾರಾಮ ೩೩೮

ಬಾಲಕರಿವೆ ಸುತ್ತಿ ತೈಲಹೊಯ್ದಗ್ನಿಟ್ಟು
ತಾಳನಿಕ್ಕಿದರು ರಾಮ ಹರಿ ಜೈ ಜೈ ಸೀತಾರಾಮ ೩೩೯

ಧಿಗಿಧಿಗಿಲೆನ್ನುತ ಗಗನಕಡರಿಕೊಂಡು
ಹೊಗೆ ಮುಚ್ಚಿತು ಲಂಕೆ ರಾಮ ಹರಿ ಜೈ ಜೈ ಸೀತಾರಾಮ ೩೪೦

ಧ್ಯಾನಿಸಿದ್ದನುಮನು ಈಶನಿರ್ಮಲನ
ಸಾಸಿರನಾಮವ ರಾಮ ಹರಿ ಜೈ ಜೈ ಸೀತಾರಾಮ ೩೪೧

ರಾಮಭಕ್ತ ನಿಸ್ಸೀಮ ಭಜಕಜನ
ಪ್ರೇಮ ಜಯತು ಶ್ರೀ ರಾಮ ಹರಿ ಜೈ ಜೈ ಸೀತಾರಾಮ ೩೪೨

ಸುತ್ತಿದ ಲಂಕೆಯ ಮುತ್ತಿದ ಬೆಂಕಿಯಿಂ
ಮತ್ತೆ ಗೃಹ ಗೃಹ ರಾಮ ಹರಿ ಜೈ ಜೈ ಸೀತಾರಾಮ ೩೪೩

ದಹನಮಾಡಿದ ವೀರ ಮಹ ಲಂಕಾನಗರವಂ
ಹಾಹಾಕಾರ ನಡುಗ್ಗಿತು ರಾಮ ಹರಿ ಜೈ ಜೈ ಸೀತಾರಾಮ ೩೪೪

ಭರದಿ ಬಂದು ತನ್ನ ಉರಿವ ಬಾಲವನು
ಶರಧಿಯೊಳದ್ದಿದ ರಾಮ ಹರಿ ಜೈ ಜೈ ಸೀತಾರಾಮ ೩೪೫

ರಾಮಕೃಪೆಯಿಂದೊಂದು ರೋಮ ಉರಿಯದೆ
ಕ್ಷೇಮವಾದದ್ದು ಕಂಡ ರಾಮ ಹರಿ ಜೈ ಜೈ ಸೀತಾರಾಮ ೩೪೬

ದಾಸಜನರಿಗೆ ನಾಶವೆಲ್ಲಿಸ
ವೇಶನ ಬಲವಿರೆ ರಾಮ ಹರಿ ಜೈ ಜೈ ಸೀತಾರಾಮ ೩೪೭

ನಾನಾವಿಧದಿ ಆ ಜಾನಕೀಶನ ಪಾದ
ಧ್ಯಾನಿಸ್ವಾಯುಸುತ ರಾಮ ಹರಿ ಜೈ ಜೈ ಸೀತಾರಾಮ ೩೪೮

ಮಂಡ ತಿರುಗಿ ಮತ್ತೆ ಕಂಡ ಜಾನಕಿಪಾದ
ಕೊಂಡನಾಶೀರ್ವಾದ ರಾಮ ಹರಿ ಜೈ ಜೈ ಸೀತಾರಾಮ ೩೪೯

ಅಪ್ಪಣೆ ಪಡೆದು ತಾ ಕುಪ್ಪಳಿಸ್ವಾರಿದ
ಚಪ್ಪರಿಸುತ ಭುಜ ರಾಮ ಹರಿ ಜೈ ಜೈ ಸೀತಾರಾಮ ೩೫೦

ಘಂಟಾನಾದ ತುಂಬೆಂಟುದಿಕ್ಕುಗಳ
ಮಿಂಟಾಡಿಸಿತಂದು ರಾಮ ಹರಿ ಜೈ ಜೈ ಸೀತಾರಾಮ ೩೫೧

ಮಂಡವಾನರ ಬಲು ಹಿಂಡುಗಟ್ಟಿ ಕೇಳಿ
ಮಂಡೆದೂಗಿದರು ರಾಮ ಹರಿ ಜೈ ಜೈ ಸೀತಾರಾಮ ೩೫೨

ಹನುಮಂತನ ಘಂಟಾಘನರವ ಇದು ಎಂದು
ಮನದಿ ಹಿಗ್ಗದರು ರಾಮ ಹರಿ ಜೈ ಜೈ ಸೀತಾರಾಮ ೩೫೩

ಭರದಿಂದಿಳಿದು ಗರುಡನಂದದಿ
ನೆರೆದರೆಲ್ಲ ಸುತ್ತ ರಾಮ ಹರಿ ಜೈ ಜೈ ಸೀತಾರಾಮ ೩೫೪

ಆದಿಯಿಂ ಸರ್ವನು ಹೋದಕಾರ್ಯ ನಿ
ವೇದಿಸುಯೆಂದರು ರಾಮ ಹರಿ ಜೈ ಜೈ ಸೀತಾರಾಮ ೩೫೫

ಲಂಕಿಣಿಯಳ ವಧೆ ಪಂಕಜಾಕ್ಷಿ ಭೇಟಿ
ಲಂಕಾದಹನವಂ ರಾಮ ಹರಿ ಜೈ ಜೈ ಸೀತಾರಾಮ ೩೫೬

ಆದಿಯಿಂದಂತ್ಯಕೆ ಹೋದಕಾರ್ಯ ನಿ
ವೇದಿಸಿದಿನು ವೀರ ರಾಮ ಹರಿ ಜೈ ಜೈ ಸೀತಾರಾಮ ೩೫೭

ಬಂದಕಾರ್ಯವಾಯಿತೆಂದು ಸರ್ವರಾ
ನಂದಭರಿತರಾಗಿ ರಾಮ ಹರಿ ಜೈ ಜೈ ಸೀತಾರಾಮ ೩೫೮

ಬಂದು ಸ್ವಾಮಿಪಾದಕೊಂದಿಸಿ ದೇವಿಯ
ರೆಂದ್ವಾರ್ತೆಯಂ ರಾಮ ಹರಿ ಜೈ ಜೈ ಸೀತಾರಾಮ ೩೫೯

ಭಕ್ತಿಯಿಂದ್ಹೇಳಲು ಮುಕ್ತಿದಾಯಕ ಹರಿ
ಅತ್ಯಾನಂದದಿ ರಾಮ ಹರಿ ಜೈ ಜೈ ಸೀತಾರಾಮ ೩೬೦

ಸೀತೆವಾರ್ತೆ ಕೇಳಾತರುದಿಂ ಕಪಿ
ನಾಥನಿಗಿಂತೆಂದ ರಾಮ ಹರಿ ಜೈ ಜೈ ಸೀತಾರಾಮ ೩೬೧

ತಡೆಯೆನಿನ್ನು ಮಮ ಮಡದಿ ಮಿಡುಕುವಳು
ಗಡ ಹೊರಡೆಂದನು ರಾಮ ಹರಿ ಜೈ ಜೈ ಸೀತಾರಾಮ ೩೬೨

ಕಪಿವರ ಕೂಡಿಸಿ ಅಪರಿಮಿತ್ವಾನರ
ಚಪಲ ಮಹರ್ಬಲಂ ರಾಮ ಹರಿ ಜೈ ಜೈ ಸೀತಾರಾಮ ೩೬೩

ಅಪ್ಪಣೆಯಾದರೆ ತಪ್ಪುಗಾರನ ತಂದು
ಕಪ್ಪಕೊಡುವೆನೆಂದ ರಾಮ ಹರಿ ಜೈ ಜೈ ಸೀತಾರಾಮ ೩೬೪

ಕೂಡಿದ ಮಹರ್ಬಲ ನೋಡು ಆಶೀರ್ವಾದ
ನೀಡೆಂದು ಸುಗ್ರೀವ ರಾಮ ಹರಿ ಜೈ ಜೈ ಸೀತಾರಾಮ ೩೬೫

ತಡೆದಿರು ಸುಗ್ರೀವ ಹೊಡೆಸು ಜೈಭೇರಿ
ಹಿಡಿಸೆಂದ ಪಥಮಂ ರಾಮ ಹರಿ ಜೈ ಜೈ ಸೀತಾರಾಮ ೩೬೬

ಹಿಡಿಸಿದ ಪಥ ಲಂಕೆಗ್ವೆತಡಲೆಮೃತ್ಯು
ಅಡರಿಕೊಂಡ್ಹೋಗ್ವಂತೆ ರಾಮ ಹರಿ ಜೈ ಜೈ ಸೀತಾರಾಮ ೩೬೭

ನಡೆತದೆದ್ದ ಧೂಳಡರಿ ಗಗನಮಂ
ಕಡುಕಗ್ಗತ್ತಲೆ ರಾಮ ಹರಿ ಜೈ ಜೈ ಸೀತಾರಾಮ ೩೬೮

ಮುಚ್ಚಿತ್ತು ಲೋಕವು ಕೊಚ್ಚಿತು ಭೋ ರವಿ
ಗುಚ್ಚಿತು ಕಪ್ಪನು ರಾಮ ಹರಿ ಜೈ ಜೈ ಸೀತಾರಾಮ ೩೬೯

ಸಾಗಿ ದಕ್ಷಿಣದ ಸಾಗರ ತೀರವ
ಬೇಗ ಸೇರಿದರು ರಾಮ ಹರಿ ಜೈ ಜೈ ಸೀತಾರಾಮ ೩೭೦

ಮಿತಿದಪ್ಪಿದ ಸೈನ್ಯತಿ ಶೋಭಿಸುತಿರೆ
ದ್ವಿತಿಸಮುದ್ರದಂತೆ ರಾಮ ಹರಿ ಜೈ ಜೈ ಸೀತಾರಾಮ ೩೭೧

ನೀಚನ ಚರರು ಆಚೆತಟದಿ ಕಂಡು
ಮೂರ್ಛಿತರಾದರು ರಾಮ ಹರಿ ಜೈ ಜೈ ಸೀತಾರಾಮ ೩೭೨

ಎದ್ದು ಓಡುತ್ಹೋಗಿ ಬದ್ಧನ ಮುಂದೀ
ಸುದ್ದಿ ಹೇಳಿದರು ರಾಮ ಹರಿ ಜೈ ಜೈ ಸೀತಾರಾಮ ೩೭೩

ಪಟ್ಟಪ್ರಧಾನ ಮತ್ತು ದಿಟ್ಟ ಇಂದ್ರಜಿತು
ಶಿಷ್ಟ ವಿಭೀಷಣಗೆ ರಾಮ ಹರಿ ಜೈ ಜೈ ಸೀತಾರಾಮ ೩೭೪

ನರವಾನರ ಬಲ ಧುರಕೆ ಬಂದ ಸು
ದ್ವ್ಯರಿಕೆಮಾಡಿದನು ರಾಮ ಹರಿ ಜೈ ಜೈ ಸೀತಾರಾಮ ೩೭೫

ದಕ್ಕಗೊಡದೆ ಕ್ಷಣ ಸಿಕ್ಕಿಬಿಡುವೆನೆಂದ
ಸೊಕ್ಕಿಲಿಂದ್ರಜಿತು ರಾಮ ಹರಿ ಜೈ ಜೈ ಸೀತಾರಾಮ ೩೭೬

ತಡೆಯದ್ವಿಭೀಷಣ ನುಡಿದನೆಲವೋ ನಿಮ್ಮ
ಕಡುಗಲು ಕಂಡಿದೆ ರಾಮ ಹರಿ ಜೈ ಜೈ ಸೀತಾರಾಮ ೩೭೭

ಓರ್ವವಾನರ ಬಂದು ಸೂರೆಗೊಂಡ ವನ
ಆರು ಉಳಿಸಲಿಲ್ಲ ರಾಮ ಹರಿ ಜೈ ಜೈ ಸೀತಾರಾಮ ೩೭೮

ಅತಿಶಯ ರತಿಬಲರ್ಮಹಾಕಾಯ ಮೊದಲಾದ
ರ್ಹತಗೈದದ್ದಲ್ಲದೆ ರಾಮ ಹರಿ ಜೈ ಜೈ ಸೀತಾರಾಮ ೩೭೯

ಎತ್ತಪೋಗಿತ್ತು ಶೌರ್ಯ ಮತ್ತೆ ಪುರವ ಸುಟ್ಟು
ಸತ್ಯನಾಶಗೈದ ರಾಮ ಹರಿ ಜೈ ಜೈ ಸೀತಾರಾಮ ೩೮೦

ಬಣ್ಣದ ಮಾತಿನಿಂದಿನ್ನು ಕುಲವೇ ನಾಶ
ಅಣ್ಣ ನಮಿಸುವೆನು ರಾಮ ಹರಿ ಜೈ ಜೈ ಸೀತಾರಾಮ ೩೮೧

ಸುಮ್ಮನೆ ಕೆಡಬೇಡ್ಹಮ್ಮಿನಿಂದ ಪರ
ಬ್ರಹ್ಮನ ಸತಿಯಳು ರಾಮ ಹರಿ ಜೈ ಜೈ ಸೀತಾರಾಮ ೩೮೨

ಸಲ್ಲಳು ಎಮ್ಮಗೆ ಸಲ್ಲಿಸಿ ಕ್ಷಮೆಬೇಡು
ಪುಲ್ಲನಾಭನಿಗೆ ರಾಮ ಹರಿ ಜೈ ಜೈ ಸೀತಾರಾಮ ೩೮೩

ಕರುಣನಿಕರ ಹರಿ ಕರುಣದಿ ಕ್ಷಮಿಸಿ
ಸ್ಥಿರವಾಗಿ ಪಾಲಿಪ ರಾಮ ಹರಿ ಜೈ ಜೈ ಸೀತಾರಾಮ ೩೮೪

ಅಸುರಂಗೀ ನೀತಿ ವಿಷವಾಗ್ವಿಭೀಷಣ
ಗಸಮ ವೈರಿಯಾಗಿ ರಾಮ ಹರಿ ಜೈ ಜೈ ಸೀತಾರಾಮ ೩೮೫

ಲೋಕಕಂಟಕನು ನೂಕಿಸಿ ಪುರದ್ವಾರ
ಗ್ಹಾಕಿದನು ತ್ವರ ರಾಮ ಹರಿ ಜೈ ಜೈ ಸೀತಾರಾಮ ೩೮೬

ಹೊರಟು ಬಂದು ಸಿರಿವರನ ಚರಣಕ್ಕೆ
ಮರೆಹೊಕ್ಕ ವಿಭೀಷಣ ರಾಮ ಹರಿ ಜೈ ಜೈ ಸೀತಾರಾಮ ೩೮೭

ಸರಸಿಜನಾಭನು ಕರುಣದಿ ಲಂಕೆಯ
ಸ್ಥಿರಪಟ್ಟ ಕಟ್ಟಿದ ರಾಮ ಹರಿ ಜೈ ಜೈ ಸೀತಾರಾಮ ೩೮೮

ಸಾಗರಗೆ ಸೇತುವೆ ಬೇಗ ಕಟ್ಟಿಸಿ
ಸಾಗಿದನಾಚೆಗೆ ರಾಮ ಹರಿ ಜೈ ಜೈ ಸೀತಾರಾಮ ೩೮೯

ಅಟ್ಟಹಾಸದಿಂ ದುಷ್ಟನ ಪುರದೆಡೆ
ಬಿಟ್ಟನು ಪಾಳೆಯ ರಾಮ ಹರಿ ಜೈ ಜೈ ಸೀತಾರಾಮ ೩೯೦

ಅವಧಿಯಾತಕಿನ್ನು ಜವದಿ ಮುತ್ತಿಗ್ಹಾಕಿ
ಜಯ ಭೇರಿ ಹೊಡಿಸೆಂದ ರಾಮ ಹರಿ ಜೈ ಜೈ ಸೀತಾರಾಮ ೩೯೧

ಸರಸಿಜಾಕ್ಷ ಕಪಿವರಿಗೆ ಆಜ್ಞೆಯಿತ್ತ
ಪುರವ ಮುತ್ತಲಿಕ್ಕೆ ರಾಮ ಹರಿ ಜೈ ಜೈ ಸೀತಾರಾಮ ೩೯೨

ಪಶ್ಚಿಮದುತ್ತದ್ವಾರ ಮುಚ್ಚಿ ದಕ್ಷಿಣ ಪೂರ್ವ
ರೊಚ್ಚಿನಿಂ ವೀರ ರಾಮ ಹರಿ ಜೈ ಜೈ ಸೀತಾರಾಮ ೩೯೩

ನುಗ್ಗಿ ಹೊಡಿದರು ಲಗ್ಗೆ ಲಂಕೆಪುಣ್ಯಾ
ತಗ್ಗಿತಿಂದಿಗೆಂದು ರಾಮ ಹರಿ ಜೈ ಜೈ ಸೀತಾರಾಮ ೩೯೪

ಗುಡ್ಡ ಪರ್ವತದಿಂದಡ್ಡಿಲ್ಲದೆಸೆವರು
ಧಡ್ ಧಡ್ ಪುರದೊಳು ರಾಮ ಹರಿ ಜೈ ಜೈ ಸೀತಾರಾಮ ೩೯೫

ಮೊಡ್ಡು ರಕ್ಕಸರು ಅಡ್ಡಬಿದ್ದರ್ಹೋಗಿ
ಗೊಡ್ಡುರಾವಣಗೆ ರಾಮ ಹರಿ ಜೈ ಜೈ ಸೀತಾರಾಮ ೩೯೬

ತಾಳಲಾರೆವು ಕಪಿ ಹಾವಳಿ ಯಿಷ್ಟಂ
ದ್ಹೇಳಲು ಸಲ್ಲವು ರಾಮ ಹರಿ ಜೈ ಜೈ ಸೀತಾರಾಮ ೩೯೭

ಕೇಳಿ ರಾವಣ ಕೋಪ ತಾಳಿ ಸಿದ್ಧನಾದ
ಕಾಳಗಗೈಯಲು ರಾಮ ಹರಿ ಜೈ ಜೈ ಸೀತಾರಾಮ ೩೯೮

ಸಕಲ ಬಲವು ಮತ್ತಖಿಲ ವೀರರು ತನ್ನ
ನಿಖಿಳ ಪುತ್ರರು ರಾಮ ಹರಿ ಜೈ ಜೈ ಸೀತಾರಾಮ ೩೯೯

ನೂಕಿದ ಕದನಕೆ ಲೋಕೇಶ ಕ್ಷಣದೆಮ
ಲೋಕ ಕಾಣಿಸಿದ ರಾಮ ಹರಿ ಜೈ ಜೈ ಸೀತಾರಾಮ ೪೦೦

ಕುಲಕಂಟಕ ತನ್ನ ಛಲವ ಬಿಡದೆ ಖಳ
ಉಳಿದಿಂದ್ರಜಿತುವಂ ರಾಮ ಹರಿ ಜೈ ಜೈ ಸೀತಾರಾಮ ೪೦೧

ಧುರಕೆ ಕಳುಹಿದನು ನರಕಪಿಗಳ ಶಿರ
ತರಿದು ಬರುವುದೆಂದು ರಾಮ ಹರಿ ಜೈ ಜೈ ಸೀತಾರಾಮ ೪೦೨

ಮೂರು ಕೋಟಿ ಬ್ರಹ್ಮಘೋರರಕ್ಕಸರಿಂ
ಸೇರಿದ ರಣರಂಗ ರಾಮ ಹರಿ ಜೈ ಜೈ ಸೀತಾರಾಮ ೪೦೩

ಗುಡ್ಡ ಪರ್ವತೊಯ್ದಡ್ಡಣೆ ಮುರಿದರು
ಗೊಡ್ಡು ರಕ್ಕಸನ ರಾಮ ಹರಿ ಜೈ ಜೈ ಸೀತಾರಾಮ ೪೦೪

ಸರಿಯದಧಮ ಮುಂದರಿದು ಪೋಣಿಸಿದ
ಭರದಿ ನಾಗಶರ ರಾಮ ಹರಿ ಜೈ ಜೈ ಸೀತಾರಾಮ ೪೦೫

ಗಳಲನೆ ವಿಷದಿಂದಿಳೆಗೆರಗಲು ಕಂಡು
ಖಳ ಹರುಷನಾಗಿ ರಾಮ ಹರಿ ಜೈ ಜೈ ಸೀತಾರಾಮ ೪೦೬

ಭರದಿ ಬಂದು ಪಿತಗೊರೆದ ಸರ್ವರಂ
ತರಿದು ಬಂದೆನೆಂದು ರಾಮ ಹರಿ ಜೈ ಜೈ ಸೀತಾರಾಮ ೪೦೭

ಅರಿದನು ಮಹಗರುಡ ಬಂದಿಳಿದನು
ಸರ್ವರು ಜೀವಿಸಿ ರಾಮ ಹರಿ ಜೈ ಜೈ ಸೀತಾರಾಮ ೪೦೮

ಭರದಿ ಎದ್ದು ಮತ್ತೆ ಧುರಕೆ ಸಿದ್ಧರಾಗಲ್
ಮರುಳರಾವಣನು ರಾಮ ಹರಿ ಜೈ ಜೈ ಸೀತಾರಾಮ ೪೦೯

ಕ್ಷುದ್ರ ತಮ್ಮಗುಪದ್ರ ಕೊಟ್ಟು ಖಳ
ನಿದ್ರೆಕೆಡಿಸಿದನು ರಾಮ ಹರಿ ಜೈ ಜೈ ಸೀತಾರಾಮ ೪೧೦

ಮರ್ಮಪೇಳಿದೆಲ್ಲ ತಮ್ಮನ ಕೂಡಿಸಿ
ಕರ್ಮಿ ರಾವಣನು ರಾಮ ಹರಿ ಜೈ ಜೈ ಸೀತಾರಾಮ ೪೧೧

ಕುಂಭಕರ್ಣ ಕೇಳಿ ಸಂಭೋಧಿಸಿದನು
ನಂಬು ಇನ್ನಾದರು ರಾಮ ಹರಿ ಜೈ ಜೈ ಸೀತಾರಾಮ ೪೧೨

ಅಳಿದದ್ದಳೀತು ಇನ್ನುಳಿದ್ದಕ್ಕಾದರು
ಗಳಿಸಿಕೊ ಸುಖವನು ರಾಮ ಹರಿ ಜೈ ಜೈ ಸೀತಾರಾಮ ೪೧೩

ಸೀತೆನೊಯ್ದು ಆಕೆನಾಥಗರ್ಪಿಸಲು
ಯಾತರ ಭಯವಿಲ್ಲ ರಾಮ ಹರಿ ಜೈ ಜೈ ಸೀತಾರಾಮ ೪೧೪

ಪಾತಕ ಎನ್ನಗೆ ನೀತಿ ಪೇಳುವೆಯ
ಕೋತಿಗಳಿಗೆ ಅಂಜಿ ರಾಮ ಹರಿ ಜೈ ಜೈ ಸೀತಾರಾಮ ೪೧೫

ಲೇಸುಪೇಳಿದರೆ ರೋಷವೇನೆಲೋ ಲಂಕಾ
ನಾಶಕಾಲವಿದು ರಾಮ ಹರಿ ಜೈ ಜೈ ಸೀತಾರಾಮ ೪೧೬

ನೀಡುವೀಳ್ಯ ಎನ್ನನೋಡು ಕಾಳಗಪರಿ
ಕೇಡು ಆರದೆಂದ ರಾಮ ಹರಿ ಜೈ ಜೈ ಸೀತಾರಾಮ ೪೧೭

ವೀಳ್ಯ ಪಡೆದು ಕಪಿಪಾಳ್ಯ ಪೊಕ್ಕನವ
ಖೂಳ ಕುಂಭಕರ್ಣ ರಾಮ ಹರಿ ಜೈ ಜೈ ಸೀತಾರಾಮ ೪೧೮

ಬದ್ಧಕಕಪಿಗಳಲಿ ಯುದ್ಧವೇನೆನ್ನುತ
ಮುದ್ದೆ ಮುದ್ದೆ ಮಾಡಿ ರಾಮ ಹರಿ ಜೈ ಜೈ ಸೀತಾರಾಮ ೪೧೯

ನೆಕ್ಕಿ ಮುಕ್ಕಿದನು ಸಿಕ್ಕ ಕಪಿಗಳೆಲ್ಲ
ದಕ್ಕಗೊಡದತರ ರಾಮ ಹರಿ ಜೈ ಜೈ ಸೀತಾರಾಮ ೪೨೦

ಎಳೆದು ನುಂಗಿದನು ಬಳಿದು ಕಪಿಗಳ
ಬಲುಸವಿಯೆನ್ನುತ ರಾಮ ಹರಿ ಜೈ ಜೈ ಸೀತಾರಾಮ ೪೨೧

ಕಂಡು ತ್ರಿಜಗದೋದ್ದಂಡ ಪುಂಡ ಪ್ರ
ಚಂಡ ವೈರಿಗಂಡ ರಾಮ ಹರಿ ಜೈ ಜೈ ಸೀತಾರಾಮ ೪೨೨

ಪೋಣಿಸಿದನು ಶರ ಗೋಣು ಹಾರಿಸಿ ಶವ
ಕಾಣಿಸಿದನು ಲಂಕೆ ರಾಮ ಹರಿ ಜೈ ಜೈ ಸೀತಾರಾಮ ೪೨೩

ಬಿದ್ದಿತು ಬಂದು ಪುರ ಮಧ್ಯದೊಳಗೆ ನೀ
ಲಾದ್ರಿ ಗಿರಿಯಂತೆ ರಾಮ ಹರಿ ಜೈ ಜೈ ಸೀತಾರಾಮ ೪೨೪

ಬಲಹೀನ ರಕ್ಕಸರೊಳಗಾಗತಿಶಯ
ಅಳಿದು ಪೋದರ್ರೈ ರಾಮ ಹರಿ ಜೈ ಜೈ ಸೀತಾರಾಮ ೪೨೫

ಖೇದಪಟ್ಟು ಖಳ ರೋದಿಸಿದನು ತಮ್ಮ
ಪೋದೆಂದಳಿದುಯೆಂದು ರಾಮ ಹರಿ ಜೈ ಜೈ ಸೀತಾರಾಮ ೪೨೬

ಕಂಡು ಇಂದ್ರಜಿತು ಭಂಡರ ಶಿರವ
ಚೆಂಡಾಡಿ ಬರುವೆನೆಂದ ರಾಮ ಹರಿ ಜೈ ಜೈ ಸೀತಾರಾಮ ೪೨೭

ಹುರಿದುಂಬಿ ಶರಮಳೆಗೆರಯುತ ಬರಲವ
ನರೆಲವದೊಳು ರಘು ರಾಮ ಹರಿ ಜೈ ಜೈ ಸೀತಾರಾಮ ೪೨೮

ಅಧಮನ ಮಸ್ತಕ ಸದೆದು ನಿಮಿಷದೆಮ
ಸದನಕಟ್ಟಿದನು ರಾಮ ಹರಿ ಜೈ ಜೈ ಸೀತಾರಾಮ ೪೨೯

ಧೂರ್ತಪುತ್ರನ ಸತ್ವಾರ್ತೆ ಕೇಳಿ ಮಮ
ಯಾತ್ರೆ ಮುಗಿಯಿತಿಹ್ಯ ರಾಮ ಹರಿ ಜೈ ಜೈ ಸೀತಾರಾಮ ೪೩೦

ಕೆಟ್ಟೆನಕಟ ಇನ್ನು ನಷ್ಟವಾಯಿತು ಕುಲ
ಭ್ರಷ್ಟಗೈದ ರಘು ರಾಮ ಹರಿ ಜೈ ಜೈ ಸೀತಾರಾಮ ೪೩೧

ತೊಟ್ಟಬಾಣ ಕಡು ಸಿಟ್ಟಿನಿಂದ ಖಳ
ಸೃಷ್ಟಿಕರ್ತನಮೇಲೆ ರಾಮ ಹರಿ ಜೈ ಜೈ ಸೀತಾರಾಮ ೪೩೨

ಕೆಣಕಿ ಉಳಿವರಾರು ಇನಕುಲಜಾತನಂ
ಬಣಗುರಕ್ಕಸನೀಡೆ ರಾಮ ಹರಿ ಜೈ ಜೈ ಸೀತಾರಾಮ ೪೩೩

ಒಡನೆ ಹತ್ತುಶಿರ ಕಡಿಕಡಿದಗಧರ
ಕೆಡವಿದ ಪೊಡವಿಗೆ ರಾಮ ಹರಿ ಜೈ ಜೈ ಸೀತಾರಾಮ ೪೩೪

ಸುತ್ತಿ ಖಳನ ಶವ ಬಿತ್ತು ಭೂಮಿಮೇಲೆ
ತತ್ತರಗೊಳ್ಳುತ ರಾಮ ಹರಿ ಜೈ ಜೈ ಸೀತಾರಾಮ ೪೩೫

ನೆರೆದ ಸುರರು ಮಹ ಹರುಷದ್ಹರಿಮೇಲೆ
ಕರೆದರು ಪೂಮಳೆ ರಾಮ ಹರಿ ಜೈ ಜೈ ಸೀತಾರಾಮ ೪೩೬

ನಾಚಗೈದರ್ಕೆ ಖೇಚರದಮರರು
ನೀಚರಳಿದ ರಘು ರಾಮ ಹರಿ ಜೈ ಜೈ ಸೀತಾರಾಮ ೪೩೭

ಪರಮಲಂಕಾಪಟ್ಟ ಭರದ್ವಿಭೀಷಣನಿಗೆ
ಕರುಣಿಸಿದನು ರಾಮ ಹರಿ ಜೈ ಜೈ ಸೀತಾರಾಮ ೪೩೮

ಹರಷದಿ ಸತಿಯೆಳ ಕರೆದುಕೊಂಡಯೋಧ್ಯಾ
ಪುರಕೆ ತಿರುಗಿದನು ರಾಮ ಹರಿ ಜೈ ಜೈ ಸೀತಾರಾಮ ೪೩೯

ಭರದಿಂ ಬಂದು ತಾ ಶರಧಿ ದಾಂಟಿ ತ್ವರ
ಕರೆದು ಸರ್ವರಂ ರಾಮ ಹರಿ ಜೈ ಜೈ ಸೀತಾರಾಮ ೪೪೦

ನಿರ್ಮಿಸಿ ಲಿಂಗವ ಬ್ರಹ್ಮತ್ಯ ಕಳಕೊಂಡ
ನಿರ್ಮಲಾತ್ಮ ರಾಮ ಹರಿ ಜೈ ಜೈ ಸೀತಾರಾಮ ೪೪೧

ಚಿತೆಯ ಮುಖದಿ ಮಹ ಕ್ಷಿತಿಜೆ ಪರೀಕ್ಷಿಸ್ಯಂ
ತತಿ ತ್ವರ ಸ್ವರ್ಗದಿ ರಾಮ ಹರಿ ಜೈ ಜೈ ಸೀತಾರಾಮ ೪೪೨

ಪಿತನು ಬಂದ್ಹೇಳಲು ಹಿತದಿಂ ಕೂಡಿದ
ಸತಿ ಸೀತೆಯಳಂ ರಾಮ ಹರಿ ಜೈ ಜೈ ಸೀತಾರಾಮ ೪೪೩

ಭರತ ಹದಿನಾಲ್ಕು ವರುಷ ಮುಗಿದುವೆಂದು
ನಿರುತದಗ್ನಿಯೊಳು ರಾಮ ಹರಿ ಜೈ ಜೈ ಸೀತಾರಾಮ ೪೪೪

ಹಾರುವ ಸಮಯಕ್ಕೆ ಸೇರಿ ಭಕ್ತರೋ
ದ್ಧಾರಕನೆಂಬುವ ರಾಮ ಹರಿ ಜೈ ಜೈ ಸೀತಾರಾಮ ೪೪೫

ಬಿರುದು ಕಾಯ್ದುಕೊಂಡ ಪರಮಚರಿತ ತನ್ನ
ಶರಣಜನರ ರಾಮ ಹರಿ ಜೈ ಜೈ ಸೀತಾರಾಮ ೪೪೬

ತಾಯಿ ಕೌಶಲ್ಯೆ ಕೈಕೆ ದೇವಿಯರ್ಧರಸಿದ
ರಾಯತಾಂಬನಂ ರಾಮ ಹರಿ ಜೈ ಜೈ ಸೀತಾರಾಮ ೪೪೭

ಪಟ್ಟವೇರಿದನು ದಿಟ್ಟ ಆಯೋಧ್ಯಾಮರ
ಸೃಷ್ಟಿಕರ್ತ ಶ್ರೀ ರಾಮ ಹರಿ ಜೈ ಜೈ ಸೀತಾರಾಮ ೪೪೮

ಗುರು ವಸಿಷ್ಠಾದಿ ಪರಮ ಋಷೀಶ್ವರ
ರ್ಧರಕೆ ಕೊಟ್ಟರೈ ರಾಮ ಹರಿ ಜೈ ಜೈ ಸೀತಾರಾಮ ೪೪೯

ಸುರರು ಮಂಗಳಾಚರಣೆ ಪಾಡಿದರು
ನೆರೆದು ಆಕಾಶದಿ ರಾಮ ಹರಿ ಜೈ ಜೈ ಸೀತಾರಾಮ ೪೫೦

ಪುರಜನ ಪರಿಜನ ಚರಣದೊಳೆರಗಿ
ಕರುಣ ಬೇಡಿದರು ರಾಮ ಹರಿ ಜೈ ಜೈ ಸೀತಾರಾಮ ೪೫೧

ಹನುಮ ನೀಲಂಗದ ಘನಭಕ್ತ ಸುಗ್ರೀವ
ರ್ವಿನಮಿಸಿ ಜಾಂಬವ ರಾಮ ಹರಿ ಜೈ ಜೈ ಸೀತಾರಾಮ ೪೫೨

ವನರುಹಾಂಘ್ರಿಯ ಕನಿಕರ ಕೋರ್ದರು
ವನಚರರೆಲ್ಲರು ರಾಮ ಹರಿ ಜೈ ಜೈ ಸೀತಾರಾಮ ೪೫೩

ದನುಜಾಧೀಶ ವಿಭೀಷಣ ಮಣಿದನು ತ
ನ್ನನುದಿನ ಕಾಯೆಂದು ರಾಮ ಹರಿ ಜೈ ಜೈ ಸೀತಾರಾಮ ೪೫೪

ಕೊಟ್ಟನಭಯ ತನ್ನಿಷ್ಟಭಕ್ತರಂ
ಬಿಟ್ಟಿರೆನನ್ನುತ ರಾಮ ಹರಿ ಜೈ ಜೈ ಸೀತಾರಾಮ ೪೫೫

ನಿಷ್ಠೆಯಿಂದ ಮನಮುಟ್ಟಿ ಭಜಿಸುವರ
ಕಷ್ಟ ಕಳೆವ ಶ್ರೀ ರಾಮ ಹರಿ ಜೈ ಜೈ ಸೀತಾರಾಮ ೪೫೬

ಪುತ್ರಾಪೇಕ್ಷಿಗಳೀ ಸ್ತೋತ್ರ ಪಾಡಲು ನಿಜ
ಪುತ್ರರನ್ನೀಯ್ವ ಶ್ರೀ ರಾಮ ಹರಿ ಜೈ ಜೈ ಸೀತಾರಾಮ ೪೫೭

ಸರ್ವಕಾಲದಿ ಭಕ್ತಿ ಪೂರ್ವಕ ಪಠಿಸಲು
ಸರ್ವ ಸಿದ್ಧಿ ಕೊಡುವ ಶ್ರೀ ರಾಮ ಹರಿ ಜೈ ಜೈ ಸೀತಾರಾಮ ೪೫೮

ನಿತ್ಯ ನಿತ್ಯದಲಿ ಭಕ್ತಿಯಿಂ ಪೊಗಳಲು
ಮುಕ್ತಿ ಕೊಡುವ ಶ್ರೀ ರಾಮ ಹರಿ ಜೈ ಜೈ ಸೀತಾರಾಮ ೪೫೯

X. ಸಂಪ್ರದಾಯದ ಹಾಡುಗಳು

೭೬೭

ಮಂಗಲಂ ಜಯ ಮಂಗಲಂ ಜಯ
ಮಲ್ಲಿಕಾರ್ಜುನ ವಿಭವಗೆ ಪ

ಮಂಗಲಂ ಜಯ ಗಂಗಾಧರ ಸುಜ
ನಂತರಂಗ ಸಂಚಾರಗೆ ಅ.ಪ

ಮೃತ್ಯುಪರಿಹರ ಭಕ್ತವತ್ಸಲ
ನಿತ್ಯಮುಕ್ತಿದಾತುಗೆ
ನಿತ್ಯ ನಿರ್ಗುಣ ನಿರುಪಮಾತ್
ಚಿತ್ಕಲ ಚಿದ್ರೂಪಗೆ ೧

ಗೊಲ್ಲಗಿಕ್ಕಿಯೊಳಗೆ ಕಾಣಿಸಿ
ಬಳ್ಳದುದಯ ನಾದವಂಗೆ
ನಲ್ಲೆ ಕುಚದಿ ಪ್ರಸನ್ನನಾದ
ಫುಲ್ಲಶರಸಂಹಾರಗೆ ೨

ಗಿರಿಜೆವರಪುರ ಹರಣ ಅಘಹರ
ಮರಣರಹಿತ ಪ್ರಕಾಶಗೆ
ಪರಮಭಕ್ತರಿಗ್ವರವ ನೀಡುತ
ಗಿರಿಯ ತುದಿಯಲಿ ಮೆರೆವಗೆ ೩

ಶೂಲಧಾರಣ ಕಾಲಮರ್ದನ
ಬಾಲಗೊಲಿದ ಗಂಭೀರಗೆ
ಫಾಲನಯನ ಸುಮೇಲುಮಂದರ
ಪಾಲತ್ರಿಜಗ ಮೋಹಗೆ ೪

ದಕ್ಷನ ಮದ ಶಿಕ್ಷ ಸುರಮುನಿ
ರಕ್ಷ ಕರುಣಾಸಮುದ್ರಗೆ
ಪಕ್ಷಿರೂಢ ಜಗದ್ರಕ್ಷ ಶ್ರೀರಾಮ
ಪಕ್ಷ ಶ್ರೀಶಾಂತಮಲ್ಲಗೆ ೫

೭೬೮

ಮಂಗಲಂ ಜಯ ಮಂಗಲಂ ಜಯ ಪ

ರಂಗಪುರವರಾಧೀಶಗೆ ಮಂಗಲಂ ಜಯ
ಮಂಗಲಂ ವೀರ ಅಂಜನೆ ಕುಮಾರಗೆ ಅ.ಪ

ಶರಧಿ ಲಂಘಿಸಿ ಭರದಿ ಲಂಕಾಪುರವ ಪೊಕ್ಕಧೀರಗೆ
ದುರುಳಲಂಕಿಣೆ ಗರುವ ಮುರಿದ ಪರಮ ಪರತರ ಶೂರಗೆ ೧

ಶಂಕೆಯಿಲ್ಲದೆ ಮಂಕುದಕನುಜರ ಬಿಂಕಮುರಿದ ಸಮರ್ಥಗೆ
ಲಂಕಾನಗರಕೆ ಬೆಂಕಿಹಚ್ಚಿದಕಲಂಕ ಪ್ರಾಣ ಮೂರ್ತಿಗೆ ೨

ಪಾತಕಸುರರ ಭೀತನೆನಿಸಿ ಸೀತೆಗುಂಗುರವಿತ್ತಗೆ
ಸೀತೆವಾರ್ತೆಯ ದಾತ ಶ್ರೀರಾಮಗಾತುರದಿ ಬಂದ್ಹೇಳ್ದಗೆ ೩

೭೬೯

ಮಂಗಲಂ ಮಯ ಸಿರಿವರಗೆ ಜಯ ಜಯ ಪ

ಮಂಗಲಂ ಮಯ ಸಿರಿವರಗೆ
ಮಂಗಲಂ ಶುಭ ಜಯ ಮಂದರಧರಗೆ ಅ.ಪ

ಅಂಗಜಜನಕಗೆ ಮಂಗಲಮಹಿಮಗೆ
ಪಿಂಗದ ಭಜಕರಾನಂದಪೂರ್ಣಗೆ ೧

ಪಾಪವಿದೂರಗೆ ಶಾಪಪರಿಹಾರಗೆ
ಗೋಪ ಗೋಪಿಕೇರಾನಂದಲೀಲಗೆ ೨

ಭಕುತಾಭಿಮಾನಿಗೆ ಭಕುತವತ್ಸಲನಿಗೆ
ಮುಕ್ತಿದಾಯಕ ಮಮಕರ್ತ ಶ್ರೀರಾಮಗೆ ೩

೭೭೦

ಮಂಗಲಂ ಮಹದೇವಿಗೆ
ಮಂಗಲಂ ಮಯಶುಭ ಗೌರಿಗೆ ಪ

ಪರಂಜೋತಿ ಪರಾಂಬೆ ಪರಮ
ಪರಭವಾಂಬುಧಿ ದು:ಖ ಪರಿ
ಹರಕೆ ಜನನಮರಣರಹಿತೆ
ಶರಣುಜನರ ಪ್ರಾಣೆಗೆ ೧

ತ್ರಿಜಗಮಾಯೆ ತ್ರಿಶೂಲಧಾರಿ
ಭವನಪ್ರಿಯ ಭವನಿವಾರಿ
ಸುಜನರಕ್ಷೆ ಕುಜಕುಠಾರಿ
ಭುಜಗ ಭೂಷಣನರಸಿಗೆ ೨

ಭೂಮಿಗಧಿಕ ಸ್ವಾಮಿ ಶ್ರೀ
ರಾಮನಾಮಪ್ರೇಮಪೂರ್ಣೆ

ಕಾಮಿತ ಜನರ ಕಲ್ಪದ್ರುಮೆ
ಕೋಮಲಹೃದಯಶೌರಿಗೆ ೩

೭೭೧

ಮಂಗಲಂ ಶ್ರೀರಂಗಗೆ ಮಂಗಲಂ ಕೃಪಾಂಗಗೆ
ಮಂಗಲಂ ಭಕ್ತಾಂತರಂಗಗೆ ಶುಭಮಂಗಲಂ ಪ

ಮತ್ಸ್ಯ ಕೂರ್ಮಾವತಾರಗೆ ನಿತ್ಯ ಚಿದ್ರೂಪಾನಂತಗೆ
ಮತ್ತೆ ವರಾಹಾವತಾರ ಪೃಥ್ವ್ಯಾವತ್ತು ಈರಡಿ ಮಾಡ್ದಗೆ ೧

ನಾರಸಿಂಹರೂಪಗೆ ವೀರಕ್ಷತ್ರಿಯರ್ವೈರಿಗೆ
ಘೋರ ವನವಾಸ ಗೈಯ್ದಾಪಾರ ಶೂರ ದಶಶಿರಹರಣರಗೆ ೨

ಬಾಲಗೋಪಾಲಕೃಷ್ಣಗೆ ಬಾಲೆಯರ ವ್ರತ ಭಂಗಗೆ
ಮೇಲಾದ್ಹಯವೇರಿ ಮೆರೆದ ಕೌಸ್ತುಭಮಾಲ ಶ್ರೀ ಗುರುರಾಮಗೆ ೩

೭೭೨

ಮಂಗಲಂ ಶುಭ ಮಂಗಲಂ
ಗಂಗಾಜನಕ ಜಯ ಮಂಗಲ ಮೂರ್ತಿಗೆ ಪ

ವನಜಮಿತ್ರನ ತನುಜನು ಇತ್ತ ಮಂತ್ರದಿ
ಜನಿಸಿದವನನುಜನ ಅಣುಗನ ಶೌರ್ಯದಿ
ಗಣಿಸದೆ ವೀರರಂ ರಣದೊಳು ಸೆಣಸಾಡಿ
ತನು ನೀಗಿದ್ದನು ಪೇಳ್ದೀ ಅನುಪಮಮಹಿಮಗೆ ೧

ಕರುಪನನುಜೆಪತಿ ಶಿರವನ್ನು ಸುರಪನ
ತರಳನ ಕರದಿಂದ ಅರುಣನಿದಿರಿನೊಳು
ತರಿಸಿ ದಾಸನು ಗೈದ ಪರಪಂಥ ಕರುಣದಿ
ಪರಿಪೂರ್ಣಗೈದಂಥ ಪರಮಪುರುಷನಿಗೆ ೨

ಕುಲಸತಿಯಳಿಗೊಲಿದು ತಿಳಿಯದೆ ಮುನಿಶಾಪ
ಕ್ಕೊಳಗಾದವನ ಮಂತ್ರಿಗೆಳೆಯನ ಸುತನಿಂದ
ಖಳನನುಜನ ಸುದ್ದಿ ತಿಳಿದು ಒಲಿದು ಸ್ಥಿರ
ಇಳೆಪಟ್ಟಗಟ್ಟಿದ ಚೆಲುವ ಶ್ರೀರಾಮಗೆ ೩

೭೭೩

ಮಂಗಲವೆನ್ನಿರೆ ಶ್ರೀರಂಗಗೆ ಪ

ಮಂಗಲ ಪಾಡಿ ಭವಹಿಂಗಿದ ಮಹಿಮರ
ಸಂಗ ಬಯಸಿ ಕೃಪಾಂಗ ನರಸಿಂಗಗೆ ಅ.ಪ

ಮಂಗಲ ಪಾಡಿದ ಗೋಪಿಯ
ರಂಗನೆಯರಿಗೊಲಿದ
ಮಂಗಲಪಾಡಿ ನರ ಸಂಗರ ಗೆಲಿದದ್ದು ಸು
ಮಂಗಲೆ ದ್ರೌಪದಿ ಕೇಳಿ ಅಂಗಜಜನಕಗೆ ೧

ಮಂಗಲ ಪಾಡಿದ ಧ್ರುವರಾಜ
ಪಿಂಗಲ ಸುಖ ಪಡೆದ
ಮಂಗಲ ಪಾಡಿ ನರ ಸಂಗರ ಗೆಲಿದದ್ದು
ಶೃಂಗಾರದಿಂ ಕೇಳಿ ಮಂಗಲಮೂರ್ತಿಗೆ ೨

ಮಂಗಲಂ ಕೇಶವಗೆ ಜಯ ಜಯ
ಮಂಗಲಂ ಮಾಧವಗೆ
ಮಂಗಲಂ ಜಯ ಸುರಗಂಗೆ ಪಡೆದವನಿಗೆ
ಮಂಗಲಂ ವರ ಶ್ರೀರಾಮ ಪ್ರಭುವರನಿಗೆ ೩

೭೭೪

ಸಾಗರನಿಲಯನೆ ಬಾಗಿಬೇಡುವೆನಯ್ಯ
ಬೇಗನೆ ಏಳಿನ್ನು ಎಷ್ಟು ಮಲಗುವಿಯೋ ಪ

ಜಾಗರಾಗಿರಿ ಎಂದು ಕೂಗಿತು ಕೋಳಿಯು
ಪೋಗಿರ್ದ ವೇದ ತಂದು ಸಾಗಿಸು ಶಿಷ್ಟೇಳೋ ಅ.ಪ

ನಿಷ್ಠಭಕ್ತರು ಮಿಂದು ಉಟ್ಟುಮಡಿವಸ್ತ್ರಗಳ
ನಿಷ್ಠೆಯಿಂ ತವಪಾದ ಮುಟ್ಟಿಭಜಿಸುವರು
ಇಷ್ಟದಾಯಕರವರ ಇಷ್ಟಗಳ ಕೃಪೆಯಿಂದ
ಕೊಟ್ಟು ಪಾಲಿಸು ಬೇಗ ತಟ್ಟನೇಳಯ್ಯ ೧

ಘನ ಭೃಗುಗಾರ್ಗೇಯರು ಸನಕಾದಿ ಸನಂದ
ರನುಪಮ ಸಪ್ತಋಷಿ ಮುನಿ ನಾರದಾದಿಗಳು
ಘನಭಕ್ತಿಯಿಂ ಬಂದು ಮಣಿದು ಭಜಿಸುತಲಿಹ್ಯರು
ಕನಿಕರದಿಂ ನೋಡುವರ ಕರುಣಿಸೇಳಯ್ಯ ೨

ದುರುಳದನುಜರ ಪ್ರೀತಿಗೆ ಹರಸುರರು ಬೇಸತ್ತು
ತರತರನೆ ನಡುಗುತ ನಿರುತದಿಂ ನಿಮ್ಮ
ಚರಣಕ್ಕೆ ಮರೆಬಿದ್ದು ಪರಿಪರಿಯಿಂ ಸ್ಮರಿಸುವರು
ಕರುಣಾಳು ಮೊರೆಕೇಳಿ ಪರಿಪಾಲಿಸೇಳು ೩

ನಿರುಪಮ ನಿರ್ಗುಣ ನಿರಾಮಯ ನಿರ್ಲೇಪ
ಶರಣಜನರಾಲಾಪ ಕರುಣದಾಲಿಸಿ ಭೂಪ
ನರಲೋಕದವತರಿಸಿ ದುರುಳರ್ಹಾವಳಿ ಮುರಿದು
ಧರೆಯ ಭಾರವನಿಳುಹಿ ಪರಿಶುದ್ಧ ಮಾಡೇಳೊ ೪

ಮುನಿಯಾಗ ಪೂರೈಸಿ ವನಿತೆಯ ಶಾಪವನು
ಕನಿಕರದಿ ಪರಿಹರಿಸಿ ಇನಕೋಟಿತೇಜ
ಜನಕರಾಯನ ಪುರಕೆ ಮುನಿಯೊಡನೆ ಪೋಗಿ ಶಿವ
ಧನುವನು ಮುರಿದು ಸದ್ಗುಣಿಯಳನು ಕೂಡೇಳೊ ೫

ಕೊಟ್ಟ ಪಿತನೊಚನವ ಮುಟ್ಟಿಸುವ ನೆವದಿಂದ
ಇಷ್ಟಸತಿ ತಮ್ಮನಿಂದಟ್ಟಹಾಸದಿ ವನಕೆ
ತಟ್ಟನೆ ಪೋಗಿ ಆ ದುಷ್ಟಯಳ ಮೊಲೆಮೂಗು
ಕೊಟ್ಟುಖಡ್ಗಕೆ ಬಲಿ ಸೃಷ್ಟಿಪೊರೆ ಏಳು ೬

ಕೃತ್ರಿಮಳ ದುಷ್ಕೃತಿಗೆ ಅತ್ಯಧಿಕ ವ್ಯಥೆಬಡುವ
ಯತಿಗಣದ ಭೀತಿಯನು ಅತಿತೀವ್ರ ಕಳೆದು
ಪತಿತ ನಿಮ್ಮಯ ಪಾದ ಹಿತದ ದರ್ಶನವಿತ್ತು
ಕೃತಕೃತ್ಯರೆಂದೆನಿಸಿ ಗತಿಯನೀಡೇಳೊ ೭

ನೂತನದ ಮೃಗ ಕೊಂದು ಸೀತೆಯ ಛಾಯವನು
ಪಾತಕನ ಪುರಕಟ್ಟಿ ಆತುರದಿಂ ಪೋಗಿ
ದೂತ ಹನಮಂತನಿಗೆ ಪ್ರೀತಿದರ್ಶನವಿತ್ತು
ನೀತಿಯಿಂ ಸುಗ್ರೀವನ ಸತಿಯ ಕೂಡಿಸೇಳ್ಳೆ ೮

ನೀಗದ ಆ ಮಹ ಸಾಗರಕೆ ಸೇತುವೆಯ
ಬೇಗನೆ ಕಟ್ಟಿಸಿ ಜಾಗು ಮಾಡದಲೆ
ರಾಘವನೆ ಸುರಯತಿ ಯೋಗಿ ಮಹ ಮಹಿಮರ ದು
ರ್ಭೋಗದ ಬಲೆಯನ್ನು ನೀಗಿಸೇಳಯ್ಯ ೯

ಚೋರನಿಗೆ ನೀತಿಯನು ಸಾರಿ ಬಂಧನದೊಳು
ಸೇರಿಬಂದಿರುವ ಅಪಾರಭಕುತನಿಗೆ
ಧೀರ ಕರುಣಿಸಿ ಪಟ್ಟ ವಾರಿಧಿಯ ತಟಹಾಯ್ದು
ಮೀರಿ ಮೆರೆಯುವ ಲಂಕಾಪುರವ ಮುತ್ತೇಳ್ಳೆ ೧೦

ಅತಿದುರುಳ ಕುಂಭಕರ್ಣತಿಕಾಯರುಧಿರಿಂದ್ರ
ಜಿತು ಹತ್ತು ತಲೆಯವನ ಅತಿಭರದಿ ಸವರಿ
ಮಿತಿಯಿಲ್ಲದವನ ಹತಗೈದು ಅತಿಬಲವ
ಸತತ ಪ್ರೀತಿಲಿ ನಿಖಿಲಿಕ್ಷಿತಿ ಪಾಲಿಸೇಳ್ಳೆ ೧೧

ಛಾಯಾ ಸೀತೆಯ ತಂದು ಪಾತಕನೊಳ್ ಬಿಟ್ಟು ನಿಜ
ದೇವಿ ಜಾನಕಿಯನುಪಾಯದಿಂ ಕೈಕೊಂಡು
ಜೀಯ ಬೇಗಯೋಧ್ಯ ದಿವ್ಯಪಟ್ಟವನೇರು
ಭಾವಭಕ್ತರ ಪಿಡಿದು ಜೀವದಾಳೇಳೊ ೧೨

ನಿತ್ಯ ನಿರ್ಮಲನೆ ನೀನಿತ್ಯವಾಕ್ಯವ ಸ್ಮರಿಸಿ
ಸತ್ಯಶೀಲ ಭರತಪಥವ ನಿರೀಕ್ಷಿಸುತ

ಮತ್ತೆ ನಿಮ್ಮಯ ಪಾದ ಗೊತ್ತು ತಿಳಿಯದಿರಲು
ವ್ಯರ್ಥವಾಗುವೆನಯ್ಯ ತುರ್ತು ಪಾಳಿಸೇಳ್ಳೈ ೧೩

ನೀಲಶ್ಯಾಮನೆ ಲಕ್ಷ್ಮೀಲೋಲ ನಿಮ್ಮಯ ಅಸಮ
ಲೀಲೆ ಬಣ್ಣಿಪರಾರು ಮೂಲೋಕದೊಳಗೆ
ಬಾಲನರಿಕೆಯ ಕೇಳಿ ಕಾಲಕಾಲದಿ ನಿಮ್ಮ
ಮೂಲಮಂತ್ರವ ತಿಳುಹಿ ಪಾಲಿಸೇಳ್ಳೈ ೧೪

ನಮೋ ನಮೋ ಸುಖಧಾಮ ನಮೋ ನಮೋ ನುತಪ್ರೇಮ
ನಮೋ ನಮೋ ಸುಜನಾತ್ಮ ನಮೋ ಭಕ್ತರ ಹಿತನಾಮ
ನಮೋ ಮುಕ್ತಿ ಪಥಸೋಮ ನಮೋ ನಮೋ ಶ್ರೀರಾಮ
ನಮೋಯೆಂದು ಬೇಡುವೆನು ಪ್ರೇಮದೋರೇಳ್ಳೈ ೧೫

೭೭೫

ಹರಸಿರೋ ಹರಸಿರೋ ಮಂಗಳವೆಂದು
ಸರಸಿಜಾಕ್ಷ ಶ್ರೀ ಸಿರಿರಮಣಗೆ ಪ

ಪರಮಪುರುಷಗೆ ಪಾವನಚರಿತಗೆ
ಸ್ಮರಿಪರ ಜೀವಿಗೆ ನರಹರಿ ಕೇಶವಗೆ ಅ.ಪ

ದುರುಳ ದನುಜಕುಲ ಕಾಲನೆನಿಸಿದಗೆ
ನಿರುತ ಶಿಷ್ಟಜನಪರಿಪಾಲನಿಗೆ
ಕರುಣಾಭರಣಗೆ ದುರಿತವಿದೂರಗೆ
ಪರಮವೈಕುಂಠಗೆ ಶರಣು ಶೀಲಗೆ ೧

ಸವೆಯದಸಮ ಸುಲೀಲಜಾಲನಿಗೆ
ದಿವಕೋಟಿತೇಜೋಮಯ ಸುಂದರಮೂರ್ತಿಗೆ
ಭವಭಯಹರಣಗೆ ಶಿವನುತಚರಿತಗೆ
ರವಿಕುಲೋದ್ಧಾರಗೆ ಭುವಿವರಪತೀತಗೆ ೨

ನಿಖಿಲ ಸುಖಾಸ್ಪದ ಭಕುತಾಭಿಮಾನಿಗೆ
ಅಖಿಲವ್ಯಾಪಕ ಮಹ ಸುಜನಾಂತರಂಗಗೆ
ಸಕಲಗುಣಾತ್ಮಗೆ ಲಕುಮಿಪ್ರಿಯಗೆ
ಮುಕುತಿಸೋಮಗೆ ಶ್ರೀಕರ ರಾಮಗೆ ೩

XI. ವಿಶೇಷ ಸಂದರ್ಭದ ಕೀರ್ತನೆ

೭೭೬

(ಬರಗಾಲದ ಬವಣೆಕುರಿತು)

ತಲ್ಲಣಿಪುದು ಹರಿಯೆ ಮಳೆಯಿಲ್ಲದೀ ಭುವನ
ಝುಲ್ಲ ಬಿಡಿಸು ಜಗದ ತೆರೆದು ಕೃಪಾನಯನ ಪ

ಪಶುಪಕ್ಷಿಹಸುಗಳು ತುಸುವುದಕ ಸಿಗದಾಗಿ
ತೃಷೆಯಿಂದ ದೆಸೆಗೆಟ್ಟು ಬಸವಳಿದು ಬಳಲುವುದು
ಸಸಿಕುಂದಿ ಕುಸಿಬಿದ್ದು ಮಸಿಮಣ್ಣು ಗೂಡುವುವು
ಉಸಿರಲಳವೆ ಆಯ್ಯಾ ವಸುಧೆಯ ಪರಿತಾಪ ೧

ಕೆರೆಬಾವಿ ಬತ್ತಿದವು ಹರಿಗಡಿದವ್ವಳ್ಳಕೊಳ್ಳ
ಒರಲುವರು ಪಥಿಕರು ದೊರೆಯದಿನಿತು ಜಲವು
ಬಿರಿಯಾಯ್ತು ಧರೆ ಜೀವಿಗಳ್ಹರಣದಿಂದಿರುವುದು
ಮರೆಯಾಗದಣುಗರ ಮೊರೆಕೇಳು ಕರುಣಿ ೨

ಬಡವರು ಪ್ರಾಣಕರದ್ಹಿಡಿದು ಬೇಡಲು ದಯದಿ
ಕೊಡರೊಂದು ಹಿಡಿ ಧಾನ್ಯ ಒಡನೆ ಇದ್ದವರು
ಕೊಡಕೊಂಬುದೆಲ್ಲವು ತಡೆದು ನಿಂತಿತು ಜೀಯಾ
ಬಡವರ ಬೆಂಬಲನೆ ತಡೆಯದೆ ಮಾಡೊ ೩

ಮಳೆಯಿಲ್ಲದಿಳೆಯೆಲ್ಲ ಕಳವಳಗೊಳುವುದು
ತಿಳಿದು ನಿರ್ದಯನಾಗ್ವುದೊಳಿತೇನು ದೇವ
ಚಳಿಮಳೆಬೇಸಿಗೆರಳಿಗೆ ತ್ರಿಕಾಲಕೊಟ್ಟು
ಸಲಹುವ ನಿನ್ನಾಟ ನಿಲಿಸುವರೇ ತಂದೆ ೪

ಜಗಸೂತ್ರ ನೀನೆಂದು ಮಿಗಿಲಾದ ತವ ಬಿರುದು
ನಿಗಮಾಗಮಗಲದೆ ಪೊಗಳುತಲಿವೆ
ಜಗದಘವ ಗಣಿಸದೆ ಅಘನಾಶ ಮಳೆಸುರಿಸು
ಬಗೆಗೊಂಡು ಸಲಹಯ್ಯ ಜಗದೀಶ ಶ್ರೀರಾಮ ೫

೭೭೭

(ಶರಣ ಬಸವಣ್ಣನವರನ್ನು ಕುರಿತು)

ವಸುಧೆಯೊಳಗಿಳಿದಸಮ ಮಹಿಮೆಗ
ಳೆಸೆದ ಪ್ರಮಥಾದಿ ನಾಯಕ ಪ

ಶಿಶುವುಯೆಂದೆನ್ನನೊಸೆದು ಸಲಹೈ
ಬಸವ ಮುಕ್ತಿಪ್ರದಾಯಕ ಅ.ಪ

ವೀರಶೈವದ ತಾರತಮ್ಯವ ಧಾರುಣಿಯೊಳು ಬೋಧಿಸಿ
ಸಾರ ಧರೆಯನುದ್ಧಾರಮಾಡಿದ ಬಸವ ಮುಕ್ತಿಪ್ರದಾಯಕ ೧

ಪರಮ ಅಷ್ಟಾವರಣ ಧುರೀಣಾಗಿ ಶರಣಗಣಮಂ ಕೂಡಿಸಿ
ಪರಮವೈಭವ ಮೆರೆದಿ ಕಲ್ಯಾಣಬಸವ ಮುಕ್ತಿಪ್ರದಾಯಕ ೨

ಅಂಗಮೂರನು ಭಂಗಿಸಿ ನಿಜ ಸಂಗನೊಳಗೈಕ್ಯನಿಸಿದ
ಮಂಗಳಾಂಗ ಗುರುಲಿಂಗ ಜಂಗಮ ಬಸವ ಮುಕ್ತಿಪ್ರದಾಯಕ ೩

ಅಧಮ ಕುಹುಕರ ಮದ ಸಂಹರಿಸಿ ಸದಮಲ ಸದ್ಬೋಧಕ
ಸುದಯ ಎನ್ನೊಳು ಉದಯನಾಗೆಲೊ
ಬಸವ ಮುಕ್ತಿಪ್ರದಾಯಕ ೪

ಗೂಢ ನಿಮ್ಮಯ ಗಾಢ ಮಹಿಮೆ ಕೊಂಡಾಡಿ
ಪಾಡಿ ಬೇಡುವೆ
ನೋಡಿ ದಯದೆನ್ನ ಕೇಡು ತಪ್ಪಿಸು ಬಸವ
ಮುಕ್ತಿಪ್ರದಾಯಕ ೫

ಆದಿಗಾದಿ ಅನಾದಿ ನಿರುಪಾದಿ ನಾದಕಲಾಭರಿತನೇ
ವೇದ ವೇದಾಂತ ಸ್ವಾದ ಬೋಧಿಸು ಬಸವ ಮುಕ್ತಿಪ್ರದಾಯಕ ೬

ಭವವಿಮೋಚನ ಭವರೋಗ್ವೈದ್ಯನೆ ಜವನ
ಭೀತಿಯ ಗೆಲಿಸಯ್ಯ
ಭುವನ ಪಾಲಯ ಶಿವನ ಅವತಾರ ಬಸವ ಮುಕ್ತಿಪ್ರದಾಯಕ ೭

ಕಾಕುಬವಣೆಯ ಸಾಕುಮಾಡಿನ್ನು ಜೋಕೆಮಾಡೆನ್ನಭವನೇ
ಲೋಕವಂದಿತ ಲೋಕಕಲ್ಯಾಣ ಬಸವ ಮುಕ್ತಿಪ್ರದಾಯಕ ೮

ಸತ್ಯ ಶ್ರೀರಾಮಮಿತ್ರಮೃಡನಂ ಪೊತ್ತ ಅದ್ಭುತತ್ರಾಣನೆ
ಭಕ್ತ ನಾನೇಲೋ ಮುಕ್ತಿ ಪಾಲಿಸು ಬಸವ ಮುಕ್ತಿಪ್ರದಾಯಕ ೯

ಅನುಬಂಧಗಳು

೧. ಕಠಿಣಶಬ್ದಗಳ ಅರ್ಥ

೨. ಟಿಪ್ಪಣಿಗಳು

೩. ದೇವತೆ, ಯತಿ, ದಾಸ ಸ್ಮರಣೆ

೪. ಕೀರ್ತನೆಗಳ ಅಕಾರಾದಿ

ಅನುಬಂಧ–೧

ಕಠಿಣಶಬ್ದಗಳ ಅರ್ಥ

ಅ

ಅಗಜೆ – ಪಾರ್ವತಿ
ಅಗಮ್ಯ – ಬುದ್ಧಿಗೆಟುಕದ
ಅದಟು – ಪರಾಕ್ರಮ
ಅನುಮೇಷ–ಹಮೇಶ – ಸದಾಕಾಲ
ಅಮೇಧ್ಯ – ತಿನ್ನಬಾರದು, ಮಲ
ಅರ್ಣವ – ಸಮುದ್ರ
ಅಲಬು – ಒಂದು ಜಾತಿಯ ಹುಲ್ಲು
ಅಹಿ – ಸರ್ಪ
ಅಳಕ – ಕೂದಲು
ಅಳುಕಿಸು – ಅಳಿಸು, ಇಲ್ಲವಾಗಿಸು
ಅಂಬುಜಾಸನ – ಬ್ರಹ್ಮ
ಅಂಬುಧಿ – ಸಮುದ್ರ

ಆ

ಆದಿ – ಮೊದಲು
ಆಯತ – ಅಗಲವಾದ
ಆರಭಾರ – ಆಡಳಿತ
ಆರುನಾಲ್ಕುಭುಜ– ದಶಭುಜ (ಈಶ್ವರ)
ಆರುನಾಲ್ಕುಶಿರ – ದಶಶಿರ (ರಾವಣ)
ಆರೈ – ಕಾಪಾಡು
ಆಲ್ಪರಿ – ಅಂಗಲಾಚಿಬೇಡು
ಆವಳಿ – ಸಮೂಹ

ಇ

ಇಕ್ಷುಜ – ಮನ್ಮಥ
ಇನ – ಸೂರ್ಯ
ಇರಶಿಲ – ಸಂದು
ಇಂಬು – ಆಶ್ರಯ

ಈ

ಈಡು – ಸಮಾನ
ಈಷಣ – ಆಸೆ, ಮೋಹ

ಉ

ಉಚ್ಛಿಷ್ಟ – ಎಂಜಲು
ಉಡುಮಂಡಲವರ – ಚಂದ್ರ
ಉದಧಿ – ಸಮುದ್ರ
ಉದ್ದರಿ – ಸಾಲ
ಉರು – ಹೆಚ್ಚಾದ
ಉಂಚ – ಬೇಡಿಪಡೆಯುವ

ಎ

ಎಡರು – ತೊಂದರೆ
ಎರಪು – ದೂರವಾಗು

ಎಳಸಿತು - ಬಯಸಿತು, ಯೋಚಿಸಿತು
ಎಂಬೆರಡುವಾಯು - ಪ್ರಾಣಾದಿ ಹತ್ತುವಾಯು

ಏ

ಏಸು - ಎಷ್ಟು

ಐ

ಐದುಒಂದು ಮುಖದವ - ಷಣ್ಮುಖ
ಐದುಬಾಣ - ಮನ್ಮಥ

ಒ

ಒಡಲು - ಶರೀರ
ಒನಪು - ಬಿನ್ನಾಣ
ಒಸರು - ಸೋರು
ಒಸೆ - ಪ್ರೀತಿ

ಕ

ಕಕ್ಕುಲಾತಿ - ಪ್ರೀತಿ
ಕಡತಿನಿಂ - ಕಾರಾರುವಾಕ್ಕಾಗಿ
ಕಣ್ಣಿಲಿ - ಕಣ್ಣಿಲ್ಲದವ
ಕಲಂಕ - ಅಪವಾದ, ದೋಷ
ಕಾಯಜ - ಮನ್ಮಥ
ಕಾರ್ಗಾಲ - ಮಳೆಗಾಲ
ಕಾಲತ್ರಯ - (ಭೂತ, ವರ್ತಮಾನ, ಭವಿಷ್ಯತ್) ಮೂರು ಕಾಲಗಳು
ಕಾಸಾರ - ಕೊಳ, ಸರೋವರ
ಕಿಟ್ಟ - ಕೊಳೆ
ಕೀಲಿ - ಬೀಗದಕೈ
ಕುಷಿ - ಹೊಟ್ಟೆ
ಕುಚ್ಛೀತ - ಅಲ್ಪಹೀನ
ಕುಟಿಲ - ಮೋಸ
ಕುಠಾರ - ಕೊಡಲಿ
ಕುಣಿ - ಗುಂಡಿ, ಹಳ್ಳ
ಕುತ್ತು - ಕಷ್ಟ
ಕುನ್ನಿ - ನಾಯಿಮರಿ
ಕುರುಹು - ಗುರುತು
ಕುಲಿಶ - ವಜ್ರಾಯುಧ
ಕೂಪ - ಹರಿತವಾದಬಾಣ
ಕೈವಲ್ಯಪದ - ಮೋಕ್ಷ
ಕೋಳು - ಪೆಟ್ಟು, ಹೊಡೆತ
ಕೌಪೀನ - ಲಂಗೋಟಿ
ಕಂಟಿ - ಮುಳ್ಳಿನಿಂದ ಕೂಡಿದ ಕಡ್ಡಿ
ಕಂತು - ಮನ್ಮಥ
ಕುಂಭಿಣಿ - ಭೂಮಿ
ಕುಂಭೀಪಾಕ - ನರಕದಲ್ಲಿ ಒಂದು ಬಗೆ
ಕೊಂಡ - ಕುಳಿ, ಹಳ್ಳ

ಖ

ಖಗ - ಪಕ್ಷಿ
ಖಗವರ - ಗರುಡ
ಖರೆ - ನಿಜ, ಸತ್ಯ
ಖಳ _ ದುಷ್ಟ
ಖ್ಯಾಲ್ - ಖಯಾಲ್-
ಖುಲ್ಲ - ದುಷ್ಟ ನೀಚ
ಖೂನ - ಪರಿಚಯ
ಖೊಟ್ಟಿ - ಕೃತ್ರಿಮ-ಕೆಟ್ಟ
ಖೋಡಿ - ದರಿದ್ರ (ರಾಯಚೂರು ಭಾಗದಲ್ಲಿ ಪ್ರೀತಿಯಿಂದ ಬೈಯುವ ಪದ)

ಗ

ಗಡಗಡ - ಬೇಗನೆ
ಗನ್ನಗತಕ - ಮೋಸ, ವಂಚನೆ
ಗೂಗಿ - ಗೂಬೆ
ಗೋಣು _ ಕುತ್ತಿಗೆ
ಗೋಪಾಳ - ಭಿಕ್ಷಾಪಾತ್ರೆ,
ಗುಂಡಿಗೆ -ಎದೆ, ಧೈರ್ಯ
ಗುಂಭ - ಆಳ, ಗುಟ್ಟು

ಘ

ಘಟ - ಗಡಿಗೆ, ಮಡಿಕೆ
ಘಳಿಲನೆ - ಬೇಗನೆ
ಘಾಸಿ - ತೊಂದರೆ

ಚ

ಚಾಯಗಾರ - ಆಸೆಗಾರ
ಚಾರು - ಮನೋಹರ
ಚಿಂತಾಯಕ - ಭಕ್ತಚಿಂತಕ

ಛ

ಛಿಂದಿಸು -ಚೂರುಚೂರುಮಾಡು

ಜ

ಜಡಜ - ತಾವರೆ
ಜಡಧಿ - ಸಮುದ್ರ
ಜಡರು - ಜಾಡ್ಯ
ಜಮ್ಮನೆ - ಜಮಾಯಿಸು, ಕೂಡಿಸು
ಜರ - ಸ್ವಲ್ಪ
ಜರಾ - ಮುಪ್ಪು
ಜಳಕ - ಸ್ನಾನ
ಜಾಗರ - ಜಾಗರಣೆ, ಎಚ್ಚರ
ಜೇಕು - ಹುಲ್ಲು

ಝ

ಝಲ್ಲ - ಭಯ
ಝಾಟ - ಸುಳ್ಳು

ಟ

ಟೊಳ್ಳು - ಹುರಳಿಲ್ಲದ

ಡ

ಡಬ್ಬು - ಒಣಹೆಮ್ಮೆ
ಡುರುಕಿ - ಗುಟುರು
ಡಂಕ - ಚರ್ಮವಾದ್ಯ
ಡೊಂಬೆ - ಗುಲ್ಲು

ತ

ತತಿ - ಸಮೂಹ
ತಸ್ಕರ - ಕಳ್ಳ
ತಳ್ಳಿ - ಉಸಾಬರಿ, ತಂಟೆ
ತಾಜಾ - ಹೊಸ, ಶುದ್ಧವಾದ
ತ್ರಾಣ - ಶಕ್ತಿ
ತಿರೆ - ಬಿಕ್ಷೆ
ತ್ರಿಣಯ - ಈಶ್ವರ
ತಂತು - ದಾರ
ತಿಂಡಿ - ನವೆ, ತುರಿಕೆ

ದ

ದಡ್ಡು - ಜಿಡ್ಡು
ದಸಕು - ಹೊಟ್ಟು
ದಾರು - ಯಾರು
ದುಗ್ಗಾಣಿ - ಎರಡುಕಾಸು

ದ್ರುಮ - ಮರ
ದಬ್ಬೆ - ಹೊಡೆತ
ದೇ - ಕೊಡು
ದಂದುಗ - ತೊಂದರೆ

ಧ

ಧರೆಮೂರು - ಸ್ವರ್ಗ, ಮರ್ತ್ಯ, ಪಾತಾಳ
ಧುರ - ಯುದ್ಧ
ಧುರೀಣ - ನಾಯಕ
ಧೃತಿ - ತೃಪ್ತಿ, ಧೈರ್ಯ

ನ

ನಗ - ಬೆಟ್ಟ
ನತ - ನಮಸ್ಕರಿಸಿದ
ನದರು - ಕಣ್ಣುಬೀಳು, ದೃಷ್ಟಿಯಾಗು
ನಾಗ - ಆನೆ,. ಸರ್ಪ
ನಾಗಾರಿ - ಗರುಡ
ನಾಚಗೈದರ್‍ಯೆ - ನಾಟ್ಯವಾಡಿದರು
ನಿತ್ತರಿಸು - ತಡೆದುಕೊಳ್ಳು, ಸಹಿಸಿಕೊಳ್ಳು
ನೀರಡಿಸು - ಬಾಯಾರು

ಪ

ಪತನ - ಬೀಳು
ಪದುಳ - ಕ್ಷೇಮ
ಪರ್ಯಂಕ - ಮಂಚ
ಪರಿಭವ - ತಿರಸ್ಕಾರ
ಪರುಷ - ಸ್ಪರ್ಶಮಣಿ
ಪಾರ - ಅಪಾರ
ಪಾಲಬಾಲೆ - ಲಕ್ಷ್ಮಿ
ಪಾಸೆ - ಬಲೆ
ಪೇಡಿಹೊಡೆ - ಅಲೆದಾಡು
ಪೋರ - ಬಾಲಕ
ಪಿಂಗಟದಿಂದ - ಹಿಂದಿನಿಂದ

ಫ

ಫಳ - ಕಾಲದ ಒಂದು ಪ್ರಮಾಣ
ಫಾಲನೇತ್ರ - ಹಣೆಯಲ್ಲಿ ಕಣ್ಣುಳ್ಳವ, ಶಿವ

ಬ

ಬದುವು - ಹೊಲದ ಅಂಚು
ಬನ್ನ - ಕಷ್ಟ ತೊಂದರೆ
ಬವಣೆ - ಕಷ್ಟ, ತೊಂದರೆ
ಬಸವಳಿ - ಆಯಾಸ
ಬಾಣಾರಿ - ಶ್ರೀಹರಿ
ಬಿನಗು - ಅಲ್ಪ, ಹೀನ
ಬಿಸಿಲಿನ ಪಾರಿ - ಮರೀಚಿಕೆ
ಬೀಳು - ಹಾಳು ಬಿಡುವದು
ಬುವಿ - ಭೂಮಿ
ಬೇನೆ - ರೋಗ
ಬಾಂದು - ಕಟ್ಟು

ಭ

ಭವ - ಹುಟ್ಟು, ಸಂಸಾರ
ಭಾವಜ - ಮನ್ಮಥ
ಭಾಸುರ - ಹೊಳೆಯುವ
ಭಿಡೆ - ದಾಕ್ಷಿಣ್ಯ
ಭೌಮ್ಯ - ಭೂಮಿಗೆ ಸಂಬಂಧಿಸಿದ
ಭಂಗಿಸು - ನಾಶಮಾಡು, ಸೋಲಿಸು

ಭಾಂಡೆ - ಪಾತ್ರೆ, ಸಾಮಾನು

ಮ

ಮಜ್ಜೆ - ಕೊಬ್ಬು
ಮರಗಿ - ಮರಗಮ್ಮ (ಜಾನಪದ ದೇವತೆ)
ಮಸಣಿಸದೆ - ಕಳೆಗುಂದಿಸದೆ
ಮಸ್ತಿ - ಅಮಲು, ಸೊಕ್ಕು
ಮಳ್ಳ - ಹುಚ್ಚ
ಮಷಕ - ಸೊಣ
ಮಾಜದೆ - ಮರೆಮಾಚದೆ
ಮಾಣವ - ಬಾಲಕ
ಮಾಫೆ - ಕ್ಷಮೆ
ಮಾಯಮತ - ಮಧ್ವಮತ
ಮಿಡುಕು - ಪೇಚಾಡು

ಯ

ಯಾನ - ವಾಹನ, ಸಂಚಾರ

ರ

ರಸನೆ -ನಾಲಗೆ
ರಾಯಿ - ಒಪ್ಪಂದ
ರಿಸಿ - ಋಷಿ
ರೂಢಿ - ಭೂಮಿ

ಲ

ಲತ್ತೆ - ಒದೆ, ಏಟು
ಲವ - ಕಾಲದ ಒಂದು ಪ್ರಮಾಣ
ಲಾಖಚೌರ್‍ಯಂಸಿ - ಎಂಬತ್ತುನಾಲ್ಕುಲಕ್ಷ
ಲಂಘಿಸಿ - ಹಾರಿ

ವ

ವತ್ತರ - ಒತ್ತಡ, ಬೇಗ
ವನರುಹ - ತಾವರೆ
ವಯ - ಆಯುಸ್ಸು, ವಯಸ್ಸು
ವಾಘ - ಲಗಾಮು
ವಾರಿಧಿ - ಸಮುದ್ರ
ವ್ಯಾಕುಲ - ದು:ಖ
ವ್ಯಾಲ - ಸರ್ಪ
ವಿರಿಂಚಿ - ಬ್ರಹ್ಮ
ವಾಂಛಲ್ಯ - ಆಸೆ

ಶ

ಶರಧಿ - ಸಮುದ್ರ
ಶೂಲಪಾಣಿ - ಈಶ್ವರ
ಶೇಷ - ಸರ್ಪ
ಶೇಷಾರಿ - ಗರುಡ
ಶಂಬರಾರಿ - ಮನ್ಮಥ
ಶುಂಭ - ಮಂಕ, ಹೆಡ್ಡ

ಸ

ಸಟೆ - ಸುಳ್ಳು
ಸದನ - ಮನೆ
ಸಾಟಿ - ಸಮಾನ
ಸಾವಿರಮುಖ - ಆದಿಶೇಷ
ಸುಗುಡಿ - ಹೆಣ್ಣುತನವಿಲ್ಲದವಳು
ಸುಮನಸ - ದೇವತೆ
ಸುಷ್ಯಮಲ - ನಿರ್ಮಲವಾದ ಸೌಂದರ್ಯ
ಸೂಕರ - ಹಂದಿ
ಸೂಳ್ - ಸರದಿ
ಸೋಸಿಲಿಂ - ಸೌಶೀಲ್ಯದಿಂದ
ಸಿಂಧು - ಸಮುದ್ರ

ಸಿಂಧುಶಯನ - ವಿಷ್ಣು

ಹ

ಹಣಿದು - ಹೊಡೆದು
ಹಮ್ಮು (ಅಹಂ)- ಅಹಂಕಾರ
ಹರದಿ - ಸ್ತ್ರೀ
ಹಸಗೆಡಿಸಿ - ವಿಕಾರವಾಗಿಸಿ
ಹಾನಂತ - ಇರುವನಂತೆ
ಹಿಮಜೆ - ಪಾರ್ವತಿ
ಹಿಮ್ಮತ್ - ಧೈರ್ಯ
ಹೈನು - ಹಾಲು
ಹಂತೆಲಿ - ಹತ್ತಿರ
ಹಂದರ - ಗೂಡು

ಕ್ಷ

ಕ್ಷಿತಿ - ಭೂಮಿ
ಕ್ಷಿತಿಸುತೆ - ಸೀತೆ
ಕ್ಷುದ್ರ -ಅಲ್ಪ-ಕೀಳು
ಕ್ಷುಲ್ಲಕ - ಅಲ್ಪ
ಕ್ಷೋಣಿ - ಭೂಮಿ

ಅನುಬಂಧ–೨

ಟಿಪ್ಪಣಿಗಳು

ಮುಖ್ಯ ಸಂಕೇತಗಳ ವಿವರ

ಅ	–	ಅಧ್ಯಾಯ
ಅನು	–	ಅನುಬಂಧ
ಪ	–	ಪಲ್ಲ
ಅ.ಪ	–	ಅನುಪಲ್ಲ
ಉಸುಕ	–	ಉತ್ತರ ದೇಶದ ಬಸವಲಿಂಗ ವಿರಚಿತ ಬಸವೇಶ್ವರ ಪುರಾಣ ಕಥಾಸಾಗರ
ಶಭವಿ	–	ಕರ್ನಾಟಕ ಭಕ್ತ ಬಿಜಯ
ಕೀ	–	ಕೀರ್ತನೆ
ನು	–	ನುಡಿ
ಪುನಾಚೂ	–	ಪುರಾಣ ನಾಮ ಚೂಡಾಮಣಿ
ಪುಭಾಕೋ	–	ಪುರಾಣ ಭಾರತ ದೇಶ
ಶಿಕರ	–	ಶಿವಶರಣ ಕಥಾ ರತ್ನಕೇಶ
ಶ್ರೀನಿ	–	ಶ್ರೀ ವತ್ಸ ನಿಘಂತ್ರ
ಸ್ಕಂ	–	ಸ್ಕಂಧ

ಕೀರ್ತನೆ : ೩ ನುಡಿ:೧

ಹಿಮಸುತೆ ತನಯ ....

ಪರ್ವತರಾಜನ ಮಗಳಾದ ಪಾರ್ವತಿಯ ಮಗ.....

ಕೀರ್ತನೆ : ೫ ನುಡಿ:೧

ಹಿಮಜೆಸುತ.......

(ಕೀ.೩)

ಕೀರ್ತನೆ : ೫ ನುಡಿ:೪

ಗೌರಿಶಂಕರ್ರಿವಾದ ನಿವಾರಿಸಿದ ಮಹಚದುರನೆ

ಷಣ್ಮುಖ, ಗಣಪತಿಗಳ ವಿವಾಹವನ್ನು ಕುರಿತ ವಿವಾದವನ್ನು ಗಣಪತಿ ಪರಿಹರಿಸಿದ ಸಂದರ್ಭ(?).

ಕೀರ್ತನೆ : ೫ ನುಡಿ:೩

ತಾಮಸದಿ ಗಹಗಹಿಸಿದಾ........ಶಾಪವಿತ್ತನೆ:

ಒಮ್ಮೆ ಮೂಷಿಕಾರೂಢನಾದ ಗಣಪತಿಯನ್ನು ಕಂಡು ಚಂದ್ರನು ನಗಲು ಆತನು ಕೋಪದಿಂದ 'ಚೌತಿದಿನ ನಿನ್ನನ್ನ ಕಂಡವರಿಗೆ ಅಪವಾದ ಬರಲಿ ' ಎಂದು ಶಾಪವಿತ್ತನು. ಚಂದ್ರನು ಶಾಪಕ್ಕೆ ಹೆದರಿ ಗಣಪತಿಯನ್ನು ಪ್ರಾರ್ಥಿಸಲು 'ಚೌತಿಯದಿನ ನನ್ನ ವ್ರತವನ್ನು ಮಾಡದವರಿಗೆ ಅಪವಾದವು ತಪ್ಪದೇ ಬರಲಿ ' ಎಂದು ಅನುಗ್ರಹಿಸಿದನು.

ಕೀರ್ತನೆ : ೫ ನುಡಿ:೫

ತ್ರಿಣೆಯರೊಡಗೂಡಿ........ತ್ರಿಣಯರಿಂ ಪೂಜೆಗೊಂಡನೆ:

ಶಂಕರನು ತ್ರಿಪುರನ್ನು ಎದುರಿಸಲು ಹೊರಟಾಗ ಗಣೇಶನ ಪೂಜೆ ಮಾಡದೆ ಹೋದುದರಿಂದ ಅಪಜಯವಾಯಿತೆಂದು ನಾರದರಿಂದ ತಿಳಿದು, ಅನಂತರ ನಾರದರು ಉಪದೇಶಿಸಿದ ಗಣಪತಿಯ ಷಡಕ್ಷರೀಮಂತ್ರವನ್ನು ಒಂದು ನೂರು ವರ್ಷಗಳವರೆಗೆ ಜಪಿಸಿ, ತಪಸ್ಸು ಮಾಡಲು ಗಣಪತಿ ಪ್ರತ್ಯಕ್ಷನಾದ. ಶಿವನು ಅವನನ್ನು ಪೂಜಿಸಿ, ನಮಸ್ಕಾರ ಮಾಡಿ ವರವನ್ನು ಪಡೆದನು.

(ಗಣೇಶ ಪುರಾಣದ ಕಥೆ ಪುಟ–೨೯–೩೦)

ಕೀರ್ತನೆ : ೫ ನುಡಿ:೭

ವರುಷಕೊಂದು ಮಾಸ......ಧುರೀಣನೆ:

ಶಿವನು ಗಣಪತಿಯನ್ನು ಕುರಿತು ಅವನು ಗಜಾನನನಾಗಿ ಗಣಾಧ್ಯಕ್ಷ ಪದವಿಯನ್ನು ಪಡೆದಂದು 'ನೀನು ಭಾದ್ರಪದ ಶುಕ್ಲ ಚತುರ್ಥಿಯ ದಿನ ಚಂದ್ರೋದಯ ಕಾಲದಲ್ಲಿ ಜನಿಸಿಮದರಿಂದ ಇಂದು ಮೊದಲು ನಿನ್ನ ವರ್ಧಂತಿ ಉತ್ಸವವನ್ನು ಜನರು ಗಣೇಶಚತುರ್ಥಿ' ಅಥವಾ 'ಚೌತಿ' ಎಂಬ ಹೆಸರಿನಿಂದ ಆಚರಿಸಲಿ. ಈ ವ್ರತವನ್ನು ಆಚರಿಸತಕ್ಕವರಿಗೆ ನೀನು ಸಕಲ ಶುಭ ಸಂಪತ್ತುಗಳನ್ನು ಅನುಗ್ರಹಿಸು ಎಂದು ಅಶೀರ್ವದಿಸಿದನು.

ಕೀರ್ತನೆ : ೧೧ ನುಡಿ:೧

ಸಿರಿಯರೆಂಟುಮಂದಿ.....:

ಕೃಷ್ಣನ ಅಷ್ಟಮಹಿಷಿಯರು : ಭೀಷ್ಮಕನ ಮಗಳಾದ ರುಕ್ಮಿಣಿ

ಸತ್ರಾಜಿತನ ಮಗಳಾದ – ಸತ್ಯಭಾಮೆ

ನಗ್ನಜಿತನ ಮಗಳಾದ – ನೀಲ(ಸತ್ಯಾ_)

ಶ್ರುತಕೀರ್ತಿಯ ಮಗಳಾದ – ಭದ್ರೆ

ರಾಜಾದಿದೇವರ ಮಗಳು – ಮಿತ್ರವಿಂದೆ

ಸೂರ್ಯನ ಮಗಳು – ಕಾಳಿಂದಿ

ಮದ್ರಾಧಿಪತಿಯ ಮಗಳು – ಲಕ್ಷಣಾ

ಕರಡಿರಾಜ ಜಾಂಬುವಂತನ ಮಗಳು – ಜಾಂಬವತಿ

ಕೀರ್ತನೆ : ೧೩ ನುಡಿ:೩

ಹೊಲೆಯರಮನಯಲ್ಲುಂಡನೆ:

ಶ್ರೀನಿವಾಸನು ತನ್ನ ಪತ್ನಿ ರಮಾದೇವಿಯೊಡನೆ ಭೀಮಕುಲಾಲನ ಮನೆಯಲ್ಲಿ ಭೋಜನ ಮಾಡಿದ ವಿಚಾರ(?)

(ವೆಂಕಟೇಶ್ವರ ಮಹಾತ್ಮ)

ಕೀರ್ತನೆ : ೧೩ ನುಡಿ:೩

"ಪಾತರದವಳಲ್ಲಿಗ್ಹೋದನೆ ತಾ ನೀತಿವಂತನ ಕಟ್ಟ್ಹೊಡಿಸಿದನೆ:"

ವಿಠಲನು ಪುರಂದರದಾಸರ ವೇಷ ತಾಳಿ ಪಂಢರಾಪುರದ ಪ್ರಸಿದ್ಧ ವೇಶ್ಯೆಯೊಬ್ಬಳ ಮನೆಗೆ ಹೋಗಿ ರತ್ನಖಚಿತವಾದ ಕಂಕಣವೊಂದನ್ನು ಆಕೆಗೆ ಕೊಟ್ಟನು. ಮಾರನೆಯ ದಿನ ಇನ್ನೂ ಒಂದು ಕಂಕಣವನ್ನು ತಂದುಕೊಡುವುದಾಗಿ ಮಾತುಕೊಟ್ಟನು. ಇತ್ತ ದೇವಲಾಯದಲ್ಲಿ ಸ್ವಾಮಿಯ ಬಲಗೈಲಿದ್ದ ಕಂಕಣ ಕಣ್ಮರೆಯಾಗಿದ್ದುದನ್ನು ಕಂಡು ಎಲ್ಲಿ ಹುಡುಕಿದರೂ ಅದು ಸಿಗಲಿಲ್ಲ. ಪಾಂಡುರಂಗನ ದರ್ಶನಕ್ಕೆ ಬಂದ ವೇಶ್ಯೆಯ ಕೈಯಲ್ಲಿ ಆ ಕಂಕಣವಿತ್ತು. ಅದನ್ನು ಪುರಂದರದಾಸರು ತನಗೆ ಕೊಟ್ಟಿದ್ದೆಂದು ಆಕೆ ಹೇಳಲು ದಂಡಾಧಿಕಾರಿಯು ನಿರಪರಾಧಿಗಳಾದ ದಾಸರನ್ನು ಕಂಭಕ್ಕೆ ಬಿಗಿದು ಥಳಿಸಿದನು (ಕಭವಿ ಪು. ೨೧೫-೨೧೩)

ಕೀರ್ತನೆ : ೧೪ ನುಡಿ:ಅ.ಪ

ಓರ್ವ ಮಾತೆಯುದರದಿ ಜನಿಸಿ

ಮತ್ತೊಬ್ಬ ಮಾತೆ ಕೈಯಿಂದ ಬೆಳೆದು

ಕೃಷ್ಣನು ದೇವಕಿಯ ಹೊಟ್ಟೆಯಲ್ಲಿ ಹುಟ್ಟಿ. ಗೋಕುಲದಲ್ಲಿ ಯಶೋದೆಯ ಕೈಯಲ್ಲಿ ಬೆಳೆದ ವಿಚಾರ

ಕೀರ್ತನೆ : ೧೪ ನುಡಿ:೧

ಕಾಳಕೂಟ ವಿಷವ ಕುಡಿಸಿದ......

ಕೃಷ್ಣ ರಕ್ಕಸಿ ಪೂತನಿಯನ್ನು ಕೊಂದದ್ದು

ಕೀರ್ತನೆ : ೧೪ ನುಡಿ:೧

ಖೂಳ ಶಕಟನ ಸೀಳಿ ಒಗೆದ :

ಕಂಸಾಸುರನ ಒಬ್ಬ ಸೇವಕ ಶಕಟಾಸುರ. ಇವನು ಬಂಡಿಯಾಕಾರದಿಂದ ಗೋಕುಲವನ್ನು ಹೊಕ್ಕು ಕೃಷ್ಣನಮೇಲೆ ಬೀಳಲು, ಕೃಷ್ಣ ತನ್ನ ಪುಟ್ಟ ಕಾಲಗಳಿಂದ ಇವನನ್ನು ಒದ್ದು ಕೊಂದನು. (ಪು.ಭಾಕೊ ಪು ೫೭೩)

ಕೀರ್ತನೆ : ೧೪ ನುಡಿ:೧

ಧೇನುಕನ ತುಳಿದು:

ಕೃಷ್ಣನ ಪ್ರೇರಣೆಯಂತೆ ಬಲರಾಮನು ಕತ್ತೆಯ ರೂಪದಲ್ಲಿ ಬಂದ ರಾಕ್ಷಸನನ್ನು ತಾಳೆಯ ಮರಕ್ಕೆ ಬಡಿದು ಕೊಂದದ್ದು.

ಕೀರ್ತನೆ : ೧೪ ನುಡಿ:೫

ತನ್ನ ಬಾಯೊಳ್ಬ್ರಹ್ಮಾಂಡ ತೋರಿದ:

ಶ್ರೀಕೃಷ್ಣ ಬಾಲಕನಿದ್ದಾಗ ಮಣ್ಣು ತಿಂದನೆಂದು ಯಶೋದೆ ಸಿಟ್ಟಿನಿಂದ ಬಾಯಿತೆಗೆ ಎಂದು ಗದರಿಸಲು ಕೃಷ್ಣ ತನ್ನ ಪುಟ್ಟ ಬಾಯಿಯಲ್ಲಿ ವಿಶ್ವರೂಪ ದರ್ಶನ ಮಾಡಿಸಿದ ವಿಷಯ

ಕೀರ್ತನೆ : ೧೪ ನುಡಿ:೭

ಪರಿಪರಿಯಲ್ಲಿ ಕಾಡ್ವ ಕೃಷ್ಣನ್ನ.......ಮುಕ್ತ ಮಾಡಿದ:

ಮತ್ತಿಮರಗಳಾಗಿದ್ದ ನಲಕೂಬರ ಮಣಿಗ್ರೀವರ ಶಾಪವಿಮೋಚನೆಯಾದ ಪ್ರಸಂಗ. ಒಮ್ಮೆ ಯಶೋದೆ ತಂಟೆಮಾಡುತ್ತಿದ್ದ ಮಗು ಕೃಷ್ಣನನ್ನು ಹಗ್ಗಹಾಕಿ ಒರಳುಕಲ್ಲಿಗೆ ಕಟ್ಟಿ ಹಾಕಿದಳು. ಕೃಷ್ಣನು ಅದನ್ನೆಳೆದುಕೊಂಡು ಅಂಗಳದಲ್ಲಿದ್ದ ಎರಡು ಮತ್ತಿಯ ಮರಗಳ ನಡುವೆ ನುಸುಳಲು ಆತನ ಸ್ಪರ್ಶದಿಂದ ಆ ಮರಗಳೆರಡೂ ಬಿದ್ದು, ಯಕ್ಷರ ಶಾಪದಿಂದ ಬಿಡುಗಡೆ ಹೊಂದಿದರು (ಪ್ರ.ಭಾಕೊ ಪು ...)

ಕೀರ್ತನೆ : ೧೪ ನುಡಿ:೬

ಪುಂಡತನದಿಂ ಸೊಕ್ಕಿ.........ಸಾರ್ವಭೌಮ:

ರುಕ್ಮನು ತನ್ನ ತಂಗಿ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಟ್ಟು ಮದುವೆ ಮಾಡಬೇಕೆಂದಿರಲು ಅವನೊಡನೆ ಕಾದಿ ರುಕ್ಮಿಣಿಯನ್ನಪಹರಿಸಿಕೊಂಡು ಗೋಕುಲಕ್ಕೆ ಬಂದು ಅವಳನ್ನು ವಿವಾಹವಾದ ಪ್ರಸಂಗ (ಪ್ರಭಾಕೊ.ಪು ೩೨೬)

ಕೀರ್ತನೆ : ೧೪ ನುಡಿ:೮

ನರನಕುದುರೆಯ ವಾಘೆಯನು ಪಿಡಿದು:

ಕೃಷ್ಣ ತನ್ನ ಭಕ್ತನಾದ ಅರ್ಜುನನ ರಥಕ್ಕೆ ಸಾರಥಿಯಾದ ವಿಚಾರ

ಕೀರ್ತನೆ : ೧೫ ನುಡಿ:೪

ಕ್ಷೀರಸಾಗರ ಕನ್ಯವರ:

ಕ್ಷೀರ ಸಮುದ್ರರಾಜ ಮಗಳು ಲಕ್ಷ್ಮಿ. ಅವಳಿಗೆ ವರನಾದವನು ವಿಷ್ಣು

ಕೀರ್ತನೆ : ೧೮ ನುಡಿ:೧೦

ಕಾವದಳ್ಳುರಿ..........ಶೀತಲವೆನಿಸಿತು.

ಸುಧನ್ವನ ಕತೆ. ಹಂಸಧ್ವಜನ ಮಗ ಸುಧನ್ವ ಅರ್ಜುನನು ಬೆಂಗಾವಲಿಗಿ ಬಂದಿದ್ದ ಅಶ್ವಮೇಧಯಾಗದ ಕುದುರೆಯನ್ನು ಕಟ್ಟಿದುದರಿಂದ ಇಬ್ಬರಿಗೂ ಯುದ್ಧ ಕೈಗೂಡಿತು. ಇವನು ಹೊತ್ತಿಗೆ ಸರಿಯಾಗಿ ಯುದ್ಧರಂಗಕ್ಕೆ ಬಾರದುದರಿಂದ ಹಂಸಧ್ವಜನು ಪುರೋಹಿತರಾದ ಶಂಖ-ಲಿಖಿತರ ಸೂಚನೆಯಂತೆ ಮಗನನನ್ನು ಕುದಿಯುವ ಎಣ್ಣೆಕೊಪ್ಪರಿಗೆ ಹಾಕಿದನು. ಸುಧನ್ವ ಪರಮ ಕೃಷ್ಣ ಭಕ್ತನಾದುದರಿಂದ ಕುದಿಯುವ ಎಣ್ಣೆ ಶೀತಲವಾಯಿತು.
(ಪುಭಾಕೋ ಪುಟ. ೬೬)

ಕೀರ್ತನೆ : ೧೯ ನುಡಿ:೪

ದುರುಳ ಭಸ್ಮನಂದು..............ಹರನ ರಕ್ಷಿಸಿದ್ದು:

ಈಶ್ವರನ ವರದಿಂದ ಭಸ್ಮಾಸುರನು ಯಾರ ತಲೆಯ ಮೇಲೆ ಕೈ ಇಟ್ಟರೂ ಅವರು ಸುಟ್ಟು ಭಸ್ಮವಾಗುತ್ತಿದ್ದರು. ಈ ದುಷ್ಟ ವರವನ್ನು ಪಡೆದ ಆ ರಾಕ್ಷಸ ಈಶ್ವರನಿಗೆ ಮೃತ್ಯು ಪ್ರಾಯನಾದ. ಆಗ ಈಶ್ವರ ಹರಿಯನ್ನು ಪ್ರಾರ್ಥಿಸಲು ಹರಿ ಮೋಹಿನೀರೂಪ ತಾಳಿ, ಬಸ್ಮಾಸುರನ ಮನಸ್ಸನ್ನು ಅಕರ್ಷಿಸಿ ಆಚಮನ ಸಂಕಲ್ಪದ ನೆವದಿಂದ ಭಸ್ಮಾಸುರನು ಹಿಂದೆಮುಂದೆ ಆಲೋಚಿಸದೆ ತನ್ನ ಕೈಯನ್ನು ತನ್ನ ತಲೆಯಮೇಲೆಯೇ ಇಟ್ಟುಕೊಂಡು ಸುಟ್ಟು ಬೂದಿಯಾಗುವಂತೆ ಮಾಡಿದನು

ಕೀರ್ತನೆ : ೨೨ ನುಡಿ:೨

ಹರಿಯ ಕಾಯ್ದನ:

ಅಗಸ್ತ್ಯರ ಶಾಪದಿಂದ ಆನೆಯ ಜನ್ಮವನ್ನು ಪಡೆದಿದ್ದ ಇಂದ್ರದ್ಯುಮ್ನನ ಶಾಪ ವಿಮೋಚನೆಯ ಪ್ರಸಂಗ. ಆನೆಯ ಕಾಲನ್ನು ಹಿಡಿದಿದ್ದ ಮೊಸಳೆಯನ್ನು ಶ್ರೀಹರಿ ಚಕ್ರದಿಂದ ಕೊಂದು ಅದನ್ನು ಉದ್ಧರಿಸಿದ ವಿಚಾರ.

(ಭಾ.ಸ್ಕ:೮, ಅ.೭)

ಕೀರ್ತನೆ : ೨೮ ನುಡಿ:೩

ಜನಕ ಜಾಹ್ನವೀ:

ವಾಮನಾವತಾರದಲ್ಲಿ ವಿಷ್ಣು ಭೂಮಿ-ಅಕಾಶಗಳನ್ನು ಅಳೆಯಲು ಅವನ ಪಾದ ಆಕಾಶವನ್ನು ಸ್ಪರ್ಶಿಸಿ, ಸತ್ಯಲೋಕದಲ್ಲಿ ಅದರ ಉಗುರಿನ ಕಾಂತಿ ತೋರಿಬರಲು ಬ್ರಹ್ಮನು ಅದಕ್ಕೆ ನೀರಿನಿಂದ ಅಭಿಷೇಕ ಮಾಡಿದನು. ಆ ನೀರು ಗಂಗೆಯಾಗಿ ಹರಿಯಿತು.

ಕೀರ್ತನೆ:೨೮ ನುಡಿ:೧

ಭೂಮಿಜೆ ಜನಕ:

ಭೂಮಿಯ ಮಗಳು ಸೀತೆ. ಭೂದೇವಿ ಹರಿಯ ಹೆಂಡತಿ. ಹಾಗಾಗಿ ಸೀತೆ ಹರಿಯ ಮಗಳು. ಭೂದೇವಿಯ ಪತಿಯಾದ ಶ್ರೀಹರಿ ರಾಮಾವತಾರದಲ್ಲಿ ಸೀತೆಯನ್ನು ಮದುವೆಯಾಗಿ ಭೂದೇವಿಯ ಅಳಿಯನೆನ್ನಿಸಿಕೊಂಡ.

ಕೀರ್ತನೆ : ೩೩ ನುಡಿ:ಪ

ಪುಂಡಲೀಕೋದ್ಧಾರ:

ಒಮ್ಮೆ ಭಕ್ತ ಪುಂಡಲೀಕನನ್ನು ಪರೀಕ್ಷಿಸಲು ಬಂದ ಶ್ರೀಹರಿಗೆ ಶ್ರದ್ಧೆಯಿಂದ ತಂದೆ ತಾಯಿಗಳ ಸೇವೆಯಲ್ಲಿ ತೊಡಗಿದ ಪುಂಡಲೀಕ ತಾನು ಅವರ ಸೇವೆ ಮುಗಿಸಿ ಬರುವವರೆಗು ನಿಂತಿರಬೇಕೆಂದು ಒಂದು ಇಟ್ಟಿಗೆಯನ್ನು ಅವನತ್ತ ಎಸೆಯಲು, ಹರಿ ಅವನ ಭಕ್ತಿಗೆ ಮೆಚ್ಚಿ ಅವನ ಅಜ್ಞೆಯಂತೆ ಇಟ್ಟಿಗೆಯ, ಮೇಲೆ ನಿಂತು ಅವನನ್ನು ಅನುಗ್ರಹಿಸಿದನಂತೆ. (ತೀಪ್ರ. ಪು ೧೩೧-೧೩೨)

ಕೀರ್ತನೆ : ೩೮ ನುಡಿ ೧

ಶಂಕಸುರನಬಲು ಬಿಂಕ ಮುರಿದ:

ಶಂಭಾಸುರನ ಮಗ ಶಂಖಚೂಡ. ಜೈಗೀಷವ್ಯಮುನಿಯ ಉಪದೇಶದಿಂದ ವಿಷ್ಣು ಕವಚವೆಂಬ ಮಂತ್ರವನ್ನು ಪಡೆದು ದೇವರಾಜ್ಯವನ್ನು ಆಕ್ರಮಿಸಿದ. ಆಗ ದೇವತೆಗಳ ಪ್ರಾರ್ಥನೆಯಂತೆ ವಿಷ್ಣು ಬ್ರಾಹ್ಮಣರೂಪದಿಂದ ಶಂಖಚೂಡನಲ್ಲಿಗೆ ಹೋಗಿ ಅವನಲ್ಲಿದ್ದ ಕವಚವನ್ನಪಹರಸಿ, ಅವನ ಪತ್ನಿ ತುಳಸಿಯ ಪಾತಿವ್ರತ್ಯವನ್ನು ಭಂಗಮಾಡಿ ಅವನ ಬಿಂಕ ಮುರಿದ.

(ಪುನಾಚೂ ಪು ೫೫೨)

ಕೀರ್ತನೆ : ೩೮ ನುಡಿ ೩

ಬಾಲೆರುಡವ ದಕೂಲ......ಮರವನೇರ್ದ:

ಗೋಪಿಯರೆಲ್ಲ ಒಮ್ಮೆ ಯಮುನಾ ನದಿಯಲ್ಲಿ ಜಲಕ್ರೀಡೆಯಾಡಲು ಹೋದಾಗ ತುಂಟ ಕೃಷ್ಣ ಅವರು ದಂಡೆಯ ಮೇಲೆ ಕಳಚಿಟ್ಟಿದ್ದ ವಸ್ತ್ರಗಳೆನ್ನಲ್ಲ ಎತ್ತಿಕೊಂಡು ಬಳಿಯಲ್ಲಿದ್ದ ಕಡಹಾಲದ ಮರವನೇರಿದ ಪ್ರಸಂಗ.

(ಬಾ ಸ್ಕಂ)

ಕೀರ್ತನೆ : ೪೦ ನುಡಿ ೧

ಪನ್ನಂಗಶಾಯಿ:

ಪನ್ನಂಗ ಎಂದರೆ ಹಾವು, ಹಾವನ್ನೆ ಅಂದರೆ ಆದಿಶೇಷನನ್ನೇ ಹಾಸಿಗೆಯಾಗಿ ಮಾಡಿಕೊಂಡಿರುವ ವಿಷ್ಣು.

ಕೀರ್ತನೆ : ೪೨ ನುಡಿ ೨

ಉತ್ತರಿತ್ತರಿ.........ಸ್ತ್ರೀನೆತ್ತಿಸಲಹಿದಗೆ:

ಪೂರ್ವಕತೆ ತಿಳಿಯಲಿಲ್ಲ.

ಕೀರ್ತನೆ ೪೨ : ನುಡಿ ೩

ಮಂಗಲ ಮುನಿಯಿಂದ ....ಶೃಂಗಾರದ್ದಿಡಿದಗೆ:

ಪೂರ್ವಕತೆ ತಿಳಿಯಲಿಲ್ಲ.

ಕೀರ್ತನೆ : ೪೨ ನುಡಿ ೧

ಕುರುಪನನುಜೆಯ...........ತರಿದ ಮಹಿಮಗೆ:

ಕೃಷ್ಣನು ತನ್ನ ಭಕ್ತನಾದ ಅರ್ಜುನನ್ನು ಕಾಪಾಡಲು ಹಗಲಿನಲ್ಲೇ ಸೂರ್ಯನಿಗೆ ಚಕ್ರವನ್ನು ಮರೆಮಾಡಿ ಮಾಯಾಂಧಕಾರವನ್ನು ಕಲ್ಪಿಸಿ, ಸೈಂಧವನನ್ನು ಅರ್ಜುನಿಂದ ಕೊಲ್ಲಿಸಿದ ಪ್ರಸಂಗ. (ಮಹಾಭಾರತ, ದ್ರೋಣಪರ್ವ)

ಕೀರ್ತನೆ : ೪೨ ನುಡಿ ೧

ಕಾಷ್ಟಹಾರನ ಇಷ್ಟಮಿತ್ರನ.........ಮನದಿಷ್ಟವಿತ್ತವಗೆ :

ರಾಮನು ರಾವಣನ ತಲೆಗಳನ್ನು ಕತ್ತರಿಸಿದಾಗ ಅವು ನಗುತ್ತ ಬಂದು ರಾಮನ ಪಾದಗಳ ಮೇಲೆ ಬೀಳುತ್ತಿದ್ದವು. ಅಯೋಧ್ಯೆಯಲ್ಲಿ ತನ್ನ ಪ್ರಜೆಗಳು ನಕ್ಕಾಗಲೆಲ್ಲ ರಾಮನಿಗೆ ಹಿಂದಿನ ದೃಶ್ಯ ನೆನಪಾಗುತ್ತಿದ್ದುರಿಂದ ತನ್ನ ರಾಜ್ಯದಲ್ಲಿ ಯಾರು ನಗಬಾರದೆಂದು ಕಟ್ಟಪ್ಪಣೆ ಮಾಡಿದ. ರಾಜ್ಯದಲ್ಲಿ ಎಲ್ಲ ವಿನೋದ ಪ್ರಸಂಗಗಳೂ ನಿಂತುಹೋದವು. ದೇವತೆಗಳೆಲ್ಲ ಬ್ರಹ್ಮನಿಗೆ ಮೊರೆಯಿಡಲು ಅವನು ಒಂದು ಅಶ್ವತ್ಥ ಮರದಲ್ಲಿ ಅಡಗಿ ಕೂತನು. ಅಲ್ಲಿಗೆ ಒಬ್ಬ ಕಟ್ಟಿಗೆ ಮಾರುವವನು ಬರಲು ಮರ ನಕ್ಕಿತು. ಅದನ್ನು ಕಂಡು ಕಟ್ಟಿಗೆ ಮಾರುವವನೂ ನಕ್ಕ. ಮುಂದೆ ಇವನು ನಗುವುದುದನ್ನು ಕಂಡ ರಾಜದೂತರೂ ಸಭಾಸದರೂ ನಕ್ಕರು ಅವರನ್ನು ಕಂಡ ಶ್ರೀರಾಮನು ನಕ್ಕ. ಈ ನಗುವಿನ ಮೂಲ ತನ್ನ ದಿಟ್ಟ ಪುತ್ರ ಬ್ರಹ್ಮನೆಂದರಿತ ರಾಮ ಬಳಲಿದ ಮನುಷ್ಯರಿಗೆ ಹಾಸ್ಯದ ಪ್ರಯೋಜನವೆಷ್ಟೆಂದರಿತು ತನ್ನ ಆಜ್ಞೆಯನ್ನೂ ಹಿಂತೆಗೆದುಕೊಂಡ. (ಪು.ಭಾ ಕೋ.............)

ಪನ್ನಂಗಶಯನ:

ನೋಡಿ (ಕೀ ೪೦ ನುಡಿ ೧)

ಕೀರ್ತನೆ : ೫೩ ನುಡಿ ೧

ಸಾಗರವ ಮಥಿಸಿ ಪ್ರೇಮದಮೃತ ಸುರರಿಗುಣಬಡಿಸಿ:

ದೇವಾಸುರರು ಅಮೃತಕ್ಕಾಗಿ ಸಮುದ್ರ ಮಥನಮಾಡಿದಾಗ ವಿಷ್ಣು ದೇವತೆಗಳ ಮೇಲಣ ಪ್ರೀತಿಯಿಂದ ಮೋಹಿನೀ ಅವತಾರವನ್ನು ತಾಳಿ ಅವರಿಗೆ ಅಮೃತವನ್ನು ಉಣಬಡಿಸಿದ ವಿಚಾರ.

ಕೀರ್ತನೆ : ೬೩ ನುಡಿ ಅ.ಪ

ಪೊಡವಿ ಈರೇಳನ್ನು.........

ಈರೇಳು ಅಂದರೆ ಹದಿನಾಲ್ಕು, ಹದಿನಾಲ್ಕು ಲೋಕಗಳನ್ನು ಒಡಲಲಿ ಇಟ್ಟುಕೊಂಡವನು ಹರಿ. ಮೇಲಿನ ಏಳು ಲೋಕಗಳು–ಭೂಲೋಕ, ಭುವರ್ಲೋಕ. ಸ್ವಹರ್ಲೋಕ. ಮಹರ್ಲೋಕ, ಜನಲೋಕ. ತಪೋಲೋಕ, ಸತ್ಯಲೋಕ, ಕೆಳಗಿರುವ ಏಳು ಲೋಕಗಳು.ಅತಲ, ವಿತಲ, ಸುತಲ, ಮಹಾತಲ, ತಲಾತಲ, ರಸಾತಲ, ಪಾತಾಲ, ಭಗವಂತ ಈ ಹದಿನಾಲ್ಕು ಲೋಕಗಳಲ್ಲಿ ವ್ಯಾಪ್ತನೆಂಬ ನಂಬಿಕೆ. (ಶ್ರೀನಿ ಪು)

ಕೀರ್ತನೆ : ೬೬ ನುಡಿ ೧

ಈ ಕೀರ್ತನೆಯಲ್ಲಿ ಹರಿಯ ಅವತಾರದ ಕೆಲವು ವರ್ಣನೆಗಳು ಬರುತ್ತವೆ

ನುಡಿ:೧

ಜಲದಿ ಸಂಚರಿಸಿದ – ಮತ್ಸ್ಯ

ಒಳಗೆಳೆದು ಮುದುರಿಕೊಂಡ – ಕೂರ್ಮ

ಬಲಿಯ ಮೆಟ್ಟಿ – ವಾಮನ

ಶಿಲೆಯ ತುಳಿದ – ರಾಮ

ನುಡಿ:೨ ಪೂರ್ಣ ರಾಮಾವತಾರದ ವರ್ಣನೆ

ನುಡಿ:೩,೪,೫ ಕೃಷ್ಣಾವತಾರದ ವರ್ಣನೆ

ನುಡಿ:೫ ಧರೆಯನು ತಿರುವಿ ಕುರುಪನ ಕೆಡಹಿದ:

ಸಂಧಾನಕ್ಕಾಗಿ ಕೃಷ್ಣ, ಪಾಂಡವರ ದೂತನಾಗಿ ದುರ್ಯೋಧನ ಅಸ್ಥಾನ ಪ್ರವೇಶಿಸಿದಾಗ, ಸಭೆಗೆ ಸಭೇ, ಎದ್ದು ನಿಂತು ಕೃಷ್ಣನಿಗೆ ಗೌರವ ಸಲ್ಲಿಸಿದರು, ದುರ್ಯೋಧನನು ಅಹಂಕಾರದಿಂದ ಸಿಂಹಾಸನ ಬಿಟ್ಟು ಏಳುವುದಿಲ್ಲ, ಆಗ ಕೃಷ್ಣ ತನ್ನ ಉಂಗುಷ್ಟದಿಂದ ನೆಲವನ್ನು ಒತ್ತಲು, ದುರ್ಯೋಧನ ಕುಳಿತ ಸಿಂಹಾಸನದ ಕಾಲು ಮುರಿಯುತ್ತದೆ. ಆಗ ದುರ್ಯೋಧನ ಉರುಳುತ್ತಾ ಬಂದು ಕೃಷ್ಣನ ಪಾದದ ಬಳಿ ಬೀಳುತ್ತಾನೆ. (ಮ.ಭಾ ಉದ್ಯೋಗ್ಯ ಪರ್ವ)

ಕೀರ್ತನೆ : ೬೬ ನುಡಿ ೫

ಧುರದಲಿ ನರನ ವರೂಥ ನೆಲಕೊತ್ತಿದ ಪಾದವ:

ಕುರುಕ್ಷೇತ್ರ ಯುದ್ಧ ಕಾಲದಲ್ಲಿ ಕರ್ಣನು ಅರ್ಜುನನ ಮೇಲೆ ಪ್ರಯೋಗಿಸಿದ ಸರ್ಪಾಸ್ತ್ರ ನಿವಾರಣೆಗಾಗಿ ಶ್ರೀಕೃಷ್ಣನು ಅರ್ಜುನನ ರಥವನ್ನು ಒತ್ತಿ ಐದು ಅಂಗುಲ ಕುಗ್ಗುವಂತೆ ಮಾಡಿ ಅರ್ಜುನನ್ನು ರಕ್ಷಿಸಿದ್ದು. (ಪು.ಭಾ.ಕೋ ಪು ೪೫)

ಕೀರ್ತನೆ : ೬೭ ನುಡಿ ೩

ಸಪ್ತ ಋಷಿಗಳು:

ಮರೀಚಿ, ಅತ್ರಿ, ಅಂಗೀರಸ, ಪುಲಸ್ಯ, ಪುಲಹ, ಕ್ರತು, ವಸಿಷ್ಠ ಅಥವಾ

ಕಶ್ಯಪ, ಅತ್ರಿ, ಭಾರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಸಿಷ್ಠ.

ಕೀರ್ತನೆ : ೭೨ ನುಡಿ ೧

ಬಲಿಯ ಕಾಯ್ದನ:

ವಾಮನವತಾರ. ಬಲಿ ಚಕ್ರವರ್ತಿಯಲ್ಲಿಗೆ ವಟು ವೇಷದಿಂದ ಬಂದ ವಿಷ್ಣು ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಕೇಳಿ, ಆ ನೆಪದಲ್ಲಿ ಅವನನ್ನು ಸುತಳಕ್ಕೆ ಮೆಟ್ಟಿದನು. ಆತನ ಭಕ್ತಿಗಾಗಿ ಅವನ ಮನೆ ಬಾಗಿಲನ್ನು ಕಾಯ್ದು ರಕ್ಷಿಸಿದ.

ಕೀರ್ತನೆ : ೭೫ ನುಡಿ ೫

ಮೂರು ಕಳೆಯುವ ನಾನು:

ಹೊನ್ನು, ಹೆಣ್ಣು, ಮಣ್ಣುಗಳ ವ್ಯಾಮೋಹ.

ಆರುಗೆಲಿಸುವ ನಾನು:

ಅರಿಷಡ್ವರ್ಗಗಳು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ.

ಕೀರ್ತನೆ : ೮೪ ನುಡಿ ೧

ಶಂಖಧಾರಣ:

ಪಾಂಚಜನ್ಯವೆಂಬ ಶಂಖವನ್ನು ಧರಿಸಿರುವವನು, ಶ್ರೀಕೃಷ್ಣ

ಕೀರ್ತನೆ : ೪೯ ನುಡಿ ೧

ಜಿಂಕೆಸಂಹರಣ:

ಶ್ರೀಹರಿ ರಾಮಾವತಾರದಲ್ಲಿ ಮಾರೀಚನೆಂಬ ರಾಕ್ಷಸನ ಮಾಯಾರೂಪವಾದ ಜಿಂಕೆಯನ್ನು ಬೆನ್ನಟ್ಟಿಕೊಂದ ವಿಚಾರ.

ಕೀರ್ತನೆ : ೮೯ ನುಡಿ ೩

ಬಾಣಾರಿ:

ಬಾಣ ಕೋಣಿಕಪುರವನ್ನಾಳುತ್ತಿದ್ದ ಒಬ್ಬ ಶಿವಭಕ್ತ. ಇವನ ಮಗಳಾದ ಉಷೆಯನ್ನು ಕೃಷ್ಣನ ಮೊಮ್ಮಗ ಅನಿರುದ್ಧನು ಮದುವೆಯಾದನು. ಅನಿರುದ್ಧನನ್ನು ಸೆರೆಯಲ್ಲಿಟ್ಟಿದ ಬಾಣಾಸುರನ ತೋಳುಗಳನ್ನು ಕೃಷ್ಣ ತನ್ನ ಚಕ್ರದಿಂದ ಕತ್ತರಿಸಿ ಅವನನ್ನು ನೆಲಕ್ಕೆ ಕೆಡವಿದನು. (ಪುಭಾಕೋ ಪು ೩೫೯–೩೯೬)

ಕೀರ್ತನೆ : ೯೩ ನುಡಿ ೨

ತಾಟಕಿ ಪ್ರಾಣಸಂಹರಣ:

ತಾಟಕಿ ಸಾವಿರ ಆನೆಗಳ ಬಲವನ್ನು ಹೊಂದಿದ್ದ ರಾಕ್ಷಸಿ, ಸುಬಾಹು ಮತ್ತು ಮಾರೀಚರು ಈಕೆಯ ಮಕ್ಕಳು. ವಿಶ್ವಾಮಿತ್ರರು ಈ ತಾಯಿ ಮಕ್ಕಳ ಕಾಟವನ್ನು ಸಹಿಸಲಾರದೆ ಅಯೋಧ್ಯೆಗೆ ಹೋಗಿ ರಾಮಲಕ್ಷ್ಮಣರನ್ನು ಕರೆತರಲು, ಸರಯೂ ನದೀತಿರದ ಕಲುಷವನವನ್ನು ದಾಟಿ ಬರುತ್ತಿದ್ದಾಗ ಅಡ್ಡಗಟ್ಟಿದ ಈಕೆಯನ್ನು ರಾಮನು ಕೊಂದ. (ಪುಭಾಕೊ ಪು ೨೪೩-೨೪೪)

ಕೀರ್ತನೆ : ೯೩ ನುಡಿ ೧

ವಾಸುಕಿಗಿರಿ:- ಶೇಷಗಿರಿ

ಕೀರ್ತನೆ : ೯೪ ನುಡಿ ೧

ಸನಕ ಸನಂದನರು:

ಬ್ರಹ್ಮನ ಮಾನಸಪುತ್ರರು, ಇವರು ಯಾವಾಗಲೂ ಕೌಮಾರಾವಸ್ಥೆಯಲ್ಲಿಯೇ ಇತರಕ್ಕವರು, ಮಾಹತಪಸ್ವಿಗಳು; ಜ್ಞಾನಸಂಪನ್ನರು. (ಪು.ನಾ.ಚೂ ಪು ೫೮೪-೫೮೫)

ಕೀರ್ತನೆ : ೯೪ ನುಡಿ ೧

ಮನು:

ಇವರು ವೈವಸ್ವತ ಮೊದಲಾದ ಹದಿನಾಲ್ಕು ಮಂದಿ. ಮನುವೆಂಬುದು ಇಂದ್ರನೆಂಬ ಹಾಗೆ ಪದವಿಯ ಹೆಸರೇ ಹೊರತು ವ್ಯಕ್ತಿಯ ಹೆಸರಲ್ಲ. ಈಗ ನಡೆಯುತ್ತಿರುವುದು ವೈವಸ್ವತ ಮನ್ವಂತರ. ಇದಕ್ಕೂ ಹಿಂದೆ ಸ್ವಾಯಂಭುವ, ಸ್ವಾರೋಚಿಪ, ವಿತ್ತಮ, ತಾಮಸ, ರೈವತ, ಚಾಕ್ಷುಷ ಎಂಬ ಆರು ಮನ್ವಂತರಗಳು ಆಗಿಹೋಗಿದೆ, ಮುಂದೆ ಸಾವರ್ಣಿ, ಭೌತ್ಯ, ರಾಜ್ಯ, ಬ್ರಹ್ಮಸಾವರ್ಣಿ, ರುದ್ರಸಾವರ್ಣಿ, ಮೇರುಸಾವರ್ಣಿ, ದಕ್ಷಸಾವರ್ಣಿ ಎಂಬ ಏಳು ಮನ್ವಂತರಗಳು ಬರಲಿವೆ.

ಕೀರ್ತನೆ : ೧೩೦ ನುಡಿ ೧

'ಬ್ರಹ್ಮನ ತಲೆಯೊಂದ ಕಳೆದಿಟ್ಟು:'

ವಿಷ್ಣುವಿನ ನಾಭಿಕಮಲದಿಂದ ಹುಟ್ಟಿದ ಬ್ರಹ್ಮನಿಗೆ ಪಂಚಮುಖಗಳಿದ್ದು ಶಿವನಿಗಿಂತ ತಾನು ಶ್ರೇಷ್ಠನೆಂಬ ಗರ್ವವು ಇವನಿಗಿತ್ತು. ಶಿವನು ಈತನ ಒಂದು ತಲೆಯನ್ನು ಕತ್ತರಿಸಿ ಚತುರ್ಮುಖನಾಗಿ ಮಾಡಿದನು. ಇದರಿಂದ ಶಿವನಿಗೆ ಬ್ರಹ್ಮಹತ್ಯಾದೋಷವು ಪ್ರಾಪ್ತವಾಗಲು

ಬ್ರಹ್ಮಕಪಾಲವು ಶಿವನ ಹಸ್ತವನ್ನಂಟಿಕೊಂಡಿತು. ಶಿವನು ಕಾಪಾಲಿಕನಾಗಿ ತಿರುಗುತ್ತಾ ಕಾಶೀಕ್ಷೇತ್ರಕ್ಕೆ ಬಂದೊಡನೆ ಬ್ರಹ್ಮಹತ್ಯಾದೋಷವೂ ಹೋಯಿತು; ಕೈಗಂಟಿದ್ದ ಬ್ರಹ್ಮಕಪಾಲವೂ ಕೆಳಗೆ ಬಿತ್ತು. (ಪುಭಾಕೋ ಪು.೪೦೪)

ಕೀರ್ತನೆ : ೧೩೦ ನುಡಿ ೧

' ನಿಗಯಿಟ್ಟಿಂದ್ರನ ಮೈ ಛಿದ್ರ ಮಾಡಿಟ್ಟ '

ಅಭಿಮಾನಿಯಾದ ಮಾಯೆ ಅಹಲ್ಯೆಯಾಗಿ ಇಂದ್ರನನ್ನು ಕಾಡಿ ಅವನು ಸಹಸ್ರಾಕ್ಷನಾಗುವಂತೆ ಗೌತಮರಿಂದ ಶಾಪಕೊಡಿಸಿದ ವಿಚಾರ. (ಪು.ನಾ.ಚೂ ಪು ೪೨)

ಕೀರ್ತನೆ : ೧೩೦ ನುಡಿ ೨

' ಸೆರೆಹಿಡಿದು ತಾರಕನ ಆರೆದಿನದವನಿಂ ಕೊಂದ '

ಕೇವಲ ಆರುದಿನಗಳ ಮಗು ಕಾರ್ತಿಕೇಯ (ಷಣ್ಮುಖ) ತಾರಾಕಾಸುರವನ್ನು ಸಂಹಾರ ಮಾಡಿದ ವಿಚಾರ.

ಕೀರ್ತನೆ : ೧೩೫ ನುಡಿ ೫

ಮೂರರಿಂ ದಾಂಟಿಸಿ:

ಬಾಲ್ಯ, ಯೌವನ, ವೃದ್ಧಾಪ್ಯ. ಅಥವಾ ಜಾಗ್ರತ, ಸ್ವಪ್ನ, ಸುಷುಪ್ತಿ ಈ ಮೂರು ಅವಸ್ಥೆಗಳಿಂದ ಬಿಡುಗಡೆಮಾಡಿ.

ಮೂರರ ಮೋಹ : ಹೆಣ್ಣು, ಹೊನ್ನು, ಮಣ್ಣುಗಳ ವ್ಯಾಮೋಹ

ಮೂರು ನಿನಗರ್ಪಿಸಿ: ತನು, ಮನ, ಧನಗಳನ್ನರ್ಪಿಸಿ

ಕೀರ್ತನೆ : ೧೪೨ ನುಡಿ ೭

ಮೃಕಂಡುಮುನಿಕಂದಗೊಲಿದ:

ಶಿವನು ಮಾರ್ಕಂಡೇಯನಿಗೆ ಅಲ್ಪಾಯು ಕಳೆದು ಕಲ್ಪಾಯುವನ್ನಿತ್ತ. ಮಾರ್ಕಂಡೇಯನು ಭಗವಂತನ ಮಾಯೆವನ್ನು ತೋರುವಂತೆ ವರವನ್ನು ಕೇಳಲು ಭಗವಂತನು ತನ್ನ ಮಾಯೆಯನ್ನು ತೋರಿದ ವಿಚಾರ.

ಕೀರ್ತನೆ : ೧೪೮ ನುಡಿ ೧

ಮೂರು ಕರುಣ:

ವಾಕ್ಕು, ಮನಸ್ಸು, ಶರೀರ

ಕೀರ್ತನೆ : ೧೪೮ ನುಡಿ ೧

ಮೂರು ಗುಣಗಳು:

ಸತ್ವ, ರಜಸ್ಸು, ತಮಸ್ಸು

ಕೀರ್ತನೆ : ೧೫೧ ನುಡಿ ೪

ಮುದಕೃಷ್ಣ ಗಿಡದಡಿಯಸುವ ಬಿಟ್ಟ:

ಶ್ರೀಕೃಷ್ಣನು ಪಾಂಡವರನ್ನು ಕರೆತರಲು ದಾರಕನನ್ನು ಕಳುಹಿಸಿ, ಯೋಗಾಭ್ಯಾಸದಿಂದ ದೇಹತ್ಯಾಗ ಮಾಡಲು ಒಂದು ಮರದ ಅಡಿಯಲ್ಲಿ ಮಲಗಿದ್ದಾಗ ಜರನೆಂಬ ಬೇಡನು ಜಿಂಕೆಂಯುಂಬ ಭ್ರಾಂತಿಯಿಂದ ಕೃಷ್ಣನ ಅಂಗಾಲಿಗೆ ಬಾಣ ಹೊಡೆದನು. (ಪು.ನಾ.ಚೂ. ಪು ೧೪೩)

ಕೀರ್ತನೆ : ೧೫೨ ನುಡಿ ೪

ಬಕ:

ಒಬ್ಬ ರಾಕ್ಷಸ. ಏಕಚಕ್ರನಗರದಲ್ಲಿ ವಾಸವಾಗಿದ್ದ ಅವನಿಗಾಗಿ ಸಿದ್ದಪಡಿಸಿದ್ದ ಒಂದು ಬಂಡಿ ಅನ್ನವನ್ನು ಉಂಡ ಭೀಮ ಬಕನ ಪ್ರಾಣವನ್ನೂ ತೆಗೆದ. (ಪು.ನಾ.ಚೂ ಪು ೪೦೯)

ಕೀರ್ತನೆ : ೧೫೨ ನುಡಿ ೧

ವಿಷದಕಜ್ಜಾಯ............ಬಂದೆಯೊ

ಭೀಮನು ಚಿಕ್ಕವನಾಗಿದ್ದ. ಹಸ್ತಿನಾವನತಿಯಲ್ಲಿದ್ದಾಗ ದುರ್ಯೋಧನನು ಅವನನ್ನು ಕೊಲ್ಲುವ ಸಲುವಾಗಿ ಅವನಿಗೆ ವಿಷದ ಕಜ್ಜಾಯವನ್ನು ತಿನ್ನಿಸಿ, ಗಂಗಾನದಿಯ ಮಡುವಿನಲ್ಲಿ ಹಾಕಿದರೂ ಅವನು ಸಾಯದೆ ಎದ್ದ ಬಂದನು.

(ಮಭಾಕೋ ಪು ೪೨೨)

ಕೀರ್ತನೆ : ೧೫೨ ನುಡಿ ೨-೩

ಜನನಿ ಗೌರಿವ್ರತವ.........ಪೂರೈಸಿದಿಯೋ:

ಒಮ್ಮೆ ಗಾಂಧರಿಯು ಮಣ್ಣಿನಿಂದ ಮಾಡಿದ ಆನೆಯ ಮೇಲೆ ಗೌರಿಯನ್ನು ಕೂಡಿಸಿ ವಿಜೃಂಭಣೆಯಿಂದ ಪೂಜೆ ಮಾಡಿದಳು. ಸಮಾರಂಭಕ್ಕೆ ಕುಂತಿಯನ್ನು ಆಹ್ವಾನಿಸಲಿಲ್ಲ. ದು:ಖಿತಳಾದ ಆಕೆ ತನಗಾದ ಅಪಮಾನವನ್ನು ತನ್ನ ಮಕ್ಕಳೆದುರಿನಲ್ಲಿ ಹೇಳಲು ಅರ್ಜುನನು ಇಂದ್ರನಿಗೆ ಪತ್ರ ಬರೆದು ಇಂದ್ರಲೋಕದಿಂದ ಐರಾವತವನ್ನೇ ತರಿಸಿದನು. ಭೀಮಾದಿಗಳು ಕುಂತಿಯ ವ್ರತವು ಸಾಂಗೋಪಾಂಗವಾಗಿ ನಡೆಯುವಂತೆ ನೋಡಿಕೊಂಡರು.

(ಐರಾವತ, ಸಂ: ಅರ್ ಎಸ್ ಪಂಚಮುಖಿ)

ಕೀರ್ತನೆ : ೧೫೨ ನುಡಿ ೪

ಹಿಡಿಂಬ(ಕ):

ಒಬ್ಬ ರಾಕ್ಷಸ. ಪಾಂಡವರು ಅರಗಿನ ಮನೆಯಿಂದ ಹೊರಬಿದ್ದು ಅರಣ್ಯವನ್ನು ಸೇರಿದಾಗ ಭೀಮನನ್ನು ಕೆಣಕಿ ಅವನಿಂದಲೇ ಮಡಿದ.

ಕೀರ್ತನೆ : ೧೫೨ ನುಡಿ ೪

ಹಿಡಿಂಬಕಿ (ಹಿಡಿಂಬೆ):

ಹಿಡಿಂಬನ ಸೋದರಿ, ಈಕೆಯು ಭೀಮನೊಡನೆ ಹಗಲೆಲ್ಲ ವಿಹರಿಸುತ್ತಿದ್ದು, ರಾತ್ರಿ-ಆತನನ್ನು ಕುಂತಿಯ ಬಳಿ ತಂದು ಬಿಡುತ್ತಿದ್ದಳು.

ಕೀರ್ತನೆ : ೧೫೨ ನುಡಿ ೫

ಕೀಚಕ:

ಮಹಾಬಲಶಾಲಿಯಾದ ಕೀಚಕ ವಿರಾಟರಾಜನ ಸೇನಾಪತಿ ಹಾಗೂ ಅವನ ರಾಣಿಯಾದ ಸುಧೀಷ್ಣೆಯ ತಮ್ಮ. ಇವನಿಗೆ ಸಾಹಬಲನೆಂದೂ ಹೆಸರು. ಪಾಂಡವರು ವಿರಾಟನ ರಾಜಧಾನಿಯಲಿ ಅಜ್ಞಾನವಾಸದಲ್ಲಿದ್ದಾಗ ಕೀಚಕ ಸೈರಂಧ್ರಿಯ ವೇಷದಲ್ಲಿದ್ದ ದ್ರೌಪದಿಯನ್ನು ನೋಡಿ ಮೋಹಿತನಾದ. ಅವನ ಕಾಟವನ್ನು ತಡೆಯಲಾರದ ದ್ರೌಪದಿ ಗುಟ್ಟಾಗಿ ಭೀಮನಿಗೆ ಹೇಳಿ ಅವನಿಂದ ಕೀಚಕನನ್ನು ಕೊಲ್ಲಿಸಿದಳು. (ಪು.ನಾ.ಚೂ ಪು ೧೦೨-೧೦೩)

ಕೀರ್ತನೆ : ೧೫೩ ನುಡಿ ೧

ದುರುಳದಾನವನ ವರ ನಗರುರುಹಿ ತಾ:

ಹನುಮಂತ ಲಂಕೆಯನ್ನು ಉರುಹಿದ ಸುಂದರಕಾಂಡದ ಕತೆ (ರಾಮಾಯಣ)

ಕೀರ್ತನೆ : ೧೫೩ ನುಡಿ ಪ

ಹಿಮಾದ್ರಿಯುದ್ಭವಿ:

ಹಿಮವಂತನ ಮಗಳಾದ ಪಾರ್ವತಿ.

ಕೀರ್ತನೆ : ೧೫೬ ನುಡಿ ೧

ಸಿರಿಯ ರಾಮನ ಹಿರಿಯ ಸೊಸೆ

ಬ್ರಹ್ಮ ಹರಿಯ ಮಗ. ಸರಸ್ವತಿ ಬ್ರಹ್ಮನ ಹೆಂಡತಿಯಾದ್ದರಿಂದ ಹರಿಯಸೊಸೆಯಾದಳು.

ಕೀರ್ತನೆ : ೧೬೧ ನುಡಿ:

ಶ್ರೀಶೈಲ:

ಆಂಧ್ರರಾಜ್ಯದ ಕೃಷ್ಣಾ ಜಿಲ್ಲೆಯ ಕೃಷ್ಣಾನದಿಯ ತೀರದ ಸುಪ್ರಸಿದ್ಧ ಶಿವಕ್ಷೇತ್ರ. ಕಾರ್ತಿಕೇಯನ ಕೋಪವನ್ನು ಸಮಾಧಾನಪಡಿಸಲು ಶಿವ ಕ್ರೌಂಚಪರ್ವತದಲ್ಲಿ ಜ್ಯೋತಿರ್ಲಿಂಗಾಗಿ ಉದ್ಭವಿಸಿದನು.

ಕೀರ್ತನೆ : ೧೬೧ ನುಡಿ ೩

ವೀರಪತಿವ್ರತೆಯಪಾರ ಭಕ್ತಿಗೆ ತೋರಿ ಜ್ಯೋತಿರ್ಲಿಂಗವ.

ಶರಣೆ ಅಕ್ಕಮಹಾದೇವಿಯೇ ವೀರಪತಿವ್ರತಯೆಂದು ಸೂಚಿತವಾಗಿರಬಹುದು. ಶ್ರೀಶೈಲದ ಮಲ್ಲಿಕಾರ್ಜುನನ ಸತಿಯಾದ ಈಕೆ ಅಲ್ಲಿಯ ಕದಳಿವನದಲ್ಲಿ ಐಕ್ಯಳಾದಳು.

ಕೀರ್ತನೆ : ೧೬೪ ನುಡಿ ೧

ಉದ್ಧರಿಸೆಂದು ಮರೆಬಿದ್ದಭಕ್ತನಂ.........ಪ್ರಸಿದ್ಧನೆನಿಸಿದಂಥ:

ಸುಗ್ರೀವನನ್ನು ರಾಮನಿಗೆ ಪರಿಚಯಿಸಿ, ಉದ್ಧರಿಸಿದ ವಿಚಾರ

ಕೀರ್ತನೆ : ೧೬೪ ನುಡಿ ೨

ಶಕ್ತಿಯಿತ್ತ ಮಹಮೌಕ್ತಿಕಮಾಲೆಯ...........ನಿಜಭೃತ್ಯನೆನಿಸಿದಂಥ

ಪೂರ್ವಕತೆ ತಿಳಿಯಲಿಲ್ಲ.

ಕೀರ್ತನೆ : ೧೬೪ ನುಡಿ ೪

ಶ್ರೀಕರನಪ್ಪಣೆ ಪಡೆದು.........ತಂದುಲಿಂಗ:

ರಾಮನ ಮಾತಿನಂತೆ ಹನುಮಂತ ಕ್ಷಣಕಾಲದಲ್ಲಿ ವಾರಣಾಸಿಗೆ ಹೋಗಿ ಶಿವನಲ್ಲಿ ರಾಮಕಾರ್ಯವನ್ನು ವಿಜ್ಞಾಪಿಸಿದಾಗ ಶಿವನು ರಾಮನಿಗೋಸ್ಕರ ಹನುಮಂತನ ಕೈಗೆ ಎರಡು ಲಿಂಗಗಳನ್ನು ಕೊಟ್ಟ ವಿಚಾರ.

(ಆನಂದ ರಾಮಾಯಣ ಪು ೧೭-೧೮)

ಕೀರ್ತನೆ ೧೬೪ ನುಡಿ ೧

ಮೀರಿದ ಗರುಡನಪಾರ ಗರುವಮಂ ಸೂರೆಗೈದು.

ರಾಮಾವತಾರದಲ್ಲಿ ಹನುಮಂತ ರಾಮನ ವಾಹನವಾಗಿ ಗರುಡನ ಗರ್ವವನ್ನು ಭಂಗಿಸಿದನೆಂಬ ಭಾವನೆ(?)

ಅವತಾರತ್ರಯದ ವರ್ಣನೆ ಈ ಕೀರ್ತನೆ. ಹನುಮ, ಭೀಮ, ಮಧ್ವ ಈ ಮೂರು ವಾಯುದೇವರ ಅವತಾರಗಳೆಂಬ ನಂಬಿಕೆ ಮಾಧ್ವಮತಸ್ಥರಲ್ಲಿದೆ.

ಕೀರ್ತನೆ : ೧೬೬ ನುಡಿ ೧

ಹದಿನಾಲ್ಕು ಲೋಕಂಗಳದರ..........ಹಾರಿದಿ.

ಹನುಮಂತ ಯುದ್ಧರಂಗದಲ್ಲಿ ರಾಮನಿಗೆ ರಥವಾದ ಪ್ರಸಂಗ.

ಕೀರ್ತನೆ : ೧೭೪ ನುಡಿ:

ಮಂತ್ರಾಲಯದ ಶ್ರೀ ರಾಘವೇಂದ್ರ ಗುರುಗಳು.

೧೭ನೇ ಶತಮಾನದಲ್ಲಿದ್ದ ಮಾಧ್ವಪರಂಪರೆಯ ಯತಿಗಳಾದ ಇವರು ಮಂಚಾಲೆಯ ರಾಯರೆಂದು ಪ್ರಸಿದ್ಧರಾಗಿದ್ದು ಇಂದಿಗೂ ಭಕ್ತರ ಅಭೀಷ್ಟವನ್ನು ಸಲ್ಲಿಸುತ್ತಿರುವರೆಂಬ ನಂಬಿಕೆಯಿದೆ. ಪರಿಮಾಳಚಾರ್ಯರೆಂದು ಪ್ರಸಿದ್ಧರಾದ ಇವರು ಪುರಂದರಾದಿ ಹರಿದಾಸರ ಗುಂಪಿಗೂ, ವಿಜಯದಾಸಾದಿ ದಾಸರ ಪರಂಪರೆಗೂ ಮಧ್ಯವರ್ತಿಗಳಾಗಿದ್ದರು. ಮಧ್ವಾಚಾರ್ಯರ ಗ್ರಂಥಗಳಿಗೂ, ಉಪನಿಷತ್ತು, ಬ್ರಹ್ಮಸೂತ್ರ, ಗೀತಾದಿಗ್ರಂಥಗಳಿಗೂ ಟೀಕೆ ಟಿಪ್ಪಣೆಗಳನ್ನು ರಚಿಸಿರುವ ಪಂಡಿತರಿವರು. ಮಂತ್ರಾಲಯವನ್ನು ಹರಿಭಕ್ತಿಯ ಕೇಂದ್ರವನ್ನಾಗಿ ಮಾಡಿ ಹರಿಭಕ್ತಿಯನ್ನು, ಹರಿದಾಸರನ್ನೂ ಉಜ್ಜೀವನಗೊಳಿಸಿದ ಕೀರ್ತಿ ಇವರದು. ಇವರ ಬೃಂದಾವನ ಮಂತ್ರಾಲಯದಲ್ಲಿ ಇಂದಿಗೂ ಭಕ್ತರಿಂದ ಸೇವೆಯನ್ನು ಪಡೆಯುತ್ತಿದೆ; ಮಾಧ್ವರಿಗಷ್ಟೇ ಅಲ್ಲದೆ ಎಲ್ಲ ಕೋಮಿನವರಿಗೂ ಒಂದು ದೊಡ್ಡ ಯಾತ್ರಾಸ್ಥಳವಾಗಿ ಪರಿಣಮಿಸಿದೆ.

ಕೀರ್ತನೆ : ೧೮೨ ನುಡಿ ೨

ಸಾಧನ ಚತುಷ್ಟರು.

ಭಗವಂತನನ್ನು ಕುರಿತಾದ ದರ್ಶನ, ಶ್ರವಣ, ಮನನ ನಿಧಿಧ್ಯಾಸನಗಳಲ್ಲಿ ನಿರತರಾದವರು.

ಕೀರ್ತನೆ : ೨೧೯ ನುಡಿ ೪

ಯತಿವರನ ಯಾಗವ ಹಿತದಿ ರಕ್ಷಿಸಿದಂಥ

ರಾಮ, ಲಕ್ಷ್ಮಣರು ವಿಶ್ವಾಮಿತ್ರರ ಯಾಗವನ್ನು ಕಾಯ್ದು ಪ್ರಸಂಗ. (ರಾಮಾಯಣ, ಬಾಲಕಾಂಡ).

ಕೀರ್ತನೆ :೨೪೪ ನುಡಿ ೧-೫

'ಹರಿಯ ದಶಾವತಾರದ ವರ್ಣನೆ '

'ಕಾಲು ಇಲ್ಲದ ಹೆಳವ.......... ಮತ್ಸ್ಯ-ಹಯಗ್ರೀವನೆಂಬ ರಾಕ್ಷಸನು ಬ್ರಹ್ಮನ ಮುಖದಿಂದ ಜಾರಿದ ವೇದಗಳನ್ನು ಅಪಹರಿಸಿ ಪ್ರಳಯಜಲದಲ್ಲಿ ಅಡಗಿರಲು ವಿಷ್ಣು ಮತ್ಸ್ಯರೂಪಿಯಾಗಿ ವೇದಗಳನ್ನು ಹಿಂದಕ್ಕೆ ತಂದನು (ಭಾ.ಸ್ಕಂ)

' ತಲೆಯ ಕಾಣದ ಕುರೂಪಿ: ಕೂರ್ಮ'

ದೇವಾಸುರರು ಮಂದರಪರ್ವತವನ್ನು ಕಡಗೋಲಾಗಿಯೂ ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿಕೊಂಡು ಅಮೃತಕ್ಕಾಗಿ ಸಮುದ್ರವನ್ನು ಕಡೆಯುತ್ತಿದ್ದಾಗ ಭಾರದಿಂದ ಆ ಪರ್ವತ ಮೆಲ್ಲನ ಮುಳಗಲಾರಂಭಿಸುತು. ಆಗ ವಿಷ್ಣು ಕೂರ್ಮರೂಪಿಯಾಗಿ ಪರ್ವತವನ್ನು ಬೆನ್ನ ಮೇಲೆತ್ತಿಕೊಂಡು ನಿಂತನು. (ಭಾ. ಸ್ಕಂ)

'ಚಲುವಿಕಿಲ್ಲದ ಕಾಡು ಹೀನಮೃಗ: ವರಾಹ. ಹಿರಣ್ಯಾಕ್ಷನೆಂಬ ರಾಕ್ಷಸ ಭೂಮಿಯನ್ನು ಜಾಪೆಯಂತೆ ಸುತ್ತಿಕೊಂಡು ಸಮುದ್ರದ ತಳಕ್ಕೆ ಒಯ್ಯಲು ವಿಷ್ಣು ವರಾಹ ರೂಪವಾಗಿ ಅವನನ್ನು ಸಂಹರಿಸಿ, ಭೂಮಿಯನ್ನು ತನ್ನ ಕೋರೆದಾಡೆಗಳಿಂದ ಎತ್ತಿ ತಂದನು. (ಭಾಸ್ಕಂ)

ಬಲಿಯ ಬಾಗಿಲಕಾಯ್ವ ಕೂಲಿಗಾರ:

ವಾಮನ- ಬಲಿಚಕ್ರವರ್ತಿಯಲ್ಲಿಗೆ ವಟುವೇಷದಿಂದ ಬಂದ ವಿಷ್ಣು ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಬೇಡಿ ಆ ನೆವದಲ್ಲಿ ಅವನನ್ನು ಸುತಳಕ್ಕೆ ಮೆಟ್ಟಿದನು. (ಭಾಸ್ಕ)

'ನಾಲಗೆಚಾಚಿ ರಕ್ತಕುಡಿದವ: ನರಸಿಂಹ '

ಶ್ರೀಹರಿ ಬಾಲಕ ಪ್ರಹ್ಲಾದನ ಕರೆಗೆ ಓಗೊಟ್ಟು ನರಸಿಂಹಾಕೃತಿಯನ್ನು ತಾಳಿ ಕಂಬದಿಂದ ಹೊರಬಂದು ಪ್ರಹ್ಲಾದನ ತಂದೆಯಾದ ಹಿರಣ್ಯಕಶಿಪುವನ್ನು ಸಂಹರಿಸಿದನು (ಭಾ ಸ್ಕಂ)

'ತಿಳಿದು ಜನನಿತಲೆ ಕಡಿದವ: ಭಾರ್ಗವ '

ಉನ್ಮತ್ತವಾದ ಕ್ಷತ್ರಿಯರ ಕುಲವನ್ನೆ ಸವರಿ ಹಾಕುವ ಪಣತೊಟ್ಟ ವಿಷ್ಣು ಗಂಡುಗೊಡಲಿ ಹಿಡಿದು ಪರಶುರಾಮ(ಭಾರ್ಗವ) ನಾಗಿ ಅವತರಿಸಿದನು. (ಭಾ ಸ್ಕಂ)

'ಲಲನೆಯೊಡನೆ ವನವಾಸಕ್ಕೆ ಪೋಗಿ ':

ರಾಮ-ರಾವಣನೇ ಮೊದಲಾದ ರಾಕ್ಷಸರ ಬಾಧೆಯನ್ನು ಪರಿಹರಿಸಲು ವಿಷ್ಣುವು ಇಕ್ಷ್ವಾಕು ವಂಶದಲ್ಲಿ ರಾಮನಾಗಿ ಅವತರಿಸಿದನು (ಭಾಸ್ಕಂ ೨, ಅ ೭)

'ಗೊಲ್ಲರ ಕುಲದಲ್ಲಿ ಹುಟ್ಟಿದ – ಕೃಷ್ಣ ':

ಕೃಷ್ಣ–ದುಷ್ಟಕ್ಷತ್ರಿಯರ ಮದೋನ್ಮತ್ತತೆಯಿಂದ ಹೆಚ್ಚಿದ ಭೂಭಾರವನ್ನು ಪರಿಹರಿಸುವ ಸಲುವಾಗಿ ವಿಷ್ಣುವೇ ಕೃಷ್ಣಾವತಾರದಿಂದ ಯಾದವ ಕುಲದಲ್ಲಿ ಅವತರಿಸಿದನು. (ಭಾ ಸ್ಕಂ ೧೦, ಅ ೩)

'ಬತ್ತಲೆ ಕುಣಿಕುಣಿದಾಡಿದ :

ಬುದ್ಧ–ವೈದಿಕ ಮಾರ್ಗದಲ್ಲಿ ಬಹಳ ಶ್ರದ್ಧೆಯಿಂದ ಇದ್ದ ತ್ರಿಪುರಾಸುರರನ್ನು ವಂಚಿಸುವುದಕ್ಕಾಗಿ ವಿಷ್ಣು ಪಾಷಾಂಡ ವೇಷಿಂಬಾಗಿ ಅವರಿಗೂ ಪಾಷಾಂಡ ಧರ್ಮವನ್ನುಪದೇಶಿಸುವನು. (ಭಾ ಸ್ಕಂ ೨, ಅ.೭)

ತ್ರಿಪುರಾಸುರರ ಪತ್ನಿಯರ ಪಾತಿವ್ರತ್ಯಕ್ಕೆ ಭಂಗತರುವ ಸಲುವಾಗಿ ಬೆತ್ತಲೆಯಾಗಿ ಅವರೆದುರಿಗೆ ನಿಂತನೆಂದು ಹೆಂಗಸರ ಹಾಡುಗಳಲ್ಲಿ ಒಂದು ಕತೆ ಬರುತ್ತದಂತೆ.

ಸತ್ಯಭ್ರಷ್ಟ ಮಹಕಲಿಯು ಈತನೆಂದೆ – ಕಲ್ಕಿ – ಕಲಿಯುಗದಲ್ಲಿ ಅನಾಚಾರಗಳ ಮೇರೆಮೀರಿದಾಗ ಕರ್ಮಭ್ರಷ್ಟರನ್ನು ಶಿಕ್ಷಿಸಲು ವಿಷ್ಣು ಅವತಾರದಿಂದ ಕುದುರೆಯೇರಿ ಬರುವನು. (ಭಾಸ್ಕಂ ೨ ಅ.೭)

ಕೀರ್ತನೆ : ೨೪೪ ನುಡಿ ೫

ತಾಮ್ರಧ್ವಜ:

ರತ್ನಪುರದ ಅರಸನಾದ ಮಯಾರಧ್ವಜನ ಮಗ. ಈತನು ಧರ್ಮರಾಜನ ಅಶ್ವಮೇಧ ಕುದುರೆಯನ್ನು ಕಟ್ಟಿ ಕೃಷ್ಣಾರ್ಜುನರನ್ನು ಯುದ್ಧದಲ್ಲಿ ಸೋಲಿಸಿದನು. ಆಗ ಕೃಷ್ಣಾರ್ಜುನರು ಬ್ರಾಹ್ಮಣ ಮತ್ತು ಶಿಷ್ಯವೇಷದಿಂದ ರತ್ನಪುರವನ್ನು ಹೊಕ್ಕು ಮಯಾರಧ್ವಜನ ದೇಹದ ಅರ್ಧಭಾಗವನ್ನು ಯಾಚಿಸಲು ರಾಜ ಹಾಗೂ ಅವನ ಪತ್ನಿ ಕುಮುದ್ವತಿಯು ಕೊಡಲು ಮುಂದಾದರು. ಅವರ ಚಿತ್ತಸ್ಥೈರ್ಯವನ್ನು ಮೆಚ್ಚಿದ ಕೃಷ್ಣ ಪ್ರತ್ಯಕ್ಷನಾದನು. ಮಯೂರ ಹಾಗೂ ತ್ರಾಮಧ್ವಜರು ಅರ್ಜುನನ ಕುದುರೆಯನ್ನೊಪ್ಪಿಸಿ ಯಜ್ಞಕ್ಕೆ ನೆರವಾದರು. (ಪುಭಾಕೋ ಪು ೨೪೫)

ಕೀರ್ತನೆ : ೨೪೪ ನುಡಿ ೭

'ಮೀರಿದಂಥ ವರ ಮಾಯದ ಹೆಣ್ಣೆಂದೆ:

ವಿಷ್ಣುವಿನ ಮೋಹಿನೀ ಅವತಾರದ ಪ್ರಸ್ತಾಪ. ರಾಕ್ಷಸರನ್ನು ತನ್ನ ಮೋಹ ಮಾಯೆಗಳಿಂದ ವಂಚಿಸುವ ಸಲುವಾಗಿ ಅಮೃತಮಥನ ಕಾಲದಲ್ಲಿ ವಿಷ್ಣು ಮೋಹಿನಿಯಾದ, ಮತ್ತೊಮ್ಮೆ ಶಿವ ವಿಷ್ಣುವಿನ ಮೋಹಿನಿ ಅವತಾರವನ್ನು ನೋಡ ಬಯಸಲು ವಿಷ್ಣು ಮೋಹಿನಿ ಅವತಾರವನ್ನು ತಾಳಿದ.

ಕೀರ್ತನೆ: ೨೪೪ ನುಡಿ ೮

'ಉಚ್ಚಿಷ್ಟನಾಗಿ ಬಹಿಷ್ಕಾರ್ಯೊಂದಿದನೆಂದೆ ':

ಒಮ್ಮೆ ದೂರ್ವಾಸಮುನಿ ಕೃಷ್ಣನನ್ನು ಪರೀಕ್ಷಿಸವುದುಕ್ಕಾಗಿ ದ್ವಾರಕೆಗೆ ಬಂದು ಭೋಜನ ಸಮಯದಲ್ಲಿ ಪಾಯಸವನ್ನು ಕೃಷ್ಣನ ಮೇಲೆಯೂ ರುಕ್ಮಿಣಿಯ ಮೇಲೆಯೂ ಚೆಲ್ಲಿದನು. ದುರ್ವಾಸನ ಸ್ವಭಾವವನ್ನು ಅರಿತಿದ್ದ ದಂಪತಿಗಳು ಬೇಸರಗೊಳ್ಳಲಿಲ್ಲ. ದೂರ್ವಾಸರ ಎಂಜಲು ಪಾಯಸವನ್ನು ಕೃಷ್ಣನು ಮಹಾಪ್ರಸಾದವೆಂದು ಭಾವಿಸಿ ತನ್ನ ಮೈಗೆಲ್ಲಾ ಬಳಿದುಕೊಂಡನು. ಆದರೆ, ಅಂಗಾಲಿಗೆ ಬಲಿದುಕೊಳ್ಳಲಿಲ್ಲವಾಗಿ ' ನಿನಗೆ ಅಂಗಾಲಿನ ಮೂಲಕವಾಗಿಯೇ ಸಾವು ' ಎಂದು ದೂರ್ವಾಸ ಶಪಿಸಿದನು.

ಕೀರ್ತನೆ : ೨೪೪ ನುಡಿ ೯

'ಹದಿನಾಲ್ಕು ಲೋಕ':

ಭಗವಂತನ ಹೊಟ್ಟೆಯಲ್ಲಿ ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನರ್ಲೋಕ, ತಪೋಲೋಕ, ಸತ್ಯಲೋಕ, ಅತಲ, ವಿತಲ, ಸುತಲ, ಮಹಾತಲ, ತಲಾತಲ, ರಸಾತಲ, ಪಾತಾಲಗಳೆಂಬ, ಹದಿನಾಲ್ಕು ಲೋಕಗಳೂ ಅಡಗಿವೆ; ಅವನು ಆ ಹದಿನಾಲ್ಕು ಲೋಕ ವ್ಯಾಪ್ತನೆಂಬ ನಂಬಿಕೆ.

ಕೀರ್ತನೆ :೨೪೭ ನುಡಿ ೨

'ನಂಬಿಕೊಟ್ಟ ಕಮಲಾಂಬಿಕೆಯೆಂಜಲ ಸಂಭ್ರಮದಿಂ ಮೆದ್ದ:'

ಭಕ್ತೆ ಒಬ್ಬ ಬೇಡತಿ, ಶ್ರೀರಾಮನನ್ನು ಸತ್ಕರಿಸಲು ಪಕ್ವವಾದ ಹಣ್ಣುಗಳನ್ನು ಸ್ವತ: ತಾನೇ ಕಚ್ಚಿ ತಿಂದು ರುಚಿನೋಡಿ ತೆಗೆದಿರಿಸಿ ರಾಮನಿಗೆ ಅವುಗಳನ್ನೇ ಅರ್ಪಿಸಿದಳು. (ರಾಮಾಯಣ, ಅರಣ್ಯಕಾಂಡ)

ಕೀರ್ತನೆ : ೨೪೭ ನುಡಿ ೫

'ಮಡಿದ ಬಾಲಕನಂ ಕಡುದಯದೆಬ್ಬಿಸಿ !

ಶ್ರುತದೇವನೆಂಬ ಬ್ರಾಹ್ಮಣನ ಮಗ ಮಡಿದಿರಲು ಕೃಷ್ಣ ಶ್ವೇತದ್ವೀಪಕ್ಕೆ ಹೋಗಿ ಅವನ ಮಡಿದ ಮಗನನ್ನು ಎಬ್ಬಿಸಿ ಕರೆತಂದು, ಆ ಬ್ರಾಹ್ಮಣನ ಪುತ್ರಶೋಕವನ್ನು ಕಳೆದನು. (ಪುನಾಚೂ ಪು ೧೪೨)

ಕೀರ್ತನೆ : ೨೬೯ ನುಡಿ ೨

ಅಗಸ್ತ್ಯ:

ಮಿತ್ರವರುಣರ ವೀರ್ಯದಿಂದ ಕುಂಭದಲ್ಲಿ ಉತ್ಪತ್ತಿಯಾದವನು. ವಸಿಷ್ಠ ಸಹೋದರ.

ರಾಕ್ಷಸರ ನಾಶಕ್ಕಾಗಿ ಸಮುದ್ರ ಜಲವನ್ನು ಪಾನಮಾಡಿ ಜೀರ್ಣಿಸಿಕೊಂಡ ಖ್ಯಾತಿ ಇವನದು. (ಪು.ಭಾ.ಕೋ ಪು ೧೯)

ಕೀರ್ತನೆ : ೨೬೯ ನುಡಿ ೪

ಕುಬೇರ:

ವಿತ್ತಪತಿ ಎಂದು ಕರೆಸಿಕೊಳ್ಳುವ ಕುಬೇರ ವಿಶ್ರವಸನೆಂಬ ಬ್ರಹ್ಮನಿಂದ ಇಲಿಬಿಲೆಯಲ್ಲಿ ಜನಿಸಿದವನು. ನವನಿಧಿಗಳಾದ–ಮಹಾಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ಕುಂದ, ನೀಲ, ವರ–ಇವನ ವಶವರ್ತಿಗಳು.

(ಪು.ಭಾ.ಕೋ ಪು.೧೩೩)

ಕೀರ್ತನೆ : ೨೬೯ ನುಡಿ ೩

ಹರಿಶ್ಚಂದ್ರ:

ಸೂರ್ಯವಂಶದ ತ್ರಿಶಂಕುವಿನ ಮಗ; ತಾಯಿ ಸತ್ಯವತೆ, ಮಗ ರೋಹಿತ. ಪತ್ನಿ ಚಂದ್ರಮತಿ; ಇಂದ್ರ ಹಾಗೂ ವಿಶ್ವಾಮಿತ್ರರಲ್ಲಿ ' ಭೂಲೋಕದಲ್ಲಿ ಸತ್ಯವಂತರು ಯಾರು ' ಎಂಬ ವಿಚಾರವಾಗಿ ಚರ್ಚೆಯಾಗಿ ' ಹರಿಶ್ಚಂದ್ರನೇ ಸತ್ಯವಂತ ' ನೆಂದು ನಿರ್ಣಯವಾಯಿತು. ಅವನು ರಾಜ್ಯವನ್ನೆಲ್ಲ ವಿಶ್ವಾಮಿತ್ರನು ದಾನವಾಗಿ ಪಡೆದು, ಆ ದಾನಕ್ಕೆ ದಕ್ಷಿಣೆಯನ್ನು ಕೊಡಲು ತನ್ನ ಹೆಂಡತಿ ಮಕ್ಕಳನ್ನು ಮಾರಿ, ತನ್ನನ್ನು ಮಾರಿಕೊಂಡು ರಾಜನಾಗಿದ್ದ ಅವನು ಸುಡುಗಾಡನ್ನು ಕಾದನು. ಕೊನೆಗೂ ಸತ್ಯವನ್ನು ಪಾಲಿಸಿ ಸತ್ಯಹರಿಶ್ಚಂದ್ರನೆಂದು ಖ್ಯಾತನಾದನು.

(ಪು.ಭಾ,ಕೋ ಪು ೬೯೯–೭೦೦)

ಕೀರ್ತನೆ : ೨೭೭ ನುಡಿ ೨

ಸಪ್ತಶರಧಿ:

ಲವಣ(ಉಪ್ಪು), ಇಕ್ಷು(ಕಬ್ಬಿನರಸ), ಸುರಾ(ಹೆಂಡ), ಸರ್ಪಿ(ತುಪ್ಪ), ದಧಿ(ಮೊಸರು), ಕ್ಷೀರ(ಹಾಲು), ಜಲ(ನೀರು) ಸಮುದ್ರಗಳೆಂಬ ಏಳು ಸಮುದ್ರಗಳಿವೆ.(ಪುನಾಚೂ ಪು ೬೩೮)

ಕೀರ್ತನೆ : ೩೨೨ ನುಡಿ ೪

ಮಾವಗಳಿಯನಾದಿ:

ಕೃಷ್ಣನು ತನ್ನ ಸೋದರತ್ತೆಯ ಮಗಳಾದ ಮಿತ್ರವಿಂದೆಯನ್ನು ಮದುವೆಯಾಗಿ ಆಕೆಯ ತಂದೆ ಜಯತ್ಸೇನನಿಗೆ ಅಳಿಯನಾದ. (ಪು.ಭಾ.ಕೋ ಪು ೧೪೬)

ಕೀರ್ತನೆ : ೩೫೦ ನುಡಿ ಪ

ಶಂಬರಾರಿ:

ಶಂಬರಾಸುರ ಮಹಾ ಮಾಯಾವಿಯಾದ ರಾಕ್ಷಸ ಈತನ ಕಡುವೈರಿಯಾಗಿದ್ದ ಶ್ರೀಕೃಷ್ಣನ ಮಗ. ಪ್ರದ್ಯುಮ್ನನಿಂದ ಇವನು ಹತನಾದ. (ಪು.ಭಾ.ಕೋ ಪು ೫೮೨)

ಕೀರ್ತನೆ : ೩೬೧ ನುಡಿ ೧

ವಾರಿಧಿಯನು ಬಂಧಿಸಿ............ಸೂರೆಗೈದ

ಶ್ರೀಹರಿ ರಾಮಾವತಾರದಲ್ಲಿ ಸೇತುಬಂಧ ಮಾಡಿ ಲಂಕೆಯನ್ನು ಪ್ರವೇಶಿಸಿ ಲಂಕೆಯನ್ನು ವಶಪಡಿಸಿಕೊಂಡ ವಿಚಾರ

ಕೀರ್ತನೆ : ೩೭೦ ನುಡಿ ೭

ಅಪರೋಕ್ಷಜ್ಞಾನ:

ಭಗವಂತನನ್ನು ಪ್ರತ್ಯಕ್ಷವಾಗಿ ಕಂಡ ಅನುಭವ, ಪರಮಾತ್ಮನ ಸಾಕ್ಷಾತ್ಕಾರ; ಸ್ವಸ್ವರೂಪಜ್ಞಾನ.

ಕೀರ್ತನೆ : ೩೭೦ ನುಡಿ ೧

ಕಪಿವರದ:

ಹನುಮಂತನಿಗೆ ರಾಮಾವತಾರದಲ್ಲಿ ವರವನ್ನು ದಯಪಾಲಿಸಿದವನು.

ಕೀರ್ತನೆ : ೪೦೮ ನುಡಿ ೩

ನಾಯಾಗಿ ಬಂದು ನಿತ್ಯಲತ್ತೆ ತಿನುಯೆಂದೆನೆಲು:

ಭಕ್ತಕನಕದಾಸರು ಗುರುಗಳಾದ ವ್ಯಾಸರಾಯರ ಮಠದಲ್ಲಿದ್ದ ಶಿಷ್ಯರಿಗೆ ಪೂಜಾಕಾಲದಲ್ಲಿ ಶ್ರೀಹರಿಯನ್ನು ತೋರಿಸುವುದಾಗಿ ಮತುಕೊಟ್ಟಿರುಲು, ಪೂಜಾಕಾಲದಲ್ಲಿ ನಾಯಿಯ ರೂಪದಿಂದ ಬಂದ ನಾರಾಯಣನನ್ನು ಗುರುತಿಸದೆ ನಾಯಿಯೆಂದೇ ಭಾವಿಸಿ ಅವರೆಲ್ಲ ಅದನ್ನು ಅಟ್ಟಿದರೆಂಬ ಪ್ರಚಲಿತ ಕತೆ.

ಕೀರ್ತನೆ : ೪೦೮ ನುಡಿ ೪

ನೀರುಕೊಟ್ಟೆನ್ನ ಕರದಿಂದ್ದೊಡಿಸಿಕೊಯೆನಲು:

ಒಮ್ಮೆ ಪುರಂದರದಾಸರು ಮೃತ್ತಿಕಾಶೌಚಕ್ಕೆ ನೀರು ತಾರೆಂದು ಅಪ್ಪಣ್ಣ ಭಾಗವತನೆಂಬ ಶಿಷ್ಯನಿಗೆ ಹೇಳಿಹೋದರು, ನಿದ್ದೆಗಣ್ಣಿನಲ್ಲಿದ್ದ ಭಾಗವತನು ಹೋಗಲೇ ಇಲ್ಲ. ದಾಸರು

ಶಿಷ್ಯನಿಗೆ ಕಾದು ಕಾದು ಸಾಕಾದರು. ಆ ಸಮಯದಲ್ಲಿ ಪಾಂಡುರಂಗನು ಭಾಗವತನ ವೇಷದಿಂದ ದಾಸರಿಗೆ ತಂಬಿಗೆಯಲ್ಲಿ ನೀರನ್ನು ತಂದುಕೊಡಲು, ತಡಮಾಡಿದನೆಂದು ಸಿಟ್ಟಿಗೆದ್ದ ದಾಸರು ಆ ತಂಬಿಗೆಯಿಂದಲೇ ಅವನ ತಲೆಯನ್ನು ಘಟ್ಟಿಸಿದರು; ಮಾರನೆಯ ಬೆಳಗ್ಗೆ ದೇವಾಲಯದ ವಿಠಲನ ವಿಗ್ರಹದ ತಲೆಯಲ್ಲಿ ಗುಬಟು ಬಂದಿತ್ತು ಎಂಬ ಪ್ರಚಲಿತ ಕತೆ. (ಕ.ಭ.ವಿ ಪು ೨೧೩)

ಕೀರ್ತನೆ :೪೦೮ ನುಡಿ ೨

ಹೆಣ್ಣಾಗಿ ಬಾರೆನಲು:

ಹರಿಯ ಮೋಹಿನಿ ಅವತಾರದ ಪ್ರಸ್ತಾಪ.

ಕೀರ್ತನೆ : ೪೦೮ ನುಡಿ ೭

ಆರೊಂದು ನದಿಗಳು:

ಆಂದೋಳನ ವಸ್ತ್ರ, ಆಭರಣ, ವಾಹನ, ರಾಜ್ಯ, ವಧು, ಕರ್ಪೂರವೀಳ್ಯ (ವರ್ಜ್ಯಗಳು) (ಶ್ರೀನಿ ಪುರಾಣ)

ಕೀರ್ತನೆ : ೪೧೯ ನುಡಿ ೩

ಭೋರ್ಗರೆವ ಸರ್ಪನ ಹೆಡೆ–ಕಾಮ

ಕೀರ್ತನೆ : ೪೨೯ ನುಡಿ ೩

ತನುತ್ರಯ:

ಸ್ಥೂಲ, ಸೂಕ್ಷ್ಮ, ಕಾರಣ ತನುಗಳು.

ಕೀರ್ತನೆ : ೪೫೫ ನುಡಿ ೧

ತ್ರಿವಿಧ ಭಕ್ತಿ:

ಬಾಹ್ಯ, ಅನನ್ಯ, ಏಕಾಂತ ಭಕ್ತಿ (ಶ್ರೀ.ನಿ ಪುರಾಣ)

ಬೆಡಗಿನ ವಚನಗಳನ್ನು ಹೋಲುವ ಮುಂಡಿಗೆಯೆಂದ ಕರೆಸಿಕೊಳ್ಳುವ, ಗೂಢಾರ್ಥವನ್ನು ಅಡಗಿಸಿಟ್ಟಿರುವ ಕೀರ್ತನೆಯಿದು. ಒಗಟಿನೋಪಾದಿಯಲ್ಲಿದೆ. ಮೇಲ್ನೋಟಕ್ಕೆ ಅರ್ಥ ಬಿಚ್ಚಿಕೊಳ್ಳುವುದಿಲ್ಲ.

ಕೀರ್ತನೆ : ೪೫೮ ನುಡಿ ೩

ಮುನಿಶಾಪದಿಂ ನೃಪನ ಕನಿಕರದಿ ಕಾಯ್ದಿ:

ದೂರ್ವಾಸಮುನಿಯ ಶಾಪದಿಂದ ಕೃಷ್ಣ ಅಂಬರೀಷನನ್ನು ರಕ್ಷಿಸಿದ ಸಂದರ್ಭ

ಕೀರ್ತನೆ : ೪೯೦ ನುಡಿ ೧

ಕಳ್ಳನರಿಸಿಯೆಂದೆನಿಸಿದ ಪಾದ:

ಪ್ರಚೇತಸ ಋಷಿಯ ಮಗನು ಚಿಕ್ಕತನದಲ್ಲಿಯೇ ಬೇಡರ ಪಡೆಯಲ್ಲಿ ಸೇರಿ ದಾರಿಹೋಕರ ತಲೆ ಹೊಡೆದು ಅವರಿಂದ ಕಿತ್ತುಕೊಂಡ ಹಣದಿಂದ ಜೀವಿಸುತ್ತಿದ್ದ, ಸಪ್ತಋಷಿಗಳ ಜ್ಞಾನೋಪದೇಶದಿಂದ ರಾಮಮಂತ್ರವನ್ನು ಜಪಿಸಿ ಮೈಮರೆತ. ಅವನ ಮೇಲೆ ಹುತ್ತ ಬೆಳೆದು, ವಲ್ಮೀಕದಿಂದ ಹೊರಬಂದ ಅವನು ವಾಲ್ಮೀಕಿಮಹರ್ಷಿಯೆನಿಸಿಕೊಂಡ ವಿಚಾರ. (ಪು.ನಾ.ಚೂ ಪು ೫೨೯)

ಕೀರ್ತನೆ : ೫೪೨ ನುಡಿ ೧

ಹರಿಯ ಧರೆಗಿಳಿಸಿತು:

ವೆಂಕಟೇಶ ಮಹಾತ್ಮೆಯ ಕತೆ. ಲಕ್ಷ್ಮಿ–ವಿಷ್ಣು ಇಬ್ಬರಿಗೂ ಜಗಳವಾಗಿ ಮುನಿಸಿಕೊಂಡು ವಿಷ್ಣು ಭೂಮಿಗೆ ಬಂದು ಹುತ್ತದಲ್ಲಿ ಅಡಗಿಕೊಂಡ

ಕೀರ್ತನೆ : ೫೪೩ ನುಡಿ ೩

'ಅಸಮ ವಾಲಿಯ ಬಲಕೆ ಮಸಿಮಣ್ಣು ಹಾಕಿಸಿತು'. ವಾಲಿ ತನ್ನ ತಮ್ಮನಾದ ಸುಗ್ರೀವನ ಹೆಂಡತಿ ರುಮೆಯನ್ನು ಮೋಹಿಸಿದ ತಪ್ಪಿಗಾಗಿ ರಾಮನಿಂದ ಹತನಾದ. (ರಾಮಾಯಣ ಕಿಷ್ಕಿಂಧಾಕಾಂಡ)

ಕೀರ್ತನೆ : ೫೨೬ ನುಡಿ ೩

ಕಾಲಾರಿ:

ಕಾಲನೇಮಿ ನೂರು ತಲೆಗಳನ್ನು ಹೊಂದಿದ್ದ ಒಬ್ಬ ರಾಕ್ಷಸ. ತಾರಕಾಸುರನ ಮರಣಾನಂತರ ದೇವತೆಗಳನ್ನೆಲ್ಲ ಗೆದ್ದ ಕಾಲನೇಮಿ ಇಂದ್ರಪದವಿಯನ್ನನುಭವಿಸುತ್ತಿದ್ದನು. ಮುಂದೆ ಇವನು ವೈಕುಂಠಕ್ಕೆ ದಾಳಿಯಿಟ್ಟು ವಿಷ್ಣು ಮತ್ತು ಗರುಡನಿಗೆ ಗದೆಯಿಂದ ಹೊಡೆಯಲು ವಿಷ್ಣುವು ತನ್ನ ಚಕ್ರಾಯುಧದಿಂದ ಈ ರಾಕ್ಷಸನನ್ನು ನಾಶಮಾಡಿದನು. (ಪು.ಭಾ.ಕೋ ಪು ೧೨೩–೧೨೪)

ಕೀರ್ತನೆ : ೫೪೩ ನುಡಿ ೪

ಹಾರಿಸಿತು ಕೀಚಕನ:

ದ್ರೌಪದಿ ವಿರಾಟನ ಮನೆಯಲ್ಲಿ ಸೈರಂಧ್ರಿಯಾಗಿದ್ದಾಗ ವಿರಾಟನ ಮೈದುನನಾದ ಕೀಚಕ ಅವಳನ್ನು ಕಾಮಿಸಿ, ಭೀಮನಿಂದ ಹತನಾದ ವಿಚಾರ. (ಮಹಾಭಾರತ, ವಿರಾಟಪರ್ವ)

ಕೀರ್ತನೆ : ೫೪೯ ನುಡಿ ೧

ತಾಪತ್ರಯ:

ಅಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ

ಕೀರ್ತನೆ : ೫೮೭ ನುಡಿ ೩

ಎಂಟೆರಡುವಾಯು:

ದಶವಾಯು–ಪ್ರಾಣ, ಅಪಾನ, ಸಮಾನ, ವಿದಾನ, ವ್ಯಾನ, ನಾಗ, ಕೂರ್ಮ, ಕೃಕರ, ದೇವದತ್ತ, ಮತ್ತು ಧನಂಜಯ.

ಕೀರ್ತನೆ : ೫೮೮ ನುಡಿ ೩

ಪಂಚಮಹಾಪಾತಕ:

ಬ್ರಹ್ಮಹತ್ಯ, ಸುರಪಾನ, ಸ್ವರ್ಣಸ್ತೇಯ, ಗುರುಭಾರ್ಯಾಗಮನ, ಇವುಗಳನ್ನು ಮಾಡುವವರು ಸಂಸರ್ಗ.

(ಶ್ರೀನಿ ಪು)

ಕೀರ್ತನೆ : ೫೯೪ ನುಡಿ ೩

ಮಾತುಮಾತಿಗ್ವಾದಿಸಿ..........ಕೌರವೇಂದ್ರನು:

ಛಲಗಾರನಾದ ಕೌರವ ವಾದಿಸಿ ವಾದಿಸಿಕೊನೆಗೆ ತನ್ನ ಕುಲಕ್ಕೆ ತಾನೆ ಕೊಡಲಿಯಾದ.

ಕೀರ್ತನೆ : ೬೧೯ ನುಡಿ ೨

ಅಕ್ರೂರ,

ಶ್ವಫಲ್ಕ–ಗಾಂಧಿನಿಯರ ಮಗ, ಕಂಸನ ಅಪ್ಪಣೆಯಂತೆ ಬಿಲ್ಲಹಬ್ಬಕ್ಕೆಂದು ಬಲರಾಮ ಕೃಷ್ಣರನ್ನು ಮಥುರಗೆ ಕರೆದುಕೊಂಡು ಹೋಗುವಾಗ ಮಾರ್ಗದಲ್ಲಿದ್ದ ಯಮುನಾ ನದಿಯಲ್ಲಿ ಕೃಷ್ಣನು ಇವನಿಗೆ ತನ್ನ ದಿವ್ಯರೂಪದರ್ಶನ ಮಾಡಿಸಿದನು. (ಪು.ಭಾ.ಕೋ. ಪು ೧೮)

ಕೀರ್ತನೆ : ೬೨೩ ನುಡಿ ೧

ವಿಕ್ರಮ..........ಕೈಕಾಲು ಕಳೆದುಕೊಂಡ:

ಶನಿಮಹಾತ್ಮೆ ಕತೆಯಲ್ಲಿ ಬರುವ ರಾಜಾವಿಕ್ರಮನು ಕೈಕಾಲುಗಳನ್ನು ಕಡಿಸಿಕೊಂಡ ಪ್ರಸಂಗ.

ಕೀರ್ತನೆ : ೬೨೩ ನುಡಿ ೨

ನಳಚಕ್ರವರ್ತಿ :

ನಿಷಧ ದೇಶದ ರಾಜ, ವೀರಸೇನನ ಮಗ. ಸತ್ಯವಂತನೂ ಸದ್ಗುಣಗಳ ಗಣಿಯೂ ಆದ ಈತ ಕಲಿಯ ಆವೇಶದಿಂದ ಪುಷ್ಕರನೊಡನೆ ಜೂಜಾಡಿ ಸಮಸ್ತ ಸಂಪತ್ತನ್ನೂ ಕಳೆದುಕೊಂಡು, ದಮಯಂತಿಯನ್ನು ಅಗಲಿ, ಕಾರ್ಕೋಟಕನ ಸ್ಪರ್ಶನದಿಂದ ವಿಕಾರದೇಹವುಳ್ಳವನಾಗಿ, ಬಾಹುಕನೆಂಬ ಹೆಸರಿನಿಂದ ಅಯೋಧ್ಯಾನಗರದ ಋತುಪರ್ಣನ ಆಶ್ರಯವನ್ನು ಸೇರಿ ಅಲ್ಲಿ ಅವನ ಸಾರಥಿಯಾಗಿದ್ದನು. (ಪು.ಭಾ.ಕೋ ಪು. ೩೨೫)

ಕೀರ್ತನೆ : ೬೨೩ ನುಡಿ ೫

ಐದುಬಾಣನ ಪಿತನ ಸಖ...........ಭಸ್ಮಮಾಡಿದ;

ಶಿವ ಮನ್ಮಥನನ್ನು ಸುಟ್ಟು ಭೂದಿಮಾಡಿದ ಪ್ರಸಂಗ.

ಕೀರ್ತನೆ : ೬೨೬ ನುಡಿ ೪

ಎಂಟು ಐಶ್ವರ್ಯ:

ದಾಸೀಜನ, ಭೃತ್ಯವರ್ಗ, ಪುತ್ರರು, ಬಂಧುವರ್ಗ, ವಸ್ತ್ರ, ವಾಹನ ಧನ, ಧಾನ್ಯಸಂಗ್ರಹ.

ಕೀರ್ತನೆ : ೬೮೨ ನುಡಿ ೮

ಶೂರ್ಪನಖಿಗೆ ಭಂಗವಿತ್ತು:

ರಾವಣನ ತಂಗಿ ಶೂರ್ಪನಖಿಯು ಸೀತಾರಾಮಲಕ್ಷ್ಮಣರು ದಂಡಕಾರಣ್ಯದಲಿದ್ದಾಗ ಸೀತೆಯನ್ನು ನುಂಗಹೋಗಿ ಲಕ್ಷ್ಮಣನಿಂದ ಕಿವಿ ಮೂಗುಗಳನ್ನು ಕುಯಿಸಿಕೊಂಡಳು. (ರಾಮಾಯಣ, ಅರಣ್ಯಕಾಂಡ)

ಕೀರ್ತನೆ : ೭೫೧ ನುಡಿ ೮

ಗಾಯತ್ರಿ:

ಹದಿನಾಲ್ಕು ಪದಗಳಿದ್ದು ಗಾಯತ್ರೀಛಂದಸ್ಸಿನಲ್ಲಿರುವ ಮಂತ್ರ. ಗಾನ ಮಾಡುವವರನ್ನೂ ಈ ಮಂತ್ರದೇವತೆ ರಕ್ಷಿಸುವುದರಿಂದ 'ಗಾಯತ್ರಿ ' ಎಂದು ಹೆಸರು ಬಂತು. ಈ ಮಂತ್ರಕ್ಕೆ ಋಷಿಗಳು ವಿಶ್ವಾಮಿತ್ರರು, ಗಾಯತ್ರಿ ಮಂತ್ರದ ಪೂರ್ಣಪಾಠ ಹೀಗಿದೆ.

ಓಂ ಭೂರ್ ಭುವ: ಸ್ವ: ತತ್ ಸವಿತುರ್ ವರೇಣ್ಯಂ

ಭರ್ಗೋದೇವಸ್ಯ ಧೀಮಹಿ ಧೀಯೋ ಯೋನ: ಪ್ರಚೋದಯಾತ್ ॥

ಈ ಗಾಯತ್ರಿ ಮಂತ್ರವನ್ನು ಪ್ರತಿದಿನ ಒಂದು ಸಾವಿರದಂತೆ ಅರ್ಥವತ್ತಾಗಿ ಮೂರು ತಿಂಗಳವರೆಗೆ ಕ್ರಮವಾಗಿ ನಿಯಮದಿಂದ ಜಪಿಸುವುದರಿಂದ ಮನುಷ್ಯನು ಒಂದು ಮಹಾಪಾಪದಿಂದ ಬಿಡುಗಡೆ ಹೊಂದುತ್ತಾನೆಂದು ಮನುಸ್ಮೃತಿಯಲಿ ಹೇಳಿದೆ (ಮಭಾಕೋ ಪು ೧೮೦–೧೮೧)

ಶತಾಷ್ಟಕ ೭೬೧ ನುಡಿ: ೨೯

ಕೌಸ್ತುಭ:

ಒಂದು ರತ್ನ, ದೇವ–ದಾನವರು ಕ್ಷೀರ ಸಮುದ್ರವನ್ನು ಮಥಿಸಿದಾಗ ಹುಟ್ಟಿದ ಇದನ್ನೂ ವಿಷ್ಣು ತನ್ನ ಎದೆಯಲ್ಲಿ ಧರಿಸಿದನು. (ಪು ಭಾ ಕೋ ಪುಟ ೧೬೦)

ಶತಾಷ್ಟಕ : ೭೬೧ ನುಡಿ: ೫೦

ಬಿಲ್ಲು ಮುರಿದು ಪುಲ್ಲನೇತ್ರಕರವ ಪಿಡಿದ:

ವಿಷ್ಣು ರಾಮಾವತಾರದಲ್ಲಿ ಶಿವಧನಸ್ಸನ್ನು ಮುರಿದು ಸೀತೆಯನ್ನು ವರಿಸಿದ ಪ್ರಸಂಗ.

ಶತಾಷ್ಟಕ : ೭೬೨ ನುಡಿ ೨

ಜಿತಮುರ:

ನರಕಾಸುರನ ಸೇನಾಪತಿಗಳಲ್ಲೊಬ್ಬನಾದ ಮುರ ಶ್ರೀಕೃಷ್ಣನಿಂದ ಹತನಾದ; ಕೃಷ್ಣನಿಗೆ ಮುರಾರಿಯೆಂದು ಹೆಸರು ಬಂತು. (ಪುಭಾಕೊ ಪು ೪೬೩.)

ಶತಾಷ್ಟಕ : ೭೬೨ ನುಡಿ ೨೪

ಕಾರ್ತವ್ಯನ ವಧಿಸಿದ:

ಕೃತವೀರ್ಯನ ಮಗ ಕಾರ್ತವೀರ್ಯ ಮಾಹಿಷ್ಮತಿಯ ದೊರೆ. ಪರಶುರಾಮನು ಇವನ ಸಾವಿರ ತೋಳುಗಳನ್ನು ಕತ್ತರಿಸಿ ಇವನನ್ನು ಕೊಂದ. (ಪುಭಾಕೊ ಪು ೧೨೦)

ಶತಾಷ್ಟಕ : ೭೬೩ ನುಡಿ ೯

ತಿಳಿಯದ್ದಣ್ಣುಯೆಂದು ನಳಿನಮಿತ್ರನನು:

ಹನುಮಂತನು ಬಾಲ್ಯದಲ್ಲಿ ಸೂರ್ಯನನ್ನು ಹಣ್ಣೆಂಬ ಭ್ರಮೆಯಿಂದ ತಿನ್ನಹೋಗಲು ಇಂದ್ರನು ಈ ಅನರ್ಥವನ್ನು ತಪ್ಪಿಸಲು ವಜ್ರಾಯುಧದಿಂದ ಆತನ ಮುಖಕ್ಕೆ ಹೊಡೆಯಲು, ಮುಖವು ಜಜ್ಜಿಹೋಗಿ ಹನುಮಂತನೆನಿಸಿಕೊಂಡನು. (ಪುಭಾಕೋ ಪು ೬೯೫)

ಕೀರ್ತನೆ : ೭೬೩ ನುಡಿ ೨೭

ಸುರುಸದೇವಿಯಳ ಸರಸದಿ ಗೆಲಿದೀತ:

ಲಂಕೆಯನ್ನು ಪಾಲಿಸುತ್ತಿದ್ದ ವಿಷ್ಣುಭಕ್ತಿಯಾದ ರಕ್ಕಸಿ ಸುರಸೆ, ಲಂಕೆಯನ್ನು ಪ್ರವೇಶಿಸುವಾಗ ಹನುಮಂತ ಅವಳನ್ನು ಗೆದ್ದಂತಹ ವಿಚಾರ. (ಪುಭಾಕೋ ಪು ೬೭೭)

ಕೀರ್ತನೆ : ೭೬೩ ನುಡಿ ೩೮

ಕುಂಭಕರ್ಣ:

ರಾವಣನ ಸಹೋದರನಾದ ಒಬ್ಬ ರಾಕ್ಷಸ, ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ನಿದ್ದೆಯನ್ನು ವರವಾಗಿ ಕೇಳಿ ಪಡೆದನು. ಹನುಮಂತನಿಂದ ಲಂಕಾದಹನವಾದ ಬಳಿಕ ಇವನಿಗೆ ಎಚ್ಚರವಾಯಿತು. ಸೀತಾಪರಹರಣವನ್ನು ಮಾಡಿದ ಅಣ್ಣನನ್ನು ತಿರಸ್ಕರಿಸಿ, ಯುದ್ಧರಂಗದಲ್ಲಿ ಶ್ರೀರಾಮನಿಂದ ಹತನಾದನು. (ಪುಭಾಕೋ ಪು ೧೭೬)

ಕೀರ್ತನೆ ೭೬೪ ನುಡಿ ಪ

ನೀಲಕಂಠ:

ಅಮೃತಮಂಥನ ಕಾಲದಲ್ಲಿ ಸಮುದ್ರದಲ್ಲಿ ಉದ್ಭವಿಸಿದ ಹಾಲಾಹಲವನ್ನು ಕುಡಿದು ಈಶ್ವರ ವಿಷಕಂಠ, ನೀಲಕಂಠನೆಂದೆನಿಸಿಕೊಂಡ.

ಕೀರ್ತನೆ : ೭೬೪ ನುಡಿ ೧೨

ನೀರ್ಪೊತ್ತು:

ಶಿವನುಗಂಗೆಯನ್ನು ಜಡೆಯಲ್ಲಿ ಧರಿಸಿದ ವಿಚಾರ.

ಕೀರ್ತನೆ : ೭೬೪ ನುಡಿ ೧೩

ಕಲ್ಲಲ್ಪೊಡೆಸಿಕೊಂದು ಬಲ್ಲಿದವರವಂ ಸಲ್ಲಿಸಿ ಸಲಹಿದ:

ಸಾಂಖ್ಯತೊಂಡನ ಕತೆ. ಕಾಳಮೇಘನೆಂಬ ಜೈನನಿಗೆ ಮಗನಾಗಿ ಹುಟ್ಟಿದ ಸಾಂಖ್ಯತೊಂಡ ಶಿವಭಕ್ತ, ತಂದೆತಾಯಿಗಳು ಶಿವನನ್ನು ಪೂಜಿಸಲು ಬಿಡುತ್ತಿಲ್ಲವಾಗಿ ತಾನು ನಿತ್ಯವೂ ಮೂರು ಬಾರಿ ಶಿವನನ್ನು ಹೊತ್ತಿಗೆ ಮೂರು ಕಲ್ಲುಗಳಿಂದ ಹೊಡೆಯವುದಾಗಿಯೂ ಅದನ್ನೇ ಪುಷ್ಪದ ಪೂಜೆಯೆಂದು ಭಾವಿಸಬೇಕಾಗಿಯು, ಶಿವನಲ್ಲಿ ಪ್ರಾರ್ಥಿಸಿ ಅಂತೆಯೇ ನಡೆದುಕೊಳ್ಳುತ್ತಿದ್ದನು. ಲಿಂಗದ ಮೇಲೆ ಕಲ್ಲು ಹಾಕುವ ತನಕ ಉಣ್ಣದ ನಿಯಮ, ಸಾಂಖ್ಯನದು, ಒಮ್ಮೆ ಹೊಳೆ ಬಂದು ಮೂರುದಿನ ಉಪವಾಸವಿದ್ದು, ಹೊಳೆ ಇಳಿಯಲು ಇಪ್ಪತ್ತೇಳು ಕಲ್ಲುಗಳ ಬದಲು ಒಂದು ದೊಡ್ಡ ಕಲ್ಲನ್ನೆತ್ತಿ ಹಾಕಿದಾಗ ತಲೆ ಒಡೆದೀತೆಂದು ಶಿವ, ಲಿಂಗದೊಳಗಿಂದ ಕೈಚಾಚಿ ಕಲ್ಲನ್ನು ನಿವಾರಿಸಿ ಸಾಂಖ್ಯನ ಭಕ್ತಿಗೆ ಮೆಚ್ಚಿ ಅವನನ್ನು ಕೈಲಾಸಕ್ಕೆ ಒಯ್ದನು. (ಉಪುಹ ಪು ೧೦೮)

ಕೀರ್ತನೆ : ೭೬೪ ನುಡಿ ೧೪

ಬಿಲ್ಲೆನೆಸುಗೆಯನು..........ಶರವಿತ್ತ:

ಅರ್ಜುನನ ಬಿಲ್ಲಾಣ್ಮೆಯನ್ನು ನೋಡಿ ಆನಂದಿಸಿ, ಶಿವ ಅವನಿಗೆ ಪಾಶುಪತಾಸ್ತ್ರವನ್ನಿತ್ತ ಪ್ರಸಂಗ.

ಕೀರ್ತನೆ : ೭೬೪ ನುಡಿ ೧೫

ಕಾಲಲೊದೆಸಿಕೊಂಡು.......ಪಾಲಿಸಿದ:

ಬೇಡರಕಣ್ಣಪ್ಪನ ಕತೆ. ಇತರರು ಮಾಡಿದ ಪೂಜೆಯನ್ನು ಕೆರವುಗಾಲಿಂದ ಅತ್ತನೂಕಿ ಮುಕ್ಕುಳುದಕದಿಂದ ಶಿವನಿಗೆ ಮಜ್ಜನಕ್ಕೆರೆದ ಭಕ್ತ ಕಣ್ಣಪ್ಪ ತನ್ನ ಕಣ್ಣನ್ನೇ ಕಿತ್ತು ಶಿವಲಿಂಗಕ್ಕೆ ಅರ್ಪಿಸಿ ಪರಮಗಣಪದವಿಯನ್ನು ಪಡೆದ.

(ಶಿಕರ ಪು ೬೧-೬೨)

ಕೀರ್ತನೆ : ೭೬೪ ನುಡಿ ೧೬

ಕುಂಬಾರಗೊಲಿದು...........ಮುಂಭಾಗದಾಡಿದ:

ಕುಂಬಾರ ಗುಂಡಯ್ಯನ ಕತೆ. ಮಡಕೆಯನ್ನು ತಟ್ಟುತ್ತಾ ಅದರ ತಾಳಕ್ಕೆ ತಕ್ಕ ಹಾಗೆ ಕುಣಿಯುತ್ತಿದ್ದ ಭಕ್ತಕುಂಬಾರನ ಭಕ್ತಿಗೆ ಸೋತ ಶಿವ ಮನೆಗೆ ಬಂದು ತಾನು ಕುಣಿಯಹತ್ತಿದನು, ಕಡೆಗೆ ಕುಂಬಾರ ಗುಂಡಯ್ಯನನ್ನು ಕೈಲಾಸಕ್ಕೆ ಕರೆದೊಯ್ದನು. (ಶಿಕರ ಪು ೯೦)

ಕೀರ್ತನೆ : ೭೬೪ ನುಡಿ ೧೮

ಶಿಶುವನು ಕೊರೆಸುಂಡು..........ಮೋಕ್ಷವಿತ್ತ:

ಚೀಲಾಳನ ಕತೆ. ಭಕ್ತಸಿರಿಯಾಳ-ಚಂಗಳೆಯರ ಒಬ್ಬನೇ ಮಗ ಚೀಲಾಳ. ಒಮ್ಮೆ ಜಂಗಮ ವೇಷದಿಂದ ಬಂದ ಶಿವ ಎಳೆಯ ನರಮಾಂಸವನ್ನು ಬೇಡಲುದಂಪತಿಗಳು ಸ್ವಲ್ಪವೂ ಹಿಂದುಮುಂದೆ ನೋಡದೆ ತಮ್ಮ ಕುವರನ ಕೊರಳರಿದು ಎಡೆಮಾಡಿಟ್ಟರು. ಮೆಚ್ಚಿದ ಶಿವ ಮೂವರಿಗೂ ಗಣಪದವಿಯಿತ್ತ. (ಶಿಕರ ಪು ೧೪೩-೧೪೮)

ಕೀರ್ತನೆ : ೭೬೪ ನುಡಿ ೧೭

ಕನ್ನವಕೊರೆದು ಚಿನ್ನದ್ರವ್ಯವನ್ನು ತನ್ನ ಭಕ್ತಗಿತ್ತ:

ಗುಂಡ ಬ್ರಹ್ಮಯ್ಯರ ಕತೆ(?) ಇವರು, "ಶಿವಭಕ್ತರು ಕದ್ದು ಬಂದು ಮೊರೆಹೊಕ್ಕರೂ ಬಿಡೆವು, ಶಿವದ್ರೋಹಿಗಳನ್ನು ಹೊಡೆವೆವು"; ಎಂದು ಸಾರಿಸುತ್ತಿದ್ದದನ್ನು ಕೇಳಿದ ಶಿವ ಭೂಮಿಗೆ ಬಂದು, ಕನ್ನಗತ್ತಿಯನ್ನು ಮಾಡಿಸಿಕೊಂಡು ವೋರುಗಲ್ಲಿನ ಗಣಪತಿರಾಯನ ಮನೆಗೆ ಕನ್ನವಿಕ್ಕಿ ಚಿನ್ನದ್ರವ್ಯಾಭರಣಗಳನ್ನು ಕದ್ದು ಬಂದು ಗುಂಡಬ್ರಹ್ಮಯ್ಯರಲ್ಲಿ ಆಶ್ರಯಪಡೆದನು. ತಾನು ಕದ್ದ ದ್ರವ್ಯವನ್ನೆಲ್ಲ ಕೊಟ್ಟು ಅದನ್ನು ತೆಗೆದುಕೊಂಡು ತನ್ನ ಪ್ರಾಣವನ್ನು ಉಳಿಸಿಬೇಕೆಂದು ಬ್ರಹ್ಮಯ್ಯನ ಸತಿಯಲ್ಲಿ ಮೊರೆಯಿಟ್ಟನು. ಇತ್ತ ಕಳ್ಳನನ್ನು ಒಪ್ಪಿಸಿಕೊಡಲು ಒಲ್ಲದ ಗೌಂಡ ಬ್ರಹ್ಮಯ್ಯರನ್ನೇ ಗಣಪತಿರಾಯ ಶೂಲಕ್ಕೇರಿಸಲಾಗಿ ಅವರುಗಳ ಭಕ್ತಿಯನ್ನು ಕೈಕೊಂಡ ಶಿವ ಅವರನ್ನು ಕೈಲಾಸಕ್ಕೆ ಒಯ್ದ. (ಭೈಕಾಸೂರ ಪು ೩೧೯)

ಕೀರ್ತನೆ : ೭೬೪ ನುಡಿ ೧೯

ಮಾದರವನ ಪ್ರಸಾದ ಒಲಿದು........ಸಲ್ಲಿಸಿದ:

ಮಾದರ ಚನ್ನಯ್ಯನ ಕತೆ. ಅಂತ್ಯಜನಾದ ಮಾದರ ಚನ್ನಯ್ಯನ ಭಕ್ತಿಯನ್ನು ಪ್ರಕಟಿಸುವ ಸಲುವಾಗಿ ಶಿವ ಒಂದು ದಿನ ಚನ್ನಯ್ಯನೊಡನೆ ಕಂಠ ಪೂರ್ತಿಯಾಗಿ ಅಂಬಲಿಯನ್ನು ಊಟ ಮಾಡಿದನು. ತನ್ನ ಗುಪ್ತ ಭಕ್ತಿ ಬಯಲಾದುದಕ್ಕಾಗಿ ಪ್ರಾಣತ್ಯಾಗಕ್ಕೆ ಸಿದ್ಧನಾದ ಚನ್ನಯ್ಯನಿಗೆ ಒಲಿದ ಶಿವ ಗಣಪದವಿತ್ತ. (ಶಿಕರ ಪು ೩೩೩)

ಶತಾಷ್ಟಕ : ೭೬೫ ನುಡಿ ೩೩

ದಕ್ಷನ ಮದ ಮುರಿದ:

ದಕ್ಷನು ಮಾಡಿದ ನೀರಿಶ್ವರ ಯಾಗಕ್ಕೆ ಪಾರ್ವತಿ ಆಮಂತ್ರಣವಿಲ್ಲದಿದ್ದರೂ ಅಕೆ ಹೋಗಲು, ಯಾಗ ಶಾಲೆಯಲ್ಲಿ ತಂದೆಯ ತಿರಸ್ಕಾರಕ್ಕೆ ಗುರಿಯಾಗಿ ಯಾಗಾಗ್ನಿಯಲ್ಲಿ ದೇಹತ್ಯಾಗ ಮಾಡಿದಳು. ಇದನ್ನು ಕೇಳಿದ ಶಿವನು ಕೋಪದಿಂದ ವೀರಭದ್ರನನ್ನು ಸೃಷ್ಟಿಸಲು ಅವನು ದಕ್ಷನ ತಲೆಯನ್ನು ಕತ್ತರಿಸಿದನು, ಪುನ: ದೇವತೆಗಳ ಪ್ರಾರ್ಥನೆಯಂತೆ ಒಂದು ಟಗರಿನ ತಲೆಯನ್ನು ದಕ್ಷನ ಮುಂಡಕ್ಕೆ ಜೋಡಿಸಿದರು. (ಪುಭಾಕೋ ಪು ೨೬೩)

ಶತಾಷ್ಟಕ : ೭೬೪ ನುಡಿ ೧೦೮

ರಜತಾದ್ರಿ ಆಲಯ:

ಬೆಳ್ಳಿ ಬೆಟ್ಟವನ್ನೆ ಮನೆಯಾಗುಳ್ಳವನು ಈಶ್ವರ.

ಕೀರ್ತನೆ : ೭೬೫ ನುಡಿ ೨೧

ದಿಟ್ಟ ಶಿವಶರಣೆ........ಪೆಟ್ಟಿಗೆ ಪ್ರಸನ್ನನಾದ:

ಶರಣೆ ಸತ್ಯಕ್ಕನ ಕತೆ. ಶಿವಭಕ್ತರ ಅಂಗಳವನ್ನು ಗುಡಿಸುವ ಕಾಯಕದಿಂದ ಜೀವಿಸುತ್ತಿದ್ದ ಈಕೆಯದು ಶಿವನಲ್ಲದೆ ಅನ್ಯದೈವರ ಹೆಸರನ್ನು ಕಿವಿಯಿಂದ ಕೇಳೆನೆಂಬ ನಿಯಮ. ಒಮ್ಮೆ ಶಿವನು ಈಕೆಯನ್ನು ಪರೀಕ್ಷಿಸಲೆಂದು ಬಿಕ್ಷುಕ ವೇಷದಿಂದ ಬಂದು ' ಹರಿಯಿಂದ ಹರಿದಕಾಳು ನೆಲಕ್ಕೆ ಬಿತ್ತು ' ಎಂದನು. ಹರಿ ಶಬ್ದ ಕೇಳಿದ ಸತ್ಯಕ್ಕೆ ಅವನನ್ನು ಕೈಲಿದ್ದ ಹುಟ್ಟಿನಿದ ಹೊಡೆಯಲು ಶಿವ ಪ್ರತ್ಯಕ್ಷನಾದ.

ಶತಾಷ್ಟಕ : ೭೬೪ ನುಡಿ ೨೮

ಸತ್ತಗಂಡನ ಕೊಟ್ಟು......ಮುಕ್ತಿ ಪದವನಿತ್ತ

ಭೀಮೇಶ್ವರಮಾವಾಸ್ಯಾ ವ್ರತಕತೆ ಅಥವಾ ಪತಿ ಸಂಜೀವಿನೀ ವ್ರತಕತೆ. ದರಿದ್ರನಾದ ಸೋಮಯಾಜಿ ಲಕ್ಷ ವರಹಗಳಿಗಾಗಿ ತನ್ನ ಮಗಳು ಸಂಜೀವಿನಿಯನ್ನು ಆ ದೇಶದ ರಾಜ ಕಾರ್ತಿಕವರ್ಮನ ಮಗನ ಶವಕ್ಕೆ ಕೊಟ್ಟು ಮದುವೆ ಮಾಡಲು ಸಂಜೀವಿನಿಯು ಭೀಮೇಶ್ವರನ ವ್ರತವನ್ನಾಚರಿಸಿ ಸತ್ತಗಂಡನ್ನು ಶಿವನಿಂದ ಮತ್ತೆ ಪಡೆದುಕೊಂಡಳು.

ಚನ್ನಮ್ಮ ಶರಣೆಯ ಕತೆಯೂ ಹೀಗೆಯೇ ಬರುತ್ತದೆ. (ಸಟೀಕ ವ್ರತರಾಜ: ಪು ೨೦೪–೨೧೫)

ಶತಾಷ್ಟಕ : ೭೬೪ ನುಡಿ ೪೩-೭೪

ವಾರಿಧಿತಟದೊಳು..........ಮಹಪಾರಾವಾರದಯ:

ತಾರಾಕಾಸುರನ ಸಂಹಾರಾರ್ಥವಾಗಿ ಶಿವನಿಂದ ವೀರಭದ್ರನ ಉತ್ಪತ್ತಿ. ಹುಟ್ಟಿದ ಆರು ದಿನಗಳಲ್ಲೇ ತಾರಕಾಸುರನನ್ನು ಸಂಹರಿಸಲು ಸಮರ್ಥನಾದ ಷಣ್ಮುಖನ ಸಾಮರ್ಥ್ಯ ತಾರಕಾಸುರನ ವಧೆ ಇತ್ಯಾದಿ ವಿಚಾರಗಳು.

ಶತಾಷ್ಟಕ : ೭೬೫ ನುಡಿ ೫೩-೫೭

ದೃಢಮುನಿ.........ದ್ವೈತರ ಪ್ರೇಮ:

ಕೃಷ್ಣ ಮಧ್ವಮುನಿಗಳ ತಪಕ್ಕೊಲಿದು, ಉಡುಪಿ ಕ್ಷೇತ್ರದಲ್ಲಿ ಬಂದು ನಿಂತು, ದ್ವೈತ ಸಿದ್ಧಾಂತವನ್ನು ಮೆರೆಸಿದಿ ವಿಚಾರ.

ಶತಾಷ್ಟಕ : ೭೬೫ ನುಡಿ ೭೩

ಲಕ್ಷ್ಯದಿ ಕಂಡನು ಪಕ್ಷಿರಾಜನನು ಮೋಕ್ಷಕೆ ಕಳುಹಿಸಿದ:

ಶ್ರೀರಾಮ ಜಟಾಯುವಿನಿಂದ ಜಾನಕಿಯ ಅಪಹರಣದ ಸುದ್ದಿಯನ್ನು ತಿಳಿದು, ಅವನಿಗೆ ಮೋಕ್ಷವನ್ನು ಕರುಣಿಸಿದ ವಿಚಾರ. (ರಾಮಾಯಣ)

ಶತಾಷ್ಟಕ ; ೭೬೫ ನುಡಿ ೮೦

ಶೀಲಭಕ್ತನ ಕೈಲೆ............ಸಮುದ್ರೆನಿಸಿದ:

ಕೃಷ್ಣ ಪಾಂಡವರ ದೂತನಾಗಿ ಕೌರವರಲ್ಲಿಗೆ ಬಂದಾಗ ಮೊದಲು ತನ್ನ ಭಕ್ತ ವಿದುರನ ಮನೆಯಲ್ಲಿ ಔತಣವನ್ನು ಸ್ವೀಕರಿಸಿ ಅವನು ಭಕ್ತಿಯಿಂದ ಕೊಟ್ಟ ಒಂದು ಕುಡಿತೆ ಹಾಲನ್ನು ತಾನು ಸ್ವೀಕರಿಸಿದ್ದಲ್ಲದೆ ನೆಲದ ಮೇಲೆಯೂ ಚೆಲ್ಲಲು ಅದು ಹಾಲಿನ ಹೊಳೆಯಾಗಿ ಹರಿಯಿತು.

ಶತಾಷ್ಟಕ : ೭೬೬ ನುಡಿ ೮೧

ರುಕ್ಮಾಂಗದ:

ರುಕ್ಮಾಂಗದನು ಏಕಾದಶಿಯ ವ್ರತವನ್ನು ಬಿಡಲಾರದೆ ತನ್ನ ಪತ್ನಿಪುತ್ರರ ಅನುಮತಿಯಿಂದ ಮಗನ ಶಿರಸ್ಸನ್ನು ಕಡಿದು ಮೋಹಿನಿಗೆ ಒಪ್ಪಿಸಲು ಸಿದ್ಧನಾದಾಗ ನಾರಾಯಣನು ಪ್ರತ್ಯಕ್ಷನಾಗಿ ಅವನನ್ನೂ ಅವನ ಪತ್ನೀಪುತ್ರರನ್ನೂ ವೈಕುಂಠಕ್ಕೆ ಕರೆದೊಯ್ದ ವಿಚಾರ. (ಮಭಾಕೋ ಪು ೪೯೬)

ಶತಾಷ್ಟಕ : ೭೬೫ ನುಡಿ ೮೨

ರಕ್ಕಸಿಯಾಳ್ದನ ಅಕ್ಕರತಮ್ಮ:

ಹಿಡಿಂಬೆಯನ್ನು ಮದುವೆಯಾದ ಭೀಮನ ತಮ್ಮ ಅರ್ಜುನನ್ನು ಗೆಲಿಸಿದ ವಿಚಾರ.

ಶತಾಷ್ಟಕ : ೭೬೫ ನುಡಿ ೮೨

ಜನನಿಯಕೊಂದ..........ಪುನ:

ಪರಶುರಾಮ ತಂದೆ ಜಮದಗ್ನಿಯ ಅಪ್ಪಣೆಯಂತೆ ತಾಯಿ ರೇಣುಕೆಯ ತಲೆಯನ್ನು ಕತ್ತರಿಸಿ ಪುನ: ಆಕೆಯ ಪ್ರಾಣವನ್ನೆ ತಂದೆಯಲ್ಲಿ ವರವಾಗಿ ಬೇಡಿ ಪಡೆದ ವಿಚಾರ.

ಶತಾಷ್ಟಕ : ೭೬೫ ನುಡಿ ೮೪

ನರಕಾಸುರ:

ನರಕಾಸುರ ಭೂದೇವಿ ಕೃಷ್ಣರ ಮಗ: ಪ್ರಾಗ್ಜ್ಯೋತಿಷಪುರದಲ್ಲಿ ರಾಜ್ಯಭಾರ ಮಾಡುತ್ತಾ ಲೋಕಕಂಟಕನಾಗಿದ್ದನು. ಕೃಷ್ಣನು ನರಕನ ಬಲಶಾಲಿಗಳಾದ ಸೇನಾಪತಿಗಳನ್ನು ಗಜಸೈನ್ಯವನ್ನು ಕೊಂದು ನರಕನ ತಲೆಯನ್ನು ಚಕ್ರಾಯುಧದಿಂದ ಕತ್ತರಿಸಿಕೊಂದನು. (ಪುಭಾಕೋ ಪು ೩.೨೩)

ಶತಾಷ್ಟಕ : ೭೬೫ ನುಡಿ ೯೩

ಸುತನ ಸುತನಿಗೆ ಸುತೆಯನಿತ್ತವಗೆ ಮುತ್ತ ಮಾವನೆನಿಸಿದ:

ಮೊಮ್ಮಗ ಶಿವನಿಗೆ ತನ್ನ ಸೃಷ್ಟಿಯೇ ಆದ ಮೊಮ್ಮಗಳು ಪಾರ್ವತಿಯನ್ನಿತ್ತು ತಾತನೂ ಆದ: ಮಾವನೂ ಆದ.

ಶತಾಷ್ಟಕ : ೭೬೫ ನುಡಿ ೯೨

ಮುನ್ನ ತಮ್ಮೆನಿಸಿದ ಅಣ್ಣ ಮತ್ತೆನಿಸಿದ ಉನ್ನತ್ತಾಸಿಗೆನಿಸಿದ:

ತಮ್ಮನಾದ ಲಕ್ಷ್ಮಣ, ಅಣ್ಣನಾದ ಬಲರಾಮ, ಹಾಸಿಗಯಾದ, ಆದಿಶೇಷ ಮೂವರೂ ಶೇಷಾಂಶರೇ: ಶೇಷ ಶ್ರೀಹರಿಯ ಅಂಶವೇ.

ಶತಾಷ್ಟಕ : ೭೬೫ ನುಡಿ ೯೯

ಸೃಷ್ಟಿಪುಟ್ಟಿಸಿದ...........ಉದರದಿಟ್ಟ

ಸೃಷ್ಟಿಮಾಡುವವನೂ ಶ್ರೀಹರಿಯೆ. ಅವತಾರಗಳನ್ನು ತೋರಿ ಸೃಷ್ಟಿಯಲ್ಲಿ ಪ್ರಕಟವಾದವನೂ ಅವನೇ. ಪ್ರಳಯಕಾಲದಲ್ಲಿ ತನ್ನ ಸೃಷ್ಟಿಯೆಲ್ಲವನ್ನೂ ಒಂದೇ ತುತ್ತಿನಲ್ಲಿ ನುಂಗುವವನೂ ಅವನೇ.

ಶತಾಷ್ಟಕ : ೭೬೬

ಸಂಪೂರ್ಣರಾಮಯಣವನ್ನು ಸಂಕ್ಷೇಪವಾಗಿ ಹೇಳಲಾಗಿದೆ.

ರಾಮನ ಜನನದಿಂದ ಹಿಡಿದು, ರಾವಣನ ಸಂಹಾರ ಮಾಡಿದ ರಾಮ ಅಯೋಧ್ಯಗೆ ಹಿಂತಿರುಗುವವರೆಗಿನ ಕತೆ ಇದೆ.

ಕೀರ್ತನೆ : ೭೭೨ ನುಡಿ ೧

ವನಜಮಿತ್ರನ ....ಪೇಳ್ದೀ:

ಸೂರ್ಯನ ಮಗನಾದ ಯಮನು ಕುಂತಿಗೆ ಕೊಟ್ಟ ಮಂತ್ರಗಳಿಂದ ಜನಿಸಿದ ಧರ್ಮರಾಯನ ತಮ್ಮನಾದ ಅರ್ಜುನನ ಮಗ ಅಭಿಮನ್ಯುವನ್ನು ಶೌರ್ಯದಲ್ಲಿ ಗಣಿಸದೆ ಅವನು ರಣದಲ್ಲಿ ಮಡಿದ ವಿಚಾರವನ್ನು ಹೇಳಿದ ಶ್ರೀಕೃಷ್ಣನಿಗೆ ಮಂಗಳವು.

ಕೀರ್ತನೆ : ೭೭೪ ನುಡಿ ೨

ಗಾರ್ಗೆಯ

ಒಬ್ಬ ಋಷಿ. ಅಂಗೀರಸನೆಂಬ ಋಷಿಯ ವಂಶದವನು.

ಕೀರ್ತನೆ : ೭೭೪ ನುಡಿ ೨

ಭೃಗು:

ಸ್ವಾಯಂಭುವ ಮನ್ವಂತರದ ಒಬ್ಬ ಬ್ರಹ್ಮರ್ಷಿ. ಬ್ರಹ್ಮನ ಹೃದಯದಿಂದ ಉತ್ಪನ್ನನಾದವನು.

ಕೀರ್ತನೆ : ೭೭೭ ನುಡಿ ೨

ಅಷ್ಟಾವರಣ:

ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ. (ಶ್ರೀನಿ ಪು ೫೮)

ಅನುಬಂಧ-೩

ದೇವತೆ, ಯತಿ, ದಾಸ ಸ್ಮರಣೆ

ದಾಸರ ಕೀರ್ತನೆಗಳಲ್ಲಿ ಬಂದಿರುವ ದೇವತೆಗಳು, ಯತಿಗಳು, ದಾಸರು ಮತ್ತು ಸಂತರ ಸ್ಮರಣೆ.

ಅ. ದೇವತೆಗಳು: ಗಣೇಶ–ಶ್ರೀಹರಿ–ಲಕ್ಷ್ಮೀದೇವಿ–ಸರಸ್ವತಿ–ಹನುಮಂತ–ರುದ್ರದೇವರು–ಪಾರ್ವತಿ–ಗಾಯತ್ರಿ–ಯಲ್ಲಮ್ಮ–ಮಹಾಕಾಳಿ–ಶ್ರೀರಾಮ–ವೆಂಕಟರಮಣ–ಶನಿರಾಜ–ರೇಣುಕಾಯಲ್ಲಮ್ಮ.

ಬ. ಯತಿಗಳು: ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳು–ಬುದ್ಧಿನ್ನಿ ಶ್ರೀ ಮಾಧವತೀರ್ಥರು.

ಕ. ದಾಸರು, ಸಂತರು: ಪುರಂದರದಾಸರು, ಕನಕದಾಸರು, ವಿಜಯದಾಸರು, ಜಗನ್ನಾಥದಾಸರು, ಕಬೀರದಾಸರು, ನಾಮದೇವರು, ತುಕಾರಾಮರು, ಬಸವಣ್ಣನವರು.

ಅನುಬಂಧ–೪

ಕೀರ್ತನೆಗಳ ಅಕಾರಾದಿ

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೩೫೮.	ನೀನೆ ದಯಮಾಡಲು	೩೩೩
೩೫೯.	ನೀನೆ ದಯಾಶರಧಿ	೫೭
೩೬೦.	ನೀನೇ ದಯ ಸಂಪನ್ನನಲೋ	೫೮
೩೬೧.	ನೀನೇ ದಯಾಸಿಂಧು	೩೩೪
೩೬೨.	ನೀನೇ ದಾತ ದೀನನಾಥ	೩೩೫
೩೬೩.	ನೀನೇ ಜಗತ್ಸೂತ್ರನು ದೀನಜನರಾಪ್ತನು	೭೦೬
೩೬೪.	ನೀನೆನ್ನನ್ನುಟ್ಟಿಸಿದ್ಯೋ	೬೩೧
೩೬೫.	ನೀನೆ ನಿಜಗುರುವಾಗು	೫೯
೩೬೬.	ನೀನೆ ನಿರ್ದಯನಾಗಲಿನ್ನೇನು	೩೩೬
೩೬೭.	ನೀನೆ ನಿರ್ಮಲ ಚಿತ್ತ (ಉ)	೭೦೭
೩೬೮.	ನೀನೆ ನುಡಿಸಿದಂತೆ	೩೩೭
೩೬೯.	ನೀನೆ ಪಾಲಿಸು ಕರುಣವಾರಿಧಿ	೬೦
೩೭೦.	ನೀನೆ ಭಕುತಾಭಿಮಾನಿ	೬೧
೩೭೧.	ನೀನೆ ಮಣಿಸುವಿ ನೀನೆ ಓಡಿಸುವಿ (ಉ)	೭೦೮
೩೭೨.	ನೀನೆ ಸ್ವತಂತ್ರ ಸರ್ವೇಶ	೬೨
೩೭೩.	ನೀ ಬಿಟ್ಟ ಬಳಿಕೆನ್ನಸಾಧ್ಯ	೩೩೮
೩೭೪.	ನೀ ಮಾಡಿದ ಮಾಯವು	೩೩೯
೩೭೫.	ನೀಲಕಂಠ ಭವಮಾಲಹರಣ	೭೬೪
೩೭೬.	ನೂಕಿ ಭವದೊಳು ಎನ್ನ (ಉ)	೭೦೯
೩೭೭.	ನೆನೆನೆನೆ ಮನವೇ ನೀ	೩೪೦
೩೭೮.	ನೆನೆಯಲಳವಲ್ಲಗಣಿತ ಜನುಮ	೩೪೧
೩೭೯.	ನೆನೆಯುತ್ತ ತಿರುಗುವೆನಯ್ಯ	೩೪೨
೩೮೦.	ನೆನೆಯೋ ನೆನೆಯೋ ನೆನೆಯೋ	೩೪೩
೩೮೧.	ನೆರೆನಂಬಿ ಬೇಡುವೆನೊ	೩೪೪
೩೮೨.	ನೋಡಿ ಮಾಡಿಲ್ಲ ನಾ (ಉ)	೭೧೦
೩೮೩.	ನೋಡಿರೆ ಯಶೋದೆಯ ಪುಣ್ಯ	೬೩
೩೮೪.	ನೋಡಿರೋ ನೋಡಿರೋ	೧೭೪
೩೮೫.	ನೋಡು ಎನ್ನೊಳು	೩೪೫

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೪೧೪.	ಪಾಲಯಕೃಪ ಆಲಯ	೩೫೭
೪೧೫.	ಪಾಲಿಸಯ್ಯ ಪದುಮವದನ	೩೫೮
೪೧೬.	ಪಾಲಿಸಯ್ಯ ವರವ ಹರಿಹರಿ	೩೫೯
೪೧೭.	ಪಾಲಿಸು ಗಜವದನ	೨
೪೧೮.	ಪಾಲಿಸು ದಯಾಕರನೆ	೩೬೦
೪೧೯.	ಪಾಲಿಸು ನಿಜಮತಿ ಗಜವದನ	೩
೪೨೦.	ಪಾಲಿಸು ಮರೆಯದೆನ್ನ	೩೬೧
೪೨೧.	ಪಾಲಿಸು ಶ್ರೀಪಾದ	೬೮
೪೨೨.	ಪಾಲಿಸೈ ರಮಾರಮಣನೆ ಎನ್ನ	೩೬೨
೪೨೩.	ಪಾಲಿಸೋ ಹರಿ ಪಾಲಿಸೋ	೩೬೩
೪೨೪.	ಪಾವನನಾಮ ಪಾಪವಿರಾಮ (ಉ)	೭೧೯
೪೨೫.	ಪಿಡದಲೆ ಬಿಡಬೇಡ್ಹುಡುಗಹುದು	೩೬೪
೪೨೬.	ಪಿಡಿಯೆನ್ನ ಕೈಯ	೬೯
೪೨೭.	ಪುಣ್ಯೋದಯವೇ ಈ ಪುಣ್ಯ	೫೪೭
೪೨೮.	ಪೆಣ್ಣೆಂದರಿದು ಮೆಚ್ಚಿ ಕೆಡಬೇಡ	೫೪೮
೪೨೯.	ಪೇಳಲಳವಲ್ಲ ನಮ್ಮಯ್ಯ ನಾಟ	೬೩೩
೪೩೦.	ಪೇಳಿದರೆ ತಿಳಿಯುವುದೆ	೬೩೪
೪೩೧.	ಪೊಗಲಳವಾರಿಗೆ ಎಲೆದೇವ	೬೩೫
೪೩೨.	ಪೊರೆಯೋ ಪ್ರಭು ಪರಮಾತ್ಮ	೩೬೫
೪೩೩.	ಪೊರೆ ಸುರೇಶ ಶ್ರೀಶ	೭೦
೪೩೪.	ಪೋಗವಲ್ಲದು ಇಹ್ಯಭೋಗ	೩೬೬
೪೩೫.	ಪೋಷಿಸೆನ್ನ ವೆಂಕಟೇಶ	೭೧
೪೩೬.	ಪಂಥವ್ಯಾಕೋ ಪ್ರತಿಜ್ಞೆಯಾಕೋ	೫೪೯
೪೩೭.	ಪಿಂಗಟ ಬೇಡವ್ವ ಪಿಂಗಟ	೫೫೦
೪೩೮.	ಪ್ರಭುನಿಮ್ಮ ಮರೆಹೊಕ್ಕೆ	೩೬೭
೪೩೯.	ಪ್ರಭುವರ ಮರದ್ಯಾ	೩೬೮
೪೪೦.	ಪ್ರೇಮಸಾಗರ ಸ್ವಾಮಿ ಶ್ರೀಹರಿ	೩೬೯
೪೪೧.	ಪುಲ್ಲ ನಾಭ ನಿಜತತ್ವ ತಿಳಿಸು	೩೭೦

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೪೭೦.	ಬೇಕಿಲ್ಲ ಎನಗನ್ಯ ಏನೇನು	೭೫
೪೭೧.	ಬೇಗ ನೀಗಿಸು ದುರ್ಭೋಗದ ಸೆರೆಯ	೩೮೬
೪೭೨.	ಬೇಗನೆ ದಯಮಾಡು ಸಾಗರನಿಲಯ	೩೮೭
೪೭೩.	ಬೇಡಿಕೊಂಬುವೆನಯ್ಯ ಬೇಗ ಬಾರಯ್ಯ	೭೬
೪೭೪.	ಬೇಡಿಕೊಂಬೆ ಗೋಪಾಲ	೩೮೮
೪೭೫.	ಬೇಡಿಕೊಂಬೆನೊ ಶ್ರೀಹರಿಯೆ	೩೮೯
೪೭೬.	ಬೇಡಿದವರಿಗೆ ದೊರೆವುದೇನೆಲೊ	೬೩೮
೪೭೭.	ಬೇಡುವರೊ ಬೇಡುಣುತಿಹ್ಯರೋ	೧೭೬
೪೭೮.	ಬೇಡುವುದು ಕೊಡಬೇಡ	೩೯೦
೪೭೯.	ಬೇಡುವುದು ನೀಡದಿರು (ಉ)	೭೨೨
೪೮೦.	ಬೇಡುವುದಿಲ್ಲನ್ಯ ನಾನೇನು	೩೯೧
೪೮೧.	ಬೇಡುವೆನು ಉಡಿಯೊಡ್ಡಿ	೩೯೨
೪೮೨.	ಬೋಲೋ ಸುನಾಮ ಕೇಶವ	೭೭
೪೮೩.	ಬಂತವ್ವಾ ತಂಗಿ ಬಂತವ್ವಾ	೫೫೫
೪೮೪.	ಬಂತೆಂದ್ಬಿಗ್ಗ ಬೇಡೆಲೊಖೋಡಿ	೫೫೬
೪೮೫.	ಬಂದದ್ದನುಭವ ಮಾಡ್ವೆ	೩೯೩
೪೮೬.	ಬಂದೆನೋ ರಂಗ ಬಂದೆನೋ	೩೯೪
೪೮೭.	ಬೆಂಕಿಗಿರುವೆಗಳ ಕಾಟುಂಟೇ	೬೩೯
೪೮೮.	ಭಕ್ತರ ಸುರಧೇನು ಶಕ್ತರ ಬಂಧು	೩೯೫
೪೮೯.	ಭಕ್ತರ ಸೌಖ್ಯ ಮುಕ್ತಿಗೆ ಮುಖ್ಯ	೭೬೫
೪೯೦.	ಭಕ್ತ ವತ್ಸಲನೆಂಬಯುಕ್ತ (ಉ)	೭೧೮
೪೯೧.	ಭಕ್ತವತ್ಸಲನೆಂಬ ಬಿರುದು	೬೪೦
೪೯೨.	ಭಕುತಜನರ ಮುಕುಟ	೭೮
೪೯೩.	ಭಕುತಾಭಿಮಾನಿ ಸಕಲ	೭೯
೪೯೪.	ಭಕುತೋದ್ಧಾರ ಪರಿಭವದ್ವೈದ್ಯ	೮೦
೪೯೫.	ಭಜಿಪ ಭಕ್ತರ ಭಾವ	೩೯೬
೪೯೬.	ಭಜಿಸಿ ಧನ್ಯನಾದೆ ನಾನು	೮೧
೪೯೭.	ಭಜಿಸಿಬದುಕೆಲೊ ಮಾನವ	೫೫೭

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು